ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ

ಕನ್ನಡ ಪಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧನೆ

ವಾಸುದೇವ ಶೆಟ್ಟಿ

ಮಾರ್ಗದರ್ಶನ

ಡಾ.ಮೋಹನ ಕುಂಟಾರ್

ಭಾಷಾಂತರ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ- ೫೮೩ ೨೭೬.

೨೦೦೨

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧನೆ

ವಾಸುದೇವ ಶೆಟ್ಟಿ

ಮಾರ್ಗದರ್ಶನ

ಡಾ.ಮೋಹನ ಕುಂಟಾರ್

ಕನ್ನಡ ಭಾಷಾಂತರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೦೨

107

ದೃಢೀಕರಣ ಪತ್ರ

ಶ್ರೀ ವಾಸುದೇವ ಶೆಟ್ಟಿ ಇವರು 'ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಭಾಷಾಂತರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಹೊಸಪೇಟೆ

೩೦-೦೭-೨೦೦೨

ಮೋಹನ ಕುಂಟಾರ್

ಡಾ.ಮೋಹನ ಕುಂಟಾರ್

ಪ್ರವಾಚಕರು

ಭಾಷಾಂತರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಪ್ರಮಾಣ ಪತ್ರ

ಶ್ರೀ ವಾಸುದೇವ ಶೆಟ್ಟಿ ಆದ ನಾನು 'ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಮೋಹನ ಕುಂಟಾರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಭಾಷಾ ನಿಕಾಯದ ಭಾಷಾಂತರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸ್ಲಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಹೊಸಪೇಟೆ

೩೦-೦೭-೨೦೦೨

ವಾಸುದೇವ ಶೆಟ್ಟಿ

ವಾಸುದೇವ ಶೆಟ್ಟಿ

ಪರಿವಿಡಿ

ಅಧ್ಯಾಯ ಒಂದು: ಪ್ರಸ್ತಾವನೆ

ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶ: ಕನ್ನಡ ಸಾಹಿತ್ಯ ಹಲವು ಘಟ್ಟಗಳಲ್ಲಿ ಹಾಯ್ದು ಬರುವಾಗ ವಿಭಿನ್ನ ರೀತಿಯ ಪ್ರಭಾವಗಳಿಗೆ ಒಳಗಾಗುತ್ತ ಅದರಿಂದ ಪುಷ್ಟಗೊಳ್ಳುತ್ತ ಬಂದಿದೆ. ಇಂಥ ಪ್ರಭಾವಗಳನ್ನು ಕಾಲಕಾಲಕ್ಕೆ ವಿದ್ವಾಂಸರು ಗುರುತಿಸುತ್ತ ದಾಖಲಿಸುತ್ತ ಬಂದಿದ್ದಾರೆ. ಸಾಹಿತ್ಯಕ್ಕೆ ಸಮಾಜವು ಪ್ರತಿಸ್ಪಂದಿಸಿದುದರ ಪರಿಣಾಮವಿದು ಎಂದು ಹೇಳಬಹುದು. ಇಂತಹ ಪ್ರತಿಸ್ಪಂದನ ಪತ್ರಿಕೆಗಳ ಮೂಲಕವೇ ಹೆಚ್ಚು ಪ್ರಕಟವಾಗಿ ಸಾಹಿತ್ಯವನ್ನು ಪೋಷಿಸಿವೆ. ಆಧುನಿಕ ಕಾಲದಲ್ಲಿ ಪತ್ರಿಕೆಗಳು ಜೀವನದ ಒಂದು ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿವೆ. ಬದುಕಿನ ಆಗುಹೋಗುಗಳನ್ನು ದಾಖಲಿಸುತ್ತ ವರದಿ ಮಾಡುವ ಪತ್ರಿಕೆಗಳು ಒಂದು ಅರ್ಥದಲ್ಲಿ ಜೀವನದ ಪ್ರತಿಬಿಂಬ, ಇನ್ನೊಂದು ಅರ್ಥದಲ್ಲಿ ಜೀವನದ ವಿಮರ್ಶಕ. ಸಾಹಿತ್ಯವನ್ನೂ ಬದುಕಿನ ಪ್ರತಿಬಿಂಬ, ವಿಮರ್ಶಕ ಎಂದೂ ಕರೆದದ್ದಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಪತ್ರಿಕೆ ಅವಳಿಜವಳಿ ಎನ್ನಬಹುದು. ಒಂದು ಇನ್ನೊಂದರ ಮೇಲೆ ಪ್ರಭಾವ ಬೀರಿರಬಹುದು. ಈ ಪ್ರಭಾವಗಳನ್ನು ದಾಖಲಿಸುವುದೂ ಸಾಹಿತ್ಯಾಧ್ಯಯನ ಸಂದರ್ಭದಲ್ಲಿ ಅತ್ಯಂತ ಮುಖ್ಯವಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಪುಷ್ಟಗೊಳ್ಳುವಲ್ಲಿ ಪತ್ರಿಕೆಗಳ ಪಾತ್ರ ವಿಶಿಷ್ಟವಾದದ್ದು. ಬಹುಶಃ ಇದುವರೆಗೆ ಆ ಬಗ್ಗೆ ವಿವರವಾದ ಅಧ್ಯಯನ ನಡೆದಿಲ್ಲ. ಕೆಲವು ವಿದ್ವಾಂಸರು

ಸಾಂದರ್ಭಿಕವಾಗಿ ಪತ್ರಿಕೆ ಮತ್ತು ಸಾಹಿತ್ಯದ ಸಂಬಂಧದ ಬಗೆಗೆ ಉಲ್ಲೇಖಿಸಿದ್ದಾರೆ. ರಾ.ಯ. ಧಾರವಾಡಕರ ಅವರ 'ಹೊಸಗನ್ನಡದ ಉದಯ ಕಾಲ', ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ', ಐ.ಮಾ. ಮುತ್ತಣ್ಣ ಅವರ 'ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ', ಇಲ್ಲೆಲ್ಲ ಪ್ರಾಸಂಗಿಕವಾಗಿ ಪತ್ರಿಕೆಗಳ ಬಗೆಗೆ ಮಾತುಗಳು ಬಂದಿವೆ. ಪ್ರಸ್ತುತ ಅಧ್ಯಯನದಲ್ಲಿ ಸಾಹಿತ್ಯದ ದಿಕ್ಕು ದೆಸೆಗಳನ್ನು ನಿರ್ಧರಿಸುವಲ್ಲಿ ಸಾಹಿತ್ಯಪತ್ರಿಕೆಗಳು ವಹಿಸಿದ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಜೊತೆಯಲ್ಲಿಯೇ ಸಾಹಿತ್ಯಪತ್ರಿಕೆಗಳ ಪರಂಪರೆ ಹಾಗೂ ಅವುಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲು ಉದ್ದೇಶಿಸಲಾಗಿದೆ. ಪತ್ರಿಕೆಗಳು ಹೇಗೆ ಕನ್ನಡಕ್ಕೆ ಪಾಶ್ಚಾತ್ಯ ವಿದ್ವಾಂಸರ ಕೊಡುಗೆಯೋ ಹಾಗೆಯೇ ಸಾಹಿತ್ಯದ ಪ್ರಸಾರಕ್ಕಾಗಿಯೇ ಪತ್ರಿಕೆಯನ್ನು ನಡೆಸುವ ಆಲೋಚನೆಯೂ ಪಾಶ್ಚಾತ್ಯರ ಕೊಡುಗೆಯೇ ಆಗಿದೆ. ಕನ್ನಡದಲ್ಲಿ ಸಾಹಿತ್ಯಪತ್ರಿಕೆಯನ್ನು ಮೊದಲು ಆರಂಭಿಸಿದವರು ಪಾಶ್ಚಾತ್ಯ ವಿದ್ವಾಂಸರೇ. ಕನ್ನಡದ ಮೊದಲ ಸಾಹಿತ್ಯ ಪತ್ರಿಕೆ ಯಾವುದು ಎಂಬದರ ಚರ್ಚೆ ಇಲ್ಲಿದೆ.

ಹೊಸಗನ್ನಡದ ಉದಯ ಕಾಲದಲ್ಲಿಯೇ ಕನ್ನಡ ಪತ್ರಿಕೋದ್ಯಮವೂ ಹುಟ್ಟಿಕೊಂಡಿತು. ಪರಸ್ಪರ ಒಂದಕ್ಕೊಂದು ನೆರವಾಗುತ್ತ ಬೆಳೆದವು. ಸಾಹಿತ್ಯದ ವಿವಿಧ ಪ್ರಕಾರಗಳ ಪ್ರಚಾರಕ್ಕಾಗಿಯೇ ಜನ್ಮತಳೆದ ಪತ್ರಿಕೆಗಳಿವೆ. ಸಾಹಿತ್ಯ ಕ್ಷೇತ್ರ ಹೊರಳುತ್ತಿರುವ ಚಿಂತನೆಗಳನ್ನು ಪ್ರೋತ್ಸಾಹಿಸಿದ ಅನೇಕ ಪತ್ರಿಕೆಗಳಿವೆ. ಸಾಹಿತ್ಯ ಕ್ಷೇತ್ರ ಕಂಡುಕೊಂಡ ಅನೇಕ ಆಯಾಮಗಳಲ್ಲಿ ಪತ್ರಿಕೆಗಳು ನಿರ್ದಿಷ್ಟಪಾತ್ರ ವಹಿಸಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಹಂತಗಳಲ್ಲಿ ಪತ್ರಿಕೆಗಳು ವಹಿಸಿದ ಪಾತ್ರವನ್ನು ಗಮನಿಸಬೇಕಾಗಿದೆ.

ಸಾಹಿತ್ಯದ ನೆಲೆ ಬೆಲೆಗಳನ್ನು ನಿರ್ಧರಿಸುವಲ್ಲಿ ಅಂದಂದಿನ ಪತ್ರಿಕೆಗಳು ತಮ್ಮ ಕೊಡುಗೆಗಳನ್ನು ನೀಡಿವೆ. ಕಾದಂಬರಿಯಂಥ ನೂತನ ಪ್ರಕಾರವೊಂದು ನಮ್ಮಲ್ಲಿ ರೂಪು ತಳೆಯುತ್ತಿದ್ದಾಗ ಅದರ ಸ್ವರೂಪದ ಚರ್ಚೆ ಅಂದಿನ ಪತ್ರಿಕೆಗಳಲ್ಲಿ ಮೂಡಿ ಬಂದಿದೆ. 'ಸುವಾಸಿನಿ' ಪತ್ರಿಕೆಯ ೧೯೦೦ರ ಸೆಪ್ಟೆಂಬರ್ ಸಂಚಿಕೆಯಲ್ಲಿ 'ಕಾದಂಬರಿ' ಪದವನ್ನು ಕುರಿತ ಚರ್ಚೆ ನಡೆದಿದೆ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಈ ಸಾಹಿತ್ಯ ಪಂಥಗಳು ನೆಲೆಗೊಳ್ಳುವಾಗ ಅವುಗಳ ಸ್ವರೂಪ ನಿರ್ಣಯ ಸಾಹಿತ್ಯಪತ್ರಿಕೆಗಳಿಂದಲೇ ಆಗಿವೆ. ಸಾಹಿತ್ಯ ಕೃತಿ, ಸಾಹಿತ್ಯ ಪ್ರಕಾರ, ಸಾಹಿತ್ಯ ಪಂಥ ಇವುಗಳ ಪ್ರತಿಪಾದನೆಯಲ್ಲಿ ಸಾಹಿತ್ಯಪತ್ರಿಕೆಗಳ ಪಾತ್ರ ನಿರ್ಣಾಯಕ ಸ್ವರೂಪದ್ದು. ಭಾಷಾಂತರ ರೂಪಾಂತರಗಳ ಸ್ವರೂಪ ಕನ್ನಡದಲ್ಲಿ ಹೇಗಿರಬೇಕು ಎಂಬ ಚರ್ಚೆ ಈ ಶತಮಾನದ ಆದಿಯಲ್ಲಿಯೇ ಸಾಹಿತ್ಯಪತ್ರಿಕೆಗಳಲ್ಲಿ ನಡೆಯಿತು. ಪಂಪ ಭಾರತದ 'ಭಾನುಮತಿ ನೆತ್ತಮನಾಡಿ ಸೋಲ್ತಡೆ ...' ಎಂಬ ಈ ಒಂದು ಪದ್ಯದ ಬಗೆಗೆಯೇ ಅರ್ಧ ಶತಮಾನ ಕಾಲ ವಿದ್ವಾಂಸರು ಸಾಹಿತ್ಯಪತ್ರಿಕೆಗಳಲ್ಲಿ ವಾದ ಪ್ರತಿವಾದಗಳ ಮಂಡನೆ ಮಾಡಿದ್ದರು. ಇಂದಿಗೂ ಆ ಚರ್ಚೆ ಮುಂದುವರಿದಿದೆ. ಪ್ರಾಸ ಬೇಕೆ ಬೇಡವೆ ಎಂಬ ಬಗೆಗೆ ಚರ್ಚೆ ನಡೆದಿದೆ. ಕನ್ನಡದ

ಪ್ರಮುಖ ಸಾಹಿತಿಗಳೆಲ್ಲ ಒಂದೊಂದು ಪತ್ರಿಕೆಯ ಜೊತೆಯಲ್ಲಿ ಸಂಬಂಧ ಹೊಂದಿದ್ದರು. ಬೇಂದ್ರೆ 'ಜಯಕರ್ನಾಟಕ', ಬೆಟಗೇರಿ ಕೃಷ್ಣಶರ್ಮ 'ಜಯಂತಿ', ಮಾಸ್ತಿ 'ಜೀವನ', ಬಸವರಾಜ ಕಟ್ಟೀಮನಿ 'ಉಷಾ', ಗೋಪಾಲಕೃಷ್ಣ ಅಡಿಗರು 'ಸಾಕ್ಷಿ,' ಅನಂತಮೂರ್ತಿ 'ರುಜುವಾತು', ಚಂದ್ರಶೇಖರ ಪಾಟೀಲ 'ಸಂಕ್ರಮಣ'. ಇವು ಆಯಾ ಕಾಲದ ಸಾಹಿತ್ಯದ ಮುಖವಾಣಿಯಾಗಿದ್ದವು. ಶಿವರಾಮ ಕಾರಂತರ 'ವಸಂತ' ಮಹತ್ವದ ಪತ್ರಿಕೆ. ಅವರ 'ಭೂತ', 'ವಿಚಿತ್ರ ಕೂಟ'ಗಳನ್ನು 'ವಸಂತ'ದ ಹಳೆಯ ಸಂಚಿಕೆಗಳಲ್ಲಿ ಮಾತ್ರ ನೋಡಬಹುದು. ಹೀಗೆ ಸಾಹಿತ್ಯದ ಬೆಳವಣಿಗೆಯನ್ನು ಪತ್ರಿಕೆಗಳು ಎಚ್ಚರದಿಂದ ಗಮನಿಸಿವೆ. ಪ್ರತಿಕ್ರಿಯಿಸಿವೆ. ಪರಿಣಾಮವಾಗಿ ಅನೇಕ ಓದುಗರು, ಲೇಖಕರು ಸಾಹಿತ್ಯ ಚರ್ಚೆಯಲ್ಲಿ ಮುಕ್ತವಾಗಿ ಪಾಲುಗೊಳ್ಳುವಲ್ಲಿ ನೆರವಾಗಿವೆ. ಮುಕ್ತ ಚರ್ಚೆಗೆ ವೇದಿಕೆಯೊದಗಿಸಿವೆ.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಮುಂಬಯಿಯಲ್ಲಿ ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿ ಪತ್ರಿಕೆಗಳ ಮೂಲಕ ಭ್ರಷ್ಟಾಚಾರವನ್ನು ಖಂಡಿಸಿದರು. ಸಾಮಾಜಿಕ ಬದಲಾವಣೆಗಳ ಕಹಳೆ ಮೊಳಗಿಸಿದರು. ಶ್ರೀಮಂತರು ಎಳೆಯ ಹೆಣ್ಣುಗಳನ್ನು ಮದುವೆಯಾಗುವುದು ಇಂದಿಗೂ ಇದೆ. ವಿಧವಾ ವಪನ ೨೦ನೇ ಶತಮಾನದ ಕೊನೆಯ ಕಥೆಗಳಲ್ಲೂ ವಸ್ತುವಾಗಿ ಮೂಡಿದೆ. ವಿಧವೆಯರ ಮರು ವಿವಾಹ ಇಂದಿಗೂ ಸಮಾಜದಲ್ಲಿ ಪ್ರತಿಪಾದನೆಯಾಗಬೇಕಾದ ವಿಷಯ. ವಿಷಮ ಜೋಡಿಯ ಕೆಡುಕು ಕುವೆಂಪು ಅವರ 'ಕಾನೂರು ಹೆಗ್ಗಡಿತಿ'ಯಲ್ಲಿದ್ದರೆ 'ಫಣಿಯಮ್ಮ' 'ಘಟಶ್ರಾದ್ಧ'ಗಳಲ್ಲಿ ವಿಧವೆಯ ಸಮಸ್ಯೆ ಇದೆ. ೧೯ನೇ ತಮಾನದ ಕೊನೆಯಲ್ಲಿ ವಿಧವೆಯರ ಮರುವಿವಾಹ ಪತ್ರಿಕೆಗಳಲ್ಲಿ ಚರ್ಚೆಯ ವಿಷಯವಾಗಿತ್ತು. ಅದೇ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕಾದಂಬರಿಯಲ್ಲಿ ಮೂಡಿಬಂದಿದೆ. ಪತ್ರಿಕೆಗಳು ಸಾಹಿತ್ಯ ಕೃತಿಗಳ ಸಾಮಾಜಿಕ ಆಶಯಗಳ ಮೇಲೂ ಒಂದು ತೆರನ ಹಿಡಿತ ಸಾಧಿಸಿದೆ ಎಂಬುದನ್ನು ಇವುಗಳಿಂದ ತಿಳಿದುಕೊಳ್ಳಬಹುದು.

ಪತ್ರಿಕೆಯ ಪ್ರಕಟಣೆಯು ಅಂದು ಸಾಂಸ್ಕೃತಿಕ ಬದುಕಿನ ಒಂದು ಅಂಗವಾಗಿದ್ದಿತು. ಈ ಸಾಂಸ್ಕೃತಿಕ ಕೇಂದ್ರವು ಕನ್ನಡ ನಾಡಿನ ಯಾವುದೋ ಒಂದು ಮೂಲೆಯಲ್ಲಿ ಕೇಂದ್ರೀಕೃತವಾಗಿರಲಿಲ್ಲ. ನಾಡಿನ ವಿವಿಧ ಮೂಲೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಡೆದುದು ಕಂಡು ಬರುತ್ತದೆ. ರಾಜಾಶ್ರಯದ ಮೈಸೂರು ಒಂದೆಡೆ ಇದ್ದರೆ ಜನಾಶ್ರಯವನ್ನೇ ನೆಚ್ಚಿಕೊಂಡು ಬೆಂಗಳೂರು, ಮಂಗಳೂರು, ಧಾರವಾಡಗಳಲ್ಲಿಯೂ ಸಾಹಿತ್ಯಕ ಚಟುವಟಿಕೆಗಳು ನಡೆಯುತ್ತಿದ್ದವು. ದೂರದ ಮುಂಬಯಿಯಲ್ಲಿ ಶಿಕ್ಷಣಕ್ಕೆ, ಉದ್ಯೋಗಕ್ಕೆ ತೆರಳುತ್ತಿದ್ದ ಉತ್ತರ ಕನ್ನಡ, ಧಾರವಾಡ ಕಡೆಯ ಕನ್ನಡಿಗರು ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದುದನ್ನು ಗಮನಿಸಬಹುದು. ಧಾರವಾಡದ ವಿದ್ಯಾವರ್ಧಕ ಸಂಘ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಸ್ಥಾನಗಳಲ್ಲಿ ಒಂದಾಗಿತ್ತು. ಅದು ಆರಂಭಿಸಿದ 'ವಾಗ್ಭೂಷಣ' ಕನ್ನಡವನ್ನು ಹಲವು ರೀತಿಯಲ್ಲಿ ಬೆಳೆಸಿತು. ಮಂಗಳೂರಿನಲ್ಲಿಯೇ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಹೊರಟಿದ್ದು. ಇಲ್ಲಿಯ ಚಟುವಟಿಕೆಗಳು

ಹೆಚ್ಚಾಗಿ ಕ್ರೈಸ್ತ ಮಿಷನರಿಗಳಿಗೆ ಸಂಬಂಧಿಸಿದ್ದು. ಆದರೂ ಇಲ್ಲಿ 'ಸುವಾಸಿನಿ'ಯಂಥ ಸಾಹಿತ್ಯಪತ್ರಿಕೆ ಹೊರಟಿದೆ. ಕೆ.ಶಿವರಾಮ ಕಾರಂತರ 'ವಸಂತ' ಮೊದಲು ಕುಂದಾಪುರ ನಂತರ ಮಂಗಳೂರಿನಿಂದ ಹೊರಟಿತು. ಮುಂಬಯಿಯಿಂದ 'ಹವ್ಯಕ ಸುಬೋಧ', 'ಕನ್ನಡ ಸುವಾರ್ತೆ' ಪ್ರಕಟವಾಗುತ್ತಿದ್ದವು. ೨೦ನೆ ಶತಮಾನದ ಎರಡನೆ ದಶಕದಲ್ಲಿ ಧಾರವಾಡದಲ್ಲಿ ಯಶವಂತರಾವ ಜಠಾರರು 'ಪ್ರಭಾತ'ದಲ್ಲಿ ಕೇವಲ ಕವಿತೆಗಳನ್ನಷ್ಟೇ ಪ್ರಕಟಿಸುತ್ತಿದ್ದರು. ಎಂ.ಕೆ.ಹುಬ್ಬಳ್ಳಿಯ ರಾಜೇಂದ್ರ ಪಾಟೀಲರು 'ಕಾವ್ಯಶ್ರೀ' ಮಾಸಿಕವನ್ನು ಕಾವ್ಯ ಪ್ರಕಟಣೆಗಾಗಿಯೇ ೧೯೭೫ರಿಂದ ೮೦ರ ವರೆಗೆ ನಡೆಸಿದ್ದರು. ಧಾರವಾಡದ 'ಚಂದ್ರೋದಯ' ಬೆಂಗಳೂರಿನ 'ಹಿತಬೋಧಿನಿ' ಇದೇ ಉದ್ದೇಶದ ಆರಂಭಿಕ ಪತ್ರಿಕೆಗಳು. ಇಂದು ಈ ಸಾಲಿಗೆ ಧಾರವಾಡದಿಂದ 'ಸಂಕ್ರಮಣ', ಬೆಂಗಳೂರಿನಿಂದ 'ಶೂದ್ರ', ಚಿತ್ರದುರ್ಗದಿಂದ 'ಸಾಹಿತ್ಯ ಸಂವಾದ' .... ಹೀಗೆ ಸೇರುತ್ತವೆ. ಸಾಕ್ಷಿ, ರುಜುವಾತುಗಳು ಇಂದು ನಿಲುಗಡೆಯಾಗಿದ್ದರೂ ಅವು ಮಾಡಿದ ಪ್ರಭಾವ ದಾಖಲಾರ್ಹವಾದದ್ದು. ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಸ್ತರದಲ್ಲಿ ಪಿ.ಲಂಕೇಶರ 'ಲಂಕೇಶ ಪತ್ರಿಕೆ' ವಹಿಸಿರುವ ಪಾತ್ರವೂ ಗಮನಾರ್ಹವಾದದ್ದು. ಅನೇಕ ಹೊಸ ಲೇಖಕರ ಪೀಳಿಗೆಯನ್ನು ಸೃಷ್ಟಿಸಿದ ಕೀರ್ತಿ ಅದಕ್ಕೆ ಸಲ್ಲಬೇಕು. ಜನಪ್ರಿಯ ಪತ್ರಿಕೆಯಾಗಿದ್ದುಕೊಂಡೂ ಗಂಭೀರ ಸಾಹಿತ್ಯ ಪ್ರಕಟಿಸಿ ಪ್ರೋತ್ಸಾಹಿಸಿದ್ದು, ಅದಕ್ಕೊಂದು ಓದುಗ ವರ್ಗವನ್ನು ಸೃಷ್ಟಿಸಿದ್ದು ಮುಖ್ಯ ಸಾಧನೆ. ಇವುಗಳನ್ನೆಲ್ಲ ಗಮನಿಸಿದರೆ ಸಾಹಿತ್ಯ ಬೆಳವಣಿಗೆಯನ್ನು ಸಾಮಾಜಿಕ ಸಂವಾದದ ಮುಖ್ಯಭಾಗವಾಗಿ ಪರಿಗಣಿಸಲು ಬರೆಹಗಾರರು ಯತ್ನಿಸಿದರೆಂಬ ಸಂಗತಿ ವೇದ್ಯವಾಗುತ್ತದೆ.

ಸಾಹಿತ್ಯಪತ್ರಿಕೆಗಳನ್ನು ಇಂದೂ ಕೆಲವು ವ್ಯಕ್ತಿಗಳು ನಡೆಸುತ್ತಿದ್ದಾರೆ. ವಿದ್ಯಾವರ್ಧಕ ಸಂಘವು ೧೯ನೆ ಶತಮಾನದ ಕೊನೆಯಲ್ಲಿಯೇ 'ವಾಗ್ಭೂಷಣ' ಪತ್ರಿಕೆ ಆರಂಭಿಸಿತು. ವ್ಯಕ್ತಿಗಳು ನಡೆಸುವ ಪತ್ರಿಕೆಗಳು ಸಾಮಾನ್ಯವಾಗಿ ಅಲ್ಪಾಯುಷಿಯಾದುದು. ದೀರ್ಘಕಾಲದ ವರೆಗೆ ಲಾಭವಿಲ್ಲದ ದಂಧೆ ನಡೆಸುವುದು, ಆರಂಭದ ಉತ್ಸಾಹವನ್ನು ಕೊನೆಯ ತನಕ ಇಟ್ಟುಕೊಳ್ಳುವುದು ಕಷ್ಟ. ಇದಕ್ಕೆ 'ಸಂಕ್ರಮಣ', 'ಶೂದ್ರ' ಅಪವಾದವಿರಬಹುದು. ಹಿಂದೆ ಬೆಟಗೇರಿ ಕೃಷ್ಣಶರ್ಮರು 'ಜಯಂತಿ'ಯನ್ನು ದೀರ್ಘ ಕಾಲದ ವರೆಗೆ ನಡೆಸಿದ್ದರು. ಆದರೂ ಸಾಹಿತ್ಯಪತ್ರಿಕೆಗಳಿಗೆ ಸಂಘ, ಸಂಸ್ಥೆಗಳ ಆಸರೆ ಇದ್ದರೆ ಅನುಕೂಲ. ಇಂದು ವಿಶ್ವವಿದ್ಯಾಲಯಗಳು ಇಂಥ ಸಾಹಿತ್ಯಪತ್ರಿಕೆಗಳನ್ನು ನಡೆಸುತ್ತಿವೆ. ಹೀಗೆ ಸಾಹಿತ್ಯಪತ್ರಿಕೆಗಳು ವ್ಯಕ್ತಿಗಳಿಂದ ಸಂಘ ಸಂಸ್ಥೆಗಳ ಅಧೀನಕ್ಕೊಳಗಾಗುತ್ತ ಬಂದ ಹಾಗೆ ಅವುಗಳಿಗೆ ಒಂದು ಸಾಮಾಜಿಕ ಜವಾಬ್ದಾರಿಯೂ ಪ್ರಾಪ್ತವಾಗಿರುವುದು ಕಂಡುಬರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು 'ಸಾಹಿತ್ಯ ಪರಿಷತ್ಪತ್ರಿಕೆ' 'ಕನ್ನಡ ನುಡಿ' ಹೊರಡಿಸುತ್ತಿದೆ. 'ಕರ್ನಾಟಕ ಭಾರತಿ', 'ಸಾಧನೆ', 'ಪ್ರಬುದ್ಧ ಕರ್ನಾಟಕ', 'ಕನ್ನಡ ಅಧ್ಯಯನ'ಗಳು ವಿಶ್ವವಿದ್ಯಾಲಯಗಳಿಂದ ಬರುತ್ತಿವೆ. ಇಂತಹ ಅನೇಕ ಸಾಂಸ್ಥಿಕ ಪತ್ರಿಕೆಗಳೂ ತಮ್ಮ ಮಿತಿಯಲ್ಲಿ ಸಾಹಿತ್ಯ ಕೈಂಕರ್ಯ

ನಡೆಸಿವೆ.

ಸಾಹಿತ್ಯಪತ್ರಿಕೆಗಳ ಪ್ರಮುಖ ಕಾಳಜಿಗಳನ್ನು ಉದ್ದಕ್ಕೂ ನಾವು ಗಮನಿಸಿದಾಗ ಆದಿಯಿಂದ ಇಂದಿನವರೆಗೆ ಅವು ಒಂದೇ ಆಗಿವೆ. ನಾಡು, ನುಡಿ, ಸಮಾಜ, ಸಾಮಾಜಿಕ ನ್ಯಾಯ, ಧರ್ಮ, ಪರಂಪರೆಯ ಪ್ರೀತಿ, ಜೊತೆಯಲ್ಲಿ ಭವ್ಯತೆಯ ಕನಸು. ಹಲವು ಸಾಹಿತ್ಯಕ ಚಳವಳಿಗೆ ಸಾಹಿತ್ಯಪತ್ರಿಕೆಗಳು ವೇದಿಕೆಯಾಗಿವೆ. ನೂತನ ಸಾಹಿತಿಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಯಲ್ಲಿಯೇ ಹೊಸ ಫಸಲನ್ನು ತೂಗಿ ನೋಡಿ ಸಾಹಿತ್ಯ ಮೀಮಾಂಸೆಯನ್ನು ಸಾಹಿತ್ಯಪತ್ರಿಕೆಗಳು ಕಟ್ಟಿಕೊಟ್ಟಿವೆ. ಹೊಸ ಪಾರಿಭಾಷಿಕಗಳನ್ನು ಸೃಷ್ಟಿಸಿವೆ. ಇವೆಲ್ಲವುಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಪತ್ರಿಕೆಗಳು ಹುಟ್ಟಿಕೊಂಡ ಆರಂಭ ಕಾಲದಲ್ಲಿ ಸಂಪೂರ್ಣವಾದ ಸಾಹಿತ್ಯಪತ್ರಿಕೆಗಳು ಕನ್ನಡದಲ್ಲಿ ಇರಲಿಲ್ಲ. ಆರಂಭದ ಪತ್ರಿಕೆಗಳು ಸಾಹಿತ್ಯ ಪ್ರಕಟಣೆ ಮಾಡಿ ಆ ಮೂಲಕ ಹೊಸ ಪೈರನ್ನು ಪರಿಚಯಿಸುವುದಷ್ಟಕ್ಕೆ ಸೀಮಿತವಾಗಿದ್ದವು. ಅಂಥದ್ದರಲ್ಲೂ ಸಾಹಿತ್ಯದ ಕೆಲವು ತೊಡಕುಗಳ ಬಗ್ಗೆ ವಿವರವಾದ ಚರ್ಚೆ ಇವುಗಳಲ್ಲಿ ನಡೆದಿವೆ. ಆರಂಭ ಕಾಲದ ಪತ್ರಕರ್ತರ ಎದುರು ಅವರು ಉತ್ತರಿಸಲೇಬೇಕಾದ ಕೆಲವು ಸವಾಲುಗಳಿದ್ದವು. ಅವುಗಳಲ್ಲಿ ಒಂದು ಸ್ವಧರ್ಮದ ಮೇಲೆ ಅನ್ಯಾಕ್ರಮಣ, ಇನ್ನೊಂದು ಸಮಾಜ ಸುಧಾರಣೆ. ಇವುಗಳ ಜೊತೆಯಲ್ಲಿ ನಾಡಿನ ಏಕೀಕರಣ, ನುಡಿಯ ಬೆಳವಣಿಗೆ. ಸಮಾಜ ಸುಧಾರಣೆಯಲ್ಲಿ ಸ್ತ್ರೀ ಸಮಸ್ಯೆ ಪ್ರಮುಖವಾದದ್ದು. ಇದು ಆ ಕಾಲದ ಸಾಹಿತ್ಯದಲ್ಲಿ ಒಡಮೂಡಿದ ಹಾಗೆ ಪತ್ರಿಕೆಗಳಲ್ಲೂ ಚರ್ಚಿತವಾಗಿದೆ. ಇಷ್ಟಾಗಿಯೂ ಪ್ರಕಟಿತ ಸಾಹಿತ್ಯ ಗಮನಿಸಿ ಸಿದ್ಧಾಂತವನ್ನು, ಸಾಹಿತ್ಯ ವಿಮರ್ಶೆಯನ್ನು, ಮೀಮಾಂಸೆಯನ್ನು ರೂಪಿಸುವಲ್ಲಿ ನಡೆದ ಪ್ರಯತ್ನ ಗೌಣ.

ಅದೇ ನವೋದಯ ಸಂದರ್ಭದಲ್ಲಿ ಸಾಹಿತ್ಯಪತ್ರಿಕೆಗಳು ಹೊಸ ಸಾಹಿತ್ಯವನ್ನು ಪ್ರಕಟಿಸುವುದರ ಜೊತೆಯಲ್ಲಿಯೇ ನವೋದಯ ವಿಮರ್ಶೆಯನ್ನೂ ರೂಪಿಸಿದವು. ಒಂದು ಸಾಹಿತ್ಯ ಮಾರ್ಗ ನೆಲೆಗೊಳ್ಳುವಲ್ಲಿ ನಿರ್ದಿಷ್ಟ ಪಾತ್ರ ವಹಿಸಿದವು. ನವೋದಯ ಕಾವ್ಯ ಮೀಮಾಂಸೆ ಹುಟ್ಟಿಕೊಂಡಿತು. ಮುಂದೆ ಪ್ರಗತಿಶೀಲರ ಹಾಗೂ ನವ್ಯರ ಕಾಲದಲ್ಲಿ ಆ ಸಾಹಿತ್ಯ ಪಂಥಗಳಿಗೆ ಬಂದ ಟೀಕೆಗಳಿಗೆ ಉತ್ತರಿಸಲು ಪತ್ರಿಕೆಗಳು ನೆರವಾದವು. ಪ್ರಗತಿಶೀಲ ಚಳವಳಿ ಹಾದಿ ತಪ್ಪುತ್ತಿದೆ ಎಂದು ಅನ್ನಿಸಿದಾಗ ಅದನ್ನು ಸರಿದಾರಿಯಲ್ಲಿ ತರಲು ಪತ್ರಿಕೆಗಳಲ್ಲಿ ಚರ್ಚೆಗಳು ನಡೆದವು. ನವ್ಯ ವೈಯಕ್ತಿಕ ಪ್ರಯೋಗಶೀಲತೆಯ ಫಲವಾಗಿ ಹುಟ್ಟು ಪಡೆದರೂ ಅದನ್ನು ಸಮರ್ಥಿಸಿಕೊಳ್ಳಲು ಪತ್ರಿಕೆಗಳನ್ನು ಬಳಸಿಕೊಳ್ಳಲಾಯಿತು. ನವ್ಯೋತ್ತರ ಸಂದರ್ಭದಲ್ಲಿ ಸಾಹಿತ್ಯ ಸಿದ್ಧಾಂತ ಮಂಡನೆಗೆ, ಅವುಗಳ ವಿಮರ್ಶೆ ರೂಪಿಸಲು ಮೀಮಾಂಸೆಯ ಹೊಳಹು ಹಾಕಲೂ ಪತ್ರಿಕೆಗಳು ವಾಹಕವಾದವು. ಇದರಿಂದ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಆಯಾ ಕಾಲಘಟ್ಟದಲ್ಲಿ ಪತ್ರಿಕೆಗಳಲ್ಲಿ ನಡೆದ ಚರ್ಚೆಗಳು ಪೂರಕವಾದ ಹಿನ್ನೆಲೆಯನ್ನು ಒದಗಿಸಿವೆ ಎಂಬುದು ತಿಳಿಯುತ್ತದೆ.

ಒಟ್ಟಾರೆ ಆಧುನಿಕ ಕನ್ನಡ ಸಾಹಿತ್ಯದ ಆರಂಭದಿಂದ ಇಂದಿನ ವರೆಗೆ ಸಾಹಿತ್ಯದಲ್ಲಿ ಹೊಸ ಚಿಂತನೆಗಳು ಕಾಣಿಸಿಕೊಂಡಾಗಲೆಲ್ಲ ಅಲ್ಲಿ ಪತ್ರಿಕೆಗಳ ಪಾತ್ರವಿದೆ. ಆ ಪಾತ್ರ ಎಂಥದ್ದು ಎಂಬುದರ ವಿವೇಚನೆಯ ಯತ್ನ ಇಲ್ಲಿಯದು. ಆರಂಭ ಕಾಲದಲ್ಲಿ ಕರ್ನಾಟಕತ್ವ ಅಭಿಮಾನದ ಸಂಗತಿಯಾದರೆ ನವೋದಯ ಸಂದರ್ಭದಲ್ಲಿ ಕರ್ನಾಟಕತ್ವದ ಜೊತೆಯಲ್ಲಿ ರಾಷ್ಟ್ರೀಯ ಮನೋಭಾವವೂ ಸೇರಿತು. ಸ್ವಾತಂತ್ರ್ಯದ ಕನಸು ಅಲ್ಲಿ ಮೂಡಿತ್ತು. ಅದೇ ನವ್ಯದಲ್ಲಿ ಅಷ್ಟೊಂದು ಹಂಬಲಿಸಿ ಪಡೆದ ಸ್ವಾತಂತ್ರ್ಯದ ಬಗೆಗೆ ಹಳಹಳಿಕೆ ಕಂಡು ಬರುತ್ತದೆ. ಬಂಡಾಯದಲ್ಲಿ ಸ್ಥಾಪಿತ ಮೌಲ್ಯಗಳೆಲ್ಲವನ್ನು ಸಾಮಾಜಿಕ ನೆಲೆಯಲ್ಲಿ ಪ್ರಶ್ನಿಸುವ ಮನೋಭಾವ ಮುಖ್ಯವಾಗಿ ಕಾಣುತ್ತದೆ. ಬಂಡಾಯದ್ದೇ ವಿಶಿಷ್ಟ ಕವಲು ಎಂಬಂತಿರುವ ದಲಿತ ಸಾಹಿತ್ಯದಲ್ಲಿ ಹೊಸದೊಂದು ಪ್ರಪಂಚ ತೆರೆದುಕೊಳ್ಳುತ್ತದೆ. ಬಂಡಾಯದ ಆಶಯವನ್ನು ನಾವು ಪ್ರಗತಿಶೀಲರಲ್ಲಿಯೇ ಕಾಣಬಹುದು.

ಈ ಎಲ್ಲ ಸಾಹಿತ್ಯ ಮಾರ್ಗಗಳಲ್ಲೂ ನಾಡು, ನುಡಿ, ಸ್ತ್ರೀ ಸಮಸ್ಯೆಗಳೇ ಪ್ರಧಾನವಾಗಿ ಕಾಣುತ್ತದೆ. ನಾಡಿನ ಬಗೆಗೆ ಪ್ರೀತಿ, ನಾಡಿನ ಅಖಂಡತೆ, ನುಡಿ ಪ್ರೇಮ, ಮಹಿಳೆಯರ ಸಮಸ್ಯೆಗಳು ಸ್ಥಾಯಿಯಾಗಿವೆ. ಕರ್ನಾಟಕ ಏಕೀಕರಣ ಚಳವಳಿ, ಸ್ತ್ರೀವಾದಿ ಹೋರಾಟಗಳಲ್ಲಿ ಸಾಹಿತ್ಯಪತ್ರಿಕೆಗಳು ನಿರ್ವಹಿಸಿದ ಪಾತ್ರ ದಾಖಲಿಸಲೇ ಬೇಕಾಗಿರುವಂಥದ್ದು.

ಸಾಹಿತ್ಯ ಪಂಥಗಳು ಬದಲಾಗುತ್ತ ಹೋದರೂ ಸಾಹಿತ್ಯದ ವಸ್ತು ಅದೇ ಆಗಿರುವುದನ್ನು ಕಾಣಬಹುದು. ಆದರೆ ವಿಷಯಗಳು ಪ್ರಕಟಗೊಂಡ ರೀತಿ ಮಾತ್ರ ಬೇರೆ ಬೇರೆಯಾಗಿವೆ. ಅದು ಆಯಾ ಕಾಲದ ಸಾಹಿತ್ಯಕ ಚಳವಳಿಗಳ ಧೋರಣೆಗೆ ಅನುಗುಣವಾಗಿವೆ. ಅದು ಯಾವ ರೀತಿಯಲ್ಲಿ ಅಭಿವ್ಯಕ್ತಗೊಂಡಿತು, ಅದಕ್ಕೆ ಸಾಹಿತ್ಯಪತ್ರಿಕೆಗಳು ಯಾವ ರೀತಿ ಪೋಷಕವಾದವು ಎಂಬುದು ಈ ಅಧ್ಯಯನದ ಮುಖ್ಯ ಕಾಳಜಿಯಾಗಿದೆ.

ಒಂದೂವರೆ ಶತಮಾನ ಕಾಲ ಪ್ರಕಟಗೊಂಡಿರುವ ಪತ್ರಿಕೆಗಳಲ್ಲಿ ಚರ್ಚೆಯಾಗಿರುವ ವಿಷಯಗಳ ವ್ಯಾಪ್ತಿ ಒಂದು ಅಧ್ಯಯನಕ್ಕೆ ಸೀಮಿತಗೊಳ್ಳುವಂಥದಲ್ಲ. ಈ ಅರಿವಿನೊಂದಿಗೆ ಪ್ರಮುಖ ಸಾಹಿತ್ಯಪತ್ರಿಕೆಗಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಸಾಹಿತ್ಯಪತ್ರಿಕೆಗಳಲ್ಲಿ ಚರ್ಚಿತವಾಗಿರುವ ವಿಷಯಗಳನ್ನು ಅಧ್ಯಯನದ ಸಂದರ್ಭದಲ್ಲಿ ಈ ರೀತಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದು: ಪ್ರಸ್ತಾವನೆ- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಅಧ್ಯಾಯ ಎರಡು: ಸಾಹಿತ್ಯಪತ್ರಿಕೆಗಳ ಸ್ವರೂಪ ಮತ್ತು ಇತಿಹಾಸ

ಅಧ್ಯಾಯ ಮೂರು: ಆರಂಭಕಾಲದ ಪತ್ರಿಕೆಗಳು ಮತ್ತು ಸಾಹಿತ್ಯ

ಅಧ್ಯಾಯ ನಾಲ್ಕು: ಏಕೀಕರಣದ ವರೆಗಿನ ಪತ್ರಿಕೆಗಳು ಮತ್ತು ಸಾಹಿತ್ಯ

ಅಧ್ಯಾಯ ಐದು: ಏಕೀಕರಣದ ನಂತರದ ಪತ್ರಿಕೆಗಳು ಮತ್ತು ಸಾಹಿತ್ಯ

ಅಧ್ಯಾಯ ಆರು: ಸಮಾರೋಪ

ಈ ಕಾಲಘಟ್ಟಗಳು ಈ ಅಧ್ಯಯನದಲ್ಲಿ ಸೂಕ್ತ ಎನ್ನಿಸುವುದು. ಆರಂಭ ಕಾಲದ ವ್ಯಾಪ್ತಿಯನ್ನು ೧೯೦೫ರ ವರೆಗೆ ಎಂದು ಪರಿಗಣಿಸಲಾಗಿದೆ. ೧೯೦೫ ಭಾರತೀಯ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದು. ಏಕೆಂದರೆ ೧೯೦೫ರಲ್ಲಿ ಬಂಗಾಳ ವಿಭಜನೆಯಾಯಿತು. ಬಂಗಾಳ ವಿಭಜನೆಯ ವ್ಯಾಪಕ ಪ್ರತಿಕ್ರಿಯೆ ದೇಶದ ಮತ್ತು ಕನ್ನಡ ನಾಡಿನ ರಾಜಕೀಯದ ಮೇಲಾಗುತ್ತದೆ. ಅದುವರೆಗಿನ ಅವಧಿಯಲ್ಲಿ ಕನ್ನಡ ನಾಡಿನಲ್ಲಿ ಬ್ರಿಟಿಷರ ವಿಷಯದಲ್ಲಿ ಅಂಥ ವಿರೋಧದ ಭಾವನೆ ಏನಿರಲಿಲ್ಲ. ಬ್ರಿಟಿಷರು ಸಾಮಾಜಿಕ ಸುಧಾರಣೆಯ ಹರಿಕಾರರಾಗಿ ಕಂಡಿದ್ದರು. ‘ಇಂದಿರಾಬಾಯಿ’ ಕಾದಂಬರಿಯಲ್ಲಿ ಈ ಬಗೆಗೆ ಪುರಾವೆ ದೊರೆಯುತ್ತದೆ. ಪತ್ರಿಕೆಗಳು ಬ್ರಿಟಿಷ್ ಆಡಳಿತದ ಭ್ರಷ್ಟಾಚಾರವನ್ನು ಖಂಡಿಸಿದ್ದವೇ ಹೊರತು ಅವರ ಸುಧಾರಣೆ ಕ್ರಮಗಳನ್ನು ಟೀಕಿಸಿರಲಿಲ್ಲ. ದೇಶೀ ಆಳರಸರಿಗಿಂತ ಬ್ರಿಟಿಷ್ ಆಡಳಿತವೇ ಉತ್ತಮ ಎಂಬ ಭಾವನೆ ಮೂಡಿತ್ತು.

ಮೊದಲ ಬಾರಿಗೆ ಬ್ರಿಟಿಷರ ವಿರುದ್ಧ ಕನ್ನಡ ನಾಡಿನಲ್ಲಿ ಧ್ವನಿ ಕೇಳಿಬಂದದ್ದು ಬಂಗಾಳ ವಿಭಜನೆಯ ಸಂದರ್ಭದಲ್ಲಿಯೇ. ದೇಶದ ರಾಜಕೀಯದೊಂದಿಗೆ ಕನ್ನಡ ನಾಡಿನ ಸಾಹಿತಿಗಳು ಗುರುತಿಸಿಕೊಂಡ ಸಂದರ್ಭ ಅದು. ಹೀಗಾಗಿ ಅಲ್ಲಿಂದ ಮುಂದೆ ಕನ್ನಡದ ಪತ್ರಿಕೆಗಳು ಮತ್ತು ಸಾಹಿತ್ಯದಲ್ಲಿ ದೇಶದ ಸ್ವಾತಂತ್ರ್ಯದ ಬಗೆಗಿನ ಕಾಳಜಿಯೂ ಕಾಣಿಸಿಕೊಳ್ಳತೊಡಗಿದವು. ಆರಂಭ ಕಾಲದ ಪತ್ರಕರ್ತರಿಗೆ ನಾಡಿನ ವ್ಯಾಪ್ತಿಯ ಪರಿಚಯ ಇತ್ತು. ನುಡಿಯ ಶ್ರೀಮಂತಿಕೆಯ ಅರಿವಿತ್ತು. ಆದರೆ ದೇಶದ ಪರಿಕಲ್ಪನೆ ಇರಲಿಲ್ಲ. ದೇಶ ಎಂಬ ಪದವನ್ನು ನಾಡಿಗೂ ಅವರು ಬಳಸಿದ್ದು ಕಂಡು ಬರುತ್ತದೆ. ಆದರೆ ೧೯೦೫ರ ತರುವಾಯ ದೇಶದ ಸ್ವಾತಂತ್ರ್ಯ ಮತ್ತು ಕನ್ನಡ ನಾಡಿನ ಏಕೀಕರಣ ಇವುಗಳ ಕುರಿತು ಅಭಿಪ್ರಾಯಗಳು ಜೊತೆಜೊತೆಯಾಗಿ ಅಭಿವ್ಯಕ್ತಿ ಪಡೆದಿವೆ. ದೇಶ ತಾಯಿ, ನಾಡು ಮಗಳು ಎಂಬ ಕಲ್ಪನೆ ಅಲ್ಲಿದ್ದದ್ದು ಕಾಣುತ್ತದೆ. ಕುವೆಂಪು ಅವರ ‘ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ..’ ಕವಿತೆಯಲ್ಲಿ ಇದನ್ನು ಗುರುತಿಸಬಹುದು.

ಏಕೀಕರಣದ ವರೆಗಿನ ಕಾಲಘಟ್ಟದಲ್ಲಿಯ ಸಾಹಿತ್ಯಕ ಕಾಳಜಿಗಳು ಮತ್ತು ನಂತರದ ಸಾಹಿತ್ಯಕ ಕಾಳಜಿಗಳು ಬೇರೆಬೇರೆಯಾಗಿದ್ದನ್ನು ಪತ್ರಿಕೆ ಮತ್ತು ಸಾಹಿತ್ಯ ಎರಡರಲ್ಲೂ ಗುರುತಿಸ ಬಹುದು. ಈ ಕಾರಣಕ್ಕಾಗಿ ಏಕೀಕರಣದ ವರೆಗೆ ಒಂದು ಘಟ್ಟವನ್ನು ಪ್ರತ್ಯೇಕ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಈ ಅವಧಿಯಲ್ಲಿ ನವೋದಯ ಕಾಲದ ಸಾಹಿತ್ಯವನ್ನು ರೂಪಿಸಿದ ಅಂಶಗಳ ಬಗೆಗೆ ವಿಶ್ಲೇಷಿಸಲಾಗಿದೆ. ಆರಂಭ ಕಾಲದ ಸಾಹಿತ್ಯದ ಮುಖ್ಯ ಕಾಳಜಿ ನಾಡು ನುಡಿಯ ಸುತ್ತ ಗಿರಕಿಹೊಡೆಯುತ್ತಿತ್ತು. ಅದು ಕನ್ನಡ ಧರ್ಮವಾಗಿ ಇಲ್ಲಿ ಪರಿಗಣಿತವಾಗಿದೆ. ನಾಡಿನ ಏಕೀಕರಣ, ನುಡಿಯ ಬೆಳವಣಿಗೆಯ ಬಗೆಗೆ ಅಂದಿನ

ಪ್ರಮುಖರು ತಮ್ಮ ಅಭಿಪ್ರಾಯಗಳನ್ನು ಪತ್ರಿಕೆಗಳಲ್ಲಿಯೇ ಮಂಡಿಸಿದ್ದರು. ಅದೇ ಮುಂದೆ ಕೃತಿಗಳ ಮೂಲಕ ಅಭಿವ್ಯಕ್ತಿ ಪಡೆದು ಸಾರ್ವಜನಿಕ ಅಭಿಪ್ರಾಯವನ್ನು ಸಶಕ್ತವಾಗಿಯೇ ಮೂಡಿಸುವಲ್ಲಿ ಯಶಸ್ವಿಯಾಯಿತು.

ಕನ್ನಡ ನಾಡಿನ ಏಕೀಕರಣದ ವರೆಗಿನ ಅವಧಿಯಲ್ಲಿಯೇ ಕನ್ನಡ ಸಾಹಿತ್ಯದಲ್ಲಿ ನವೋದಯದ ಜೊತೆಯಲ್ಲಿ ಪ್ರಗತಿಶೀಲ ಮತ್ತು ನವ್ಯ ಪಂಥಗಳು ಕಾಣಿಸಿಕೊಂಡಿವೆ. ಪ್ರಗತಿಶೀಲರು ಮತ್ತು ನವ್ಯರು ಇಬ್ಬರೂ ನವೋದಯದವರನ್ನು ಖಂಡಿಸಿದ್ದಾರೆ. ಪ್ರಗತಿಶೀಲರ ತಾತ್ವಿಕತೆ ರಷ್ಯ ಪ್ರೇರಿತ ಕಮ್ಯುನಿಸಂನಲ್ಲಿತ್ತು. ಸರ್ವರಿಗೂ ಸಮಾನತೆಯನ್ನು ಒದಗಿಸುವ ಆದರ್ಶ ಸ್ವಾತಂತ್ರ್ಯದ ಹೋರಾಟಕ್ಕೆ ವಿರುದ್ಧವಾದದ್ದೇನೂ ಆಗಿರಲಿಲ್ಲ. ಆದರೆ ನವ್ಯರ ಪ್ರೇರಣೆಗಳು ದೊರೆತ ಸ್ವಾತಂತ್ರ್ಯದ ಬಗೆಗೆ ತಳೆದ ನಿರಾಶೆಯಲ್ಲಿ ಇದೆ. ಆದರೆ ಇವರು ನಾಡಿನ ಏಕೀಕರಣಕ್ಕೆ ವಿರೋಧಿಗಳೇನಾಗಿರಲಿಲ್ಲ.

ನಾಡು ಏಕೀಕರಣಹೊಂದಿದ ಸಂದರ್ಭದಲ್ಲಿಯೇ ಪತ್ರಿಕೋದ್ಯಮದ ಸ್ವರೂಪ ಬದಲಾಯಿತು. ಪತ್ರಿಕೆ ಹೊರಡಿಸುವುದರ ಹಿಂದಿನ ಉದ್ದೇಶವೂ ಬದಲಾಯಿತು. ಆದರ್ಶದ ಪ್ರತಿಪಾದನೆಗಾಗಿ ಪ್ರಕಟಗೊಳ್ಳುತ್ತಿದ್ದ ಪತ್ರಿಕೆಗಳು ಉದ್ಯಮವಾಗಿ ಮಾರ್ಪಾಟಾದವು. ಆಗ ಸಹಜವಾಗಿಯೇ ಸಾಹಿತ್ಯದ ಕಾಳಜಿಗಳನ್ನು ಪ್ರತಿಪಾದಿಸುವ ಉದ್ದೇಶದಿಂದಲೇ ಪತ್ರಿಕೆಗಳು ಬಂದವು. ಅವುಗಳ ಅಧ್ಯಯನ ಇಲ್ಲಿ ಪ್ರತ್ಯೇಕ ಅಧ್ಯಾಯದಲ್ಲಿದೆ.

ಸಾಹಿತ್ಯಪತ್ರಿಕೆಗಳ ಸ್ವರೂಪ ಮತ್ತು ಇತಿಹಾಸ- ಈ ಅಧ್ಯಾಯದಲ್ಲಿ ಪತ್ರಿಕೆ ಇಲ್ಲದ ಕಾಲದಲ್ಲಿ ಪತ್ರಿಕೆಗಳಿಂದಾಗುವ ಕಾರ್ಯ ಯಾವ ರೀತಿಯಲ್ಲಿ ನಡೆಯುತ್ತಿತ್ತು, ಪತ್ರಿಕೋದ್ಯಮದ ಸಮೂಹ ಸಂವಹನದ ಸ್ವರೂಪ, ಸಾಹಿತ್ಯ ಪತ್ರಿಕೆಗಳಿಗೂ ಇತರ ಪತ್ರಿಕೆಗಳಿಗೂ ಇರುವ ವ್ಯತ್ಯಾಸ, ಪತ್ರಿಕೆಗಳ ವಿಶೇಷ ಸಂಚಿಕೆಗಳು, ವಿಶೇಷಾಂಕಗಳು, ಪತ್ರಿಕೆಗಳು ಸಾಹಿತ್ಯ ಕೃತಿಗೆ ವಸ್ತುವಾಗುವ ಪರಿ ಇತ್ಯಾದಿಗಳನ್ನು ಪರಿಶೀಲಿಸಲಾಗಿದೆ. ಸಾಹಿತ್ಯ ಪತ್ರಿಕೆಗಳ ಇತಿಹಾಸ ಭಾಗದಲ್ಲಿ ಭಾರತದ ಮೊದಲ ಸಾಹಿತ್ಯಪತ್ರಿಕೆ, ಅದು ಉಗಮಗೊಂಡ ಸಂದರ್ಭ, ಅದರ ಪ್ರೇರಣೆಗಳು, ಕನ್ನಡ ಸಾಹಿತ್ಯ ಪತ್ರಿಕೆಗಳ ಹಿಂದಿನ ಪ್ರೇರಣೆಗಳು, ಕನ್ನಡದ ಮೊದಲ ಸಾಹಿತ್ಯ ಪತ್ರಿಕೆ ಇವುಗಳ ಬಗೆಗೆ ವಿವರಗಳನ್ನು ನೀಡಲಾಗಿದೆ.

ಆರಂಭದ ಕಾಲದಿಂದ ಬಂಗಾಳ ವಿಭಜನೆಯ ವರೆಗಿನ ಪತ್ರಿಕೆ ಮತ್ತು ಸಾಹಿತ್ಯ- ಈ ಅಧ್ಯಾಯದಲ್ಲಿ ಆ ಕಾಲದ ಪತ್ರಿಕೆ ಮತ್ತು ಸಾಹಿತ್ಯದ ವಿಶೇಷತೆಗಳನ್ನು ಪಟ್ಟಿ ಮಾಡಲಾಗಿದೆ. ಈ ಅವಧಿಯಲ್ಲಿ ಪತ್ರಿಕೆಗಳು ನಿರ್ದಿಷ್ಟ ಉದ್ದೇಶದೊಂದಿಗೆ ಹುಟ್ಟು ಪಡೆದಿವೆ. ಸಮಾಜ ಸುಧಾರಣೆ, ಸ್ವಧರ್ಮ ರಕ್ಷಣೆ, ಹಳೆಯ ಸಾಹಿತ್ಯಗಳ ಪ್ರಕಟಣೆ, ಹೊಸ ಸಾಹಿತ್ಯ ಬೆಳೆಸುವ ಉದ್ದೇಶದಿಂದಲೇ ಪತ್ರಿಕೆಗಳು ಪ್ರಕಟಗೊಂಡವು. ಸಾಹಿತ್ಯ ರಾಜಾಶ್ರಯದಿಂದ ಜನಾಶ್ರಯದ ಕಡೆಗೆ ಹೊರಳಿತು.

ಪತ್ರಿಕೆಗಳು ನಾಡು ನುಡಿಯ ಬಗೆಗೆ ಅಭಿಮಾನ ಕಳಕಳಿಯನ್ನು ವ್ಯಕ್ತಪಡಿಸಿವೆ. ಪತ್ರಿಕೆಗಳ ಹೆಸರುಗಳೇ ಇದಕ್ಕೆ ಉದಾಹರಣೆ. ಕರ್ನಾಟಕತ್ವ ಜೀವಂತವಾಗಿತ್ತು. ಅನ್ಯಭಾಷೆಯ ದುಷ್ಪರಿಣಾಮಗಳ ಬಗೆಗೆ ನಡೆದ ಚರ್ಚೆ, ಕನ್ನಡ ಬೆಳೆಸಲು ಕನ್ನಡಿಗರಾದವರು ಮಾಡಬೇಕಾದ ಕರ್ತವ್ಯ, ಮುದ್ರಣ ದೋಷ ನಿವಾರಣೆಗೆ ಕಂಡುಕೊಂಡ ಉಪಾಯ, ಪತ್ರಿಕೆಗಳಿಂದ ಸಾಹಿತ್ಯದ ಮೇಲಾದ ಪ್ರಭಾವ, ಹೊಸ ಸಾಹಿತ್ಯ ಮಾರ್ಗವನ್ನು ರೂಪಿಸಿಕೊಳ್ಳುವಾಗಿನ ವಾಗ್ವಾದ, ಚರ್ಚೆ ಇತ್ಯಾದಿಗಳನ್ನು ಗಮನಿಸಲಾಗಿದೆ.

ಬಂಗಾಳ ವಿಭಜನೆಯಿಂದ ಏಕೀಕರಣದ ವರೆಗಿನ ಕಾಲಘಟ್ಟದ ವ್ಯಾಪ್ತಿ ದೊಡ್ಡದು. ದೇಶದ ಸ್ವಾತಂತ್ರ್ಯ, ನಾಡಿನ ಏಕೀಕರಣದ ಬಗೆಗಿನ ಕಾಳಜಿ ಪತ್ರಿಕೆ ಮತ್ತು ಸಾಹಿತ್ಯದಲ್ಲಿ ವ್ಯಕ್ತವಾಗಿದೆ. ಜೊತೆಯಲ್ಲಿ ಕನ್ನಡ ಭಾಷೆಯ ಬಗೆಗೂ ಕಾಳಜಿ ಉಳಿದುಕೊಂಡು ಬಂದಿದೆ. ಪರಭಾಷೆಯ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತಲಾಗಿದೆ. ಮಹಾರಾಷ್ಟ್ರದ ಕೇಸರಿ ಪತ್ರಿಕೆಯ ಪ್ರಭಾವ ಗುರುತಿಸಲಾಗಿದೆ. ಗೆಳೆಯರ ಗುಂಪು, ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ, ವಸಂತ, ಸದ್ಬೋಧ ಚಂದ್ರಿಕೆ, ಪರಿಷತ್ಪತ್ರಿಕೆ, ವಿಶ್ವಕರ್ನಾಟಕ, ಜೀವನ, ಜಯಂತಿ, ವಾಣಿ, ಉಷಾ ಮೊದಲಾದ ಪತ್ರಿಕೆಗಳ ವಿಶೇಷತೆ ಗುರುತಿಸಲಾಗಿದೆ. ಏಕೀಕರಣ- ಪತ್ರಿಕೆ- ಸಾಹಿತ್ಯ ಇವು ಒಂದಕ್ಕೊಂದು ಕೊಂಡಿಯಾಗಿದ್ದವು. ನುಡಿ ಸೇವೆ ನಾಡ ಸೇವೆಗೆ ಕಡಿಮೆಯಾದುದಲ್ಲ ಎಂಬ ಅರಿವು ಇತ್ತು. ಪ್ರಗತಿಪರ ವಿಚಾರಧಾರೆಗೆ ಸನಾತನಿಗಳ ವಿರೋಧ, 'ಶೂದ್ರ ತಪಸ್ವಿ' ಮತ್ತು ಶೂದ್ರ ಪ್ರಜ್ಞೆ ಇಲ್ಲಿ ಚರ್ಚೆಗೆ ಒಳಗಾಗಿದೆ. ಈ ಅವಧಿಯ ಪ್ರಮುಖ ವಾಗ್ವಾದ ಪ್ರಾಸ ತ್ಯಾಗಕ್ಕೆ ಮತ್ತು ಅನುವಾದಕ್ಕೆ ಸಂಬಂಧಿಸಿದ್ದು. ನಾಡು ನುಡಿಯೇ ಕನ್ನಡ ಧರ್ಮವಾಯಿತು. ಪ್ರಾದೇಶಿಕ ಭಾಷಾ ಭಿನ್ನತೆ ದೂರ ಮಾಡಲು ಪ್ರಯತ್ನಗಳು ನಡೆದವು. ಕನ್ನಡ ಜಾಗೃತಿ ನಾಡಿನ ತುಂಬೆಲ್ಲ ಏಕ ಕಾಲದಲ್ಲಿ ಉಂಟಾಯಿತು. ಧಾರವಾಡ-ಮಂಗಳೂರು - ಮೈಸೂರು ಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು, ಕೃತಿಗಳ ಬೆನ್ನು ತಟ್ಟಿ ಪ್ರೋತ್ಸಾಹಿಸುವ, ಬೆಲೆಕಟ್ಟುವ ಹಂತಗಳೆಲ್ಲ ಇಲ್ಲಿ ದಾಖಲಾಗಿವೆ.

ಏಕೀಕರಣದ ಅವಧಿಯಲ್ಲಿಯೇ ಸಾಹಿತ್ಯ ಸಮಾಜಮುಖಿಯಾದದ್ದನ್ನು ಪ್ರಗತಿಶೀಲರ ಕಾಲದಲ್ಲಿ ಗುರುತಿಸಬಹುದು. ಪ್ರಗತಿಶೀಲರ ಪೂರ್ವದಲ್ಲಿಯೂ ಪ್ರಗತಿಶೀಲ ಧೋರಣೆಯ ಸಾಹಿತ್ಯ ಸೃಷ್ಟಿಯಾಗಿತ್ತು. ಪ್ರಗತಿಶೀಲರ ಕಾಲದಲ್ಲಿ ರಷ್ಯಾದ ಕಮ್ಯುನಿಸಂ ಪ್ರಭಾವದಿಂದ ಸಾಹಿತ್ಯ ಸೃಷ್ಟಿಯಾಗಿತ್ತು. ಸಾಹಿತ್ಯ ಕೂಡ ಚಳವಳಿಯಾಗಬಹುದು ಎಂಬ ಮಾತು ಪ್ರಗತಿಶೀಲರ ಕಾಲದಲ್ಲಿ ಕೇಳಿಬಂತು. ಬಯಸಿ ಗಳಿಸಿದ ಸ್ವಾತಂತ್ರ್ಯದ ಬಗೆಗಿನ ಭ್ರಮ ನಿರಸನ ನವ್ಯ ಸಾಹಿತ್ಯದಲ್ಲಿ ದಾಖಲಾಗುವಾಗ ಪತ್ರಿಕೆಗಳಲ್ಲಿ ಅದರ ಬಗೆಗೆ ನಡೆದ ಚರ್ಚೆಯನ್ನು ಗಮನಿಸಲಾಗಿದೆ.

ಏಕೀಕರಣೋತ್ತರ ಸಾಹಿತ್ಯ ಮತ್ತು ಪತ್ರಿಕೆಯ ಸಂಬಂಧದ ಕುರಿತ ಅಧ್ಯಾಯದಲ್ಲಿ ನವ್ಯ ಸಾಹಿತ್ಯದ ಪ್ರತಿಷ್ಠಾಪನೆಗೆ ನಡೆದ ಪ್ರಯತ್ನಗಳು, ಈ ಸಂಬಂಧ ಸಾಹಿತ್ಯಪತ್ರಿಕೆಗಳಲ್ಲಿ

ನಡೆದ ಚರ್ಚೆ, ಗಣ್ಯರ ಅಭಿಪ್ರಾಯಗಳನ್ನು ಲಕ್ಷಿಸಲಾಗಿದೆ. ನವ್ಯದ ಸಂದರ್ಭದಲ್ಲಿ ಮೊಕಾಶಿಯವರ ಚಿಂತನೆ, ಶಾಂತಿನಾಥ ದೇಸಾಯಿ ಮತ್ತು ಗಿರೀಶ ಕಾರ್ನಾಡರ ನಡುವಿನ ವಾಗ್ವಾದ, ಬಿಟಿ.ದೇಸಾಯಿಯವರ ಅಭಿಪ್ರಾಯ ಎಲ್ಲವನ್ನೂ ಗಮನಿಸಲಾಗಿದೆ. ನವ್ಯ ಸಾಹಿತ್ಯದ ಪ್ರಮುಖ ಚರ್ಚೆ ಶ್ರೇಷ್ಠತೆಯನ್ನು ಕುರಿತದ್ದು. ಇದು ನವ್ಯೋತ್ತರದಲ್ಲಿ ಹೇಗೆ ಚಿಂತನೆಯನ್ನು ಬೆಳೆಸಿತು ಎಂಬುದರ ವಿಶ್ಲೇಷಣೆ ಇದೆ. ಎಂಥ ಶ್ರೇಷ್ಠತೆ ಬೇಕು, ಯಾವುದು ಬೇಡ, ಶ್ರೇಷ್ಠತೆಯ ಕಲ್ಪನೆ ದಲಿತ ಸಾಹಿತ್ಯದ ಸಂದರ್ಭದಲ್ಲಿ ಯಾವ ರೀತಿ ಇದೆ ಎಂಬುದು ಮತ್ತು ದಲಿತ - ಬಂಡಾಯ ಬೇರೆ ಬೇರೆಯೇ ಅಥವಾ ಒಂದೆಯೇ ಎಂಬ ಬಗೆಗಿನ ಚರ್ಚೆಯೂ ದಾಖಲಾಗಿದೆ.

ಹೊಸಗನ್ನಡದ ಎಲ್ಲ ಸಾಹಿತ್ಯ ಪಂಥಗಳು ಬೇರು ಬಿಡುವ ಸಂದರ್ಭದಲ್ಲಿ ಸಾಹಿತ್ಯಪತ್ರಿಕೆಗಳು ನಿರ್ಣಾಯಕ ಪಾತ್ರವನ್ನು ವಹಿಸಿವೆ. ಒಂದು ರೀತಿಯಲ್ಲಿ ಪತ್ರಿಕೆಗಳು ಸಾಹಿತ್ಯ ಬೆಳವಣಿಗೆಯನ್ನು ತಮ್ಮ ಕಣ್ಗಾವಲಿನಲ್ಲಿ ನಿರಂತರ ಇರಿಸಿವೆ. ಹಾಗೆಯೇ ಸಾಹಿತ್ಯ ಮತ್ತು ಸಮಾಜದ ನಡುವೆ ಬೆಸೆಯುವ ನಿಯಂತ್ರಿಸುವ ಕೊಂಡಿಯಂತೆ ಕೆಲಸ ನಿರ್ವಹಿಸಿವೆ. ಇದು ನೇರವಾಗಿ ಮತ್ತು ಮೂರ್ತವಾಗಿ ಕಾಣಿಸಿಕೊಳ್ಳದಿದ್ದರೂ ಪತ್ರಿಕೆಗಳು ಆಧುನಿಕ ಸಾಹಿತ್ಯ ಬೆಳವಣಿಗೆಯಲ್ಲಿ ಸ್ಪಷ್ಟವಾದ ಪ್ರಭಾವಗಳನ್ನು ಬೀರಿವೆ. ಇದರ ಸ್ವರೂಪ ಮತ್ತು ನೆಲೆಗಳನ್ನು ಮುಂದಿನ ಅಧ್ಯಾಯಗಳಲ್ಲಿ ಕಂಡುಕೊಳ್ಳಲು ಯತ್ನಿಸಲಾಗಿದೆ.

ಅಧ್ಯಾಯ ಎರಡು:
ಸಾಹಿತ್ಯಪತ್ರಿಕೆಗಳ ಸ್ವರೂಪ ಮತ್ತು ಇತಿಹಾಸ

೧. ಸ್ವರೂಪ: ಪತ್ರಿಕೆಗಳು ಹುಟ್ಟುವುದಕ್ಕೆ ಮುದ್ರಣ ಯಂತ್ರದ ಶೋಧ ಒಂದು ಪ್ರಬಲವಾದ ಕಾರಣವಾಗಿದೆ. ಅದೇ ರೀತಿ ಆಧುನಿಕ ಸಾಹಿತ್ಯದ ಬೆಳವಣಿಗೆಯಲ್ಲೂ ಮುದ್ರಣ ಯಂತ್ರದ ಪಾತ್ರವೂ ದೊಡ್ಡದೇ. ಐತಿಹಾಸಿಕವಾಗಿ ಗಮನಿಸಿದಾಗ ಗುಟನ್ ಬರ್ಗ್ ಎಂಬಾತ ೧೪೪೦ರಲ್ಲಿ ಯುರೋಪಿನಲ್ಲಿ ಮೊದಲ ಮುದ್ರಣ ಯಂತ್ರವನ್ನು ಸ್ಥಾಪಿಸಿದ. ಚೀನ ದೇಶದಲ್ಲಿ ಕ್ರಿ.ಶ. ೮೬೮ರಲ್ಲಿಯೇ ಆ ದೇಶ ಭಾಷೆಯ ಅಕ್ಷರ ಮೊಳೆಗಳನ್ನು ತಯಾರಿಸಿ ಪುಸ್ತಕವೊಂದನ್ನು ಮುದ್ರಿಸಲಾಗಿತ್ತು. ಪ್ರಪಂಚದ ಮೊದಲ ಪತ್ರಿಕೆ ೧೬೧೫ರಲ್ಲಿ ಜರ್ಮನಿಯಲ್ಲಿ ಪ್ರಕಟವಾಯಿತು. ಇಂಗ್ಲಂಡಿನ ಮೊದಲ ಪತ್ರಿಕೆ ೧೬೨೨ರಲ್ಲಿ ಪ್ರಕಟವಾಯಿತು. ಇಂಗ್ಲಂಡಿನ ಕಾಕ್ಸಟನ್ ಎಂಬಾತ ೧೪೭೬ರಲ್ಲಿಯೇ ಮುದ್ರಣ ಯಂತ್ರವನ್ನು ಸ್ಥಾಪಿಸಿದ್ದ. ಮೊದಲ ಮುದ್ರಣಯಂತ್ರ ಸ್ಥಾಪನೆಯಾದ ೧೫೦ ವರ್ಷಗಳ ಬಳಿಕ ಮೊದಲ ಪತ್ರಿಕೆ ಆರಂಭವಾಯಿತು[೧] ಇದಕ್ಕೆ ಕಾರಣಗಳೂ ಇವೆ. ಆ ಕಾಲದಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆಯಿತ್ತು. ನಾಣ್ಯಗಳನ್ನು ಅಚ್ಚುಮಾಡುವ ಟಂಕಶಾಲೆಗೂ ಮುದ್ರಣ ಯಂತ್ರಕ್ಕೂ ವ್ಯತ್ಯಾಸವಿರಲಿಲ್ಲ. ಇವೆರೆಡೂ ರಾಜರ ಸ್ವತ್ತಾಗಿದ್ದವು. ರಾಜರ ಅರಮನೆಯಿಂದ ಹೊರಬರುವ ಆದೇಶಗಳಿಗಷ್ಟೇ ಮಹತ್ವವಿದ್ದ ಕಾಲದಲ್ಲಿ ಜನಸಾಮಾನ್ಯನ ಗೋಳುಗಳನ್ನು ಓದುವುದಕ್ಕೆ ಯಾರಿಗೂ ಆಸಕ್ತಿಯಿರಲಿಲ್ಲ. ಸಂಚಾರ, ಸಂಪರ್ಕ ಸಾಧನಗಳು ಸುಸಜ್ಜಿತವಿಲ್ಲದ ಅಂದಿನ ಕಾಲದಲ್ಲಿ ಸುದ್ದಿಯನ್ನು ಪಡೆಯುವುದು, ಅದನ್ನು ಮುದ್ರಿಸಿ ಬೇರೆ

೧.ಬಿ.ಎಸ್.ಚಂದ್ರಶೇಖರ: ಸಮೂಹ ಮಾಧ್ಯಮಗಳು, ಪುಟ ೧೪೦-೧೪೧

ಬೇರೆ ಊರುಗಳಿಗೆ ಒಯ್ದು ಹಂಚುವುದು ಸುಲಭವಾಗಿರಲಿಲ್ಲ. ೧೬೬೦ರಲ್ಲಿ ಪ್ರಾರಂಭವಾದ ಇಂಗ್ಲಂಡಿನ ಮೊದಲ ದಿನಪತ್ರಿಕೆ ೨೪ ದಿನ ಬಾಳಿತು.

ಭಾರತದ ಮೊದಲ ಮುದ್ರಣ ಯಂತ್ರ ಗೋವಾದಲ್ಲಿ ೧೫೫೬ರಲ್ಲಿ ಸ್ಥಾಪನೆಯಾಯಿತು. ಇದಾದ ೨೨೪ ವರ್ಷಗಳ ನಂತರ ಅಂದರೆ ೧೭೮೦ರಲ್ಲಿ ಭಾರತದ ಮೊದಲ ಪತ್ರಿಕೆ ಹುಟ್ಟಿಕೊಂಡಿತು. ಇದನ್ನು ಜೇಮ್ಸ್ ಆಗಸ್ಟಸ್ ಹಿಕ್ಕಿ (James Agustus Hicky) ೧೭೮೦ರಲ್ಲಿ ಕಲ್ಕತ್ತಾದಿಂದ ಹೊರಡಿಸಿದ. ಇದನ್ನು 'ದಿ ಬೆಂಗಾಲ್ ಗೆಜೆಟ್' ಎಂದೂ (Hickie's Gazette, Calcutta Advertiser) ಎಂದೂ ಕರೆಯಲಾಗುತ್ತಿತ್ತು. ಭಾರತೀಯ ಒಡೆತನದ ಮೊದಲ ಪತ್ರಿಕೆ ೧೮೧೯ರಲ್ಲಿ ಗಂಗಾಧರ ಭಟ್ಟಾಚಾರ್ಯ ಸ್ಥಾಪಿಸಿದರು. ಕನ್ನಡದ ನೆಲದಲ್ಲಿ ಮೊದಲ ಮುದ್ರಣ ಯಂತ್ರ ಬಳ್ಳಾರಿಯಲ್ಲಿ ೧೮೨೭ರಲ್ಲಿ ಪ್ರಾರಂಭವಾಯಿತು. ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ಮಂಗಳೂರಿನಲ್ಲಿ ೧೮೪೨ರಲ್ಲಿ ರೆ.ಎಚ್. ಮೋಗ್ಲಿಂಗ್ (Rev. H. Moegling) ಸ್ಥಾಪಿಸಿದರು. (ಸಾಮಾನ್ಯವಾಗಿ ಕನ್ನಡದ ಮೊದಲ ಪತ್ರಿಕೆಯ ಹುಟ್ಟು ೧೮೪೩ ಎಂದು ಹೇಳುತ್ತಾರೆ. ಇದು ಕಲ್ಲಚ್ಚಿನಲ್ಲಿ ಮುದ್ರಣಗೊಂಡ ಪತ್ರಿಕೆಯ ಇಸ್ವಿ. ಆದರೆ ಇದಕ್ಕೂ ಮೊದಲೇ ೧೮೪೨ರಲ್ಲಿಯೇ ಈ ಪತ್ರಿಕೆಯನ್ನು ಕೈ ಬರೆಹದಲ್ಲಿ ಪ್ರಕಟಿಸಲಾಗುತ್ತಿತ್ತು ಎಂದು ಐ.ಮಾ. ಮುತ್ತಣ್ಣ 'ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಕೃತಿಯಲ್ಲಿ ಹೇಳಿದ್ದಾರೆ. ಇಲ್ಲಿ ಅದನ್ನು ಅನುಮೋದಿಸಿ ಆ ಇಸ್ವಿಯನ್ನೇ ನೀಡಲಾಗಿದೆ.) ೧೮೪೪ರಲ್ಲಿ ಬಳ್ಳಾರಿಯಿಂದ 'ಕಂನಡ ಸಮಾಚಾರ' ಪತ್ರಿಕೆ ಹೊರಟಿತು.

ಭಾರತದ ಮೊದಲ ಪತ್ರಿಕೆ ಇಂಗ್ಲಿಷ್ ಭಾಷೆಯದು. ಅದನ್ನು ಆರಂಭಿಸಿದವರು ಬ್ರಿಟಿಷರು. ಅದೇ ರೀತಿ ದೇಶೀಯ ಭಾಷೆಗಳಲ್ಲೂ ಪತ್ರಿಕೆಗಳನ್ನು ಮೊದಲು ಆರಂಭಿಸಿ ದವರು ವಿದೇಶೀಯರೇ. ಬಂಗಾಳಿಯಲ್ಲಿ ಮೊದಲ ಪತ್ರಿಕೆ 'ಸಮಾಚಾರ ಚಂದ್ರಿಕಾ' 'ಸಮಾಚಾರ ದರ್ಪಣ'ಗಳನ್ನು ಆರಂಭಿಸಿದವರು ರೆ.ಮಾರ್ಶಮನ್ (Rev. Marshman) ಮತ್ತು ರೆ.ಕೆರಿ (Rev.Cary).

ಈ ಒಂದು ಹಿನ್ನೆಲೆಯಲ್ಲಿ ಸಾಹಿತ್ಯಪತ್ರಿಕೆಗಳ ಸ್ವರೂಪ ಮತ್ತು ಇತಿಹಾಸವನ್ನು ಗಮನಿಸಬೇಕಾಗಿದೆ. ಜನರ ಸಮಸ್ಯೆಗಳನ್ನು ರಾಜ ಅರಿಯುವುದು ಹಾಗೂ ರಾಜಾದೇಶಗಳನ್ನು ಪ್ರಜೆಗಳೂ ತಿಳಿಯುವುದು ಅವಶ್ಯಕವೆಂಬ ಅರಿವಿದ್ದ ನಮ್ಮ ಪೂರ್ವಿಕರು ಅದಕ್ಕೆ ತಮ್ಮದೇ ಆದ ವ್ಯವಸ್ಥೆಯನ್ನು ಅವರು ರೂಪಿಸಿಕೊಂಡಿದ್ದರು. ಇತಿಹಾಸ ಕಾಲದಲ್ಲಿ ಪ್ರಜೆಗಳ ಸುದ್ದಿ ಅರಿಯಲು ಬೇಹುಗಾರರು ರಾಜರಿಗೋಸ್ಕರ ಇರುತ್ತಿದ್ದರು. ರಾಜನ ಆದೇಶಗಳನ್ನು ಪ್ರಜೆಗಳಿಗೆ ತಲುಪಿಸಲು ಡಂಗುರಿಗರು ನೇಮಕವಾಗುತ್ತಿದ್ದರು. ರೋಮ್ ದೇಶದಲ್ಲಿ ಆಯಾ ದಿವಸದ ವಿಶೇಷ ಸಂಗತಿಗಳನ್ನು 'ದಿನವಾರ್ತೆ' ಎಂಬ ದಫ್ತರಿನಲ್ಲಿ ಬರೆ ಯಿಸಿ ಚಾವಡಿಯಲ್ಲಿ ಇಡುತ್ತಿದ್ದರು. ಆದರೆ ದೇಶ ವಿದೇಶಗಳ ವೃತ್ತಾಂತಗಳನ್ನು ಕಾಗದದಲ್ಲಿ ಮುದ್ರಿಸಿ ಜನರಿಗೆ ಹಂಚುವ ವ್ಯಾಪಾರ ಮುದ್ರಣ ಯಂತ್ರದ ಶೋಧದ ಬಳಿಕ

ಆರಂಭವಾದ್ದು. ಪತ್ರಿಕೆಗಳು ಹೇಗೆ ಹುಟ್ಟು ಪಡೆದವು ಅದರ ಪ್ರಾಚೀನ ಸ್ವರೂಪ ಹೇಗಿತ್ತು ಎಂಬ ಬಗೆಗೆ ಡಿ.ವಿ.ಗುಂಡಪ್ಪನವರು ಹಲವು ವಿಶೇಷ ಸಂಗತಿಗಳನ್ನು ತಮ್ಮ 'ವೃತ್ತಪತ್ರಿಕೆ' ಕೃತಿಯಲ್ಲಿ ಹೇಳಿದ್ದಾರೆ.[೨] ಈ ರೀತಿಯ ವಿಷಯವನ್ನು ಪ್ರಚಾರ ಪಡಿಸುವ ಹಿಂದಿನ ತುರ್ತು ಏನು? ಪ್ರಚಾರಪಡಿಸಿದ್ದನ್ನು ಇತರರು ಅರಿಯಲು ಮುಗಿಬೀಳುವುದು ಏತಕ್ಕೆ?

ಮನುಷ್ಯ ಸ್ವಭಾವತಃ ಪ್ರಚಾರಪ್ರಿಯ. ಎಲ್ಲರ ಲಕ್ಷ್ಯದ ಕೇಂದ್ರ, ತಾನಾಗಬೇಕು ಎಂಬ ಇಚ್ಛೆ ಪ್ರತಿಯೊಬ್ಬನ ಅಂತರ್ಯದಲ್ಲಿ ಇರುತ್ತದೆ. ತಾನು ಮಾಡಿದ್ದನ್ನು ಇತರರು ನೋಡಿ, ಕೇಳಿ ಮೆಚ್ಚಬೇಕು, ಮೆಚ್ಚಿ ಹೊಗಳಬೇಕು ಎಂಬ ತುಡಿತ ಮನುಷ್ಯನನ್ನು ಸದಾ ಕ್ರಿಯಾಶೀಲನನ್ನಾಗಿ ಇಡುತ್ತದೆ. ಯಾವಾಗ ಆ ತುಡಿತ ಮಾಯವಾಗುವುದೋ ಅಂದು ಆ ಮನುಷ್ಯ ಜೀವಂತ ಶವ. ತಮ್ಮ ಪ್ರತಾಪಗಳನ್ನು ಹೇಳಿಕೊಳ್ಳುವ ಮೌಖಿಕ ರೂಪ ಹರಟೆ ಎಂದೆನ್ನಬಹುದು. ಹತ್ತಾರು ಜನ ಒಟ್ಟಿಗೆ ಕುಳಿತಾಗ ಬಿಚ್ಚಿಕೊಳ್ಳುವ ಹರಟೆಯು ಜಗ್ಗಿದಷ್ಟೂ ಉದ್ದವಾಗುತ್ತದೆ. ಕೇಳುಗರು ಹುಬ್ಬೇರಿಸುವಂತೆ ಮಾಡುವ ಈ ಹರಟೆ ಪ್ರಚಾರಪ್ರಿಯತೆಯ ಪ್ರತೀಕ. ಕೇವಲ ಜನಸಾಮಾನ್ಯರಲ್ಲೇ ಪ್ರಚಾರಪ್ರಿಯತೆ ಇರುವಾಗ ರಾಜ ಮಹಾರಾಜರಲ್ಲಿ ಇನ್ನಷ್ಟು ಅಧಿಕವಾಗಿಯೇ ಇದ್ದಿರಬಹುದು. ಸಂಪರ್ಕ ಮತ್ತು ಸಂವಹನ ಮಾಧ್ಯಮಗಳ ಕೊರತೆ ಇದ್ದ ಅಂದಿನ ಕಾಲದಲ್ಲಿ ರಾಜರುಗಳು ತಮ್ಮ ಪ್ರತಿನಿಧಿಗಳನ್ನು ಬೇರೆ ಬೇರೆ ಭಾಗಗಳಿಗೆ ಕಳುಹಿಸಿ ಸಂದೇಶ ತಲುಪಿಸುತ್ತಿದ್ದರು. ಸರಕಾರದ ನೀತಿಗಳು ಘೋಷಣೆಗಳು ಇಂದು ಮರುದಿನದ ಪತ್ರಿಕೆಗಳಲ್ಲಿ ಪ್ರಕಟಗೊಂಡು ಪ್ರಜೆಗಳನ್ನು ತಲುಪಿ ಬಿಡುತ್ತದೆ. ಪತ್ರಿಕೆಗಳು ಇಲ್ಲದ ಕಾಲದಲ್ಲಿ ರಾಜನ ಆದೇಶಗಳನ್ನು ಜನರಿಗೆ ತಲುಪಿಸುವುದಕ್ಕಾಗಿ ಕಲ್ಲುಗಳ ಮೇಲೆ ಶಾಸನಗಳನ್ನು ಬರೆಯಿಸುವ ಪದ್ಧತಿ ಬಂತು. ಇದು ರಾಜ್ಯಾಡಳಿತದ ದೃಷ್ಟಿಯಿಂದ ಮಾತ್ರ ಮಾಡಿಕೊಂಡ ವ್ಯವಸ್ಥೆ.

ಆದರೆ ಒಂದೂರಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅದೇ ಊರಿನ ಜನರಿಗೆ, ಬೇರೆ ಊರುಗಳ ಜನರಿಗೆ ತಿಳಿಸುವುದು ಹೇಗೆ? ರಾಜ- ಪ್ರಜೆ, ಪ್ರಜೆ-ರಾಜರ ಸಂಪರ್ಕ ಕೊಂಡಿಯನ್ನು ಜನರ ಜನರ ನಡುವಿನ ಸಂಪರ್ಕಕೊಂಡಿಯನ್ನಾಗಿ ಮಾಡಿದ್ದೇ ಪತ್ರಿಕೋದ್ಯಮದ ಸಮೂಹ ಸಂವಹನ. ತಿಳಿದುಕೊಳ್ಳಬೇಕೆಂಬ ಮಾನವನ ಸಹಜ ಕುತೂಹಲವೇ ಪತ್ರಿಕೆಯು ಕ್ರಮೇಣ ಒಂದು ಉದ್ಯಮದ ಸ್ವರೂಪವನ್ನು ಪಡೆಯುವುದಕ್ಕೆ ಕಾರಣವಾಯಿತು.

ಉದ್ಯಮದ ಸ್ವರೂಪವನ್ನು ಪಡೆದಿರುವ ಪತ್ರಿಕೆಯೂ ಒಳಗೊಂಡಂತೆ ಸಮೂಹ ಸಂಪರ್ಕ ಸಾಹಿತಿಯೂ ಒಂದು ಘಟಕವಾಗಿರುವ ಸಮಾಜದಲ್ಲಿ ನಡೆಸುವ ಕಾರ್ಯ ಮೂರು ರೀತಿಯಲ್ಲಿರುತ್ತದೆ. ಒಂದು ಕಾವಲುಗಾರನ ಕೆಲಸ, ಎರಡನೆಯದು ಪಂಚಾಯಿತಿ, ಮೂರನೆಯದು ಶಿಕ್ಷಕನ ಕರ್ತವ್ಯ. ಪತ್ರಿಕೆ ಕಾವಲುಗಾರನಂತೆ ಪತ್ರಿಕೆ ಪರಿಸರದ ವೀಕ್ಷಣೆ ಮಾಡುತ್ತದೆ, ಪಂಚಾಯಿತಿಯಂತೆ ಆಗುತ್ತಿರುವ ಬದಲಾವಣೆಯ ಬಗೆಗೆ

೨. ನೋಡಿ-ಡಿವಿಜಿ: ವೃತ್ತಪತ್ರಿಕೆ

ಚರ್ಚಿಸುತ್ತದೆ, ಶಿಕ್ಷಕನಂತೆ ಸಮಾಜದ ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸುತ್ತದೆ. ಕೆಲವು ಪತ್ರಿಕೆಗಳಲ್ಲಿ 'ಪಂಚಾಯಿತಿ ಕಟ್ಟೆ' ಎಂಬ ಶೀರ್ಷಿಯಲ್ಲಿ ಸಮಸ್ಯೆಯೊಂದನ್ನು ಮಂಡಿಸಿ ಸರಕಾರದ ಗಮನ ಸೆಳೆದು ಅದಕ್ಕೆ ಸರಕಾರದಿಂದ ಬಂದ ಪ್ರತಿಕ್ರಿಯೆ ಪ್ರಕಟಿಸಿದ್ದನ್ನು ಕಾಣಬಹುದು.[೩]

ಸಾಹಿತ್ಯವನ್ನು ಸಂಸ್ಕೃತಿಯ ಒಂದು ಅಂಗ ಎಂದು ಪರಿಭಾವಿಸಿದಾಗ ಸಾಹಿತ್ಯ ಪತ್ರಿಕೆಗಳು ಸಮೂಹ ಮಾಧ್ಯಮಗಳಲ್ಲಿಯೇ ಸೇರಿ ಬಿಡುತ್ತವೆ. ಹೀಗಿರುವಾಗ ಸಾಹಿತ್ಯಪತ್ರಿಕೆಗಳು ಮತ್ತು ಉಳಿದ ಪತ್ರಿಕೆಗಳಿಗೆ ಇರುವ ವ್ಯತ್ಯಾಸವನ್ನು ಗಮನಿಸಬಹುದು. ಉಳಿದ ಪತ್ರಿಕೆಗಳು ಸಮೂಹ ಸಂಪರ್ಕದ ವ್ಯಾಪ್ತಿಯೊಳಗೆ ಸೇರಿ ಸಮೂಹ ಪ್ರಯೋಜನದ ಕಡೆಗೆ ಗಮನ ನೀಡುತ್ತವೆ. ಆದರೆ ಸಾಹಿತ್ಯಪತ್ರಿಕೆಗಳು ನಿರ್ದಿಷ್ಟ ವಲಯವನ್ನು ಉದ್ದೇಶಿಸಿರುತ್ತವೆ. ಸಮೂಹ ಮಾಧ್ಯಮ ಬೆಳೆದಂತೆ ಮನರಂಜನೆ ಇಂದು ಒಂದು ಉದ್ಯಮವಾಗಿದೆ. ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು, ಮಾಸ ಪತ್ರಿಕೆಗಳು, ವಾರ ಪತ್ರಿಕೆಗಳ ಗುರಿಯೂ ಮನರಂಜನೆಯೇ ಆಗಿರುತ್ತದೆ. ಹೀಗಿರುವಾಗ ಗಂಭೀರವಾಗಿ ಚಿಂತಿಸುವ ಲೇಖಕ ಜನಪ್ರಿಯ ಪತ್ರಿಕೆಗಳಿಗೆ ಬರೆಯುವಾಗ ತನ್ನ ಮೂಲ ನೆಲೆಯಿಂದ ಈಚೆಗೆ ಸರಿದು ಪತ್ರಿಕೆಯ ಅಗತ್ಯವೇನು ಎಂದು ಅರಿತು ಬರೆಯುತ್ತಾನೆ. ಓದುಗರ ಬೇಡಿಕೆಗೆ ಅನುಗುಣವಾಗಿ ರಚನೆಗೊಳ್ಳುವ ಜನಪ್ರಿಯ ಸಾಹಿತ್ಯ ಓದುಗನಿಗೆ ತಾತ್ಕಾಲಿಕವಾಗಿ ಖುಷಿ ಕೊಟ್ಟರೂ ಓದುಗನ ವ್ಯಕ್ತಿತ್ವ ವಿಕಾಸಕ್ಕೆ, ಅಭಿರುಚಿ ನಿರ್ಮಾಣಕ್ಕೆ ಪೂರಕವಾಗಿ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಜನಪ್ರಿಯ ಪತ್ರಿಕೆಗಳು ಸಿಲೆಕ್ಟಿವ್ ಎನ್ನಿಸಿಕೊಳ್ಳುತ್ತವೆ. ಈ ಹಂತದಲ್ಲಿಯೇ ಜನಪ್ರಿಯ ಪತ್ರಿಕೆಗಳಿಂದ ಸಾಹಿತ್ಯಪತ್ರಿಕೆಗಳು ಬೇರೆಯಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತವೆ.

ಸುದ್ದಿ ಪತ್ರಿಕೆಗಳು ಸುದ್ದಿಯ ಜೊತೆಯಲ್ಲಿ ಕಾಮಿಕ್ಸ್, ಛೂ ಬಾಣ, ಚೇ!ಚೇ!, ಗುರುಶಿಷ್ಯ, ನುಡಿ ಕಿಡಿ ಈ ರೀತಿಯಲ್ಲಿ ಸುದ್ದಿಯನ್ನು ಲಘುವಾಗಿ ಟೀಕಿಸುವ ಕಾಲಂಗಳು, ನಗೆಹನಿಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ವಾರದ ಸಾಪ್ತಾಹಿಕ ಪುಟಗಳಲ್ಲಿ ಕಥೆ, ಕವನಗಳೂ ಇರುತ್ತದೆ. ಇಲ್ಲಿಯ ಪುಸ್ತಕ ವಿಮರ್ಶೆಯಂತೂ ಕೇವಲ ಪರಿಚಯಾತ್ಮಕವಾಗಿ, ಪ್ರೊಫೆಶನಲ್ ವಿಮರ್ಶೆಯಾಗಿರುತ್ತದೆ. ಪುಸ್ತಕವೊಂದು ಹೊಸದಾಗಿ ಬಂದಾಗ ಮಾತ್ರ ಅವುಗಳ ಪರಿಚಯಕ್ಕಾಗಿ ಇಂಥ ವಿಮರ್ಶೆಗಳಿರುತ್ತವೆ. ಆದರೆ ಸಾಹಿತ್ಯಪತ್ರಿಕೆಗಳಲ್ಲಿ ಇವುಗಳದೇ ವಿಮರ್ಶೆ ಬಂದಾಗ ಅವುಗಳ ನಡುವಿನ ಅಂತರ ಕಣ್ಣಿಗೆ ಕಟ್ಟುವಂತೆ ಇರುತ್ತದೆ. ಸಾಹಿತ್ಯಪತ್ರಿಕೆಗಳಿಗೆ ಕೇವಲ ಹೊಸ ಪುಸ್ತಕಗಳ ವಿಮರ್ಶೆ ಮಾಡುವ ಚೌಕಟ್ಟೇನೂ ಇಲ್ಲ. ಹಳೆಯ ಪುಸ್ತಕಗಳನ್ನು ಹೊಸ ಕಾಲದ ಸಂದರ್ಭದಲ್ಲಿ ಅದು ಪರಿಶೀಲಿಸಬಹುದು. ಹಳೆಯ ಪುಸ್ತಕಗಳ ಪುನರ್ ಮೌಲ್ಯಮಾಪನವನ್ನು ಅದು ಮಾಡಬಹುದು. ಹಳೆಯ ಸಾಹಿತ್ಯಕ್ಕೆ

---

೩. ಬೆಳಗಾವಿಯ 'ಕನ್ನಡಮ್ಮ' ದಿನಪತ್ರಿಕೆಯಲ್ಲಿ ಈ ರೀತಿ 'ಪಂಚಾಯಿತಿ ಕಟ್ಟೆ' ಇತ್ತು.

ಹೊಸ ಮಾನದಂಡಗಳನ್ನು ಅನ್ವಯಿಸಿ ಆಗಾಗ ಸಾಹಿತ್ಯಪತ್ರಿಕೆಗಳಲ್ಲಿ ವಿಮರ್ಶೆಗಳು ಬರುತ್ತವೆ. ಉದಾ: ಭಾರತೀಯ ಭಕ್ತಿ ಪಂಥ ಮತ್ತು ಮಹಿಳೆಯರು- ಬಿ.ಗಂಗಾಧರ ಮೂರ್ತಿ (ಸಂಕ್ರಮಣ ಸಂಪುಟ ೩೦, ಸಂ.೭), ಅಮೃತಮತಿ- ಸ್ತ್ರೀವಾದಿ ನೆಲೆಯಲ್ಲಿ- ಡಾ.ಕಮಲಾ ಹಂಪನಾ (ಸಂಕ್ರಮಣ, ಸಂಪುಟ ೩೦, ಸಂಚಿಕೆ ೭), ಬೇಂದ್ರೆ ಕಾವ್ಯ: ಅವೈದಿಕ ನೆಲೆಗಳಲ್ಲಿ- ಡಾ.ರಹಮತ್ ತರೀಕೆರೆ- ಸಾಹಿತ್ಯ ಸಂವಾದ ೫೦), ಇವರದೇ ಸಂಕ್ರಮಣದಲ್ಲಿಯ (ಸಂಪುಟ ೩೦, ಸಂ.೧೦-೧೧) ಕುವೆಂಪು ಸಾಂಸ್ಕೃತಿಕ ವೈರುದ್ಧ್ಯಗಳ ಪಯಣಿಗನಾಗಿ; ಹೀಗೆ ಹೆಸರಿಸುತ್ತ ಹೋಗಬಹುದು. ಸಾಹಿತ್ಯಪತ್ರಿಕೆಗಳು ಮಾಡುತ್ತಿರುವ ಇನ್ನೊಂದು ಮಹತ್ವದ ಕಾರ್ಯವೆಂದರೆ, ಬೇರೆ ಬೇರೆ ಕಡೆಗಳಲ್ಲಿ ಸಭೆ, ಉಪನ್ಯಾಸ ಕಾರ್ಯಕ್ರಮ, ವಿಚಾರ ಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಮುದ್ರಿಸುತ್ತಿರುವುದು. ಇದರಿಂದ ಇಲ್ಲಿ ಮಂಡಿತವಾದ ವಿಚಾರಗಳನ್ನು ಸೀಮಿತ ವಲಯದಿಂದ ಸಮುದಾಯಕ್ಕೆ ತಲುಪಿಸುವ ಕೆಲಸ ಮಾಡಿದಂತೆ ಆಗುತ್ತದೆ. ಕೆಲವು ಸಾಹಿತ್ಯಪತ್ರಿಕೆಗಳೇ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಅವುಗಳನ್ನು ಪ್ರಕಟಿಸಿವೆ. ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನದ 'ದಲಿತ- ಬಂಡಾಯ ಸ್ಥಗಿತತೆ: ಒಂದು ಸಂವಾದ' ಎಂಬ ಗೋಷ್ಠಿಯನ್ನು 'ಸಾಹಿತ್ಯ ಸಂವಾದ' ತನ್ನ ಸಂಚಿಕೆಯಲ್ಲಿ ಪ್ರಕಟಿಸಿತ್ತು.[೪]

ವಿಶೇಷ ಸಂಚಿಕೆಗಳು: ಇದಲ್ಲದೆ ಸಾಹಿತ್ಯಪತ್ರಿಕೆಗಳು ಕೆಲವು ಸಾಹಿತಿಗಳ ಬಗ್ಗೆ ವಿಶೇಷ ಸನ್ನಿವೇಶಗಳಲ್ಲಿ ವಿಶೇಷ ಸಂಚಿಕೆಗಳನ್ನು ಹೊರಡಿಸಿವೆ. ಇದರಿಂದ ಸಾಹಿತಿಯೊಬ್ಬರನ್ನು ಹಲವು ನಿಟ್ಟಿನಿಂದ ಅಭ್ಯಾಸ ಮಾಡುವುದಕ್ಕೆ ಅನುಕೂಲವಾಗುವುದು.

'ಸಂಕ್ರಮಣ'ವು ಕುವೆಂಪು ವಿಶೇಷಾಂಕವನ್ನು ಹೊರತಂದಿದೆ.[೫] 'ಕುವೆಂಪು ಸಾಹಿತ್ಯ: ಮರು ಅಧ್ಯಯನ' ಸಂಕ್ರಮಣ ಪತ್ರಿಕೆಯಲ್ಲಿ ಒಂದು ವಿಶೇಷಾಂಕವಾಗಿ ತರಲು ಕುವೆಂಪು ಜೀವಂತವಿಲ್ಲ ಎನ್ನುವುದು ಒಂದು ಆಕಸ್ಮಿಕ ಕಾರಣವಾದರೆ, ಚಾರಿತ್ರಿಕವಾಗಿ ಒಬ್ಬ ವ್ಯಕ್ತಿ ಜೀವಂತ ಇರುವುದಕ್ಕೂ ಜೀವಂತ ಇಲ್ಲದಿರುವಾಗ ನಡೆಯುವ ಸಂಗತಿಗಳಿಗೂ ವ್ಯತ್ಯಾಸವಿರುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು ಸಾಹಿತ್ಯದ ಬಗ್ಗೆ ಪುನರ್ ಚರ್ಚೆಯಾಗಬೇಕೆಂದು ಆ ಪತ್ರಿಕೆಯ ಸಂಪಾದಕರು ಬಯಸಿದ ಕಾರಣ ಕುವೆಂಪು ವಿಶೇಷಾಂಕ ಹೊರ ಬಂತು. ಕುವೆಂಪು ಇರಲಿ ಅಥವಾ ಇನ್ನಾವುದೇ ಸಾಹಿತಿ ಇರಲಿ ಅವರು ಬದುಕಿದ್ದಾಗ ಅವರ ಸಾಹಿತ್ಯದ ಬಗೆಗೆ ಸಂಕೀರ್ತನ ರೂಪದ ವಿಮರ್ಶೆ ಹಾಗೂ ಪೂರ್ಣ ನಿರಾಕರಣೆ ರೂಪದ ವಿಮರ್ಶೆ ಬಂದಿರಬಹುದು. ಅದು ಅವರ ಸ್ಥಾನವನ್ನು ಸರಿಯಾಗಿ ನಿರ್ದೇಶನ ಮಾಡಲಾರದು. ಈ ಎರಡು ಸಾಧ್ಯತೆಗಳ ಆಚೆಗಿನ ಇನ್ನೊಂದು ಸಾಧ್ಯತೆ ಕಂಡುಕೊಳ್ಳುವ ಪ್ರಯತ್ನ ಇಂಥ ವಿಶೇಷ ಸಂಚಿಕೆಯ ಹಿಂದಿರುತ್ತದೆ. ಜೊತೆಯಲ್ಲಿ ಇಂದಿನ ಬರೆಹಗಾರರು ಹೇಗೆ ಆ ಸಾಹಿತಿಯ ಸಾಹಿತ್ಯ ಕುರಿತಂತೆ ಯೋಚಿಸುತ್ತಿದ್ದಾರೆ

---

೪. ಸಾಹಿತ್ಯ ಸಂವಾದ ೪೯, ಸಂಪುಟ ೯, ಸಂಚಿಕೆ ೧

೫. ಸಂಕ್ರಮಣ ಸುಪುಟ ೩೦, ಸಂಚಿಕೆ ೧೦-೧೧

ಎಂಬುದನ್ನು ಸಂಕಲನಗೊಳಿಸಿ ಕೊಡಬೇಕು ಎಂಬ ಉದ್ದೇಶವೂ ಅದರ ಹಿಂದೆ ಇರುತ್ತದೆ.

ಜಯಕರ್ನಾಟಕ, ಜಯಂತಿ ಮೊದಲಾದವುಗಳೂ ಇಂಥ ವಿಶೇಷ ಸಂಚಿಕೆಗಳನ್ನು ಆಗಾಗ ಪ್ರಕಟಿಸಿವೆ. 'ಸಂಚಯ' ಪತ್ರಿಕೆಯು ಸು.ರಂ. ಎಕ್ಕುಂಡಿ ಸ್ಮರಣೆ ಸಂಚಿಕೆ (ಸಂಪುಟ ೭, ಸಂಚಿಕೆ ೬) ರಾಮಣ್ಣನ ನೆನಪು (ಬೆಸಗರಹಳ್ಳಿ ರಾಮಣ್ಣ ಸಂಚಿಕೆ), (ಸಂಪುಟ ೯, ಸಂಚಿಕೆ ೩), ಕನ್ನಡ ಸಣ್ಣಕತೆಗಳು ವಿಶೇಷ ಸಂಚಿಕೆ (ಸಂಪುಟ ೭, ಸಂಚಿಕೆ ೨) ಹೀಗೆ ಪ್ರಕಟಿಸಿವೆ. ವಿವಿಧ ಸಾಹಿತ್ಯಪತ್ರಿಕೆಗಳಲ್ಲಿ ಬಂದಿರುವ ಲೇಖನಗಳ ಆಧಾರದ ಮೇಲೆಯೇ ಒಬ್ಬ ಲೇಖಕನ ಸಾಧನೆಯನ್ನು ರೇಖಿಸಬಹುದು. ಉದಾಹರಣೆಗೆ ಅಡಿಗರನ್ನು ಕೇಂದ್ರ ಮಾಡಿಕೊಂಡು ವಿವಿಧ ಸಾಹಿತ್ಯಪತ್ರಿಕೆಗಳ ಲೇಖನಗಳಲ್ಲಿ ಅವರ ಬಗ್ಗೆ ಏನೇನು ಬಂದಿವೆ ಎನ್ನುವುದನ್ನು ಕಲೆ ಹಾಕಿದರೆ ಹಲವು ನಿಟ್ಟಿನಿಂದ ಅವರು ನಿಕಷಕ್ಕೆ ಒಳಪಟ್ಟು ನಾವು ಒಂದು ನಿರ್ಣಯಕ್ಕೆ ತಲುಪುವುದು ಸಾಧ್ಯ.

ಸಾಹಿತ್ಯಪತ್ರಿಕೆಗಳ ವಿಶೇಷತೆ: ಸಾಹಿತ್ಯಪತ್ರಿಕೆಗಳಲ್ಲಿಯ ಇನ್ನೊಂದು ವಿಶೇಷವೆಂದರೆ ಪುಸ್ತಕಗಳನ್ನು ಧಾರಾವಾಹಿಯ ರೂಪದಲ್ಲಿ ನೀಡುವುದು. ಒಂದು ಸಂಚಿಕೆಯಲ್ಲಿ ಒಂದು ಧಾರಾವಾಹಿ ಆರಂಭವಾದಾಗ ಅದಕ್ಕೆ ಒಂದರಿಂದ ಪುಟ ಸಂಖ್ಯೆಯನ್ನು ನೀಡುವುದು. ಮುಂದಿನ ಸಂಚಿಕೆಯಲ್ಲಿ ಅದರ ಮುಂದಿನ ಪುಟಸಂಖ್ಯೆಯನ್ನು ನೀಡುವುದು. ಇದರಿಂದ ಓದುಗ ಅವೆಲ್ಲವನ್ನು ಸೇರಿಸಿ ತಾನೇ ಒಂದು ಪುಸ್ತಕವನ್ನು ಮಾಡಿಕೊಳ್ಳುವ ಅವಕಾಶ ಇರುತ್ತದೆ. ಇಂಥ ಪ್ರಯೋಗವನ್ನು ನಾವು 'ವಾಗ್ಭೂಷಣ'ದಲ್ಲಿ ಕಾಣಬಹುದು. ಹಳಕಟ್ಟಿ ಗುರುಬಸಪ್ಪ ಫಕೀರಪ್ಪ ಅವರ 'ನಿಜವಾದ ವೀರನು ಅಥವಾ ಜಗಮಲ್ಲ', ಮಹಾದೇವ ಪ್ರಭಾಕರ ಪೂಜಾರಿ ಅವರ 'ಜೈನ ಧರ್ಮದ ಪರಿಭಾಷೆ', ಪಂ.ಹುಲಿಕವಿ ಅವರ 'ನರಗುಂದ ಬಂಡಾಯ', 'ಅಶೋಕ ಅಥವಾ ಪ್ರಿಯದರ್ಶಿ' ಇವೆಲ್ಲ ಇದೇ ರೀತಿಯ ಪುಟ ಸಂಖ್ಯೆ ಹೊಂದಿರುವುದನ್ನು ಕಾಣಬಹುದು.

ಸೀಮಿತ ವಲಯದಲ್ಲಿ ಪ್ರಸಾರದಲ್ಲಿರುವ ಸಾಹಿತ್ಯಪತ್ರಿಕೆ 'ಸಂಕ್ರಮಣ' ಮತ್ತು ಭಿನ್ನ ಅಭಿರುಚಿಯ ಸಮೂಹವನ್ನು ಗಮನದಲ್ಲಿಟ್ಟುಕೊಂಡಿರುವ 'ಮಯೂರ' ಪತ್ರಿಕೆ ಸಿದ್ಧಗೊಳ್ಳುವ ರೀತಿಯಲ್ಲಿ ತಾಂತ್ರಿಕವಾಗಿ ಯಾವುದೇ ಅಂತರವಿಲ್ಲ. 'ಸಂಕ್ರಮಣ'ದ ಲೇಖನಗಳು ಕಂಪೋಸ್ ಆಗುವ, ಮುದ್ರಣ ಗೊಳ್ಳುವ ರೀತಿಯಲ್ಲಿಯೇ 'ಮಯೂರ'ದ ಲೇಖನಗಳೂ ಕಂಪೋಸ್‌ಗೊಳ್ಳುತ್ತವೆ, ಮುದ್ರಣ ಗೊಳ್ಳುತ್ತವೆ. ಆದರೆ ಇವೆರೆಡೂ ವಿಷಯಗಳನ್ನು ಆಯ್ದುಕೊಳ್ಳುವ ರೀತಿಯಲ್ಲಿ ವ್ಯತ್ಯಾಸವಿದೆ. ಸಂಕ್ರಮಣಕ್ಕೆ ತನ್ನ ಓದುಗರು ಯಾರು ಎನ್ನುವುದರ ಸ್ಪಷ್ಟ ಕಲ್ಪನೆಯಿದೆ. ಆದರೆ ಮಯೂರದ ಓದುಗರು ಸಮಾಜದ ಭಿನ್ನ ನೆಲೆಯಿಂದ ಬಂದವರು. ಅವರ ಅಗತ್ಯಗಳನ್ನು ಇಷ್ಟಗಳನ್ನು ಗಮನಿಸಬೇಕಾಗುತ್ತದೆ. ಅಲ್ಲದೆ ಮಯೂರ ಉದ್ಯಮ ಪತ್ರಿಕಾರಂಗದ ಉತ್ಪನ್ನ. ಹೀಗಾಗಿ ಅದು ಹಲವು ರೀತಿಯಲ್ಲಿ ಸಿಲೆಕ್ಟಿವ್ ಆಗುವ ಅನಿವಾರ್ಯತೆಗೆ ಒಳಗಾಗುತ್ತದೆ. ಆದರೆ ಸಂಕ್ರಮಣದ ಓದುಗರು

ಒಂದು ನಿರ್ದಿಷ್ಟ ವರ್ಗದವರು. ಸಾರಾಸಗಟಾದ ಸಮಾಜದ ಎಲ್ಲ ವರ್ಗದವರನ್ನು ರಂಜಿಸಬೇಕೆಂಬ ಉದ್ದೇಶ ಅದರ ಸಂಪಾದಕರಿಗೆ ಇಲ್ಲ. ಅದರಲ್ಲಿ ಹತ್ತಿಪ್ಪತ್ತು ವರ್ಷಗಳ ಹಿಂದೆ ಪ್ರಕಟವಾದ ಒಂದು ಲೇಖನ ಅದರ ಮೌಲ್ಯದ ದೃಷ್ಟಿಯಿಂದ ಇವತ್ತಿಗೂ ಉಪಯುಕ್ತ ಆಗಿರಬಹುದು. ಇದು ಕೇವಲ ಸಂಕ್ರಮಣಕ್ಕೆ ಮಾತ್ರವಲ್ಲ. ಎಲ್ಲ ಸಾಹಿತ್ಯಪತ್ರಿಕೆಗಳಿಗೂ ಅನ್ವಯವಾಗುವ ಮಾತು.

ಸಾಹಿತ್ಯಪತ್ರಿಕೆಗಳು ಸಮೂಹ ಮಾಧ್ಯಮದಿಂದ ಎಲ್ಲಿ ಪ್ರತ್ಯೇಕವಾಗುತ್ತವೆ ಎಂಬುದನ್ನು ಅರಿಯಲು ಮೇಲಿನದು ಚಿಕ್ಕ ಉದಾಹರಣೆ. ಸಾಹಿತ್ಯಪತ್ರಿಕೆಗಳಿಗೆ ಅದರದೇ ಆದ ಲಕ್ಷಣಗಳಿವೆ. ಸಾಹಿತ್ಯಪತ್ರಿಕೆಗಳು ಸಾಹಿತ್ಯಕ ಚರ್ಚೆ, ವಿಮರ್ಶೆ, ಸಿದ್ಧಾಂತಗಳ ಪ್ರಕಟಣೆಗೆ ಮೀಸಲಾದವು. ಸಮಾಜದಲ್ಲಿಯ ನಿರ್ದಿಷ್ಟ ವರ್ಗದವರು ಮಾತ್ರ ಇದರ ಓದುಗರು. ಇದು ನಮ್ಮ ಸಂಸ್ಕೃತಿಯ ದಾಖಲೆಯಾಗಿ ಉಳಿಯುತ್ತದೆ. ಪ್ರಸಾರದ ಸಂಖ್ಯೆಯನ್ನು ಗಮನಿಸಿದಾಗ ಸಾಹಿತ್ಯಪತ್ರಿಕೆಗಳ ಪ್ರಸಾರ ಸಂಖ್ಯೆ ಸಮಾನ್ಯವಾಗಿ ಕಡಿಮೆ ಇರುತ್ತದೆ. ಹೆಚ್ಚಾಗಿ ಮಾಸಿಕ, ತ್ರೈಮಾಸಿಕ, ದ್ವೈಮಾಸಿಕ, ಅರ್ಧವಾರ್ಷಿಕ, ವಾರ್ಷಿಕ ಸಂಚಿಕೆಗಳಾಗಿರುತ್ತವೆ. ಲೇಖಕರ ಅಭಿರುಚಿಯ ನಿರ್ಮಾಣದಲ್ಲಿ, ಸಂಸ್ಕೃತಿಯನ್ನು ಕಾಯ್ದುಕೊಳ್ಳುವಲ್ಲಿ ಮಾತ್ರ, ಇವು ಪ್ರಮುಖ ಪಾತ್ರ ವಹಿಸುತ್ತವೆ.

'ಸಾಹಿತ್ಯಿಕ ಪತ್ರಿಕೆಗಳು ಅದಂದಿನ ಸಾಹಿತ್ಯ ಕೃತಿಗಳ, ಸಾಹಿತ್ಯಿಕ ಚಳವಳಿಗಳ ವಿವರಗಳನ್ನು ತಿಳಿಸುವ ಅಪರೂಪದ ದಾಖಲೆಗಳಾಗಿವೆ. ಅಲ್ಲದೆ ಸಾಹಿತ್ಯದ ಮುಖ್ಯ ಮಾರ್ಗಸೂಚಿಗಳಾಗಿ ಕೆಲಸ ನಿರ್ವಹಿಸಿವೆ. ಅಂದಂದಿನ ಸಾಂಸ್ಕೃತಿಕ ಸಂದರ್ಭಗಳನ್ನು ಸಾಹಿತ್ಯಿಕ ವಾತಾವರಣವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿವೆ. ಕಾಲಕಾಲಕ್ಕೆ ಕನ್ನಡ ಸಾಹಿತ್ಯದ ನೆಲೆಬೆಲೆ ಕಟ್ಟುವುದರಲ್ಲಿ ವಿಮರ್ಶೆಯನ್ನು ಬೆಳೆಸುವುದರಲ್ಲಿ ಸಹಕಾರಿಯಾಗಿವೆ.- ಹೀಗೆ ಸಾಹಿತ್ಯ ಪತ್ರಿಕೆಗಳ ಹರವು ಇರುವುದರಿಂದ ಕನ್ನಡ ಸಾಹಿತ್ಯ ಪತ್ರಿಕೆಗಳ ಅಧ್ಯಯನ ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯ ಚಳುವಳಿಯ ಬೆಳವಣಿಗೆಯ ಅಧ್ಯಯನವೂ ಆಗಿ ಬಿಡುತ್ತದೆ.'[೬]

ಸಾಮಾನ್ಯವಾಗಿ ಸಾಹಿತ್ಯಪತ್ರಿಕೆಗಳ ಪ್ರಸಾರ ಸಂಖ್ಯೆ ಕಡಿಮೆ. ಆದರೆ ಅವು ಪ್ರತಿಷ್ಠಿತವಾದವುಗಳು. ಲೇಖಕರು ಮನಸ್ಸು ಮಾಡಿ ಲೇಖನ ಕೊಟ್ಟರೆ ಅವು ನಡೆಯುತ್ತವೆ. ಲೇಖಕರಿಗೆ ಹಣ ಕೊಡುವುದು ಇವುಗಳಿಗೆ ಸಾಧ್ಯವಿರುವುದಿಲ್ಲ. ಇಂಥ ಪತ್ರಿಕೆಗಳಿಗೆ ಹಣದ ಮೇಲೆ ದೃಷ್ಟಿ ಇರುವ ಲೇಖಕರು ಲೇಖನ ಬರೆಯಲಾರರು. ತಮ್ಮ ಲೇಖನ ಸಾಹಿತ್ಯಕ ವಲಯದಲ್ಲಿ ಚರ್ಚೆಯಾಗಬೇಕು ಎಂದು ಬಯಸುವ ಲೇಖಕ ಈ ಪತ್ರಿಕೆಗಳಿಗೆ ಲೇಖನ ಬರೆಯುತ್ತಾರೆ. ಔಪಚಾರಿಕ ರೂಪದ ಗೌರವ ಧನವನ್ನು ಕೆಲವು ಪತ್ರಿಕೆಗಳು ನೀಡಬಹುದು

೬.ಕನ್ನಡ ಸಾಹಿತ್ಯ ಪತ್ರಿಕೆಗಳು- ಇತಿಹಾಸ- ವರ್ತಮಾನ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ೧೭, ಇತ್ತಿನ ಸಾಹಿತ್ಯ ಪತ್ರಿಕೆಗಳು- ಒಂದು ಸಮೀಕ್ಷೆ.

ಅಷ್ಟೇ. ಆದರೆ ಸಾಹಿತ್ಯಪತ್ರಿಕೆಗಳು ಹೊಸ ಸೃಜನಾತ್ಮಕ ಬರೆಹಗಾರರಿಗೆ ಒಂದು ವೇದಿಕೆಯನ್ನು ಒದಗಿಸುತ್ತದೆ.

ಸಾಹಿತ್ಯಪತ್ರಿಕೆಗಳಿಗೆ ಅದರ ಚಂದಾದಾರರೇ ಜೀವಾಳ. ನಮ್ಮ ಆರಂಭದ ಸಾಹಿತ್ಯಪತ್ರಿಕೆಗಳಲ್ಲಿ ಒಂದಾದ 'ವಾಗ್ಭೂಷಣ'ದಲ್ಲಿ ಪ್ರಕಟವಾದ ಈ ಭಾಗವನ್ನು ಗಮನಿಸಬಹುದು. "--ಸದ್ಯಕ್ಕೆ ವಾಗ್ಭೂಷಣದ ಪ್ರತಿಗಳು ಹೆಚ್ಚಾಗಿ ವೆಚ್ಚವಾಗಹತ್ತಿವೆ. ಕನ್ನಡಿಗರಲ್ಲಿ ಪ್ರೌಢ ವಿಷಯಗಳನ್ನು ಓದುವ ಯೋಗ್ಯತೆಯೂ, ಅಭಿರುಚಿಯೂ ಹೆಚ್ಚಾಗುತ್ತ ನಡೆದಿರುತ್ತದೆ. ನಮ್ಮಲ್ಲಿಯಾದರೂ ಹಲಕೆಲವು ಪ್ರಸಿದ್ಧ ಲೇಖಕರು ತಮ್ಮ ಲೇಖನಿಯನ್ನು ಹೆಚ್ಚು ಧೈರ್ಯದಿಂದ ಮುಂದೆ ಸಾಗಿಸಹತ್ತಿದ್ದಾರೆ. ಮುಂದಿನ ವರ್ಷ ಒಂದೆರಡು ಹೊಸ ಕಾದಂಬರಿಗಳನ್ನು ಪ್ರಸಿದ್ಧ ಪಡಿಸುವೆವು. ನಮ್ಮ ಜನರಲ್ಲಿ ಹೆಚ್ಚಿಗೆ ವಾಚನಾಭಿರುಚಿಯು ಬೆಳೆದಂತೆ ಇದರಲ್ಲಿ ಪ್ರಸಿದ್ಧಪಡಿಸಿದ ಗ್ರಂಥಗಳು ಹೆಚ್ಚು ವೆಚ್ಚವಾಗುವವೆಂದು ನಂಬಿಗೆಯುಂಟು. ಆರಂಭದಲ್ಲಿ ಇದರಲ್ಲಿ ಪ್ರಸಿದ್ಧವಾದ ಪುಸ್ತಕಗಳೆಲ್ಲ ವೆಚ್ಚವಾಗಿ ಮತ್ತೆ ಅವುಗಳನ್ನು ಅಚ್ಚು ಹಾಕಿಸುವ ಅವಶ್ಯಕತೆಯು ಬಂದಿರುವುದು. ಆದರೆ ಸ್ವತಂತ್ರವಾಗಿ ಭಾವಿಸಿಕೊಳ್ಳುವಷ್ಟು ಯೋಗ್ಯತೆಯು 'ವಾಗ್ಭೂಷಣ'ಕ್ಕೆ ಇನ್ನೂ ಬಂದಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ. ಆ ಯೋಗ್ಯತೆಯು ನಮ್ಮ ಕರ್ನಾಟಕ ಭಾಷಾಭಿಮಾನಿಗಳಾದ ವಾಚಕ ಮಹಾಶಯರಿಂದಲೇ ಪ್ರಾಪ್ತವಾಗತಕ್ಕದ್ದು. ಪ್ರತಿಯೊಬ್ಬ ಚಂದಾದಾರರು ತಮ್ಮ ಮಾತೃಭಾಷಾ ದೇವಿಯ ಸೇವೆಯನ್ನು ಮನಃಪೂರ್ವಕವಾಗಿ ಮಾಡಿ ತಮ್ಮ ಜನ್ಮ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ."[೭] ಈ ರೀತಿ ವಿನಂತಿ ಮಾಡಿಕೊಳ್ಳುವ ಅಗತ್ಯ ೮೦ ವರ್ಷಗಳ ನಂತರವೂ ಸಾಹಿತ್ಯಪತ್ರಿಕೆಗಳಿಗೆ ತಪ್ಪಿಲ್ಲ. ಅಷ್ಟಾಗಿಯೂ ಹೊಸ ಹೊಸ ಸಾಹಿತ್ಯಪತ್ರಿಕೆಗಳು ಹುಟ್ಟುಪಡೆದುಕೊಳ್ಳುತ್ತಲೇ ಇವೆ.

ಸಾಹಿತ್ಯಪತ್ರಿಕೆಗಳ ಅಗತ್ಯ ಇದೆ: ಒಂದು ಭಾಷೆಯಲ್ಲಿ ಸಾಹಿತ್ಯಪತ್ರಿಕೆಗಳ ಅಗತ್ಯ ಖಂಡಿತವಾಗಿಯೂ ಇದೆ. ಕಾಲಕಾಲಕ್ಕೆ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ರೂಪವನ್ನು ನೀಡುವುದರಲ್ಲಿ ಸಾಹಿತ್ಯಪತ್ರಿಕೆಗಳ ಕೊಡುಗೆ ಗಮನಾರ್ಹವಾದದ್ದು. ಗೋಪಾಲಕೃಷ್ಣ ಅಡಿಗರು 'ಸಾಕ್ಷಿ' ಪತ್ರಿಕೆಯನ್ನು ಹೊರಡಿಸಿದರು.'ಸಾಕ್ಷಿ' ಕ್ರಮೇಣ ಒಂದು ಕಾವ್ಯ ಪ್ರವಾಹವನ್ನು ಬದಲಿಸುವ ಸಾಮರ್ಥ್ಯವನ್ನು ಪಡೆದುಕೊಂಡಿತು ಎಂಬ ಅಭಿಪ್ರಾಯವಿದೆ.[೮] ಅನಂತರದಲ್ಲಿ ಬಂದ ಸಂಕ್ರಮಣ, ಕವಿತಾ, ಸಮೀಕ್ಷಕ, ಸಮನ್ವಯ, ಪ್ರತೀಕ, ಪ್ರಜ್ಞೆ ಇವುಗಳೂ ಹೊಸ ಸಾಹಿತ್ಯವನ್ನು ಬೆಳೆಸುವಲ್ಲಿ ಸಹಾಯಕವಾದವು. ಹಲವು ಹೊಸಬರನ್ನು ಬೆಳಕಿಗೆ ತಂದ ಶ್ರೇಯಸ್ಸು ಸಂಕ್ರಮಣಕ್ಕಿದೆ. ಸಾಹಿತ್ಯಪತ್ರಿಕೆಗಳ ಒಂದೊಂದು ಸಂಚಿಕೆಯಲ್ಲಿ ಒಂದೋ ಎರಡೋ ಒಳ್ಳೆಯ ಕವಿತೆ, ಲೇಖನಗಳಿದ್ದರೂ ಅವು ಹೊಸಬರ ಆಸಕ್ತಿಯನ್ನು ಕೆರಳಿಸಿದರೆ ಸಾಹಿತ್ಯಪತ್ರಿಕೆಗಳ ಶ್ರಮ ಸಾರ್ಥಕವಾದಂತೆಯೇ.

೭.ವಾಗ್ಭೂಷಣ, ಸಂಪುಟ ೨೫, ಸಂಚಿಕೆ ೧, ಎಪ್ರಿಲ್ ೧೯೨೦

೮.ಬುದ್ದಣ್ಣ ಹಿಂಗಮಿರೆ: ಹೊಸಕಾವ್ಯ ಹೊಸದಿಕ್ಕು

ಇಷ್ಟೊಂದು ಜವಾಬ್ದಾರಿಯಿಂದ ಪ್ರಕಟವಾಗುತ್ತಿದ್ದ ಸಾಹಿತ್ಯಪತ್ರಿಕೆಗಳಿಗೆ ಲೇಖನಗಳು ಅವು ಬಯಸಿದ ರೀತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿರಲಿಲ್ಲ.

ಲೇಖನಗಳ ಕೊರತೆಯನ್ನು ಅನುಭವಿಸಿದ 'ಸಂಕ್ರಮಣ'ದ ಸಂಪಾದಕರ ಮಾತು ಇದು; "ಸಂಕ್ರಮಣಕ್ಕೆ ಎಂಥ ಲೇಖನ ಕಳುಹಿಸಬೇಕು? ಯಾವ ಮಾನದಂಡದಿಂದ ಲೇಖನಗಳನ್ನು ಸ್ವೀಕರಿಸಲಾಗುತ್ತಿದೆ? ಎಂಬ ಪ್ರಶ್ನೆ ಅನೇಕ ಸಲ ನನಗೆದುರಾಗುತ್ತವೆ. ನಾನು ಮುಂದಿಡುವ ವಿಚಾರ ಎರಡೇ: ೧. ಲೇಖನಗಳ ಆಶಯ ಪ್ರಗತಿಪರವಾಗಿರಬೇಕು; ನಿಲುವು ವೈಚಾರಿಕವಾಗಿರಬೇಕು, ೨. ಬರವಣಿಗೆ ಕಲಾತ್ಮಕವಾಗಿ ಸಮರ್ಥವಾಗಿರಬೇಕು; ಬೋರು ಹೊಡೆಯಬಾರದು ಅಷ್ಟೇ ... ಇಂಥ ಮಿನಿಮಮ್ ಎನ್ನಬಹುದಾದ ಕೇಳಿಕೆಗಳಿಂದಾಗಿ ಸಂಕ್ರಮಣ ಕೇವಲ ಏರುಹುಬ್ಬಿನವರ, ತಮಗೆ ತಾವೇ ಶ್ರೇಷ್ಠತ್ವವನ್ನು ಆರೋಪಿಸಿಕೊಂಡವರ ಅಮೃತವಾಣಿಯಾಗುವ ಅಪಾಯದಿಂದ ಎಂದಿನಿಂದಲೂ ತಪ್ಪಿಸಿಕೊಳ್ಳುತ್ತಲೇ ಬಂದಿದೆ."[೯] ಈ ಮೂಲಕ ಪತ್ರಿಕೆ ಹೊಸಹೊಸ ಪ್ರತಿಭೆಯನ್ನು ಪರಿಚಯಿಸಿದ್ದನ್ನು ಚಂಪಾ ಹೇಳುತ್ತಾರೆ. ಸಾಹಿತ್ಯ ಕೆಲವರದೇ ಗುತ್ತಿಗೆಯಾಗುವ ಅಪಾಯವನ್ನು ಸಂಕ್ರಮಣದಂಥ ಪತ್ರಿಕೆಗಳು ತಪ್ಪಿಸಿವೆ.

ಒಂದು ಭಾಷೆಯ ಸಾಹಿತ್ಯದಲ್ಲಿ ಹೊಸದೊಂದು ಮಾರ್ಗ ತೆರೆದುಕೊಂಡಾಗ ಅದಕ್ಕೆ ಸುಲಭದಲ್ಲಿ ಸ್ವಾಗತವಂತೂ ದೊರೆಯುವುದಿಲ್ಲ. ತನ್ನ ಅಸ್ತಿತ್ವವನ್ನು ಸಿದ್ಧಿಸಿಕೊಳ್ಳಬೇಕಾದರೆ ಅದು ಹೋರಾಟವನ್ನೇ ಮಾಡಬೇಕಾಗುತ್ತದೆ. ಕನ್ನಡದ ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಈ ಸಾಹಿತ್ಯ ಮಾರ್ಗಗಳು ಸಾಹಿತ್ಯದ ಮೂಲ ಪ್ರವಾಹದಲ್ಲಿ ಸೇರುವಾಗ ಸಾಕಷ್ಟು ಪರಿಶ್ರಮಪಟ್ಟಿವೆ. ಈ ಎಲ್ಲ ಹೊಸ ಮಾರ್ಗಗಳ ಪ್ರವರ್ತಕರೆಲ್ಲ ಸಾಹಿತ್ಯಪತ್ರಿಕೆಗಳ ಮೂಲಕವೇ ತಮ್ಮ ಮಾರ್ಗಗಳ ಸಮರ್ಥನೆ ಮಾಡಿಕೊಂಡಿದ್ದಾರೆ. "ನವ್ಯ ಕಾವ್ಯದ ಆರಂಭದ ಕಾಲದಲ್ಲಿದ್ದ ಆಸ್ಥೆ, ಅಭಿರುಚಿ ಈಗ ಉಳಿದಿಲ್ಲ. ಇಂದಿನ ಕವಿ ತನ್ನ ಜವಾಬ್ದಾರಿಗಳೇನೆಂಬು ದನ್ನು ಅರ್ಥಯಿಸಿಕೊಂಡು ಬರೆಯುವವನಾಗಿದ್ದಾನೆ. ಸಮಕಾಲೀನ ಸಂವೇದನೆ, ಆಡು ಮಾತು, ಮಣ್ಣಿನ ವಾಸನೆ ಇವುಗಳಿಗೆ ಸಾಕಷ್ಟು ಮಹತ್ವ ಬಂದಿತಾದರೂ ಕಾವ್ಯ ಸಾಮಾನ್ಯ ಜನತೆಯನ್ನು ಮುಟ್ಟಲಿಲ್ಲ. ಸಾಮಾಜಿಕ ಸಂವೇದನೆಯನ್ನು ಒಳಗೊಳ್ಳಲಿಲ್ಲ. ಸಂಕೇತ, ಪ್ರತಿಮೆ ಹಾಗೂ ಅಭಿವ್ಯಕ್ತಿ ಕ್ರಮದಲ್ಲಿ ಹೊಸ ಪ್ರಯೋಗ ನಡೆಯಿತು. ಅಭಿವ್ಯಕ್ತಿ ಸೂಕ್ತ ಅನ್ನಿಸುವ ತಂತ್ರವನ್ನು ಯೋಜಿಸಿಕೊಂಡು ಹೊಸ ಕಾವ್ಯ ಜನ್ಮ ತಳೆಯಿತು. ಪ್ರಾರಂಭದಲ್ಲಿ ಇಂಥ ಪ್ರಯೋಗ ಕ್ಲಿಷ್ಟವೆನ್ನಿಸುತ್ತ ನವ್ಯ ಕಾವ್ಯವೆಂದರೆ ಒಂದು ಬಗೆಯ ತಿರಸ್ಕಾರ ಭಾವನೆ ಬೆಳೆಯುತ್ತ ಬಂತು. ಬಹುಶಃ ಇದಕ್ಕೆ ಕಾರಣ ಅಂಥ ಕೃತಿಗಳ ಬಗ್ಗೆ ವಿಮರ್ಶೆ, ವಿಶ್ಲೇಷಣೆ ಹಾಗೂ ಚರ್ಚೆ ನಡೆಯದೇ ಇರುವುದು. ನವ್ಯ ಕಾವ್ಯ ಧೋರಣೆಯನ್ನು ಅರ್ಥ ಮಾಡಿ ಕೊಂಡು ಅದರ ಮೂಲ ತತ್ವಗಳನ್ನು ಪರಿಚಯಿಸಿ ಕಾವ್ಯವನ್ನು ಹೇಗೆ ಪ್ರವೇಶಿಸಬೇಕು,

---

೯. ಸಂಕ್ರಮಣ -ಸಂಪುಟ ೨೫, ಸಂಚಿಕೆ ೧, ಜನವರಿ ೧೯೯೦, ಚಂಪಾಕಾಲಂ

ಬೆಲೆ ಕಟ್ಟಬೇಕು ಎಂಬ ಕುರಿತು ತೀವ್ರ ವಿಮರ್ಶೆ, ಆಲೋಚನೆ ನಡೆಯಲಿಲ್ಲ ”[೧೦] ಎನ್ನುವ ಹಿಂಗಮಿರೆ ಈ ಕೊರತೆಯನ್ನು ಗ್ರಹಿಸಿರುವರು.

ಒಂದು ಕಾವ್ಯ ಸಿದ್ಧಾಂತದ ಮೇಲೆ ಒಬ್ಬರು ಒಂದು ಗ್ರಂಥವನ್ನು ಬರೆಯುವುದು, ಅದನ್ನು ಬೆಂಬಲಿಸಲು ಅಥವಾ ಖಂಡಿಸಲು ಇನ್ನೊಬ್ಬರು ಇನ್ನೊಂದು ಗ್ರಂಥವನ್ನು ಬರೆಯುವುದು ಇವು ದುಬಾರಿಯಾದುದು. ಎಲ್ಲರಿಗೂ ಸಾಧ್ಯವಿಲ್ಲದ್ದು. ಅಲ್ಲದೆ ಎಷ್ಟೋ ವಿಚಾರಗಳು ಪ್ರಕಟಗೊಳ್ಳದೆ ಹಾಗೆಯೇ ಅಡಗಿ ಹೋಗುವ ಸಾಧ್ಯತೆಗಳು ಇರುತ್ತವೆ. ಇಂಥ ಸಂದರ್ಭದಲ್ಲಿ ಸಾಹಿತ್ಯಪತ್ರಿಕೆಗಳು ಆರೋಗ್ಯಕರ ವಾಗ್ವಾದಕ್ಕೆ ಒಂದು ವೇದಿಕೆ ಯಾಗುವುದನ್ನು ಕನ್ನಡದ ಸಂದರ್ಭದಲ್ಲಿ ಗಮನಿಸಿದ್ದೇವೆ.

ಸಾಹಿತ್ಯದ ಯಾವುದೋ ಒಂದು ಪ್ರಕಾರದ, ಸಿದ್ಧಾಂತದ ವಕ್ತಾರನಾಗಿ ಸಾಹಿತ್ಯ ಪತ್ರಿಕೆಗಳು ಕೆಲಸಮಾಡಿಬಿಟ್ಟರೆ ಅವುಗಳ ಅಗತ್ಯ ಮುಗಿದುಬಿಡುತ್ತವೆಯೇ? ಸಾಹಿತ್ಯಪತ್ರಿಕೆ ತನ್ನ ಸಮಕಾಲೀನ ಲೇಖಕರ ಮೇಲೆ ಪ್ರಭಾವ ಬೀರುವುದಿಲ್ಲವೆ? ಹೀಗೆಯೇ ಬರೆಯ ಬೇಕು ಎಂದು ಒತ್ತಡ ತರುವುದಿಲ್ಲವೆ? ಖಂಡಿತವಾಗಿ ಒತ್ತಡ ತರುತ್ತವೆ. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಖ್ಯಾತ ಕಾದಂಬರಿಕಾರರೊಬ್ಬರು ನನಗೆ ತುರ್ತು ಪರಿಸ್ಥಿತಿಯ ತುರ್ತು ತಟ್ಟಿಯೇ ಇಲ್ಲವಲ್ಲ! ಎಂದು ಹೇಳಿದ್ದನ್ನು ಹಾಗೂ ಇಥಿಯೋಪಿಯದಲ್ಲಿ ಅನೇಕ ವರ್ಷ ಇದ್ದು ಬಂದ ಖ್ಯಾತ ಕವಿಯೊಬ್ಬರಿಗೆ, ಅಲ್ಲಿಯ ಭೀಕರ ಬರದ ಬಗ್ಗೆ ನಿಮ್ಮ ಕಾವ್ಯದಲ್ಲಿ ಒಂದು ಸಾಲೂ ಇಲ್ಲವಲ್ಲ! ಎಂದು ಯಾರೋ ಕೇಳಿದಾಗ ಅವರು ಒಂದು ನವ್ಯ ನಗೆ ನಕ್ಕು ಸುಮ್ಮನಾದುದನ್ನು ಚಂಪಾ ಸಂಕ್ರಮಣದಲ್ಲಿ ಖಂಡಿಸಿದ್ದಾರೆ.[೧೧] ಹೀಗೆ ಸಾಹಿತಿಗಳ ಒಲವು ನಿಲುವುಗಳ ಬಗೆಗೆ ಸಾಹಿತ್ಯಪತ್ರಿಕೆಯ ಸಂಪಾದಕರು ಎಚ್ಚರಿಕೆಯನ್ನು ಕೊಡುವ ಮೂಲಕ ಅವರನ್ನು ತಿದ್ದಲು ಯತ್ನಿಸಿದ್ದನ್ನು ಇಲ್ಲಿ ಕಾಣಬಹುದು.

ಸಾಹಿತ್ಯಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಅಭಿಪ್ರಾಯಗಳು ಪರಿಣಾಮಮುಖಿ ಆಗಬೇಕಾದುದು ಓದುಗ ವರ್ಗದ ಮೂಲಕವೇ. ಈ ಓದುಗ ವರ್ಗವೇ ಸಾಹಿತ್ಯಪತ್ರಿಕೆಗೆ ಒಂದು ದೊಡ್ಡ ಸವಾಲು ಎಂದು 'ಸಾಹಿತ್ಯ ಸಂವಾದ'ದ ಸಂಪಾದಕ ರಾಘವೇಂದ್ರ ಪಾಟೀಲರು ಹೇಳುತ್ತಾರೆ.[೧೨] ಓದುಗ ಲೋಕದ ಮನಸ್ಸು ಮುಕ್ತವಾದುದ್ದಲ್ಲ. ಸಂವಾದಕ್ಕೆ ತೆರೆದುಕೊಳ್ಳುವಂಥದ್ದಲ್ಲ. ಒಳಗೆ ಮುಚ್ಚಿಕೊಳ್ಳುವ ಪರಿಯ ಇಂಥ ಮನಸ್ಸುಗಳಿಂದ ಯಾವ ಮಹತ್ವದ ಸಾಂಸ್ಕೃತಿಕವಾದ ಅಥವಾ ತಾತ್ವಿಕವಾದ ಚರ್ಚೆಗಳು ಏರ್ಪಡುವುದು ಸಾಧ್ಯವಿಲ್ಲ. ಪತ್ರಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸುವುದು ಎಂದರೆ ಒಂದು ನಿರ್ದಿಷ್ಟವಾದ ಅಂಶದ ಬಗೆಗೆ ಚರ್ಚೆಯನ್ನು ವಾಗ್ವಾದವನ್ನು ಅನಾವರಣಗೊಳಿಸುವ ಉದ್ದೇಶದ

---

೧೦. ಬುದ್ದಣ್ಣ ಹಿಂಗಮಿರೆ; ಹೊಸಕಾವ್ಯ ಹೊಸದಿಕ್ಕು

೧೧. ಸಂಕ್ರಮಣ, ಸಂಪುಟ ಸಂಚಿಕೆ

೧೨. ನಿರಂತರ ಸವಾಲುಗಳು ನಿರಂತರ ಸಂವಾದ- ಒಂದಿಷ್ಟು ಟಿಪ್ಪಣಿಗಳು, ರಾಘವೇಂದ್ರ ಪಾಟೀಲ, ಸಾಹಿತ್ಯ ಸಂವಾದ, ಸಂಪುಟ ೭, ಸಂಚಿಕೆ ೩೮, ಮಾರ್ಚ್-ಎಪ್ರಿಲ್ ೧೯೯೪

ಘೋಷಣೆ ಇದ್ದಂತೆ. ಆದರೆ ಸಣ್ಣ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಎಲ್ಲ ಲೇಖನಗಳೂ ಇಂಥ ವೇದಿಕೆಗೆ ಆಹ್ವಾನ ನೀಡುವ ಅರ್ಹತೆಯವು ಇರುವುದಿಲ್ಲ. ಆದರೆ ಕೆಲವಾದರೂ ಮಹತ್ವದ ಲೇಖನಗಳು ಚರ್ಚೆ- ಮಂಥನಗಳ ಮೂಲಕ ಬೆಳೆಯದೇ ಹಾಗೇ ಉಳಿದು ಬಿಡುವುದಕ್ಕೆ ಈ ಓದುಗ ಲೋಕದ ನಿರ್ಲಿಪ್ತತೆಯೇ ಕಾರಣ. ಇದು ಸಾಹಿತ್ಯಪತ್ರಿಕೆಗಳ ದೊಡ್ಡ ಸವಾಲೂ ಹೌದು. ಈ ನಿರ್ಲಿಪ್ತ ಮನಸ್ಸನ್ನು ತೊಡೆದು ಹಾಕುವುದು ಹೇಗೆ? ಸಾಹಿತ್ಯಪತ್ರಿಕೆಗಳು ಪ್ರಚೋದನಕಾರಿ ಭಾಷೆಯನ್ನು ಬಳಸುವುದರಿಂದ ಇದು ಸಾಧ್ಯವಾಗುತ್ತದೆ. ಸಾಹಿತ್ಯ ಪತ್ರಿಕೆಗಳು ಕೆಲವು ಲೇಖನಗಳನ್ನು ವಾಗ್ವಾದ, ಚರ್ಚೆ, ಚಿಂತನ, ಪ್ರತಿಕ್ರಿಯೆ ಇತ್ಯಾದಿ ಶೀರ್ಷಿಕೆಯಲ್ಲಿ ಪ್ರಕಟಿಸಿ ಅವುಗಳ ಬಗೆಗೆ ಚರ್ಚೆಯನ್ನು ಮುಂದುವರಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತವೆ. ಹಿಂದೆ ವಾಗ್ಭೂಷಣದಲ್ಲಿ ಪ್ರಾಸ ಸಂಬಂಧಿ ಚರ್ಚೆ ನಡೆದಾಗ ಸಂಪಾದಕರು ಈ ಸಂಬಂಧ ಚರ್ಚೆಯಾಗುವುದು ಅಗತ್ಯವಿರುವುದರಿಂದ ಲೇಖನಗಳನ್ನು ಕಳುಹಿಸಲು ಕೋರಿತ್ತು. 'ಸಂಕ್ರಮಣ'ದಲ್ಲಿ ವಾಗ್ವಾದಕ್ಕೆ ಚಾಲನೆ ನೀಡುವಂಥ ಭಾಷೆ ಇರುವುದನ್ನು ಗುರುತಿಸಬಹುದು.

ಸಾಹಿತ್ಯ-ಸಾಂಸ್ಕೃತಿಕ ಸಣ್ಣ ಪತ್ರಿಕೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡುವ ಪ್ರಜ್ಞೆಯ ಬಗೆಗೆ ಸಾಹಿತ್ಯಸಂವಾದದ ರಾಘವೇಂದ್ರ ಪಾಟೀಲರು ಬರೆದಿದ್ದಾರೆ.[೧೩] ಇಂಥ ಪತ್ರಿಕೆಗಳ ಹಿಂದೆ ಕೆಲಸ ಮಾಡುವ ಮನಸನ್ನು ಅವರು ಡಾನ್ ಕ್ವಿಕ್ಸೋಟ್‌ನ ರೂಪಕದ ಮೂಲಕ ಗುರುತಿಸಲು ಯತ್ನಿಸಿದ್ದಾರೆ. ಈ ಡಾನ್ ಕ್ವಿಕ್ಸೋಟ್, ರಟ್ಟಿನ ಚಿಲಕತ್ತುಗಳನ್ನು ಧರಿಸಿ ಸಾಂಕೋಪಾಜಾನನ್ನು ಬೆಂಗಾವಲಿಗಿಟ್ಟುಕೊಂಡು ಹೊರಟು ಸುತ್ತಲಿನ ಜಗತ್ತಿನಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಉದ್ಯುಕ್ತನಾದವನು! ಇಂಥ ಮುಗ್ಧ ಪ್ರಜ್ಞೆಯಿಂದಲೇ ತನ್ನ ವರ್ಗ ಜಾತಿ ಮುಂತಾದ ಸಂಬಂಧಗಳನ್ನು ಮೀರಿ ಅವುಗಳಲ್ಲಿ ಬೆರೆತುಕೊಂಡಿರುವ ಕೊಳಕುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಕೊಳಕುಗಳಿಲ್ಲದ ಚಂದದ ಸಂದರ್ಭವನ್ನು ಕನಸಿನ ಮಾರ್ಗವಾಗಿ ಕಂಡುಕೊಳ್ಳುತ್ತ ಆ ದಿಕ್ಕಿನತ್ತಲಿನ ಪ್ರಯಾಣಕ್ಕೆ ಸಜ್ಜುಗೊಳ್ಳುವುದು ಸಾಧ್ಯವಾಗುತ್ತದೆ. ಸಂಬಂಧಗಳ ನೆಲೆಯಲ್ಲಿ ವೈಚಾರಿಕ ಮಾದರಿಗಳ ಪೆಡಸುತನದ ಗ್ರಹಿಕೆ ಸಾಧ್ಯವಾಗುತ್ತ ನಿರ್ಜೀವಕ್ಕೆ ಜೋತು ಬಿದ್ದ ಕಣ್ಣುಕಪ್ಪಡಿಗೆ ಬಿಡುಗಡೆ ದೊರೆತು, ಜೀವಂತಿಕೆಗೆ ಪ್ರವೇಶ ದೊರೆಯಲು ಸಾಧ್ಯವಾಗುತ್ತದೆ ಎನ್ನುತ್ತಾರೆ. ಹುಂಬತನದಿಂದ ಬೇರೆಯಲ್ಲ ಈ ಮುಗ್ಧತೆ ಮತ್ತು ಆ ಮೂಲಕವೇ ಮಹತ್ವಾಕಾಂಕ್ಷೆಯ ನೆಗೆತಗಳು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಅವರು ಬರುತ್ತಾರೆ.

ಇಂಥ ಪತ್ರಿಕೆಗಳ ಹಿಂದಿರಬೇಕಾದ ಅತ್ಯುತ್ಕೃಷ್ಟ ಕನಸು ಎಂದರೆ ಬಸವಣ್ಣ ಕಟ್ಟಿದ ಅನುಭವ ಮಂಟಪದ ಕನಸು ಎಂದು ಹೇಳುತ್ತ ಇವುಗಳನ್ನು ನಡೆಸುವವರ ಎದುರಿಗಿರುವ ಸವಾಲುಗಳತ್ತ ಗಮನ ಸೆಳೆಯುವರು. ಅವರೇ ಗುರುತಿಸುವ ದೊಡ್ಡ ಸವಾಲೆಂದರೆ ಮನಸ್ಸಿನ

---

೧೩. ಸಾಹಿತ್ಯ ಸಂವಾದ, ಸಂಪುಟ ೭, ಸಂಚಿಕೆ ೩೮, ಮಾರ್ಚ್-ಎಪ್ರಿಲ್ ೧೯೯೪

ಮುಗ್ಧತೆ ಕಳೆದು ಹೋಗುವುದು. "ಮುಗ್ಧತೆಯನ್ನು ಸ್ಥಾನಪಲ್ಲಟಗೊಳಿಸಿ ಅದರ ಸ್ಥಾನದಲ್ಲಿ ಬಂದು ಕುಳಿತುಕೊಳ್ಳುವ ವೈಯಕ್ತಿಕ ಆಸೆ ಆಕಾಂಕ್ಷೆಗಳು, ಪರಸ್ಪರ ದ್ವೇಷಗಳು, ಪ್ರೀತಿ ವ್ಯಾಮೋಹಗಳು- ಈ ಸಾಹಿತ್ಯಿಕ, ಸಾಂಸ್ಕೃತಿಕ ಪತ್ರಿಕೆಗಳನ್ನು ನಡೆಸತೊಡಗಿದಾಗ ಈ ಪತ್ರಿಕೆಗಳು ಸಾಂಸ್ಕೃತಿಕ ರೋಗಗಳನ್ನು ಹರಡತೊಡಗುತ್ತವೆ. ಹೀಗೆ ಬಿತ್ತಲಾಗುವ ಸಾಂಸ್ಕೃತಿಕ ರೋಗಗಳು - Cultural Plague - ತೀವ್ರವಾದ ಸಾಂಕ್ರಾಮಿಕವಾದವುಗಳು. ಅವು ಪರಿಣಾಮಗಳಾಗಿರುವಂತೆ ಪರಿಣಾಮವನ್ನುಂಟು ಮಾಡುವಂತಹ ಪರಿಣಾಮಕಾರಿಯಾದವುಗಳೂ ಆಗುತ್ತವೆ. ಅಂದರೆ ಅವು ಇತರ ಇಂಥ ಸಣ್ಣ ಪತ್ರಿಕೆಗಳ ಹಿನ್ನೆಲೆಯಲ್ಲಿರುವ ಮುಗ್ಧತೆ- ಆದರ್ಶಗಳನ್ನೂ ನಾಶಮಾಡಿಬಿಡಬಲ್ಲವು."[೧೪] ಇಂಥ ಒಂದು ಪತ್ರಿಕೆ ಎಚ್ಚರ ತಪ್ಪಿದರೆ ಅದು ಇನ್ನೊಂದರ ಮೇಲೆಯೂ ಪರಿಣಾಮ ಬೀರುವ ಅಪಾಯದ ಕಡೆ ರಾಘವೇಂದ್ರ ಪಾಟೀಲರು ಇಲ್ಲಿ ಗಮನ ಸೆಳೆದಿದ್ದಾರೆ.

ಸಂಶೋಧನೆಗೆ ನೆರವು: ಇಂಥ ಎಚ್ಚರವನ್ನು ಉಳಿಸಿಕೊಂಡು ಹೊರಬರುವ ಸಾಹಿತ್ಯಪತ್ರಿಕೆಯ ಹಲವು ಉಪಯುಕ್ತತೆಗಳನ್ನು ಈಗಾಗಲೆ ಗಮನಿಸಲಾಯಿತು. ಸಾಹಿತ್ಯಪತ್ರಿಕೆಗಳು ಸಾಹಿತ್ಯ ಸಂಶೋಧನೆಗೂ ನೆರವಾಗುತ್ತವೆ. ಅಂಥ ಒಂದು ಉದಾಹರಣೆ ೧೯೦೨ರ ನವೆಂಬರ ತಿಂಗಳ 'ಸುವಾಸಿನೀ' ಪತ್ರಿಕೆಯಲ್ಲಿ (ಪುಟ-೧೧೬-೧೧೭) ದೊರೆಯುತ್ತದೆ. ಪತ್ರಿಕೆಯಲ್ಲಿ ಒಂದು ಜೋಗುಳದ ಹಾಡನ್ನು ಪ್ರಕಟಿಸುವುದಕ್ಕೆಂದು ಒಬ್ಬ 'ಬಾತ್ಮಿದಾರ'ರು ಕಳುಹಿಸಿ ಕೊಡುತ್ತಾರೆ. ಅದನ್ನು ಪ್ರಕಟಿಸುವಂತೆ ಕೋರುವ ಅವರು, 'ಸುವಾಸಿನೀ' ಸಂಪಾದಕರಿಗೆ, "ಅಯ್ಯಾ ಪತ್ರಕರ್ತರೆ! ಈ ಜೋಗುಳದ ಹಾಡನ್ನು ೧೦ ವರ್ಷಗಳ ಹಿಂದೆ ನಾನು ಎಲ್ಲಿಯೋ ಸಂಪಾದಿಸಿಕೊಂಡೆನು... .. ಇಂತಹ ಜೋಗುಳ ಹಾಡು ಕನ್ನಡದಲ್ಲಿ ಬಹಳ ನೂತನವಾಗಿರುವುದರಿಂದಲೂ, ಬಿಟ್ಟುಹೋದ ಪಾಠಾಂತರಗಳನ್ನು ಸುವಾಸಿನೀ ಪಾಠಕರಲ್ಲಿ ಯಾರಾದರೂ ಕಳುಹಿಸುವರೆಂಬ ಆಸೆಯಿಂದಲೂ ಇದನ್ನು ನಿಮ್ಮ ಬಳಿಗೆ ಕಳುಹಿಸಿರುತ್ತೇನೆ.. .. ಇದನ್ನು ಕುರಿತು ಏನೊಂದು ಪತ್ರವ್ಯವಹಾರ ನಡೆದರೆ ಅದನ್ನು ನನಗೆ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ."

ಆ ಪತ್ರಿಕೆಯ ಸಂಪಾದಕರು ಈ 'ಬಾತ್ಮಿದಾರ'ರು ಕಳುಹಿಸಿದ ಜೋಗುಳದ ಪದವನ್ನು ಪ್ರಕಟಿಸಿ ಜೊತೆಯಲ್ಲಿ ಈ ಪತ್ರವನ್ನೂ ಮುದ್ರಿಸಿರುವರು. ಈ 'ಬಾತ್ಮಿದಾರ' ಬಹುಶಃ ಮುದ್ದಣ ಇರಬಹುದು. ಸಾಮಾನ್ಯವಾಗಿ ಮುದ್ದಣ ಕವಿ ಉಪಯೋಗಿಸುತ್ತಿದ್ದ ಉಪಾಯ ಇದು ಎಂದು ಎಸ್.ಅನಂತನಾರಾಯಣ ಹೇಳುತ್ತಾರೆ.[೧೫]

ವಿಶೇಷಾಂಕಗಳು: ಸಾಹಿತ್ಯಪತ್ರಿಕೆಯೊಂದೇ ಅಲ್ಲ, ಇತರ ಪತ್ರಿಕೆಗಳೂ ಕೆಲವು ವಿಶೇಷ ಸಂದರ್ಭಗಳಲ್ಲಿ ವಿಶೇಷಾಂಕಗಳನ್ನು ಪ್ರಕಟಿಸಿವೆ. ಇವು ಅತ್ಯುತ್ತಮ ಸಾಹಿತ್ಯಕ ಮೌಲ್ಯವನ್ನು ಹೊಂದಿವೆ. ವಿವಿಧ ದಿನ ಪತ್ರಿಕೆಗಳು, ವಾರಪತ್ರಿಕೆಗಳು ದೀಪಾವಳಿ,

---

೧೪. ಸಾಹಿತ್ಯ ಸಂವಾದ- ಸಂಪುಟ ೭, ಸಂಚಿಕೆ ೩೮

೧೫. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ ಕಾವ್ಯದ ಪ್ರಭಾವ- ಪುಟ ೧೨೫-೧೨೬

ಸಂಕ್ರಾಂತಿ, ಯುಗಾದಿ ವಿಶೇಷಾಂಕಗಳನ್ನು ಪ್ರಕಟಿಸುತ್ತಿವೆ. ಇವುಗಳಲ್ಲೆಲ್ಲ ಒಂದೆರಡು ಲೇಖನಗಳು ಗಂಭೀರ ಸಾಹಿತ್ಯ ಚರ್ಚೆ ಇದೆ. ಆಯಾ ಕಾಲದ ಶ್ರೇಷ್ಠ ಕಥೆಗಾರರು, ಕವಿಗಳ ಕಥೆ, ಕವನಗಳು ಇದರಲ್ಲಿ ಇದ್ದುದನ್ನು ಕಾಣಬಹುದು. ಇಂಥ ವಿಶೇಷಾಂಕಗಳನ್ನು ಗಂಭೀರವಾಗಿ ತೆಗೆದುಕೊಂಡು ಸಾಹಿತ್ಯಪತ್ರಿಕೆಗಳಲ್ಲಿ ವಿಮರ್ಶಿಸಲಾಗಿದೆ. ಕುಮಟಾದಿಂದ ಹೊರಡುತ್ತಿದ್ದ 'ಕರ್ನಾಟಕ ಧುರೀಣ' ಪತ್ರಿಕೆಯು ದೀಪಾವಳಿ ವಿಶೇಷಾಂಕವನ್ನು ಹೊರ ಡಿಸಿದ್ದನ್ನು 'ವಾಗ್ಭೂಷಣ'[೧೬]ದಲ್ಲಿ ವಿಮರ್ಶಿಸಲಾಗಿದೆ.

"ಕಾವ್ಯ-ಇತಿಹಾಸ -ಕಥೆ - ವ್ಯವಹಾರ- ಜೀವನ ಚರಿತ್ರೆ- ಕಾವ್ಯ ಪರಿಚಯ- ವಿದ್ಯಾಸುಧಾರಣೆ- ಪಾರಮಾರ್ಥಿಕ ವಿಚಾರಗಳು ಮುಂತಾದ ಬಹು ವಿಚಾರಗಳನ್ನು ಬಹುಶ್ರುತರಾದ ವಿದ್ವಾಂಸರಿಂದ ಬರೆಯಿಸಿ ಒಂದೆಡೆಯಲ್ಲಿ ಕಲೆ ಹಾಕಿ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ ಪ್ರಶಂಸನೀಯವಾದ ಶ್ರೇಯಸ್ಸು ಸಂಪಾದಕರಿಗೆ ಸೇರಿದುದಾಗಿದೆ" ಎಂಬ ಮಾತು ಕೇವಲ 'ಕರ್ನಾಟಕ ಧುರೀಣ'ವಷ್ಟೇ ಅಲ್ಲ ಇಂಥ ವಿಶೇಷಾಂಕಗಳ ಸಾಮಾನ್ಯ ಲಕ್ಷಣವನ್ನು ಹೇಳಿದಂತಾಗಿದೆ. 'ಬಹುಶ್ರುತರಾದ ವಿದ್ವಾಂಸರಿಂದ ಬರೆಯಿಸಿ' ಎಂಬ ಮಾತು ವಿಶೇಷವಾದದ್ದು. ಇಂಥ ವಿಶೇಷಾಂಕಗಳಿಗೆ ಪ್ರಸಿದ್ಧ ಲೇಖಕರಿಗೆ ಪತ್ರ ಬರೆದು ಲೇಖನಗಳನ್ನು ಆಹ್ವಾನಿಸಿ ಪ್ರಕಟಿಸುವುದು ಹಿಂದಿನಿಂದಲೂ ಇದ್ದ ಪದ್ಧತಿಯನ್ನು ಇದು ತೋರಿಸುತ್ತದೆ. ಪತ್ರಿಕೆಗಳು ಇಂಥ ವಿಶೇಷಾಂಕಗಳನ್ನು ಏಕೆ ಹೊರಡಿಸುತ್ತವೆ ಎಂಬ ಬಗ್ಗೆ 'ವಾಗ್ಭೂಷಣ'ದಲ್ಲಿ ಬಂದಿರುವ ಈ ಮಾತುಗಳು ಮನನೀಯವಾಗಿವೆ. "ವೃತ್ತ ಪತ್ರಿಕೆಗಳು ತಾತ್ಕಾಲಿಕಗಳು; ತಾತ್ಕಾಲಿಕ ವಿಷಯಗಳನ್ನು ಚರ್ಚಿಸಿ ಜನಜಾಗೃತಿಯನ್ನುಂಟುಮಾಡುವುದೇ ಅವುಗಳ ಧ್ಯೇಯವಾಗಿರುವುದರಿಂದ ಕಾವ್ಯೇತಿಹಾಸಾದಿ ನಿತ್ಯ ಸಾಹಿತ್ಯ ಪ್ರಕಟಣೆಗೆ ಅದರಲ್ಲಿ ಅವಕಾಶವಿರುವುದಿಲ್ಲ. ಈ ಕೊರತೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಸಂಪಾದಕರು ದೀವಳಿಗೆಯ ಹಬ್ಬದಂತಹ ವಿಶ್ರಾಂತಿಯ ಆನಂದದ ವೇಳೆಯನ್ನು ಕನ್ನಡಿಗರು ಇನ್ನಷ್ಟು ಆನಂದದಲ್ಲಿ ಕಳೆಯಲೆಂದು ಬಯಸಿ, ಈ ಸಂಚಿಕೆಯನ್ನು ಕನ್ನಡಿಗರಿಗೆ ಹಂಚಿದರು. ಹಬ್ಬದ ಹೋಳಿಗೆ, ಮಂಡಿಗೆಗಳಂತಹ ವಿಧವಿಧದ ಭಕ್ಷ್ಯಗಳ ಸೇವನೆಯಿಂದ ತೃಪ್ತರಾಗಿರುವಾಗ ಮನಸ್ಸಿನ ಭಕ್ಷ್ಯಗಳಾದ ಮನಸ್ಸಿಗೆ ಆನಂದದಾಯಕಗಳಾದ ಹಿತಕರವಾದ ಉತ್ತೇಜನಕರವಾದ ಲೇಖನಗಳನ್ನು ಜನತೆಗೆ ಒದಗಿಸಿಕೊಟ್ಟು ಆ ಜನತೆಯ ಸಂಸ್ಕಾರದ ಹೊಸ ಮಾರ್ಗವನ್ನು ಹೂಡಿ ಆ ಮಾರ್ಗದಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಿರುವುದು ತುಂಬಾ ಪ್ರಶಂಸನೀಯವಾಗಿದೆ. ಅನುಕರಣೀಯವಾಗಿದೆ. ಪ್ರೋತ್ಸಾಹಯೋಗ್ಯವಾಗಿದೆ. ಕರ್ನಾಟಕವು ಅವರಿಗೆ ಕೃತಜ್ಞವಾಗಬೇಕಾಗಿದೆ.." ವಿಶೇಷಾಂಕಗಳ ಅಗತ್ಯ ಮತ್ತು ಮಹತ್ವವನ್ನು ಈ ಮಾತುಗಳಲ್ಲಿ ಖಚಿತವಾಗಿ ಹೇಳಲಾಗಿದೆ.

ಇಂಥ ವಿಶೇಷ ಸಂಚಿಕೆಗಳಿಗಾಗಿಯೇ ಕಥಾ ಸ್ಪರ್ಧೆ, ಕಾದಂಬರಿ ಸ್ಪರ್ಧೆ, ಕಾವ್ಯ ಸ್ಪರ್ಧೆಗಳು ನಡೆದು ಹೊಸ ಹೊಸ ಬರೆಹಗಾರರು ದಿನ ಬೆಳಗಾಗುವುದರಲ್ಲಿ ಪ್ರಸಿದ್ಧರಾಗಿದ್ದನ್ನು

೧೬. ವಾಗ್ಭೂಷಣ; ಸಂಪುಟ ೩೩, ಸಂಚಿಕೆ ೪, ಡಿಸೆಂ. ೧೯೨೯

ಕಾಣುತ್ತೇವೆ. ೧೯೬೫ರಲ್ಲಿ ಪ್ರಜಾವಾಣಿ ಕಥಾ ಸ್ಪರ್ಧೆಯಲ್ಲಿ ತಮ್ಮ 'ಸುಗ್ಗಿ' ಕಥೆಗೆ ಪ್ರಥಮ ಬಹುಮಾನ ಪಡೆದ ಬೆಸಗರಹಳ್ಳಿ ರಾಮಣ್ಣ ತಮಗಾದ ಆನಂದನ್ನು ವರ್ಣಿಸಿದ್ದು ಹೀಗೆ,- 'ಅಂದು ಬಹು ಕಣ್ಣುಗಳು ನನ್ನನ್ನು ಆಶ್ಚರ್ಯದಿಂದ ನೋಡುತ್ತಿದ್ದವು. ನಾನು ಧಿಮಾಕಿನಿಂದ ಸಿಗರೇಟು ಎಳೆಯುತ್ತ ಸುತ್ತಮುತ್ತ ಜಯಭೇರಿಯ ಗತ್ತಿನಲ್ಲಿ ಕತ್ತು ಕೊಂಕಿಸುತ್ತಾ, ಕಣ್ಣರಳಿಸುತ್ತಾ ಮೆರೆದೆ. ಹೀಗೆ ಅಂಬೆಗಾಲಿಡುತ್ತ ಅಡ್ಡಾಡುತ್ತಿದ್ದ ನಾನು ಧಿಗ್ಗನೆ ಎದ್ದುನಿಂತೆ.' ಇದು ಕೇವಲ ರಾಮಣ್ಣನವರ ಅನುಭವ ಮಾತ್ರವಲ್ಲ. ಇಂಥ ಸ್ಪರ್ಧೆಗಳಲ್ಲಿ ಗೆದ್ದ ಬಹುಶಃ ಎಲ್ಲರ ಅನುಭವವೂ ಹೌದು.

ಪ್ರಜಾವಾಣಿ ಕಥಾ ಸ್ಪರ್ಧೆ (೧೯೯೯)ಯ ತೀರ್ಪುಗಾರರಾಗಿದ್ದ ಎಚ್.ಎಸ್. ರಾಘವೇಂದ್ರರಾವ್, ಓ.ಎಲ್.ನಾಗಭೂಷಣಸ್ವಾಮಿ ಆಡಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಬೇಕು, "ಸುಮಾರು ನಾಲ್ಕು ದಶಕಗಳಿಂದ ಕನ್ನಡ ಸೃಜನಶೀಲತೆಯನ್ನು ರೂಪಿಸುತ್ತಿರುವ ಹಾಗೂ ನಿರ್ದೇಶಿಸುತ್ತಿರುವ ಶಕ್ತಿಗಳಲ್ಲಿ ಪತ್ರಿಕೋದ್ಯಮ ಕೂಡ ಒಂದು. ಅದರ ಆಕರ್ಷಣೆ, ಅದು ಒಡ್ಡುವ ಸವಾಲುಗಳ ಅನುಸಂಧಾನದಲ್ಲಿ ಹಲವು ಕಥೆಗಾರರು ರೂಪುಗೊಂಡಿದ್ದಾರೆ. ತನ್ನ ಚಿನ್ನದ ಹಬ್ಬದ ಸಡಗರದಲ್ಲಿರುವ 'ಪ್ರಜಾವಾಣಿ'ಯು ಸಾಪ್ತಾಹಿಕ ಪುರವಣಿಯಲ್ಲಿ ಮತ್ತು ದೀಪಾವಳಿ ಸಂಚಿಕೆಗಳಲ್ಲಿ ಅಂದಂದಿನ ಸಾಹಿತ್ಯಿಕ ಚಳವಳಿಗಳ ಬಗ್ಗೆ ತಳೆದಿರುವ ನಿಲುವುಗಳು ಹಾಗೂ ನೀಡಿರುವ ಅವಕಾಶಗಳು ಕುತೂಹಲಕಾರಿಯಾಗಿವೆ. 'ಜನಪ್ರಿಯ ಸಾಹಿತ್ಯ'ದ ರೋಚಕತೆಗೆ ತಮ್ಮನ್ನು ತೆತ್ತುಕೊಳ್ಳದಿರುವ ಪ್ರಯತ್ನವನ್ನು ನಿಯತಕಾಲಿಕಗಳ ವಿಶೇಷ ಸಂಚಿಕೆಗಳಂತೂ ಮಾಡುತ್ತಲೇ ಬಂದಿವೆ. ಇಂಥ ಸಂಚಿಕೆಗಳಲ್ಲಿ ಬರವಣಿಗೆಯ ವಿವಿಧ ಸಾಧ್ಯತೆಗಳನ್ನು ಏಕ ಕಾಲದಲ್ಲಿ ಮಂಡಿಸುವುದರಿಂದ ಆಗುವ ಪರಿಣಾಮಗಳು ಅಧ್ಯಯನಯೋಗ್ಯವಾಗಿವೆ. ದೀಪಾವಳಿ ಕಥಾ ಸ್ಪರ್ಧೆಯೂ ಪ್ರತಿಭೆಯನ್ನು ಗುರುತಿಸುವ, ಕಾಪಾಡಿಕೊಳ್ಳುವ ಕೆಲಸದಲ್ಲಿ ತನ್ನದೇ ಕಾಣಿಕೆ ಸಲ್ಲಿಸಿದೆ." ಇಲ್ಲಿ 'ವಾಗ್ಭೂಷಣ'ದಲ್ಲಿ ಬಂದಿರುವ ಅಭಿಪ್ರಾಯವೇ ಬೇರೆ ಮಾತುಗಳಲ್ಲಿ ವ್ಯಕ್ತವಾಗಿದೆ ಅಷ್ಟೇ.

ಸಾಹಿತ್ಯಸ್ಪರ್ಧೆಗಳನ್ನು ನಡೆಸುವ ಪತ್ರಿಕೆಗಳ ಪರಿಪಾಠ ಬಹಳ ಹಳೆಯದು. ೧೯೦೨ನೆಯ ಇಸವಿಯಲ್ಲಿ ಮಂಗಳೂರಿನ 'ಸುವಾಸಿನೀ' ಪತ್ರಿಕೆಯ ಸಂಪಾದಕರು 'ಶ್ರೀಕೃಷ್ಣರಾಜಶ್ರೇಯಃ ಪ್ರಾರ್ಥನೆ' ಎಂಬ ವಸ್ತುವಿನ ಮೇಲೆ ಕವಿತಾ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಇದರಲ್ಲಿಯ ವಿಶೇಷತೆ ಎಂದರೆ ವಿಷಯವನ್ನು ಕೊಟ್ಟು ಸ್ಪರ್ಧೆಯನ್ನು ನಡೆಸಿದ್ದು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖವಾಣಿಯಾದ 'ವಾಗ್ಭೂಷಣ'ವು ಈ ರೀತಿ ಬಹುಮಾನ ಘೋಷಿಸಿ ಸ್ಪರ್ಧೆನಡೆಸಿದ ಮೊದಲ ಪತ್ರಿಕೆ. ಕನ್ನಡದಲ್ಲಿ ಕಾದಂಬರಿಗಳು ಅಪರೂಪವಾಗಿವೆ. ಅದು ಇನ್ನಷ್ಟು ಹೆಚ್ಚಬೇಕು ಎಂಬ ಉದ್ದೇಶದಿಂದ ಕಾದಂಬರಿ ಸ್ಪರ್ಧೆಯನ್ನು ಏರ್ಪಡಿಸಿತ್ತು. ಇನಾಮಿನ ಆಸೆಯಿಂದಲೇ ಗಳಗನಾಥರು ತಮ್ಮ ಮೊದಲ ಸ್ವತಂತ್ರ ಕಾದಂಬರಿ 'ಪ್ರಬುದ್ಧ ಪದ್ಮ ನಯನೆ' ಬರೆದದ್ದು. ಇದನ್ನು ಪುಸ್ತಕದ ಪ್ರಸ್ತಾವನೆಯಲ್ಲಿ ಸ್ವತಃ ಗಳಗನಾಥರೇ ಹೇಳಿಕೊಂಡಿದ್ದಾರೆ. 'ಜಯಂತಿ'

ಮಾಸಿಕ ಉತ್ತಮ ಕಥೆ ಯಾವುದು ಎಂಬ ಬಗ್ಗೆ ವಿಮರ್ಶೆಯ ಸ್ಪರ್ಧೆಯನ್ನು ನಡೆಸುತ್ತಿತ್ತು. ಮಯೂರ ಮಾಸ ಪತ್ರಿಕೆಯೂ ಉತ್ತಮ ಕಥಾ ವಿಮರ್ಶೆಗೆ ಬಹುಮಾನ ನೀಡುತ್ತಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇವು ಉತ್ತಮ ವಿಮರ್ಶೆ ರೂಪುಗೊಳ್ಳುವಲ್ಲಿ ತಮ್ಮ ಕಾಣಿಕೆಯನ್ನು ಸಲ್ಲಿಸಿವೆ. ಕರ್ಮವೀರ, ಪ್ರಜಾವಾಣಿ, ಕನ್ನಡಪ್ರಭ, ಸುಧಾ ಮೊದಲಾದವೂ ಕಥಾ ಸ್ಪರ್ಧೆ, ಕಾದಂಬರಿ ಸ್ಪರ್ಧೆ ನಡೆಸಿವೆ, ನಡೆಸುತ್ತಿವೆ. ಈ ಬಹುಮಾನದ ಮೊತ್ತ 'ಕನ್ನಡಪ್ರಭ'ದಲ್ಲಿ ಹತ್ತು ಸಾವಿರ ರುಪಾಯಿಗೆ ಮುಟ್ಟಿದೆ. ಬಹುಮಾನ ನೀಡುವುದರಲ್ಲಿಯೂ ಸ್ಪರ್ಧೆ ಎಂಬಂತೆ 'ವಿಜಯ ಕರ್ನಾಟಕ'ವು ತನ್ನ ಯುಗಾದಿ ಕಥಾ ಸ್ಪರ್ಧೆ-೨೦೦೨ರ ಪ್ರಥಮ ಬಹುಮಾನದ ಮೊತ್ತ ಇಪ್ಪತ್ತೈದು ಸಾವಿರ ರುಪಾಯಿಯೆಂದು ಘೋಷಿಸಿದೆ. ಇಲ್ಲಿ 'ಇನಾಮಿನ ಆಸೆ' ಕೆಲಸ ಮಾಡುತ್ತದೆ. ಕನ್ನಡದ ಉತ್ತಮ ಕಥೆಗಾರರು ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಇಂಥ ಕಥಾ ಸ್ಪರ್ಧೆಗೆ ಈಗ ಸುಮಾರು ೫೦೦ ಕಥೆಗಳು ಬರುತ್ತಿವೆ. ಈ ಕಥೆಗಳ ಬಗ್ಗೆ ತೀರ್ಪುಗಾರರು ಆಡುವ ಒಟ್ಟಾರೆ ಮಾತುಗಳು ಖಂಡಿತವಾಗಿಯೂ ಪರಿಣಾಮ ಬೀರುತ್ತವೆ. ತಮ್ಮ ಕಥೆಯ ಶೈಲಿ, ವಸ್ತು, ದರ್ಶನ, ಬದ್ಧತೆಗಳನ್ನು ತೀರ್ಪುಗಾರರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಥೆಗಾರರು ಬದಲಿಸಿಕೊಂಡರೆ ಆಶ್ಚರ್ಯವೇನಲ್ಲ.

ಸಾಹಿತ್ಯಪತ್ರಿಕೆಯಿಂದ ತಾವು ಪ್ರೇರಣೆ ಪಡೆದುದನ್ನು ಮಾಸ್ತಿಯವರೇ ಹೇಳಿಕೊಂಡಿದ್ದಾರೆ. 'ಸ್ಟ್ರಾಂಡ್ ಮ್ಯಾಗಜಿನ್' ಎಂಬ ಆಂಗ್ಲ ಮಾಸ ಪತ್ರಿಕೆಯನ್ನು ನೋಡಿದ್ದರಿಂದ ತಮಗೆ ಸಣ್ಣ ಕಥೆ ಬರೆಯುವುದಕ್ಕೆ ಪ್ರೇರಣೆ ದೊರೆಯಿತು ಎಂದು ಮಾಸ್ತಿಯವರು ಹೇಳಿದ್ದಾರೆ.[೧೭]

ಸಾಹಿತ್ಯ ಕೃತಿಗೆ ವಸ್ತು: ಪತ್ರಿಕೆಗಳಲ್ಲಿ ಬರುವ ವರದಿಗಳೂ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಉದಾಹರಣೆಗಳಿವೆ. ರಂ.ಶ್ರೀ.ಮುಗಳಿಯವರು ತಮ್ಮ 'ಅನ್ನ' ಕಾದಂಬರಿಗೆ 'ಅನ್ನ'ವನ್ನು ಪಡೆದುಕೊಂಡದ್ದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ವರದಿಗಳಿಂದ. ಈ ಕಾದಂಬರಿಯ ಪ್ರಸ್ತಾವನೆಯಲ್ಲಿ ಮುಗಳಿಯವರೇ ಇದನ್ನು ಹೇಳಿಕೊಂಡಿದ್ದಾರೆ. ಈ ಕಾದಂಬರಿ ಬಂಗಾಲದ ಭೀಕರ ಬರಗಾಲವನ್ನು ವಸ್ತುವಾಗಿ ಹೊಂದಿದೆ. ಶಿವರಾಮ ಕಾರಂತರ 'ಮುಗಿದ ಯುದ್ಧ' ಕಾದಂಬರಿಗೂ ಪತ್ರಿಕೆಗಳೇ ಪ್ರೇರಣೆ ನೀಡಿವೆ. 'ಅಸ್ಪೃಶ್ಯತೆ' ಮೊದಲಾದವುಗಳ ಬಗ್ಗೆ ಗಾಂಧೀಜಿಯವರು ಹೊಂದಿದ್ದ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಲೂರ ವೆಂಕಟರಾಯರು 'ಜಯಕರ್ನಾಟಕ'ದಲ್ಲಿ ಬರೆದ ಲೇಖನಗಳು ಗಳಗನಾಥರ ಕಾದಂಬರಿಗಳಲ್ಲಿ ಅಧ್ಯಾಯಗಳಾಗಿ ಮರುಕಳಿಸುತ್ತವೆ. ಎಷ್ಟೋ ಬರೆಹಗಾರರು ಪತ್ರಿಕೆಗಳಿಂದ ಈ ರೀತಿಯಲ್ಲಿ ಪ್ರಭಾವ ಪಡೆದಿರುವುದಂತೂ ಸತ್ಯ. ಕೆಲವರು ಹೇಳುತ್ತಾರೆ, ಕೆಲವರು ಸುಮ್ಮನಿರುತ್ತಾರೆ. ಶಿವರುದ್ರ ಕಲ್ಲೋಳಿಕರ ಅವರ 'ಹೊಲಗೇರಿಯ ರಾಜಕುಮಾರ' ಕೃತಿಗೆ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಬಂದ ಒಂದು ವರದಿ

೧೭.ಸಾಹಿತ್ಯ ಪ್ರೇರಣೆ- ೧೯೭೫- ಪುಟ ೧೭

ಕಾರಣ ಎಂದು ಅವರೇ ಹೇಳಿಕೊಂಡಿದ್ದಾರೆ.

ಕನ್ನಡ ಪತ್ರಿಕೋದ್ಯಮವು ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ಗದ್ಯ ಸಾಹಿತ್ಯಕ್ಕೆ ಒಂದು ರೂಪ, ಪರಂಪರೆ ಒದಗಿಸಿ ಅದು ಬೆಳೆದು ಬರುವಲ್ಲಿ ಎಲ್ಲ ರೀತಿಯ ನೆರವು ನೀಡಿತು; ಕಾದಂಬರಿ, ಕಥೆ, ಕವನ, ಪ್ರಬಂಧ, ಹಾಸ್ಯ ಮೊದಲಾಗಿ ವಿವಿಧ ಸಾಹಿತ್ಯ ಪ್ರಕಾರಗಳು ತನ್ಮೂಲಕ ಪ್ರಚುರಗೊಳ್ಳುವಂತೆ ಮಾಡಿತು; ವೈದ್ಯಕೀಯ-ವಿಜ್ಞಾನ ಸಾಹಿತ್ಯದ ಬೆಳವಣಿಗೆಯಲ್ಲಿ ಮುಖ್ಯವಾದ ಪಾತ್ರವನ್ನು ನಿರ್ವಹಿಸಿತು. ಜನಸಾಮಾನ್ಯರಿಗೆ ತಿಳಿಸಿಕೊಡಬೇಕು ಎಂಬ ಅರಿವಿನಿಂದ ಬಂದ ಬರೆಹಗಳು ಪ್ರಾದೇಶಿಕ ಸಾಹಿತ್ಯದ ಬೆಳವಣಿಗೆಗೆ ಕಾರಣವಾಯಿತು. ಪುಸ್ತಕ ಪ್ರಕಟಣೆ ಕಷ್ಟಕರವಾಗಿದ್ದ ಕಾಲದಲ್ಲಿ ಪ್ರಕಾಶಕರ ಸ್ಥಾನವನ್ನು ಕನ್ನಡ ಪತ್ರಿಕೋದ್ಯಮವು ತುಂಬಿ ಜನತೆಗೆ ಸಾಹಿತ್ಯ ತಲುಪುವಂತೆ ಸಾಹಿತ್ಯ ಪ್ರಸಾರದ ಏಕಮೇವ ಸಾಧನವಾಗಿ ಪತ್ರಿಕೋದ್ಯಮ ಕೆಲಸ ಮಾಡಿತು.

ಕೇವಲ ಸಾಹಿತ್ಯಪತ್ರಿಕೆಗಳಲ್ಲ, ಇತರ ಪತ್ರಿಕೆಗಳೂ, ಒಟ್ಟಾರೆ ಪತ್ರಿಕೋದ್ಯಮವೇ ಸಾಹಿತ್ಯ ಪೋಷಣೆ ಮಾಡಿದ ರೀತಿ ಇದು. ದಿನ ಪತ್ರಿಕೆಗಳಲ್ಲಿ 'ಪ್ರಜಾವಾಣಿ' ಹೊಸತನವನ್ನು ತಂದಿತು. ಸಾಹಿತಿ ಬಿ.ಪುಟ್ಟಸ್ವಾಮಯ್ಯ, ಟಿ.ಎಸ್.ರಾಮಚಂದ್ರರಾವ್, ಇ.ಆರ್.ಸೇತುರಾಂ, ವೈ.ಎನ್.ಕೆ. ಮೊದಲಾದವರು ಇದಕ್ಕೆ ಕಾರಣರು. ಕಥೆಗಾರ ಜಿ.ಎಸ್.ಸದಾಶಿವ ಕೂಡ ಅಲ್ಲಿದ್ದೇ ನಂತರ 'ಕನ್ನಡಪ್ರಭ'ಕ್ಕೆ ಬಂದವರು. ಇವರೆಲ್ಲರಿಂದಾಗಿ ನವ್ಯ ಸಾಹಿತ್ಯದ ಆರಂಭ ಕಾಲದಲ್ಲಿ ಅದಕ್ಕೆ ಅಗತ್ಯವಾಗಿದ್ದ ಬೆಂಬಲ ದೊರೆಯಿತು. ಹೊಸ ಹೊಸ ವಾಗ್ವಾದ, ಚರ್ಚೆ ಇತ್ಯಾದಿಗಳನ್ನು 'ಪ್ರಜಾವಾಣಿ ' ಹುಟ್ಟುಹಾಕಿತು. ಶೀಲ-ಅಶ್ಲೀಲದ ಬಗ್ಗೆ ಅನಕೃ- ನಿರಂಜನರ ನಡುವೆ ನಡೆದ ವಾಗ್ವಾದಕ್ಕೆ ಈ ಪತ್ರಿಕೆ ವೇದಿಕೆಯಾಯಿತು. ಇತ್ತೀಚೆಗೆ ಇದರಲ್ಲಿ ಬರುತ್ತಿರುವ 'ಸಾಹಿತ್ಯ ಸಂವಾದ' ಸಾಹಿತ್ಯ ಕೃತಿಯ ಗಂಭೀರವಾದ ವಿಮರ್ಶೆಯನ್ನು ಒಳಗೊಂಡಿದೆ. ವಾರಪತ್ರಿಕೆಯಲ್ಲಿ ಬಂದಾದ 'ಜನಪ್ರಗತಿ'ಯಲ್ಲಿ ಗೌರೀಶ ಕಾಯ್ಕಿಣಿಯವರು ಗೋಪಾಲಕೃಷ್ಣ ಅಡಿಗರ ಒಂದೊಂದು ಕವನವನ್ನು ವಿಮರ್ಶಿಸಿರುವ ರೀತಿ ಅಡಿಗರ ಕಾವ್ಯಾಭ್ಯಾಸಕ್ಕೆ ಮೆಟ್ಟಿಲಾಗಿದೆ. ಟ್ಯಾಬ್ಲೋಲಾಯ್ಡ್ ಪತ್ರಿಕೋದ್ಯಮಕ್ಕೆ ಹೊಸ ರೂಪವನ್ನು ನೀಡಿದ 'ಲಂಕೇಶ ಪತ್ರಿಕೆ' ಹೊಸ ಬರೆಹಗಾರರ ದೊಡ್ಡಪಡೆಯನ್ನೇ ಪರಿಚಯಿಸಿತು. 'ಲಂಕೇಶ ಪತ್ರಿಕೆ'ಯ ದೊಡ್ಡಕೊರತೆ ಎಂದರೆ ಅದು ವಾಗ್ವಾದಗಳಿಗೆ ವಿಮುಖವಾದದ್ದು. ಅಲ್ಲಿ ಅಭಿಪ್ರಾಯ ಮಂಡನೆಯಾಗುತ್ತಿತ್ತೇ ಹೊರತು ಚರ್ಚೆ ನಡೆಯುತ್ತಿರಲಿಲ್ಲ.

ಪತ್ರಿಕೆಯ ಹಲವು ಸಾಧ್ಯತೆಗಳಲ್ಲಿ ಕೈಬರೆಹದ ಪತ್ರಿಕೆಯೂ ಒಂದು. ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ದ ಮೊದಲ ನಾಲ್ಕಾರು ಸಂಚಿಕೆಗಳು ಕೈ ಬರೆಹದಲ್ಲಿಯೇ ಬಂದಿದ್ದವು. ಇಂಥ ಪ್ರಯೋಗ ಈಗಲೂ ನಡೆಯುತ್ತಿವೆ. ಶಾಲೆ-ಕಾಲೇಜುಗಳಲ್ಲಿ ಮಕ್ಕಳ ಸೃಜನಾತ್ಮಕತೆಯನ್ನು ಹೊರಗೆಡವಲು ಇಂಥ ಕೈ ಬರೆಹದ

ಪತ್ರಿಕೆಗಳನ್ನು ಹೊರತರುತ್ತಿದ್ದುದು ಇದೆ. ದ.ರಾ.ಬೇಂದ್ರೆಯವರೂ 'ಗೆಳೆಯ' ಎಂಬ ಕೈಬರೆಹದ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಬಸವರಾಜ ಕಟ್ಟಿಮನಿಯವರು ಬೆಳಗಾವಿಯಲ್ಲಿ ಕೆಲವು ಗೆಳೆಯರೊಂದಿಗೆ ಸೇರಿಕೊಂಡು ಒಂದು ಕೈ ಬರೆಹದ ಪತ್ರಿಕೆ ಹೊರಡಿಸುತ್ತಿದ್ದರು ಎನ್ನಲಾಗಿದೆ. (ಬಹುಶಃ ಇದರ ಹೆಸರು 'ಬಾವುಟ'ಎಂದಿರಬೇಕು.) ಈ ಪತ್ರಿಕೆ ಹೊರಡಿಸುತ್ತಿದ್ದ ಸಂಘದ ಹೆಸರು 'ನಾಡ ನರಿಗಳ ಸಂಘ' ಎಂಬುದಾಗಿತ್ತು. ಅತಿ ಚಿಕ್ಕ ವಯಸ್ಸಿನಲ್ಲಿಯೇ ಸಾವಿಗೀಡಾದ ಕನ್ನಡ ಸಾಹಿತ್ಯದ ಪ್ರತಿಭಾವಂತ ಲೇಖಕರಲ್ಲಿ ಒಬ್ಬರಾಗಿದ್ದ ಯರ್ಮುಂಜ ರಾಮಚಂದ್ರ(೧೯೩೩-೫೫) ಅವರೂ ಸುಮಾರು ಐದು ವರ್ಷಗಳ ಕಾಲ 'ಪಾಂಚಜನ್ಯ' ಎಂಬ ಕೈ ಬರೆಹದ ಪತ್ರಿಕೆ ನಡೆಸುತ್ತಿದ್ದರು. ಇದು ಗೆರೆಗಳಿಲ್ಲದ ನೂರು ಪುಟಗಳ ಎಕ್ಸರ್‌ಸೈಜ್ ಪುಸ್ತಕದಲ್ಲಿ ಕೆಂಪು ಬಣ್ಣದ ಪೆನ್ಸಿಲ್ಲಿನಿಂದ, ಕೆಲವು ಸಲ ನೇರಳೆ ಬಣ್ಣದ ಪೆನ್ಸಿಲ್ಲಿನಿಂದ ಬಾರ್ಡರ್ ಕಟ್ಟಿ ಅದರಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಪತ್ರಿಕೆಯ ಬಹುಪಾಲು ರಾಮಚಂದ್ರರ ಅಕ್ಷರಗಳಲ್ಲಿಯೇ ಇದೆ. ಇದರ ಸಂಪಾದಕರು ಯರ್ಮುಂಜ ರಾಮಚಂದ್ರರು ಮತ್ತು ಪಿ.ಎಸ್.ರಾಮ. ಪಿ.ಎಸ್.ರಾಮ ಅವರ ಪೂರ್ತಿಹೆಸರು ಪಿ.ಎಸ್.ರಾಮಶಾಸ್ತ್ರಿ ಎಂದಾಗಿತ್ತು. ಮುಖಪುಟವನ್ನು ಆಕರ್ಷಕ ಮಾಡುವ ಉದ್ದೇಶದಿಂದ ಬೇರೆ ಹಾಳೆಯಲ್ಲಿ ಚಿತ್ರ ಬರೆದು ಅದಕ್ಕೆ ಅಂಟಿಸುತ್ತಿದ್ದರು. ಪತ್ರಿಕೆಯ ಹೆಸರು, ಪ್ರಕಟಣೆಯ ತಿಂಗಳು ಮತ್ತು ವರ್ಷ ಇವುಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ನಮೂದಿಸಲಾಗುತ್ತಿತ್ತು. ಹಿಂಬದಿಯ ಪುಟದಲ್ಲಿ ರಾಷ್ಟ್ರನಾಯಕರ ವ್ಯಂಗ್ಯಚಿತ್ರ, ಅವರ ಬಗ್ಗೆ ಒಂದೆರಡು ವಾಕ್ಯದ ವಿವರಣೆ ಇರುತ್ತಿತ್ತು. ಇವುಗಳನ್ನು ಶಂಕರ್ಸ್ ವೀಕ್ಲಿಯಿಂದ ಎತ್ತಿಕೊಳ್ಳಲಾಗುತ್ತಿತ್ತು. ಇವುಗಳನ್ನು ಎಷ್ಟು ಸಂಖ್ಯೆಯಲ್ಲಿ ಹೊರತರುತ್ತಿದ್ದರು ಎಂಬುದು ತಿಳಿದಿಲ್ಲ. ಇದಕ್ಕೆ ಕನ್ನಡದ ಅನೇಕ ಗಣ್ಯ ಲೇಖಕರು ಬರೆಹಗಳನ್ನು ನೀಡಿರುವುದು ಮಹತ್ವದ್ದು. ತೀರ ಇತ್ತೀಚೆಗೆ ನಾನು ಕಂಡದ್ದು ಹುಬ್ಬಳ್ಳಿಯ ಕೆಲವು ಗೆಳೆಯರು ಸೇರಿಕೊಂಡು ಹೊರಡಿಸುತ್ತಿರುವ 'ಒಡಲಾಳ'. ದಲಿತ ಸಂವೇದನೆಯ ಬರೆಹಗಳನ್ನು ಒಳಗೊಂಡಿರುವ ಈ ಪತ್ರಿಕೆ ಖಾಸಗಿ ಪ್ರಸಾರಕ್ಕಾಗಿ ಇದೆ. ಇದು ದಲಿತ ಬರೆಹಗಾರರಿಗೆ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಲು ಯತ್ನಿಸುತ್ತಿದೆ. ಬೇಂದ್ರೆಯವರು ಧಾರವಾಡದ ರಾಷ್ಟ್ರೀಯ ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾಗ ಶಾಲೆಯ ಬಾಲಕರೇ 'ಕಾವ್ಯಸೇವೆ' ಎಂಬ ಕೈಬರೆಹದ ಪತ್ರಿಕೆ ಹೊರಡಿಸಲು ಪ್ರೋತ್ಸಾಹ ನೀಡಿದರು. ಆ ಮೂಲಕ ಮಕ್ಕಳು ಕವಿತೆಯ ಬಗ್ಗೆ ಆಸಕ್ತಿ ವಹಿಸುವಂತೆ ಮಾಡಿದರು. ಹರ್ಡೇಕರ ಮಂಜಪ್ಪನವರೂ ಆಲಮಟ್ಟಿಯಿಂದ 'ವಿದ್ಯಾಲಯ ಪತ್ರಿಕೆ' ಎಂಬ ವಾರಪತ್ರಿಕೆ ಹಾಗೂ 'ಬಾಲ ಸಂಗಯ್ಯ' ಎಂಬ ಮಾಸಿಕವನ್ನು ಕೈ ಬರೆಹದಲ್ಲಿ ಪ್ರಕಟಿಸುತ್ತಿದ್ದರು. ಹ.ಕ.ರಾಜೇಗೌಡ ಅವರು ಮೈಸೂರಿನಲ್ಲಿ 'ಲೇಖಕ' ಹೆಸರಿನ ಕೈಬರೆಹದ ಪತ್ರಿಕೆ ಪ್ರಕಟಿಸಿದ್ದರು. ಇದರಲ್ಲಿ ಅವರು ಏಕೀಕರಣಕ್ಕೆ ಎದುರಾದ ವಿರೋಧವನ್ನು ಖಂಡಿಸಿ ಸಂಪಾದಕೀಯವನ್ನು ಬರೆದಿದ್ದರು. ಪಿ.ಆರ್.ತಿಪ್ಪೇಸ್ವಾಮಿ ಮತ್ತು ಹೇಮದಳ ರಾಮದಾಸ ಅವರು ಸೇರಿಕೊಂಡು 'ಕಲಾಕ್ಷೇತ್ರ'

ಎಂಬ ಕೈಬರೆಹದ ಪತ್ರಿಕೆಯನ್ನು ಮೈಸೂರಿನಲ್ಲಿಯೇ ಆರಂಭಿಸಿದ್ದರು. ಇವೆಲ್ಲ ಸೃಷ್ಟಿಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿಯೇ ಹೊರ ಬಂದ ಪತ್ರಿಕೆಗಳಾಗಿವೆ. ಇವುಗಳ ವ್ಯಾಪ್ತಿ ಕಿರಿದಾದರೂ ಅವನ್ನು ಚಾರಿತ್ರಿಕವಾಗಿ ನಿರ್ಲಕ್ಷಿಸಲು ಆಗದು.

ಪತ್ರಿಕೆಗಳು ತಮ್ಮ ಜವಾಬ್ದಾರಿಯನ್ನು ಎಲ್ಲ ಸಂದರ್ಭದಲ್ಲಿಯೂ ಸರಿಯಾಗಿ ನಿರ್ವಹಿಸಿವೆಯೇ ಎಂದರೆ ಇಲ್ಲವೆಂದೇ ಹೇಳಬೇಕು. ಕೆಲವೊಮ್ಮೆ ಇವು ಪಕ್ಷಪಾತದ ಹಾದಿ ಹಿಡಿದಿರುವುದು, ಗುಂಪುಗಾರಿಕೆಗೆ ಒಳಗಾದುದನ್ನು ಕಾಣಬಹುದಾಗಿದೆ. ಚರ್ಚೆ, ವಾಗ್ವಾದ, ಪ್ರತಿಕ್ರಿಯೆ ಮೊದಲಾದ ಅಂಕಣಗಳಲ್ಲಿ ಹೊಸ ವಿಚಾರಗಳ ಉಗಮಕ್ಕೆ ದಾರಿ ಮಾಡಿಕೊಡುತ್ತಿದ್ದ ಪತ್ರಿಕೆಗಳು ಕೆಲವೊಮ್ಮೆ ಮುಗ್ಗರಿಸಿದ್ದೂ ಇವೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಕುವೆಂಪು ಅವರು ತಮ್ಮ ಮಗ ತೇಜಸ್ವಿಯವರ ಅಂತರ್‌ಜಾತೀಯ ವಿವಾಹಕ್ಕೆ ವಿರೋಧವಾಗಿದ್ದರು ಎಂದು ಒಂದು ಮಾಸಿಕ ಪತ್ರಿಕೆಯಲ್ಲಿ ಒಬ್ಬರು ಬರೆದಿದ್ದರಂತೆ. ಇದು ಕುವೆಂಪು ಅವರು ನಿಧನರಾದ ನಂತರ ಬಂದ ಲೇಖನ. 'ಇದು ಸುಳ್ಳು, ಕುವೆಂಪು ಅವರೇ ಸ್ವತಃ ನಿಂತು, ಮಂತ್ರ ಮಾಂಗಲ್ಯ ಓದಿ, ತಾಳಿ ಕಟ್ಟಿಸಿದ್ದಕ್ಕೆ ನಾನೇ ಸಾಕ್ಷಿ. ಒಬ್ಬ ವ್ಯಕ್ತಿಯ ನಿಧನಾನಂತರ ಅವರ ಚಾರಿತ್ರ್ಯವಧೆ ಮಾಡುವುದು ಅತ್ಯಂತ ಹೀನ ಅಭಿರುಚಿ' ಎಂದು ಆ ಪತ್ರಿಕೆಗೆ ತೇಜಸ್ವಿಯವರ ಪತ್ನಿ ರಾಜೇಶ್ವರಿಯವರು ಬರೆಯುತ್ತಾರೆ. ಆ ಪತ್ರಿಕೆಯ ಸಂಪಾದಕರು ಅದನ್ನು ಪ್ರಕಟಿಸಲಿಲ್ಲವಂತೆ. ವಿಜಯ ಕರ್ನಾಟಕ ಪತ್ರಿಕೆಯ ೨೧-೭-೨೦೦೨ರ ಸಂಚಿಕೆಯ ಸಂದರ್ಶನವೊಂದರಲ್ಲಿ ಸ್ವತಃ ರಾಜೇಶ್ವರಿಯವರೇ ಇದನ್ನು ಹೇಳಿದ್ದಾರೆ. ಇದು ಕುವೆಂಪುರವರ ಮೇಲೆ ಕೆಲವರು ನಡೆಸುತ್ತಿರುವ ವ್ಯವಸ್ಥಿತ ಪಿತೂರಿಯ ಭಾಗವಲ್ಲದೆ ಮತ್ತೇನೂ ಅಲ್ಲ. ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಈ ಮಟ್ಟಕ್ಕೆ ಇಳಿದಿರುವುದರಿಂದಲೇ ಬರೆಹಗಾರರು ಮತ್ತು ಓದುಗರು ಇಬ್ಬರೂ ವಿಮರ್ಶೆಯನ್ನು ಅಲಕ್ಷಿಸಿದ್ದಾರೆ. ಇಡೀ ಜೀವಮಾನವೆಲ್ಲ ಜಾತ್ಯತೀತ ಸಮಾಜಕ್ಕಾಗಿ ಹೋರಾಡಿದ ವ್ಯಕ್ತಿಯೊಬ್ಬರ ಮೇಲೆ ಇಂಥ ಸುಳ್ಳು ಸುದ್ದಿ ಹಬ್ಬಿಸಿದರೆ ಅವರನ್ನು ಸುಲಭವಾಗಿ ಅಪಮೌಲ್ಯಗೊಳಿಸಬಹುದು ಎಂಬುದು ಇವರ ಉದ್ದೇಶ ಎಂಬ ಅಭಿಪ್ರಾಯವನ್ನು ತಳ್ಳಿಹಾಕಲು ಆಗುವುದಿಲ್ಲ.

ಕನ್ನಡಪ್ರಭದ ವಾರದ ಪುರವಣಿ(೨೧-೭-೨೦೦೨)ಯ 'ವಾಗ್ವಾದ' ಅಂಕಣದಲ್ಲಿ ವೆಂಕಟರಮಣಗೌಡ ಅವರು ಪತ್ರಿಕೆಗಳಲ್ಲಿ ಲೇಖನಗಳು ಹೇಗೆ ಆಯ್ಕೆಗೊಳ್ಳುತ್ತವೆ ಎಂಬುದನ್ನು ವಿವರಿಸುತ್ತ, ಕೇವಲ ನಾಮಬಲದ ಮೇಲೆಯೇ ಕೆಲವು ಪ್ರಕಟಣೆಗೆ ಅರ್ಹವಾಗುತ್ತವೆ ಎಂದು ಹೇಳಿದ್ದಾರೆ. ಈ ವಾಗ್ವಾದ ಅಂಕಣದ ಭಾಷೆ ಬಹಳ ಪ್ರಚೋದನಕಾರಿಯಾಗಿದೆ. ಇದು ಒಂದು ವಿಷಯದಲ್ಲಿ ವಾಗ್ವಾದವನ್ನು ಮುಂದುವರಿಸುವ ಉದ್ದೇಶದಿಂದಲೇ ಉದ್ದೇಶಪೂರ್ವಕವಾಗಿ ಬಳಸಿದ ಭಾಷೆಯಾಗಿದೆ. 'ನಾಡಿಗರು ಬರೆದದ್ದು ಅಂತ ತಿಳಿಯದೇ ಹೋದರೆ ಅವರ ಪಂಚಭೂತಗಳು ಕವನವನ್ನು ಯಾರಾದರೂ ಪ್ರಕಟಿಸುತ್ತಾರಾ?' ಎಂಬ ಪ್ರಶ್ನೆ ಪತ್ರಿಕೆಗಳ ವಿಶ್ವಾಸಾರ್ಹತೆಯನ್ನೂ ಪ್ರಶ್ನಿಸುತ್ತದೆ.

೨. **ಇತಿಹಾಸ:** ಕನ್ನಡದ ಸಂದರ್ಭದಲ್ಲಿ ಸಾಹಿತ್ಯಪತ್ರಿಕೆಗಳ ಆರಂಭವನ್ನು ತಿಳಿಯಲು ಕನ್ನಡ ಪತ್ರಿಕೋದ್ಯಮದ ಆರಂಭಕ್ಕೇ ಹೋಗಬೇಕಾಗುತ್ತದೆ. ಹೊಸಗನ್ನಡದ ಉದಯ ಕಾಲದಲ್ಲಿ ಇದ್ದ ಪತ್ರಿಕೆಗಳೆಲ್ಲವೂ ಸಾಹಿತ್ಯವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿಯೇ ಕೆಲಸ ಮಾಡಿದವು. ಮುದ್ರಣ ಯಂತ್ರವನ್ನು ಕಂಡು ಹಿಡಿಯುವ ಪೂರ್ವದಲ್ಲಿಯ ಸಾಹಿತ್ಯ ಸೃಷ್ಟಿಗೂ ಮುದ್ರಣ ಯಂತ್ರವನ್ನು ಕಂಡುಹಿಡಿದ ಮೇಲಿನ ಸಾಹಿತ್ಯ ಸೃಷ್ಟಿಗೂ ವ್ಯತ್ಯಾಸ ಇರುವುದನ್ನು ಗಮನಿಸಬಹುದು.

ರಾಜಾಶ್ರಯದಲ್ಲಿ ಬೆಳೆದ ಹಳಗನ್ನಡದ ಸಾಹಿತ್ಯದ ಶ್ರೋತೃವರ್ಗ ರಾಜಾಸ್ಥಾನದಲ್ಲಿಯ ಪಂಡಿತರುಗಳೇ ಆಗಿದ್ದರು. ಕಾವ್ಯ ರಚನಕಾರ ಉದ್ದೇಶ ಆ ಪಂಡಿತರನ್ನು ಮೆಚ್ಚಿಸುವ ನಿಟ್ಟಿನಲ್ಲಿ ಇರುತ್ತಿದ್ದವು. ಸಹೃದಯನು ರಚನಾಕಾರನಿಗೆ ಗೌಣ. ಆದರೆ ಯುರೋಪಿನ ಕೈಗಾರಿಕೆ ಕ್ರಾಂತಿಯ ಮಂಥನದ ನವನೀತ ಮುದ್ರಣ ಯಂತ್ರವು ಸಾಮಾನ್ಯ ಓದುಗನನ್ನು ರೂಪಿಸಿತು. ಯಾರೀತ ಸಾಮಾನ್ಯ ಓದುಗ? ಈತನಿಗೂ ಕೃತಿಕಾರನಿಗೂ ಎಂಥ ಸಂಬಂಧ? ಸಾಮಾನ್ಯ ಓದುಗ ಪಡೆ ಕಳೆದ ಶತಮಾನದಲ್ಲಿ ಹುಟ್ಟಿ ಕೊಂಡಿತು. ಬ್ರಿಟಿಷ್ ಆಡಳಿತದ ಬಳುವಳಿಯಾಗಿ ಬಂದ ಹೊಸ ಶಿಕ್ಷಣ ಕ್ರಮ, ಹೊಸ ಶಿಕ್ಷಣವನ್ನು ಪಡೆದುಕೊಂಡ ಕಾರಣಕ್ಕಾಗಿಯೇ ಗಳಿಸಿದ ನೌಕರಿ ಇವುಗಳಿಂದ ತಾವೇ ಮನೆಯಲ್ಲಿ 'ಓದಿಕೊಳ್ಳಬಲ್ಲ' ಓದುಗರ ಪಡೆಯೊಂದು ತಯಾರಾಗುತ್ತದೆ. ಇವರು ಮಧ್ಯಮ ವರ್ಗದವರು. ನಗರವಾಸಿಗಳು. ನೌಕರಿ ಮುಗಿಸಿದ ಮೇಲೆ ಬಿಡುವಿನ ವೇಳೆಯನ್ನು ಓದಿನಲ್ಲಿ ಕಳೆಯಬೇಕು ಎಂಬ ಇಚ್ಛೆ ಹೊಂದಿದವರು ಇವರು. ಇಂಥವರಿಗೆ ಪದ್ಯಕ್ಕಿಂತ ಗದ್ಯದಲ್ಲಿಯೇ ಆಸಕ್ತಿ ಹೆಚ್ಚು. ಹೀಗಾಗಿ ಸಾಹಿತ್ಯ ರಚನೆಯಲ್ಲಿ ಗದ್ಯಕ್ಕೆ ಪ್ರಾಧಾನ್ಯ ಬಂದಿತು. ಹೊಸಗನ್ನಡ ದ ಆರಂಭ ಕಾಲದಲ್ಲಿ ಬದುಕಿದ್ದೂ ಹಳೆಗನ್ನಡದಲ್ಲಿ ಕೃತಿ ರಚಿಸಿದ ಮುದ್ದಣ ಕೂಡ 'ಗದ್ಯಂ ಹೃದ್ಯಂ ಪದ್ಯಂ ವದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು' ಎಂದು ಮನೋರಮೆಯ ಮೂಲಕ ಗದ್ಯದ ಮೇಲ್ಮೆಯನ್ನು ಹೇಳಿರುವನು.

ಈ ಸಾಮಾನ್ಯ ಓದುಗನ ತೃಷೆಯನ್ನು ಹಿಂಗಿಸಲು ಹೊಸಗನ್ನಡದ ಆರಂಭದ ಕಾಲದ ಲೇಖಕರು ಪ್ರಯತ್ನಿಸಿದರು. ಸಂಸ್ಕೃತ- ಇಂಗ್ಲಿಷ್‌ಗಳಿಂದ ಭಾಷಾಂತರ, ರೂಪಾಂತರ ಮಾಡಿ ಕಥೆ, ಕಾದಂಬರಿ, ಕಾವ್ಯಗಳನ್ನು ಕನ್ನಡದಲ್ಲಿ ತಂದರು. ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಪುಸ್ತಕ ರೂಪದಲ್ಲಿ ಪ್ರಕಟಿಸಲು ಸಾಧ್ಯವಾಗದ್ದನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಮಾಸಿಕ ಗ್ರಂಥಾವಳಿಗಳು, ಕಾವ್ಯಮಂಜರಿಗಳು ಪ್ರಕಟಗೊಳ್ಳುತ್ತಿದ್ದವು.

ಕನ್ನಡದ ಮೊದಲ ಪತ್ರಿಕೆಯೇ ಸಾಹಿತ್ಯವನ್ನು ಪೋಷಿಸುವ, ಪ್ರಚಾರಪಡಿಸುವ ಕಾರ್ಯವನ್ನು ನಡೆಸಿತು. ಪತ್ರಿಕೆ ಒಂದು ಉದ್ಯಮದ ರೂಪವನ್ನು ಪಡೆಯದೆ ಇದ್ದ ಆರಂಭದ ಕಾಲದಲ್ಲಿ ಪತ್ರಿಕೆ ನಡೆಸಿ ಹಣ ಮಾಡಬೇಕು ಎನ್ನುವುದು ಪತ್ರಿಕೆ ನಡೆಸುವವರ ಉದ್ದೇಶ ವಾಗಿರಲಿಲ್ಲ. ಕೆಲವರಿಗೆ ಅಂದರೆ ಕ್ರೈಸ್ತ ಮಿಶಿನರಿಗಳಿಗೆ ತಮ್ಮ ಧರ್ಮದ ಪ್ರಸಾರ ನಡೆಸಬೇಕು

ಎಂಬ ಬಯಕೆ. ಕ್ರೈಸ್ತ ಮಿಶಿನರಿಗಳು ತಮ್ಮ ಧರ್ಮದ ಪ್ರಚಾರ ಮಾಡುತ್ತ ಇನ್ನೊಂದು ಧರ್ಮವನ್ನು ಟೀಕಿಸತೊಡಗಿದಾಗ ಹಿಂದುಗಳೂ ತಮ್ಮ ಧರ್ಮದ ಸಮರ್ಥನೆಗೆ ಪತ್ರಿಕೆ ನಡೆಸಲು ಮುಂದಾದರು. ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಸಮಾಜದಲ್ಲಿಯ ಮೂಢ ನಂಬಿಕೆಗಳು, ಕಂದಾಚಾರಗಳ ವಿರುದ್ಧ ಸಿಡಿದೆದ್ದ ಹೊಸ ಮನಸ್ಸು ಸಮಾಜ ಸುಧಾರಣೆಯ ಉದ್ದೇಶವನ್ನಿಟ್ಟುಕೊಂಡು ಪತ್ರಿಕೆ ನಡೆಸಲು ಮುಂದಾಯಿತು. ಬ್ರಿಟಿಷ್ ಆಡಳಿತದ ನ್ಯೂನತೆಗಳನ್ನು ಎತ್ತಿ ತೋರಿಸಲು ಕೆಲವು ಪತ್ರಿಕೆಗಳು ಹುಟ್ಟಿಕೊಂಡರೆ, ಸ್ವಾತಂತ್ರ್ಯ ಚಳವಳಿಯ ಪ್ರಚಾರಕ್ಕೆ ಇನ್ನೂ ಕೆಲವು ಪತ್ರಿಕೆಗಳು ಹುಟ್ಟಿಕೊಂಡವು. ಕ್ರೈಸ್ತ ಪಾದ್ರಿಗಳು ಕೇವಲ ಹಿಂದು ಧರ್ಮವನ್ನಷ್ಟೇ ಅಲ್ಲ ಮುಸ್ಲಿಂ ಧರ್ಮವನ್ನೂ ಖಂಡಿಸಿ ಬರೆದರು. ಹಿಂದೂ ಧರ್ಮದ ಸಮರ್ಥನೆಗೆ ಗ್ರಂಥಗಳು ಪತ್ರಿಕೆಗಳು ಹುಟ್ಟಿಕೊಂಡ ಹಾಗೆ ಜೈನ ಧರ್ಮದ ಪತ್ರಿಕೆಗಳೂ ಬಂದವು. ವೀರಶೈವರೂ ತಮ್ಮ ತತ್ವ ಪ್ರಸಾರಕ್ಕೆ ಪ್ರಾಚೀನ ಗ್ರಂಥಗಳ ಪ್ರಕಟಣೆಗೆ ಪತ್ರಿಕೆಗಳನ್ನು ಹೊರಡಿಸಿದರು.

ಇಂಥ ಸಂದರ್ಭದಲ್ಲಿಯೂ ಕೇವಲ ಸಾಹಿತ್ಯದ ಪ್ರಕಟಣೆ ಪ್ರಚಾರಕ್ಕಾಗಿಯೇ ಕೆಲವು ಪತ್ರಿಕೆಗಳು ಹುಟ್ಟಿಕೊಂಡವು. ಸಾಹಿತ್ಯವನ್ನೂ ಸಾಂಸ್ಕೃತಿಕ ನೆಲೆಯಲ್ಲಿ ಪರಿಭಾವಿಸಿದಾಗ ಈ ಮೊದಲು ಹೇಳಿದ ಪತ್ರಿಕೆಗಳೆಲ್ಲವೂ ಸಮಾಜದಲ್ಲಿ ಒಂದು ಹೊಸ ಸಂವಾದವನ್ನು ಹುಟ್ಟುಹಾಕಿ ಹೊಸ ಚಿಂತನೆಗೆ ಇಂಬು ನೀಡಿದವು. ಇದು ಸಾಹಿತ್ಯದಲ್ಲಿ ಹೊಸ ಸಾಧ್ಯತೆಗಳ ಅನ್ವೇಷಣೆಗೆ ಕಾರಣವಾಯಿತು. ಕಾರಣ ಈ ಮೊದಲು ಹೇಳಿದ ಉದ್ದೇಶಗಳಿಗಾಗಿ ಹುಟ್ಟಿಕೊಂಡ ಪತ್ರಿಕೆಗಳೂ ಸಾಹಿತ್ಯವನ್ನು ಬೆಳೆಸಿದವು.

ಪಾಶ್ಚಾತ್ಯ ಶಿಕ್ಷಣ ಪಡೆದವರ ಮುಂದೆ ಹೊಸ ಲೋಕವೊಂದು ತೆರೆದುಕೊಂಡಿತ್ತು. ಮುದ್ರಣಯಂತ್ರದಿಂದಾಗಿ ಪತ್ರಿಕೆಗಳು ಪ್ರಾರಂಭವಾಗಿದ್ದವು. ಗ್ರಂಥ ಸಂಪಾದನೆ, ಹೊಸ ಪುಸ್ತಕಗಳ ಮುದ್ರಣದಿಂದಾಗಿ ವಾಗ್ವಾದಕ್ಕೆ ಅನುಕೂಲವಾಯಿತು. ಅಂದಿನ ಸಮಾಜ ಎಲ್ಲವನ್ನೂ ಒಪ್ಪಿಕೊಂಡು ಬಾಳುವ ಸಮಾಜ ಆಗಿರಲಿಲ್ಲ. ಕ್ರಿಶ್ಚಿಯಾನಿಟಿಯನ್ನು ಸಮರ್ಥಿಸಿ ಹಿಂದೂ ಧರ್ಮವನ್ನು ಟೀಕಿಸುವ ಕೆಲವು ಗ್ರಂಥಗಳು, ಪತ್ರಿಕೆಗಳು, ಅದಕ್ಕೆ ಪ್ರತಿಯಾಗಿ ಹಿಂದೂಧರ್ಮವನ್ನು ಸಮರ್ಥಿಸುವ ಗ್ರಂಥಗಳು, ಪತ್ರಿಕೆಗಳು ಬಂದದ್ದು ಸಮಾಜದ ಜೀವಂತಿಕೆಗೆ ಸಾಕ್ಷಿ. ಸಮಾಜದಲ್ಲಿಯೇ ಇದ್ದ ಸಂಘರ್ಷದ ಅಭಿವ್ಯಕ್ತಿ ಈ ಮಾಧ್ಯಮಗಳಿಂದ ಆಯಿತು. ಸಮಾಜದ ಜಡತನವನ್ನು ಕೊಡವಿಕೊಳ್ಳಲು ಪತ್ರಿಕೆ ಒಂದು ಸಾಧನವಾಯಿತು. ಸಮಾಜದ ಕಣ್ಣುಗಳು ಕಂಡುಣ್ಣಲು ಹೊಸ ಸಂಗತಿಗಳ ಗ್ರಾಸವನ್ನು ಅಂದಿನ ಪತ್ರಿಕೆಗಳು ಒದಗಿಸಿದವು. ಹೊಸ ವಿಚಾರಗಳ ಸಂವಾದದಿಂದ ಹೊಸ ರೀತಿಯ ಚಿಂತನೆ ಪ್ರಾರಂಭವಾಗಿ ಅವೂ ಸಾಹಿತ್ಯದಲ್ಲಿ ಒಡಮೂಡಿದವು.

ಕ್ರೈಸ್ತರಲ್ಲಿಯ ಪ್ರಾಟೆಸ್ಟಂಟರು ಎಲ್ಲವನ್ನೂ ಸುಲಭವಾಗಿ ಒಪ್ಪಿಕೊಳ್ಳುವವರಲ್ಲ. ಈ ಪ್ರಶ್ನಿಸುವ ಮನೋಭಾವ ನಿಶ್ಚಿತವಾಗಿ ಕನ್ನಡ ಗದ್ಯದ

ಬೆಳವಣಿಗೆಯಲ್ಲಿ ಸಹಾಯಕವಾಗಿದೆ. ಬಾಸೆಲ್ ಮಿಶನ್‌ದ ಪ್ರಾಟೆಸ್ಟಂಟರೇ ತಾವು ಆರಂಭಿಸಿದ ಪತ್ರಿಕೆಗಳಲ್ಲಿ ಗದ್ಯವನ್ನು ಬೆಳೆಸಿದರು. ಇಲ್ಲಿ ಆದ ಗದ್ಯದ ವಿವಿಧ ಸಾಧ್ಯತೆಗಳ ಪ್ರಯೋಗ ಕಾದಂಬರಿ ಪ್ರಕಾರಕ್ಕೆ ಬೇಕಾದ ಗದ್ಯವನ್ನು ಬೆಳೆಸಿತು.

ಹೊಸ ಶಿಕ್ಷಣ ಕ್ರಮ ಬಂದದ್ದು ಆಡಳಿತದ ಅನುಕೂಲತೆಗಾಗಿ. ಇದು ಮಿಶಿನರಿಗಳ ಮತಾಂತರ ಕಾರ್ಯಕ್ಕೂ ಸಾಧನವಾಗಿ ಬಳಕೆಯಾಯಿತು. 'ಇಂದಿರಾಬಾಯಿ' ಕಾಂದಬರಿ ಹೊಸ ಶಿಕ್ಷಣ ಕಲಿತವರು ಧರ್ಮಾಂತರ ಹೊಂದುತ್ತಾರೆ ಎಂಬ ಭಾವನೆ ಅಂದಿನ ಸಮಾಜದಲ್ಲಿ ಇದ್ದುದನ್ನು ಹೇಳುತ್ತದೆ. ಹೊಸ ಶಿಕ್ಷಣ ನೀಡುವ ಉದ್ದೇಶದಿಂದ ಶಾಲೆ ಕಾಲೇಜುಗಳು ಹುಟ್ಟಿಕೊಂಡವು. ಬೆನ್ನಲ್ಲೇ ಮುದ್ರಣ ಕಾರ್ಯ, ಪುಸ್ತಕ ಪ್ರಕಟಣೆ, ಪತ್ರಿಕಾ ಪ್ರಕಟಣೆಗಳು ಆದವು. ಸಮಾಜದಲ್ಲಿ ಏಕಕಾಲಕ್ಕೆ ಸಂಭವಿಸಿದ ಇಷ್ಟೆಲ್ಲ ಬದಲಾವಣೆಗಳು ಸಹಜವಾಗಿಯೇ ಸಾಂಸ್ಕೃತಿಕ ಸಂಘರ್ಷಕ್ಕೆ ಕಾರಣವಾದವು.

ಕನ್ನಡ ಸಾಹಿತ್ಯದಲ್ಲಿ ಆಧುನಿಕ ಚಿಂತನ ಕ್ರಮ ಇಂಗ್ಲಿಷ್‌ನಿಂದ ಬಂದ ಹಾಗೆಯೇ ಸಾಹಿತ್ಯ ಮತ್ತು ವಿಮರ್ಶೆಗಾಗಿಯೇ ಮೀಸಲಿಟ್ಟ ಪತ್ರಿಕೆಗಳನ್ನು ಹೊರಡಿಸಬೇಕೆಂಬ ವಿಚಾರವೂ ಇಂಗ್ಲಿಷ್‌ನಿಂದಲೇ ಬಂತು. ಏಶಿಯಾಟಿಕ್ ರಿಸರ್ಚಸ್ (Asiatic Researches) ಇಂಡಿಯನ್ ಎಂಟಿಕ್ವರಿ (Indian Antiquary), ಲಿಟರರಿ ರಿವ್ಯೂ (Literary Review), ಮಾಡರ್ನ್ ರಿವ್ಯೂ (Modern Review) ಮೊದಲಾದ ಸಾಹಿತ್ಯಪತ್ರಿಕೆಗಳು ಇಂಗ್ಲಿಷಿನಲ್ಲಿವೆ. ೧೭೮೫ರಲ್ಲಿ ಹುಟ್ಟಿದ 'ಟೈಮ್ಸ್' ಪತ್ರಿಕೆಯ T.L.S. (Times Literary Supliment) ಇವೆಲ್ಲವೂ ಸಾಹಿತ್ಯಪತ್ರಿಕೆಗಳು. ನವೋದಯದ ಸಂದರ್ಭದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ 'ಜಯ ಕರ್ನಾಟಕ' ಬಳಗದ ಶೇ.ಗೋ. ಕುಲಕರ್ಣಿ, 'ಜಯಕರ್ನಾಟಕವನ್ನು ಆಗಿದ್ದ ಮಾಡರ್ನ್ ರಿವ್ಯೂದ ಮಟ್ಟಕ್ಕೆ ಮುಟ್ಟಿಸಬೇಕೆಂದು ನಾವೆಲ್ಲರೂ ಅಂದಕೊಳ್ಳುತ್ತಿದ್ದೆವು'[೧೮] ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಕನ್ನಡ ಸಾಹಿತ್ಯಪತ್ರಿಕೆಗಳ ಮೇಲೆ ಅನ್ಯ ಪ್ರಭಾವವನ್ನು ಗುರುತಿಸಲು ನೆರವಾಗುವ ಇನ್ನೊಂದು ಅಂಶವನ್ನು ಇಲ್ಲಿ ಉಲ್ಲೇಖಿಸಬೇಕು. ಅದೆಂದರೆ, ಬೆಟಗೇರಿ ಕೃಷ್ಣಶರ್ಮರ 'ಜಯಂತಿ'. ಇದು ನವೋದಯದ ಸಂದರ್ಭದ ಇನ್ನೊಂದು ಮಹತ್ವದ ಪತ್ರಿಕೆ. ಇದರ ಉಗಮಕ್ಕೆ ಮಹಾರಾಷ್ಟ್ರದ 'ಕಿರ್ಲೋಸ್ಕರ್' ಮಾಸಪತ್ರಿಕೆ ಮಾದರಿ. ಈ 'ಕಿರ್ಲೋಸ್ಕರ್' ಮಾದರಿ ಶಂ.ಬಾ. ಜೋಶಿಯವರ ಮಿದುಳಿನ ಕೂಸು. ಬೆಟಗೇರಿ ಕೃಷ್ಣ ಶರ್ಮರು ಜಯಕರ್ನಾಟಕವನ್ನು ಬಿಟ್ಟು ತಮ್ಮ ಊರಿಗೆ ಬಂದಿದ್ದರು. ಅವರನ್ನು ಪುನಃ ಪತ್ರಿಕಾ ರಂಗಕ್ಕೆ ತಂದವರು ಶಂ.ಬಾ.ಜೋಶಿಯವರೇ. ಧಾರವಾಡದಲ್ಲಿ ನಿಮಗೊಂದು ಪತ್ರಿಕೆ ಕಾದಿದೆ. ನೀವು ಬಂದು ಅದನ್ನು ವಹಿಸಿಕೊಳ್ಳಬೇಕು ಎಂದು ಕೃಷ್ಣ ಶರ್ಮರಿಗೆ ಶಂ.ಬಾ. ಜೋಶಿ ಆಗ ಪತ್ರಬರೆದರು.[೧೯] ಮರಾಠಿಯ 'ಕಿರ್ಲೋಸ್ಕರ' ಪತ್ರಿಕೆಯ ರೀತಿಯಲ್ಲಿ

---

೧೮. ನಾನು ಕಂಡ ಗೆಳೆಯರ ಗುಂಪು- ಶೇ.ಗೋ.ಕುಲಕರ್ಣಿ

೧೯. ಆನಂದಕಂದ- ಪುಟ ೪೩

ಹೊಸ ಪತ್ರಿಕೆಯನ್ನು ಆರಂಭಿಸಬೇಕು ಎಂಬುದು ಶಂ.ಬಾ.ಜೋಶಿಯವರ ವಿಚಾರವಾಗಿತ್ತು. ಅದೇ ಮುಂದೆ 'ಜಯಂತಿ'ಯಾಗಿ ಹೊರ ಬಂತು.

ಹೀಗೆ ಸಾಹಿತ್ಯಪತ್ರಿಕೆಗಳ ಕಲ್ಪನೆಯೂ ನಮಗೆ ಎರವಲಾಗಿ ಬಂದದ್ದೇ ಆಗಿದೆ. ಹೊಸಗನ್ನಡದ ಆರಂಭದ ಕಾಲದಲ್ಲಿ ಪ್ರಭಾತ, ವಾಗ್ಭೂಷಣ, ಗ್ರಂಥಮಾಲಾ, ಕಾವ್ಯಮಂಜರಿ ಮೊದಲಾದ ಶುದ್ಧ ಸಾಹಿತ್ಯಪತ್ರಿಕೆಗಳನ್ನು ಹೊರತುಪಡಿಸಿದರೆ ಉಳಿದ ಪತ್ರಿಕೆಗಳಲ್ಲೂ ಸಾಹಿತ್ಯಕ್ಕೆ ಪ್ರೋತ್ಸಾಹ ವಿಪುಲವಾಗಿಯೇ ದೊರೆಯಿತು. ಉಳಿದವು ಶುದ್ಧ ಸಾಹಿತ್ಯಕ ಉದ್ದೇಶ ಹೊಂದಿಲ್ಲದಿದ್ದರೂ ಆನುಷಂಗಿಕವಾಗಿ ಸಾಹಿತ್ಯವನ್ನು ಪೋಷಿಸಿದವು. ಏಕೆಂದರೆ ಅವು ಸಾಮಾನ್ಯ ಓದುಗನನ್ನು ಗಮನದಲ್ಲಿಟ್ಟಿದ್ದವು.

ಪಾಶ್ಚಾತ್ಯ ವಿದ್ವಾಂಸರು ಹುಟ್ಟುಹಾಕಿದ ಕೆಲವು ಪತ್ರಿಕೆಗಳು ಮತಬೋಧನೆಯ ಜೊತೆಯಲ್ಲಿಯೇ ಹೊಸಗನ್ನಡ ಗದ್ಯ ಮತ್ತು ಪದ್ಯದ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟವು. ಅವರು ಅದರ ಜೊತೆಯಲ್ಲಿಯೇ ಈ ನೆಲದ ಹಳೆಯ ಸಾಹಿತ್ಯವನ್ನು ಶೋಧಿಸಿದರು. ಅವನ್ನೆಲ್ಲ ಐತಿಹಾಸಿಕವಾಗಿ ವಿಂಗಡಿಸಿದರು. ತಮ್ಮ ಪತ್ರಿಕೆಗಳಲ್ಲಿ ಅವುಗಳ ಬಗೆಗೆ ಲೇಖನಗಳನ್ನು ಬರೆದರು. ಕನ್ನಡ ಮೊದಲಾದ ಭಾಷೆಗಳಿಗೆ ಸಂಸ್ಕೃತವೇ ತಾಯಿ ಭಾಷೆ ಎಂದು ನಂಬಿದ್ದ ಕಾಲದಲ್ಲಿ ಪ್ರತ್ಯೇಕ ದ್ರಾವಿಡ ಭಾಷಾ ಸಮೂಹವನ್ನು ಪತ್ತೆ ಮಾಡಿದರು. ಶಬ್ದ ಕೋಶವನ್ನು ಕೊಟ್ಟರು. ವ್ಯಾಕರಣವನ್ನು ನೀಡಿದರು. ಸಾಹಿತ್ಯ ಚರಿತ್ರೆಯನ್ನು ಬರೆದರು. ಇವೆಲ್ಲ ಅವರ ಪತ್ರಿಕೆಗಳಲ್ಲಿಯೇ ಪ್ರಕಟವಾಗಿವೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ ಸಾಹಿತ್ಯೇತರ ಉದ್ದೇಶಗಳಿಗಾಗಿ ಹುಟ್ಟಿಕೊಂಡ ಅವರ ಪತ್ರಿಕೆಗಳು ಸಾಹಿತ್ಯದ ಉದ್ಧಾರದ ಕೆಲಸವನ್ನೂ ಮಾಡಿದವು. ಶುದ್ಧ ಸಾಹಿತ್ಯಪತ್ರಿಕೆಗಳು ಮಾಡಿದ ಕೆಲಸಕ್ಕೆ ಇವು ಊನವಾದುದೇನಲ್ಲ. ಈ ಹಿನ್ನೆಲೆಯಲ್ಲಿ ಅವನ್ನೂ ಸಾಹಿತ್ಯಪತ್ರಿಕೆಗಳೇ ಎಂದು ಕರೆಯುವುದು ಉಚಿತವಾಗುತ್ತದೆ.

ಇನ್ನು, ನಾವು ರಾಮಾಯಣ, ಮಹಾಭಾರತಗಳನ್ನು ಸಾಹಿತ್ಯ ಎಂದು ಪರಿಗಣಿಸುತ್ತೇವೆ. ಹಾಗಿದ್ದಾಗ ಬೈಬಲ್ ಸಾಹಿತ್ಯ ಆಗಲಾರದೆ ಎಂಬ ಮಹತ್ವದ ಪ್ರಶ್ನೆ ಉದ್ಭವಿಸುತ್ತದೆ. ಬೈಬಲ್ ಸಾಹಿತ್ಯ ಎಂದು ಒಪ್ಪಿಕೊಂಡಾಗ ಅದರ ಪ್ರಚಾರಕ್ಕಾಗಿ ಹುಟ್ಟಿ ಕೊಂಡ ಪತ್ರಿಕೆಗಳನ್ನೂ ಸಾಹಿತ್ಯಪತ್ರಿಕೆಗಳೇ ಎನ್ನಬೇಕು. ಆ ಹಿನ್ನೆಲೆಯಲ್ಲಿಯೇ ಕನ್ನಡದ ಮೊದಲ ಪತ್ರಿಕೆಯೇ ಸಾಹಿತ್ಯಪತ್ರಿಕೆ ಎಂಬ ಮಾತು ಔಚಿತ್ಯಪೂರ್ಣವಾಗುತ್ತದೆ.

ಆರಂಭ ಕಾಲದಲ್ಲಿ ಹುಟ್ಟಿಕೊಂಡ ಪತ್ರಿಕೆಗಳನ್ನು ಸಾಹಿತ್ಯಕ- ಅಸಾಹಿತ್ಯಕ ಎಂದು ವಿಂಗಡಿಸದೆ ಒಟ್ಟಾರೆಯಾಗಿ ಅವುಗಳು ಕನ್ನಡ ಸಾಹಿತ್ಯದ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ಗಮನಿಸುವುದೇ ಸರಿ. ಹೊಸಗನ್ನಡದ ಶೈಶವ ಸ್ಥಿತಿಯಲ್ಲಿ ಈ ಪತ್ರಿಕೆಗಳು ಭಾಷೆಯನ್ನು ದುಡಿಸಿಕೊಂಡು ಅದಕ್ಕೊಂದು ಗಟ್ಟಿಸ್ವರೂಪವನ್ನು ನೀಡಿದವು ಎಂಬುದನ್ನು ಗಮನಿಸಬೇಕು. ಪತ್ರಿಕೆಯು ಆಗ ವ್ಯಾಪಾರಿ ದೃಷ್ಟಿಯನ್ನು ಪಡೆಯದೆ ಇದ್ದುದನ್ನು ಮತ್ತು

ಪತ್ರಿಕೆಗಳು ಅಲ್ಪಸಂಖ್ಯೆಯಲ್ಲಿ ಇದ್ದುದನ್ನು ಮತ್ತು ಪತ್ರಿಕಾ ಕ್ಷೇತ್ರಕ್ಕೆ ಬಂದವರು ಸಾಹಿತಿಗಳೂ ಸಂಶೋಧಕರೂ ಆಗಿದ್ದನ್ನು ಗಮನಕ್ಕೆ ತಂದುಕೊಂಡಾಗ ಆರಂಭ ಕಾಲದ ಪತ್ರಿಕೆಗಳನ್ನು ಸಮಗ್ರವಾಗಿ ಪರಿಗಣಿಸುವುದು ಸೂಕ್ತ ಎನ್ನಿಸುತ್ತದೆ.

ಭಾರತದ ಮೊದಲ ಸಾಹಿತ್ಯಪತ್ರಿಕೆ: ಕನ್ನಡದ ಸಾಹಿತ್ಯಪತ್ರಿಕೆಗಳಿಗೆ ಇಂಗ್ಲಿಷ್‌ದಲ್ಲಿಯ ಅಂಥ ಪತ್ರಿಕೆಗಳು ಕಾರಣ ಎಂಬುದನ್ನು ಗಮನಿಸಲಾಯಿತು. ಐತಿಹಾಸಿಕವಾಗಿ ಭಾರತದ ಪ್ರಥಮ ಸಾಹಿತ್ಯಪತ್ರಿಕೆ ಇಂಗ್ಲಿಷ್ ಭಾಷೆಯ ಏಶಿಯಾಟಿಕ್ ಮಿಸೆಲನಿ(Asiatic Miscellany) ೧೭೮೫ರ ಜನವರಿಯಲ್ಲಿ ಹುಟ್ಟಿಕೊಂಡಿತು. ಸಾಹಿತ್ಯಕ ಮತ್ತು ರಾಜಕೀಯ ವಿಷಯಗಳನ್ನು ಒಳಗೊಂಡು ಇದು ಹೊರಬರುತ್ತಿತ್ತು. ೧೭೯೩ರಿಂದ ಇದೇ ಪತ್ರಿಕೆ ಅತ್ಯಂತ ಪ್ರಸಿದ್ಧವಾದ ಏಶಿಯಾಟಿಕ್ ರಿಸರ್ಚಸ್ (Asiatic Researches) ಎಂದು ಬದಲಾಯಿತು. ಇದು ೧೮೩೯ರ ವರೆಗೂ ಪ್ರಕಟವಾಗುತ್ತಿತ್ತು. ಆ ಕಾಲದ ಶ್ರೇಷ್ಠ ವಿದ್ವಾಂಸರೆಲ್ಲ ಈ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಒಂದು ಶಾಸ್ತ್ರೀಯ ಪತ್ರಿಕೆ ಹೇಗಿರಬೇಕು ಎಂಬುದಕ್ಕೆ ೨೦೦ ವರ್ಷಗಳ ಹಿಂದಿನ ಈ ಪತ್ರಿಕೆ ಒಂದು ಅತ್ಯುತ್ತಮ ಉದಾಹರಣೆ. ಸಾಹಿತ್ಯಕ ಮತ್ತು ಚಾರಿತ್ರಿಕ ಅಂಶಗಳನ್ನು ಒಳಗೊಂಡ ಈ ಪತ್ರಿಕೆ ದೇಶ ಮತ್ತು ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿ, ಸಾಹಿತ್ಯಗಳ ಬಗ್ಗೆ ಅರಿವು ಮೂಡಿಸಿತು.

ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಅಪಾರವಾದ ಕಾಳಜಿ ಹೊಂದಿದ್ದ ಭಾರತದ ಮೊದಲ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನಿಂದ ಪ್ರಭಾವಿತನಾದ ಸರ್ ವಿಲಿಯಂ ಜೋನ್ಸ್ (Sir William Jones) ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಪ್ರಚಾರ ಮಾಡಲು ಉದ್ದೇಶಿಸಿ ಒಂದು ಸಂಸ್ಥೆಯನ್ನು ಸ್ಥಾಪಿಸುವ ಅಗತ್ಯವಿದೆ ಎಂದು ಮನಗಂಡನು. ಹೇಸ್ಟಿಂಗ್ಸ್ ಮತ್ತು ಜೋನ್ಸ್, ಇತರ ಮೂವತ್ತು ಜನ ಯುರೋಪಿಯನ್ ವಿದ್ವಾಂಸರೊಂದಿಗೆ ಸೇರಿ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ (Royal Asiatic Society of Bengal) ಸ್ಥಾಪಿಸಿದರು. ಕ್ರಮೇಣ 'of Bengal' ಕೈಬಿಟ್ಟು ಕೇವಲ ರಾಯಲ್ ಏಶಿಯಾಟಿಕ್ ಸೊಸೈಟಿ ಅಷ್ಟೇ ಉಳಿಯಿತು. ಈ ಸಂಸ್ಥೆಯ ಜೊತೆಯಲ್ಲಿಯೇ ಏಶಿಯಾಟಿಕ್ ಮಿಸೆಲನಿ (Asiatic Miscelany) ಎಂಬ ಪತ್ರಿಕೆಯನ್ನೂ ಆರಂಭಿಸಿದರು. ಈ ಸಂಸ್ಥೆಯ ಮತ್ತು ಸಾಹಿತ್ಯಪತ್ರಿಕೆಯ ಪೋಷಕ ವರ್ಗವು ಆ ಸಂದರ್ಭದಲ್ಲಿ ಹೀಗೆ ಹೇಳಿತು... ..

''ಏಶಿಯಾದ ಇತಿಹಾಸ, ನಾಗರಿಕ ಮತ್ತು ನಿಸರ್ಗ, ಪ್ರಾಚೀನ ಅವಶೇಷಗಳು, ಕಲೆ, ವಿಜ್ಞಾನ ಮತ್ತು ಸಾಹಿತ್ಯವನ್ನು ಸಂಶೋಧನೆ ಮಾಡುವ ಉದ್ದೇಶದಿಂದ ನಾವೆಲ್ಲರೂ ಸದಸ್ಯರಾಗಿರುವ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡಿದ್ದೇವೆ. ನಾವು ಈ ಸಂಸ್ಥೆಯ ಪೋಷಕರಾಗಲು ತಾವು ಒಪ್ಪಿ ಗೌರವಿಸುವಿರಿ ಎಂದು ತಿಳಿದಿದ್ದೇವೆ... ..''

ಇದಕ್ಕೆ ಉತ್ತರವಾಗಿ ಕಂಪನಿ ಸರಕಾರದ ಆಡಳಿತದಲ್ಲಿದ್ದ ಗವರ್ನರ್

ಜನರಲ್ ಹೇಸ್ಟಿಂಗ್ಸ್ (Hastings) ಎಡ್ವರ್ಡ್ ವ್ಹೀಲರ್ (Edward Wheeler), ಜಾನ್ ಮೆಫರ್‌ಸನ್ (John Mepherson) ಮತ್ತು ಜಾನ್ ಸ್ಟೇಬಲ್ಸ್ (John Stables) ಇವರು ಅಧಿಕೃತ ಪೋಷಕರಾಗಲು ಒಪ್ಪಿ ಹೀಗೆಂದರು:

'ಜ್ಞಾನದ ಕ್ಷಿತಿಜವನ್ನು ವಿಸ್ತರಿಸುವಲ್ಲಿ ನೀವು ಕೈಗೊಂಡ ಸಾಹಸಕ್ಕೆ ನಮ್ಮ ಒಪ್ಪಿಗೆ ಮತ್ತು ಮೆಚ್ಚುಗೆ ಇದೆ. ಸ್ಥಳೀಯವಾಗಿ ನಿಮಗಿರುವ ಅನುಕೂಲತೆಗಳು ನಿಮಗೊಂದು ಸ್ಥಾನವನ್ನು ದೊರಕಿಸುವುದು. ಇದನ್ನು ನೀವು ಜಗತ್ತಿನ ಯಾವುದೇ ಮೂಲೆಗೂ ವಿಸ್ತರಿಸಬಹುದು. ಈ ಮಹಾಶಯರ ಸಾಮರ್ಥ್ಯ ಮತ್ತು ಪ್ರತಿಭೆಯ ಬಗ್ಗೆ ನಮಗಿರುವ ವೈಯಕ್ತಿಕ ಅರಿವಿನಿಂದ ಈ ಒಂದು ಮಹಾನ್ ಸಾಧನೆ ಸಾಧ್ಯವೆಂದು ನಾವುಆಸೆ ತಳೆದಿದ್ದೇವೆ.'

ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಇದರ ಸ್ಥಾಪನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಲ್ಲಿ ಹಿಂದೂ ನ್ಯಾಯ ಶಾಸ್ತ್ರವನ್ನೆಲ್ಲ ಸಮೀಕರಿಸಿ ದಿ ಕೋಡ್ ಆಫ್ ಹಿಂದೂ ಲಾಸ್ (The code of Hindu Laws) ಎಂಬ ಗ್ರಂಥ ಪ್ರಕಟಿಸಿದ ಹಾಲ್ಹೆಡ್ (Nathaniel B. Halhed) ಮತ್ತು ಸಾಹಿತಿ ಚಾರ್ಲ್ಸ್ ವಿಲ್ಕಿನ್ಸ್ (Charls Wilkins) ಕೂಡ ಇದ್ದಾರೆ.

ರಾಯಲ್ ಏಶಿಯಾಟಿಕ್ ಸೊಸೈಟಿಯ ಮೊದಲ ಅಧ್ಯಕ್ಷ ವಾರೆನ್ ಹೇಸ್ಟಿಂಗ್ಸ್‌ನೇ ಆಗಿದ್ದನು. ಅವನ ಬಳಿಕ ೧೭೮೫ರಿಂದ ತನ್ನ ಕಡೆಯ ದಿನದ ವರೆಗೂ ವಿಲಿಯಂ ಜೋನ್ಸ್ ಆದರ ಅಧ್ಯಕ್ಷನಾಗಿದ್ದನು. ರಾಯಲ್ ಏಶಿಯಾಟಿಕ್ ಸೊಸೈಟಿಯ ಸ್ಥಾಪನೆಯಿಂದ ಬರಿ ಭಾರತವಷ್ಟೇ ಅಲ್ಲ ಏಶಿಯಾ ಖಂಡದ ಸಾಹಿತ್ಯ ಪ್ರಪಂಚದಲ್ಲಿ ಅರುಣೋದಯವಾಯಿತು. '... ೧೭೮೪ರ ಜನವರಿಯಲ್ಲಿ ರಾಯಲ್ ಏಶಿಯಾಟಿಕ್ ಸೊಸೈಟಿ ಸ್ಥಾಪನೆಯಾದುದು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು.'

ಏಶಿಯಾಟಿಕ್ ಸೊಸೈಟಿಯ ಉದ್ಘಾಟನೆ ಸಂದರ್ಭದಲ್ಲಿ ಮಾತನಾಡಿದ ಸರ್ ವಿಲಿಯಂ ಜೋನ್ಸ್ 'ಸಂಸ್ಕೃತದ ಖಜಾನೆ ಕೀಲಿ ಈಗ ತೆರೆಯುವುದೆಂದು ನಾವು ಈಗ ಆಶಿಸಬಹುದು' ಎಂದು ಹೇಳಿದ್ದು ಗಮನಾರ್ಹ. ಇದು ಕೇವಲ ಸಂಸ್ಕೃತ ಭಾಷೆಯ ಖಜಾನೆಯ ಕೀಲಿ ತೆರೆಯಲಿಲ್ಲ. ಭಾರತದ ಎಲ್ಲ ಭಾಷೆಗಳ ಖಜಾನೆಯ ಕೀಲಿ ತೆರೆಯಿತು.

ರಾಯಲ್ ಏಶಿಯಾಟಿಕ್ ಸೊಸೈಟಿಯು ಏಶಿಯಾಟಿಕ್ ರಿಸರ್ಚಸ್ ಪತ್ರಿಕೆಯಲ್ಲದೆ 'ದಿ ಜರ್ನಲ್ ಆಫ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' (೧೮೩೨-೧೮೭೨) (The Journal of Asiatic Society of Bengal) ಎಂಬ ಪತ್ರಿಕೆಯನ್ನೂ ಹೊರಡಿಸಿತು. ಇದೂ ತುಂಬಾ ಜನಪ್ರಿಯವಾಗಿತ್ತು. ಅದಲ್ಲದೆ ೧೮೩೨ರಿಂದ ವಿಜ್ಞಾನ ವಿಷಯಗಳನ್ನು ಪ್ರಕಟಿಸುವ ಒಂದು ಮಾಸಿಕವನ್ನು ಹೊರಡಿಸಿತು.

ಸೊಸೈಟಿಯ ಸ್ಥಾಪಕರಲ್ಲೊಬ್ಬನಾದ ಸರ್ ವಿಲಿಯಂ ಜೋನ್ಸ್ ಅಂದಿನ ಪಾಶ್ಚಾತ್ಯ ಸಾಹಿತಿಗಳಿಗೆ, ಕಲಾವಿದರಿಗೆ ಮತ್ತು ಸಂಶೋಧಕರಿಗೆ ನೀಡಿದ ಕರೆಯಿಂದ ಅದರ ಧೋರಣೆಯನ್ನೂ ತಿಳಿದುಕೊಳ್ಳಬಹುದು.

"ನಿಸರ್ಗದ ವಿಶಾಲವಾದ ಚೌಕಟ್ಟಿನಲ್ಲಿ ಯಾವುದು ಅಪರೂಪದ್ದೋ ಅದನ್ನು ನೀವು ಸಂಶೋಧನೆ ಮಾಡಿರಿ. ಹೊಸದಾದ ನಿರೀಕ್ಷಣೆಗಳು ಮತ್ತು ಶೋಧಗಳಿಂದ ಏಶಿಯಾದ ಭೂಗೋಳವನ್ನು ಸರಿಪಡಿಸಿರಿ. ಯಾವ ದೇಶಗಳ ಜನರು ಕಾಲಕಾಲಕ್ಕೆ ತಮ್ಮ ಪೂರ್ವ ಕಥೆಗಳು, ಸಂಪ್ರದಾಯಗಳನ್ನು ನಿರ್ಲಕ್ಷ್ಯ ಮಾಡಿದ್ದಾರೋ ಅವುಗಳನ್ನು ಹುಡುಕಿ ತೆಗೆಯಿರಿ. ಅವರ ವಿವಿಧ ನಾಗರಿಕ ಧಾರ್ಮಿಕ ಸಂಸ್ಥೆಗಳು, ಅವರ ವಿವಿಧ ಸರಕಾರಗಳ ಸ್ವರೂಪಗಳ ಮೇಲೆ ಬೆಳಕನ್ನು ಚೆಲ್ಲಿರಿ. ಅವರು ಅಂಕ ಗಣಿತ ಮತ್ತು ಜ್ಯಾಮಿತಿ, ತ್ರಿಕೋನಮಿತಿ, ಕ್ಷೇತ್ರ ಗಣಿತ, ಯಾಂತ್ರಿಕತೆ, ಪ್ರಕಾಶ ವಿಜ್ಞಾನ, ಖಗೋಳ ಶಾಸ್ತ್ರ ಮತ್ತು ಭೌತ ಶಾಸ್ತ್ರಗಳಲ್ಲಿ ಸಾಧಿಸಿರುವ ಹೆಚ್ಚುಗಾರಿಕೆಯನ್ನು ನೀವು ಪರೀಕ್ಷಿಸಿ. ಅವರ ನ್ಯಾಯಶಾಸ್ತ್ರ ವ್ಯಾಕರಣ, ಸಾಹಿತ್ಯ, ಅಲಂಕಾರ ಮತ್ತು ಉಪಭಾಷೆ ಪದ್ಧತಿಯನ್ನು, ಶಸ್ತ್ರ ಚಿಕಿತ್ಸೆ, ಔಷಧಗಳಲ್ಲಿ ಅವರಿಗಿರುವ ಪರಿಣತಿ, ಅದು ಶರೀರ ಕ್ರಿಯಾ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳೇ ಇರಬಹುದು ಅವರು ಎಷ್ಟು ಮುಂದುವರಿದಿದ್ದಾರೆ ಎಂಬುದನ್ನು ಗುರುತಿಸಿ"

"ಅವರ ಕೃಷಿ, ಉತ್ಪಾದನೆ ಮತ್ತು ವ್ಯಾಪಾರ ಇವುಗಳ ಬಗ್ಗೆ ನೀವು ಸಂಶೋಧನೆ ಮಾಡಿ. ಅವರ ಸಂಗೀತ, ವಾಸ್ತು, ಕಲೆ, ಚಿತ್ರಕಲೆ ಮತ್ತು ಕಾವ್ಯಗಳ ಬಗ್ಗೆ ವಿಚಾರಿಸುವಾಗ ಅವರ ಕ್ಷುಲ್ಲಕವೆನಿಸುವ ಕಲೆಗಳನ್ನೂ ನಿರ್ಲಕ್ಷಿಸಬೇಡಿ. ಏಕೆಂದರೆ ಅವುಗಳೇ ಸಾಮಾಜಿಕ ಬದುಕಿಗೆ ಲಾಲಿತ್ಯ, ನೆಮ್ಮದಿಗಳನ್ನು ತರಬಲ್ಲವು, ಉತ್ತಮಪಡಿಸಬಲ್ಲವು."

ವಿಲಿಯಂ ಜೋನ್ಸ್ ನೀಡಿದ ಕರೆ ಹುಸಿಯಾಗಲಿಲ್ಲ. ಪತ್ರಿಕೆಯು ಹೆಸರಿಗೆ ತಕ್ಕಂತೆ ಅದು ಏಶಿಯಾದ ಸಾಂಸ್ಕೃತಿಕ ಆಯಾಮಗಳ ಅಪರಿಚಿತ ಮುಖವನ್ನು ಅನಾವರಣಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಈ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳೂ ಸೇರಿದಂತೆ ಸೊಸೈಟಿಯು ಅನೇಕ ಮಹತ್ವದ ಗ್ರಂಥಗಳನ್ನು ಪ್ರಕಟಿಸಿತು. 'ಏಶಿಯಾಟಿಕ್ ರಿಸರ್ಚಸ್' ಕೇವಲ ಸಾಹಿತ್ಯಪತ್ರಿಕೆಯಾಗದೆ ಸಾಂಸ್ಕೃತಿಕ ನೆಲೆಯಲ್ಲಿಯೂ ತೆರೆದುಕೊಂಡಿತು. ಇದೇ ತರದ ಕಾರ್ಯ ಕನ್ನಡದ ಸಂದರ್ಭದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘ ಮತ್ತು ಅದರ 'ವಾಗ್ಭೂಷಣ' ಪತ್ರಿಕೆ, ಮೈಸೂರಿನಲ್ಲಿ 'ಪ್ರಬುದ್ಧ ಕರ್ನಾಟಕ'ಗಳು ಮಾಡಿದ್ದನ್ನು ಗಮನಿಸಬಹುದು.

'ರಾಯಲ್ ಏಶಿಯಾಟಿಕ್ ಸೊಸೈಟಿ'ಯ ಶಾಖೆಗಳು ಮುಂಬಯಿಯಲ್ಲಿ ೧೮೨೯ರಲ್ಲೂ, ಸಿಲೋನಿನಲ್ಲಿ ೧೮೪೫ರಲ್ಲೂ ಆರಂಭವಾದವು. ಚೀನಿ ಸಾಹಿತ್ಯದ ಪ್ರತಿಭಾವಂತ ವಿದ್ವಾಂಸ ಸರ್ ಜೆ.ಎಫ್. ಡೇವಿಸ್ (Sir J.F. Davies) ಇವನು ೧೮೪೭ರಲ್ಲಿ ಹಾಂಗ್‌ಕಾಂಗ್‌ನಲ್ಲಿ ಇದರ ಶಾಖೆ ಆರಂಭಿಸಿದನು.

ಏಶಿಯಾಟಿಕ್ ರಿಸರ್ಚಸ್ ಮಾದರಿಯಲ್ಲಿಯೇ ಕೆಲವು ಸಾಹಿತ್ಯಪತ್ರಿಕೆಗಳು ಅಂದಿನ ಕಾಲದಲ್ಲಿಯೇ ಹುಟ್ಟಿಕೊಂಡವು. ಇಂಗ್ಲಂಡಿನಲ್ಲಿ 'ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಆ್ಯಂಡ್ ಐರ್ಲಂಡ್' ಸಂಸ್ಥೆಯನ್ನು 1823ರಲ್ಲಿ ಆರಂಭಿದ ಸರ್ ಹೆನ್ರಿ ಕೂಲ್‌ಬ್ರೂಕ್ (Sir Henry Cole brooke) ಏಶಿಯಾಟಿಕ್ ರಿಸರ್ಚಸ್ ಪತ್ರಿಕೆಯ ಮಾದರಿ ಮತ್ತು ಫೋಲಿಯೋ (folio) ಪುಟಗಳಲ್ಲಿ ಭಾರತೀಯ ಸಾಹಿತ್ಯ ಪ್ರಚಾರಕ್ಕಾಗಿಯೇ ಪತ್ರಿಕೆಯೊಂದನ್ನು ಹೊರ ತಂದನು. ಇದು ವಿದೇಶದಿಂದ ಭಾರತೀಯ ಸಾಹಿತ್ಯ ಪ್ರಚಾರಕ್ಕಾಗಿ ತಂದ ಪತ್ರಿಕೆ.

ಮದ್ರಾಸು, ಕಲ್ಕತ್ತಾಗಳಿಂದ 'ಲಿಟರರಿ ರಿವ್ಯೂ (Literary Review) ಇತ್ಯಾದಿ ಸಾಹಿತ್ಯಪತ್ರಿಕೆಗಳು ಹೊರಟಿದ್ದವು. ಇದೇ ಮಾರ್ಗದಲ್ಲಿಯೇ ಜೇಮ್ಸ್ ಬರ್ಜೆಸ್ (James Burgess) ಇವನ 'ಇಂಡಿಯನ್ ಎಂಟಿಕ್ವರಿ' (Indian Antiquary) ಹೊರಬಂತು. ಇದು ೧೮೭೨ರ ಜನವರಿ ತಿಂಗಳಲ್ಲಿ ಪ್ರಾರಂಭವಾಯಿತು. ಇದರಲ್ಲಿ ಸಾಹಿತ್ಯಕ ಹಾಗೂ ಇತರ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಲಾಗುತ್ತಿತ್ತು. ಇದರ ಮೊದಲ ಸಂಚಿಕೆಯಲ್ಲಿ ಜೇಮ್ಸ್ ಬರ್ಜೆಸ್, 'ವಿವಿಧ ಏಶಿಯಾಟಿಕ್ ಸೊಸೈಟಿಗಳು ಹೊರಡಿಸಿರುವ ಪತ್ರಿಕೆಗಳಲ್ಲಿ ಓದುಗರಿಗೆ ಕಾಣಲು ಸಿಗದೆ ಇರುವಂಥ ಅತ್ಯುತ್ತಮ ಲೇಖನಗಳು, ಟಿಪ್ಪಣಿಗಳು, ಜ್ಞಾಪಕ ಪತ್ರಗಳು ಇದರಲ್ಲಿ ದೊರೆಯುವ ಕಾರಣ ಆ ಎಲ್ಲ ಪತ್ರಿಕೆಗಳಿಗೆ 'ಇಂಡಿಯನ್ ಎಂಟಿಕ್ವರಿ ಒಂದು ಪೂರಕ ಪತ್ರಿಕೆಯಾಗಲಿದೆ. ಭಾರತದ ವಿವಿಧೆಡೆಯ ಖಾಸಗಿಯಾದ ಸಮಾಚಾರಗಳ ಮೂಲಕವೇ ಇಂಥದೊಂದು ಪತ್ರಿಕೆಯ ಅಗತ್ಯವನ್ನು ಅರಿಯಲಾಗಿದೆ', ಎಂದು ಬರೆದನು. ಸದ್ಯ ಇರುವ ಪತ್ರಿಕೆಗಳಿಗಿಂತ ಭಿನ್ನವಾಗಿ ಆದರೆ ಅವುಗಳಿಗೆ ಪೂರಕವಾಗಿ ತನ್ನ ಪತ್ರಿಕೆಯನ್ನು ತರಬೇಕೆಂಬ ಬರ್ಜೆಸ್‌ನ ವಿಚಾರವನ್ನು ಇಲ್ಲಿ ತಿಳಿದುಕೊಳ್ಳಬಹುದು. ಈ ಪತ್ರಿಕೆಯಲ್ಲಿ ಬರ್ಜೆಸ್ ಓರ್ವನೆ ಈ ದೇಶದ ಸಾಹಿತ್ಯ, ಚರಿತ್ರೆ, ವಾಸ್ತು ಶಿಲ್ಪ ಮೊದಲಾದವುಗಳ ಕುರಿತು ೫೦೦ಕ್ಕೂ ಅಧಿಕ ಲೇಖನಗಳನ್ನು ಬರೆದು ಪ್ರಕಟಿಸಿದನು.

'ಇಂಡಿಯನ್ ಎಂಟಿಕ್ವರಿ' ಪತ್ರಿಕೆಯ ಸ್ಥಾಪನೆಯ ಉದ್ದೇಶದ ಬಗ್ಗೆ ಬರ್ಜೆಸ್ ಹೇಳಿದ ಮಾತುಗಳು ಮಹತ್ವದ್ದು. ಭಾರತೀಯ ಮತ್ತು ಐರೋಪ್ಯ ವಿದ್ವಾಂಸರು ಭಾರತೀಯ ಪ್ರಾಚೀನ ಅವಶೇಷಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತೋರಿಸುತ್ತಿರುವ ಅತ್ಯಂತ ಆಸಕ್ತಿಯು ನಿಯೋಜಕರಿಗೆ (ಪತ್ರಿಕೆ ಆರಂಭಿಸುವವರಿಗೆ) ಪತ್ರಿಕೆಯೊಂದನ್ನು ಪ್ರಕಟಿಸುವುದಕ್ಕೆ ಪ್ರೇರಣೆ ನೀಡಿದೆ. ಇದರಿಂದ ಭಾರತ, ಯುರೋಪ, ಅಮೆರಿಕಗಳ ವಿವಿಧ ಪ್ರಾಂತ್ಯಗಳಲ್ಲಿರುವ ಪ್ರಾಚ್ಯ ಶಾಸ್ತ್ರಜ್ಞರು, ಪ್ರಾಕ್ತನ ತಜ್ಞರ ನಡುವೆ ಸೂಕ್ತ ಸಂಪರ್ಕ ಮಾಧ್ಯಮವೊಂದನ್ನು ಒದಗಿಸಿದಂತೆ ಆಗುವುದು ಎಂಬ ಮಾತುಗಳಲ್ಲಿ ಬರ್ಜೆಸ್‌ನ ದೂರಗಾಮಿ ಚಿಂತನೆಯನ್ನು ನಾವಿಲ್ಲಿ ಗುರುತಿಸಬಹುದು.

ಪಾಶ್ಚಾತ್ಯ ವಿದ್ವಾಂಸರು ಕೈಗೊಂಡ ಈ ಕ್ರಮಗಳಿಂದಾಗಿ ಭಾರತೀಯ

ಸಾಹಿತ್ಯ ಸಂಸ್ಕೃತಿಯ ಬಗೆಗೆ ಜಗತ್ತಿನ ಎಲ್ಲೆಡೆ ಅರಿವು ಮೂಡಿಸುವುದು ಸಾಧ್ಯವಾಯಿತು.

ಕನ್ನಡದಲ್ಲಿ: ಕನ್ನಡದ ಆರಂಭದ ಪತ್ರಿಕೆಯನ್ನು ಹೊರಡಿಸಿದವರು ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯಲ್ಲಿ ಮತ ಪ್ರಚಾರಕನಾಗಿದ್ದ ರೆವರೆಂಡ್ ಹರ್ಮನ್ ಮೋಗ್ಲಿಂಗ್. ೧೮೪೨ರಲ್ಲಿ ಪ್ರಾರಂಭವಾದ 'ಮಂಗಳೂರು ಸಮಾಚಾರ'ವು ೧೫ ದಿನಗಳಿಗೊಮ್ಮೆ ನಾಲ್ಕಾರು folio ಪುಟಗಳಲ್ಲಿ ಪ್ರಕಟವಾಗುತ್ತಿತ್ತು. ಆರಂಭದಲ್ಲಿ ಕೈ ಬರೆಹದಲ್ಲೇ ಬರುತ್ತಿತ್ತು. ನಂತರ ಶಿಲಾ ಮುದ್ರಣ ಯಂತ್ರ (cyclostyle)ದಲ್ಲಿ ಮುದ್ರಣಗೊಳ್ಳುತ್ತಿತ್ತು. ಕೆಲವೊಮ್ಮೆ ಇದು ಚಿತ್ರಗಳನ್ನು ಒಳಗೊಂಡಿರುತ್ತಿತ್ತು. ಬೈಬಲ್ಲಿನ ಹೊಸ ಒಡಂಬಡಿಕೆ(New Testament)ಯ ಕನ್ನಡ ಭಾಷಾಂತರ ಇದರಲ್ಲಿ ಧಾರಾವಾಹಿಯಾಗಿ ಬಂದಿದೆ. ಬೈಬಲ್ ಪ್ರಕಟವಾದ ಮಾತ್ರಕ್ಕೇ 'ಮಂಗಳೂರು ಸಮಾಚಾರ'ಕ್ಕೆ ಸಾಹಿತ್ಯಪತ್ರಿಕೆಯ ಸ್ಥಾನವನ್ನು ಕೊಡುವುದು ಸಾಧ್ಯವಿಲ್ಲ. ಮಂಗಳೂರು ಸಮಾಚಾರದಂಥ 'ಪತ್ರಿಕೆಗಳ ಮುದ್ರಣಕ್ಕೆ ಮತ್ತು ಪ್ರಕಟಣೆಗೆ ದೇಶದ ಎಲ್ಲ ಕೈಸ್ತ ಮತ ಪ್ರಚಾರ ಸಂಸ್ಥೆಗಳೂ ಹಣ ಸಹಾಯವನ್ನೊದಗಿಸಿದ್ದಲ್ಲದೆ ಕೈಸ್ತ ಮುದ್ರಣಾಲಯಗಳು ಹಲವು ಸಂದರ್ಭಗಳಲ್ಲಿ ಉಚಿತವಾಗಿಯೇ ಅವನ್ನು ಅಚ್ಚು ಹಾಕಿಸಿ ಹೊರತರುತ್ತಿದ್ದವು. ಅಂದಿನ ಧರ್ಮಗುರುಗಳ ಪೈಕಿ ಪ್ರಬಲ ಸಾಹಿತಿಗಳಾದವರು ಅಂಥ ನೂರಾರು ಪತ್ರಿಕೆಗಳಿಗೆ ಇಂಗ್ಲಿಷ್‌ನಲ್ಲೂ ಕನ್ನಡದಲ್ಲೂ ಲೇಖನಗಳನ್ನು ಬರೆಯುತ್ತಿದ್ದರು. ಆದರೆ ಅವರ ಬರೆವಣಿಗೆಗಳೆಲ್ಲವೂ ತಮ್ಮ ಮತದ ಮೇಲ್ಮೆಯನ್ನೂ ಪ್ರಭಾವವನ್ನೂ ಮೇಲೆತ್ತಿ ಜನಕ್ಕೆ ತಿಳಿಸುವುದರಲ್ಲೇ ಕೇಂದ್ರೀಕೃತವಾಗಿತ್ತೆಂಬುದನ್ನು ನೆನಪಿಡಬೇಕಾಗಿದೆ'.[೨೦] ಕೈಸ್ತ ಮಿಶನರಿಗಳು ಹೊರಡಿಸುತ್ತಿದ್ದ ಪತ್ರಿಕೆಗಳ ಕೇಂದ್ರ ಭಾವ ಮತ ಪ್ರಚಾರ ಆಗಿದ್ದ ಕಾರಣ ಅವರಿಗೆ ತಾವು ಹೇಳುವುದೇ ಮುಖ್ಯವಾಗಿತ್ತು. ಮತ್ತು ಮತಗಳ ಖಂಡನೆಯೂ ಅವರ ಹವ್ಯಾಸವಾಗಿತ್ತು. ಹೀಗಾಗಿ ಕನ್ನಡ ಭಾಷೆಯನ್ನು ಬೆಳೆಸಬೇಕು, ಸ್ಥಳೀಯ ಸಾಹಿತ್ಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಬೇಕು ಎಂಬ ವಿಚಾರ ಅವರಲ್ಲಿ ಇರಲಿಲ್ಲ. ಇಂಥ ಭಾವಗಳು ಸಾಹಿತ್ಯಪತ್ರಿಕೆಗಳ ಹಿಂದೆ ಇರಬೇಕಾದುದು ಅಗತ್ಯ.

೧೮೫೭ರಲ್ಲಿ ಮಂಗಳೂರಿನಲ್ಲಿದ್ದ ರೆ.ಜಾನ್ ಮ್ಯಾಕ್ (Rev. John Mack) ಎಂಬವರು ಆರಂಭಿಸಿದ 'ಸಚಿತ್ರ ಕನ್ನಡ ಸಾಹಿತ್ಯ ಪತ್ರಿಕೆ' ಐತಿಹಾಸಿಕವಾಗಿ ಕನ್ನಡದ ಮೊದಲ ಸಾಹಿತ್ಯ ಪತ್ರಿಕೆ. ೧೮೬೩ರ ವರೆಗೂ ನಡೆದ ಈ ಪತ್ರಿಕೆಯು ತನ್ನನ್ನು 'ಸಾಹಿತ್ಯಪತ್ರಿಕೆ' ಎಂದು ಮೊದಲು ಕರೆದುಕೊಂಡಿದೆ. ಹೀಗಾಗಿ ಇದಕ್ಕೆ ಐತಿಹಾಸಿಕ ಮಹತ್ವವಿದೆ. ರೆ.ಜಾನ್ ಮ್ಯಾಕ್‌ಗೆ ಸಹಾಯಕರಾಗಿ ರೆ.ಎಫ್. ಕಿಟ್ಟೆಲ್ ಇದ್ದರು. ಕಿಟ್ಟೆಲ್ ಈ ಪತ್ರಿಕೆಯ ಸಂಪಾದಕರೂ ಹೌದು. ಈ ಪತ್ರಿಕೆಯನ್ನು ಅವರು 'ಬಾಂಬೆ ಕೆನರೀಸ್ ವರ್ನಾಕ್ಯುಲರ್ ಸೊಸೈಟಿ' (Bombay Canarese Vernacular Society) ಇದರ ಆಶ್ರಯದಲ್ಲಿ ನಡೆಸುತ್ತಿದ್ದರು.

೨೦. ಪಾ.ವಿ.ಕ.ಸೇವೆ. ಪುಟ- ೩೦೮, .ಮಾ. ಮುತ್ತಣ್ಣ

ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದ ಅದು ೧೦-೧೨ ಫೂಲ್ ಸ್ಕೇಪ್ (foolscap) ಪುಟಗಳಿಂದ ಹೊರಬರುತ್ತಿತ್ತು. ಬೈಬಲ್ ಮತ್ತು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು ಇದರಲ್ಲಿ ಇರುತ್ತಿದ್ದವು. ಬಣ್ಣದ ಚಿತ್ರಗಳೂ ಇರುತ್ತಿದ್ದವು.

ಈ ಪತ್ರಿಕೆಯನ್ನು ದಿ ಇಲ್‌ಸ್ಟ್ರೇಟೆಡ್ ಕೆನರೀಸ್ ಜರ್ನಲ್ (The Illustrated Canarese Journal) 'ವಿಚಿತ್ರ ವರ್ತಮಾನ ಸಂಗ್ರಹ' ಎಂಬುದಾಗಿಯೂ ಕರೆಯಲಾಗುತ್ತಿತ್ತು. ಈ ಪತ್ರಿಕೆಯ ೧೮೭೨ರ ಸಂಚಿಕೆಯೊಂದರಲ್ಲಿ ಜಾನ್ ಮ್ಯಾಕ್ ಮತ್ತು ಎಫ್. ಕಿಟ್ಟೆಲ್ ಅವರು "ಕನ್ನಡ ವಿಚಿತ್ರ ವರ್ತಮಾನ ಸಂಗ್ರಹ ಎಂಬ ಈ ಪತ್ರಿಕೆಯಲ್ಲಿ ಪರದೇಶಗಳಲ್ಲಿಯೂ ಇಂಡಿಯಾದಲ್ಲಿಯೂ ನಡೆದ ಮುಖ್ಯ ವರ್ತಮಾನವೂ ರಾಜ ಸಂಬಂಧವಾದ ಮತ್ತು ಸಾಧಾರಣವಾದ ಹಲ ಬಗೆಯ ಮುಖ್ಯವಾದ ಸಂಗತಿಗಳ ವೃತ್ತಾಂತವೂ, ನವಕೃತ ರಚಿಸುವಿಕೆಗಳೂ, ಶೋಧನೆಗಳೂ ಬೋಧನೆಗಳೂ ತಿಳುವಳಿಕೆಗಳೂ ಪದ್ಯಗಳೂ ವಿದ್ಯೆ ವ್ಯಾಪಾರ ಇತ್ಯಾದಿಗಳ ವರ್ತಮಾನವೂ ವಾಡಿಕೆಯಾಗಿ ನಡಿಯುವ ಸ್ಥಿತಿಗಳ ಸಮಾಚಾರವೂ, ಗಣಿತ, ಚರಿತ್ರೆ, ಭೂಗೋಳ ಶಾಸ್ತ್ರ ಸೃಷ್ಟಿ ವಸ್ತು ವರ್ಣನೆ, ಮನುಷ್ಯ ದೇಹ ಲಕ್ಷಣ ಇತ್ಯಾದಿ ಶಾಲಾ ಪ್ರಯೋಜನಾರ್ಥಕವಾದ ಪುಸ್ತಕಗಳಿಂದ ಸಹ ಸ್ವಲ್ಪಸ್ವಲ್ಪವೂ ಪ್ರಖ್ಯಾತಿ ಪಟ್ಟವರು ಬರೆದ ಪುಸ್ತಕಗಳಿಂದ ತೆಗೆದ ಆರೈಯ್ಯವೂ, ಶ್ರೇಷ್ಠರ ವೃತ್ತಾಂತವೂ, ಸಂಚಾರ, ಸಮುದ್ರ ಪಯಣ, ಯುದ್ಧ ಪ್ರಯಾಣ ಇತ್ಯಾದಿ ಸಂಗತಿಗಳೂ, ಎಲ್ಲಾ ಜನಾಂಗಗಳಲ್ಲಿಯೂ ಪೂರ್ವದಲ್ಲಿ ನಡೆದ ಅಪರೂಪ ಸಂಗತಿಗಳ ವಿಷಯವೂ.. .. .." ಎಲ್ಲವನ್ನೂ ಒಳಗೊಂಡಿರುವುದೆಂದು ಹೇಳಿದರು. ಗಂಭೀರ ಉದ್ದೇಶದ ಈ ಪತ್ರಿಕೆಯನ್ನು ಗಮನಿಸಿದಾಗ ಇದು ಶಾಸ್ತ್ರ- ಸಾಹಿತ್ಯದ ಪತ್ರಿಕೆ ಎಂದು ನಿಶ್ಚಯವಾಗಿ ಹೇಳ ಬಹುದು. ನವಕೃತ ರಚಿಸುವಿಕೆಗಳೂ... ಕತೆಗಳೂ, ನೀತಿ ಕತೆಗಳೂ, ಪದ್ಯಗಳೂ.... ಇತ್ಯಾದಿಗಳನ್ನು ಪ್ರಕಟಿಸುವ ಮೂಲಕ ಅದು ಸಾಹಿತ್ಯದ ಪೋಷಣೆ ಮಾಡಿತು. ಇಲ್ಲಿ ಜಾನ್ ಮ್ಯಾಕ್ ಮತ್ತು ಎಫ್.ಕಿಟ್ಟೆಲ್ ಅವರು ಬರೆದಿರುವ ಮಾತುಗಳಿಗೂ 'ರಾಯಲ್ ಏಶಿಯಾಟಿಕ್ ಸೊಸಾಯಿಟಿ'ಯನ್ನು ಆರಂಭಿಸಿದ ಸರ್ ವಿಲಿಯಂ ಜೋನ್ಸ್ ಅಂದಿನ ಪಾಶ್ಚಾತ್ಯ ಸಾಹಿತಿಗಳಿಗೆ, ಕಲಾವಿದರಿಗೆ ಮತ್ತು ಸಂಶೋಧಕರಿಗೆ ನೀಡಿದ ಕರೆಗೂ ಸಾಮ್ಯ ಕಂಡುಬರುತ್ತದೆ. ಇವನ್ನೆಲ್ಲ ಗಮನಿಸಿದಾಗ 'ಕನ್ನಡ ವಿಚಿತ್ರ ವರ್ತಮಾನ ಸಂಗ್ರಹ'ವೇ ಕನ್ನಡದ ಮೊದಲ ಶಾಸ್ತ್ರೀಯ ಸಾಹಿತ್ಯಪತ್ರಿಕೆ ಎಂದು ಕರೆಯಿಸಿಕೊಳ್ಳುವ ಅರ್ಹತೆ ಪಡೆದಿದಿದೆ.

ಇದೇ ಸುಮಾರಿನಲ್ಲಿದ್ದ ಬೆಂಜಮಿನ್ ರೈಸ್ ಅವರ 'ಅರುಣೋದಯ'ದಲ್ಲಿ ಕನ್ನಡ ಕಾವ್ಯ, ದಾಸರ ಪದಗಳು ಇತ್ಯಾದಿಗಳನ್ನು ಅನುಕರಿಸಿದ ಹಲವು ಪದ್ಯಗಳು ಹಾಗೂ ಆಂಗ್ಲ ಭಾಷೆಯಿಂದ ಅನುವಾದಗೊಂಡ ಹಲವು ಪದ್ಯಗಳು ದೊರೆಯುತ್ತವೆ. ಇದೆಲ್ಲ ಮತಪ್ರಚಾರದ ದೃಷ್ಟಿಯಿಂದ ಮಾಡಿರುವ ಕಾರಣ ಅದನ್ನು ಸಾಹಿತ್ಯಪತ್ರಿಕೆ ಎಂದು ಕರೆಯುವ ಹಾಗಿಲ್ಲ. ಇದೇ ಕಾಲಕ್ಕೆ ಹುಟ್ಟಿದ್ದ 'ಕರ್ನಾಟಕ ವಾಗ್ವಿಧಾಯಿನೀ' ಪತ್ರಿಕೆಯು

ಪ್ರಬಲವಾದ ಒಂದು ಸಾಹಿತ್ಯಪತ್ರಿಕೆಯಾಗಿತ್ತು ಎಂಬ ಮಾತನ್ನು ಐ.ಮಾ. ಮುತ್ತಣ್ಣ ಹೇಳಿದ್ದಾರೆ.[೨೧] ಮೈಸೂರಿನಿಂದ ಹೊರಡುತ್ತಿದ್ದ ಈ ಪತ್ರಿಕೆಯಲ್ಲಿ ರೆ.ಎಫ್.ಕಿಟ್ಟೆಲ್ ಅವರೂ ಕೆಲಸ ಮಾಡಿದ್ದಾರೆ. ಇದರಲ್ಲಿ ಕಿಟ್ಟೆಲ್ ಅವರು ರೆ.ಡಾ.ಸ್ಯಾಂಡರ್‌ಸನ್ ಮತ್ತು ಜಾನ್ ಗ್ಯಾರೆಟ್ ಅವರೊಂದಿಗೆ ಸೇರಿಕೊಂಡು ಕನ್ನಡ ವ್ಯಾಕರಣವನ್ನು ಧಾರಾವಾಹಿಯಾಗಿ ಪ್ರಕಟಿಸಿದರು. ೧೮೫೯ರಲ್ಲಿ ಪ್ರಾರಂಭವಾದ 'ವೃತ್ತಾಂತ ಬೋಧಿನಿ'ಯಲ್ಲಿ ಕಿಟ್ಟೆಲ್ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಲೇಖನವನ್ನು ಬರೆದರು.

ಕನ್ನಡಿಗರೇ ಆರಂಭಿಸಿದ ಸಾಹಿತ್ಯಪತ್ರಿಕೆ ಯಾವುದು ಎಂಬುದನ್ನು ಗಮನಿಸುವಾಗ ಹಲವು ಗೊಂದಲಗಳು ಎದುರಾಗುತ್ತವೆ. ಇದಕ್ಕೆ ಮುಖ್ಯ ಕಾರಣ ಎಂದರೆ ಆ ಕಾಲದ ಹಲವು ಪತ್ರಿಕೆಗಳು ಇಂದು ನೋಡುವುದಕ್ಕೂ ಲಭ್ಯವಿಲ್ಲದಿರುವುದು.ಬೇರೆಬೇರೆ ಗ್ರಂಥಗಳಲ್ಲಿ ಬಂದಿರುವ ಉಲ್ಲೇಖಗಳು, ಕೆಲವು ಪ್ರಕಟವಾಗಿರುವ ಲೇಖನಗಳ ನೆಲೆಯಿಂದಲೇ ಅವುಗಳ ಸ್ವರೂಪವನ್ನು ನಿರ್ಧರಿಸಬೇಕಾಗಿದೆ. ಇದಕ್ಕೊಂದು ಸಣ್ಣ ಉದಾಹರಣೆ ಇಲ್ಲಿದೆ.

'ಚಿನ್ನದ ಗರಿ'ಯಲ್ಲಿ 'ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ಪತ್ರಿಕೋದ್ಯಮ' ಎಂಬ ಲೇಖನ ಬರೆದಿರುವ ಶಂಕರ ಪಾಟೀಲರು, "ಉತ್ತರ ಕರ್ನಾಟಕದಲ್ಲಿಯ ಈ ಕಾಲದಲ್ಲಿಯ ಮುಖ್ಯವಾದ ಸಾಹಿತ್ಯಿಕ ಪತ್ರಿಕೆಗಳೆಂದರೆ ಕಲಾದಗಿಯಿಂದ ಹೊರಡುತ್ತಿದ್ದ 'ಹಿತೇಚ್ಛು', ಧಾರವಾಡದಿಂದ ಹೊರಡುತ್ತಿದ್ದ 'ವಾಗ್ಭೂಷಣ' (೧೮೯೬), 'ರಾಜಹಂಸ' (೧೮೯೪) ಮತ್ತು ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ 'ಶಾಲಾ ಪತ್ರಿಕಾ' (೧೮೬೪) ಹಾಗೂ 'ಸತ್ಯವಾದಿ' ಇವನ್ನು ತೆಗೆದುಕೊಳ್ಳಬಹುದು" ಎನ್ನುತ್ತಾರೆ. ಇದೇ ಲೇಖನದಲ್ಲಿಯೇ ಅವರು ಹೇಳಿರುವ ಪ್ರಕಾರ 'ಹಿತೇಚ್ಛು'ವಿನ ಕಾಲ ೧೮೭೦. ಆದರೆ 'ಹಿತೇಚ್ಛು' ಕನ್ನಡ ಪತ್ರಿಕೆಯೋ ಮರಾಠಿ ಪತ್ರಿಕೆಯೋ ಎಂಬ ಅನುಮಾನ ಬರುತ್ತದೆ. ಕಾರಣವೆಂದರೆ ದ.ರಾ. ಬೇಂದ್ರೆಯವರ ಅಭಿಪ್ರಾಯ. "ಸುಮಾರು ೧೮೮೦ರಲ್ಲಿ ಅಸ್ತ ಮನ್ವಂತರ ಅಸ್ತವಾಗಿ ಅನುಕರಣ ಮನ್ವಂತರ ಉದಯವಾಯಿತು. ಈ ಹೊತ್ತಿಗೆ ೩-೪ ಕನ್ನಡ ಪತ್ರಿಕೆಗಳು ಹೊರಡುತ್ತಿದ್ದವು. ಆದರೆ 'ಧಾರವಾಡ ವೃತ್ತ'(ಧಾರವಾಡ), 'ಬೆಳಗಾಂವ ಸಮಾಚಾರ' (ಬೆಳಗಾಂವ), 'ಹಿತೇಚ್ಛು' (ಕಲಾದಗಿ, ಈಗಿನ ಬಿಜಾಪುರ ಜಿಲ್ಲೆ) ಮುಂತಾದ ಮಹಾರಾಷ್ಟ್ರ ಪತ್ರಿಕೆಗಳಿಗಿದ್ದ ಮಾನವು ನಮ್ಮ ಪತ್ರಿಕೆಗಳಿಗಿದ್ದಿಲ್ಲ. ಈ ಅನುಕರಣದ ಲಕ್ಷಣವೇ ಇದು... .."[೨೨] ಎಂದು ಬೇಂದ್ರೆ ಹೇಳುವಾಗ 'ಹಿತೇಚ್ಛು' ಮರಾಠಿ ಪತ್ರಿಕೆಯಾಗುತ್ತದೆ. ಇಲ್ಲಿ ಮಹಾರಾಷ್ಟ್ರ ಎಂದರೆ ಮರಾಠಿಯಲ್ಲದೆ ಬೇರೆಯಲ್ಲ. ಸದ್ಯಕ್ಕೆ ಬೇಂದ್ರೆಯವರ ಮಾತನ್ನು ಅನುಮೋದಿಸಬಹುದು.

೨೧.ಪಾ.ವಿ.ಕ.ಸೇ. ಪುಟ ೩೧೦, ಐ.ಮಾ.ಮುತ್ತಣ್ಣ
೨೨. ಬೇಂದ್ರೆ - ಸಾಹಿತ್ಯ ಸಂಶೋಧನೆ - ಪುಟ ೧೭೬

ನಂತರ ‘ರಾಜಹಂಸ’ದ ವಿಚಾರ. ಶಂಕರ ಪಾಟೀಲರು ಇದೇ ಲೇಖನದಲ್ಲಿಯೇ “ಉತ್ತರ ಕರ್ನಾಟಕದ ‘ಕರ್ನಾಟಕ ವೃತ್ತ’ ಮತ್ತು ‘ಧನಂಜಯ’ ‘ಕರ್ನಾಟಕ ಪತ್ರ’ ಹಾಗೂ ‘ರಾಜಹಂಸ’ಗಳು ಕೆಲ ಮಟ್ಟಿಗೆ ರಾಜಕೀಯ ವಿಚಾರಗಳನ್ನು ಪ್ರಕಟಿಸುತ್ತಿದ್ದವು”, ಎಂಬ ಮಾತನ್ನು ಹೇಳುತ್ತಾರೆ. ಅಂದರೆ ರಾಜಹಂಸ ಶುದ್ಧ ಸಾಹಿತ್ಯ ಪತ್ರಿಕೆ ಅಲ್ಲ ಅಂದಾಯಿತು. ‘ಶಾಲಾ ಪತ್ರಿಕೆ’ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಹೆಚ್ಚಾಗಿ ಪ್ರಕಟಿಸುತ್ತಿದ್ದರೂ ನಿಬಂಧ, ಚರಿತ್ರೆ, ವಿಮರ್ಶೆ, ಸಣ್ಣಕತೆಗಳನ್ನು ಪ್ರಕಟಿಸುತ್ತಿತ್ತು ಎಂದು ಶಂಕರ ಪಾಟೀಲರು ಹೇಳುವ ಮೂಲಕ ಇದೂ ಶುದ್ಧ ಸಾಹಿತ್ಯ ಪತ್ರಿಕೆ ಅಲ್ಲ ಎಂಬುದರತ್ತ ಬೆರಳು ತೋರಿಸುವರು.

೧೮೭೪ರಿಂದ ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ ‘ಕರ್ನಾಟಕ ಜ್ಞಾನ ಮಂಜರಿ’ ಅದು ಒಳಗೊಂಡಿರುವ ವಿಷಯಗಳ ಆಧಾರದ ಮೇಲಿಂದ ಸಾಹಿತ್ಯಪತ್ರಿಕೆ ಎನ್ನಿಸಿಕೊಳ್ಳುವ ಅರ್ಹತೆ ಪಡೆದಿದೆ. ಅದೇ ರೀತಿಯಲ್ಲಿ ಬೆಂಗಳೂರಿನಿಂದ ೧೮೮೩ರಲ್ಲಿ ಹೊರಟ ‘ಹಿತಬೋಧಿನಿ’ಯೂ ಸಾಹಿತ್ಯಪತ್ರಿಕೆಯೇ. ೧೮೯೪ರಿಂದ ಉಡುಪಿಯಿಂದ ಪ್ರಕಟಗೊಳ್ಳುತ್ತಿದ್ದ ‘ಸುದರ್ಶನ’ ಧರ್ಮ ಸಂಸ್ಕೃತಿ ಮೊದಲಾದವುಗಳ ಜೊತೆ ಪ್ರತಿ ಸಂಚಿಕೆಯಲ್ಲೂ ಸಾಹಿತ್ಯ ವಿಮರ್ಶೆಯನ್ನು ಪ್ರಕಟಿಸುತ್ತಿದ್ದ ಕಾರಣ ಅದನ್ನೂ ಸಾಹಿತ್ಯಪತ್ರಿಕೆ ಎಂದು ಕರೆಯಬಹುದು. ೧೮೯೨ರಲ್ಲಿ ಮೈಸೂರಿನಲ್ಲಿ ‘ಗ್ರ್ಯಾಜುಯೇಟ್ ಟ್ರೇಡಿಂಗ್ ಅಸೋಸಿಯೇಶನ್ (ಜಿಟಿಎ)’ದವರು ಆರಂಭಿಸಿದ ‘ಕರ್ನಾಟಕ ಗ್ರಂಥ ಮಾಲೆ’ ಅಪ್ಪಟ ಸಾಹಿತ್ಯಪತ್ರಿಕೆ. ಇವರದೇ ‘ಕಾವ್ಯ ಮಂಜರಿ’ಯೂ ಇದೇ ಸಂಘಕ್ಕೆ ಸೇರಿದ ಕೊಮಾಂಡೂರು ಶ್ರೀನಿವಾಸ ಅಯ್ಯಂಗಾರ ಆರಂಭಿಸಿದ ‘ಕಾವ್ಯಕಲ್ಪದ್ರುಮಮ್’ ಕೂಡ ಕನ್ನಡ ಸಾಹಿತ್ಯಪತ್ರಿಕೆಯೇ. ಆನಂತರದ ದೊಡ್ಡ ಹೆಸರು ಧಾರವಾಡದ ವಿದ್ಯಾವರ್ಧಕ ಸಂಘದವರು ಆರಂಭಿಸಿದ ವಾಗ್ಭೂಷಣ. ೧೮೯೬ರಲ್ಲಿ ಆರಂಭವಾದ ಇದು ಮಾಡಿದ ಸೇವೆ ಪ್ರತ್ಯೇಕ ಅಧ್ಯಯನಕ್ಕೇ ಒಳಪಡುವಷ್ಟು ವಿಸ್ತಾರವಾದ್ದು. ಅದೇ ವರ್ಷ ಮಂಗಳೂರಿನಿಂದ ಹೊರಟ ‘ಸತ್ಯ ದೀಪಿಕೆ’ಯೂ ಸಾಹಿತ್ಯಪತ್ರಿಕೆಯೇ. ೧೯೦೦ರ ‘ಸುವಾಸಿನಿ’ ಉಡುಪಿಯಿಂದ ೧೯೦೫ರಲ್ಲಿ ಹೊರಟ ‘ಶ್ರೀಕೃಷ್ಣ ಸೂಕ್ತಿ’ ಕೂಡ ಸಾಹಿತ್ಯ ಪತ್ರಿಕೆ ಎನ್ನಿಸಿಕೊಂಡು ಹಲವು ರೀತಿಯಲ್ಲಿ ಕೆಲಸ ಮಾಡಿವೆ. ಈ ಎಲ್ಲ ಪತ್ರಿಕೆಗಳು ಯಾವ ರೀತಿಯಲ್ಲಿ ಸಾಹಿತ್ಯದ ಬೆಳವಣಿಗೆಗೆ ತಮ್ಮ ಕಾಣಿಕೆ ಸಲ್ಲಿಸಿದವು ಎಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಅಧ್ಯಾಯ: ಮೂರು

ಆರಂಭ ಕಾಲದ ಪತ್ರಿಕೆ ಮತ್ತು ಸಾಹಿತ್ಯ

ಹತ್ತೊಂಬತ್ತನೆ ಶತಮಾನದ ಆರಂಭ ಕಾಲದ ಸಾಹಿತ್ಯ ಕೃತಿಗಳನ್ನು ಗಮನಿಸಿದಾಗ ಭಾಷೆ ನಡುಗನ್ನಡದಿಂದ ಹೊಸಗನ್ನಡದತ್ತ ಹೊರಳುತ್ತಿರುವುದನ್ನು ಕಾಣಬಹುದು. ಕನ್ನಡ ಸಾಹಿತ್ಯವು ಆಧುನಿಕ ರೂಪವನ್ನು ಪಡೆದುಕೊಳ್ಳತೊಡಗಿದ್ದು ಹಾಗೂ ಕನ್ನಡದಲ್ಲಿ ಪತ್ರಿಕೆಗಳು ಹುಟ್ಟಿಕೊಂಡಿದ್ದು ಸರಿಸುಮಾರು ಒಂದೇ ಕಾಲದಲ್ಲಿ. ಇದು ಹತ್ತೊಂಬತ್ತನೆ ಶತಮಾನದ ಮಧ್ಯಭಾಗ. ೧೮೪೨ರ 'ಮಂಗಳೂರು ಸಮಾಚಾರ'ದ ವೇಳೆಗೆ ಕನ್ನಡ ಸಾಹಿತ್ಯ ಹಲವು ಬಗೆಗಳಲ್ಲಿ ಬೆಳೆದಿತ್ತು. ಆಧುನಿಕ ವಿದ್ಯಾಭ್ಯಾಸ, ಕ್ರೈಸ್ತಪಾದ್ರಿಗಳ ಧರ್ಮ ಪ್ರಚಾರ, ಆದಕ್ಕಾಗಿ ಅವರು ಮಾಡಿದ ಬೈಬಲ್ ಅನುವಾದ, ಹಿಂದೂ ಧರ್ಮವನ್ನು ಟೀಕಿಸುವ ಉದ್ದೇಶದಿಂದ ಪ್ರಾಚೀನ ಪುರಾಣ, ಶಾಸ್ತ್ರ, ಸಾಹಿತ್ಯಗಳನ್ನು ಅವರು ಹುಡುಕಿ ಪ್ರಕಟಿಸಿದ್ದು, ಕನ್ನಡಕ್ಕೆ ನಿಘಂಟುವೊಂದನ್ನು ನೀಡಲು ಅವರು ಮಾಡಿದ ಪ್ರಯತ್ನ ಇವೆಲ್ಲ ಈಗಾಗಲೆ ಬೇರೆ ಬೇರೆ ಗ್ರಂಥಗಳಲ್ಲಿ ಉಲ್ಲೇಖವಾಗಿವೆ.

ಈ ರೀತಿಯಲ್ಲಿ ವಿಭಿನ್ನ ನೆಲೆಗಳಲ್ಲಿ ಅರಳುತ್ತಿದ್ದ ಕನ್ನಡ ಸಾಹಿತ್ಯ ಪುಷ್ಟಗೊಳ್ಳುವಲ್ಲಿ ಪತ್ರಿಕೆಗಳು ಯಾವ ರೀತಿಯಲ್ಲಿ ನೆರವಾದವು ಅನ್ನುವುದು ಪ್ರಸ್ತುತ ವಿವೇಚನೆಯ ವಿಷಯವಾಗಿದೆ.

ಭಾರತೀಯ ಪರಿಸರದಲ್ಲಿ ಪತ್ರಿಕೆಗಳು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿಯೇ ಜನ್ಮ ತಳೆದಿದ್ದವು. ಕೆಲವೊಮ್ಮೆ ಧರ್ಮ ಪ್ರಸಾರ, ಇನ್ನು ಕೆಲಮೊಮ್ಮೆ ಸಮಾಜ ಸುಧಾರಣೆ ಮತ್ತೆ ಕೆಲವೊಮ್ಮೆ ರಾಜಕೀಯ ಬೇಡಿಕೆಯ ಮಂಡನೆಗಾಗಿ ಜನಾಭಿಪ್ರಾಯ ರೂಪಿಸಲು ಒಂದು ವೇದಿಕೆಯಾಗಿ ಹುಟ್ಟಿಕೊಂಡ ಪತ್ರಿಕೆಗಳು ಹಲವು. ಇನ್ನು ಕೆಲವು ಪತ್ರಿಕೆಗಳು ಸಾಹಿತ್ಯಪತ್ರಿಕೆಗಳಾಗಿ ಹುಟ್ಟಿ ಬೆಳೆದವು. ಸಾಹಿತ್ಯವು ಹೇಗಿರಬೇಕು, ಹೇಗಿದ್ದರೆ ಚೆನ್ನ, ಹೇಗಿರಬಾರದು ಎಂಬುದರ ಜೊತೆಯಲ್ಲಿ ಹಿಂದಿನ ಸಾಹಿತ್ಯಗಳನ್ನು ವಿಮರ್ಶೆಗೆ ಒಳಪಡಿಸಿ ಅವುಗಳಲ್ಲಿ ಟೊಳ್ಳೆಷ್ಟು ಗಟ್ಟಿ ಎಷ್ಟು ಎಂಬುದನ್ನು ವಿಮರ್ಶಿಸಿದವು. ಕೆಲವು ಪತ್ರಿಕೆಗಳು ಸಾಹಿತ್ಯ ಪ್ರಕಟಣೆಗಾಗಿಯೇ ಉಳಿದವು. ಇವುಗಳ ಮೂಲಕ ಹೊಸ ಲೇಖಕರ ಪಡೆಯೇ ಹುಟ್ಟಿಕೊಂಡಿತು. ಹೊಸ ಪ್ರತಿಭೆಗಳು ಪ್ರೋತ್ಸಾಹ ಇಲ್ಲದೆ ಸೊರಗುವುದನ್ನು ತಪ್ಪಿಸಿ ಅವನ್ನು ಪೋಷಿಸಿದ ಹಿರಿಮೆ ಸಾಹಿತ್ಯಪತ್ರಿಕೆಗಳಿಗಿದೆ.

೧೯ನೆಯ ಶತಮಾನದಲ್ಲಿ ಪತ್ರಿಕೆಯಾಗಲಿ ಸಾಹಿತ್ಯವಾಗಲಿ ಹಿಂದಿನ ಶತಮಾನಗಳಿಗಿಂತ ಸಮೃದ್ಧವಾಗಿ ಬೆಳೆದುದಕ್ಕೆ ಕಾರಣ ಮುದ್ರಣ ಯಂತ್ರ. ಮುದ್ರಣ ಯಂತ್ರವನ್ನು ಕಂಡು ಹಿಡಿಯುವ ಪೂರ್ವದಲ್ಲಿಯ ಸಾಹಿತ್ಯ ಸೃಷ್ಟಿಗೂ ಮುದ್ರಣ ಯಂತ್ರವನ್ನು ಕಂಡು ಹಿಡಿದ ಮೇಲಿನ ಸಾಹಿತ್ಯ ಸೃಷ್ಟಿಗೂ ವ್ಯತ್ಯಾಸ ಇರುವುದನ್ನು ಗಮನಿಸಬಹುದು. ಮೊದಲು ಕೇವಲ ರಾಜ ಸಭೆಗಳಲ್ಲಿ ಪಂಡಿತರನ್ನು ಮೆಚ್ಚಿಸುವುದಕ್ಕಾಗಿ ಆಗುತ್ತಿದ್ದ ಸಾಹಿತ್ಯ ಸೃಷ್ಟಿ ಈಗ ಜನಸಾಮಾನ್ಯರನ್ನು ಗಮನದಲ್ಲಿಟ್ಟು ಆಗತೊಡಗಿತು. ಮೊದಲು ಒಂದೋ ಎರಡೋ ತಾಡೋಲೆಯ ಹಸ್ತಪ್ರತಿಗಳಲ್ಲಿ ಇರುತ್ತಿದ್ದ ಗ್ರಂಥಗಳು ಮುದ್ರಣ ಯಂತ್ರದ ಸಹಾಯದಿಂದ ಸಾವಿರ ಸಂಖ್ಯೆಯಲ್ಲಿ ಪ್ರಕಟವಾಗತೊಡಗಿದವು. ಇದು ಹೊಸ ಶಿಕ್ಷಣವನ್ನು ಪಡೆದ ವಿದ್ಯಾವಂತರಿಗೆ ಬಿಡುವಿನ ಕಾಲದಲ್ಲಿ ಓದುವ ಹವ್ಯಾಸವನ್ನು ಅಂಟಿಸಿತು. ಬ್ರಿಟಿಷರು ತಮ್ಮ ಅಧಿಕಾರದಲ್ಲಿ ಆಡಳಿತ ನಿರ್ವಹಣೆಗೆ ಸ್ಥಳೀಯರನ್ನು ನೌಕರಿಗೆ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ಅಗತ್ಯವಾದ ಶಿಕ್ಷಣವನ್ನು ನೀಡುತ್ತಿದ್ದರು. ಈ ಹೊಸ ಪೀಳಿಗೆಯ ನೌಕರಶಾಹಿಗೆ ಕಾಲಯಾಪನೆಗಾಗಿ ಪುಸ್ತಕಗಳು ಹೊರಡ ತೊಡಗಿದವು. ರಾಜರ ಆಸ್ಥಾನದಲ್ಲಿದ್ದ ಪಂಡಿತರನ್ನು ಗಮನದಲ್ಲಿಟ್ಟು ಕ್ಲಿಷ್ಟ ಕಾವ್ಯ ರಚಿಸುತ್ತಿದ್ದ ಸಾಹಿತಿಗಳು ಈಗ ಜನಸಾಮಾನ್ಯರನ್ನು ಗಮನದಲ್ಲಿಟ್ಟು ಗದ್ಯದಲ್ಲಿ ಸರಳವಾಗಿ ಸಾಹಿತ್ಯ ರಚಿಸಬೇಕಾಯಿತು. ಹೀಗೆ ಸಾಹಿತ್ಯವು ರಾಜಾಶ್ರಯದಿಂದ ಜನಾಶ್ರಯದ ಕಡೆಗೆ ಹೊರಳುವಾಗ ಸಾಹಿತ್ಯ ಮತ್ತು ಸಹೃದಯನ ನಡುವಿನ ವಾಹಕವಾಗಿ ಪತ್ರಿಕೆಗಳು ಕೆಲಸ ಮಾಡಿದವು. ಕಾಗದದ ವ್ಯಾಪಕ ಬಳಕೆ, ಮುದ್ರಣ ಯಂತ್ರದ ಉಪಯೋಗ ಇವೆಲ್ಲ ಇದಕ್ಕೆ ಪೂರಕವಾದವು. ಇದು ಗದ್ಯದ ವಿಕಾಸಕ್ಕೆ ಕಾರಣವಾಯಿತು.

ಬ್ರಿಟಿಷರ ಸತ್ತೆಯಿಂದ ಕನ್ನಡ ನಾಡಿನಲ್ಲಿ ಆಡಳಿತಾತ್ಮಕವಾಗಿ ಮಹತ್ವದ ಪರಿಣಾಮಗಳಾದವು. ವಿಜಯನಗರದ ಬಳಿಕ ಪ್ರಬಲ ಸಾಮ್ರಾಜ್ಯವನ್ನೇ ಕನ್ನಡಿಗರು ಕಂಡಿರಲಿಲ್ಲ. ದಕ್ಷಿಣದಲ್ಲಿ ಮೈಸೂರರಸರು ದೊಡ್ಡ ಭಾಗವನ್ನು ಆಳುತ್ತಿದ್ದರೂ ಉಳಿದಂತೆ

ಅಲ್ಲಲ್ಲಿ ಪಾಳೆಪಟ್ಟುಗಳು ಇದ್ದವು. ಆ ಪಾಳೆಗಾರರ ಇಷ್ಟಾನಿಷ್ಟಕ್ಕೆ ಅನುಗುಣವಾಗಿ ಪ್ರಜೆಗಳ ಬದುಕು ಇರುತ್ತಿತ್ತು. 'ಆಳುವವನು ಆರು ಬಂದರೇನು ತಮ್ಮ ಶೋಷಣೆ ತಪ್ಪಿದ್ದಲ್ಲ' ಎಂಬ ಭಾವದಲ್ಲಿ ಭಾರತದ, ಹಾಗೆಯೇ ಕನ್ನಡ ನಾಡಿನ ಜನರೂ ಇದ್ದಾಗ ಬ್ರಿಟಿಷರು ರಾಜಕೀಯವಾಗಿ ನಮ್ಮನ್ನು ಆಳಹತ್ತಿದರು. ಬ್ರಿಟಿಷರ ಆಡಳಿತ ಪಾಳೆಗಾರರ ದಬ್ಬಾಳಿಕೆಗಿಂತ ಮಿಗಿಲು ಎಂಬ ಭಾವನೆ ಜನಸಾಮಾನ್ಯರಲ್ಲಿ ಬರತೊಡಗಿತ್ತು. ಆದರೆ ಕನ್ನಡ ನೆಲ ಇತ್ತ ಮೈಸೂರು ಸಂಸ್ಥಾನದಲ್ಲಿ, ಕೆಲವು ಭಾಗ ಮುಂಬೈ ಪ್ರಾಂತದಲ್ಲಿ, ಕೆಲವು ಭಾಗ ಮದ್ರಾಸ್ ಪ್ರಾಂತದಲ್ಲಿ, ಇನ್ನು ಕೆಲವು ಭಾಗ ಹೈದ್ರಾಬಾದ ನಿಜಾಮನ ಆಳ್ವಿಕೆಯಲ್ಲಿ ಇದ್ದವು. ಈ ಭಾಗಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಮೇರೆಯನ್ನು ಗುರುತಿಸಿ ತಾವೆಲ್ಲ ಒಂದು ಕನ್ನಡ ತಾಯಿಯ ಮಕ್ಕಳು ಎಂಬ ಭಾವನೆ ನಾಡವರಲ್ಲಿ ಮೂಡುವ ಹಾಗೆ ಮಾಡುವುದು ಅಗತ್ಯವಾಗಿತ್ತು. ಈ ನಾಡು- ನುಡಿಯ ಐಕ್ಯತೆಯನ್ನು ನಮ್ಮ ಆದ್ಯ ಪತ್ರಕರ್ತರೆ ಮನಗಂಡಿದ್ದರು.

ಮೈಸೂರಿನಲ್ಲಿ ಸಾಹಿತ್ಯ ಸೃಷ್ಟಿಗೆ ರಾಜಾಶ್ರಯವೇನೋ ಇತ್ತು. ಅದೇ ಪರಿಸ್ಥಿತಿ ಉಳಿದ ಭಾಗದಲ್ಲಿ ಇರಲಿಲ್ಲ. ಅಲ್ಲಿಯ ಸಾಹಿತ್ಯ ರಚನೆ ಹೊಸ ವಿದ್ಯಾಭ್ಯಾಸ ಮಾಡಿದ ಜನರನ್ನು ಒಳಗೊಂಡಿತ್ತು. ಜೊತೆಯಲ್ಲಿ ಸಾಹಿತ್ಯ ರಚನಾಕಾರರು ಹೊಸ ಶಿಕ್ಷಣ ಪದ್ಧತಿಯಲ್ಲಿ ಪಠ್ಯಗಳನ್ನು ರಚಿಸಬೇಕಾಗಿ ಬಂತು. ಪಠ್ಯಗಳಿಗಾಗಿಯೇ ಕೆಲವು ಪುಸ್ತಕಗಳು ರಚನೆಗೊಂಡಿರುವುದನ್ನು ಕಾಣುತ್ತೇವೆ. ಹೀಗೆಯೇ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಹೊರಟ ಪತ್ರಿಕೆಗಳೂ ಇವೆ. ಸೂರಿ ವೆಂಕಟರಮಣ ಶಾಸ್ತ್ರಿಯ (೧೮೮೮- ಜನವರಿ) 'ಹಿತೋಪದೇಶ', ಇದೇ ವರ್ಷ ಮೈಸೂರಿನಿಂದ ಹೊರಟ 'ಕರ್ನಾಟಕ ವಾಣೀ ವಿಲಾಸ' ಇಂಥವುಗಳಲ್ಲಿ ಸೇರಿವೆ. ವಿದ್ವತ್ ಪತ್ರಿಕೆಗಳಲ್ಲಿ ನಾಡಿನ ಇತಿಹಾಸದ ಬಗ್ಗೆ ಬಂದ ಲೇಖನಗಳ ಆಧಾರದ ಮೇಲೆಯೇ ಪಠ್ಯಗಳು ರಚನೆಗೊಂಡವು.

ಮುದ್ರಣ ಯಂತ್ರ, ಹೊಸ ಶಿಕ್ಷಣ, ರಾಜ ಪ್ರಭುತ್ವ ಶಿಥಿಲಗೊಳ್ಳುತ್ತಿದ್ದ ಸನ್ನಿವೇಶ ಇವೆಲ್ಲವುಗಳಿಂದ ಪ್ರಭಾವಿತವಾದ ಸಮಾಜದಿಂದ ಸಾಹಿತ್ಯ ಹೊಸ ರೂಪವನ್ನು ಪಡೆದುಕೊಳ್ಳಲು ಹವಣಿಸುತ್ತಿದ್ದಾಗಲೇ ಕನ್ನಡದಲ್ಲಿ ಪತ್ರಿಕೆಗಳು ಹುಟ್ಟಿದ್ದು. ಹೀಗಾಗಿ ಪತ್ರಿಕೆ ಮತ್ತು ಸಾಹಿತ್ಯ ಎರಡೂ ಏಕಕಾಲದಲ್ಲಿ 'ಹೊಸತನ್ನು ರೂಢಿಸಿಕೊಳ್ಳುವ, ಹದಗೊಳಿಸಿಕೊಳ್ಳುವ' ಜವಾಬ್ದಾರಿಯಲ್ಲಿದ್ದವು. ಹೊಸ ಸಾಹಿತ್ಯಕ್ಕೆ ಒಂದು ಪರಂಪರೆ ಸಿದ್ಧಗೊಳ್ಳಬೇಕಿತ್ತು. ಅದೇ ರೀತಿ ಪತ್ರಿಕೆಯೂ ಕನ್ನಡದಲ್ಲಿ ತನ್ನ ಮಾರ್ಗವನ್ನು ಕಂಡುಕೊಳ್ಳಬೇಕಿತ್ತು. ಈ ಅನುಸಂಧಾನ ಮಾರ್ಗ ಸಹಜವಾಗಿಯೇ ಪ್ರಾಯೋಗಿಕವಾಗಿತ್ತು.

ಕನ್ನಡದ ಮೊದಲ ಪತ್ರಿಕೆಯೇ ಸಾಹಿತ್ಯವನ್ನು ಪೋಷಿಸುವ, ಪ್ರಚಾರಪಡಿಸುವ ಕಾರ್ಯವನ್ನು ನಡೆಸಿತು. ಪತ್ರಿಕೆ ಒಂದು ಉದ್ಯಮದ ಸ್ವರೂಪವನ್ನು ಪಡೆಯದೆ ಇದ್ದ ಆರಂಭದ ಕಾಲದಲ್ಲಿ ಪತ್ರಿಕೆಗಳೆಲ್ಲ ಒಂದು ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ಜನ್ಮ

ತಳೆದವು. ಪತ್ರಿಕೆ ನಡೆಸಿ ಹಣ ಮಾಡಬೇಕು ಎನ್ನುವುದು ಪತ್ರಿಕೆ ನಡೆಸುವವರ ಉದ್ದೇಶವಾಗಿರಲಿಲ್ಲ. ಕೆಲವರಿಗೆ, ಅಂದರೆ ಕ್ರೈಸ್ತ ಮಿಶನರಿಗಳು ತಮ್ಮ ಧರ್ಮದ ಪ್ರಚಾರ ಮಾಡುತ್ತ ಇನ್ನೊಂದು ಧರ್ಮವನ್ನು ಟೀಕಿಸತೊಡಗಿದಾಗ ಹಿಂದೂಗಳೂ ತಮ್ಮ ಧರ್ಮದ ಸಮರ್ಥನೆಗೆ ಪತ್ರಿಕೆ ನಡೆಸಲು ಮುಂದಾದರು. ಕ್ರೈಸ್ತ ಪಾದ್ರಿಗಳು ಹಿಂದೂ ಧರ್ಮವನ್ನು ಟೀಕಿಸಿದಷ್ಟೂ ಹಿಂದೂಗಳಿಗೆ ತಮ್ಮ ಧರ್ಮದಲ್ಲಿ ಅಭಿಮಾನ ಅಧಿಕಗೊಳ್ಳತೊಡಗಿತು. ವೇದೋಪನಿಷತ್ತುಗಳ ಜ್ಞಾನ ಸಂಪತ್ತು ಇವರಿಗೆ ಹೆಮ್ಮೆಯ ಅಂಶಗಳಾದವು. ಆರ್ಯ ಸಮಾಜ, ಬ್ರಹ್ಮ ಸಮಾಜಗಳು ಧಾರ್ಮಿಕ, ಸಾಮಾಜಿಕ ಸುಧಾರಣೆಗೆ ಮುಂದಾಗಿದ್ದವು. ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ, ಆಧುನಿಕ ಭಾರತದ ಸಾಮಾಜಿಕ ಸುಧಾರಣೆಯ ಹರಿಕಾರ ರಾಜಾರಾಮ ಮೋಹನರಾಯ, ಚಿಪಳೂಣಕರ, ಟಿಳಕ ಮೊದಲಾದವರ ನೇತೃತ್ವ ಇದಕ್ಕೆ ಇತ್ತು. ತಮ್ಮ ಧರ್ಮ ಸಂಸ್ಕೃತಿಯ ಮೇಲ್ಮೆಯನ್ನು ಹೇಳುತ್ತ ಅದನ್ನು ಹೆಮ್ಮೆಗೆ ಕಾರಣವಾಗಿಸಿ ಕೊಂಡರು. ಜೊತೆಯಲ್ಲಿ ಇವರಿಗೆ ಇಂಗ್ಲಿಷ್ ಶಿಕ್ಷಣ ದೊರೆಯಿತು. ಇದು ಹೊಸ ಚಿಂತನೆ, ದೃಷ್ಟಿಕೋನವನ್ನು ಒದಗಿಸಿತು. ತಮ್ಮಲ್ಲಿಯ ಕೆಡುಕನ್ನು ಒಪ್ಪಿಕೊಳ್ಳುತ್ತಲೇ ಅದನ್ನು ಒಪ್ಪಗೊಳಿಸುವ ಪ್ರಯತ್ನ ನಡೆಯಿತು. ಕ್ರೈಸ್ತರು ತಮ್ಮ ಧರ್ಮದ ಪ್ರಚಾರಕ್ಕೆ ಗ್ರಂಥಗಳನ್ನು ಪತ್ರಿಕೆಗಳನ್ನು ಹೊರಡಿಸತೊಡಗಿದಾಗ ಹಿಂದೂ ಧರ್ಮವನ್ನು ಸಮರ್ಥಿಸುವ ಗ್ರಂಥಗಳು, ಪತ್ರಿಕೆಗಳು ಬಂದವು. ಹಿಂದುಗಳಲ್ಲಿಯೇ ಶೈವ, ವೈಷ್ಣವ, ವೀರಶೈವ ಇತ್ಯಾದಿ ಶಾಖೆಗಳನ್ನು ಸಮರ್ಥಿಸುವ ಪತ್ರಿಕೆಗಳೂ, ಗ್ರಂಥಗಳೂ ಬಂದವು. 'ಆರ್ಯಮತ ಸಂಜೀವಿನಿ', 'ವೀರಶೈವ ಗ್ರಂಥ ಪ್ರಕಾಶಿಕೆ', 'ಅರುಣೋದಯ', 'ಸಭಾಪತ್ರ' ಮೊದಲಾದವು ಕ್ರಿಯೆ ಪ್ರತಿಕ್ರಿಯೆ ಕಾರಣವಾಗಿ ಹುಟ್ಟುಪಡೆದ ಪತ್ರಿಕೆಗಳು. ಇವುಗಳ ಮಥಿತ ಇಷ್ಟೇ, ಕ್ರಿಯೆಗೆ ಎಲ್ಲಿ ಪ್ರತಿಕ್ರಿಯೆ ಇರುತ್ತದೋ ಅದೊಂದು ಜೀವಂತ ಸಮಾಜವಾಗಿರುತ್ತದೆ. ಈ ಜೀವಂತಿಕೆ ಇದ್ದಾಗಲೇ ಆರೋಗ್ಯಕರ ವಾಗ್ವಾದ ಆರಂಭವಾಗುತ್ತದೆ. ಈ ವಾಗ್ವಾದದ ಅಭಿವ್ಯಕ್ತಿಗೆ ಪತ್ರಿಕೆಗಳೂ ಅಂದು ವಾಹಕವಾದವು.

ಕ್ರೈಸ್ತ ಪ್ರಾಟೆಸ್ಟಂಟ್ ಪಾದ್ರಿಗಳು ತಮ್ಮ ಪ್ರಕಟಣೆಗಳಲ್ಲಿ ಪತ್ರಿಕೆಗಳಲ್ಲಿ ತಮ್ಮ ಧರ್ಮದ ಸಮರ್ಥನೆ, ಅನ್ಯ ಧರ್ಮದ ನಂಬಿಕೆಗಳನ್ನು ಪ್ರಶ್ನಿಸುವಾಗ ಬಳಕೆಯ ಭಾಷೆಯೊಂದಿಗೆ ಗುದ್ದಾಡಲೇ ಬೇಕಾಯಿತು. ಇದು ಭಾಷೆಗೆ ಹೊಸ ಕಸುವನ್ನು ಒದಗಿಸಿತು. ಎಷ್ಟು ಪರಿಣಾಮಕಾರಿಯಾಗಿ ಎದುರಾಳಿಗೆ ಮನವರಿಕೆ ಮಾಡಬಹುದು ಎಂಬ ಸವಾಲು ಎದುರಾದಾಗ ಭಾಷೆಯ ಜೊತೆ ಪ್ರಯೋಗ ಅನಿವಾರ್ಯವಾಗುತ್ತದೆ. ಈ ಪ್ರಾಟೆಸ್ಟಂಟ್ ಕಲ್ಚರ್ ಅಂದರೆ ಪ್ರತಿಭಟನೆ ಧ್ವನಿಯಿಂದಲೇ ಉತ್ತಮ ಗದ್ಯ ರೂಪಪಡೆಯುವುದು ಸಾಧ್ಯವಾಯಿತು. ಈ ಗದ್ಯದ ಕೃಷಿಯೇ ಮುಂದೆ ಬಂದ ಕಾದಂಬರಿ ಪ್ರಕಾರಕ್ಕೆ ಅಡಿಪಾಯವನ್ನು ಒದಗಿಸಿತು.

'ಮಂಗಳೂರು ಸಮಾಚಾರ'ದ ನಂತರ ಕಾಲು ಶತಮಾನದ ಅವಧಿಯಲ್ಲಿ ಹಲವು ಪತ್ರಿಕೆಗಳು ಹುಟ್ಟಿಕೊಂಡವು. ಪತ್ರಿಕೆ ನೆಲೆಗೊಳ್ಳಲು ಹಲವು ಪ್ರಯೋಗಗಳು ನಡೆದವು. ಪತ್ರಿಕೆಯ ಉಪಯೋಗ ಜನರಿಗೆ ಮನದಟ್ಟಾಗುವ ಹಂತದಲ್ಲಿಯೇ ಪತ್ರಿಕೆ ನಡೆಸುವವರೂ ತಮ್ಮ ಉಪಯೋಗಕ್ಕೆ ಅದನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಚಿಂತಿಸಿ ಅದರಲ್ಲಿ ಪ್ರಯೋಗಶೀಲರಾದರು. ಆದರ ಜೊತೆಯಲ್ಲಿಯೇ ಅವರು ನಮ್ಮ ಪ್ರಾಚೀನ ಸಾಹಿತ್ಯವನ್ನು ಶೋಧಿಸಿ ಪ್ರಕಟಿಸಿದರು. ಆಧುನಿಕ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಯ ಪ್ರಯೋಗ ನಡೆಸಿದರು. ಸಾಹಿತ್ಯದಲ್ಲಿ ಬಳಕೆಯಾಗುವ ಗದ್ಯವನ್ನು ಅವರು ಪತ್ರಿಕೆಗಳಲ್ಲಿ ರೂಢಿಸಿದರು. ಬಂಗಾಳ ವಿಭಜನೆಯ ವರೆಗೆ ಅಂದರೆ ೧೯೦೫ರ ವರೆಗೂ ಕನ್ನಡದ ಪತ್ರಿಕೆಗಳು ಮತ್ತು ಸಾಹಿತ್ಯ ಎರಡೂ ಒಂದೇ ನೆಲೆಯಲ್ಲಿ ಮುಂದುವರಿದವು. ಸಾಹಿತ್ಯ ಇದೇ ರೀತಿಯಲ್ಲಿ ಸೃಷ್ಟಿಯಾಗಬೇಕು ಎಂದು ನಿರ್ದೇಶನ ನೀಡುವ ಮಟ್ಟದ ವರೆಗೆ ಪತ್ರಿಕೆಗಳು ಪ್ರಭಾವಿಯಾಗಿದ್ದವು. ಪತ್ರಿಕೆಗಳು ರೂಪಿಸಿದ ಜನಾಭಿಪ್ರಾಯಕ್ಕೆ ಅನುಗುಣವಾಗಿಯೇ ಸಾಹಿತ್ಯ ಸೃಷ್ಟಿಯಾದ ಉದಾಹರಣೆ ಸಾಕಷ್ಟು ದೊರೆಯುತ್ತದೆ. ಈ ಅವಧಿಯಲ್ಲಿ ನಾಡು ಛಿದ್ರವಾದ ಬಗ್ಗೆ ದುಃಖವಿದೆ. ನಾಡು ಒಂದಾಗಿದ್ದರೆ ನುಡಿಯೂ ಶ್ರೀಮಂತವಾಗಿರುತ್ತದೆ ಎಂಬ ಕಳಕಳಿ ಇದೆ. ಸಮಾಜದಲ್ಲಿಯ ಅನಿಷ್ಠಗಳ ಬಗೆಗೆ ಕೋಪವಿದೆ. ಅದನ್ನು ದೂರಮಾಡುವ ಬಗೆಗೆ ವಿಧಾಯಕ ಕ್ರಮಗಳ ಆಲೋಚನೆಗಳಿವೆ. ಆದರೆ ನಾಡು ಮತ್ತು ದೇಶ ಇವುಗಳ ನಡುವಿನ ಅಂತರ ಸ್ಪಷ್ಟವಾಗಿಲ್ಲ. ಬ್ರಿಟಿಷರ ಬಗೆಗೆ ವಿರೋಧವೂ ಇಲ್ಲ. ಬದಲಿಗೆ ಅವರು ಜಾರಿಗೆ ತಂದ ಸಮಾಜ ಸುಧಾರಣೆಯ ಬಗೆಗೆ ಮೆಚ್ಚುಗೆ ಇದೆ. ಆದರೆ ಬಂಗಾಳ ವಿಭಜನೆಯು ರಾಷ್ಟ್ರೀಯ ಭಾವನೆಯನ್ನು ಬೆಳೆಸುತ್ತದೆ. ಆ ನಂತರದ ಪತ್ರಿಕೆಗಳ ಕಾಳಜಿಯಲ್ಲಿ ಬದಲಾವಣೆ ಕಾಣುತ್ತದೆ. ಅದೇ ರೀತಿ ಸಾಹಿತ್ಯದಲ್ಲೂ. ಕಾರಣ ೧೯೦೫ರ ವರೆಗಿನ ಕಾಲಘಟ್ಟದ ಸಾಹಿತ್ಯ ಮತ್ತು ಪತ್ರಿಕೆಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಡು ನುಡಿಯ ಬಗ್ಗೆ ಪ್ರಿತಿ: ಸಾಹಿತ್ಯದ ಜೀವಸೆಲೆ ನುಡಿ. ಒಂದು ನುಡಿ ಸತ್ವಯುತವಾಗಿ ಶ್ರೀಮಂತವಾಗಿ ಇರಬೇಕು ಎಂದರೆ ಆ ನುಡಿಯನ್ನು ಆಡುವವರ ಒಂದು ನಾಡು ಇರಬೇಕು. ದುರ್ದೈವವಶಾತ್ ಕನ್ನಡ ನುಡಿಯ ಪ್ರದೇಶ ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗಿತ್ತು. ಆದರೆ ನಮ್ಮ ಆರಂಭ ಕಾಲದ ಪತ್ರಕರ್ತರಿಗೆ ನಾಡಿನ ವ್ಯಾಪ್ತಿಯ ಪರಿಕಲ್ಪನೆ ಇತ್ತು. ಪ್ರಬಲವಾದ ಒಂದು ಆಡಳಿತಕ್ಕೆ ಒಳಪಟ್ಟ ನಾಡು ಇಲ್ಲದಿದ್ದರೆ ನುಡಿಗೆ ತೇಜಸ್ಸು ಇರುವುದಿಲ್ಲ. ತೇಜಸ್ಸನ್ನು ಕಳೆದುಕೊಂಡ ನುಡಿಯಿಂದ ಉತ್ತಮ ಸಾಹಿತ್ಯ ಕೃತಿಯೂ ಬರುವುದಿಲ್ಲ. ನುಡಿಗೆ ರಾಜ ಪೋಷಣೆ ದೊರೆತಾಗಲೇ ಉತ್ತಮ ಗ್ರಂಥಗಳು ಬಂದಿದ್ದನ್ನು ಕನ್ನಡ ಸಾಹಿತ್ಯ ಚರಿತ್ರೆ ಹೇಳುತ್ತದೆ. ರಾಜಕೀಯವಾಗಿ ಹರಿದು ಹಂಚಿಹೋಗಿದ್ದರೂ ಕನ್ನಡ ಭಾಷಿಕರಿಗೆ ಕರ್ನಾಟಕತ್ವದ ಕಲ್ಪನೆ ಇತ್ತು.

ನಮ್ಮ ಮೊದಲ ಪತ್ರಿಕರ್ತರಿಗೂ ಕನ್ನಡ ನಾಡಿನ ಸಮಗ್ರ ಕಲ್ಪನೆ ಇತ್ತು. 'ಕಾವೇರಿಯಿಂದ ಮಾ ಗೋದಾವರಿ ವರೆಗಿರ್ಪ.. .. ..' ನೃಪತುಂಗನ ಕನ್ನಡ ನಾಡು ಗೊತ್ತಿಲ್ಲದಿದ್ದರೂ ಕನ್ನಡ ನುಡಿಯನ್ನು ಆಡುವ ಜನರು ಎಲ್ಲೆಲ್ಲಿ ಇದ್ದಾರೆ, ಕನ್ನಡಿಗರ ಪ್ರಾದೇಶಿಕ ವ್ಯಾಪ್ತಿಯ ಅರಿವು ಪಶ್ಚಿಮದಿಂದ ಬಂದವರಿಗೂ ಇದ್ದಿತ್ತು. ಹಿಂದೆ ಕನ್ನಡಿಗರು ದೊಡ್ಡ ಸಾಮ್ರಾಜ್ಯ ಕಟ್ಟಿದ್ದರು. ಇಂದು ಅವರು ರಾಜಕೀಯವಾಗಿ ಹರಿದು ಹಂಚಿಹೋಗಿದ್ದಾರೆ ಎಂಬ ಸತ್ಯವನ್ನು ಅವರು ಬಲ್ಲವರಾಗಿದ್ದರು. ಇದಕ್ಕೆ ಪುರಾವೆ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ದಲ್ಲಿಯೇ ದೊರೆಯುವುದು. ಪತ್ರಿಕೆಯ ಪ್ರಕಟಣೆಯನ್ನು ಮಂಗಳೂರಿನಿಂದ ಬಳ್ಳಾರಿಗೆ ಸ್ಥಳಾಂತರಿಸುವಾಗ ಅದರ ಸಂಪಾದಕ ಹರ್ಮನ್ ಮೋಗ್ಲಿಂಗ್ ಆ ಪತ್ರಿಕೆಯಲ್ಲಿ ಬರೆದಿರುವ ಮಾತು ಗಮನಾರ್ಹವಾದುದು.

'ಮಂಗಳೂರು, ಮೈಸೂರು, ತುಮ್ಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳ್ಳಿ, ಶಿರಸಿ, ಹೊಂನಾವರ ಮೊದಲಾದ ಸ್ಥಳಗಳಲ್ಲಿ ಕೆಲವು ನೂರು ಮಂದಿ ಈ ಕಾಗದವನ್ನು ಈ ವರೆಗೆ ತೆಗೆದುಕೊಳ್ಳುತ್ತಾ ಬಂದರು. ಮೊದಲಿನ ನಂಬ್ರದ ಕಾಗದಗಳನ್ನು ಛಾಪಿಸಿ ಪ್ರಕಟನ ಮಾಡುವಾಗ್ಗೆ ನಾವು ಮಾಡಿದ ಆಲೋಚನೆ ಈ ಕಾಲದಲ್ಲಿ ಈ ದೇಸಸ್ಥರೊಳಗೆ ನಡಿಯುವುದೋ ಏನೋ ಎಂದು ಸ್ವಲ್ಪ ಸಂದೇಹ ಪಡುತ್ತಿದ್ದೆವು. ಈಗ ಈ ದೇಶಸ್ಥರಲ್ಲಿ ಅನೇಕರಿಗೆ ಕನಡು ಭಾಷೆಯಲ್ಲಿ ಬರೆದ ಒಂದು ಸಮಾಚಾರ ಕಾಗದವನ್ನು ಓದುವುದರಲ್ಲಿ ಮತಿ ಆಗುವುದೆಂದು ನೋಡಿ ಸಂತೋಷದಿಂದ ಅದನ್ನು ವೃದ್ಧಿ ಮಾಡುವ ಪ್ರಯತ್ನದಿಂದ ಇನ್ನು ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೆ ಬಳ್ಳಾರಿಯಲ್ಲಿ ಇರುವ ಅಕ್ಷರ ಛಾಪಖಾನೆಯಲ್ಲಿ ಅಚ್ಚುಪಡಿ ಮಾಡಲಿಕ್ಕೆ ನಿಶ್ಚೈಸಿದ್ದೇವೆ. ಆ ಮೇಲೆ ಕಂನಡ ಶೀಮೆಯ ನಾಲ್ಕು ದಿಕ್ಕುಗಳಲ್ಲಿಯಿರುವವರು ಶುದ್ಧವಾದ ಮೊಳೆ ಅಚ್ಚುಗಳಿಂದ ಆಗುವ ಬರಹವನ್ನು ಶುಲಭವಾಗಿ ಓದಬಹುದು, ಇದಲ್ಲದೆ.. .. .. ಹೆಚ್ಚು ವರ್ತಮಾನವಂನೂ ಚರಿತ್ರೆಗಳನ್ನು ವಿದ್ಯಾಪಾಠಫಲಂನೂ ಬುದ್ಧಿಮಾತುಗಳನ್ನು ಬರಿಯುವುದಕ್ಕೆ ಸ್ಥಳ ಶಿಕ್ಕುವುದು.'

ಮೋಗ್ಲಿಂಗ್ ಅವರಿಗೆ ಕನ್ನಡ ಜನರು ಇರುವ ಪ್ರದೇಶದ ವ್ಯಾಪ್ತಿಯ ಸ್ಪಷ್ಟ ಪರಿಚಯ ಇತ್ತು. 'ಮಂಗಳೂರು ಸಮಾಚಾರ' ಬಳ್ಳಾರಿಗೆ ಹೋದಮೇಲೆ ಅದು 'ಕಂನಡ ಸಮಾಚಾರ'ವಾಗಿ ಪ್ರಕಟವಾಗತೊಡಗಿತು. 'ಕನ್ನಡ' ಇಲ್ಲಿ ನುಡಿ ಮಾತ್ರವಲ್ಲ ನಾಡನ್ನೂ ಪ್ರತಿನಿಧಿಸುತ್ತಿತ್ತು. ಕೇವಲ ಮೋಗ್ಲಿಂಗ್ ಮಾತ್ರವಲ್ಲ ಆ ಕಾಲದ ಎಲ್ಲ ಪ್ರಮುಖರಲ್ಲೂ ಈ ಅರಿವಿತ್ತು. ಇದಕ್ಕೆ ಪುರಾವೆಯಾಗಿ ಆ ಕಾಲದ ಪತ್ರಿಕೆಗಳು, ಪ್ರಕಾಶನ ಸಂಸ್ಥೆಗಳು, ಮುದ್ರಣ ಯಂತ್ರಗಳ ಹೆಸರುಗಳನ್ನೇ ಗಮನಿಸಬಹುದು. ಮುಂಬಯಿಯಲ್ಲಿ ಕನ್ನಡಿಗರು ಸ್ಥಾಪಿಸಿದ ಮುದ್ರಣಾಲಯ 'ಕರ್ನಾಟಕ ಮುದ್ರಾಶಾಲೆ'- (೧೮೮೮), ಧಾರವಾಡದಿಂದ ಹೊರಡುತ್ತಿದ್ದ ಮರಾಠಿ ಪತ್ರಿಕೆ 'ಕರ್ನಾಟಕ ವಾರ್ತಿಕ' (೧೮೭೯), ಬೆಳಗಾವಿಯಿಂದ ಹೊರಡುತ್ತಿದ್ದ ಕನ್ನಡ ವಾರ್ತಾ ಪತ್ರಿಕೆ 'ಕರ್ನಾಟಕ ಮಿತ್ರ'. ಹರ್ಮನ್ ಮೋಗ್ಲಿಂಗ್

೧೮೫೭ರಲ್ಲಿ ಆರಂಭಿಸಿದ ಪತ್ರಿಕೆ 'ಕನ್ನಡ ವಾರ್ತಿಕ'. ಮೈಸೂರಿನಲ್ಲಿ ೧೮೬೫ರ ಜುಲೈ ತಿಂಗಳಿನಿಂದ ಪಾಕ್ಷಿಕ 'ಕರ್ನಾಟಕ ಪ್ರಕಾಶಿಕಾ' ಹೊರಟಿತು. ೧೮೭೪ರಲ್ಲಿ ಬೆಳಗಾವಿಯಿಂದ 'ಕರ್ನಾಟಕ ಜ್ಞಾನ ಮಂಜರಿ' ಮಾಸಪತ್ರಿಕೆ ಹೊರಟಿತು. ೧೮೮೩ರಲ್ಲಿ ಹೊರಟ ವಾರ್ತಾಪತ್ರಿಕೆ 'ಕರ್ನಾಟಕ ಪತ್ರ'. ಬೆಳಗಾವಿಯಿಂದ ೧೮೮೬ರಲ್ಲಿ 'ಕರ್ನಾಟಕ ಹಿತೇಚ್ಛು' ಹೊರಟಿತು. ಬಿಜಾಪುರದಿಂದ ೧೮೯೨ರಲ್ಲಿ ಹೊರಟ ವಾರ್ತಾ ಪತ್ರಿಕೆ 'ಕರ್ನಾಟಕ ವೈಭವ'. 'ಕರ್ನಾಟಕ ಕಾವ್ಯಮಂಜರಿ' / 'ಕರ್ನಾಟಕ ಕಾವ್ಯಕಲಾನಿಧಿ' ಪ್ರಾಚೀನ ಕಾವ್ಯಗಳ ಪ್ರಕಟಣೆಗೆ ಮೀಸಲಾದ ಪತ್ರಿಕೆಗಳು. ಇದೇ ಉದ್ದೇಶದ ಇನ್ನೊಂದು ಪತ್ರಿಕೆ ೧೮೯೪ರ 'ಕರ್ನಾಟಕ ಭಾಷಾ ಸೇವಕ'. ಮೈಸೂರಿನಿಂದ 'ಕರ್ನಾಟಕ ಗ್ರಂಥಮಾಲೆ' (೧೮೯೩), ಧಾರವಾಡದಿಂದ 'ಕರ್ನಾಟಕ ವೃತ್ತ' (೧೮೮೩), 'ಕರ್ನಾಟಕ ಪತ್ರ' (೧೮೮೩). ೨೦ನೆ ಶತಮಾನದಲ್ಲಿ ಬಂದ ಪತ್ರಿಕೆಗಳ ಹೆಸರನ್ನೂ ಇಲ್ಲಿ ಗಮನಿಸಬಹುದು. 'ಜಯ ಕರ್ನಾಟಕ', 'ಪ್ರಬುದ್ಧ ಕರ್ನಾಟಕ', 'ಸಂಯುಕ್ತ ಕರ್ನಾಟಕ', 'ವಿಶ್ವ ಕರ್ನಾಟಕ' ಇತ್ಯಾದಿ.

ಹೀಗೆ ಆ ಕಾಲದ ಪತ್ರಿಕೆಗಳ ಹೆಸರುಗಳನ್ನು ಕಂಡಾಗ ನಾಡು ನುಡಿಯ ಬಗ್ಗೆ ಅವುಗಳಿಗೆ ಇರುವ ತುಡಿತ, ಪ್ರಜ್ಞೆ ತಿಳಿಯುತ್ತದೆ.

ಕ್ರೈಸ್ತ ಪಾದ್ರಿಗಳಿಗೆ ಕನ್ನಡದ ಮೇರೆಗಳನ್ನು ಅರಿತುಕೊಳ್ಳುವುದು ಅನಿವಾರ್ಯವೂ ಇತ್ತು. ಏಕೆಂದರೆ ಅವರ ಧರ್ಮ ಪ್ರಸಾರಕ್ಕೆ ಸ್ಥಳೀಯ ಭಾಷೆಯು ಅಗತ್ಯವಾಗಿತ್ತು. ಆ ಭಾಷಿಕರು ಇರುವ ಮೇರೆಗಳನ್ನು ಅರಿತುಕೊಂಡರೆ ಧರ್ಮ ಪ್ರಸಾರ ಆಯಾ ಭಾಷೆಯಲ್ಲಿಯೇ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಅವರು ತಮ್ಮ ಬೈಬಲನ್ನು ಬಹಳ ಹಿಂದೆಯೇ ತುಳು ಮತ್ತು ಕೊಡವ ಭಾಷೆಗಳಲ್ಲಿ ಹೊರತಂದುದನ್ನು ಮೇಲಿನ ಮಾತಿಗೆ ಪೂರಕವಾಗಿ ಹೇಳಬಹುದು. ಕ್ರೈಸ್ತ ಪಾದ್ರಿಗಳ ಉದ್ದೇಶ ಏನೇ ಇರಲಿ ಆದರೆ ಕನ್ನಡ ಪತ್ರಿಕೋದ್ಯಮಿಗಳು ನಾಡು ನುಡಿಯ ಪ್ರಜ್ಞೆಯಿಂದಲೇ ಕರ್ನಾಟಕದ ಹೆಸರನ್ನು ಇಟ್ಟುಕೊಂಡಿದ್ದರು. ಕನ್ನಡಿಗರಿಗೆ ಸದ್ಯ ದೊಡ್ಡ ಸಾಮ್ರಾಜ್ಯದ ಆಸರೆ ಇಲ್ಲದಿದ್ದರೂ ವಿಜಯ ನಗರದಂಥ ಸಾಮ್ರಾಜ್ಯ ಹೊಂದಿದ್ದೆವೆಂಬ ಹೆಮ್ಮೆ ಅವರಲ್ಲಿತ್ತು. ವರ್ತಮಾನದಲ್ಲಿ ಹೆಮ್ಮೆಪಡುವುದಕ್ಕೆ ಏನೂ ಇಲ್ಲದಿದ್ದಾಗ ಭೂತವನ್ನು ಆರಾಧಿಸುವುದು ಸಹಜ. ಈ ಭೂತದ ಆರಾಧನೆಯೇ ೧೯೧೭ರಲ್ಲಿ ಆಲೂರ ವೆಂಕಟರಾಯರು 'ಕರ್ನಾಟಕ ಗತ ವೈಭವ' ಬರೆಯುವುದಕ್ಕೆ ಪ್ರೇರಣೆಯಾಯಿತು. ಇದರಲ್ಲಿಯೇ ಕರ್ನಾಟಕದ ಏಕೀಕರಣದ ಬೀಜವು ಹುದುಗಿತ್ತು.

ವೆಂಕಟರಂಗೋ ಕಟ್ಟಿಯವರು ೧೮೭೫ರಲ್ಲಿ 'ಶೋಧಕ' ಪತ್ರಿಕೆ ಹೊರಡಿಸಿದರು. 'ಶೋಧಕ'ದ ಪ್ರಥಮ ಸಂಪಾದಕೀಯ ಗಮನಿಸಿದಾಗ ನಾಡಿನ ಬಗೆಗೆ ಅವರಿಗಿರುವ ಕಲ್ಪನೆ ತಿಳಿಯುವುದು. ಇಂಥ ಪ್ರಜ್ಞೆ ಏಕೀಕೃತ ಕರ್ನಾಟಕದಲ್ಲಿರುವವರ ಅಗತ್ಯವೂ ಆಗಿತ್ತು. ಕಟ್ಟಿಯ ಈ ಸಂಪಾದಕೀಯದಲ್ಲಿ ಕನ್ನಡ ನಾಡಿನ ಕೊರತೆ ಏನು ಎಂಬುದನ್ನು

ವಿವೇಚಿಸಲಾಗಿದೆ. ಕರ್ನಾಟಕವನ್ನು ಮಹಾರಾಷ್ಟ್ರದೊಂದಿಗೆ ಇಟ್ಟು ತುಲನೆ ಮಾಡಿ ನಮ್ಮಲ್ಲಿ ಏನಿಲ್ಲ ಎಂಬುದನ್ನು ಹೇಳಿ ವಿಷಾದಿಸಲಾಗಿದೆ.

ಕೊಲ್ಲಾಪುರ, ಬೀದರ, ನೀಲಗಿರಿ, ಪಶ್ಚಿಮ ಸಮುದ್ರ, ಈ ೪ ಮರ್ಯಾದೆಗಳ ಮಧ್ಯದಲ್ಲಿ ವಿಸ್ತಾರವಾಗಿ ಹಬ್ಬಿದ ಸೀಮೆಯು ಕರ್ನಾಟಕ. ಈ ದೇಶದ ಕ್ಷೇತ್ರಫಲವು ಸು.೬೬,೦೦೦ ಚೌಕು ಮೈಲು. ಜನಸಂಖ್ಯೆ ೭೭ ಲಕ್ಷ. ಆದರೆ ನಮ್ಮ ನೆರೆಯಲ್ಲಿದ್ದ ಮಹಾರಾಷ್ಟ್ರ ದೇಶವು ಇದಕ್ಕಿಂತ ಚಿಕ್ಕದಿದ್ದರೂ ಇವೆರಡು ದೇಶಗಳ ಈಗಿನ ಸ್ಥಿತಿ ಗತಿಗಳನ್ನು ಸರಿ ನೋಡಲಾಗಿ ಅತಿ ಖೇದಕರವಾದ ವ್ಯತ್ಯಾಸವು ಕಂಡು ಬರುತ್ತದೆ. ಮಹಾರಾಷ್ಟ್ರದಲ್ಲಿ ನಾಲ್ಕೈದು ಕಾಲೇಜುಗಳೂ ಬಹುಶಃ ಜಿಲ್ಲೆಗೊಂದರಂತೆ ಹಾಯಸ್ಕೂಲುಗಳೂ, ೨೦೦೦ಕ್ಕಿಂತ ಹೆಚ್ಚು ಇತರ ಶಾಲೆಗಳೂ ಇವೆ. ಕರ್ನಾಟಕದಲ್ಲಿ ಕಾಲೇಜು ಇಲ್ಲ. ಹಾಯಸ್ಕೂಲುಗಳು '(ಮೈಸೂರು, ಮದ್ರಾಸಗಳಿಗೆ ಶೇರಿದ ಭಾಗಗಳು ಸಹಿತ)' ಐದಾರಕ್ಕಿಂತ ಹೆಚ್ಚಿಲ್ಲ. ಇತರ ಶಾಲೆಗಳು (ಪ್ರಾಥಮಿಕ)ಯೆಲ್ಲ ಕೂಡಿ ಆರೇಳು ನೂರರೊಳಗೇ ಎಂದು ಲೆಕ್ಕವನ್ನು ನೀಡಿದ್ದಾರೆ.

ಮಹಾರಾಷ್ಟ್ರದಲ್ಲಿ ೩೦ಕ್ಕಿಂತ ಹೆಚ್ಚು ವರ್ತಮಾನ ಪತ್ರಗಳೂ ಸುಮಾರು ೨೦ ಮಾಸಿಕ ಪುಸ್ತಕಗಳೂ ಇದ್ದರೆ ಕರ್ನಾಟಕ ಭಾಷೆಯಲ್ಲಿ ಎರಡಕ್ಕಿಂತ ಹೆಚ್ಚು ವರ್ತಮಾನ ಪತ್ರಿಗಳಿಲ್ಲ. ಅವೂ ಬೆಂಗಳೂರು ಶೀಮೆಯ ಹೊರಗೆ ಯಾರಿಗೂ ಗೊತ್ತಿಲ್ಲ. ಮಾಸಿಕ ಪುಸ್ತಕವು ಮಾತ್ರ ಒಂದುಂಟು. ಅದೂ ಹುಟ್ಟಿ ಒಂದು ವರ್ಷವು ಇನ್ನೂ ಪೂರ್ಣವಾಗಿರುವುದಿಲ್ಲ. ಈ ಮಹದಂತರವನ್ನು ಕಂಡು ಕರ್ನಾಟಕದ ಕೆಲವರು ಖೇದಪಟ್ಟರೆ ಮಹಾರಾಷ್ಟ್ರದವರು ಹೆಮ್ಮೆಯಿಂದ ಅವರನ್ನು ಧಿಕ್ಕರಿಸುತ್ತಾರೆ ಎಂಬ ಅಂಶವನ್ನು ಅವರು ದಾಖಲಿಸಿದ್ದಾರೆ.

ಆದರೆ ಕರ್ನಾಟಕರು ಮಂದಮತಿಗಳೆಂಬುದಾಗಿಸಿದ್ಧವಾಗಲರಿಯದು ಎನ್ನುವ ಕಟ್ಟಿ ಈ ಅಂತರಕ್ಕೆ ಕರ್ನಾಟಕದಲ್ಲಿ ಇಂಗ್ಲಿಷ ವಿದ್ಯದ ಪ್ರಸಾರವು ಕಡಿಮೆಯಾಗಿರುವುದು ಕಾರಣ ಎನ್ನುವರು. ಹಾಗೆಂದು ಅವರಿಗೆ ಇಂಗ್ಲಿಷ್ ವಿದ್ಯದ ಬಗ್ಗೆ ಅತೀವ ಮೋಹ ಇತ್ತು ಎಂದೇನಲ್ಲ. ಈ ನ್ಯೂನತೆಯಲ್ಲಿ ಸಹ ಕರ್ನಾಟಕರು ಸಂತೋಷ ಪಡತಕ್ಕಂಥ ಸಂಗತಿ ಎಂದರೆ ಇಂಗ್ಲಿಷ್ ವಿದ್ಯದ ದುರ್ವ್ಯಸನಗಳೂ ದುರಾಚಾರಗಳೂ ಕಡಿಮೆಯಾಗಿರುವದು ಎಂಬ ಮಾತನ್ನು ಹೇಳಿದ್ದಾರೆ. ಆದರೆ ಸ್ವದೇಶದ ವಿದ್ಯಾಬುದ್ಧಿಗೆಲ್ಲ ಮಹಾರಾಷ್ಟ್ರರನ್ನು ಕರ್ನಾಟಕರನ್ನು ಯದುರುಬದುರು ಕುಳ್ಳಿರಿಸಿ ವಿಚಾರಿಸಲಾಗಿ ಕರ್ನಾಟಕರ ಗೌರವವು ಕಂಡುಬರುತ್ತದೆ ಎನ್ನುವ ಕಟ್ಟಿ ಈ ಬಗ್ಗೆ ಕರ್ನಾಟಕದ ಮಹತ್ವವನ್ನು ಹೇಳುವ ದೊಡ್ಡ ಪಟ್ಟಿಯನ್ನೇ ನೀಡಿದ್ದಾರೆ.

ಕಟ್ಟಿಯ ಕನ್ನಡ ನಾಡಿನ ಪ್ರೀತಿ ಇಲ್ಲಿ ವ್ಯಕ್ತವಾಗಿದೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಅಂದು ಸಮಗ್ರ ಭಾರತ ದೇಶವನ್ನು ಗಮನದಲ್ಲಿರಿಸಿದ ರಾಷ್ಟ್ರೀಯತೆಯ ಭಾವನೆ ಕಟ್ಟಿಯ ಕಾಲದಲ್ಲಿ ಇನ್ನೂ

ಜಾಗೃತವಾಗಿರಲಿಲ್ಲ. 'ದೇಶ' ಎಂಬ ಪದವನ್ನು ಅವರು ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡಕ್ಕೂ ಬಳಸಿದ್ದಾರೆ. ಆದರೆ ಕನ್ನಡ ನಾಡನ್ನು ಮಾತ್ರ 'ಮೈಸೂರು, ಮದ್ರಾಸಗಳಿಗೆ ಶೇರಿದ ಭಾಗಗಳ ಸಹಿತ' ಲೆಕ್ಕಕ್ಕೆ ತಗೆದುಕೊಳ್ಳುತ್ತಾರೆ. ರಾಷ್ಟ್ರೀಯ ಕಾಂಗ್ರೆಸ್ಸು ಇನ್ನೂ ಹುಟ್ಟಿರಲಿಲ್ಲ. ಹೀಗಾಗಿ ಹೊಸಗನ್ನಡದ ಆರಂಭ ಕಾಲದ ಪತ್ರಿಕೆಗಳಿಗೆ ರಾಷ್ಟ್ರೀಯತೆ ಒಂದು ವಿಷಯವಾಗಿರಲಿಲ್ಲ. ಅದೇ ರೀತಿ ಸಾಹಿತ್ಯ ಕೃತಿಗಳಲ್ಲೂ ರಾಷ್ಟ್ರೀಯತೆಯ ವಿಷಯ ಪ್ರಮುಖವಾಗಿ ಪ್ರಸ್ತಾಪವಾಗಲಿಲ್ಲ.

ಇಂಗ್ಲಿಷ್ ವಿದ್ಯೆ ಪಡೆದವರು ಆ ಮೂಲಕ ದುರ್ವ್ಯಸನಗಳಿಗೆ ಈಡಾಗುತ್ತಾರೆ ಎಂಬ ಅಭಿಪ್ರಾಯ ಕಟ್ಟಿಯವರ ಮಾತುಗಳಲ್ಲಿ ಇದೆ. ಇಂಗ್ಲಿಷ್ ವಿದ್ಯಾಭ್ಯಾಸದ ಕುರಿತು ಕಟ್ಟಿ ವ್ಯಕ್ತಪಡಿಸಿದ ವಿಚಾರಗಳಿಗೆ ಪೂರಕವಾದ ವಿಚಾರ ಸರಿಸುಮಾರು ಅದೇ ಕಾಲದಲ್ಲಿ ಜನಾಭಿಪ್ರಾಯವಾಗಿ ರೂಪುಗೊಂಡಿತ್ತು. ಮೈಸೂರು ಅರಮನೆ ಇಲಾಖೆ ಪ್ರಕಟಣೆಯಾದ 'ಹಿತಬೋಧಿನಿ' ಪತ್ರಿಕೆಯಲ್ಲಿ ಆ ಕಾಲದ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದವರ ಮನಃಸ್ಥಿತಿಯನ್ನು ಚಂದಾದಾರರೊಬ್ಬರು ಬರೆದು ಕಳುಹಿಸಿದ್ದನ್ನು ಪ್ರಕಟಿಸಲಾಗಿದೆ. 'ತಾವು ಇಂಗ್ಲಿಷ್ ಭಾಷೆಯೊಂದರಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡರೆ ಸ್ವಭಾಷೆಯು ತನ್ನಷ್ಟಕ್ಕೆ ತಾನೇ ಬರುವುದೆಂದು ಯೋಚಿಸಿಕೊಂಡು ಇಂಗ್ಲಿಷ್ ಭಾಷಾಭ್ಯಾಸಕ್ಕಾಗಿ ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿ, ಕರ್ನಾಟಕ ಭಾಷೆಯಲ್ಲಿ ಕೇವಲ ಜುಗುಪ್ಸಿತರಾಗಿದ್ದು' ಇವರಿಗೆ ಜುಗುಪ್ಸೆ ತಂದಿದೆ. ಕಟ್ಟಿ ಅಭಿಪ್ರಾಯ ಪಟ್ಟಿರುವುದಕ್ಕೂ ಈ ಅಭಿಪ್ರಾಯಕ್ಕೂ ಹತ್ತು ವರ್ಷಗಳ ಅಂತರ ಇದೆ ಎಂಬುದನ್ನೂ ಇಲ್ಲಿ ಲಕ್ಷಿಸಬೇಕು. ಒಟ್ಟಾರೆ ಆಂಗ್ಲ ವಿದ್ಯೆ ಪಡೆಯುವುದು ಹೆಚ್ಚುಗಾರಿಕೆ ಎಂಬ ಭಾವನೆ ಅಂದು ಪ್ರಚಲಿತದಲ್ಲಿತ್ತು.

೧೮೯೯ರಲ್ಲಿ ಪ್ರಕಟವಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕಾದಂಬರಿಯ ಈ ಭಾಗವನ್ನು ನೋಡಬೇಕು: "ಈ ಸಮಯದಲ್ಲಿ ಕಮಲಪುರದಲ್ಲಿ ಯೌವನಸ್ಥರೆಲ್ಲರೂ ಇಂಗ್ರೇಜಿ ಎಂಬ ಮ್ಲೇಂಛ ಭಾಷೆಯನ್ನು ಕಲಿತು ವರ್ಣಾಶ್ರಮ ಧರ್ಮ ಕರ್ಮಗಳನ್ನು ಕೈಗೊಳ್ಳದೆ ಕುಲಭ್ರಷ್ಟರಾಗಿ ವಿಲಾಯತಿಗೆ ಹೋಗುವುದು ಮುಂತಾದ ಅಧರ್ಮ ಕಾರ್ಯಗಳಲ್ಲಿ ಪ್ರವೃತ್ತರಾಗಿ, ವಿಧವಾ ವಿವಾಹ, ಯುವತಿ ವಿವಾಹ ಮುಂತಾದ ಅಘೋರ ಕರ್ಮಗಳನ್ನು ಮಾಡಲು ತೊಡಗಿ, ಗುರುದೇವರಲ್ಲಿ ಲೇಸಾಂಶವಾದರೂ ಭಯಭಕ್ತಿಯಿಲ್ಲದೆ, ಗುರುಮಠಕ್ಕೆ ಕೊಡಬೇಕಾದ ವರುಷಾಸನ ವಂತಿಗೆ ವರಾಡಗಳನ್ನು ಕೊಡದೆ, ಅಪಹರಿಸಿ ತಿಂದು, ಕರೆದು ಕೇಳಿದರೆ, ಇಂಗ್ರೇಜಿ ಶಬ್ದಗಳನ್ನು ಮಧ್ಯಮಧ್ಯದಲ್ಲಿ ಸೇರಿಸಿ, ಅರ್ಥವಿಲ್ಲದ ಹೊಲಸು ಮಾತುಗಳನ್ನಾಡಿ ನಿರ್ಭೀತರಾಗಿ ನಡೆದುಕೊಂಡು... ....." (ಪುಟ ೬೩). ಆ ಕಾಲದ ಸಂಪ್ರದಾಯ ನಿಷ್ಠರು ಇಂಗ್ಲಿಷ್ ಬಗ್ಗೆ ಹೊಂದಿದ ಅಭಿಪ್ರಾಯವನ್ನು ಇದು ತೋರಿಸುತ್ತದೆ. "ಇಂಗ್ರೇಜಿ ಕಲಿತ ಹುಡುಗರ ಹತ್ತಿರ ಮಾತನಾಡಿದರೆ, ಕುತರ್ಕಗಳನ್ನೇ ಮಾಡುತ್ತಾರೆ" (ಪುಟ ೧೦೦) "ಇಂಗ್ರೇಜಿ

ಕಲಿತವರು ಜಾತಿಕೆಡದೆ ಇರಲಾರರೆಂದು ನಮ್ಮಂತಹರು ಹೇಳಿದರೆ ಕೆಲವರೆಲ್ಲ ಕುಚೋದ್ಯ ಮಾಡುತ್ತಿದ್ದರಷ್ಟೆ. ಈಗ ಹೇಗೆ ನಮ್ಮ ಮಾತು! ಪಾದ್ರಿ ಪುಸ್ತಕಗಳನ್ನು ಓದುವುದು, ಇಂಗ್ರೇಜಿ ಕಲಿಯುವುದು. ..." (ಪುಟ ೨೦೭) ಇಲ್ಲೆಲ್ಲ ಇಂಗ್ಲಿಷ್ ವಿರೋಧಿ ಭಾವನೆಯೇ ಇದೆ. ಆದರೆ ಕಾದಂಬರಿಯ ಒಟ್ಟೂ ಆಶಯ ಇಂಗ್ಲಿಷ್ ಓದಿನ ಕಡೆಯೇ ಇದೆ. ಇಂಗ್ಲಿಷ್ ಓದಿದವರೇ ಕಾದಂಬರಿಯ ಕೊನೆಯಲ್ಲಿ ಸಾಮಾಜಿಕ ಸುಧಾರಣೆಗೆ ಕಾರಣರಾಗುತ್ತಾರೆ. ಈ ಕಾದಂಬರಿಯಲ್ಲಿ ಮಠದ ಸ್ವಾಮಿಗಳು 'ಹಿತಬೋಧಿನೀ' ಪತ್ರಿಕೆಯ ಪ್ರಬಂಧ ಓದಿದ ನಂತರವೇ ಸಮಾಜದ ಸುಧಾರಣೆಯತ್ತ ಮನಸ್ಸು ಮಾಡಿರುವುದನ್ನು ಚಿತ್ರಿಸಲಾಗಿದೆ. ಹೊಸ ವಿದ್ಯೆ ಕಲಿತ ಒಬ್ಬ ಬಿ.ಎ. ಪದವೀಧರನಿಗೆ ಅವರು ಧರ್ಮವಿಚಾರಕನ ಸ್ಥಾನವನ್ನು ವಹಿಸುವರು. ಇದೆಲ್ಲವೂ ಆಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ.

ವೆಂಕಟ ರಂಗೋ ಕಟ್ಟಿಯ ಹಾಗೆಯೇ ಕನ್ನಡದ ಬಗ್ಗೆ ಚಿಂತಿಸಿ ಕನ್ನಡದ ಬೆಳವಣಿಗೆಯ ಬಗ್ಗೆ ಅಪೂರ್ವ ಸಲಹೆಗಳನ್ನು ನೀಡಿದ ಇನ್ನೊಬ್ಬ ವ್ಯಕ್ತಿ ವಲ್ಲಭ ಮಹಾಲಿಂಗ ತಟ್ಟೆ ಮಾಸ್ತರು. ಇವರು ಬರೆದ 'ಕನ್ನಡಿಗರ ಜನ್ಮ ಸಾರ್ಥಕತೆ' ಕೃತಿಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ೧೯೩೯ರಲ್ಲಿ ಪ್ರಕಟಿಸಿತು. ಇದು ಮತ್ತು 'ಇಂದಿರಾಬಾಯಿ' ಕಾದಂಬರಿ ಒಂದೇ ವರ್ಷ ಪ್ರಕಟಗೊಂಡವುಗಳು. ಒಂದು, ಉತ್ತರದ ಮುಂಬೈ ಸರಕಾರದ ಧಾರವಾಡದಿಂದ ಪ್ರಕಟವಾಗಿದ್ದರೆ ಇನ್ನೊಂದು, ದಕ್ಷಿಣದ ಮದ್ರಾಸ್ ಸರಕಾರದ ಮಂಗಳೂರಿನಿಂದ ಪ್ರಕಟವಾದದ್ದು. ತಟ್ಟಿ ಮಾಸ್ತರು ಕನ್ನಡದ ಏಳ್ಗೆಯ ಬಗ್ಗೆ ಕೆಲವು ನಿರ್ದಿಷ್ಟ ಸಲಹೆಗಳನ್ನು ನೀಡಿದ್ದಾರೆ. ಕನ್ನಡ ನುಡಿಯನ್ನು ಯಾರೋ ನಿಂದಿಸಿದ್ದುದನ್ನು ಸಹಿಸದೆ ಕನ್ನಡ ಹಾಗೂ ಕನ್ನಡ ನೆಲ-ಜಲ - ಜನರ ಬಗ್ಗೆ ತುಂಬ ಅಭಿಮಾನದಿಂದ ಇಲ್ಲಿಯ ಉತ್ತಮಾಂಶಗಳನ್ನು ಅಂಥ ನಿಂದಕ ಮಿತ್ರರಿಗೆ ಮತ್ತು ಮೌನವಾಗಿ ಸಹಿಸುತ್ತ ಕುಳಿತ ಕನ್ನಡಾಭಿಮಾನಿಗಳಿಗೆ ತಿಳಿಸುವುದಕ್ಕೆಂದು ತಟ್ಟಿ ಮಾಸ್ತರರು ರಚಿಸಿದ ಪುಟ್ಟ ಕೃತಿ ಇದು.

ಪುಸ್ತಕದ ಅರಿಕೆಯಲ್ಲಿ ಲೇಖಕರು ಇದನ್ನು ಸ್ಪಷ್ಟಪಡಿಸಿದ್ದಾರೆ. ಕನ್ನಡ ನುಡಿಯ ಬಗ್ಗೆ ಒಬ್ಬಿಬ್ಬರು ಸ್ತುತಿ ರೂಪದ ನಿಂದೆಯನ್ನು ಪ್ರಕಟಿಸಿದರು. ಅವರಿಗೆ ಉತ್ತರ ಕೊಡುವ ಲವಲವಿಕೆಯು ಲೇಖಕರಿಗೆ ಉಂಟಾಗುತ್ತದೆ. ಅದರಂತೆ 'ಕನ್ನಡಿಗರಿಗೆ ಸವಿನಯ ಸೂಚನೆ' ಎಂಬ ಚಿಕ್ಕ ಲೇಖನವನ್ನು ಅವರು 'ಧನಂಜಯ'ದಲ್ಲಿ ಪ್ರಕಟಿಸಿದರು. ಅದು ಹಲಕೆಲವು ಕನ್ನಡ ಪಂಡಿತರಿಗೆ ಮಾನ್ಯವಾಯಿತು. ಅವರು ಅದನ್ನೇ ಹೆಚ್ಚಾಗಿ ಬೆಳಿಸಿ, ಪ್ರಕಟಿಸಬೇಕೆಂದು ಲೇಖಕರಿಗೆ ಸೂಚಿಸುತ್ತಾರೆ. ಇದು ಲೇಖಕರಿಗೆ ಪುಸ್ತಕ ಬರೆಯುವುದನ್ನು ಅನಿವಾರ್ಯವನ್ನಾಗಿ ಮಾಡಿತು. ಈ ಪುಸ್ತಕ 'ಧನಂಜಯ' ಪತ್ರಿಕೆಯಲ್ಲಿ ಲೇಖನ ರೂಪದಲ್ಲಿ ಪ್ರಕಟವಾಗಿತ್ತು. ಮತ್ತು ಇದನ್ನು ಬರೆಯಲು ಇವರಿಗೆ ಪ್ರಚೋದನೆ ನೀಡಿದ ಲೇಖನಗಳೂ ಪತ್ರಿಕೆಗಳಲ್ಲೇ ಬಂದವುಗಳು ಎಂಬುದನ್ನು ಇಲ್ಲಿ ಗಮನಿಸಬೇಕು.

ಕನ್ನಡಿಗರಾದ ಪ್ರತಿಯೊಬ್ಬ ವಕೀಲರು ದಿನಾಲು ಒಂದು ತಾಸನ್ನಾದರೂ ಗ್ರಂಥ ರಚನೆಯಲ್ಲಿ ಕಳೆಯುತ್ತ ತಮ್ಮ ಆಯುಷ್ಯದಲ್ಲಿ ಕನಿಷ್ಠ ಪಕ್ಷಕ್ಕೆ ಎರಡು, ಮೂರು ನೂತನ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ ಪ್ರತಿಜ್ಞೆ ಮಾಡಲು ತಟ್ಟಿ ಮಾಸ್ತರು ಹೇಳಿದ್ದಾರೆ. "ಸಣ್ಣ ದೊಡ್ಡ ಪದವಿಗಳೂ ಅಧಿಕಾರವೂ ಉಳ್ಳ ಪ್ರತಿಯೊಬ್ಬ ರಾಜಸೇವಕರು, ತಮ್ಮ ಬೆಲೆಯುಳ್ಳ ಅನುಭವಗಳಿಂದೊಡಗೂಡಿದ ಉಪಯುಕ್ತ ಗ್ರಂಥಗಳನ್ನು ಮೂರು ನಾಲ್ಕು ವರ್ಷಗಳಿಗೊಂದರಂತೆಯಾದರೂ ಪ್ರಕಟಿಸಹತ್ತಲು, ಪ್ರತಿಯೊಬ್ಬ ವಿದ್ಯ ಕಲಿತ ವ್ಯಾಪಾರಸ್ಥನು ತನ್ನ ಹೋರೆಯ ಜಾಣ್ಮೆಯನ್ನು ಬೆರೆಸಿ ಗ್ರಂಥ ರಚಿಸುವುದರಲ್ಲಿ ತೊಡಗಲು, ತಿಳುವಳಿಕೆಯುಳ್ಳ ಪ್ರತಿಯೊಬ್ಬ ಇನಾಮದಾರನು, ತನಗೆ ಉಂಬಳಿ ದೊರೆತ ಕಾರಣವನ್ನು ನೆನಪಿಟ್ಟು ತಕ್ಕ ಶೋಧಮಾಡಿ ತಮ್ಮ ಹಿರಿಯರ ಚರಿತ್ರೆಯನ್ನು ಜನರಲ್ಲಿ ಹಬ್ಬುಗೊಳಿಸಹತ್ತಲು, ಓದು ಬರಹವೇ ಉಪಜೀವನದ ಸಾಧನವೆಂದು ಬಗೆಯುತ್ತಿರುವ ಪಂಡಿತರು ತಮ್ಮ ಸಂಗ್ರಹದಲ್ಲಿಯೂ ಬೇರೆ ಎಡೆಗಳಲ್ಲಿಯೂ ದೊರೆಯುತ್ತಿರುವ ಹಳೆ ಗ್ರಂಥಗಳನ್ನು ಕಷ್ಟಬಟ್ಟು ಪ್ರಸಿದ್ಧ ಮಾಡಹತ್ತಲು, ವಿದ್ಯೆ ಕಲಿತ ಪ್ರತಿಯೊಬ್ಬರು, ಅಜ್ಞರಾದ ಉಳಿದ ಜನರ ಜ್ಞಾನವನ್ನು ಹೆಚ್ಚುಗೊಳಿಸುವುದಕ್ಕೆ ದ್ರವ್ಯ ಹಾನಿಯನ್ನು ಲೆಕ್ಕಿಸದೆ ಎತ್ತುಗಡೆ ಮಾಡಹತ್ತಲು, ಕನ್ನಡ ಭಾಷೆಯ ಬನವೂ ಸೊಬಗೂ ಬೆಡಗೂ ಅಂದಚೆಂದಗಳೂ ಅಳತೆ ಮೀರಿ ಕಂಗೊಳಿಸಹತ್ತುವವೆಂಬದರಲ್ಲಿ ಏನೂ ಸಂಶಯವಿಲ್ಲ" ಎಂಬ ಅವರ ಆಶಯದಲ್ಲಿ 'ಕನ್ನಡ ಧರ್ಮ' ಪಾಲನೆಯ ಕಳಕಳಿಯನ್ನು ಗುರುತಿಸಬಹುದು.

ಮರಾಠಿ ಮತ್ತು ಗುಜರಾಥಿ ಭಾಷೆಗಳಲ್ಲಿ ಪ್ರಕಟವಾಗುವ ಗ್ರಂಥಗಳಿಗಿಂತ ಕನ್ನಡ ಭಾಷೆಯಲ್ಲಿ ಪ್ರಕಟವಾಗುವ ಗ್ರಂಥಗಳು ಕಡಿಮೆ ಇರುವುದನ್ನು ಗಮನಿಸುವ ತಟ್ಟಿಯವರು, ಇದಕ್ಕೆ ಕಾರಣ ಕನ್ನಡಿಗರ ಕರ್ತವ್ಯ ಪರಾಙ್ಮುಖತೆ, ಅಜಾಗ್ರತೆ, ಸ್ವಭಾಷೆಯ ಬಗ್ಗೆ ದೃಢವಾಗಿರುವ ಉದಾಸೀನ ಬುದ್ಧಿ ಎನ್ನುವರು. 'ಈಗಿನ ಸ್ಥಿತಿಯು ಚಿರಕಾಲ ವುಳಿದರೆ, ಕನ್ನಡಿಗರೆಲ್ಲರು ಶುದ್ಧವಾದ ವಾಚಾ ಶಕ್ತಿಯನ್ನು ಕಳೆದುಕೊಂಡು, ಪಂಚತಂತ್ರದೊಳಗೆ ಹೇಳಿದ ರಾಜಪುತ್ರನಂತೆ ಸ,ಸೇ,ಮೀ,ರಾ ಎಂದು ಹುಚ್ಚರಂತೆ ಕೂಗುತ್ತ ತಿರುಗಾಡಬಹುದು' ಎಂಬ ಎಚ್ಚರಿಕೆಯ ಮಾತನ್ನು ಹೇಳುವರು. ಆಂಗ್ಲ ವಿದ್ಯಾಭ್ಯಾಸ ಮಾಡಿದ ಭಾರತದ ಅನ್ಯಭಾಷಿಕರು ಆ ಭಾಷೆಯಲ್ಲಿಯ ಉತ್ತಮ ಗ್ರಂಥಗಳನ್ನು ಅನುವಾದ ಮಾಡಿ, ಸ್ವತಂತ್ರ ನಿಬಂಧಗಳನ್ನು ಬರೆದು ಸ್ವದೇಶ ಬಾಂಧವರಿಗೆ ಅನಂತೋಪಕಾರ ಮಾಡಿರುವರು. ಆದರೆ ಕನ್ನಡದಲ್ಲಿ ಆ ರೀತಿಯ ಪರಿಸ್ಥಿತಿ ಇಲ್ಲ ಎಂದು ಅವರು ಕಳವಳ ಪಟ್ಟಿದ್ದಾರೆ.

ಮೈಸೂರು ನಾಡಿನ ಹೊರತು ಉಳಿದ ಕನ್ನಡ ನಾಡು ವಿದ್ಯೆಯ ಸಂಬಂಧದಿಂದ ಹೇಗಿದ್ದರೂ, ಅದರಲ್ಲಿ ಭಾಷಾ ಸೇವೆಯನ್ನು ಮಾಡುವವರು ತೀರ ವಿರಳವಾಗಿದ್ದಾರೆ. ಕಯ್ವುಡಿದು ಜಗ್ಗಿದರೆ ಮೆಯ್ಯು ತಾನೇ ಬರುವಂತೆ, ಭಾಷಾಸೇವೆಯನ್ನು ಮಾಡುವುದರಿಂದ ದೇಶೋನ್ನತಿಯಾಗುವುದೆಂಬ ಮಾತು ಬಹುಜನ ಕನ್ನಡಿಗರಿಗೆ ತಿಳಿಯಲೊಲ್ಲದು. ಸಮೀಪದ

ಮಹಾರಾಷ್ಟ್ರ, ಗುಜರಾಥ, ತೆಲಗು ದೇಶಗಳವರು ಮಾಡುವ ಸ್ವಹಿತದ ಪ್ರಯತ್ನಗಳನ್ನು ನೋಡಿಯೂ ತಿಳುವಳಿಕೆಯುಂಟಾಗಲೊಲ್ಲದು. ಭಾಷೆಯನ್ನು ಊರ್ಜಿತ ಸ್ಥಿತಿಗೆ ತರುವದು ಪ್ರಯತ್ನ ಸಾಧ್ಯವೆಂಬ ವಿಚಾರವೇ ಹುಟ್ಟಲೊಲ್ಲದು ಎಂದು ತಟ್ಟಿಯವರು ಹೇಳಿದ್ದಾರೆ.

ಕನ್ನಡ ಭಾಷೆ ಬಾಲ್ಯಾವಸ್ಥೆಯಲ್ಲಿದೆ ಎಂಬ ಆಕ್ಷೇಪವನ್ನು ತಳ್ಳಿಹಾಕುವ ಅವರು, ಪ್ರಾಚೀನ ಕನ್ನಡದಲ್ಲಿಯ ಪ್ರಮುಖ ಗ್ರಂಥಗಳನ್ನು ಉಲ್ಲೇಖಿಸುವರು. ಕನ್ನಡದಲ್ಲಿ ಅದಿಲ್ಲ ಅನ್ನುವವರು 'ಕೊಡಲಿಯ ಕಾವು ಕುಲಕ್ಕೆ ಮೃತ್ಯು' ಎಂಬ ಗಾದೆಯ ಹಾಗೆ ಇಡಿ ರಾಷ್ಟ್ರದ ಅನುಭವ ಜ್ಞಾನದ ಘಾತಕ್ಕೆ ಕಾರಣವಾಗುತ್ತಾರೆ ಎಂದಿದ್ದಾರೆ.

ಕೆಲವರು ಕನ್ನಡವು, ನೀರಸವೂ ಅಪೂರ್ಣವೂ ಇರುತ್ತದೆಂತಲೂ ಅದರಲ್ಲಿ ತೊಡಕುಳ್ಳ ವಿಚಾರಗಳನ್ನು ಪ್ರಕಟಿಸಲಿಕ್ಕೆ ಬರುವದಿಲ್ಲೆಂತಲೂ ಆಕ್ಷೇಪಿಸುತ್ತಾರೆ. ಈ ಆಕ್ಷೇಪಗಳು ಎಲ್ಲ ನಿತ್ಯ ವ್ಯವಹಾರವನ್ನು ಶುದ್ಧ ಕನ್ನಡ ಭಾಷೆಯಿಂದಲೇ ಶಾಂತವಾಗಿ ಸಾಗಿಸುವ ಒಕ್ಕಲಿಗರಿಂದ ತೆಗೆದುಕೊಳ್ಳಲ್ಪಡುತ್ತವೆ. ಇಂತಹ ಜನರೇ ಮುಂದೆ ಸಮಾಜದ ನೊಗದ ಭಾರವನ್ನು ಹೊರಲಿಕ್ಕೆ ಹವಣಿಸುತ್ತಾರೆ. ದುರ್ದೈವದಿಂದ ಕನ್ನಡ ನುಡಿಯೊಳತು ಹೀನಗಳು ಈ ಬಗೆಯ ಜನರ ಮೇಲೆ ಅವಲಂಬಿಸಿರುವುದರಿಂದ, ಕನ್ನಡಕ್ಕೆ ಬಡಿಯುವ ಧಕ್ಕಿಯು ಮಿಗಿಲಾಗಿದೆ. ಈ ಬಗೆಯ ಜನರು ತಮ್ಮ ವಿಚಾರಗಳನ್ನು ಪರಭಾಷೆಗಳಲ್ಲಿಯೇ ಪ್ರಕಟಿಸಲಿಕ್ಕೆ ಹವಣಿಸುವರು ಎಂದು ತಟ್ಟಿ ಮಾಸ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಸ್ಕೃತಕ್ಕಿಂತ ಕನ್ನಡವು ಯಾವುದರಲ್ಲಿಯೂ ಕಡಿಮೆಯದಲ್ಲ ಎಂಬುದು ಅವರ ದೃಢವಾದ ಅಭಿಪ್ರಾಯ. ಭಾಷೆಯ ಬೆಳವಣಿಗೆಗೆ ಶಬ್ದಕೋಶ ಅಗತ್ಯ ಎಂಬ ಅರಿವಿರುವ ತಟ್ಟಿಯವರು ಶಬ್ದಕೋಶವನ್ನು ಯಾವ ರೀತಿ ರಚಿಸಿದರೆ ಉತ್ತಮ ಎಂಬ ಬಗ್ಗೆ ಸಲಹೆಯನ್ನು ನೀಡುವರು. '..... ಪ್ರತಿಯೊಬ್ಬ ಜಾಣನಾದ ಕನ್ನಡಿಗನು ಬೌದ್ಧ ಧರ್ಮೋಪದೇಶಕನಂತೆ ಸುಜ್ಞಾನರೊಳಗೆ ಬೆರೆತು, ಹಾಡುಗಳು, ಲಾವಣಿಗಳು, ಹರಿದಾಸರ ಕಥೆಗಳು, ಗೊಂದಲಿಗರ ಪದಗಳು, ಜೋಗಿ ಜಂಗಮರ ವಚನಗಳು, ಒಕ್ಕಲಿಗರ ನುಡಿಗಳು, ಸ್ತ್ರೀಯರ ಸಂಭಾಷಣೆಗಳು, ಗಾದೆಯ ಮಾತುಗಳು, ಹಳೆಯ ಗ್ರಂಥಗಳು ಮುಂತಾದವುಗಳಲ್ಲಿ ದೊರೆಯುವ ಎಲ್ಲ ಕನ್ನಡ ಶಬ್ದಗಳನ್ನು ಉಚ್ಚ ವೃತ್ತಿಯಿಂದ ಒಟ್ಟುಗೂಡಿಸುತ್ತ ನಡೆದರೆ ಕನ್ನಡ ಕೋಶ ರಚನೆಯ ಕೆಲಸವು ಅತ್ಯಂತ ಸುಲಭವಾಗುವುದು. ಈ ಬಗ್ಗೆ ಶಬ್ದ ಸಂಗ್ರಹವಾದ ಮೇಲೆ, ಕನ್ನಡದ ಮೂಲ ಧಾತುಗಳನ್ನೂ ಸಿದ್ಧ ಶಬ್ದಗಳನ್ನೂ ಗೊತ್ತುಪಡಿಸಬೇಕು. ಬಳಿಕ ಹಳೆಯ ಗ್ರಂಥಗಳೊಳಗಿರುವ ಮತ್ತು ಈಗ ರೂಢಿಯಲ್ಲಿರುವ ಎಲ್ಲ ಕೃತ್ತದ್ಧಿತ ಪ್ರತ್ಯಯಗಳಿಂದ ಸಾಧಿತ ಶಬ್ದಗಳನ್ನುಂಟುಮಾಡಬೇಕು. ಈ ಸಾಧಿತ ಶಬ್ದಗಳನ್ನೂ ಸಮಸ್ತ ಶಬ್ದಗಳನ್ನೂ ಇಂತಿತಹ ತತ್ಸಮ- ತದ್ಭವ- ಅನ್ಯದೇಶ್ಯ ಶಬ್ದಗಳ ಬದಲು ಉಪಯೋಗಿಸಬಹುದೆಂದು ರೂಢಿಯನ್ನೂ ಅರ್ಥವನ್ನೂ ಅನುಲಕ್ಷಿಸಿ ಗೊತ್ತುಪಡಿಸಬೇಕು. ಇವೆಲ್ಲ ಶಬ್ದಗಳನ್ನು ಕನ್ನಡ ಕೋಶದಲ್ಲಿ ಸೇರಿಸಬೇಕೆಂದು ಬೇರೆ ಹೇಳಲಿಕ್ಕೆ ಬೇಡ' ಎಂದು

ಹೇಳಿದ್ದಾರೆ. ಶತಮಾನದ ಹಿಂದಿನ ಕನ್ನಡ ಪರ ಕಾಳಜಿ ಇರುವ ವ್ಯಕ್ತಿಯೊಬ್ಬರ ಅಭಿಪ್ರಾಯ ಇದು ಎಂಬುದು ಮಹತ್ವದ ಸಂಗತಿ.

ಕನ್ನಡ ಭಾಷೆಯ ಉದ್ಧಾರಕ್ಕೆ ತಟ್ಟಿಯವರು ಕೆಲವು ಸಲಹೆಗಳನ್ನು ನೀಡಿದ್ದಾರೆ.

೧)ನಾಶವಾಗುತ್ತಿರುವ ಗ್ರಂಥಗಳನ್ನು ಶೋಧಿಸಿ ಪ್ರಕಟಿಸುವುದು, ಭಾಷಾ ಸೇವಕರ ಮೊದಲನೆಯ ಕೆಲಸವು. ಕನ್ನಡ ಗ್ರಂಥಗಳನ್ನು ವೈದಿಕರ ಮನೆಗಳು, ಲಿಂಗವಂತ ಮಠಗಳು, ಬಸ್ತಿಗಳು, ವಿದ್ವಾಂಸರ ನಿವಾಸ ಸ್ಥಾನಗಳು, ಹಳೆಯ ರಾಜಧಾನಿಗಳು, ದೇಸಾಯಿ ದೇಶಪಾಂಡೆ ಮುಂತಾದ ಇನಾಮದಾರರ ಕಾಗದ ಪತ್ರಗಳ ಗಂಟುಗಳು ಮುಂತಾದವುಗಳಲ್ಲಿ ಆಸ್ಥೆಯಿಂದಲೂ ಎಚ್ಚರದಿಂದಲೂ ಶೋಧಿಸಿ, ದೊರೆತವುಗಳನ್ನು ಪಂಡಿತರಿಂದ ಪರಿಷ್ಕರಿಸಿ, ಅಚ್ಚುಹಾಕಿಸಿ, ಪ್ರಕಟಿಸಿದರೆ ಇನ್ನೂ ಎಷ್ಟೋ ಹಳೆಯ ಗ್ರಂಥಗಳು ಕಣ್ಣಿಗೆ ಬೀಳುವವು ಎಂದು ಅವರು ಹೇಳುವರು. ಈ ಸಂಬಂಧದಲ್ಲಿ ಮೈಸೂರು ಪ್ರಾಂತದಲ್ಲಿ 'ಕರ್ನಾಟಕ ಕಾವ್ಯಮಂಜರಿ'ಯು ಹಳೆಯ ಗ್ರಂಥಗಳನ್ನು ಪ್ರಕಟಿಸುತ್ತಿರುವ ಕಾರ್ಯವನ್ನು ಅವರು ಶ್ಲಾಘಿಸುವರು. ತಟ್ಟಿಯವರ ಈ ಸಲಹೆ ಮುಂದೆ ಗ್ರಂಥ ಶೋಧನೆ ಪ್ರಕಟಣೆ ಕಾರ್ಯಗಳನ್ನು ಕೈಗೊಂಡವರಿಗೆ ಪ್ರೇರಣೆ ನೀಡಿರಬಹುದು. ಗೆಳೆಯರ ಗುಂಪಿನವರು, ಹಲಸಂಗಿ ಗೆಳೆಯರು ಜಾನಪದ ಸಂಗ್ರಹದಲ್ಲಿ ತೊಡಗುವರು. ಇದು ನವೋದಯ ಕಾವ್ಯದ ಮೇಲೆ ನಿಶ್ಚಿತವಾದ ಪರಿಣಾಮವನ್ನು ಉಂಟುಮಾಡಿದೆ.

೨)ಬಹುಜನ ಕನ್ನಡಿಗರು ಗ್ರಂಥಕರ್ತೃತ್ವವನ್ನು ಪಡೆಯುವುದೇ ಭಾಷಾ ಸೇವೆಯ ೨ನೆಯ ಕೆಲಸವು ಎಂದು ತಟ್ಟಿ ಹೇಳಿದ್ದಾರೆ.

೩)ಇಂಗ್ಲಿಷದಲ್ಲಿರುವ ಉಪಯುಕ್ತ ಗ್ರಂಥಗಳನ್ನು ಭಾಷಾಂತರಿಸುವುದು ೩ನೆಯ ಕೆಲಸವು. ಪಾಶ್ಚಿಮಾತ್ಯರ ಸಹವಾಸದಿಂದ ಆದ ಹಲವು ಲಾಭಗಳಲ್ಲಿ, ಪ್ರತಿಯೊಂದು ವಿಷಯದಲ್ಲಿ ಪೂರ್ಣತೆ ಪಡೆದ ಉಪಯುಕ್ತ ಗ್ರಂಥ ಸಂಗ್ರಹವು ಕನ್ನಡಿಗರ ಕಯ್ಗೆ ಅನಾಯಾಸವಾಗಿ ಸಿಕ್ಕಿರುವದೊಂದಾಗಿದೆ. ಆ ಗ್ರಂಥಗಳಲ್ಲಿ ಕನ್ನಡ ನಾಡಿಗೆ ಪ್ರಯೋಜನಕರವಾದವುಗಳನ್ನು ಭಾಷಾಂತರಿಸುವ ಕೆಲಸವು ಕನ್ನಡಿಗರ ಕಡೆಗುಂಟು ಎಂದು ಹೇಳುವ ತಟ್ಟಿಯವರು, ಒಕ್ಕಲುತನದ ವಿಷಯಗಳು, ಪದಾರ್ಥ ವಿಜ್ಞಾನದ ವಿಷಗಳು, ರಸಾಯನ ವಿಷಯವು, ಕೈಗಾರಿಕೆಯ ವಿಷಯ ಕುರಿತ ಇಂಗ್ಲಿಷ್ ಗ್ರಂಥಗಳನ್ನು ಭಾಷಾಂತರಿಸಲು ಸಲಹೆ ಮಾಡುವರು.

೪)ಐತಿಹಾಸಿಕ ಗ್ರಂಥಗಳನ್ನು ಪ್ರಕಟಿಸುವುದೇ ಭಾಷಾ ಸೇವಕರ ೪ನೆಯ ಕೆಲಸ.

೫)ನೂತನ ವಿದ್ಯೆಯಿಂದ ಆಗುವ ಪ್ರಯೋಜನಕ್ಕಿಂತ ಅತ್ಯಂತ ಭಿನ್ನತರದ ಸುಧಾರಣೆಯನ್ನುಂಟು ಮಾಡುವ ಸಂಸ್ಕೃತ ಗ್ರಂಥಗಳನ್ನು ಭಾಷಾಂತರಿಸುವುದು ಕನ್ನಡಿಗರ ೫ನೆಯ ಕೆಲಸವು ಎಂದು ತಟ್ಟಿ ಹೇಳುವರು.

ಕನ್ನಡ ಸೇವೆ ಮಾಡುವುದರಲ್ಲಿಯೇ ಕನ್ನಡಿಗರ ಜನ್ಮಸಾರ್ಥಕತೆ ಇದೆ ಎನ್ನುವುದು ಅವರ ದೃಢ ವಿಶ್ವಾಸ.

ವೆಂಕಟ ರಂಗೋ ಕಟ್ಟಿ ಹಾಗೂ ವಲ್ಲಭ ಮಹಾಲಿಂಗ ತಟ್ಟೆಯವರ ಹಾಗೆಯೇ ಕನ್ನಡಕ್ಕಾಗಿ ಕೊರಳೆತ್ತಿದ ಮತ್ತೊಬ್ಬರು ಶಾಂತ ಕವಿಗಳು. ಕನ್ನಡದ ಮೇಲೆ ಮರಾಠಿಯ ಆಕ್ರಮಣವನ್ನು ಅವರು ಖಂಡಿಸಿದ್ದಾರೆ. ೧೮೮೬ರ ಸುಮಾರಿಗೇ ಅವರು ಕನ್ನಡದಲ್ಲಿ ಕೀರ್ತನೆ, ನಾಟಕ, ಕಥನ ಕವನ, ಲಾವಣಿ ಮೊದಲಾದವುಗಳನ್ನು ರಚಿಸಿದ್ದರು. ೧೮೮೬ರಲ್ಲಿ ತಾವು ರಚಿಸಿದ 'ಸೀತಾರಣ್ಯ ಪ್ರವೇಶ' ನಾಟಕದ ಪ್ರಸ್ತಾವನೆಯಲ್ಲಿ ಕನ್ನಡ ಭಾಷೆಯ ಸ್ಥಿತಿ ಗತಿಗಳನ್ನು ವಿವರಿಸುವುದು ಹೀಗೆ: "…. ನಂಮ ಕನ್ನಡ ಭಾಷೆಯ ವಿಷಯದಲ್ಲಿ ಪ್ರಯತ್ನ ಮಾಡದ್ದರಿಂದ ಈಗ ಅದು ತೀರ ಕೀಳ ಸ್ಥಿತಿಯಲ್ಲಿರುವುದು. ಇದು ನಮಗೆ ಬಹಳೇ ದೊಡ್ಡ ಕುಂದು. ಈ ಕುಂದನ್ನು ದೂರಮಾಡಿಕೊಳ್ಳದಿದ್ದರೆ ನಾವೆಲ್ಲರೂ ಸಜೀವ ಶವಗಳಾಗಿ ಭೂಮಿಗೆ ಮಾತ್ರ ಭಾರ. ನಂಮ ಹಿರಿಯರಂತೆ ಈಗಿನ ನಮ್ಮ ಕನ್ನಡ ಪಂಡಿತರು ಪ್ರಯತ್ನ ಮಾಡಿದರೆ ಇವರಿಗಾದರೂ ಹಿರಿಯರಂಥ ಕೀರ್ತಿಯೂ ಅಮರತ್ವವೂ ಜಗತ್ತನ್ನು ಎಚ್ಚರಿಸುವ ಶಕ್ತಿಯೂ ಕೆಲವು ಕಾಲಾಂತರದಿಂದಲಾದರೂ ಬರುವ ಸಂಭವ ಉಂಟು. ಈ ಸಂಗತಿಯು ಯಃಕಶ್ಚಿತರೂ ಅಲ್ಪಮತಿಗಳೂ ದರಿದ್ರರೂ ಉದರದಾಸರೂ ಆಗಿರುವ ನಂಮಂಥವರಿಗೆ ಸುದ್ಧಾ ತಿಳಿಯುತ್ತದೆ" ಎಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ಹಳೆಯ ಗ್ರಂಥಗಳ ಪುನರ್ ಮುದ್ರಣ: ಆರಂಭ ಕಾಲದ ಪತ್ರಕರ್ತರಿಗೆ ನಾಡಿನ ವ್ಯಾಪ್ತಿಯ ಪರಿಕಲ್ಪನೆ ಇದ್ದಹಾಗೆಯೇ ನುಡಿಯ ಶ್ರೀಮಂತಿಕೆಯ ಅರಿವೂ ಇತ್ತು. ನುಡಿ ಶ್ರೀಮಂತಿಕೆ ಕಾಲಗರ್ಭದಲ್ಲಿ ಅಜ್ಞಾತವಾಗಿ ಉಳಿದು ಅವಜ್ಞೆಗೆ ಈಡಾಗಿ ನಾಶವಾಗಬಹುದು ಎಂಬ ಭಯವೂ ಅವರನ್ನು ಕಾಡುತ್ತಿತ್ತು. ಆ ಭಯ ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ'ದಲ್ಲಿಯೇ ವ್ಯಕ್ತವಾಗಿದೆ. ಮುದ್ರಣ ಯಂತ್ರ ಬರುವ ಪೂರ್ವದಲ್ಲಿ ತಾಡೋಲೆಯ ಮೇಲೋ ಇಲ್ಲ ದಪ್ಪ ಕಾಗದದ ಮೇಲೆಯೋ ಬರೆದು ಇಡುತ್ತಿದ್ದರು. ಗ್ರಂಥದ ಪ್ರತಿಗಳು ಒಂದೆರಡು ಮಾತ್ರ ಇರುತ್ತಿದ್ದವು. ಹಿಂದಿನ ಕಾಲದಲ್ಲಿ ದಾನಗಳಲ್ಲಿ ಗ್ರಂಥ ದಾನವೂ ಸೇರಿ ಪುಸ್ತಕಗಳು ಉಳಿದುಬರುವುದಕ್ಕೆ ಕೆಲಮಟ್ಟಿಗೆ ನೆರವಾಗಿದ್ದವು. ಆದರೂ ಈ ದಾನ ಸೌಭಾಗ್ಯ ಎಲ್ಲ ಗ್ರಂಥಗಳಿಗೂ ಲಭ್ಯವಾಗುತ್ತಿರಲಿಲ್ಲ. ಆಗ ಪುಸ್ತಕಗಳು ಹೇಗೋ ನಾಶವಾಗುವ ಅಪಾಯ ಇರುತ್ತಿದ್ದವು. ಪ್ರಾಚೀನ ಗ್ರಂಥಗಳ ಸಂರಕ್ಷಣೆ ಪುನರ್ಮುದ್ರಣದ ಬಗ್ಗೆ 'ಮಂಗಳೂರು ಸಮಾಚಾರ'ದಲ್ಲಿ ಬಂದ ಈ ಭಾಗ ಹೀಗಿದೆ:-

'ಬೆಂಗಳೂರು ಸದರು ಮುನಶಿಪರು ಹೋದ ವರ್ಷದಲ್ಲಿವೊಂದು ಮೊಳಿ (sic) ಛಾಪಖಾನೆ ಯಾನೆ ವರ್ಣಯಿಟ್ಟು ಅದರಲ್ಲಿ ಕೆಲಉ ಕನಡು ಪುಸ್ತಕಗಳಂನು ಸರ್ವರ ವುಪ ರಾರಕ್ಕಾಗಿ ಛಾಪಿಸಲಿಕ್ಕೆ ಆರಂಭ ಮಾಡಿದ್ದಾರೆ. ಯಿದು ಬಹಳ ವುತ್ತಮವಾದ ಕೆಲಸ. ಯಾತ

ಕ್ಕೆಂದರೆ ಹಿಂದು ಜನರಲ್ಲಿ ವೊಬ್ಬನ ಹತ್ತಿರವೊಂದು ವಿಧದ ಪುಸ್ತಕಯಿದ್ದರೆ ಮತ್ತೊಬ್ಬನಲ್ಲಿ ಯಿಂನೊಂದು ಪ್ರಕಾರದ ಪುಸ್ತಕಯಿರುತ್ತದೆ. ಹೀಗಾಗಿ ಬೇಕಾದ ಪುಸ್ತಕಗಳು ವೊಂದೆ ಕಡೆಯಲ್ಲಿ ಯಿಲ್ಲದೆ ಅವುಗಳು ಸತ್ಯವೋ ಸುಳ್ಳೊ ಯೆಂಬುದು ವಿಚಾರಿಸಲಿಕ್ಕೆ ಅನುಕೂಲ ವಿಲ್ಲವಾಗಿದೆ. ಯಿದೇ ಮೇರೆಗೆ ಯಾರಾದರೂ ಛಾಪಖಾನೆಯಿಟ್ಟು ಹಿಂದು ಶಾಸ್ತ್ರವಂನು ಛಾಪಿಸಿದರೆ ಬೇಕಾದ ಪುಸ್ತಕಗಳು ಸುಲಭವಾಗಿ ಯಲ್ಲರ ಕೈಯಲೂ ಸೇರಬಹುದಾಗಿ ರುತ್ತದೆ. ಪೂರ್ವದಲ್ಲಿದ್ದ ಪುರಂದರದಾಸ ಮುಂತಾದವರು ಮಾಡಿದ ಪದಗಳೂ ಯಾ ಅಚ್ಚು ಕನಡ ಕಾವ್ಯಗಳೂ ದಿವಸ ಹೋದ್ದಷ್ಟು ಕಡಿಮೆಯಾಗಿ ಕಡೆಗೆ ಪೂರ್ಣವಾಗಿ ಕಾಣದೆ ಹೋದಾವು. ಆದ ಕಾರಣ ಅವರು ಯಿಂನು ಮುಂದೆ ವೊಳ್ಳೆ ವೊಳ್ಳೆ ಪುಸ್ತಕಗಳು ಛಾಪಸ್ಯಾರು ಯೆಂದು ತಿಳಿದು ಕೊಳ್ಳುತ್ತೇವೆ. ಮತ್ತು ಯಾವರೆಗೆ ನಂಮ್ಮ ಹತ್ತರ ಬಂದ ಪುಸ್ತಕಗಳ ಹೆಸರುಗಳನ್ನು ಯಿ ಕೆಳಗೆ ಬರೆದಿರುತ್ತದೆ' ಎಂದು ಪುಸ್ತಕಗಳ ಹೆಸರು ಕೊಟ್ಟಿದ್ದಾರೆ.

ಪ್ರಾಚೀನ ಗ್ರಂಥಗಳ ಪುನರ್ ಮುದ್ರಣ ವಿಷಯದಲ್ಲಿ 'ಮಂಗಳೂರು ಸಮಾಚಾರ'ದಲ್ಲಿ ವ್ಯಕ್ತವಾದ ಈ ಆಸ್ಥೆ ಗಮನಾರ್ಹವಾದದ್ದು. "ಇಲ್ಲಿ ಉಲ್ಲೇಖಿತವಾದ ಮುದ್ರಣ ಯಂತ್ರ, ಬೆಂಗಳೂರಿನಲ್ಲಿ ಕ್ರಿ.ಶ. ೧೮೪೨-೪೩ರಲ್ಲಿ ಓರ್ವ 'ಮೆಜಿಸ್ಟ್ರೇಟ'ನು ಸರಕಾರದ ವತಿಯಿಂದ ಸ್ಥಾಪಿಸಿದ ಕಲ್ಲಚ್ಚಿನ ಮುದ್ರಣ ಯಂತ್ರ."[೧] ಒಂದು ಸಾಹಿತ್ಯದ ಬೆಳವಣಿಗೆಯಲ್ಲಿ ಹೊಸ ಹೊಸ ಗ್ರಂಥಗಳ ರಚನೆ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಆ ಪರಂಪರೆಯ ಪ್ರಾಚೀನ ಅಮೂಲ್ಯ ಗ್ರಂಥಗಳನ್ನು ರಕ್ಷಿಸಿಟ್ಟುಕೊಳ್ಳುವುದು. ಆ ಅರಿವು 'ಮಂಗಳೂರು ಸಮಾಚಾರ'ಕಾರನಿಗೆ ಚೆನ್ನಾಗಿ ಇದ್ದುದನ್ನು ಇಲ್ಲಿ ಗಮನಿಸಬಹುದು.

ಇಂಥ ಒಂದು ಕಾರ್ಯದಲ್ಲಿ ಹೆಜ್ಜೆ ಇಟ್ಟವರಿಗೆ ಉತ್ತಮ ಮುದ್ರಣ ಎಲ್ಲ ಕಡೆಯೂ ದೊರೆಯುತ್ತಿರಲಿಲ್ಲ. ಬೆಂಗಳೂರು, ಮಂಗಳೂರುಗಳಲ್ಲಿ ಮುದ್ರಣವು ಸಾಕಷ್ಟು ಸುಧಾರಿಸಿದ್ದರೂ ಧಾರವಾಡದ ಕಡೆ ಮುದ್ರಣ ಮಾಡಿಸಿಕೊಳ್ಳುವವರಿಗೆ ಗೋಳು ತಪ್ಪಿರಲಿಲ್ಲ. ವೆಂಕಟರಂಗೋ ಕಟ್ಟಿ, ರಾ.ಹ. ದೇಶಪಾಂಡೆ ಮೊದಲಾದವರು ಮಂಗಳೂರು, ಬೆಂಗಳೂರು ಕಡೆ ಅಲೆದಾಡಬೇಕಿತ್ತು. ಸಂಪರ್ಕ ವ್ಯವಸ್ಥೆ ಚೆನ್ನಾಗಿ ಇರದ ಅಂದಿನ ಕಾಲದಲ್ಲಿ ಸಂಚಾರ ಸುಲಭವಾಗಿರಲಿಲ್ಲ. ಇವರ ಕಷ್ಟ 'ವಾಗ್ಭೂಷಣ'ದಲ್ಲಿ (೧೯೧೯) ವರ್ಣಿತವಾಗಿದೆ.

'ಇಲ್ಲಿಯ ಮುದ್ರಣಾಲಯಗಳಿಗೆ ಕೆಲಸವೂ ಇದ್ದು ದುಡ್ಡೂ ಬರುತ್ತಿದ್ದರೂ ಅಕ್ಕಸಾಲಿ ಶಿಂಪಿಗರಂತೆ ಎಡತಾಕಿಸುತ್ತಾರೆ. ಇಷ್ಟಾದರೂ ಅಭಿವೃದ್ಧಿ ಇಲ್ಲ. ಮೈಸೂರು, ಮಂಗಳೂರು, ಬೆಂಗಳೂರು ಕಡೆಯ ಅಭಿವೃದ್ಧಿ ಇಲ್ಲ. ಮೈಸೂರು, ಮಂಗಳೂರು, ಬೆಂಗಳೂರು ಕಡೆಯ ಅಭಿವೃದ್ಧಿ ಇಲ್ಲೇಕೆ ಇಲ್ಲ' ಎಂಬ ಚಿಂತೆ ಆ ಲೇಖಕರಿಗೆ. ಉತ್ತಮವಾಗಿ ಪುಸ್ತಕ ಪ್ರಕಟಿಸುವ ವಿಚಾರ ಬಂದಾಗಲೆಲ್ಲ ಮಂಗಳೂರಿಗೆ ಹೋಗಬೇಕು ಎನ್ನುವ ಮನಸ್ಸು

---

೧. ಹೊಸಗನ್ನಡದ ಅರುಣೋದಯ: ಶ್ರೀನಿವಾಸ ಹಾವನೂರ

ಉಂಟಾಗುವುದು ಇನ್ನು ಎಷ್ಟು ಕಾಲ? ಎಂಬ ಪ್ರಶ್ನೆ ಉತ್ತಮ ಮುದ್ರಣ ಅಪೇಕ್ಷಿಸುವ ಎಲ್ಲರದೂ ಆಗಿತ್ತು.

ದೋಷ ರಹಿತ ಮುದ್ರಣ ಕಾಳಜಿ: ತಾವು ಮುದ್ರಿಸಿದ ಪುಸ್ತಕ ಅಚ್ಚಿನ ದೋಷವಿಲ್ಲದೆ ಬರಬೇಕು ಎನ್ನುವುದು ಅಂದಿನವರ ಅಪೇಕ್ಷೆಯಾಗಿತ್ತು. ಇಂದು ಮುದ್ರಣವು ಅತ್ಯಾಧುನಿಕ ರೂಪ ತಾಳಿ ಸುಲಭ ಅನ್ನಿಸಿರುವಾಗಲೂ ಮುದ್ರಣ ದೋಷವು ಉಳಿದಿರುತ್ತದೆ. ಹೀಗಿರುವಾಗ ಶತಮಾನದ ಹಿಂದಿನವರ ಈ ಕಾಳಜಿ ಗಮನಾರ್ಹ. ಪುಸ್ತಕಗಳಲ್ಲಿ ಒಪ್ಪೋಲೆ ಕೊಡುತ್ತಿದ್ದರು. 'ವಾಚಕರು ಸುಧಾರಿಸಿಕೊಂಡು ಓದಬೇಕು' ಎಂಬ ವಿನಂತಿ ಇರುತ್ತಿದ್ದವು. ಇಂಥ ತಪ್ಪುಗಳು ಇರಬಾರದು ಎನ್ನುವ ಸದುದ್ದೇಶದಿಂದ ಧಾರಾವಾಹಿಯಾಗಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ 'ಕರ್ನಾಟಕ ಗ್ರಂಥಮಾಲಾ' ಪತ್ರಿಕೆಯವರು ಹೊಸ ತಂತ್ರವೊಂದನ್ನು ರೂಪಿಸಿ ಜಾರಿಗೆ ತಂದರು. ಧಾರಾವಾಹಿಯಾಗಿ ಬಂದ ಕೃತಿ ಪುಸ್ತಕ ರೂಪದಲ್ಲಿ ಬರುವಾಗ ಆ ದೋಷಗಳನ್ನು ನಿವಾರಿಸಿಕೊಳ್ಳಲು ಇದು ಸಹಾಯ ಮಾಡಿತು. ಜೊತೆಗೆ ಪ್ರಕಾಶಕರ ಶ್ರಮವೂ ಉಳಿಯಿತು. ತಮ್ಮ ಪತ್ರಿಕೆಯ ಮೊದಲ ವರ್ಷದ 3ನೆಯ ಸಂಚಿಕೆ (ಸೆಪ್ಟೆಂಬರ್ ೧೮೯೩)ಯಲ್ಲಿ ಅವರು ನೀಡಿರುವ ಪ್ರಕಟಣೆ ಗಮನಾರ್ಹವಾದದ್ದು:

"ಕರ್ನಾಟಕ ಗ್ರಂಥಮಾಲೆ + ಪ್ರೈಜ್ ಕೂಪನ್- ಈ ಸಂಚಿಕೆಯಲ್ಲಿರುವ ಅಕ್ಷರ್ಪ ತಪ್ಪುಗಳನ್ನು ಯಾರು ತೋರಿಸುತ್ತಾರೋ ಅವರಿಗೆ ೨ ರುಪಾಯಿ ಬಹುಮಾನವನ್ನು ಕೊಡಲು ನಿಶ್ಚೈಸಿರುತ್ತೇವೆ. ಅಂಥಾ ತಪ್ಪುಗಳನ್ನು ಈ ಕೆಳಗಿನ ಫಾರಮಿನಲ್ಲಿ ಬರೆದು, ಅದನ್ನು ಕತ್ತರಿಸಿ, ಕವರಿನ ಮೇಲೆ 'ಪ್ರೈಜ್' ಎಂದು ಬರೆದು, ಗ್ರಂಥ ಮಾಲೆಯ ಮ್ಯಾನೇಜರರಿಗೆ ಅಕ್ಟೋಬರ್ ೫ನೆ ತಾರೀಖಿನ ಒಳಗಾಗಿ ಕಳುಹಿಸಬೇಕು. 6ನೆ ತಾರೀಖಿನ ದಿವಸ ನಮ್ಮಲ್ಲಿಗೆ ಬಂದ ಕವರುಗಳನ್ನೆಲ್ಲ ಸೇರಿಸಿ, ಯಾರ ಕವರನ್ನು ಮೊದಲು ಒಡೆಯುತ್ತೇವೆಯೋ ಅವರಿಗೆ ಮೇಲೆ ಹೇಳಿದ ಬಹುಮಾನವನ್ನು ಕಳುಹಿಸುತ್ತೇವೆ. ತಪ್ಪುಗಳನ್ನು ಕೆಳಗಿರುವ ಫಾರಮಿನಲ್ಲಿ ಬರೆಯಬೇಕು."[೨] ಈ ರೀತಿ ತಪ್ಪಿಲ್ಲದೆ ಪುಸ್ತಕ ಹೊರ ತರುವ ಕಾಳಜಿ ಇಂದಿನ ಲೇಖಕರಿಗೆ/ ಪ್ರಕಾಶಕರಿಗೆ ಮಾದರಿಯಾಗಿದೆ.

ಆರಂಭ ಕಾಲದ ಪತ್ರಿಕೆಗಳಲ್ಲಿ ಕೆಲವು ಸಾಹಿತ್ಯವನ್ನೇ ಪ್ರಕಟಿಸುವ ಉದ್ದೇಶದಿಂದ ಹೊರಬರುತ್ತಿದ್ದವು. 'ಗ್ರಂಥಮಾಲಾ', 'ಐತಿಹಾಸಿಕ ಲೇಖ ಸಂಗ್ರಹ' ಮುಂತಾದ ಪತ್ರಿಕೆಗಳು ಪ್ರಾಚೀನ ಕೃತಿಗಳ ಪ್ರಕಟಣೆಗೆ ಮೀಸಲಾಗಿದ್ದವು. ಉಳಿದ ಪತ್ರಿಕೆಗಳೂ ಇತರ ವಿಷಯಗಳ ಜೊತೆಯಲ್ಲಿ ಸಾಹಿತ್ಯ ಕೃತಿಗಳು, ಸಾಹಿತ್ಯಕ ವಿಚಾರಗಳನ್ನು ಪ್ರಕಟಿಸುತ್ತಿದ್ದವು. ಹಳೆಯ ಗ್ರಂಥಗಳನ್ನು ಪ್ರಕಟಿಸಲು ಕರೆ ನೀಡಿದ್ದ ವಲ್ಲಭ ಮಹಾಲಿಂಗ ತಟ್ಟಿಯವರು ಈ ದಿಸೆಯಲ್ಲಿ ಕರ್ನಾಟಕ ಕಾವ್ಯ ಮಂಜರಿಯು ಮಾಡುತ್ತಿದ್ದ ಕಾರ್ಯದ ಬಗ್ಗೆ ಒಳ್ಳೆಯ

---

೨. ಉದ್ಧೃತ- ಹೊಸಗನ್ನಡದ ಅರುಣೋದಯ

ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ಪತ್ರಿಕೆಗಳ ವಿಷಯಗಳು ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಹಿತ್ಯಕ ಆಗಿದ್ದವು. ಲಲಿತ ಸಾಹಿತ್ಯ ರಚನೆಗಿಂತ ಹಳೆಯ ಕಾವ್ಯಗಳನ್ನು ಪರಿಷ್ಕರಿಸಿ ಪತ್ರಿಕೆಗಳ ಮೂಲಕ ಪ್ರಕಟಿಸುವ ಕಾರ್ಯ ಆದ್ಯತೆಯನ್ನು ಪಡೆದುಕೊಂಡಿತ್ತು.

ಅಂದಿನ ಸಂಕ್ರಮಣ ಕಾಲದಲ್ಲಿ ಹೊಸದನ್ನು ಕೊಡಬೇಕು ಎಂಬ ಪ್ರಯತ್ನ ನಡೆದದ್ದು ವಿರಳ. "ಹೊಸ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಯಬೇಕೆಂಬ ಉತ್ಸಾಹ" ಬರಹಗಾರರಿಗೆ ಇದ್ದಿರಲಿಲ್ಲ ಎಂಬ ಮಾತು 'ಶ್ರೀಕೃಷ್ಣ ಸೂಕ್ತಿ'[೩]ಯಲ್ಲಿ ಬಂದಿದೆ. "ಹಿಂದೆ ಇದ್ದವುಗಳನ್ನೇ, ಗದ್ಯರೂಪವಾದುದನ್ನು ಪದ್ಯರೂಪವಾಗಿಯೂ ಪದ್ಯವನ್ನು ವಚನವಾಗಿಯೂ ಷಟ್ಪದಿಯನ್ನು ಚಂಪುವಾಗಿಯೂ, ಚಂಪುವನ್ನು ಷಟ್ಪದಿಯಾಗಿಯೂ ಬದಲಾಯಿಸಿ ಬರೆಯುತ್ತ ಬರುವುದೇ ರೂಢಿಯಲ್ಲಿ ಬಂದಿರುವದಲ್ಲದೆ ಹೊಸ ವಿಷಯಗಳನ್ನು ತಿಳಿಸತಕ್ಕ ಗ್ರಂಥ ರಚನೆಯು ಕಡಿಮೆ" ಎಂದು ಆಗಿನ ಸಾಹಿತ್ಯದ ವಸ್ತು ಸ್ಥಿತಿಯ ವರ್ಣನೆಯನ್ನು ಅಲ್ಲಿ ನೀಡಲಾಗಿದೆ.

"..... ಉದರ ಪೋಷಣೆಯ ಕೆಲಸವು ಪ್ರತಿಯೊಂದು ವ್ಯಕ್ತಿಯ ಬೆನ್ನಿಗೆ ಹತ್ತಿದೆ. ಆದುದರಿಂದ ಅನುಭವ ಜನ್ಯ ಜ್ಞಾನವನ್ನು ಪಡೆಯಲಿಕ್ಕೆ ಅವಕಾಶವುಳಿದಿಲ್ಲ. ಹೀಗಾಗಿ ಹೊಸ ಕಲ್ಪನೆಗಳು ದೊರೆಯದಂತಾದುದರಿಂದ, ಹಳೆಯ ಗ್ರಂಥಗಳೊಳಗಿನ ಉಪಮಾನೋಪಮೇಯಗಳನ್ನೂ ಕವಿಸಂಕೇತಗಳನ್ನೂ ಯೋಜಿಸುವುದ ಬಹಳವಾಗಿದೆ. ಆದರಿಂದ ಹೊಸ ಕವಿತೆಗಳು ಎಂಜಲದಂತೆ ಭಾಸವಾಗುವ ಸಂಭವ ಹೆಚ್ಚುಂಟು"[೪] ಎಂಬ ವಲ್ಲಭ ಮಹಾಲಿಂಗ ತಟ್ಟಿಯವರ ಮಾತು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ.

ಸಾಹಿತ್ಯ ಪೋಷಣೆ: ಇಂಥ ಸನ್ನಿವೇಶದಲ್ಲಿ ಸಾಹಿತ್ಯದ ಪ್ರಮುಖ ವಾಹಕವಾಗಿದ್ದ ಪತ್ರಿಕೆಗಳು ಸಾಹಿತ್ಯವನ್ನು ಯಾವ ರೀತಿಯಲ್ಲಿ ಪೋಷಿಸಿದವು? ಕನ್ನಡದ ಆದ್ಯ ಪತ್ರಿಕೆ 'ಮಂಗಳೂರು ಸಮಾಚಾರ'ದ ಸಂಪಾದಕ ಹರ್ಮನ್ ಮೊಗ್ಲಿಂಗ್ ತನ್ನ ಪತ್ರಿಕೆಯಲ್ಲಿ ಕೊಡಬೇಕೆಂದಿದ್ದ ವಿಷಯ ಸ್ವರೂಪವನ್ನು ಹೀಗೆ ಪಟ್ಟಿ ಮಾಡುತ್ತಾನೆ. ೧. ಊರ ವರ್ತಮಾನಗಳು ೨. ಸರಕಾರಿ ನಿರೂಪಗಳು/ ಕಾನೂನು, ೩. ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು, ೪. ಕತೆಗಳು, ೫.ಸರ್ವರಾಜ್ಯ ವರ್ತಮಾನಗಳು. ಸಾಮತಿಗಳು, ಹಾಡುಗಳು, ಕತೆಗಳು ಎಲ್ಲ ಸಾಹಿತ್ಯದ ವ್ಯಾಪ್ತಿಯಲ್ಲಿಯೇ ಬರುತ್ತವೆ. ಕ್ರೈಸ್ತ ಧರ್ಮದ ಪ್ರಚಾರವೂ ಈ ಪತ್ರಿಕೆಯ ಆಂತರ್ಯದ ಸಂಗತಿಯಾದ್ದರಿಂದ ಬೈಬಲ್ ಭಾಗಗಳೂ ಇದರಲ್ಲಿ ಪ್ರಕಟವಾಗಿವೆ.

೩.ಶ್ರೀಕೃಷ್ಣಸೂಕ್ತಿ(ಅಕ್ಟೋಬರ್ ೧೯೦೭)- ಉದ್ಧೃತ- ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ- ಪುಟ- ೨೫
೪.ಕನ್ನಡಿಗರ ಜನ್ಮಸಾರ್ಥಕತೆ; ಪುಟ ೨೯

ಕ್ರೈಸ್ತಮತ ಪ್ರಚಾರದ ಉದ್ದೇಶದಿಂದಲೇ ೧೮೬೧ರಲ್ಲಿ ಬೆಂಗಳೂರಿನಿಂದ 'ಅರುಣೋದಯ' ಪತ್ರಿಕೆ ಪ್ರಕಟವಾಯಿತು. ಇದರಲ್ಲಿ ಕೆಲವು ಕ್ರೈಸ್ತ ಗೀತೆಗಳು ಪ್ರಕಟವಾಗಿವೆ. ಇದು ಧಾರ್ಮಿಕ ಸ್ವರೂಪದವಾಗಿದ್ದರೂ ಭಾಷೆಯ ದೃಷ್ಟಿಯಿಂದ ಹೊಸ ಸಾಹಿತ್ಯದ ಲಕ್ಷಣಗಳನ್ನು ಅದು ಹೊಂದಿದೆ.

(ರಾಗ- ಪಂತುವರಾಳಿ; ಆದಿ ತಾಳ)

ಅನಂತ ಭಾಗ್ಯ ಹೊಂದಬಹುದಣ್ಣಾ; ಕ್ರಿಸ್ತ ಯೇಸುವಿನಿಂದ
ಅನಂತ ಭಾಗ್ಯ ಹೊಂದಬಹುದಣ್ಣಾ-
ದಾನದಿಂದ ಧರ್ಮದಿಂದ ಸ್ನಾನದಿಂದ ಪಾನದಿಂದ
ಜ್ಞಾನದಿಂದ ಸಿಕ್ಕದಂಥ ಭಾಗ್ಯ ಯೇಸು ಕೊಡುವನಣ್ಣಾ ॥೧॥

ಇದೇ ಪತ್ರಿಕೆಯಲ್ಲಿ ಪ್ರಕಟವಾದ 'None but jesus'ಎಂಬ ಇಂಗ್ಲಿಷ್ ಪದ್ಯದ ಭಾವಾಂತರ ಹೀಗಿದೆ:

(ರಾಗ- ಸಾರಾಷ್ಟಕ; ಆದಿತಾಳ)

ಇಲ್ಲವಿಲ್ಲವಣ್ಣಾ ನಿಮ್ಮಲ್ಲಿ ಮೋಕ್ಷ ॥ಪಲ್ಲ॥
ಕಲ್ಲನಿಟ್ಟಾರಾಧಿಸಿದಾಗ್ಯೂ
ಇಲ್ಲದ ಪೂಜೆಯ ಸಲ್ಲಿಸಿದಾಗೂ॥ಇಲ್ಲ॥
ಕಾಂಚಿ ತಿರುಪತಿ ಕಾಶಿ ಯಾತ್ರೆ
ಮಿಂಚಿ ಶ್ರಮೆಗಳೊಂದಿದಾಗೂ ॥ಇಲ್ಲ॥
ಭುಜವನು ಸುಟ್ಟು ತಲೆಯನು ಬೋಳಿಸಿ
ಭಜ ಗೋವಿಂದನ ಹಾಡಿದಾಗೂ ॥ಇಲ್ಲ॥
ಅಂಗದ ಮೇಲೆ ಲಿಂಗವ ಕಟ್ಟಿ
ಗಂಗಾಧರನನು ಸೇವಿಸಿದಾಗೂ ॥ಇಲ್ಲ॥
ಸುಳ್ಳು ಕಥೆಗಳ ಕಲ್ಪಿಸಿಕೊಂಡು
ಕಳ್ಳ ಬೋಧನೆ ಬೋಧಿಸಿದಾಗೂ ॥ಇಲ್ಲ॥
ಮೋಸದ ಮಾರ್ಗ ಎಲ್ಲಾ ಬಿಟ್ಟು
ಯೋಸುನ ಮಾರ್ಗ ಕಂಡರೆ ಹೊರತು ॥ಇಲ್ಲ॥

ಕ್ರೈಸ್ತ ಪಾದ್ರಿಗಳ ಕನ್ನಡ ಹೊಸತನದಿಂದ ಕೂಡಿರುವುದನ್ನು ಇಲ್ಲಿ ಕಾಣಬಹುದು. ಆದರೆ ದಾಸರ ಕೀರ್ತನೆಗಳ ದಾಟಿಯನ್ನು ಬಿಟ್ಟು ಈಚೆಗೆ ಬಂದಿಲ್ಲ ಅದು.

೧೮೬೮ರಿಂದ ೧೮೭೧ರ ವರೆಗೆ ಉಡುಪಿಯಿಂದ ಪ್ರಕಟವಾದ ಕ್ರೈಸ್ತಮತ ಪ್ರಚಾರಕ್ಕೆ ಬೈಬಲ್ ಸಾಹಿತ್ಯ ಪ್ರಕಟಿಸುತ್ತಿದ್ದ 'ಸಭಾ ಪತ್ರ' ಪತ್ರಿಕೆಯಲ್ಲಿ ಉತ್ತಮ ಪದ್ಯಕ್ಕೆ ಉದಾಹರಣೆ ದೊರೆಯುತ್ತದೆ. ೧೮೬೮ರ ಡಿಸೆಂಬರ್ ಸಂಚಿಕೆಯಲ್ಲಿ Apostle Paulನನ್ನು

ಈ ರೀತಿ ಭಾಷಾಂತರಿಸಲಾಗಿದೆ:

"ಹೆಂಗಸರೇ, ಕರ್ತನಲ್ಲಿ ಯೋಗ್ಯವಾದ ಪ್ರಕಾರ ಸ್ವಂತ ಗಂಡಂದಿರಿಗೆ ಒಳಗಾಗಿ ಇರಿ. ಗಂಡಸರೇ, ಹೆಂಡಿರನ್ನು ಪ್ರೀತಿ ಮಾಡಿ, ಅವರಿಗೆ ಕಹಿಯಾಗಿರಬೇಡಿರಿ.

"ಮಕ್ಕಳೇ, ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿ ಇರಿ. ಇದೇ ಕರ್ತನಿಗೆ ಆನಂದಕರವಾದದ್ದು. ತಂದೆಗಳೆ, ನಿಮ್ಮ ಮಕ್ಕಳು ಮನಗುಂದದ ಹಾಗೆ ಅವರಿಗೆ ಕೋಪವನ್ನೆಬ್ಬಿನಸಬೇಡಿರಿ.

"ದಾಸರೇ, ಮನುಷ್ಯರನ್ನು ಮೆಚ್ಚಿಸುವವರಾಗಿ ಕಣ್ಣುಸೇವೆಯನ್ನು ಮಾಡದೆ ದೇವರಿಗೆ ಭಯಪಟ್ಟು, ಮಾಂಸದ ಪ್ರಕಾರ ಯಜಮಾನರಾದವರಿಗೆ ಎಲ್ಲಾದರಲ್ಲೂ ಯತಾರ್ಥದಲ್ಲಿ ವಿಧೇಯರಾಗಿರಿ"[೫]

ಹೊಸಗನ್ನಡದ ಆರಂಭ ಕಾಲದ ಉತ್ತಮ ಗದ್ಯಕ್ಕೆ ಇದೊಂದು ಉದಾಹರಣೆ.

೧೮೭೪ರಿಂದ ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ 'ಕರ್ನಾಟಕ ಜ್ಞಾನ ಮಂಜರಿ' ಮಾಸಪತ್ರಿಕೆಯಲ್ಲಿ ಸಾಹಿತ್ಯಕ, ವೈಜ್ಞಾನಿಕ ಲೇಖನಗಳು ಪ್ರಕಟಗೊಂಡಿವೆ. ಅದರ ಒಂದು ಸಂಚಿಕೆಯಲ್ಲಿ ನಿದ್ರೆಯು; ಮಾಲವಿಕಾಗ್ನಿಮಿತ್ರ ನಾಟಕವು; ಅಮಲೇರುವ ಪದಾರ್ಥಗಳು; ವೇಳೆಯು (ಪುಸ್ತಕ ೧. ಸಂಚಿಕೆ ೬) ಲೇಖನಗಳು ಪ್ರಕಟವಾಗಿವೆ. ಇದರ ಮೇಲಿಂದಲೇ ಈ ಪತ್ರಿಕೆಯ ಸ್ವರೂಪ ತಿಳಿಯುವುದು. ಸಾಹಿತ್ಯದ ಚರ್ಚೆ ಈ ಪತ್ರಿಕೆಯಲ್ಲಿ ನಡೆದಿದೆ.

ಬೆಂಗಳೂರಿನಿಂದ ೧೮೮೩ರಲ್ಲಿ 'ಹಿತಬೋಧಿನಿ' ಪತ್ರಿಕೆ ಹೊರಟಿತು. ಸುಮಾರು ೧೦-೧೨ ವರ್ಷ ನಡೆದ ಈ ಪತ್ರಿಕೆಯ ಆರಂಭದ ಸಂಪಾದಕರು ಎಂ.ಬಿ.ಶ್ರೀನಿವಾಸಂಯ್ಯಂಗಾರ್ ಮತ್ತು ಎಂ.ಎಸ್. ಪುಟ್ಟಣ್ಣ. ೭ನೆ ಸಂಚಿಕೆಯಿಂದ ಎಂ.ವೆಂಕಟಕೃಷ್ಣಯ್ಯನವರು ಇದರ ಸಂಪಾದಕರು. "ಜನರಿಗೆ ತಿಳಿವಳಿಕೆ ಹೆಚ್ಚಿದಷ್ಟು ಸೌಖ್ಯ ಹೆಚ್ಚುವುದು. ಈ 'ಹಿತಬೋಧಿನಿ'ಯ ಮೂಲಕ ಜನಗಳಿಗೆ ಕೈಲಾದ ಮಟ್ಟಿಗೆ ತಿಳಿವಳಿಕೆಯನ್ನು ಹೆಚ್ಚಿಸ ಬೇಕೆಂದು ಯತ್ನಿಸಿದ್ದೇವೆ. ನಮ್ಮ ಶಾಸ್ತ್ರಗಳಲ್ಲಿರುವ ವಿಷಯಗಳನ್ನು ಹೇಳುವುದಲ್ಲದೆ ಇಂಗ್ಲಿಷರಲ್ಲಿರತಕ್ಕ ನೂತನವಾದ ಕುಶಲ ವಿದ್ಯದ, ಉಪಯುಕ್ತವಾದ ಶಾಸ್ತ್ರಗಳ ಸಂಗತಿಗಳನ್ನು ಆಗಾಗ್ಯೆ ಈ ಪತ್ರಿಕೆಯಲ್ಲಿ ಬರೆಯುತ್ತಾ ಬರುವೆವು. ವಿನೋದಕರವಾಗಿಯೂ ನೀತಿ ಪ್ರದರ್ಶಕವಾಗಿಯೂ ಇರುವ ಕೆಲವು ಕಥೆಗಳೂ ಇದರಲ್ಲಿ ಬರೆಯಲ್ಪಡುವವು." ಇದರಿಂದಲೂ ಸಾಕಷ್ಟು ಸಾಹಿತ್ಯ ಸೇವೆ ಆಗಿರುವುದು ಈ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ.

ಇದೇ ಸುಮಾರಿಗೆ ಉಡುಪಿಯ ಹಿಂದೂ ಪ್ರೆಸ್‌ನಿಂದ 'ಸುದರ್ಶನ' ಪತ್ರಿಕೆ ಹೊರಡುತ್ತಿತ್ತು. ಇದರಲ್ಲಿ ಆರ್ಯಧರ್ಮ ಸಂಸ್ಕೃತಿ, ಸ್ತ್ರೀಶಿಕ್ಷಣ ಕುರಿತ ಲೇಖನಗಳು

---

೫. ಉದ್ಧೃತ: ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ- ಐ.ಮಾ. ಮುತ್ತಣ್ಣ- ಪುಟ- ೩೧೩

ಇರುತ್ತಿದ್ದವು. ಬಿಡಿಯಾದ ಪದ್ಯಗಳು, ಪುಸ್ತಕ ವಿಮರ್ಶೆ ಪ್ರತಿ ಸಂಚಿಕೆಯಲ್ಲೂ ನೋಡಸಿಗುತ್ತಿತ್ತು. ಜೊತೆಯಲ್ಲಿ ವಿವಿಧ ವಿಷಯ ಮಂಜರಿ. ಪದ್ಯಗಳಲ್ಲಿ ದಾಸರ ಪದಗಳು, ಸಮಕಾಲೀನರಾದ ಮೂಲ್ಕಿ ವೆಂಕಣ್ಣಯ್ಯ, ವರಹ ತಿಮ್ಮಪ್ಪದಾಸ, ಭಟ್ಕಳ ಅಪ್ಪಯ್ಯ ಮೊದಲಾದವರ ಪದ್ಯಗಳೂ ಇವೆ. ಅದರ ವಿಶೇಷವೆಂದರೆ ವಿವಿಧ ವಿಷಯಗಳನ್ನು ಕೊಡುವಾಗ ಅದಕ್ಕೆ ಸಂಬಂಧಿಸಿದ ಟೀಕೆ-ಟಿಪ್ಪಣಿಗಳನ್ನು ನೀಡುವುದು. ಕುಂಬಳೆ ಕೃಷ್ಣರಾಯರು ಆರಂಭದಲ್ಲಿ ಇದರ ಸಂಪಾದಕರಾಗಿದ್ದರು.

ಮೈಸೂರಿನ ಕೆಲವು ಪದವೀಧರರು ಸೇರಿಕೊಂಡು ೧೮೯೨ರಲ್ಲಿ 'ಗ್ರ್ಯಾಜುಯೇಟ್ ಟ್ರೇಡಿಂಗ್ ಅಸೋಸಿಯೇಶನ್' (ಜಿಟಿಎ) ಸ್ಥಾಪಿಸಿಕೊಂಡರು. ಇವರು 'ಕರ್ನಾಟಕ ಗ್ರಂಥಮಾಲೆ' ಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆಯ ಮೂಲಕ ಅವರು ಹಳೆಯ ಕೃತಿಗಳ ಸಾರವನ್ನು ನೀಡಿದರು. ಅಲ್ಲದೆ ಹೊಸ ಗದ್ಯ ಕೃತಿಗಳನ್ನೂ, ಇಂಗ್ಲಿಷ್ ಕೃತಿಗಳ ರೂಪಾಂತರವನ್ನೂ ನೀಡಿದರು. ಇದು ನಿಜವಾದ ಅರ್ಥದಲ್ಲಿ ಸಾಹಿತ್ಯಪತ್ರಿಕೆಯೇ ಹೌದು. ಇದರಲ್ಲಿಯ ಪ್ರಕಟಣೆಗಳು ಮುಂದೆ ಸ್ವತಂತ್ರ ಪುಸ್ತಕಗಳಾಗಿ ಹೊರಬಂದವು. ಇದರಿಂದ ಅನೇಕ ಹೊಸ ಲೇಖಕರು ಬೆಳಕಿಗೆ ಬಂದರು. ಈ ಜಿ.ಟಿ.ಎ.ಗೆ ಸೇರಿದ ಕೊಮಾಂಡೂರು ಶ್ರೀನಿವಾಸಯ್ಯಂಗಾರ ಇವರು ಸಂಸ್ಕೃತ ಕಾವ್ಯ, ಅವುಗಳ ಕನ್ನಡಾನುವಾದವನ್ನು ಕೊಡುವ ಅಪೇಕ್ಷೆಯಿಂದ 'ಕಾವ್ಯಕಲ್ಪದ್ರುಮಮ್'ವನ್ನು ಪ್ರಾರಂಭಿಸಿದರು. ಮೊದಲ ಸಂಚಿಕೆಯಲ್ಲಿ ಕುಮಾರ ಸಂಭವ, ಮೇಘದೂತ ಮತ್ತು ನೈಷಧಗಳ ಕಾವ್ಯಭಾಗಗಳು ಪ್ರಕಟಗೊಂಡಿವೆ. ಇದರ ಎರಡನೆ ಸಂಚಿಕೆ ಹೊರಬಂದಂತೆ ಇಲ್ಲ.

ವಿದ್ಯಾವಂತರು ಪತ್ರಿಕೋದ್ಯಮಕ್ಕೆ ಆಗಮಿಸಿದ್ದರ ದ್ಯೋತಕ ಜಿ.ಟಿ.ಎ. ಇದರ 'ಕರ್ನಾಟಕ ಗ್ರಂಥಮಾಲೆ' ಮತ್ತು 'ಕಾವ್ಯಮಂಜರಿ' ಬಗ್ಗೆ ಭಾರತದ ವಿವಿಧ ಭಾಷಾ ವಾಙ್ಮಯಗಳ ವಾರ್ಷಿಕ ಸಮೀಕ್ಷೆ (೧೮೯೩)ಯಲ್ಲಿ ಬಂದಿರುವ ಅಭಿಪ್ರಾಯ ಗಮನಾರ್ಹವಾಗಿದೆ.[೬] ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಗ್ರಂಥಮಾಲಾ ಮತ್ತು ಕಾವ್ಯಮಂಜರಿ ಇಂಗ್ಲಿಷ್ ಮತ್ತು ಸಂಸ್ಕೃತಗಳಿಂದ ಅನುವಾದ ಮಾಡಿರುವುದು ಮಹತ್ವದ ಕಾಣಿಕೆ ಎಂದು ಮುಕ್ತಕಂಠದಿಂದ ಹೊಗಳಲಾಗಿದೆ. ಕರ್ನಾಟಕ ಕಾವ್ಯಮಂಜರಿಗೆ 'ನಾನಾವಿಧ ಪ್ರಾಚೀನ ಕಾವ್ಯ ನಾಟಕ ಛಂದೋಲಂಕಾರ ವ್ಯಾಕರಣ, ನಿಘಂಟು, ವೈದ್ಯ, ಸೂಪ ಶಿಲ್ಪ ಗ್ರಂಥ ಸಂಗ್ರಹದ ಮಾಸಪತ್ರಿಕೆ' ಎಂಬ ಅಭಿದಾನವಿತ್ತು.

೬.The most gratifying features of the year's publications are to be found in the attempts made by young men who have received a high University education to publish old Kannada works whose existence has hitherto not been known and translations of standard works of English and Sanskrit literature. The promoters of the Granthamala and the Kavyamanjari are doing excelent service by concentrating the efforts of modern educated men and pandiths desirous to improve and enrich modern Kannada Literature- (Report on publications Issued and Registered, 1893, page- 107)

ಜಿ.ಟಿ.ಎ. ಮತ್ತು 'ಕರ್ನಾಟಕ ಗ್ರಂಥಮಾಲೆ'ಯ ಆರಂಭದ ಹೊಣೆ ಹೊತ್ತವರು ಎಲ್.ಜಯರಾವ್, ಎಂ.ಶಾಮರಾವ, ಬಾಪು ಸುಬ್ಬರಾಯ ಮತ್ತು ಅಪ್ಪಣ್ಣ ಶೆಟ್ಟಿ. ಮೈಸೂರು ಸಂಸ್ಥಾನದಲ್ಲಿ ಹಿರಿಯ ಅಧಿಕಾರಿಗಳಾಗಿದ್ದ ಎಂ.ಶಾಮರಾಯರು, 'ವಿದ್ಯಾದಾಯಿನೀ' ಎಂಬ ಸಾಹಿತ್ಯ ಮತ್ತು ಶೈಕ್ಷಣಿಕ ಪತ್ರಿಕೆಯನ್ನೂ ಹೊರಡಿಸಿದ್ದಾರೆ. 'ಗ್ರಂಥಮಾಲೆ'ಯಲ್ಲಿ ಪ್ರಕಟವಾದ ಮೊದಲ ಪುಸ್ತಕ 'ಚಂಡಮಾರುತ' ಇವರದೇ ಆಗಿತ್ತು.

'ಕರ್ನಾಟಕ ಕಾವ್ಯ ಮಂಜರಿ'ಯ ಸಂಚಾಲಕರಾಗಿ ಎಂ.ಎ. ರಾಮಾನುಜಯ್ಯಂಗಾರ್ ಹಾಗೂ ಎಸ್.ಜಿ. ನರಸಿಂಹಾಚಾರ್ಯ ಪ್ರಾಚೀನ ಕಾವ್ಯಗಳನ್ನು ಪ್ರಕಟಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇವರಿಗೆ ಎಂ.ಕೆ. ತಿರುಮಲಾಚಾರ್ ಮತ್ತು ಇತರ ಮಿತ್ರರು ಸಹಕಾರ ನೀಡಿದ್ದಾರೆ. 'ಕರ್ನಾಟಕ ಕಾವ್ಯ ಮಂಜರಿ'ಯ ಹೆಗ್ಗಳಿಕೆ ಎಂದರೆ ಇದರಿಂದ ಒಂದೊಂದು ಗ್ರಂಥ ಹೊರಬೀಳುತ್ತಲೇ ಮುಂಬಯಿ, ಮದ್ರಾಸು, ಮೈಸೂರು ಭಾಗಗಳಲ್ಲಿಯ ಮೇಲ್ದರ್ಜೆಯ ಕನ್ನಡ ಪರೀಕ್ಷೆಗಳಿಗೆ ಇವು ಪಠ್ಯಗಳಾಗಿ ಆಯ್ಕೆಯಾಗುತ್ತಿತ್ತು. ಆ ಕಾಲದಲ್ಲಿ ಸಾಹಿತ್ಯ ರಚನೆಕಾರರು ಹೊಸ ಶಿಕ್ಷಣಕ್ಕೆ ಪಠ್ಯಗಳನ್ನು ಪಠ್ಯಗಳನ್ನು ಪೂರೈಸುವ ಹೊಣೆಯನ್ನು ಹೊರುವ ಅಗತ್ಯವೂ ಇತ್ತು. ಪಠ್ಯಗಳನ್ನು ಗಮನದಲ್ಲಿರಿಸಿ ಅನೇಕ ಕೃತಿಗಳು ರಚನೆಗೊಂಡವು. ಕ್ರಿ.ಶ. ೧೮೯೨ರಲ್ಲಿ ಆರಂಭವಾಗಿ ಆರು ವರ್ಷ ನಡೆದು ನಿಂತುಹೋದ ಈ ಗ್ರಂಥಮಾಲೆಯು ಒಂದೆರಡು ವರ್ಷಗಳಲ್ಲಿ ಮತ್ತೆ 'ಕರ್ನಾಟಕ ಕಾವ್ಯಕಲಾನಿಧಿ' ಎಂಬ ಹೆಸರಿನಲ್ಲಿ ಆರಂಭವಾಗಿ ಎರಡು ದಶಕಗಳ ವರೆಗೆ ಮುಂದುವರಿಯಿತು.

ಉತ್ತರ ಕರ್ನಾಟಕದಲ್ಲಿ ಇದೇ ಬಗೆಯ ಉದ್ದೇಶಗಳನ್ನು ಇರಿಸಿಕೊಂಡು 'ಕರ್ನಾಟಕ ಭಾಷಾ ಸೇವಕ'(೧೮೯೪) ಮತ್ತು 'ವಾಗ್ಭೂಷಣ' (೧೮೯೬) ಪ್ರಕಟಗೊಂಡವು. ಬಿಜಾಪುರದ ಹೈಸ್ಕೂಲೊಂದರಲ್ಲಿ ಶಿಕ್ಷಕರಾಗಿದ್ದ ಮೂವರು ಯುವ ಮಿತ್ರರು ಸಂಸ್ಕೃತ, ಇಂಗ್ಲಿಷ್ ಕೃತಿಗಳ ಸಾರವನ್ನು ಕನ್ನಡದಲ್ಲಿ ಸರಳ ಗದ್ಯದಲ್ಲಿ ಕೊಡಬೇಕು ಎಂದು ಯೋಜಿಸಿ ಅವುಗಳ ಪ್ರಕಟಣೆಗಾಗಿ 'ಭಾಷಾಸೇವಕ'ವನ್ನು ಆರಂಭಿಸುತ್ತಾರೆ. ಶೇಷಗಿರಿರಾವ್ ಕೊಣ್ಣೂರ ಬರೆದ 'ಕೇಡು ತಂದ ಉಂಗುರ' (ಶಾಕುಂತಲದ ಕಥೆ); ಹಣಮಂತರಾವ್ ಸಗರ ಇವರ 'ಅಂತಃಪುರದ ರಹಸ್ಯ' (Lovers of Harem ಇದರ ಭಾಷಾಂತರ) ಮತ್ತು ಕೃಷ್ಣರಾವ್ ಹುನಗುಂದ ಇವರ 'ಕುರುಹಿನ ಬಕುಳಹಾರ' ('ಮಾಲತೀ ಮಾಧವ'ದ ಕಥಾನುವಾದ) ಧಾರಾವಾಹಿಯಾಗಿ ಬಂದು ನಂತರ ಪುಸ್ತಕ ರೂಪದಲ್ಲಿ ಬಂದವು. ಕೃಷ್ಣರಾವ ಹುನಗುಂದ ಇವರು 'ಮುದ್ರಾರಾಕ್ಷಸ'ದ ಅನುವಾದ ಆರಂಭಿಸಿದ್ದರು. ಈ ಗೆಳೆಯರಲ್ಲಿ ಇಬ್ಬರಿಗೆ ಪರವೂರಿಗೆ ವರ್ಗವಾದ ಕಾರಣ ಅವರ ಯೋಜನೆ ಸ್ಥಗಿತಗೊಂಡಿತು.

ಉತ್ತರ ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ಬಹುದೊಡ್ಡ ಪಾತ್ರ ನಿರ್ವಹಿಸಿದ

ಧಾರವಾಡದ ವಿದ್ಯಾವರ್ಧಕ ಸಂಘವು ೧೮೯೬ರಲ್ಲಿ 'ವಾಗ್ಭೂಷಣ'ವನ್ನು ಆರಂಭಿಸಿತು. ಹಲವು ರೀತಿಯ ಸಾಹಿತ್ಯಕ ಚರ್ಚೆಗಳು, ವಿಮರ್ಶೆಗಳು, ಹೊಸ ಬರೆಹಗಳು, ಗ್ರಂಥಾವಳಿಗಳು ಇದರಲ್ಲಿದ್ದವು. ಬಹುಮಾನ ಘೋಷಣೆ ಮಾಡಿ ಹೊಸ ಗ್ರಂಥಗಳನ್ನು ಬರೆಯಿಸುವ ಪರಿಪಾಠವನ್ನು ಇವರು ಆರಂಭಿಸಿದರು. 'ವಾಗ್ಭೂಷಣ'ದಲ್ಲಿ ಹಲವು ಸ್ವತಂತ್ರ ವಿಚಾರಧಾರೆಯ ಲೇಖನಗಳು ಪ್ರಕಟಗೊಂಡಿವೆ. ಗಳಗನಾಥರ ಮೊದಲ ಕಾದಂಬರಿ 'ಪದ್ಮನಯನಾ' ಇದರಲ್ಲಿಯೇ ಧಾರಾವಾಹಿಯಾಗಿ ಪ್ರಕಟಗೊಂಡಿದೆ. ವಿದ್ಯಾವರ್ಧಕ ಸಂಘವು ವಾಗ್ಭೂಷಣದ ಮೂಲಕ ೮೫ ಪುಸ್ತಕಗಳನ್ನು ಹಾಗೂ ಸ್ವತಂತ್ರವಾಗಿ ೧೧ ಪುಸ್ತಕಗಳನ್ನು ಪ್ರಕಟಿಸಿತು. ನವೋದಯ ಕಾವ್ಯಕ್ಕೆ ಹೊಸ ದಿಶೆಯನ್ನು ತೋರಿಸಿದ ಪ್ರಾಸ ಸಂಬಂಧಿ ವಾಗ್ವಾದದಲ್ಲಿ ಈ ಪತ್ರಿಕೆಯೂ ವೇದಿಕೆಯನ್ನು ಒದಗಿಸಿಕೊಟ್ಟಿತು. ಇದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮಂಗಳೂರಿನಿಂದ ೧೮೯೬ರಲ್ಲಿ 'ಸತ್ಯದೀಪಿಕೆ' ಮೊದಲು ಮಾಸ ಪತ್ರಿಕೆಯಾಗಿ ಹೊರಟಿತು. ಮೂರು ವರ್ಷಗಳ ನಂತರ ಇದು ವಾರ ಪತ್ರಿಕೆಯಾಯಿತು. ಇದು ಸಚಿತ್ರ ಪತ್ರಿಕೆಯಾಗಿತ್ತು. ದೇಶ ವಿದೇಶಗಳ ಸುದ್ದಿಯ ಜೊತೆಯಲ್ಲಿ ಸಣ್ಣಕಥೆ, ಪ್ರಬಂಧ ಹಾಗೂ ಕವನಗಳು ಇದರಲ್ಲಿ ಪ್ರಕಟವಾಗುತ್ತಿದ್ದವು. ದಿವಂಗತ ಪಂಜೆ ಮಂಗೇಶರಾಯರು ಇದರಲ್ಲಿ ಅನೇಕ ಲೇಖನಗಳನ್ನು ಬರೆದಿರುವರು. 'ರಾಮಪಂ' ಎಂಬ ಹೆಸರಿನಿಂದ 'ಸತ್ಯದೀಪಿಕೆ'ಯಲ್ಲಿ ಪಂಜೆಯವರು ಹಲವು ಇಂಗ್ಲಿಷ್ ಪದ್ಯಗಳನ್ನು ಅನುವಾದಿಸಿದ್ದಾರೆ.

ಇದೇ ಕಾಲದ ಇನ್ನೊಂದು ಸಾಹಿತ್ಯಪತ್ರಿಕೆ ೧೯೦೦ರ 'ಸುವಾಸಿನಿ'. ಬೆನಗಲ್ ರಾಮ ರಾಯರು ಇದರ ಸಂಪಾದಕರು. ಪಂಜೆ ಮಂಗೇಶರಾಯರು, ಉಳ್ಳಾಲ, ಬಿ. ವೆಂಕಟಾಚಾರ್ಯ, ನರಹರಯ್ಯ, ಆರ್.ಶ್ರೀನಿವಾಸರಾವ್, ಎಂ.ಎಸ್. ಶ್ರೀನಿವಾಸರಾವ್ ರೊದ್ದ, ಇನಾಮತಿ, ಕೆ.ವಿ. ಶಾಸ್ತ್ರಿ ಸೇರಿದಂತೆ ಕನ್ನಡ ನಾಡಿನ ವಿವಿಧ ಭಾಗಗಳಿಂದ ಲೇಖಕರು ಈ ಪತ್ರಿಕೆಗೆ ಲೇಖನಗಳನ್ನು ಕಳುಹಿಸುತ್ತಿದ್ದರು. ಬೆನಗಲ್ ರಾಮರಾಯರ 'ರಮಾ ಮಾಧವ', ಬಿ. ವೆಂಕಟಾಚಾರ್ಯರ 'ಉನ್ಮಾದಿನಿ' ಕಾದಂಬರಿಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಪಂಜೆಯವರ 'ಮರಳಿ ನೀ ತಮ್ಮನ ಕರೆಯಪ್ಪಾ' (oh, call my brother back to me) 'ಉತ್ತಮ ರಾಜ್ಯ' (The better land) ಇತ್ಯಾದಿ ಅನುವಾದಿತ ಕವನಗಳು, 'ಪ್ರಥುಲಾ', 'ದುರ್ಗಾವತಿ', 'ನನ್ನ ಚಿಕ್ಕ ತಂದೆ', 'ನನ್ನ ಚಿಕ್ಕ ತಾಯಿ', 'ನನ್ನ ಹೆಂಡತಿ' ಮೊದಲಾದ ಕತೆ, ಕವನಗಳು ಇದರಲ್ಲಿಯೇ ಪ್ರಕಟವಾಗಿವೆ. ರಾ.ಕೃ. ಇನಾಮತಿ ಅವರ ಐತಿಹಾಸಿಕ ಕಾದಂಬರಿ 'ಆರ್ಯಾವರ್ತದ ಮೊದಲ ಚಕ್ರವರ್ತಿ' ಇದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಹಲವಾರು ಅಡಿ ಟಿಪ್ಪಣಿಗಳನ್ನು ಈ ಕಾದಂಬರಿಗೆ ಸಮರ್ಥನೆಗಾಗಿ ಕೊಡಲಾಗಿತ್ತು. 'ರಾವಬಹಾದ್ದೂರ', 'ವೀರೇಶಲಿಂಗಂ ಪಂತುಲು', 'ರಾಜಾ ರವಿವರ್ಮ', 'ಎನ್ನಿ ಬೆಸೆಂಟ್' ಮೊದಲಾದವರ

ಚರಿತ್ರೆಯೂ ಇದರಲ್ಲಿದೆ. 'ಭೂಮಿ ಶಾಸ್ತ್ರ' ಎಂಬ ಶಾಸ್ತ್ರೀಯ ಗ್ರಂಥವೊಂದು ಸಚಿತ್ರವಾಗಿ ಧಾರಾವಾಹಿಯಾಗಿ ಪ್ರಕಟವಾಗಿದೆ. 'ಕಬ್ಬಿಣದ ಬುದ್ಧಿವಾದ' ಎಂಬ ನೀತಿ ಹೇಳುವ ದೀರ್ಘ ಕವನ ಪ್ರಕಟವಾಗಿದೆ. ಸಾಹಿತ್ಯಕ ವಾಗ್ವಾದಗಳಿಗೂ 'ಸುವಾಸಿನಿ' ವೇದಿಕೆಯಾಗಿತ್ತು. ಕಾದಂಬರಿ ಪ್ರಕಾರ ಕನ್ನಡದಲ್ಲಿ ನೆಲೆ ಕಂಡುಕೊಳ್ಳುತ್ತಿದ್ದಾಗ ಆ ಪ್ರಕಾರಕ್ಕೆ 'ಕಾದಂಬರಿ' ಹೆಸರು ಸೂಕ್ತವೇ ಎಂಬ ಜಿಜ್ಞಾಸೆ ನಡೆದದ್ದು ಈ ಪತ್ರಿಕೆಯಲ್ಲಿಯೇ. ಸುಮಾರು ಮೂರು ವರ್ಷಗಳ ಕಾಲ ನಡೆದು ನಿಂತುಹೋದ 'ಸುವಾಸಿನಿ' ಸುಮಾರು ಎರಡು ದಶಕಗಳ ನಂತರ ಪುನಃ ಆರಂಭಗೊಂಡಾಗ ಅದರಲ್ಲಿ ಅರ್ಧಕ್ಕೆ ನಿಂತ ಭಾಗಗಳು ಮುಂದುವರಿದಿದ್ದು ಮಹತ್ವದ ಅಂಶವಾಗಿದೆ. 'ಸುವಾಸಿನಿ'ಯು ಶ್ರೇಷ್ಠ ಸಾಹಿತ್ಯಪತ್ರಿಕೆಯಾಗಿತ್ತು ಎನ್ನುವುದಕ್ಕೆ ಅದರಲ್ಲಿ ಪ್ರಕಟವಾಗಿರುವ ಉತ್ತಮ ಲೇಖನಗಳೇ ಸಾಕ್ಷಿಯಾಗಿವೆ. 'ದುರ್ಗವತಿಯು ತನ್ನ ಖಡ್ಗಕ್ಕೆ ಉದರವನ್ನು ಒರೆಯಾಗಿ ಮಾಡಿ ಬಿಟ್ಟಳು', 'ಕೈಯಿಂದ ಉಂಡೆ ಕಟ್ಟಬಹುದಾದಷ್ಟು ದಪ್ಪವಾದ ಕಾಳಿಮೆಯ ರಾತ್ರಿ', ಇತ್ಯಾದಿಗಳನ್ನು ಸಾಹಿತ್ಯದ ಸತ್ವಕ್ಕಾಗಿ ಉದಾಹರಣೆಯಾಗಿ ನೀಡಬಹುದು. "ಗದ್ಯ ಸಾಹಿತ್ಯ ಒಂದು ಸ್ವರೂಪವನ್ನು ಪಡೆಯತೊಡಗಿತ್ತು; ಪರಂಪರೆಯನ್ನು ನಿರ್ಮಿಸಿಕೊಳ್ಳತೊಡಗಿತ್ತು ಎಂಬುದು ಈ ಪತ್ರಿಕೆಯ ಲೇಖನಗಳಿಂದ ಸ್ಪಷ್ಟವಾಗುವುದು"[೭] ಎಂದು ಶಂಕರ ಪಾಟೀಲರು ಸರಿಯಾಗಿಯೇ ಗುರುತಿಸಿದ್ದಾರೆ.

ಕೆರೋಡಿ ಸುಬ್ಬರಾಯರು ಮತ್ತು ಕಡೇಕಾರು ರಾಜಗೋಪಾಲ ಕೃಷ್ಣರಾಯರ ಸಂಪಾದಕತ್ವದಲ್ಲಿ ಉಡುಪಿಯಿಂದ ೧೯೦೫ರಲ್ಲಿ 'ಶ್ರೀಕೃಷ್ಣಸೂಕ್ತಿ' ಪ್ರಕಟವಾಯಿತು. ಇದು ಕೂಡ ನಾವು ಗಮನಿಸಬೇಕಾದ ಸಾಹಿತ್ಯಪತ್ರಿಕೆಯೇ. ಹುರುಳಿ ಭೀಮರಾವ್, ಆಲೂರ ವೆಂಕಟರಾಯರು, ಬಂಟ್ವಾಳ ಸೀತಾರಾಮರಾವ್, ಯಜ್ಞನಾರಾಯಣ ಅಡಿಗ, ಮಾಸ್ತಿ ವೆಂಕಟೇಶ ಅಯ್ಯಂಗಾರರು, ಆರ್.ಶ್ರೀನಿವಾಸರಾವ್, ಬೆನಗಲ್ ರಾಮರಾವ್, ಹೊಸಕೆರೆ ಚಿದಂಬರಯ್ಯ, ಗುಡಿಬಂಡೆ ಕೇಶವಯ್ಯ ಮೊದಲಾದವರು ಇದರಲ್ಲಿ ಲೇಖನಗಳನ್ನು ಬರೆದಿರುವರು. 'ಶ್ರೀಕೃಷ್ಣ ಸೂಕ್ತಿ' ವಿಷಯ ಕೊಟ್ಟು ಕಾವ್ಯ ಸ್ಪರ್ಧೆಗಳನ್ನು ನಡೆಸುತ್ತಿತ್ತು ಎಂಬುದನ್ನು ಈಗಾಗಲೆ ಗಮನಿಸಲಾಗಿದೆ.

ಸಮಾಜ ಸುಧಾರಣೆ: ನೇರವಾಗಿ ಸಾಹಿತ್ಯದ ವಿಷಯವನ್ನು ಹೇಳದಿದ್ದರೂ ಪರೋಕ್ಷವಾಗಿ, ಅಂದಿನ ಇತರ ಕೆಲವು ಪತ್ರಿಕೆಗಳು ಅನೇಕ ಗ್ರಂಥಗಳ ರಚನೆಗೂ ಕಾರಣವಾಗಿದ್ದವು. ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಗಳಿಂದ ಕೂಡಿದ ಲೇಖನಗಳನ್ನು ಪ್ರಕಟಿಸುತ್ತಿದ್ದ ಕೆಲವು ಪತ್ರಿಕೆಗಳು ಬಳಿಕ ಅದೇ ವಿಚಾರವನ್ನು ಹೊಂದಿದ ಗ್ರಂಥಗಳ ರಚನೆಗೂ ಕಾರಣವಾದುದನ್ನು ನಾವು ಗಮನಿಸಬಹುದು. ಸಾಮಾಜಿಕ ಸುಧಾರಣೆಯನ್ನು ಧ್ಯೇಯವನ್ನಾಗಿ ಸ್ವೀಕರಿಸಿದ್ದ ವೆಂಕಟರಂಗೋ ಕಟ್ಟಿಯು ೧೮೬೧ರಲ್ಲಿ ಆರಂಭವಾದ 'ಜ್ಞಾನ

೭.ಚಿನ್ನದ ಗರಿ; ಪುಟ-೨೮೦; ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ಪತ್ರಿಕೋದ್ಯಮ

ಬೋಧಕ'ದಲ್ಲಿ ಹಲವು ಲೇಖನಗಳನ್ನು ಬರೆದಿರುವರು. ಬಳಿಕ 'ಶೋಧಕ' ಮತ್ತು 'ಲೋಕ ಶಿಕ್ಷಕ' ಎಂಬ ಪತ್ರಿಕೆಗಳನ್ನು ಸ್ವತಃ ಹೊರಡಿಸಿದರು. ಕಟ್ಟಿಯ ಕನ್ನಡಾಭಿಮಾನವನ್ನು ಸ್ಮರಿಸುವಾಗ ಈ ಮೊದಲು 'ಶೋಧಕ'ದ ಸಂಪಾದಕೀಯವನ್ನು ಗಮನಿಸಲಾಗಿದೆ. ಈ ಎರಡು ಪತ್ರಿಕೆಗಳಲ್ಲದೆ ಕಟ್ಟಿಯು 'ಕರ್ನಾಟಕ ಪತ್ರ' ಮತ್ತು 'ಚಂದ್ರೋದಯ' ಪತ್ರಿಕೆಗಳ ಹೊಣೆಯನ್ನು ಕೆಲವು ಕಾಲ ಹೊತ್ತಿದ್ದರು. ಸ್ತ್ರೀಯರ ಏಳ್ಗೆ ಕಟ್ಟಿಯ ಸಮಾಜ ಸುಧಾರಣೆಯ ಮೂಲ ಮಂತ್ರವಾಗಿತ್ತು. ಸ್ವತಃ ಕಟ್ಟಿಯೇ 'ವಿಧವೆಯರ ಇತಿಹಾಸ' 'ವಿಧವಾ ವಪನ ಅನಾಚಾರ' (೧೮೮೯) ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಎರಡನೆಯದು ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿವೆ.

'ಸುದರ್ಶನ' ಪತ್ರಿಕೆಯಲ್ಲಿಯೂ ಸ್ತ್ರೀಯರ ಉದ್ಧಾರ ಕುರಿತ ಲೇಖನಗಳಿವೆ. ೧೮೮೭ರ ಎಪ್ರಿಲ್ ಸಂಚಿಕೆಯಲ್ಲಿ ಹಟ್ಟಿಯಂಗಡಿ ನಾರಾಯಣರಾಯರು ಬರೆದ 'ಪ್ರಸಿದ್ಧಪಟ್ಟ ಹಿಂದೂ ದೇಶದ ಸ್ತ್ರೀಯರು' ಎಂಬ ಲೇಖನ ಪ್ರಕಟವಾಗಿದೆ. 'ಸುದರ್ಶನ'ದ ವೈಶಿಷ್ಟ್ಯವೆನಿಸಿದ 'ಮಂಗೂ-ನಾಗೂ' ಸಂಭಾಷಣೆ ಸ್ತ್ರೀ ಶಿಕ್ಷಣದ ಬಗೆಗೆ ವಕಾಲತ್ತು ವಹಿಸಿದೆ. "ಸ್ತ್ರೀಯರು ವಿದ್ಯಾಲಂಕೃತರಾದರೆ ಅವರಿಗೂ ಅವರ ಒಡಹುಟ್ಟಿದವರಿಗೂ ಒಡಯಿರತಕ್ಕವರಿಗೂ ಆನಂದಕರ ಮತ್ತು ಶ್ರೇಯಸ್ಕರ. ಈ ಮಾತಿಗೆ ವಿರೋಧವಾಗಿ ಕನ್ನಡದಲ್ಲಿ ಒಂದು ಉಪನ್ಯಾಸವನ್ನು ತಯಾರಿಸಿ ಕಳುಹಿಸಿದವರಿಗೆ ಬರುವ ಎಪ್ರಿಲ್ ತಿಂಗಳಲ್ಲಿ ೫ ರು. ಉಚಿತವಾಗಿ ನಾವು ಕಳುಹಿಸಿಕೊಡುವೆವು. ಸ್ತ್ರೀಯರು ವಿದ್ಯೆ ಕಲಿಯಲಿಕ್ಕೆ ಏನೂ ಯೋಗ್ಯರಲ್ಲವೆಂತ ಕಾರಣಗಳೂ ಉದಾಹರಣೆಗಳೂ ಕೊಟ್ಟು ತೋರಿಸಬೇಕು." (ಫೆಬ್ರವರಿ ೧೮೯೬ರ ಸಂಚಿಕೆ) ಎಂದು ಸವಾಲು ಎಸೆದಿರುವುದನ್ನು ಕಾಣಬಹುದು. ಇಲ್ಲಿ ಉಪನ್ಯಾಸವೆಂದರೆ ಲೇಖನವೋ ಕಾದಂಬರಿಯೋ ಎಂಬುದು ಸ್ಪಷ್ಟವಾಗಿಲ್ಲ. ಮುಂಬಯಿಯ 'ಕನ್ನಡ ಸುವಾರ್ತೆ'ಯಲ್ಲಿ ವಿಧವಾ ಪುನರ್ವಿವಾಹದ ಬಗ್ಗೆ ಸಾರಸ್ವತ ಸಮಾಜದವರು ಕೈಗೊಂಡ ನಿರ್ಣಯಗಳು ಬಂದಿವೆ. ಇವೆಲ್ಲ ಮುಂದೆ ಗುಲ್ವಾಡಿ ವೆಂಕಟರಾಯರು 'ಇಂದಿರಾಬಾಯಿ' ಕಾದಂಬರಿ ಬರೆಯುವುದಕ್ಕೆ ಪ್ರೇರಣೆ ಒದಗಿಸಿದವು.

ಸ್ವಧರ್ಮ ಸಮರ್ಥನೆ: ಕ್ರೈಸ್ತ ಧರ್ಮ ಪ್ರಚಾರಕ್ಕೆಂದು 'ಅರುಣೋದಯ', 'ಸಭಾಪತ್ರ' ಪತ್ರಿಕೆಗಳು ಹೊರಟಂತೆ ಹಿಂದೂ ಧರ್ಮದ ಸಮರ್ಥನೆಗೂ ಕೆಲವು ಪತ್ರಿಕೆಗಳು ಹೊರಟವು. ತಮ್ಮ ತಮ್ಮ ಧರ್ಮಗಳನ್ನು ಸಮರ್ಥಿಸಿ ಅನ್ಯ ಧರ್ಮವನ್ನು ವಿಡಂಬಿಸಿ ಅನೇಕ ಲೇಖನಗಳು ಇವುಗಳಲ್ಲಿ ಪ್ರಕಟವಾಗಿವೆ. ಈ ಲೇಖನಗಳಲ್ಲಿಯೇ ಉತ್ತಮ ಸಾಹಿತ್ಯಕ ಗುಣಗಳಿವೆ. ಇವೆಲ್ಲ ಕ್ರಿಯೆಗೆ ಪ್ರತಿಕ್ರಿಯೆ ಎನ್ನುವ ರೀತಿಯಲ್ಲಿ ಬಂದುದು. ಹಿಂದೂ ಸನಾತನ ವಾದಿಗಳಿಗೆ ಕ್ರೈಸ್ತ ಧರ್ಮದ ಎದುರು ತಮ್ಮ ಧರ್ಮವನ್ನು ಸಮರ್ಥಿಸಿಕೊಳ್ಳುವುದರ ಜೊತೆಯಲ್ಲಿ ಆಂಗ್ಲ ಶಿಕ್ಷಣದಿಂದ ಹೊಸ ಪೀಳಿಗೆಯವರಲ್ಲಿ ಸ್ವಧರ್ಮದ ಮೇಲಿನ ಅಭಿಮಾನ ಕಡಿಮೆಯಾಗುತ್ತಿದ್ದುದನ್ನು ತಡೆಯುವುದೂ ಉದ್ದೇಶವಾಗಿತ್ತು. ಈ

ಪತ್ರಿಕೆಗಳಲ್ಲಿ ಕ್ರೈಸ್ತರು ತಮ್ಮ ಬೈಬಲ್ ಅನುವಾದ, ಇತರ ಬೈಬಲ್ ಕತೆಗಳನ್ನು ಪ್ರಕಟಿಸಿದರೆ ಹಿಂದೂಗಳೂ ತಮ್ಮ ಧರ್ಮದ ವಿವಿಧ ಮತ ಪಂಥಗಳಿಗೆ ಸಂಬಂಧಿಸಿದ ಕೃತಿಗಳನ್ನು ಸುಲಭವಾದ ಕನ್ನಡದಲ್ಲಿ ನೀಡಬೇಕು ಎಂಬ ಉದ್ದೇಶ ಹೊಂದಿದ್ದರು.

ವೆಂಕಟಕೃಷ್ಣ ಸರಸ್ವತಿಯವರು ಬೆಂಗಳೂರಿನಿಂದ ೧೮೮೮ರಲ್ಲಿ 'ಹಿಂದೂ ಮತಾಭಿಮಾನಿ'ಯನ್ನು ಹೊರಡಿಸಿದರು. ಆಸ್ತಿಕ ಭಾವ, ಜನ್ಮಾಂತರ, ಧರ್ಮದ ವ್ಯಾಖ್ಯೆ ಇತ್ಯಾದಿ ಲೇಖನಗಳು ಅದರಲ್ಲಿವೆ. ಇದಾದ ಹತ್ತು ವರ್ಷಗಳ ಬಳಿಕ ರಾ.ಸೂ. ವೆಂಕಟಕೃಷ್ಣಯ್ಯ ಎಂಬವರು ಸದ್ಧರ್ಮ ಪ್ರಸಾರವನ್ನೇ ಉದ್ದೇಶವಾಗಿಟ್ಟುಕೊಂಡು 'ವಿವೇಕಾನಂದ' ಪತ್ರಿಕೆ ಹೊರಡಿಸಿದರು. ಧಾರ್ಮಿಕ ವಿಚಾರವು ಅತ್ಯಂತ ಗಹನವಾದುದರಿಂದ ಮತತ್ರಯ ಗುರುಗಳು ಲೇಖನ ಕೊಟ್ಟು ಸಹಕರಿಸಬೇಕು ಎಂದು ಅವರು ಕೋರಿದ್ದಾರೆ.

"ಆಧುನಿಕ ಪಂಡಿತರನೇಕರು ವೇದಾರ್ಥವನ್ನು ಕೆಡಿಸಿ ವೇದಕ್ಕೆ ಕೆಟ್ಟ ಹೆಸರನ್ನು ತಂದಿರುವುದರಿಂದ.. .. .. ಐತರೇಯ, ಶತಪಥ, ಸಾಮ, ಗೋಪಥಗಳೆಂಬ ಎಲ್ಲಾ ಬ್ರಾಹ್ಮಣಗಳನ್ನೂ ಆರಣ್ಯಕಗಳನ್ನೂ ಪ್ರಟಿಸುತ್ತ ಪ್ರತಿವರ್ಷವೂ ತಮ್ಮ ಚಂದಾದಾರರ ಸನ್ನಿಧಿಗೆ ಒಂದೊಂದನ್ನು ಬಹುಮಾನವಾಗಿ ಕಳುಹಿಸಲು ನಿಶ್ಚೈಸಿರುವೆವು.. .. . 'ವಿವೇಕಾನಂದ'ವೆಂಬ ಈ ಶಿಶುವನ್ನು ಪರಿಗ್ರಹಿಸಿ, ಆನಂದಿಸಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಇದು ಸಕಾಲವಲ್ಲವೆ?" ಎಂದು ವಾಚಕರನ್ನು ಪ್ರಶ್ನಿಸಿದ್ದಾರೆ. ಈ ಪತ್ರಿಕೆಯಲ್ಲಿ ಪ್ರಕಟವಾಗಿ ಮುಂದೆ ಪುಸ್ತಕ ರೂಪದಲ್ಲಿ ಹೊರಬಿದ್ದ ಗ್ರಂಥಗಳನ್ನು ಚಂದಾದಾರರಿಗೆ ಅದರಲ್ಲೂ ಹೊಸಬರಿಗೆ ಉಚಿತವಾಗಿ ಅವರು ನೀಡಿರುವುದು ಧಾರ್ಮಿಕ ವಿಷಯದಲ್ಲಿಯ ಅವರ ಶ್ರದ್ಧೆಯನ್ನು ತೋರಿಸುವುದು. ಸಂಸ್ಕೃತ ಭಾಷೆ, ಬ್ರಾಹ್ಮಣರ ಜೀವನೋಪಾಯ ಕುರಿತ ಲೇಖನಗಳ ಜೊತೆಯಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ಲೇಖನಗಳೂ ಅದರಲ್ಲಿದ್ದವು. ಪತ್ರಿಕೆಯ ಉತ್ತರಾರ್ಧವನ್ನು ಸ್ತ್ರೀಯರಿಗಾಗಿ ವಿನಿಯೋಗಿಸುವುದಾಗಿ ಅವರು ಪ್ರಕಟಿಸಿದ್ದರು. 'ಯಾತಕ್ಕೆ ಸಂಧ್ಯಾವಂದನೆ' ಎಂಬ ಕುತರ್ಕಕ್ಕೆ ಪ್ರತಿಯಾಗಿ ಲೇಖನವನ್ನು ಬರೆದು ಕಳುಹಿಸಲು ಇದರಲ್ಲಿ ಕೋರಲಾಗಿತ್ತು. ಚಂದಾದಾರರನ್ನು ಹೆಚ್ಚಿಸಲು ಈಶಾವಾಸ್ಯೋಪನಿಷತ್ ಗ್ರಂಥವನ್ನು ಬಹುಮಾನವಾಗಿ ಕೊಡುವುದಾಗಿ ಅವರು ಪ್ರಕಟಿಸಿದ್ದರು. ವಾಸ್ತವದಲ್ಲಿ ಈ ಗ್ರಂಥದ ಬೆಲೆ ಚಂದಾ ಹಣಕ್ಕಿಂತ ಅಧಿಕವಾಗಿತ್ತು.

ಇದಲ್ಲದೆ ಜೈನ, ವೀರಶೈವ, ಶ್ರೀವೈಷ್ಣವ ಮತಗಳ ಪೋಷಣೆಗೂ ಪತ್ರಿಕೆಗಳು ಜನ್ಮತಾಳಿವೆ. ೧೮೮೮ರಲ್ಲಿ ಮೈಸೂರಿನ ಶ್ರೀಕೃಷ್ಣರಾಜೇಂದ್ರ ಪ್ರೆಸ್‌ನಲ್ಲಿ ಮುದ್ರಣಗೊಳ್ಳುತ್ತಿದ್ದ 'ಕರ್ನಾಟಕ ವಾಣೀವಿಲಾಸ'ದಲ್ಲಿ ಬಂದಿರುವ ಈ ಮಾತುಗಳು ಮನನೀಯವಾಗಿವೆ. "ನೂತನವಾಗಿ ಗ್ರಂಥಗಳನ್ನು ಲೋಕೋಪಕಾರಾರ್ಥವಾಗಿ ರಚಿಸಿ ಪ್ರಸಿದ್ಧಿಪಡಿಸುವ ಮಹಾತ್ಮರು ಪರಮೋತ್ತಮರು. ಇಷ್ಟು ವಿಶೇಷ ಶಕ್ತಿಯಿಲ್ಲದವರು ತಮಗೆ ತಿಳಿದ ಮಟ್ಟಿಗೆ

ಅಲ್ಲಲ್ಲಿರುವ ಸಾರವಾದ ಸಂಗತಿಗಳನ್ನು ಸಂಗ್ರಹಿಸಿ ಪರರ ತಿಳುವಳಿಕೆಗೆ ತರುವರು. ನಾವು ಈ ಎರಡನೆ ಮಾರ್ಗದಲ್ಲಿ ನಡೆಯುವವರಾಗಿದ್ದೇವೆ. ಇದರಿಂದ ದ್ರವ್ಯ ಸಂಪಾದನೆ ಮಾಡಬೇಕೆಂಬ ಅಭಿಲಾಷೆ ನಮಗಿಲ್ಲ.'' ಸಾರವಾದ ಸಂಗತಿಗಳನ್ನು ಸಂಗ್ರಹಿಸುವುದು ಹಾಗೂ ಅದನ್ನು ಪರರಿಗೆ ತಿಳಿವಳಿಕೆ ಮಾಡಿಕೊಡುವ ಉದ್ದೇಶ ಘನವಾದದ್ದೇ. 'ರಾಮವರ್ಮ- ಲೀಲಾವತಿ' ನಾಟಕ, 'ಸುವರ್ಣಲತಾ' ಕಾದಂಬರಿ ಈ ಪತ್ರಿಕೆಯಲ್ಲಿ ಬೆಳಕು ಕಂಡಿವೆ.

ಈ ಕಾಲದಲ್ಲಿ ಪತ್ರಿಕೆಗಳ ಮೂಲಕ ಗದ್ಯವು ಹಲವು ರೀತಿಯಲ್ಲಿ ಬಳಕೆಯಾಯಿತು. ಹಲವು ವಿಷಯಗಳಿಗೆ ಅಭಿವ್ಯಕ್ತಿ ನೀಡುವಾಗ ಭಾಷೆಗೆ ಹೊಸ ಕಸುವು ದೊರೆಯಿತು. ಪದ್ಯದಲ್ಲಿ ತಟ್ಟನೆ ಗೋಚರವಾಗುವ ಹೊಸತನ ಇದ್ದರೂ ರೂಪ ಮಾತ್ರ ಹಳೆಯದೇ ಇತ್ತು. ಹಳೆಯ ಸೀಸೆಯಲ್ಲಿ ಹೊಸ ಮದ್ಯ ಅನ್ನುವ ಹಾಗೆ. ಉದಾಹರಣೆಗೆ ೧೮೮೬ರ ಸೆಪ್ಟೆಂಬರ್ ತಿಂಗಳ 'ಹಿತಬೋಧಿನಿ'ಯಲ್ಲಿ 'ಮಂಗಳಾಭಿಮಾನಿ' ಎನ್ನುವವರು ಬರೆದಿರುವ ಈ ಪದ್ಯವನ್ನು ನೋಡಬೇಕು:

ಉಕ್ಕುವ ಸಂತೋಷದಿ ತಾ।
ನಕ್ಕನ ಕಂಡೋಡಿ ಬಂದು ಪೇಳ್ದಳ್ ನೀನೇಂ॥
ದುಕ್ಕಿಪೆಯಕ್ಕಾ? ಭಾವನು।
ಧಿಕ್ಕರಿಸಿದನೇನು, ನಾನು ಕೇಳುವೆನವನಂ॥

ತಂಗಿ/ತಮ್ಮಗೆ ಅಕ್ಕನ ನೋಡಿದ ಸಂತೋಷ, ಆಕೆಯ ದುಃಖ ಕಂಡು ಆಗುವ ದುಗುಡ, ಭಾವನ ಮೇಲೆ ಅನುಮಾನ, ಅವನನ್ನು ತಾನು ವಿಚಾರಿಸುವೆನೆಂಬ ಸಮಾಧಾನದ ಭರವಸೆ ಇವೆಲ್ಲವನ್ನು ಅತ್ಯಂತ ಪರಿಣಾಮಕಾರಿಯಾಗಿ ಈ ಪದ್ಯದಲ್ಲಿ ಸೆರೆ ಹಿಡಿಯಲಾಗಿದೆ. ಆದರೆ ಬಳಸಿದ್ದು ಕಂದ ಪದ್ಯವನ್ನು. ಕಾವ್ಯದ ವಸ್ತು, ಭಾವಗಳೆಲ್ಲ ಬದಲಾದರೂ ರೂಪ ಮಾತ್ರ ಅದೇ.

ಇಷ್ಟೇ ಉತ್ತಮವಾದ ಪದ್ಯಗಳು ಎಲ್ಲ ಸಮಯದಲ್ಲೂ ಎಲ್ಲರಿಂದಲೂ ಬಂದವು ಎಂದಲ್ಲ; ಉತ್ತಮ ಪದ್ಯಗಳು ಬರದೆ ಇದ್ದಾಗ ಟೀಕೆಗಳೂ ಬಂದಿವೆ. ಸಾಹಿತ್ಯದ ಸಂಕ್ರಮಣದ ಕಾಲದಲ್ಲಿ ಉತ್ತಮ ಕೃತಿಗಳ ಜೊತೆಯಲ್ಲಿ ನಿಕೃಷ್ಟ ಕೃತಿಗಳೂ ಬರುವುದು ಸಹಜ. ಸಾಹಿತ್ಯಪತ್ರಿಕೆಗಳು ಇಂಥ ಕಳೆಯನ್ನು ಕೀಳುವ ಕೆಲಸ ಮಾಡಿವೆ. ಟೀಕೆ ಕೆಲವೊಮ್ಮೆ ಛಾಟಿ ಏಟಿನಂತೆ ಇದ್ದವು.

೧೮೮೬ರ ಸಪ್ತೆಂಬರ್ ತಿಂಗಳ 'ಹಿತಬೋಧಿನಿ' ಪತ್ರಿಕೆಯಲ್ಲಿ ಬಂದಿರುವ ಈ ಟೀಕೆ ಒಂದು ಉತ್ತಮ ಉದಾಹರಣೆ. 'ಕರ್ನಾಟಕ ಭಾಷಾಭಿಮಾನಿ' ಎಂಬವರು ಬರೆದ 'ಕರ್ನಾಟಕ ಭಾಷೆ' ಹೆಸರಿನ ಈ ಲೇಖನದಲ್ಲಿ, ''ಪಾದಕ್ಕೆ ಇಷ್ಟು ಅಕ್ಷರ ಅಥವಾ ಮಾತ್ರೆಗಳಿದ್ದರೆ ಸರಿ ಎಂಬುವದನ್ನು ಮಾತ್ರ ತಿಳಿದುಕೊಂಡು ಕವಿತ್ವವನ್ನು ಮಾಡಿರುವವರು

ತಮ್ಮ ಕವಿತ್ವದ ವಿಷಯದಲ್ಲಿ ಯಾರಾದರೂ ಪೂರ್ವಪಕ್ಷವನ್ನು ಮಾಡಿದರೆ ಏನು ಸಮಾಧಾನ ಹೇಳುವರೋ ತಿಳಿಯದು... ಯೋಗ್ಯತೆಯಿಲ್ಲದೆ ಬರೀ ಚಾಪಲ್ಯದಿಂದ ಛಂದಸ್ಸಿಗೆ ಸರಿಯಾಗಿ ಅಕ್ಷರಗಳನ್ನು ಕೂಡಿಸುವುದನ್ನು ಕಲಿತು ಶಬ್ದ ದೋಷ, ಅರ್ಥ ದೋಷ, ವಾಕ್ಯ ದೋಷಗಳಿಗೆ ಜನ್ಮಭೂಮಿಯೆನಿಸುವ ಶುಷ್ಕ ಕವಿತೆಯನ್ನು ಮಾಡಿ ವಿದ್ವಾಂಸರ ಹಾಸ್ಯಕ್ಕೆ ಪಾತ್ರರಾಗುವುದಕ್ಕಿಂತಲೂ ವಿಷ ಪಾನವನ್ನು ಮಾಡುವುದು ಉತ್ತಮವು."[೮] ಹೊಸಗನ್ನಡ ಸಾಹಿತ್ಯ ರೂಪತಳೆಯುತ್ತಿದ್ದ ಸಂದರ್ಭದಲ್ಲಿ ಬಂದ ಈ ಮಾತುಗಳು ಶುಷ್ಕ ಕವಿತೆ ಬೇಡ ಎಂದು ಹೇಳಿರುವಲ್ಲಿಯ ಭಾಷಾಭಿಮಾನವನ್ನು ಗುರುತಿಸಬೇಕು.

ಸಮಾಜ-ಪತ್ರಿಕೆ-ಸಾಹಿತ್ಯ: ಸಮಾಜದಲ್ಲಿ ಇಲ್ಲದ್ದು ಪತ್ರಿಕೆಗಳಲ್ಲಿ ಆಗಲಿ ಸಾಹಿತ್ಯದಲ್ಲಿ ಆಗಲಿ ಒಡಮೂಡುವುದು ಸಾಧ್ಯವಿಲ್ಲ. ಆದರೆ 'ಯುಟೋಪಿಯಾ' ಆದರ್ಶವಾದುದೊಂದನ್ನು ಪತ್ರಿಕೆ ಹಾಗೂ ಸಾಹಿತ್ಯ ಪ್ರತಿಪಾದಿಸಬಹುದು. ಆ ಕೆಲಸವನ್ನು ಅವು ಮಾಡುತ್ತಲೂ ಬಂದಿವೆ. ಆರಂಭ ಕಾಲದ ಪತ್ರಿಕೆಗಳ ಮೂಲ ಸೆಲೆ ಧರ್ಮಪ್ರಸಾರ, ಜೊತೆಯಲ್ಲಿ ಸ್ವಧರ್ಮ ರಕ್ಷಣೆ ಎಂಬ ಮಾತನ್ನು ಗಮನಿಸಲಾಗಿದೆ. ಹಾಗೆಯೇ ಬಂಗಾಳದ ಮೂಲಕ ಹರಡಿದ ಸಮಾಜ ಸುಧಾರಣೆಯ ಗಾಳಿಯೂ ನಮ್ಮ ಪತ್ರಿಕೆಗಳನ್ನು ವ್ಯಾಪಿಸಿತು. ಆಗಿನ್ನೂ ಕನ್ನಡ ನಾಡು ರಾಜರುಗಳ, ಪಾಳೆಗಾರರುಗಳ, ಸಂಸ್ಥಾನಿಕರ ಆಳ್ವಿಕೆಯಲ್ಲಿ ಇದ್ದುದರಿಂದ ಸಿಪಾಯಿ ದಂಗೆಯ ಪರಿಣಾಮಗಳು ವ್ಯಾಪಕವಾಗಿ ಇನ್ನೂ ಆಗದೆ ಇದ್ದ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಭಾವನೆಗಳು ಬೆಳೆದಿರಲಿಲ್ಲ. ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ ೧೮೮೫ರಲ್ಲಿ ಎ.ಓ.ಹ್ಯೂಂನಿಂದ ಆಯಿತು. ಹ್ಯೂಂ ಒಬ್ಬ ವಿದೇಶಿ ಎಂಬುದನ್ನು ಇಲ್ಲಿ ಗಮನಿಸಬೇಕು. ಆ್ಯನಿಬೆಸೆಂಟ್ ಕೂಡ ವಿದೇಶಿ ಮಹಿಳೆ. ರಾಷ್ಟ್ರೀಯ ಕಾಂಗ್ರೆಸ್ ಮೂಲಕ ರಾಷ್ಟ್ರೀಯತೆ ಜಾಗೃತಿಗೊಳ್ಳಲು ಸ್ವಲ್ಪ ಕಾಲವೇ ಬೇಕಾಯಿತು.

ಹೊಸಗನ್ನಡ ಸಾಹಿತ್ಯದ ಆರಂಭ ಕಾಲವು ಅತ್ಯಂತ ಸಂಕೀರ್ಣವಾದದ್ದು. ಕ್ರಿ.ಶ. ೧೮೮೫ರಿಂದ ೧೯೦೫ರ ಎರಡು ದಶಕಗಳ ಅವಧಿ ಭಾರತೀಯ ಸಮಾಜದಲ್ಲಿ, ಜನರ ಬದುಕಿನ ದೃಷ್ಟಿಕೋನದಲ್ಲಿ ಆಶ್ಚರ್ಯವೆನಿಸುವಂಥ ಬದಲಾವಣೆಗಳನ್ನು ತಂದವು; ಒಮ್ಮೊಮ್ಮೆ ಇವನ್ನು ಬುಡಮೇಲು ಮಾಡಿ, ಜನರ ಮನಸ್ಸಿನಲ್ಲಿ ಅಭದ್ರತೆಯನ್ನು ಆತಂಕವನ್ನೂ ಸೃಷ್ಟಿಸುವುದರ ಜೊತೆಗೆ ಹೊಸ ಚೇತನದಿಂದ ಕೂಡಿದ ಸ್ವ-ಪ್ರಜ್ಞೆಯನ್ನು ಪ್ರಶ್ನಿಸುವ ಮನೋಭಾವವನ್ನೂ ಬೆಳೆಸಿದವು. ವಿಕ್ಟೋರಿಯಾ ಮಹಾರಾಣಿಯ ಘೋಷಣೆ ಹಾಗೂ ಲಾರ್ಡ್ ಮೆಕಾಲೆಯ ಶೈಕ್ಷಣಿಕ ಸುಧಾರಣೆಗಳು ನಮ್ಮ ದೇಶದ ಮೂಲೆ ಮೂಲೆಗೂ ತಲುಪಿ, ಧರ್ಮ ರಾಜಕಾರಣಗಳನ್ನು ಬೇರೆ ಮಾಡಿದವು. ಹಾಗೆಯೇ ಹಳೆಯ ಶೈಕ್ಷಣಿಕ ಪದ್ಧತಿಯನ್ನೂ ಅಪಹಾಸ್ಯಕ್ಕೆ ಗುರಿಮಾಡಿ, ಕಾಲಕ್ರಮೇಣ ಅದನ್ನು ಮೂಲೆಗುಂಪು ಮಾಡಿತು. ಪಾಶ್ಚಿಮಾತ್ಯ ಭಾಷೆ, ಸಾಹಿತ್ಯ ಅಮಲಿನಂತೆ ಇಡೀ ಭಾರತೀಯ ಮಧ್ಯಮ

೮.ಹಿತಬೋಧಿನಿ- ಪುಟ ೪೫೮; ಕರ್ನಾಟಕ ಭಾಷಾಭಿಮಾನಿ; ಕರ್ನಾಟಕ ಭಾಷೆ

ವರ್ಗವನ್ನು ಒಲಿಸಿಕೊಂಡವು. ಈ ಎಲ್ಲದರ ಜೊತೆಗೆ ಬಂದ ಬೈಬಲ್, ಷೇಕ್ಸ್‌ಪಿಯರ್, ಹೆನ್ರಿ ಫೀಲ್ಡಿಂಗ್, ಸರ್ ವಾಲ್ಟರ್ ಸ್ಕಾಟ್ ಮೊದಲಾದವರ ಕೃತಿಗಳ ಅನುವಾದಗಳು, ರೂಪಾಂತರಗಳು ಬಂದು ನಮ್ಮ ಜೀವನ ಕಲ್ಪನೆಯನ್ನು ಬದಲಿಸಿದವು. ಈ ವರೆಗೆ ಬರೆಹಗಾರರ ಗಮನವನ್ನೇ ಸೆಳೆಯದಿದ್ದ ಪ್ರಶ್ನೆಗಳು, ಸಾಹಿತ್ಯದ ವಸ್ತುಗಳಾದವು. ಚಿಂತನಶೀಲ ಬರಹಗಾರರೆಲ್ಲ ಈ ಸವಾಲನ್ನು ಸ್ವೀಕರಿಸುವುದು ಅನಿವಾರ್ಯವಾಯಿತು. ಹಳೆಯ ಹೊಸ ಮೌಲ್ಯಗಳು ಮುಖಾಮುಖಿಯಾದವು. ಲೇಖಕರು ಸಾಮಾಜಿಕ ಜವಾಬ್ದಾರಿಗೆ ಒಳಗಾದರು. ವೈಯಕ್ತಿಕ ಸ್ವಾತಂತ್ರ್ಯ, ಕೌಟುಂಬಿಕ ಸಮಸ್ಯೆಗಳು ನಮ್ಮ ಕೃತಿಗಳ ಕೇಂದ್ರಕ್ಷೇತ್ರವನ್ನು ಪ್ರವೇಶಿಸಿದವು. ಸಾಂಪ್ರದಾಯಿಕ ದೃಷ್ಟಿಕೋನ ಬದಲಾಗಿ ವಿಮರ್ಶಾತ್ಮಕ ಹಾಗೂ ಮಾನವೀಯತೆಯ ದೃಷ್ಟಿ ಬೆಳೆಯಲಾರಂಭಿಸಿತು. ಈ ಎಲ್ಲವೂ ಪಾಶ್ಚಿಮಾತ್ಯ ಸಂಪರ್ಕದ ಪ್ರಭಾವವೇ.

ಈ ಎಲ್ಲ ಕಾರಣಗಳಿಗಾಗಿಯೇ ಆರಂಭದ ಕಾಲದ ಲೇಖಕ ಹೊಸ ಹೊಸ ವಿಷಯಗಳನ್ನು ಆಯ್ದುಕೊಂಡ. ಹೊಸ ಅನುಭವದ ಹಿನ್ನೆಲೆಯಲ್ಲಿ ತನ್ನ ಹಿನ್ನೆಲೆಯನ್ನು ಒಮ್ಮೆ ಆತ ಸಿಂಹಾವಲೋಕನ ಮಾಡಿಕೊಂಡ. ಪ್ರಸ್ತುತದಲ್ಲಿ ಎಲ್ಲವೂ ಶೂನ್ಯವೆಂದು ಅವನ ಮನಸ್ಸು ಕುಗ್ಗಿತು. ಕನ್ನಡ ಭಾಷಿಕರ ಪ್ರದೇಶ ಏಕಾಧಿಪತ್ಯವಿಲ್ಲದೆ ಹರಿದು ಹಂಚಿಹೋಗಿತ್ತು. ".. ಕನ್ನಡ ನಾಡು ಕಾಲಚಕ್ರಕ್ಕನುಸರಿಸಿ, ಮುಂಬಯಿ, ಮದ್ರಾಸ, ಮೈಸೂರ, ಹೈದ್ರಾಬಾದಗಳೆಂಬ ನಾಲ್ಕು ಸರಕಾರಗಳ ಆಡಳಿತೆಗೊಳಪಟ್ಟಿದೆ. ಆದುದರಿಂದ ಕನ್ನಡ ನಾಡಿನೊಳಗಿನ ಜನರಲ್ಲಿ ಪರಸ್ಪರ ವ್ಯವಹಾರವು ಕನ್ನಡ ನೂತನ ಗ್ರಂಥಗಳ ಬಗ್ಗೆ ಆಸ್ಥೆಯೂ ಕಡಿಮೆಯಾಗಿದೆ. ಮಹಾರಾಷ್ಟ್ರ ಗುಜರಾಥ ದೇಶಗಳವರು ಒಮ್ಮನಸ್ಸಿನಿಂದ ತಂತಮ್ಮ ಭಾಷೆಗಳ ಉತ್ಕರ್ಷವನ್ನು ಮಾಡುತ್ತಿರುವಂತೆ, ಕನ್ನಡಿಗರಲ್ಲಿ ಮಾಡುತ್ತಿರುವವರು ವಿರಳವಾಗುತ್ತಾರೆ...." ಎಂಬ ತಟ್ಟಿಮಾಸ್ತರ ಮಾತು ಒಟ್ಟೂ ಪರಿಣಾಮವನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಅಂದಿನ ಪತ್ರಿಕೆಗಳು ಮಾಡಿದ ಮೊದಲ ಕೆಲಸ ನಾಡು ನುಡಿಯ ಬಗ್ಗೆ ಪ್ರೇಮವನ್ನು ಉಂಟುಮಾಡುವ ಹಾಗೆ ಪ್ರಯತ್ನಿಸಿದ್ದು. ಪತ್ರಿಕೆಯ ಬರೆಹಗಳು ಹಾಗೂ ಅದರ ಪರಿಣಾಮವಾಗಿ ಬಂದ ಕೃತಿಗಳನ್ನು ಇದುವರೆಗಿನ ವಿವೇಚನೆಯಲ್ಲಿ ಪರಿಶೀಲಿಸಲಾಗಿದೆ.

ಪುನರುಜ್ಜೀವನ ಕಾಲದ ಪ್ರೇರಣೆಯಿಂದ ಸಮಾಜ ಸುಧಾರಣೆಯ ಕಡೆಗೆ ಸಾಹಿತಿಗಳ ಮನಸ್ಸು ಹೊರಳಿತು. ಇದಕ್ಕೆ ಆ ಕಾಲದ ಪತ್ರಿಕೆಗಳೂ ವ್ಯಾಪಕವಾಗಿ ಸಮರ್ಥನೆಯನ್ನು ಒದಗಿಸಿದವು. ಬಾಲ್ಯ ವಿವಾಹ ನಿಷೇಧ, ವಿಧವೆಯರ ಮರು ವಿವಾಹ ಇತ್ಯಾದಿಗಳು ಅಂದಿನ ಸಮಾಜದ ಜ್ವಲಂತ ಸಮಸ್ಯೆಗಳಾಗಿದ್ದವು. ಇವುಗಳ ಬಗ್ಗೆ ವ್ಯಾಪಕ ಖಂಡನೆ ಮಂಡನೆಗಳು ಪತ್ರಿಕೆಗಳಲ್ಲಿ ಬಂದವು. ಹಿಂದೂ ಸಮಾಜದಲ್ಲಿ ಈ ಸಮಸ್ಯೆಗಳು ದೊಡ್ಡ ಊನವೆಂದು ಕ್ರೈಸ್ತ ಮತಪ್ರಚಾರಕರು ಪ್ರಚಾರಮಾಡುತ್ತಿದ್ದರು. ಅವರ ಪ್ರಹಾರದಿಂದ ತಪ್ಪಿಸಿಕೊಳ್ಳಲು ಹಿಂದೂ ಸಮಾಜದಲ್ಲಿಯೂ ಸುಧಾರಣೆ ಆಗಬೇಕು ಎಂದು

ಸುಧಾರಕ ಮನಸ್ಸಿನವರು ಬಯಸಿದರು. ವೆಂಕಟರಂಗೋ ಕಟ್ಟಿಯ ಬಗೆಗೆ ಈಗಾಗಲೇ ವಿವರಿಸಲಾಗಿದೆ. ಇವೆಲ್ಲದರಿಂದಾಗಿ ಸೂರಿ ವೆಂಕಟರಣ ಶಾಸ್ತ್ರಿಯ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ', ಶಿವರಾಮ ನಾರಣಪ್ಪ ಧಾರೇಶ್ವರನ 'ಕನ್ಯಾವಿಕ್ರಯ' ನಾಟಕಗಳು ಒಂದೇ ವರ್ಷದಲ್ಲಿ ಪ್ರಕಟವಾದುವು.(೧೮೮೭). ನಂತರ ಇದು ಗುಲ್ವಾಡಿ ವೆಂಕಟ ರಾಯರ 'ಇಂದಿರಾಬಾಯಿ' ಕಾದಂಬರಿಯ ವಸ್ತುವೂ ಆಗಿದೆ. ಇವೆಲ್ಲ ಈಗಾಗಲೆ ಬೇರೆಬೇರೆ ಕಡೆಗಳಲ್ಲಿ ಬಹು ಚರ್ಚಿತ ಕೃತಿಗಳಾಗಿವೆ. ಆದರೆ ಇದುವರೆಗೆ ಬಹುಜನರ ಗಮನಕ್ಕೆ ಬಾರದೆ ಅಜ್ಞಾತವಾಗಿದ್ದ ಕೃತಿಯೊಂದರ ಬಗ್ಗೆ ಇಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಅದು ವ್ಯಾಸರಾವ ವೆಂಕಟರಾವ ರೊದ್ದ ಅವರ 'ಚಂದ್ರಮುಖಿಯ ಘಾತವು' ಕೃತಿ. 'ಇಂದಿರಾಬಾಯಿ' ಪ್ರಕಟವಾದ ಮರು ವರ್ಷ ಅಂದರೆ ೧೯೦೦ರಲ್ಲಿ ಪ್ರಕಟವಾದ ಈ ಕೃತಿ ಇದುವರೆಗೆ ಅಜ್ಞಾತವಾಗಿತ್ತು. ಡಿ.ಎ.ಶಂಕರ ಅವರು ಇದನ್ನು ಬ್ರಿಟನ್ನಿನ ಬ್ರಿಟಿಷ್ ಮ್ಯೂಜಿಯಂನಿಂದ ಪ್ರತಿ ಮಾಡಿ ತಂದು ವಿಸ್ತೃತ ಮುನ್ನುಡಿ ಬರೆದು ೧೯೯೮ರಲ್ಲಿ 'ಮನೋಹರ ಗ್ರಂಥಮಾಲೆ'ಯ ಮೂಲಕ ಪ್ರಕಟಿಸಿದ್ದಾರೆ. ದೊಡ್ಡ ಅಕ್ಷರಗಳಲ್ಲಿ ಮೂಲದಲ್ಲಿ ಇದ್ದ ಹಾಗೆಯೇ ಇದನ್ನು ಪ್ರಕಟಿಸಲಾಗಿದೆ. ಕಾದಂಬರಿ ಒಟ್ಟೂ ೨೮ ಪುಟಗಳನ್ನು ಒಳಗೊಂಡಿದೆ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ನಾಲ್ಕು ಪ್ರಕರಣಗಳು, ಎರಡನೆ ಭಾಗದಲ್ಲಿ ಮೂರು ಪ್ರಕರಣಗಳು ಇವೆ. ಈ ಕೃತಿಯನ್ನು ಆಗಿನ ಸಮಾಜ ಸುಧಾರಕರಲ್ಲಿ ಒಬ್ಬರಾಗಿದ್ದ ಪುಣೆಯ ಫರ್ಗ್ಯೂಸನ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಗೋಪಾಲ ಗಣೇಶ ಅಗರ್ಕರ್ ಅವರಿಗೆ ಅರ್ಪಿಸಲಾಗಿದೆ.

ಈ ಕಾದಂಬರಿಯ ವಿಜ್ಞಾಪನೆಯಲ್ಲಿ ಲೇಖಕ ವ್ಯಾಸರಾವ ಅವರು ತಮ್ಮ ಈ ಕೃತಿಗೆ 'ಕಾದಂಬರಿ' ಎಂಬ ಹೆಸರನ್ನು ಬಳಸಿರುವುದೂ ಐತಿಹಾಸಿಕವಾಗಿ ಮಹತ್ವದ್ದು. 'ಇಂದಿರಾಬಾಯಿ'ಯಲ್ಲಿ ಗುಲ್ವಾಡಿಯವರು ಅದನ್ನು 'ಪುಸ್ತಕ' ಎಂದು ಕರೆದಿದ್ದಾರೆಯೇ ಹೊರತು ಕಾದಂಬರಿ ಎಂದು ಕರೆದಿಲ್ಲ. ಅದು ಅವರಿಗೆ 'ಇಂದಿರಾಬಾಯಿ' ಎಂಬವಳ ಜನ್ಮಚರಿತ್ರೆಯಾಗಿರುತ್ತದೆ. ಈ ಪ್ರಕಾರಕ್ಕೆ 'ಕಾದಂಬರಿ' ಎಂಬ ಹೆಸರು ಕೊಡುವ ಬಗೆಗೆ ಮಂಗಳೂರು ಭಾಗಕ್ಕಿಂತ ಮೊದಲೇ ಧಾರವಾಡ ಭಾಗದವರು ಮುಂದಾಗಿದ್ದೂ ಇದರಿಂದ ತಿಳಿಯುವುದು. 'ಚಂದ್ರಮುಖಿಯ ಘಾತವು' ವಿಜ್ಞಾಪನೆಯಲ್ಲಿ 'ಕನ್ನಡ ಕಾದಂಬರಿಗಳ ಲೇಖದಲ್ಲಿ ಈ ಚಿಕ್ಕ ಹೊತ್ತಿಗೆಯು ಹೊಸ ಪದ್ಧತಿಯನ್ನು ಅನುಸರಿಸಿರುವದೆಂಬುವದರಲ್ಲಿ ಸಂದೇಹವಿಲ್ಲ' ಎಂದು ಹೇಳಿರುವರು. ಅದು ನಿಜವೂ ಹೌದು. 'ನಾಟಕವೇ ಸಂಸಾರದ ಚಿತ್ರವಾಗಿರಬೇಕಾದ ಪಕ್ಷದಲ್ಲಿ ಕಾದಂಬರಿಯು ಹಾಗಿರಲೇಬೇಕು' ಎಂದು ಹೇಳುವ ಲೇಖಕರು ಕಾದಂಬರಿಯ ವ್ಯಾಖ್ಯೆಯನ್ನು ಹೇಳಲು ಪ್ರಯತ್ನಿಸಿದಂತಿದೆ. 'ಈ ಕಾದಂಬರಿಯಲ್ಲಿ ಅರಸು ಅರಸಿಯರಿಲ್ಲ. ಅಪ್ಸರೆಯರ ಸೌಂದರ್ಯವನ್ನು ಕೂಡ ಧಿಃಕ್ಕರಿಸುವ ಸುಂದರಿಯರಿಲ್ಲ. ಯಕ್ಷಸಿದ್ಧ ಕಿನ್ನರ ಮತ್ತು ಗಂಧರ್ವ ಗಣಗಳಿಂದ ಬಾರಿಬಾರಿಗೂ ಹೊಗಳಿಸಿಕೊಳ್ಳತಕ್ಕ ಮನೋಹರಾಂಗರಾದ ರಾಜಪುತ್ರರಿಲ್ಲ. ಆದರೆ

ಪ್ರತ್ಯಕ್ಷ ಸಂಸಾರದಲ್ಲಿ ಸಾಧಾರಣ ವ್ಯಕ್ತಿಗಳಿಗೆ ಕೂಡ ಕಂಡು ಬರುವ ಪಾತ್ರಗಳಿವೆ' ಎಂದು ಹೇಳುತ್ತಾರೆ. ಒಟ್ಟಾರೆ ಅಂದಿನ ಹೊಸ ವಾತಾವರಣ ಸಾಹಿತ್ಯಕ್ಕೆ ಹೊಸ ವಸ್ತುವನ್ನು ಒದಗಿಸಿದೆ.

ಈ ಕೃತಿಯ ವಸ್ತುವು ಶೋಷಣೆಗೊಳಗಾದ ಸ್ತ್ರೀ ಪಾತ್ರಗಳನ್ನು ಚಿತ್ರಿಸುವುದು. ಒಂದೊಂದು ಪ್ರಕರಣದಲ್ಲಿಯೂ ಒಂದೊಂದು ರೀತಿಯಲ್ಲಿ ಶೋಷಣೆಗೆ ಒಳಗಾದ ಸ್ತ್ರೀಪಾತ್ರವಿದೆ ಇದರಲ್ಲಿ. ಲಲಿತೆ ಕುಲೀನೆ, ಸಮಾಜದ ಕಟ್ಟುಪಾಡಿಗೆ ಸಿಕ್ಕಿಬಿದ್ದಿರುವ ಸಣ್ಣ ವಯಸ್ಸಿನ ವಿಧವೆ. ಮರುಮದುವೆಯಾಗುವ ಧೈರ್ಯವಿಲ್ಲದವಳು. ಮೂವತ್ತೆಂಟು ವರ್ಷಗಳ ಮೋಹಿನಿಯ ಪತಿ ವೃದ್ಧ. ಸಾಲದ್ದಕ್ಕೆ ಮುಂಗೋಪಿ ಹಾಗೂ ದರ್ಪಿಷ್ಟ; ಇವಳು ಗಂಡನ ಕಾಟವನ್ನು ತಾಳಲಾರದೆ ಮನೆ ಬಿಟ್ಟು ಓಡಿಹೋಗಿ ಈಗ ಬಿಲಾಸಪುರ ತಹಶೀಲದಾರನ 'ರಖಾವ್' ಆಗಿದ್ದಾಳೆ. ಬಾಲ ಸರೋಜಿನಿ ಬಡತನದಿಂದಾಗಿ ರಾಮಪುರದ ಮುದಿ ಜಮೀನುದಾರನಿಗೆ ಮರಾಟವಾಗಿಹೋಗಿದ್ದಾಳೆ. ಸನುಮತಿ ಮನಸ್ಸಿಲ್ಲದಿದ್ದರೂ ವಿಧುರನೊಬ್ಬನನ್ನು ಮದುವೆಯಾಗಬೇಕಾಗುತ್ತದೆ. ಇಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಾದಂಬರಿ ಹುಡುಕುತ್ತದೆ. ಒಟ್ಟಿನಲ್ಲಿ ಈ ಕೃತಿಯು ಆ ಕಾಲದ ಸಾಹಿತಿಗಳ ಧೋರಣೆಗೆ ಉದಾಹರಣೆಯಾಗಿ ನಿಲ್ಲುತ್ತದೆ.

ಮಾರ್ಗಪ್ರವರ್ತಕರು : ಹೊಸಗನ್ನಡ ಸಾಹಿತ್ಯದ ಆರಂಭಕಾಲದ ಸಾಹಿತಿಗಳ ಪ್ರಮುಖ ಸಮಸ್ಯೆ ಎಂದರೆ ಹೊಸ ಸಾಹಿತ್ಯ ರೂಪಗಳನ್ನು ಅವರೇ ಕಂಡುಕೊಂಡು ಆರಂಭಿಸಿ ರೂಢಿಸಬೇಕಿತ್ತು. ಸಣ್ಣ ಕತೆ, ಭಾವಗೀತೆ, ಕಾದಂಬರಿ ಹೀಗೆ ಎಲ್ಲದರಲ್ಲೂ ಅವರು ಪ್ರಯೋಗಶೀಲರಾಗಬೇಕಿತ್ತು. ಹೊಸ ಸಾಹಿತ್ಯ ಮಾರ್ಗವನ್ನು ಸಾಹಿತಿಗಳು ಹಿಡಿದಾಗ ಸಾಹಿತ್ಯಪತ್ರಿಕೆಗಳು ಅವರಿಗೆ ಈ ಸಾಹಸದಲ್ಲಿ ನೆರವಾದವು. ಕಾದಂಬರಿ ಪ್ರಕಾರ ಕನ್ನಡದಲ್ಲಿ ಮೈತಳೆದಾಗ ಅದನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕರೆದರು. ಅದಕ್ಕೆ 'ಕಾದಂಬರಿ' ಎಂದೇ ಕರೆಯಬೇಕು ಎಂಬ ವಾದ 'ಸುವಾಸಿನಿ' ಪತ್ರಿಕೆಯಲ್ಲಿ ೧೯೦೦ರಲ್ಲಿಯೇ ನಡೆಯಿತು.

ಹೊಸಗನ್ನಡ ಸಾಹಿತ್ಯದಲ್ಲಿ ಇಂದು ಕಾದಂಬರಿಯದೇ ಅಗ್ರಪಾಲು. ಇದು ಹಳೆಗನ್ನಡದಲ್ಲಿ ಇಲ್ಲದ ಒಂದು ಸಾಹಿತ್ಯ ಪ್ರಕಾರ. ಹೀಗಾಗಿ ಈ ಸಾಹಿತ್ಯ ಪ್ರಕಾರವನ್ನು ಯಾವ ಹೆಸರಿನಿಂದ ಕರೆಯಬೇಕು ಎನ್ನುವುದರಿಂದ ಹಿಡಿದು ಈ ಪ್ರಕಾರದ ಲಕ್ಷಣಗಳನ್ನು ಕ್ರೋಡೀಕರಿಸುವ ವರೆಗೆ ಸಾಹಿತ್ಯಪತ್ರಿಕೆಗಳಲ್ಲಿ ಚರ್ಚೆ ನಡೆಯಿತು. ಮೈಸೂರಿನಲ್ಲಿ ಚಾಮರಾಜ ನಗರದ ವೆಂಕಟ್ರಮಣ ಶಾಸ್ತ್ರಿಗಳು 'ಕಾದಂಬರೀ ಸಂಗ್ರಹ' ಎಂಬ ಒಂದು ಪತ್ರಿಕೆಯನ್ನೇ ಹೊರಡಿಸುತ್ತಿದ್ದುದನ್ನು ಈಗಾಗಲೆ ಗಮನಿಸಲಾಗಿದೆ. ಧಾರವಾಡದ 'ವಿದ್ಯಾವರ್ಧಕ ಸಂಘ'ದವರು ಕಾದಂಬರಿ ರಚನೆ ಸ್ಪರ್ಧೆಯನ್ನು ೧೯ನೆ ಶತಮಾನದ ಕೊನೆಯಲ್ಲಿ ನಡೆಸಿದ್ದನ್ನೂ ಗಮನಿಸಲಾಗಿದೆ. ಕನ್ನಡವೂ ಒಳಗೊಂಡಂತೆ ಒಟ್ಟಾರೆ

ಭಾರತೀಯ ಸಾಹಿತ್ಯಕ್ಕೆ 'ಕಾದಂಬರಿ' ಪ್ರಕಾರ ಬಂದುದು ಬ್ರಿಟಿಷ್ ಮೂಲದಿಂದಲೇ. ಇದಕ್ಕೆ ಇಲ್ಲೊಂದು ಪುರಾವೆಯನ್ನು ನೋಡಬಹುದು. ತೆಲುಗಿನ 'ಚಿಂತಾಮಣಿ' ಎಂಬ ಪತ್ರಿಕೆ ಕಾದಂಬರಿ ರಚನೆಗಾಗಿ ಸ್ಪರ್ಧೆಯೊಂದನ್ನು ಏರ್ಪಡಿಸಿತ್ತು. ಅದರ ಕುರಿತು ನೀಡಿದ ಪ್ರಕಟಣೆಯಲ್ಲಿ 'ನೀವು ಕಾದಂಬರಿಯನ್ನು ಬರೆಯುವಾಗ ವಾಲ್ಟರ್ ಸ್ಕಾಟ್ ಮತ್ತು ಜೂಲ್ಸ್ ವರ್ನ್ ಇಂಥವರನ್ನು ಮಾದರಿಯಾಗಿ ಇಟ್ಟುಕೊಳ್ಳಿರಿ' ಎಂದು ಸಲಹೆ ನೀಡಲಾಗಿತ್ತು. ಪಾಶ್ಚಾತ್ಯರಲ್ಲಿದ್ದ ಕಾದಂಬರಿಯ ಸಿದ್ಧರೂಪವನ್ನು ನಾವು ಪಡೆದುಕೊಂಡೆವು.

ಇಂದಿನ ಕಾದಂಬರಿಗೆ 'ನವೆಲ್' ಎಂದೂ 'ಕಲ್ಪನಾ ಪ್ರಬಂಧವೆಂದೂ' ಮರಾಠಿ, ಕನ್ನಡಗಳಲ್ಲಿ ಪ್ರಚಾರವಿತ್ತು. ಬಂಗಾಲಿಯಲ್ಲಿ 'ಉಪನ್ಯಾಸ' ಎಂದು ಕರೆಯುತ್ತಿದ್ದರು. ಅಂಥ ಸಂದರ್ಭದಲ್ಲಿ ಈ ಪ್ರಕಾರಕ್ಕೆ 'ಕಾದಂಬರಿ' ಎಂಬ ಹೆಸರೇ ಸೂಕ್ತವೆಂದು 'ಕನ್ನಡ ಕೋಗಿಲೆ'ಯಲ್ಲಿ ಒಬ್ಬರು ವಾದಿಸಿದ್ದರು. ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ೧೯೦೦ರ ಸಪ್ಟೆಂಬರ್‌ದ 'ಸುವಾಸಿನಿ' ಸಂಚಿಕೆಯಲ್ಲಿ 'ಕಾದಂಬರಿ ಲೇಖನ' ಎಂಬ ಒಂದು ಲೇಖನ ಪ್ರಕಟವಾಗಿದೆ. ಅದುವರೆಗೆ ಕನ್ನಡದಲ್ಲಿ ಪ್ರಕಟವಾದ ಕಾದಂಬರಿಗಳ ಒಟ್ಟೂ ಸಂಖ್ಯೆ ೧೫ರೊಳಗೆ. ಆ ಕಾಲದಲ್ಲಿಯೇ ಒಂದು ಹೊಸ ಸಾಹಿತ್ಯ ಪ್ರಕಾರಕ್ಕೆ ಇದೇ ಹೆಸರನ್ನು ಇಡಬೇಕು ಎಂಬ ವಾದ ಮಂಡನೆಯಾಗಿತ್ತು. ಕಾದಂಬರಿಯನ್ನು ಓದುವುದರಿಂದ ಭಾಷೆಯ ಮೇಲೆ ಪ್ರೀತಿ ಹೆಚ್ಚುವುದು, ಅಭಿಮಾನ ತುಂಬುವುದು ಎಂಬ ಅಂಶವನ್ನು ಈ ಲೇಖನದಲ್ಲಿ ಗುರುತಿಸಲಾಗಿದೆ. "ಕರ್ನಾಟಕ ಭಾಷೆಯಲ್ಲಿ ಗದ್ಯ ಲೇಖನವೇ ಅಪರೂಪ. ಅದರೊಳಗೂ ಯುಕ್ತಿಯಿಂದ ಊಹಿಸಿ, ಬರೆಯುವ ಕಲ್ಪನಾ ಪ್ರಬಂಧಗಳೇ ಇರಲಿಲ್ಲ. ಸಂಸ್ಕೃತದಲ್ಲಿ ಬಾಣಭಟ್ಟನೆಂಬ ಕವಿ 'ಕಾದಂಬರಿ' ಹೆಸರಿನ ಭಲೋ ಕಥೆಯನ್ನು ರಚಿಸಿದನು. ಅದರಿಂದೀಚೆಗೆ ಇಂತಹ ಕಥೆಗಳಿಗೆಲ್ಲ 'ಕಾದಂಬರಿ' ಎಂಬುದು ರೂಢನಾಮವಾಯಿತು. ದೇಶೋನ್ನತಿಗೆ ಬೇಕಾದ ಉಪಕರಣಗಳಲ್ಲಿ ಭಾಷೆಯ ಅಭಿವೃದ್ಧಿಯ ಸಫಲವಾದ ವ್ಯವಸಾಯವೂ ಮುಖ್ಯವಾದುದು" ಎಂದು ಲೇಖಕರು ಹೇಳಿದ್ದಾರೆ. "ಭಾಷೆಯ ಅಭಿವೃದ್ಧಿ ಆಗಬೇಕಾದರೆ ಸಾಧ್ಯವಾದಷ್ಟೂ ಜನಮಂಡಲಿಗೆ ವಿದ್ಯಾಪ್ರವೀಣತೆ ಉಂಟಾಗಲೇಬೇಕು. ಸುಲಭವಾಗಿ ಅವಗಾಹನ ಶಕ್ಯವಲ್ಲದ, ಪದ್ಯಾತ್ಮಕ ಮಹಾಕಾವ್ಯಗಳನ್ನು ಓದುವುದು ಎಂದರೆ ಆಕಾಶಕ್ಕೆ ಏಣಿ ಹಾಕುವುದೇ ಸೈ. ಉತ್ತಮ ನಾಯಕನನ್ನು ಹೊಗಳುವುದೇ ತಮ್ಮ ಕರ್ತವ್ಯವೆಂದು ತಿಳಿದ ಹಳೆಯ ಕವಿಗಳು ಎಲ್ಲ ಪದ್ಯ, ಕಥೆ, ಪುರಾಣಗಳನ್ನು ಅತಿಶಯೋಕ್ತಿ ತುಂಬಿದ ಒಂದೇ ಅಚ್ಚಿನಲ್ಲಿ ಕೆತ್ತಿದ ಒಡವೆಗಳಂತೆ ರಚಿಸಿದರು" ಎಂದು ಹೇಳಿದ್ದಾರೆ. "ಐಹಿಕ ಸಾಧನವಾಗಿಯೂ, ಲೋಕದ ವಾಸ್ತವಗುಣ ವರ್ಣನ ಪರವಾಗಿಯೂ ಇರುವ ಇತಿಹಾಸದ, ಕಾದಂಬರಿ ಲೇಖನವು ಆಂಗ್ಲೇಯರಲ್ಲಿ ಅನಾದಿ ಕಾಲದಿಂದಲೂ ಉಂಟು. ಅಕ್ಷರಜ್ಞಾನವುಂಟಾದವರಲ್ಲಿ ಅನೇಕ ಮಂದಿ ಈ ತರದ ಪುಸ್ತಕಗಳನ್ನೋದಿ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳುವರು... ಕಾದಂಬರಿಗಳು ಕವಿಯ ಬುದ್ಧಿ ಕೌಶಲ್ಯವಿದ್ದಷ್ಟು ಊಹಿಸಿ ಬರೆಯತಕ್ಕ ಪ್ರಮೇಯಗಳಾಗಿರುವವು....

ಈಚೆಗೆ ನಮ್ಮ ದೇಶದಲ್ಲಿ ಇಂಗ್ಲಿಷು ಭಾಷೆಯನ್ನಭ್ಯಾಸ ಮಾಡಿದ ಗೃಹಸ್ಥರನೇಕರು ದೇಶ ಭಾಷೆಯಲ್ಲಿ ಸ್ತೋತ್ರಾರ್ಹವಾದ ಕಾದಂಬರಿಗಳನ್ನು ರಚಿಸಿರುವರು. ಪ್ರಪಂಚಾನುಭವವೂ ಪೂರ್ವೋತ್ತರ ವಿಚಾರಗಳೂ, ಯುಕ್ತಿಚಾತುರ್ಯಗಳೂ, ಮನುಷ್ಯನಿಗೆ ಹುಟ್ಟಬೇಕಾದರೆ ಅನೇಕ ಪುಸ್ತಕಗಳನ್ನೋದಿಕೊಂಡ ಹೊರತು ಸಾಧ್ಯವಾಗಲಾರದು,'' ಎಂದು ಇದರ ಲೇಖಕರು ಹೇಳಿದ್ದಾರೆ.

೧೯೦೦ರಲ್ಲಿಯೇ ಈ ಲೇಖನವನ್ನು ಬರೆದವರ ಹೆಸರು ಗೊತ್ತಾಗಿಲ್ಲ. ಆದರೆ ಕಾದಂಬರಿಯ ಬಗ್ಗೆ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಕಾದಂಬರಿಯ ವ್ಯಾಖ್ಯೆಯನ್ನು, ಕಾದಂಬರಿ ಮಾಡಬಹುದಾದ ಪ್ರಭಾವಗಳನ್ನು ಸ್ಪಷ್ಟ ಮಾತುಗಳಲ್ಲಿ ವಿವರಿಸಿದೆ. ಕಾದಂಬರಿಗಳು ಯುಕ್ತಿಯಿಂದ ಊಹಿಸಿ ಬರೆಯುವ ಕಲ್ಪನಾ ಪ್ರಬಂಧಗಳು, ಕಾದಂಬರಿ ಎಂದರೆ ಉತ್ತಮ ನಾಯಕನನ್ನು ಹೊಗಳುವುದು ಮಾತ್ರವಲ್ಲ, ಅತಿಶಯೋಕ್ತಿಯ ಕಥೆಯಲ್ಲ. ಅಂದರೆ ವಾಸ್ತವಾಂಶ ಇರಬೇಕು. ಇದು ಊಹಿಸಿ ಬರೆಯುವಂಥದ್ದು. ಹೀಗಾಗಿ ಜೀವನ ಚರಿತ್ರೆಗಳಲ್ಲ. ಇದರ ಪ್ರಯೋಜನವೆಂದರೆ ಓದುವವರಿಗೆ ಪ್ರಪಂಚದ ಅನುಭವ, ಪೂರ್ವೋತ್ತರ ವಿಚಾರಗಳ ಅರಿವು, ಯುಕ್ತಿ ಚಾತುರ್ಯ ಲಭ್ಯ. ಭಾಷೆಯ ಅಭಿವೃದ್ಧಿ, ಜೊತೆಗೆ ಭಾಷೆಯ ಬಗ್ಗೆ ಪ್ರೀತಿ.

ಈ ಮಾತುಗಳನ್ನು 'ಚಂದ್ರಮುಖಿಯ ಘಾತವು' ಕೃತಿಯ ಲೇಖಕರು ಕಾದಂಬರಿಯ ಕುರಿತು ಬರೆದ ಮಾತುಗಳೊಂದಿಗೆ ಹೋಲಿಸಿ ನೋಡಬೇಕು.

ಹೀಗೆ ಸಾಹಿತ್ಯ ಪ್ರಕಾರವೊಂದು ಹುಟ್ಟು ಪಡೆದ ಸಂದರ್ಭದಲ್ಲಿ ಅದಕ್ಕೆ ಅದಕ್ಕೆ ನಾಮಕರಣ ಮಾಡುವ ಈ ಚರ್ಚೆ ಅತ್ಯಂತ ಸಾಂದರ್ಭಿಕ, ಅಷ್ಟೇ ಸೂಕ್ತವಾದದ್ದೂ ಕೂಡ. ಕಾದಂಬರಿಯ ಬಗೆಗೆ ಬೇರೆಬೇರೆ ಸಾಹಿತ್ಯ ಚಳವಳಿಗಳ ಸಂದರ್ಭಗಳಲ್ಲಿ ಬೇರೆಬೇರೆ ರೀತಿಯ ಚರ್ಚೆಗಳು ವಿವಿಧ ಕೃತಿಗಳನ್ನು ಆಧರಿಸಿ ನಡೆದಿವೆ.

ಕಾಲದ ದೃಷ್ಟಿಯಿಂದ ಮುಂದಿನ ಅಧ್ಯಾಯಕ್ಕೆ ಸೇರುವುದಾದರೂ ಸಣ್ಣ ಕತೆಯು ಹೊಸಗನ್ನಡದಲ್ಲಿ ಹುಟ್ಟುವಾಗ ಬಂಜ ಟೀಕೆಯನ್ನು ಅದರ ಸಮರ್ಥನೆಯನ್ನು ಇಲ್ಲಿಯೇ ಗಮನಿಸುವುದು ಸೂಕ್ತ ಎನ್ನಿಸುವುದು. ಹೊಸಗನ್ನಡದದಲ್ಲಿ ಸಣ್ಣ ಕತೆಯನ್ನು ಆರಂಭಿಸಿ ಬೆಳೆಸಿದವರಲ್ಲಿ ಪಂಜೆ ಮಂಗೇಶರಾಯರು, ಎಂ.ಎನ್.ಕಾಮತರು, ಮಾಸ್ತಿಯವರು, ಎ.ಆರ್.ಕೃಷ್ಣಶಾಸ್ತ್ರಿಗಳು, ಆನಂದರು ಪ್ರಮುಖರಾದವರು. ಭಾರತೀಯ ಪರಂಪರೆಯಲ್ಲಿ ಸಣ್ಣ ಕತೆಗಳು ಇದ್ದವು. ಪಂಚತಂತ್ರ, ಬೃಹತ್ಕಥೆ, ಜಾತಕ ಕತೆಗಳು ಇವೆಲ್ಲ ವಿಶಿಷ್ಟವಾದದ್ದು. ಕನ್ನಡದಲ್ಲಿಯೇ ವಡ್ಡಾರಾಧನೆಯ ಕತೆಗಳನ್ನು ಗಮನಿಸಬಹುದು. ಆದರೆ ಹೊಸಗನ್ನಡದ ಕತೆಗಳು ಇವುಗಳಿಂದ ಸಂಪೂರ್ಣ ಬೇರೆಯಾದದ್ದು. ಆಂಗ್ಲರ ಪ್ರಭಾವದಿಂದಾಗಿಯೇ ಅದು ಕನ್ನಡದಲ್ಲಿ ಕಾಣಿಸಿಕೊಂಡಿದ್ದು. ಸ್ವತಃ ಮಾಸ್ತಿಯವರೇ ತಾವು ಆಂಗ್ಲ ಮ್ಯಾಗ್ಜಿನ್ ಒಂದರಿಂದ ಪ್ರಭಾವಿತರಾಗಿ ಕತೆ ಬರೆಯಲು ಆರಂಭಿಸಿದ್ದಾಗಿ ಹೇಳಿದ್ದನ್ನು ಈಗಾಗಲೇ

ಗಮನಿಸಲಾಗಿದೆ. ಹಳೆಯ ಪರಂಪರೆಯಿಂದ ಭಿನ್ನವಾದ ಈ ಕತೆಗಳಿಗೆ ಸುಲಭದಲ್ಲಿ ಸ್ವಾಗತವು ದೊರೆಯಲಿಲ್ಲ. ಮಾಸ್ತಿಯವರ ಮೊದಲ ಸಣ್ಣ ಕತೆಗಳು ಪ್ರಕಟವಾದಾಗ 'ಇದೇನು ಸಣ್ಣ ಕತ್ತೆ ಬಂದಪ್ಪ' ಎಂದು ಟೀಕಿಸಿದವರಿದ್ದಾರೆ. 'ಮಧುರವಾಣಿ' ಪತ್ರಿಕೆಯಲ್ಲಿ ಬಂದ ಟೀಕೆಯನ್ನು ಇಲ್ಲಿ ಉಲ್ಲೇಖಿಸಿದರೆ ಪ್ರತಿಭಟನೆಯ ತೀವ್ರತೆ ವೇದ್ಯವಾಗುತ್ತದೆ. "ಒಂದು ಕತೆಯಂತೆ, ಕತೆ. ಕತೆಯನ್ನು ಬರೆದಿದ್ದಾರೆ. ಅದರ ಹೆಸರು 'ರಂಗಪ್ಪನ ದೀಪಾವಳಿ', ಇನ್ನು ನಾಳೆ ನಾನು ಕೂತು 'ಉಗ್ರಪ್ಪನ ಉಗಾದಿ' ಎಂದು ಒಂದು ಕತೆಯನ್ನು ಬರೆಯಬೇಕೆಂದಿದ್ದೇನೆ. ಆಹಾ, ಏನು ಹೇಳಬೇಕೋ!"[೯] ಎಂಬ ಮೂದಲಿಕೆಯಲ್ಲಿರುವ ತೀವ್ರತೆಯನ್ನು ಗಮನಿಸಬೇಕು.

ಇದಕ್ಕೆ ಮಾಸ್ತಿಯವರು ಬಹಳ ಸಮಾಧಾನದಿಂದಲೇ ಉತ್ತರ ಕೊಟ್ಟಿದ್ದಾರೆ. ತಮ್ಮ ಮೊದಲ ಕಥಾ ಸಂಕಲನ 'ಕೆಲವು ಸಣ್ಣ ಕತೆಗಳು'ದಲ್ಲಿ ಅವರು, 'ರಂಗಪ್ಪನ ದೀಪಾವಳಿಯೇ, ಸರಿ, ಉಗ್ರಪ್ಪನ ಉಗಾದಿ, ವೆಂಕಟರಾಯನ ಪಿಶಾಚವೋ, ಸರಿ, ಶ್ರೀಕಂಠಯ್ಯನ ಬೇತಾಳ' ಎಂದು ಮೊದಲಾಗಿ ಧೋರಣೆಯಿಂದ ಮಾತನಾಡಿ ಈ ಕತೆಗಳನ್ನು ಎಸೆಯಬೇಡಿ. ನಾನು ರಂಗಪ್ಪನ ದೀಪಾವಳಿಯನ್ನು ಅಚ್ಚುಹಾಕಿಸಿದ್ದೇನೆ; ಇದರಿಂದ ಕೆಲವರು ಸಂತೋಷಪಟ್ಟಿದ್ದಾರೆ. 'ಉಗ್ರಪ್ಪನ ಉಗಾದಿ' ಎನ್ನುವ ನೀವು ಉಗ್ರಪ್ಪನ ಉಗಾದಿಯನ್ನು ಬರೆದು ಅಚ್ಚು ಹಾಕಿಸಿ; ನಾನು ಓದಿ ಸಂತೋಷ ಪಡುತ್ತೇನೆ. ಶ್ರೀಕಂಠಯ್ಯನ ಬೇತಾಳವನ್ನು ಅದು ಅಚ್ಚಾಗಿ ಬಂದಾಗ್ಗೆ ನನ್ನ ಒಡಹುಟ್ಟಿದವನಂತೆ ಪ್ರೀತಿಯಿಂದ ಆಲಂಗಿಸಿಕೊಳ್ಳುತ್ತೇನೆ. ಈ ಕತೆಗಳು ಸಾಮಾನ್ಯವಾದುವು; ಕೆಲವರು ಮಾತ್ರ ಓದಿ ಸಂತೋಷಪಡಬಹುದು. ನೀವು ಒಳ್ಳೆಯ ಕತೆಗಳನ್ನು ಬರೆಯಿರಿ; ಅಚ್ಚು ಹಾಕಿಸಿ; ಹೆಚ್ಚು ಜನ ಓದಿ ಸಂತೋ ಪಡಲಿ. ಈ ಹತ್ತು ಕತೆಗಳು ಇವುಗಳೆಲ್ಲಕ್ಕಿಂತ ನೂರು ಪಾಲು ಹೆಚ್ಚಾದವುಗಳನ್ನು ನಮ್ಮ ನಾಡಿನ ನನ್ನ ಅಣ್ಣಂದಿರಾ, ತಮ್ಮಂದಿರಾ ನೀವು ಬರೆಯಬೇಕೆಂಬುದೇ ನನ್ನ ಮನಸ್ಸಿನ ಅಂತರಾಳದಲ್ಲಿರುವ ಅಧಿಕವಾದ ಆಸೆ- ಎಂದು ಬರೆದಿದ್ದಾರೆ. ಮಾಸ್ತಿಯವರ ಕತೆಯ ಶೈಲಿಯ ಹಾಗೆಯೇ ಅವರು ತಮ್ಮ ಟೀಕೆಗೆ ಉತ್ತರವನ್ನೂ ಅತ್ಯಂತ ಮೃದುವಾದ ರೀತಿಯಲ್ಲಿ ಕೊಟ್ಟಿರುವರು. ತಮ್ಮದು ಅತ್ಯುತ್ತಮ ಸೃಷ್ಟಿಯೆಂದು ಅವರು ಹೇಳಿಕೊಳ್ಳಲಿಲ್ಲ. ಆದರೆ ಇದಕ್ಕಿಂತ ಉತ್ತಮವಾದುದನ್ನು ಬರೆಯುವುದಕ್ಕೆ ಕರೆ ಕೊಡುತ್ತಾರೆ. ಒಟ್ಟಾರೆ ಭಾಷೆ ಆ ಮೂಲಕ ಶ್ರೀಮಂತವಾಗಬೇಕು ಎಂಬುದು ಅವರ ಉದ್ದೇಶ.

ಹೊಸದನ್ನು ಸುಲಭದಲ್ಲಿ ಯಾರೂ ಒಪ್ಪಿಕೊಳ್ಳುವುದಿಲ್ಲ ಎಂಬ ಮಾತು ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸುವಂಥದ್ದೇ. ಇದಕ್ಕೆ ಮುದ್ದಣನೇ ಉದಾಹರಣೆ. ಹೊಸ ಕೃತಿಗಳನ್ನು ಯಾರೂ ಪ್ರಕಟಿಸುವುದಿಲ್ಲ ಎಂದು ಆತ ಹಳೆಗನ್ನಡದಲ್ಲಿಯೇ ಬರೆಯುತ್ತಾನೆ. 'ಸಾಮಾನ್ಯ

೯.ಮಾಸ್ತಿಯವರ ಸಮಗ್ರ ಕತೆಗಳು- ಮುನ್ನುಡಿ

ಚಿತ್ರಕ್ಕೆ ಸುವರ್ಣದ ಚೌಕಟ್ಟನ್ನು ನಿರ್ಮಿಸುತ್ತಾನೆ. ಆಧುನಿಕ ಮನಸ್ಸಿದ್ದರೂ ಪ್ರಾಚೀನತೆಯನ್ನೇ ಆತನು ಅಪ್ಪಿಕೊಳ್ಳಬೇಕಾಗುತ್ತದೆ. ಇಂಥ ಸವಾಲುಗಳಿಗೆ ಸೂಕ್ತ ಉತ್ತರ ನೀಡಲು ಪತ್ರಿಕೆಗಳು ಆಸರೆಯಾಗಿವೆ.

ಆರಂಭ ಕಾಲದಲ್ಲಿ ಪತ್ರಿಕೆಗಳು ರಾಷ್ಟ್ರೀಯತೆಯ ಕಲ್ಪನೆಯಿಂದ ದೂರ ಇದ್ದವು. ಬ್ರಿಟಿಷರ ಆಳ್ವಿಕೆಯ ಬಗ್ಗೆ ದೇಶೀಯ ಆಳರಸರಲ್ಲಿ ಅತೃಪ್ತಿ ಇತ್ತು, ನಿಜ. ಆದರೆ ಏಕಪ್ರಕಾರವಾಗಿ ಶೋಷಣೆಗೆ ಒಳಗಾದ ಜನರಿಗೆ ಬ್ರಿಟಿಷರೂ ಅಷ್ಟೇ, ದೇಶೀಯ ಆಳರಸರೂ ಅಷ್ಟೇ ಎಂಬ ಭಾವನೆ ಮೂಡಿತ್ತು. ಇನ್ನೂ ಹೆಚ್ಚಿನ ಮಾತೆಂದರೆ ಬ್ರಿಟಿಷರು ಹೊಸ ಶಿಕ್ಷಣ ಪದ್ಧತಿ, ಕೈಗಾರಿಕೆ ಕ್ರಾಂತಿಯ ಫಲಗಳನ್ನು ಒಂದೊಂದಾಗಿ ಇಲ್ಲಿ ಪ್ರಯೋಗಿಸತೊಡಗಿದಾಗ ಅವರು ದೇಶೀಯ ದೊರೆಗಳಿಗಿಂತ ಏನೋ ಹೆಚ್ಚಿನವರು ಎನ್ನುವಂತೆ ಆಯಿತು. ಈ ಕಾರಣಕ್ಕಾಗಿಯೇ 'ಆನಂದ ಮಠ' ಕಾದಂಬರಿಯಲ್ಲಿ 'ವಿಧಿಯು ಹಿಂದೂತ್ವದ ಉದಯಕ್ಕಾಗಿಯೇ ಬ್ರಿಟಿಷರನ್ನು ಭಾರತಕ್ಕೆ ಕಳುಹಿಸಿದೆ' ಎಂಬ ಮಾತು ಬಂದಿದೆ. ಇದು ಅಂದಿನ ಸಮಾಜದ ಮನೋಭಾವದ ಪ್ರತಿಬಿಂಬ.

೧೮೫೭ರ ಬಂಡಾಯದ ಸಮಯದಲ್ಲಿ ಬ್ರಿಟಿಷರ ವಿರುದ್ಧ ದೇಶೀಯ ಸಂಸ್ಥಾನಗಳ ಅರಸರು ಸಮರ ಸಾರಿದವರು ಕೊನೆಗೆ ಒಪ್ಪಿಕೊಂಡದ್ದು ಮೊಘಲ್ ಬಾದಶಾನನ್ನು. ಅದೂ ಒಂದು ರೀತಿಯಲ್ಲಿ ಗುಲಾಮತನವೇ. ಜನರೇ ದೇಶವನ್ನು ಆಳುವ ಕಲ್ಪನೆ ಅಂದು ಬಂದಿರಲಿಲ್ಲ. ಈ ರಾಷ್ಟ್ರೀಯತೆಯನ್ನು ಬಿಂಬಿಸುವ ಕಾರ್ಯ ಬಂಗಾಳ ವಿಭಜನೆಯ ನಂತರದ ಪತ್ರಿಕೆಗಳಿಗೆ ಮೀಸಲಾಗಿ ಉಳಿಯಿತು.

ಈ ರಾಷ್ಟ್ರೀಯತೆ ಉದ್ದೀಪನಗೊಳ್ಳಲು ಬಂಗಾಲ ವಿಭಜನೆ ಕಾರಣವಾಯಿತು. ೧೯೦೫ರ ವರೆಗಿನ ಪತ್ರಿಕೆಗಳು ಮತ್ತು ಸಾಹಿತ್ಯದ ಸ್ವರೂಪ ಒಂದು ರೀತಿ ಇದ್ದರೆ ಆನಂತರದ್ದು ಇನ್ನೊಂದು ಸ್ವರೂಪದ್ದು. ಸಾಹಿತ್ಯದ ಪ್ರಸಾರಕ್ಕಾಗಿಯೇ ಅನೇಕ ಪತ್ರಿಕೆಗಳು ಹೊರಟಿದ್ದು, ಅದರಲ್ಲಿ ಪ್ರಾಚೀನ ಸಾಹಿತ್ಯದ ಭಾಗಗಳನ್ನು ಧಾರಾವಾಹಿಯಾಗಿ ನೀಡಿದ್ದು, ಹೊಸದನ್ನು ಬರೆಯುವವರಿಗೆ ಪ್ರೋತ್ಸಾಹ ನೀಡಿದ್ದು ಎಲ್ಲವನ್ನೂ ಗಮನಿಸಿದ್ದಾಯಿತು. ನವೋದಯ ಸಾಹಿತ್ಯ ಹೊಳೆಯಾಗಿ ಹರಿಯುವುದಕ್ಕೆ ಆರಂಭ ಕಾಲದಲ್ಲಿ ವಿವಿಧ ಮೂಲಗಳಿಂದ ಜಿನುಗಿದ ಈ ತೊರೆಗಳೇ ಕಾರಣ ಎನ್ನುವುದನ್ನು ಮರೆಯಬಾರದು.

ಅಧ್ಯಾಯ: ನಾಲ್ಕು

ಏಕೀಕರಣದ ವರೆಗಿನ ಪತ್ರಿಕೆಗಳು ಮತ್ತು ಸಾಹಿತ್ಯ

ಬಂಗಾಳ ವಿಭಜನೆಯ ಕಾಲಕ್ಕೆ ಕನ್ನಡ ಸಾಹಿತ್ಯ ಆಧುನಿಕ ರೂಪವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ತೀವ್ರ ಪ್ರಯತ್ನವನ್ನು ನಡೆಸಿತ್ತು. ಅದೇ ರೀತಿ ಕನ್ನಡ ಪತ್ರಿಕೋದ್ಯಮಕ್ಕೂ ಅರವತ್ತು ವರ್ಷಗಳ ಪರಂಪರೆಯೊಂದು ನಿರ್ಮಾಣವಾಗಿತ್ತು. ಪತ್ರಿಕೆಯ ಪ್ರಯೋಜನವನ್ನು ಹಲವು ರೀತಿಗಳಲ್ಲಿ ಕಂಡುಕೊಳ್ಳಲಾಗಿತ್ತು. ಸಾಹಿತ್ಯ ಪೋಷಣೆಗಾಗಿಯೇ, ಸಾಹಿತ್ಯದಲ್ಲಿ ಹಳೆಯದಕ್ಕಿಂತ ಭಿನ್ನವಾಗಿ ಹೊಸ ರೂಪದಲ್ಲಿ ಅಭಿವ್ಯಕ್ತಿಯನ್ನು ತರಬೇಕು ಎಂಬ ಉದ್ದೇಶದಿಂದಲೇ ಪತ್ರಿಕೆಗಳೂ ಹೊರಟಿದ್ದನ್ನು ನೋಡಿದೆವು. ಸಾಹಿತ್ಯ ಪೋಷಣೆಯ ಹಂಬಲದೊಂದಿಗೆ ಪತ್ರಿಕೆಯನ್ನು ಆರಂಭಿಸುವುದು ಈಗಲೂ ಮುಂದುವರಿಯಿತು. ಆರಂಭಕಾಲದ ಪತ್ರಿಕೆಗಳಿಗೆ ಹೇಗೆ ಕರ್ನಾಟಕ ಮತ್ತು ಕನ್ನಡತನ ಪ್ರಾಮುಖ್ಯವಾಗಿದ್ದವೋ ಈ ಕಾಲದ ಪತ್ರಿಕೆಗಳಿಗೆ ಅವುಗಳ ಜೊತೆಯಲ್ಲಿ ರಾಷ್ಟ್ರೀಯತೆ ಸೇರಿಕೊಂಡಿತು.

ಬಂಗಾಳ ವಿಭಜನೆಯಿಂದ ಏಕೀಕರಣದ ವರೆಗಿನ ಕಾಲಘಟ್ಟ ಕನ್ನಡ ನಾಡಿನ ರಾಜಕೀಯ, ಸಾಂಸ್ಕೃತಿಕ ರಂಗದಲ್ಲಿ ಅತ್ಯಂತ ಮಹತ್ವದ ಕಾಲವಾಗಿದೆ. ಈ ಕಾಲಘಟ್ಟದಲ್ಲಿಯೂ ಪತ್ರಿಕೆ ಮತ್ತು ಸಾಹಿತ್ಯದ ಆಶಯ ಒಂದೇ ಆಗಿತ್ತು. ಈ ಐದು

ದಶಕಗಳ ಅವಧಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಮೂರು ಪ್ರಮುಖ ಪಂಥಗಳು ಆರಂಭಗೊಂಡವು. ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯ ಪಂಥಗಳು ತಮ್ಮ ನೆಲೆಗಳನ್ನು ಭದ್ರಪಡಿಸಿಕೊಂಡಿದ್ದು ಪತ್ರಿಕೆಗಳ ಮೂಲಕವೇ. ಈ ಸಾಹಿತ್ಯ ಪಂಥಗಳ ತತ್ವಗಳು, ಸಾಹಿತ್ಯ ಮೀಮಾಂಸೆ, ವಿಮರ್ಶೆಗಳೆಲ್ಲ ಪತ್ರಿಕೆಯ ಮಾಧ್ಯಮದಿಂದಲೇ ಸ್ಥಾಪನೆಗೊಂಡವುಗಳು. ಏಕೀಕರಣದ ವರೆಗಿನ ಪತ್ರಿಕೆಗಳಲ್ಲಿ ಮತ್ತು ಸಾಹಿತ್ಯದಲ್ಲಿ ನಾಡಿನ ಏಕೀಕರಣ, ನುಡಿಯನ್ನು ಬಲಗೊಳಿಸಬೇಕೆಂಬ ಕಳಕಳಿ ಒಟ್ಟೊಟ್ಟಿಗೆ ಕಂಡು ಬರುತ್ತದೆ. ಇವೆಲ್ಲ ನವೋದಯ ಸಾಹಿತ್ಯದ ಪ್ರಮುಖ ಆಶಯವೂ ಹೌದು. ಜೊತೆಯಲ್ಲಿ ದೇಶದ ಸ್ವಾತಂತ್ರ್ಯದ ಹೋರಾಟದ ಬಗೆಗೆ, ಗಾಂಧೀ ಚಿಂತನೆಗಳ ಬಗೆಗೆ ಸಾಹಿತಿಗಳು ಕೃತಿ ರಚನೆ ಮಾಡಿದ್ದಾರೆ. ಸ್ವಾತಂತ್ರ್ಯದ ಬಗೆಗಿನ ಕೃತಿಗಳಲ್ಲಿ ಪ್ರಗತಿಶೀಲರಲ್ಲಿ ಪ್ರಮುಖರಾದ ಬಸವರಾಜ ಕಟ್ಟಿಮನಿಯವರ 'ಮಾಡಿ ಮಡಿದವರು' ಪ್ರಮುಖವಾದುದು. ಈ ಕೃತಿಯನ್ನು ಉಲ್ಲೇಖಿಸುವ ಕಾರಣ ಇಷ್ಟೇ, ದೇಶದ ಸ್ವಾತಂತ್ರ್ಯ ಕೇವಲ ನವೋದಯ ಸಾಹಿತಿಗಳ ಕಾಳಜಿ ಆಗಿರಲಿಲ್ಲ ಎನ್ನುವುದು. ಈ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಬಳಿಕ ಅಪಾರವಾದ ನಿರೀಕ್ಷೆಗಳು ಈಡೇರದೆ ಆದ ಹತಾಶೆಯನ್ನು ನವ್ಯ ಸಾಹಿತ್ಯದಲ್ಲಿ ಕಾಣಬಹುದು. ಪ್ರಗತಿಶೀಲರ ಧೋರಣೆಗಳ ಮಂಡನೆ ಖಂಡನೆಗಳು, ನವ್ಯ ಬಗೆಗಿನ ಟೀಕೆಗಳು, ಸಮರ್ಥನೆಗಳೆಲ್ಲ ಪತ್ರಿಕೆಗಳಲ್ಲಿ ದಾಖಲಾಗಿವೆ. ಇವುಗಳಿಗೆ ಪತ್ರಿಕೆಗಳು ವೇದಿಕೆಯಾಗಿವೆ. ಬಂಗಾಳ ವಿಭಜನೆಯಿಂದ ಏಕೀಕರಣದ ವರೆಗಿನ ಸಾಹಿತ್ಯಕ ಕಾಳಜಿ ಮುಖ್ಯವಾಗಿ ಒಂದೇ ಆಗಿರುವುದರಿಂದ ಈ ಕಾಲಘಟ್ಟವನ್ನು ಪ್ರತ್ಯೇಕ ಅಧ್ಯಾಯದಲ್ಲಿ ಅಭ್ಯಾಸಕ್ಕೆ ವಿಭಾಗಿಸಿಕೊಂಡಿದ್ದು ಸರಿ ಎಂದು ಭಾವಿಸಲಾಗಿದೆ.

ಮುದವೀಡು ಕೃಷ್ಣರಾಯರು ಕರ್ನಾಟಕ ಏಕೀಕರಣದ ಮಹತ್ವ ಪ್ರತಿಪಾದಿಸಿದ ಆದ್ಯರಲ್ಲಿ ಒಬ್ಬರು. ಅವರು ತಮ್ಮ 'ಕರ್ನಾಟಕ ವೃತ್ತ' ಮತ್ತು ಹೊಸಕೇರಿ ಅಣ್ಣಾಚಾರ್ಯರ 'ಧನಂಜಯ' ಪತ್ರಿಕೆಗಳಲ್ಲಿ ಬಂಗಾಳ ವಿಭಜನೆಯನ್ನು ಖಂಡಿಸಿ ಬರೆದರು. ಬಂಗಾಳ ವಿಭಜನೆ ವಿರೋಧಿಸಿ ಉತ್ತರ ಕರ್ನಾಟದಲ್ಲಿ ನಡೆದ ಆಂದೋಲನದ ವರದಿ ಅವರ ಪತ್ರಿಕೆಯಲ್ಲಿ ದೊರೆಯುತ್ತದೆ. ಇದೊಂದೇ ಅಲ್ಲ ಆ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಕಟಗೊಳ್ಳುತ್ತಿದ್ದ ಬಹುತೇಕ ಪತ್ರಿಕೆಗಳಲ್ಲಿ ಈ ಬಗೆಗೆ ವಿರೋಧ ವ್ಯಕ್ತವಾಗಿದೆ. ಇದೇ ಸಮಯಕ್ಕೆ ಬಂಗಾಲಿ ಸಾಹಿತ್ಯದ ಬಗೆಗಿನ ಆಸಕ್ತಿ ಇನ್ನಷ್ಟು ಹೆಚ್ಚಿತು. ಬಂಗಾಲಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸುವ ಪರಿಪಾಠ ಮೊದಲಾಯಿತು.

ಪರಭಾಷೆಯ ದಬ್ಬಾಳಿಕೆ ವಿರುದ್ಧ ಧ್ವನಿ: ಬಂಗಾಲಿಯ ಜೊತೆಯಲ್ಲಿಯೇ ಇಂಗ್ಲಿಷ್ ಸಾಹಿತ್ಯದಿಂದಲೂ ಅನುವಾದಗಳು ನಡೆದವು. ಇವುಗಳ ಹಿಂದಿನ ಉದ್ದೇಶ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವುದು. ಕನ್ನಡದಲ್ಲಿ ಅದಿಲ್ಲ ಇದಿಲ್ಲ ಎಂಬ ಕೊರತೆ ಕಾಣಬಾರದು. ಕನ್ನಡದ ಬಗೆಗೆ ಅಭಿಮಾನ ಕಡಿಮೆಯಾಗಬಾರದು ಎನ್ನುವುದು.

ಇಷ್ಟಾಗಿಯೂ ಕನ್ನಡಿಗರ ನಿರಭಿಮಾನದ ಬಗೆಗೆ ಒಮ್ಮೊಮ್ಮೆ ಸಿಟ್ಟು ಕಾಣಿಸಿಕೊಂಡಿದೆ. 'ಸ್ವತ್ವ ಇರಲಿಲ್ಲ.' ತಾವು ಮರಾಠಿಗ್ಗರು, ತೆಲುಗರು, ಮದ್ರಾಸಿಗಳು ಎಂದೇ ಕನ್ನಡದ ಜನ ಸಂತೋಷವಾಗಿ ತಮ್ಮ ಕುಲಗೆಡಿಸಿಕೊಳ್ಳಲೂ ಸಿದ್ಧರಾಗಿದ್ದರು ಎಂದು ಒಬ್ಬರು ಬರೆಯುತ್ತಾರೆ.[೧] ಇದಕ್ಕೆ ಅಂದಿನ ವಿದ್ಯಾಭ್ಯಾಸವೂ ಒಂದು ಕಾರಣವಾಗಿರಬಹುದು. ಸಾಕಷ್ಟು ಶಾಲೆಗಳು ಇಲ್ಲದಿರುವುದು ಒಂದು. ಜೊತೆಗೆ ಇದ್ದ ಶಾಲೆಗಳಲ್ಲಿ ಮರಾಠಿ ಬೋಧನೆ ಪ್ರಾಥಮಿಕ ಹಂತದಲ್ಲಿ. ದೊಡ್ಡವರಾದ ಬಳಿಕ ಇಂಗ್ಲಿಷ್, ನೌಕರಿ ಪಡೆದುಕೊಳ್ಳಲು. ಕನ್ನಡ ಭಾಷಿಕರಿಗೊಂದು ಭೌಗೋಳಿಕ ಸಮಗ್ರತೆ, ರಾಜಕೀಯ ಮುಂದಾಳತ್ವ ಇಲ್ಲದಿರುವುದೂ ಪರದೇಶಿ ಭಾವನೆ ಮೂಡಲು ಕಾರಣವಾಗಿತ್ತು. "ಪರಸತ್ತೆ, ಪರಭಾಷಾಭ್ಯಾಸ, ಪರಭಾಷೆಯ ಪುಸ್ತಕ- ಪತ್ರಿಕೆಗಳ ಮೇಲಿನ ಮೋಹ ಇವು ನಮ್ಮನ್ನು ಪರದೇಶಿಗಳನ್ನಾಗಿ ಮಾಡಿವೆ"[೨] ಎಂಬುದು ನಾ.ವೆ. ಕುರಡಿಯವರ ಆತ್ಮನಿವೇದನೆ. ಇದು ಕೇವಲ ಧಾರವಾಡದಲ್ಲಿ ಮಾತ್ರವಲ್ಲ, ಎಲ್ಲ ಕನ್ನಡ ಭಾಷಿಕ ಪ್ರದೇಶಗಳಲ್ಲಿಯೂ ಇದೇ ಪರಿಸ್ಥಿತಿ ಇತ್ತು. 'ಪ್ರಬುದ್ಧ ಕರ್ನಾಟಕ'ಕ್ಕೆ ಐವತ್ತು ವರ್ಷತುಂಬಿದ ಸಂದರ್ಭದಲ್ಲಿ 'ಕನ್ನಡ ಪ್ರಭ'ದ ತಮ್ಮ 'ಸಾಹಿತ್ಯ ಸಲ್ಲಾಪ' ಅಂಕಣದಲ್ಲಿ ಡಾ.ಹಾ.ಮಾ.ನಾಯಕರು 'ಕನ್ನಡದಲ್ಲಿಯೂ ಕಲಿಯುವುದು ಇದೆ; ಇಂಗ್ಲಿಷಿನ ಹಾಗೆಯೇ ಕಲಿಯುವುದು ಇದೆ. ಬಂಗಾಳಿಗಳಲ್ಲಿ, ಮರಾಠಿಗರಲ್ಲಿ ಇರುವ ಅಭಿಮಾನ ನಮ್ಮಲ್ಲೂ ಮೂಡಬೇಕು; ನಮ್ಮ ಜನರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಹೊಸ ಎಚ್ಚರವಾಗಬೇಕು- ಎಂದು ಆ ದಿಕ್ಕಿನಲ್ಲಿ ಪ್ರವಾದಿಯಾದ ಕೃಷ್ಣ ಶಾಸ್ತ್ರಿಗಳು ಎರಡು ಪ್ರಬಲ ಸಾಧನಗಳನ್ನು ಬಳಸಿದರು; ಒಂದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಇನ್ನೊಂದು ಅದರ ಮುಖಪತ್ರವಾಗಿ ಆರಂಭಗೊಂಡ ಪ್ರಬುದ್ಧ ಕರ್ನಾಟಕ'[೩] ಎಂಬ ಮಾತನ್ನು ಹೇಳಿದ್ದಾರೆ. ಹಾ.ಮಾ.ನಾಯಕರ ಅನಿಸಿಕೆ ಕುರಡಿಯವರ ಅಭಿಪ್ರಾಯದ ಮುಂದುವರಿಕೆ ಎಂದೇ ಹೇಳಬೇಕು. 'ಕರ್ನಾಟಕದ ಗರ್ಭದಂತಿರುವ ಧಾರವಾಡದಲ್ಲಿಯೂ ಕನ್ನಡ ಸಾಲೆಗಳಲ್ಲಿ ಮರಾಠಿಯನ್ನೂ ಬಾಲಬೋಧ ಲಿಪಿಯನ್ನೂ ಕಲಿಸಬೇಕೆಂಬುದು ಸರ್ಕಾರದ ಧೋರಣೆಯಾಗಿ ಕುಳಿತಿತ್ತು'[೪] ಎಂಬುದು ಕುರಡಿಯವರ ಕೊರಗಾಗಿತ್ತು.

ಧಾರವಾಡದ ಕಡೆ ಹೀಗಾದರೆ ದಕ್ಷಿಣದ ಕಡೆಯ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಿರಲಿಲ್ಲ. ಪುಟ್ಟಮ್ಮನೆಂಬ ಹೆಂಗಸೊಬ್ಬಳ ಕಷ್ಟದ ಕಥೆಯನ್ನು ೩೬ ಭಾಮಿನಿ ಷಟ್ಪದಿಗಳಲ್ಲಿ ಹೇಳಿದ ಕವಿಯು ೩೭ನೆ ಷಟ್ಪದಿಯಲ್ಲಿ-

---

೧. ನಾರಾಯಣ ಶರ್ಮಾ; ನಾನು ಕನ್ನಡಿಗನು; ವಾಗ್ಭೂಷಣ- (ಡಿಸೆಂಬರ್ ೧೯೧೮) ಪುಟ-೨೬

೨.ನಾ.ವೆ.ಕುರಡಿ; ಆತ್ಮ ನಿವೇದನೆ; ವಾಗ್ಭೂಷಣ; (ಆಗಸ್ಟ್ ೧೯೨೪) ಪುಟ-೧

೩.ಹಾಮಾನಾ- ಕನ್ನಡಪ್ರಭ- ಮಾರ್ಚ್ ೩, ೧೯೬೯

೪.ನಾ.ವೆ. ಕುರಡಿ- ಕನ್ನಡ ವಿದ್ಯಾವರ್ಧಕ ಸಂಘ- ವಾಗ್ಭೂಷಣ (ಆಗಸ್ಟ್ ೧೯೨೪ ಪುಟ- ೫)

'ನಮ್ಮ ಕನ್ನಡ ದೇವಿಗೂ ಪು

ಟ್ಟಮ್ಮನಂತಾಪತ್ತು ಬಂದಿದೆ

ಬಿಮ್ಮನಾ ಇಂಗ್ರಜಿಯ ಕತ್ತಲೆಯನ್ನು ಕನ್ನಡಕೆ॥'

ಎನ್ನುವರು. ಕನ್ನಡದ ಬಗ್ಗೆ ಇಂಥ ಕಳಕಳಿ ವ್ಯಕ್ತಪಡಿಸಿದವರು ಎಂ.ತಿಮ್ಮಪ್ಪಯ್ಯನವರು[೫] ಇಂಥ ನುಡಿಯ ಬಗೆಗಿನ ಅಭಿಮಾನವೇ ಕರ್ನಾಟಕ ಏಕೀಕರಣದ ಹಿಂದಿನ ಸತ್ವವೂ ಆಗಿತ್ತು.

ಕನ್ನಡತನ, ಕನ್ನಡಿಗರ ಅಭಿಮಾನವನ್ನು ಕೆರಳಿಸುವ ಪದ್ಯವೊಂದನ್ನು ಶಾಂತಕವಿಗಳು ಬರೆದದ್ದು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿದೆ.[೬]

'ಎಲ್ಲಿರುವುದಭಿಮಾನ? ಕನ್ನಡಿಗರೇ! ಪೇಳಿ

ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ ।ಪ।

ಗುರು ಪರಿಶ್ರಮದಿನಾಂಗ್ಲೇಯ ಭಾಷೆಯ ಕಲಿತು

ಧರಿಸಿ ಪದವಿಗಳನುಪಜೀವಿಸುವಿರೇ॥

ಹೊರತು ತದ್ಭಾಷೆಯುದ್ಗ್ರಂಥಗಳ ಕನ್ನಡದಿ

ಪರಿವರ್ತನಂಗೊಳಿಸಲಿಲ್ಲವಲ್ಲಾ ॥'

'ಕನ್ನಡಿಗರೇ! ಅಭಿಮಾನ ಎಲ್ಲಿರುವುದು?' ಎಂಬ ಈ ಕವಿತೆಯ ಎರಡು ಭಾಗಗಳಲ್ಲಿಯೂ ಕನ್ನಡ ದೀಕ್ಷೆಯನ್ನು ಅವರು ಚೆನ್ನಾಗಿ ಬೋಧಿಸುವರು. ಕನ್ನಡವನ್ನು ಬರೆಯುವ ಮೂಲಕ, ಕನ್ನಡವನ್ನು ಬಳಸುವ ಮೂಲಕ ಕನ್ನಡವನ್ನು ಉಳಿಸಲು ಬೇಡಿಕೊಳ್ಳುವ ಅವರು ಸಭೆಗಳಲ್ಲಿ ಬಡಬಡಿಸುವುದರ ಮಾತ್ರಕ್ಕೆ ಕನ್ನಡ ಅಭಿಮಾನವನ್ನು ಸಾಬೀತುಪಡಿಸಿದಂತೆ ಆಗಲಿಲ್ಲ ಎಂಬ ಕಟೂಕ್ತಿಯನ್ನೂ ನುಡಿಯುವರು. ಇಂಗ್ಲಿಷ್ ಭಾಷೆಯನ್ನು ಕಲಿತವರು ಆ ಭಾಷೆಯ ಗ್ರಂಥಗಳನ್ನು ಕನ್ನಡದಲ್ಲಿ ತರಲಿಲ್ಲ ಎಂದು ಕೊರಗುವರು.

ಕನ್ನಡದ ಮೇಲೆ ಮರಾಠಿಯು ಹೇಗೆ ದಬ್ಬಾಳಿಕೆಯನ್ನು ಮಾಡುತ್ತಿತ್ತು ಎಂಬುದನ್ನು ಶಾಂತಕವಿಗಳು ೧೯೧೦ರಲ್ಲಿ ಬರೆದ ಪದ್ಯದಲ್ಲಿ ವಿವರಿಸಿದ್ದನ್ನು ಬೇಂದ್ರೆಯವರು 'ವಾಗ್ಭೂಷಣ' ದಲ್ಲಿ ಉಲ್ಲೇಖಿಸಿದ್ದಾರೆ.

'ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೀರ್ತಿ;

೫.ಎಂ.ತಿಮ್ಮಪ್ಪಯ್ಯ- ಪ್ರೇಮ ಪಾಶ- ಕರ್ನಾಟಕ ನಂದಿನಿ (ಡಿ.೧೯೧೭) ಪುಟ ೬
೬.ಏಪ್ರಿಲ್ ೧೯೧೮, ಪುಟ- ೯೬

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕದರ್ಥಿ;

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ನಟರ ಮೂರ್ತಿಗಳ ಸಂಚಾರವು॥

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕದಾಟ;

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೂಟ;

ಎಲ್ಲಿ ನೋಡಲು ಮಹಾರಾಷ್ಟ್ರ ಭಾಷಾಮಯಂ ತಾನಾಯ್ತು ಕರ್ನಾಟಕಂ ॥'[೭]

ಹೀಗೆ ಸರ್ವವೂ ಮಹಾರಾಷ್ಟ್ರಮಯವಾಗಿರಲು ಕನ್ನಡದ ಉಸಿರು ಕಟ್ಟುವುದು ಸಹಜವೇ.

'ಎಲ್ಲಿ ನೋಡಲು ಕನ್ನಡದ ಭಾಷೆಯಟ್ಟೆಯದ।

ರಲ್ಲಿಲ್ಲ ಮೃದು ಶಬ್ದವಿಲ್ಲ, ಭಾಷಾ ಸರಣಿ।

ಯಿಲ್ಲವೈ, ಸ್ವಾರಸ್ಯವಿಲ್ಲ, ನಾಟಕವಿಲ್ಲ, ನಟನಟಿಗಳಿಲ್ಲವಿನ್ನು;।

ಇಲ್ಲವವು ಮುಂದಾಗುವಾಶೆ ಕೂಡಾ ಇಲ್ಲ ॥'

ಎಂದು ಶಾಂತ ಕವಿಗಳಿಗೆ ಅನ್ನಿಸಿದ ಬಳಿಕ ಉಳಿದ ಸಾಮಾನ್ಯರಿಗೂ ಆ ರೀತಿ ಅನ್ನಿಸಿದರೆ ಆಶ್ಚರ್ಯವೇನಿಲ್ಲ.

ಇಂಥ ಒಂದು ಸಂದರ್ಭದಲ್ಲಿಯೇ ದಕ್ಷಿಣ ಕರ್ನಾಟಕದ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಮತ್ತು 'ಪ್ರಬುದ್ಧ ಕರ್ನಾಟಕ' ಹಾಗೂ ಉತ್ತರ ಕರ್ನಾಟಕದ ಧಾರವಾಡದಲ್ಲಿ ಗೆಳೆಯರ ಗುಂಪು ಮತ್ತು 'ಜಯಕರ್ನಾಟಕ'ಗಳು ಹುಟ್ಟು ಪಡೆದವು. ಈಗಾಗಲೆ ಧಾರವಾಡದಲ್ಲಿ ವಿದ್ಯಾವರ್ಧಕ ಸಂಘ ಮತ್ತು 'ವಾಗ್ಭೂಷಣ' ಹುಟ್ಟಿ ಕೊಂಡಿದ್ದವು. ಇದಕ್ಕೆ ಪೂರಕವಾಗಿಯೇ ಇವುಗಳೂ ಕಾರ್ಯ ನಿರ್ವಹಿಸಿದವು. ಕನ್ನಡದ ಪ್ರಮುಖ ಬರೆಹಗಾರರೆಲ್ಲ 'ಜಯಕರ್ನಾಟಕ' ಮತ್ತು 'ಪ್ರಬುದ್ಧ ಕರ್ನಾಟಕ'ಗಳಲ್ಲಿ ತಮ್ಮ ಲೇಖನ ಪ್ರಕಟಿಸಿರುವರು. 'ಪ್ರಬುದ್ಧ ಕರ್ನಾಟಕ'ವನ್ನು ಟಿ.ಎಸ್.ವೆಂಕಣ್ಣಯ್ಯನವರೂ ಎ.ಆರ್.ಕೃಷ್ಣ ಶಾಸ್ತ್ರಿಗಳೂ ನಡೆಸಿದರು. ಬಿಂಎಂ.ಶ್ರೀಕಂಠಯ್ಯನವರ ಬೆಂಬಲ ಇವರಿಗೆ ಇದ್ದೇ ಇತ್ತು. ಸಾಹಿತ್ಯ ಕ್ಷೇತ್ರಕ್ಕೆ ಹೊಸದಾಗಿ ಬಂದವರನ್ನು ತಿದ್ದಿ ಬೆನ್ನು ತಟ್ಟುವ, ಹೊಸತನ್ನು ಪರಿಚಯಿಸುವ ಕೆಲಸವನ್ನು ಅವರು ಮಾಡಿದರು. "ಕಾವ್ಯಗಳನ್ನು ನಮ್ಮದು ತಮ್ಮದು ಎಂಬ ಸುಳ್ಳು ಅಭಿಮಾನವನ್ನಾಗಲಿ, 'ಕನ್ನಡ ಕಾಡು ಭಾಷೆ' ಎಂಬ ಒಂದು ಕೀಳು ಬುದ್ಧಿಯನ್ನಾಗಲಿ ಇಟ್ಟುಕೊಳ್ಳದೆ ನಿರ್ದಾಕ್ಷಿಣ್ಯವಾಗಿಯೂ, ನಿಷ್ಪಕ್ಷಪಾತವಾಗಿಯೂ ವಿಚಾರ ಮಾಡಿ, ದೋಷಗಳನ್ನು ಕಿತ್ತು ಒಗೆದು, ಗುಣಗಳನ್ನು ಗ್ರಹಿಸಿ, ಒಂದು ಕಡೆ ವಿಮರ್ಶೆಯನ್ನೂ

೭.ಬೇಂದ್ರೆ; ಶಾಂತಕವಿಗಳೂ ಅವರ ಕಾಲವೂ; ವಾಗ್ಭೂಷಣ (ಏಪ್ರಿಲ್ ೧೯೨೧) ಪುಟ -೭

ಮತ್ತೊಂದು ಕಡೆ ರಚನೆಯನ್ನೂ ಮಾಡಬೇಕೆಂಬುದು ನಮ್ಮ ಉದ್ದೇಶ”[೮] ಎಂದು ಕೃಷ್ಣ ಶಾಸ್ತ್ರಿಗಳು ವ್ಯಕ್ತಪಡಿಸಿದ ಉದ್ದೇಶಕ್ಕೆ ಅನುಗುಣವಾಗಿಯೇ ನಡೆದುಕೊಂಡರು.

೧೯೧೮ರಲ್ಲಿ ಯಶವಂತರಾವ್ ವಿ. ಜಠಾರ ಎನ್ನುವವರು ‘ಪ್ರಭಾತ’ ಎಂಬ ಪತ್ರಿಕೆಯನ್ನು ಆರಂಭಿಸಿದರು. ಇದರ ವಿಶೇಷ ಎಂದರೆ ಇದು ಕೇವಲ ಪದ್ಯಗಳನ್ನು ಪ್ರಕಟಿಸುತ್ತಿತ್ತು. ‘ಪ್ರಭಾತ’ದ ಸಂಚಿಕೆಗಳನ್ನು ನೋಡಿದಾಗ, ಬೇಂದ್ರೆ, ಬೆಟಗೇರಿ ಮೊದಲಾದ, ಮುಂದೆ ಪ್ರಸಿದ್ಧಿಗೆ ಬಂದವರೆಲ್ಲ ಇದರಲ್ಲಿ ಹಳೆಯ ರೀತಿಯಲ್ಲಿಯೇ ಕವಿತೆಗಳನ್ನು ಬರೆದುದನ್ನು ಕಾಣಬಹುದು. ಈ ಪತ್ರಿಕೆಯ ಆಯುಷ್ಯ ಕೇವಲ ೨ ವರ್ಷಗಳೇ ಆದರೂ ಅದರಿಂದ ಆದ ಕಾರ್ಯ ಮಹತ್ತರವಾದದ್ದು. ‘ಪ್ರಭಾತ’ದಲ್ಲಿ ಕವಿತೆಗಳನ್ನು ಬರೆಯುತ್ತಿದ್ದ ಕವಿಗಳಲ್ಲಿ ಕೆಲವರು ಮುಂದಾಗಿ ‘ಗೆಳೆಯರ ಗುಂಪಿ’ನ ರಚನೆಗೆ ಕಾರಣರಾದರು. ದ.ರಾ.ಬೇಂದ್ರೆ, ಶ್ರೀಧರ ಖಾನೋಳ್ಕರ, ಬುರ್ಲಿ ಬಿಂದು ಮಾಧವ, ಶಂ.ಬಾ. ಜೋಶಿ ಆರಂಭದಲ್ಲಿ ಈ ಗುಂಪಿನ ಸದಸ್ಯರಾಗಿದ್ದರು. ಗೆಳೆಯರ ಗುಂಪು ‘ಕಾವ್ಯ ಕರ್ತಾರನ ಕಮ್ಮಟ’ ಆಯಿತು. ಇವರಿಗೆ ಹಿರಿಯರಾಗಿ ಆಲೂರ ವೆಂಕಟರಾಯರು ನಿಂತರು. ಆಲೂರರು ‘ಜಯಕರ್ನಾಟಕ’ ಪತ್ರಿಕೆಯನ್ನು ಆರಂಭಿಸಿದ್ದರು. ನಂತರ ಅವರು ಅದನ್ನು ಗೆಳೆಯರ ಗುಂಪಿಗೆ ನಡೆಸಲು ಕೊಟ್ಟರು. ಬೇಂದ್ರೆ ಮತ್ತು ಖಾನೋಳ್ಕರ ಅವರು ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇಲ್ಲಿಯೇ ಅವರು ‘ಕಾವ್ಯಸೇವೆ’ ಎಂಬ ಕೈ ಬರೆಹದ ಪತ್ರಿಕೆ ಆರಂಭಿಸಿ ವಿದ್ಯಾರ್ಥಿಗಳು ಕಾವ್ಯ ಬರೆಯುವುದಕ್ಕೆ ಉತ್ತೇಜನ ನೀಡಿದರು.

ಅನುವಾದಗಳು: ‘ಪ್ರಬುದ್ಧ ಕರ್ನಾಟಕ’, ‘ಜಯಕರ್ನಾಟಕ’ಗಳು ಹುಟ್ಟಿದ್ದು ಇಪ್ಪತ್ತನೆ ಶತಮಾನದ ಎರಡನೆ ದಶಕದಲ್ಲಿ. ಆರಂಭದ ದಶಕದಲ್ಲಿ ಬಂಗಾಲಿಯ ಪ್ರಭಾವದಿಂದ. ಬಂಗಾಲಿ ಅನುವಾದಿತ ಕಾದಂಬರಿಗಳ ಪ್ರಕಟಣೆಗಾಗಿಯೇ ಮೈಸೂರಿನ ಬಿ.ವೆಂಕಟಾಚಾರ್ಯರು ‘ಅವಕಾಶ ತೋಷಿಣಿ’ (೧೯೦೬-೦೭) ಎಂಬ ಪತ್ರಿಕೆಯನ್ನು ಆಂರಭಿಸಿದರು. ೧೯೦೭ರಲ್ಲಿಯೇ ಆರಂಭಗೊಂಡು ಮೂರು ದಶಕಗಳ ಕಾಲ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವ ಸೇವೆ ಸಲ್ಲಿಸಿದ ಇನ್ನೊಂದು ಪತ್ರಿಕೆ ಗಳಗನಾಥರ (ವೆಂಕಟೇಶ ತಿರಕೋ ಕುಲಕರ್ಣಿ) ‘ಸದ್ಬೋಧ ಚಂದ್ರಿಕೆ’. ಹಾವೇರಿ ಜಿಲ್ಲೆಯ ಅಗಡಿಯಿಂದ ಹೊರಡುತ್ತಿದ್ದ ಇದು ‘ಕಮಲ ಕುಮಾರಿ’ಯನ್ನು ಪ್ರಕಟಿಸುತ್ತಿದ್ದ ಕಾಲಕ್ಕೆ ೭ ಸಾವಿರ ಪ್ರಸಾರ ಸಂಖ್ಯೆಯನ್ನು ತಲುಪಿತ್ತು. ಮೂರು ದಶಕಗಳ ಅವಧಿಯಲ್ಲಿ ಅದು ಕನ್ನಡಿಗರಿಗೆ ನೀಡಿದ ಕಾದಂಬರಿಗಳು, ಕಥೆಗಳು, ಜೀವನ ಚರಿತ್ರೆಗಳು, ಕವನಗಳು, ಕ್ಷೇತ್ರ ಮಹಾತ್ಮ್ಯ, ಧಾರ್ಮಿಕ ಸಾಂಸ್ಕೃತಿಕ ವಿಷಯಕ ಲೇಖನಗಳ ಸಂಖ್ಯೆ ಅಪಾರವಾಗಿದೆ. ಆರಂಭದ ಮೂರು ವರ್ಷ ಕಾಲ ಗಳಗನಾಥರೇ ತಮ್ಮ ಕಾದಂಬರಿಗಳು, ಲೇಖನಗಳಿಂದ ಪತ್ರಿಕೆಯನ್ನು ತುಂಬುತ್ತಿದ್ದರು.

೮.ಎಆರ್‌ಕೃ: ಸಂಪಾದಕೀಯ, ಪ್ರ.ಕ. ಸಂಚಿಕೆ ೭, ಸಂಪುಟ ೪

ಮುಂದೆ ಭೀ.ಪ. ಕಾಳೆ, ಆರ್.ಟಿ. ಕರ್ಪೂರ, ಅಮ್ಮಿಭಾವಿ, ತಟ್ಟಿ ಸೇರಿದಂತೆ ಹಲವು ಲೇಖಕರು ತಮ್ಮ ಲೇಖನಗಳು ಕಾದಂಬರಿಗಳನ್ನು ಚಂದ್ರಿಕೆಯಲ್ಲಿ ಪ್ರಕಟಿಸಿದರು. ಇವರಲ್ಲಿ ಕಾಳೆ ಮತ್ತು ಕರ್ಪೂರ ಬರೆದ ಕಾದಂಬರಿಗಳು, ಜೀವನ ಚರಿತ್ರೆಗಳು ಉಳಿದವುಗಳಿಗಿಂತ ಭಿನ್ನವಾದವು.

ಚಂದ್ರಿಕೆಯ ವಸ್ತುವಿನಲ್ಲಿ ವೈವಿಧ್ಯವಿದೆ. ರೋಮಾಂಚಕತೆ ಇದೆ. ಐತಿಹಾಸಿಕ, ಜೊತೆಗೆ ಪತ್ತೇದಾರಿ, ಅಲ್ಲದೆ ಸಮಾಜಿಕ ಕಾದಂಬರಿಗಳು, ಹಲವು ಬಗೆಯ, ಆ ಕಾಲಕ್ಕೆ ವಿನೂತನ ಎನ್ನಿಸುವ ಲೇಖನಗಳು ಅದರಲ್ಲಿ ಪ್ರಕಟಗೊಂಡಿವೆ. ಸೂರ್ಯಗ್ರಹಣ, ಮರಾಠರ ಅವನತಿ, ಶಕ್ತಿಮಾಯಿ, ಭಗವಾನದಾಸ, ಸೌಭಾಗ್ಯ ತಿಲಕ, ಶೌರ್ಯ ಸಂಜೀವನ, ಕಂಕಣ ಚೋರ, ಜಯ ಪರಾಜಯ, ಕೃಷ್ಣಾಕುಮಾರಿ, ನರವೀರ ಕಾಸೀಮ, ಚಿಮಣಾಜಿ ಅಪ್ಪಾ, ಅಂಬಿಕೆ, ಪಿರಂಗಿಗಳ ಉತ್ಪಾತ, ಸಾಧನ ಕುಟೀರ, ಭಾಗ್ಯೋದಯ, ಮರಾಠರೂ ಇಂಗ್ಲಿಷರೂ, ಅಪರಾಜಿತಾ, ಭಾಗ್ಯೋದಯ, ಪಿರಂಗಿಯ ಪ್ರತಿಹಿಂಸೆ, ನನ್ನ ಗತಿ- ಇವೇ ಮೊದಲಾದ ಐತಿಹಾಸಿಕ, ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳು ಪ್ರಕಟಗೊಂಡವುಗಳಲ್ಲಿ ಮುಖ್ಯವಾದವು.

ಕರ್ನಾಟಕದ ವಿವಿಧ ಸಾಧು ಸಂತರ ಚರಿತ್ರೆಯನ್ನು ಇದರಲ್ಲಿ ಪ್ರಕಟಿಸಲಾಗಿದೆ. ಐತಿಹಾಸಿಕ ಮತ್ತು ಕಾಲ್ಪನಿಕ ಅಂಶಗಳ ಸಮ್ಮಿಶ್ರಣವಾದ ಇದು ಆ ಪ್ರಕಾರದ ಬರೆಹಗಳಿಗೆ ಮಾದರಿಯಾಗಿ ನಿಂತಿವೆ. ಶ್ರೀರಂಗನಾಥ ಸ್ವಾಮಿಗಳು, ಶ್ರೀಮದ್ರಾಘವೇಂದ್ರ ವಿಜಯ, ಶ್ರೀಕೃಷ್ಣಾವಧೂತರ ಚರಿತ್ರ, ಶ್ರೀಅಕ್ಕಲಕೋಟೆ ಸ್ವಾಮಿಗಳ ಚರಿತ್ರೆ, ಬೋಠೆ ಮಹಾರಾಜರು, ಶ್ರೀಮಾಣಿಕ ಪ್ರಭು, ಶ್ರೀಪಂತ ಮಹಾರಾಜರು ತಿಪ್ಪೇರುದ್ರಸ್ವಾಮಿ ಚರಿತ್ರೆ, ತೈಲಿಂಗ ಸ್ವಾಮಿಗಳ ಚರಿತ್ರೆ ಅವುಗಳಲ್ಲಿ ಕೆಲವು. ಸಂಸ್ಕೃತಿ ಮತ್ತು ಧರ್ಮವನ್ನು ಬಿಂಬಿಸುವ 'ಹಿಂದುಗಳು ಬಲಿಷ್ಠರಾಗುವುದೆಂತು?', 'ಕರ್ನಾಟಕಕ್ಕೆ ದೇವತೆಗಳ ಆಗಮನ', 'ಮಡಿ ಮೈಲಿಗೆಯ ಗುಟ್ಟು', 'ಸೃಷ್ಟಿಯ ಸದುಪದೇಶ', 'ನಮ್ಮ ಪುರಾಣ ಶ್ರವಣ', 'ಯಾಜ್ಞವಲ್ಕ್ಯ ಸ್ಮೃತಿ' ಲೇಖನಗಳು ಹೊಸ ವಿಚಾರಗಳನ್ನು ಮಂಡಿಸುತ್ತವೆ.

ನಾನಾಸಾಹೇಬನ ಮಗಳಾದ ಮೈನಾದೇವಿಯನ್ನು ಬ್ರಿಟಿಷರು ಜೀವಂತ ಸುಟ್ಟು ಹಾಕಿದ ಮೈನವಿರೇಳಿಸುವ ಪ್ರಸಂಗದ ವಸ್ತುವನ್ನು ಒಳಗೊಂಡ 'ವೀರಕುಮಾರಿ ಮೈನಾದೇವಿ' ಒಂದು ಉತ್ತಮ ಕಥೆ. ಅಮೆರಿಕದ ಮದ್ಯಪಾನ ನಿಷೇಧಕ ಪುಸಿಫುಟ್ ಜಾನ್ಸನ್ನನ ಚರಿತ್ರೆಯನ್ನೂ 'ಸದ್ಬೋಧ ಚಂದ್ರಿಕೆ'ಯಲ್ಲಿ ಪ್ರಕಟಿಸಲಾಗಿದೆ. ಗಂಡು ಸಂತತಿ ಹೆಣ್ಣು ಸಂತತಿಯನ್ನು ಆಯ್ಕೆಮಾಡುವ ವಿಜ್ಞಾನದ ಬೆಳವಣಿಗೆ ಇಪ್ಪತ್ತನೆ ಶತಮಾನದ ಕೊನೆಯಲ್ಲಿ ಅಭಿವೃದ್ಧಿಗೊಂಡಿದ್ದು. ಆದರೆ ೧೯೨೫ರಲ್ಲಿಯೇ ಜರ್ಮನ್ ವಿಜ್ಞಾನಿಯೊಬ್ಬನ 'ಗಂಡು ಸಂತತಿ ಬೇಕೋ ಹೆಣ್ಣು ಸಂತತಿ ಬೇಕೋ' ಎಂಬ ಲೇಖನ ಇದರಲ್ಲಿ ಪ್ರಕಟವಾಗಿದ್ದು ಆಶ್ಚರ್ಯ ಮೂಡಿಸುತ್ತದೆ.

‘ಸದ್ಬೋಧ ಚಂದ್ರಿಕೆ’ಯ ಹಿರಿಮೆ ಇರುವುದು ಕನ್ನಡ ಸಾಹಿತ್ಯಕ್ಕೆ ಹೊಸ ಲೇಖಕರನ್ನು ಅದು ಪರಿಚಯಿಸಿರುವುದರಲ್ಲಿ. ಇದರಲ್ಲಿ ಬಂದಿರುವ ಕತೆ, ಕಾದಂಬರಿಗಳು ಲೇಖನಗಳನ್ನು ನೋಡಿದಾಗ ಪ್ರಸಾರ ಸಂಖ್ಯೆಯನ್ನು ಗಮನಿಸಿದಾಗ ಅದಕ್ಕೆ ದೊಡ್ಡ ಓದುಗ ಪಡೆಯೇ ಇತ್ತು ಎನ್ನುವುದು ತಿಳಿಯುವುದು. ಹೊಸ ಸಾಹಿತ್ಯಕ್ಕೆ ಓದುಗ ಪಡೆಯನ್ನು ನಿರ್ಮಿಸುವ ಮಹತ್ವದ ಕೆಲಸ ‘ಸದ್ಬೋಧ ಚಂದ್ರಿಕೆ’ಯಂಥ ಪತ್ರಿಕೆಗಳು ಮಾಡಿವೆ. ಇದೇ ಅವುಗಳ ಹಿರಿಮೆ. ‘ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಚಾರಿತ್ರಿಕವಾಗಿ ಹುಟ್ಟಿದ ಮಧ್ಯಮ ವರ್ಗವೆ ಆಧುನಿಕ ಸಾಹಿತ್ಯದ ಹಿಂದಿನ ಪ್ರಮುಖ ಶಕ್ತಿ. ಮಧ್ಯಮ ಜಾತಿ, ಕೆಳ ಜಾತಿಗಳ ಕೆಲವು ಕವಲುಗಳು, ನೌಕರಶಾಹಿ ಮತ್ತು ಮಧ್ಯಮ ವರ್ಗಗಳಿಗೆ ಸೇರಿಹೋದದ್ದು ತನ್ಮೂಲಕ ಸಾಹಿತ್ಯದಲ್ಲಿ ಕೂಡ ಹೊಸ ಅನುಭವ ಲೋಕಗಳು ಬಂದದ್ದು ಆಧುನಿಕ ಸಾಹಿತ್ಯದ ಪ್ರಮುಖ ವೈಶಿಷ್ಟ್ಯ’ ಎಂಬ ಡಿ.ಆರ್.ನಾಗರಾಜ[೯] ಅವರ ಮಾತು ಅಂದಿನ ಓದುಗ ವರ್ಗವನ್ನು ಪರಿಚಯಿಸುತ್ತದೆ.

ಈ ಓದುಗ ವರ್ಗ ಮತ್ತು ಲೇಖಕರ ನಡುವೆ ಯಾವುದೇ ರೀತಿಯ ಮೌಲ್ಯ ಘರ್ಷಣೆ ನಡೆಯಲಿಲ್ಲ ಎನ್ನುವ ಮಾತನ್ನು ಡಿ.ಆರ್.ನಾಗರಾಜ ಹೇಳುವರು. ಇದಕ್ಕೆ ಕಾರಣ ಬರೆಯುವವರೂ ಓದುವವರೂ ಇಂಗ್ಲಿಷ್ ವಿದ್ಯಭ್ಯಾಸ ಮಾಡಿದವರಾದ್ದರಿಂದ ಇಬ್ಬರ ಮನೋಧರ್ಮವೂ ಒಂದೇ ಆಗಿತ್ತು. ನವೋದಯ ಸಾಹಿತ್ಯದ ಓದುಗ ವರ್ಗ ವೈದಿಕರು ಮತ್ತು ಶತಮಾನಗಳಿಂದ ವಿದ್ಯೆಯಿಂದ ವಂಚಿತರಾಗಿದ್ದು ಆಗತಾನೆ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ ಶೂದ್ರರು ಆಗಿದ್ದರು. ವಿದ್ಯಾಭ್ಯಾಸದಿಂದ ಶೂದ್ರರೂ ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಿ ಪಾಶ್ಚಾತ್ಯೀಕರಣ ಹೊಂದಿಬಿಟ್ಟರು. ಇಬ್ಬರ ಆಲೋಚನಾ ಕ್ರಮವೂ ಒಂದೇ ಇದ್ದಾಗ ಮೌಲ್ಯ ಘರ್ಷಣೆ ಎಂಬುದು ಇರುವುದಿಲ್ಲ ಎಂಬುದು ಅವರ ವಿಶ್ಲೇಷಣೆ. ಒಟ್ಟಾರೆ ಇದರ ತಾತ್ಪರ್ಯ ಎಂದರೆ ಆ ಕಾಲದ ಬರೆಹಗಾರರು ಓದುಗ ವರ್ಗದಿಂದ ಯಾವುದೇ ರೀತಿಯ ಸವಾಲನ್ನು ಎದುರಿಸುವ ಪ್ರಮೇಯ ಬರಲಿಲ್ಲ ಎನ್ನುವುದು. ಡಿ.ಆರ್.ನಾಗರಾಜ್ ಅವರ ಮಾತನ್ನು ಅಕ್ಷರಶಃ ನಾವು ಒಪ್ಪಿಕೊಳ್ಳಬೇಕಾಗಿಲ್ಲ. ಆ ಕಾಲದ ಓದುಗ ವರ್ಗ ನಿರ್ಲಿಪ್ತ ಆಗಿರಲಿಲ್ಲ. ಕ್ರಿಯೆಗೆ ಪ್ರತಿಕ್ರಿಯಾತ್ಮಕವಾಗಿಯೇ ಹೊಸ ಪತ್ರಿಕೆಗಳು ಹೊರಟಿದ್ದನ್ನು ನಾವು ಹಿಂದಿನ ಭಾಗದಲ್ಲಿ ಗಮನಿಸಿದ್ದೇವೆ.

ಕೇಸರಿ ಪತ್ರಿಕೆ ಪ್ರಭಾವ: ‘ಸದ್ಬೋಧ ಚಂದ್ರಿಕೆ’ ಆರಂಭವಾದ ಸುಮಾರಿಗೇ ಮೈಸೂರಿನಲ್ಲಿ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು ‘ನುಡಿಗನ್ನಡಿ’ (ಭಾಷಾದರ್ಪಣ) ಎಂಬ ತ್ರೈಮಾಸಿಕ ಪತ್ರಿಕೆಯನ್ನು ಆರಂಭಿಸಿದರು. ಪತ್ರಿಕೆಯ ಮುಖ್ಯ ವಿಷಯ ಭಾಷೆ ಮತ್ತು ಸಾಹಿತ್ಯ. ಇದರಲ್ಲಿ ರಾಜಕೀಯವಿರಲಿಲ್ಲ. ವ್ಯಾಪಾರ ಬುದ್ಧಿಯೂ ಇರಲಿಲ್ಲ. ಶಾಸ್ತ್ರಿಗಳು ಮದ್ರಾಸಿನ ಎರಡು ಮೂರು ಕಾಲೇಜುಗಳಲ್ಲಿ ಪಂಡಿತರಾಗಿ ಮಹಾಮಹೋಪಾಧ್ಯಾಯ

೯.ಅಮೃತ ಮತ್ತು ಗರುಡ; ಪುಟ-೪೧, ಆಧುನಿಕ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ.

ರೆಂದು ಹೆಸರಾದವರು. ಒಂದೆರಡು ಸಂಚಿಕೆಗಳು ಬಂದಕೂಡಲೆ ಅವರಿಗೆ ಪತ್ರಿಕೆ ನಡೆಸುವ ಕಷ್ಟ ಅರ್ಥವಾಗತೊಡಗಿತು. ನಂತರ ಅವರು ತಮ್ಮ ಪತ್ರಿಕೆಯನ್ನು ರಾಮರಾಯರಿಗೆ ವಹಿಸಿಕೊಟ್ಟರು. ಇದೇ ಮುಂದೆ 'ವೀರಕೇಸರಿ' ಎಂಬ ಹೆಸರನ್ನು ತಳೆಯಿತು. ಮಹಾರಾಷ್ಟ್ರದ 'ಕೇಸರಿ' ಪತ್ರಿಕೆ ಅವರಿಗೆ ಮಾದರಿ. ಈ ಪತ್ರಿಕೆಯ ಮುಖಪುಟದಲ್ಲಿ ಎರಡು ಸಿಂಹಗಳೂ, 'ಹಂ ಹೋ ಮೃಗೇಂದ್ರ... .. ..' ಎಂಬ ಪದ್ಯವೂ ಇರುತ್ತಿತ್ತು.

ಮಹಾರಾಷ್ಟ್ರದ 'ಕೇಸರಿ' ಎಷ್ಟೊಂದು ಪ್ರಭಾವಿಯಾಗಿತ್ತೆಂದರೆ, ಬಾಗಲಕೋಟೆಯ ಕೆರೂರು ವಾಸುದೇವಾಚಾರ್ಯರು ಹುಬ್ಬಳ್ಳಿಯಿಂದ ಹೊರಡಿಸಿದ ತಮ್ಮ ವಾರ ಪತ್ರಿಕೆಗೆ 'ಕನ್ನಡ ಕೇಸರಿ' ಎಂದು ಹೆಸರಿಟ್ಟರು. ಟಿಳಕರ 'ಕೇಸರಿ' ಸ್ವಾತಂತ್ರ್ಯ, ಸ್ವದೇಶೀ ಚಿಂತನೆಗಳನ್ನು ಪ್ರಕಟಿಸುತ್ತಿದ್ದ ಪತ್ರಿಕೆ. ಕೆರೂರು ವಾಸುದೇವಾಚಾರ್ಯರು 'ಸಚಿತ್ರ ಭಾರತ', 'ಶುಭೋದಯ' ಎಂಬ ಮಾಸ ಪತ್ರಿಕೆಗಳನ್ನೂ ಹೊರಡಿಸುತ್ತಿದ್ದರು. ೧೯೨೮ರಲ್ಲಿ ದಕ್ಷಿಣ ಕನ್ನಡದ ಪುತ್ತೂರಿನಿಂದ ಹೊರಟ ಪತ್ರಿಕೆಯ ಹೆಸರು ಕರ್ನಾಟಕ ಕೇಸರಿ. ಇದರಲ್ಲಿ ಎಂ. ಗೋವಿಂದ ಪೈ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಐರೋಡಿ ಶಿವರಾಮ್ಯ, ಹೊಸಕೆರೆ ಚಿದಂಬರಯ್ಯ, ಉಗ್ರಾಣ ಮಂಗೇಶರಾವ, ಪಾಂಡೇಶ್ವರ ಗಣಪತಿರಾವ್, ಬೆಳ್ಳೆ ರಾಮಚಂದ್ರರಾವ್ ಮೊದಲಾದವರು ಕತೆ, ಕವಿತೆ, ಪ್ರಬಂಧ, ನಾಟಕಗಳನ್ನು ಬರೆದಿದ್ದಾರೆ ಅಂದಮೇಲೆ ಸಾಹಿತ್ಯ ಪೋಷಣೆಗೆ ಈ ಪತ್ರಿಕೆಯ ಕೊಡುಗೆ ವಿಶಿಷ್ಟವಾದದ್ದೇ.

ದಕ್ಷಿಣ ಕನ್ನಡದಿಂದಲೇ ಆಕಾಲದಲ್ಲಿ ಹಲವು ಪತ್ರಿಕೆಗಳು ಬಂದವು. ಮುಳಿಯ ತಿಮ್ಮಪ್ಪಯ್ಯನವರು ಮಂಗಳೂರಿನಿಂದ 'ಕನ್ನಡ ಕೋಗಿಲೆ' (೧೯೧೬) ಹೊರಡಿಸಿದರು. ಇದು ಮಾಸ ಪತ್ರಿಕೆ. ಇದರಲ್ಲಿ ಸಾಹಿತ್ಯದ ಜೊತೆಯಲ್ಲಿ ಧಾರ್ಮಿಕ, ಆರ್ಥಿಕ, ಸಾಮಾಜಿಕ ವಿಷಯಗಳನ್ನು ಪ್ರಕಟಿಸಲಾಗುತ್ತಿತ್ತು. ಮಂಜೇಶ್ವರ ಅನಂತರಾವ, ಉಗ್ರಾಣ ಮಂಗೇಶ ರಾವ, ಮುಳಿಯ ಶಂಕರ ಭಟ್ಟ ಮೊದಲಾದವರು ಇದರಲ್ಲಿ ಕವಿತೆ, ಲೇಖನಗಳನ್ನು ಪ್ರಕಟಿಸಿರುವರು. ಮಂಗಳೂರಿನಿಂದಲೇ ಹೊರಟ 'ಕಂಠೀರವ' (೧೯೧೯) ಮೊದಲು ವಾರದಲ್ಲಿ ೨ ಬಾರಿ ಪ್ರಕಟವಾಗುತ್ತಿತ್ತು. ನಂತರ ವಾರಪತ್ರಿಕೆಯಾಯಿತು. ಇದರಲ್ಲಿ ಹುರುಳಿ ಭೀಮರಾಯರು, ಪಂಜೆ ಮಂಗೇಶರಾಯರು, ಕಾಮತ, ಉಳ್ಳಾಳ, ಗೋವಿಂದ ಪೈ, ಟಿ.ನಾರಾಯಣ ಭಟ್ಟ, ಜಿ.ವಾಮನ ಭಟ್ಟ, ಕೆ.ಶಂಕರ ಭಟ್ಟ, ಬಿ.ಶಂಕರ ಭಟ್ಟ, ವಿ.ಎಸ್..ಕುಡ್ವ ಮೊದಲಾದವರು ಲೇಖನಗಳನ್ನು ಬರೆದಿರುವರು. ಗೋವಿಂದ ಪೈಗಳು ೧೯೨೮ರಲ್ಲಿ ಮಂಗಳೂರಿನಿಂದಲೇ 'ರಾಷ್ಟ್ರಬಂಧು' ಹೊರಡಿಸಿದರು. ರಾಷ್ಟ್ರ ಶಬ್ದ ಚಾಲ್ತಿಯಲ್ಲಿ ಬಂದುದನ್ನು ಇಲ್ಲಿ ಗಮನಿಸಬಹುದು.

ಕಾರಂತರ 'ವಸಂತ': ಕುಂದಾಪುರದಿಂದ ಡಾ.ಕೆ.ಶಿವರಾಮ ಕಾರಂತರು 'ವಸಂತ' (೧೯೨೪) ಪತ್ರಿಕೆಯನ್ನು ಹೊರಡಿಸಿದರು. ಅನ್ಯ ವಿಷಯಗಳ ಜೊತೆಯಲ್ಲಿ

ಸಾಹಿತ್ಯವೂ ಇದರಲ್ಲಿ ಪ್ರಕಟಗೊಂಡಿದೆ. ಮೊದಲು ಪಾಕ್ಷಿಕವಾಗಿದ್ದ 'ವಸಂತ' ಆರ್ಥಿಕ ನಷ್ಟದಿಂದ ಮಾಸಪತ್ರಿಕೆಯಾಗಿ ಬಳಿಕ ಎರಡು ತಿಂಗಳಿಗೊಮ್ಮೆ ಪ್ರಕಟಗೊಳ್ಳುತ್ತಿತ್ತು. ಎರಡು ಸಂಪುಟಗಳಾದ ಬಳಿಕ 'ವಸಂತ'ವನ್ನು ನಿಲ್ಲಿಸಲಾಯಿತು. ೧೯೨೮ರಲ್ಲಿ ಇದು ಮಂಗಳೂರಿನಿಂದ ಮತ್ತೆ ಪ್ರಕಟಣೆ ಆರಂಭಿಸಿತು. ೧೯೩೦ರ ಏಪ್ರಿಲ್-ಜೂನ್ ತಿಂಗಳ ೫ನೆ ಸಂಪುಟವೇ ಕೊನೆಯ ಸಂಚಿಕೆಯಾಯಿತು. ಕಾರಂತರಂಥ ನಿಷ್ಠುರವಾದಿ ತಾವು ಅಂದುಕೊಂಡ ಧೋರಣೆಗಳಿಗೆ ಅನುಗುಣವಾಗಿ ಪತ್ರಿಕೆಯನ್ನು ನಡೆಸಬೇಕು ಎನ್ನುವವರು ಓದುಗರ ಮನೋಲಹರಿಗೆ ತಕ್ಕಂಥ ಪತ್ರಿಕೆ ನೀಡುವದು ಕಷ್ಟವಾಯಿತು. ಹೀಗಾಗಿ ಪತ್ರಿಕೆ ನಿಂತರೂ ತೊಂದರೆಯಿಲ್ಲ ಎಂಬ ನಿರ್ಧಾರಕ್ಕೆ ಕಾರಂತರು ಬಂದರು.

"ವಸಂತನಲ್ಲಿ ಕಥೆಗಳನ್ನು ಬೇಡುವವರು ಬಹಳ. ಆದರೆ ಪತ್ರಿಕೆಯನ್ನು ಕಥೆಗಾಗಿ ಇರಿಸುವುದೂ, ಗ್ರಾಹಕರ ಮನೋಲಹರಿಗಳಿಗೆ ಸರಿಯಾಗಿ ಪತ್ರಿಕೆಯ ಸ್ವರೂಪವನ್ನು ಬದಲಾಯಿಸುವುದೂ ಧ್ಯೇಯಾತ್ಮಕ ದೃಷ್ಟಿಯಿಂದ ಸರಿಯಾಗಲಾರದು. ವಸಂತವು ತನ್ನದೇ ಒಂದು ನಿಶ್ಚಿತ ಧೋರಣೆಯಿಂದ ಮುಂದುವರಿಯುವುದು. ಆ ಧೋರಣೆಯು ಪ್ರಪಂಚಕ್ಕೆ ಸರಿತೋರದಿದ್ದಲ್ಲಿ ಪತ್ರಿಕೆಯೂ ಸಾಯುವುದು. ಧೋರಣೆಯಿಲ್ಲದ ಜೀವನಕ್ಕಿಂತ ಮರಣವೇ ಮಾನ್ಯವೆಂದು ನಮ್ಮ ನಂಬುಗೆ. 'ವಸಂತ'ನಂತಹ ಪತ್ರಿಕೆಯೊಂದು ಕರ್ನಾಟಕಕ್ಕೆ ಅವಶ್ಯವಿರುವುದಾದರೆ ನಾಡಿನವರು ಅದನ್ನು ಉಳಿಸಲಿ. ಕೇವಲ ವ್ಯಾಪಾರೀ ದೃಷ್ಟಿಯಿಂದ ವಸಂತವನ್ನು ನಡೆಸುವುದಕ್ಕಿಂತ ಪತ್ರಿಕೆಯು ನಿಂತರೂ ನಾವು ಬೇಸರ ಪಡುವುದಿಲ್ಲ", ಎಂಬುದಾಗಿ ಕಾರಂತರು 'ವಸಂತ'ದ ತಮ್ಮ ಸಂಪಾದಕೀಯದಲ್ಲಿ ಬರೆದಿರುವರು.

ಕಾರಂತರು ಇಲ್ಲಿ ಓದುಗನ ಬಗೆಗೆ 'ಗ್ರಾಹಕ' ಎಂಬ ಪದವನ್ನು ಬಳಸಿರುವುದನ್ನು ಗಮನಿಸಬಹುದು. ಅಲ್ಲದೆ ಈ ಗ್ರಾಹಕನಿಗೂ ಆಯ್ಕೆಗಳು ಇದ್ದವು ಎಂಬುದನ್ನು ಇದು ತೋರಿಸುತ್ತದೆ. ಓದುಗ ಮತ್ತು ಗ್ರಾಹಕರ ಮೇಲಿಂದಲೇ ಸಾಹಿತ್ಯಪತ್ರಿಕೆ ಮತ್ತು ಇತರ ಪತ್ರಿಕೆಗಳನ್ನು ಪ್ರತ್ಯೇಕಿಸಬಹುದು. ಸಾಹಿತ್ಯಪತ್ರಿಕೆಗಳಿಗೆ 'ಓದುಗ'ನ ಅಗತ್ಯವಿರುತ್ತದೆ. ಇತರ ಜನಪ್ರಿಯ ಪತ್ರಿಕೆಗಳು 'ಗ್ರಾಹಕ'ನನ್ನು ಮೆಚ್ಚಿಸುವ ಸರಕಾಗಿ ಹೊರಬರುತ್ತವೆ. ಧೋರಣೆಗೆ ಅಂಟಿಕೊಂಡು ಪತ್ರಿಕೆ ನಡೆಸುವ ಅಪಾಯವನ್ನು ಕಾರಂತರು ಕಂಡುಕೊಂಡು ಪತ್ರಿಕೆ ನಿಂತರೂ ಚಿಂತೆಯಿಲ್ಲ ಎಂಬ ನಿಲುವಿಗೆ ತಲುಪಿದ್ದರು.

ವಾಸ್ತು, ಶಿಲ್ಪ, ಚಿತ್ರ, ಚಲಚ್ಚಿತ್ರ ಮುಂತಾದ ಕಲೆಗಳ ಬಗೆಗೆ, ಪ್ರವಾಸ ಲೇಖನಗಳು, ರಾಜಕೀಯ, ಐತಿಹಾಸಿಕ, ಸಾಹಿತ್ಯಕ ಮುಂತಾಗಿ 'ಕನ್ನಡ ನುಡಿಗೆ ಚಿರೋಪಯೋಗಿಯಾಗಿರುವ' ಅನೇಕ ಲೇಖನಗಳನ್ನು ಪತ್ರಿಕೆ ಪ್ರಕಟಿಸಿತ್ತು. ವಸಂತದ ಆರ್ಥಿಕ ಸ್ಥಿತಿ ಏನೇನೂ ಉತ್ತಮವಾಗಿರಲಿಲ್ಲ. ಆದರೂ ಧೋರಣೆ ಬಿಟ್ಟು ಲೇಖನಗಳನ್ನು ಪ್ರಕಟಿಸಲಿಲ್ಲ. "ಅವುಗಳು ತಾತ್ಕಾಲಿಕ ವಿಸ್ಮಯವನ್ನು ಹುಡುಕುವ ಜನರಿಗೆ ನಿರುಪಯೋಗಿಯಾಗಿ ಕಂಡರೂ, ದೇಶದ ಏಳಿಗೆಗೆ ಅವಶ್ಯವಾಗಿ ಬೇಕಾದವುಗಳು. ಅವುಗಳ

ಉಪಯುಕ್ತತೆಯು ಕಾಲ ಕ್ರಮೇಣ ತಿಳಿಯದಿರದು. ಇದೇ ದೃಷ್ಟಿಯಿಂದಲೇ ನಾವು ಮುಂದೆ ಸಾಗಬೇಕೆಂದಿರುವೆವು. ನಮ್ಮ ಕರ್ತವ್ಯ ದೃಷ್ಟಿಯಿಂದ ನಾವು ಲೇಖನಗಳನ್ನರಸಿ ಪ್ರಕಟಿಸಿರುವೆವು. ಅವು ಸಮಾನ್ಯವಾಗಿ ಆದರಣೀಯವಾದಾವೆಂದು ನಮಗಿನ್ನೂ ಭರವಸೆಯಿಲ್ಲ" ಎನ್ನುವ ಕಾರಂತರು, ಹಾಗಾಗದಿದ್ದರೆ ನಮಗೆ ಆಶ್ಚರ್ಯವೂ ಆಗದು ಎಂದು ಬರೆದಿದ್ದಾರೆ. ತಮ್ಮ ನಿಲುವಿಗೆ ಅನುಗುಣವಾಗಿಯೇ ಅವರು ಲೇಖನಗಳನ್ನು ಪ್ರಕಟಿಸಿದ್ದಾರೆ.

'ವಸಂತ'ದಲ್ಲಿ ಕಾರಂತರೇ ಹಲವು ಲೇಖನಗಳನ್ನು ಬರೆದಿರುವರು. ಹಲವನ್ನು ಅನುವಾದಿಸಿ ಪ್ರಕಟಿಸಿರುವರು. ಅವರ ಕತೆ, ಕಾದಂಬರಿ, ಹರಟೆಗಳೂ ಇದರಲ್ಲಿ ಬಂದಿವೆ. ಅವರ ವಿಚಿತ್ರ ಕೂಟ, ಭೂತ, ಸೂಳೆಯ ಸಂಸಾರ (ಕನ್ಯಾ ಬಲಿ), ನಿರ್ಭಾಗ್ಯ ಜನ್ಮ, ದೇವದೂತರು, ಕರ್ಣಾರ್ಜುನ, ಭಾರತೀಯ ಚಿತ್ರಕಲೆ, ಭಾರತ ವರ್ಷದಲ್ಲಿ ಬ್ರಿಟಿಷರು, ಸಾವಿರ ಮಿಲಿಯ, ಬೆವರಿಗೆ ಜಯವಾಗಲಿ, ವಿಜಯ ದಶಮಿ ಮೊದಲಾದವು ಇದರಲ್ಲಿಯೇ ಮೊದಲು ಬೆಳಕು ಕಂಡಿವೆ. ವಸಂತದ ಲೇಖಕರ ಬಳಗ ಬಹಳ ದೊಡ್ಡದಿತ್ತು. ಎಂ.ಗೋವಿಂದ ಪೈ, ಎಂ.ಎನ್. ಕಾಮತ, ಪಂಜೆ ಮಂಗೇಶರಾಯರು, ಬೇಂದ್ರೆ, ಕಾರ್ನಾಡು ಸದಾಶಿವ ರಾಯರು, ಸುಧೀಂದ್ರ, ಬೋಸ್, ಎಂ.ಆಚಾರ್ಯ, ವಾಸುದೇವ ಕಾರಂತ, ಶಂಕರ ನಾರಾಯಣ ಕಾರಂತ, ಮೈಸೂರಿನ ಸ್ವಾಮಿ ಸಿದ್ಧೇಶ್ವರಾನಂದ, ಕೃಷ್ಣಶರ್ಮ, ಪ.ಸೀತಾದೇವಿ, ಕೆ.ವಿ.ಪುಟ್ಟಪ್ಪ ಮೊದಲಾದವರು ವಸಂತಕ್ಕೆ ಲೇಖನ, ಹರಟೆ, ಕವನ, ಕತೆಗಳನ್ನು ಬರೆದಿರುವರು. ವಸಂತದ ಲೇಖಕರ ಪಡೆ, ಅದು ತಳೆದ ನಿರ್ದಿಷ್ಟ ಧೋರಣೆ ಇವನ್ನೆಲ್ಲ ಗಮನಿಸಿದಾಗ ಸಾಹಿತ್ಯಪತ್ರಿಕೆಗಳ ಸಾಲಿನಲ್ಲಿ ಅದಕ್ಕೊಂದು ಸ್ಥಾನ ದೊರೆಯುವುದು.

ಪ್ರಬುದ್ಧ ಕರ್ನಾಟಕ: ಸಾಹಿತಿಗಳನ್ನು ತಿದ್ದಿ ಬೆಳೆಸುವಲ್ಲಿ 'ಪ್ರಬುದ್ಧ ಕರ್ನಾಟಕ' ಒಂದು ಕಮ್ಮಟದ ರೀತಿಯಲ್ಲಿ ಕಾರ್ಯ ಮಾಡಿತು. "ನಮ್ಮ ಮುಖ್ಯ ಕೆಲಸವೆಂದರೆ ಕಾವ್ಯ ಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು. .. . ಸಾಹಿತ್ಯವನ್ನೆಲ್ಲ ತುಲನಪೂರ್ವಕವಾಗಿ ವಿಮರ್ಶೆ ಮಾಡಿ ನಮ್ಮ ಕವಿಗಳಲ್ಲಿರುವ ಗುಣ ದೋಷಗಳೇನು? ಸತ್‌ಕಾವ್ಯದ ಲಕ್ಷಣಗಳೇನು ಎಂಬುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಮಾಡಿ ದೋಷಗಳನ್ನು ಕಿತ್ತು ಒಗೆದು ಗುಣಗಳನ್ನು ಗ್ರಹಿಸಿ ಒಂದು ಕಡೆ ವಿಮರ್ಶೆಯನ್ನು ಮತ್ತೊಂದು ಕಡೆ ರಚನೆಯನ್ನು ಮಾಡಬೇಕೆಂಬುದು ನಮ್ಮ ಉದ್ದೇಶ."[೧೦] ಹೀಗೆ ಒಳ್ಳೆಯ ಕಾವ್ಯ ರಚನೆಗೆ ಉತ್ತೇಜನ ಕೊಡುವುದು 'ಪ್ರಬುದ್ಧ ಕರ್ನಾಟಕ'ದ ಗುರಿಯಾಗಿತ್ತು.

'ಶ್ರೀ'ಯವರು ಪ್ರತಿಭೆಯುಳ್ಳವರೆಂದು ಗುರುತಿಸಿದ ಕವಿಗಳನ್ನು ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿ ಇವರುಗಳಿಗೆ ಒಪ್ಪಿಸುತ್ತಿದ್ದರು. ಈ ಇಬ್ಬರೂ ಹಿರಿಯರು ಆ ಕವಿಗಳನ್ನು ಸಾಣೆ ಇಟ್ಟು ನಯಗೊಳಿಸಿ ಅವರ ಓರೆ ಕೋರೆಗಳನ್ನು ತಿದ್ದಿ

೧೦.ಎ.ಆರ್.ಕೃ.: 'ಪ್ರಬುದ್ಧ ಕರ್ನಾಟಕ' -ಪ್ರ.ಕ.೧೯೧೯ ಯುಗಾದಿ ಸಂಚಿಕೆ. ಪುಟ -೧

ಸರಿಪಡಿಸಿ, ಕಡೆದ ವಜ್ರಗಳಾಗಿಸುತ್ತಿದ್ದರು.

ಈ ಕವಿಶಿಲ್ಪದಲ್ಲಿ 'ಪ್ರಬುದ್ಧ ಕರ್ನಾಟಕ' ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಇವು ಬಹು ಮುಖ್ಯ ಪಾತ್ರ ವಹಿಸಿದವು[೧೧] ಎಂಬ ಎಸ್.ಅನಂತನಾರಾಯಣ ಅವರ ಮಾತು ಸರಿಯಾದದ್ದೇ. 'ಪ್ರಬುದ್ಧ ಕರ್ನಾಟಕ' ಸಂಪಾದಕರಾದ ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿಗಳನ್ನು ಮಾಸ್ತಿ 'ನಮ್ಮ ಹೊಸ ಸಾಹಿತ್ಯದ ಅಶ್ವಿನೀ ದೇವತೆಗಳು' ಎಂದು ಕರೆದಿದ್ದಾರೆ.[೧೨]

"ಹೊಸ ಸಾಹಿತ್ಯದ ನೆಲೆಯೇನು, ಗುರಿಯೇನು, ಅದರ ಸೂತ್ರವೇನು, ಗಮನವೇನು ಎಂಬ ವಿಷಯವನ್ನೇ ಹೇಳುತ್ತಿರಬೇಕಾಗುತ್ತದೆ. ಸಾವಿರದ ಒಂಬೈನೂರ ಇಪ್ಪತ್ತರ ವೇಳೆಗೆ ಕನ್ನಡದಲ್ಲಿ ಈ ಕೆಲಸ ತೀರಾ ಅವಶ್ಯಕವಾಗಿ ಬಿಟ್ಟಿತ್ತು. ಆ ಸಮಯದಲ್ಲಿ ಮೈಸೂರು ಪ್ರಾಂತದಲ್ಲಿ ಈ ಕೆಲಸವನ್ನು ಇಬ್ಬರು ಮಹನೀಯರು ಕೈಗೊಂಡರು. ಇದಕ್ಕಾಗಿ ಒಂದು ತ್ರೈಮಾಸಿಕವನ್ನು ಆರಂಭಿಸಿದರು. ಆ ಮಹನೀಯರು ಶ್ರೀ ತಳುಕಿನ ವೆಂಕಣ್ಣಯ್ಯ ನವರು, ಶ್ರೀ ಅಂಬಳೆ ಕೃಷ್ಣ ಶಾಸ್ತ್ರಿಗಳು: ಆ ತ್ರೈಮಾಸಿಕ ಪ್ರಬುದ್ಧ ಕರ್ನಾಟಕ" ಎಂದು ಮಾಸ್ತಿ ಹೇಳುವರು.

'ಪ್ರಬುದ್ಧಕರ್ನಾಟಕ' ಶುದ್ಧಸಾಹಿತ್ಯಪತ್ರಿಕೆಯಾಗಿ ೧೯೧೯ರ ಸಿದ್ಧಾರ್ಥ ಸಂವತ್ಸರದ ಯುಗಾದಿಯಂದು ಆರಂಭವಾಯಿತು. ಅದಕ್ಕೆ ಐವತ್ತು ವರ್ಷ ತುಂಬಿದ ಸಂದರ್ಭದಲ್ಲಿ, 'ಈ ಐವತ್ತು ವರ್ಷಗಳೆಂದರೆ ಕರ್ನಾಟಕದ ನವೋದಯದ ೫೦ ವರ್ಷಗಳು; ಕನ್ನಡಿಗರ ಜಾಗೃತಿಯ ಐದು ದಶಕಗಳು; ಕನ್ನಡ ಸಾಹಿತ್ಯದ ಆಧುನಿಕತೆಯ ಅರ್ಧ ಶತಮಾನ'[೧೩] ಎಂದು ಹಾ.ಮಾ.ನಾಯಕರು ಹೇಳಿದ್ದರಲ್ಲಿ ಉತ್ಪ್ರೇಕ್ಷೆ ಏನಿಲ್ಲ.

'ಪ್ರಬುದ್ಧ ಕರ್ನಾಟಕ' ಎಂಬ ಹೆಸರನ್ನು ಸೂಚಿಸಿದವರು ಬೆಂಗಳೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀನಿರ್ಮಲಾನಂದ ಸ್ವಾಮೀಜಿ. ಈ ಹೆಸರಿನ ಧಾರ್ಮಿಕ ಪತ್ರಿಕೆಯೊಂದನ್ನು ಹೊರಡಿಸುವಂತೆ ಅವರು ಕೃಷ್ಣಶಾಸ್ತ್ರಿಗಳು ಮತ್ತು ಟಿ.ಎಸ್. ವೆಂಕಣ್ಣಯ್ಯನವರಿಗೆ ಸೂಚಿಸಿದ್ದರು. 'ಪ್ರಬುದ್ಧ ಭಾರತ' ಎಂಬ ಪತ್ರಿಕೆ ಇಂಗ್ಲಿಷಿನಲ್ಲಿತ್ತು. 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆಯೂ ಇತ್ತು. ಧಾರ್ಮಿಕ ವಿಚಾರಗಳನ್ನು ಪ್ರಾಂತೀಯ ಭಾಷೆಯಲ್ಲಿ ತಿಳಿಸಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಕೃಷ್ಣ ಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ' ಹೆಸರನ್ನು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಸಾಹಿತ್ಯಪತ್ರಿಕೆಗೆ ಬಳಸಿಕೊಂಡರು. ಒಂದು ನೂರು ವಿದ್ಯಾರ್ಥಿಗಳಿಂದ ತಲಾ ಒಂದೊಂದು ರುಪಾಯಿ ಮುಂಗಡ ಚಂದಾ ಸಂಗ್ರಹಿಸಿ ಆರಂಭಿಸಿದ ಈ ಪತ್ರಿಕೆಯನ್ನು ಬಿ.ಎಂ.ಶ್ರೀಯವರ

೧೧.ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ: ಎಸ್.ಅನಂತನಾರಾಯಣ- ಪುಟ ೧೦೫
೧೨ಮಾಸ್ತಿ: ನಮ್ಮ ಹೊಸ ಸಾಹಿತ್ಯದ ಅಶ್ವಿನೀ ದೇವತೆಗಳು; ಪ್ರ.ಕ. ಬೆಳ್ಳಿ ಸಂಚಿಕೆ; ಪುಟ ೩೦, ೧೯೪೫
೧೩.ಹಾಮಾನಾ; ಸಾಹಿತ್ಯ ಸಲ್ಲಾಪ; ಕನ್ನಡ ಪ್ರಭ- ಮಾರ್ಚ್ ೩, ೧೯೬೯

ಪ್ರಯತ್ನದ ಫಲವಾಗಿ ೧೯೩೨ರಲ್ಲಿ ಮೈಸೂರು ವಿಶ್ವವಿದ್ಯಾಲಯವು ವಹಿಸಿಕೊಂಡಿತು. ಇದು ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ', ಬೆಂಗಳೂರು ವಿಶ್ವವಿದ್ಯಾಲಯದ 'ಸಾಧನೆ', ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ' ಪತ್ರಿಕೆಗಳಿಗೆ ಮಾದರಿಯಾಯಿತು.

'ಪ್ರಬುದ್ಧ ಕರ್ನಾಟಕ'ದಲ್ಲಿ ಮೊದಲು ಕೃಷ್ಣ ಶಾಸ್ತ್ರಿಗಳು, ಅವರ ಶಿಷ್ಯರ ಲೇಖನಗಳು, ಕರ್ನಾಟಕ ಸಂಘದ ಆರಂಭ ಉಪಸಂಹಾರ ಭಾಷಣಗಳ ಲೇಖನ ರೂಪವು ಪ್ರಕಟಗೊಳ್ಳುತ್ತಿದ್ದವು. ೧೯೩೯ರಲ್ಲಿ ವೆಂಕಣ್ಣಯ್ಯನವರು ಗತಿಸಿದ ಬಳಿಕ ಉಪಕುಲಪತಿ ಎನ್.ಎಸ್.ಸುಬ್ಬರಾಯರು 'ಪ್ರಬುದ್ಧ ಕರ್ನಾಟಕ'ದಲ್ಲಿ ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರ ವಿಚಾರಗಳನ್ನೂ ಪ್ರಕಟಿಸಬೇಕೆಂದೂ, ಮೈಸೂರಿನ ಹೊರಗಿನ ಕರ್ನಾಟಕದ ಸಹಾಯ ಸಹಾನುಭೂತಿಗಳನ್ನು ಪಡೆಯಬೇಕೆಂದೂ ಸೂಚಿಸಿದರಂತೆ. ಇದಕ್ಕೆ ಅಗತ್ಯವಾದ ಹಣಕಾಸಿನ ಸಹಾಯವನ್ನು ಒದಗಿಸಲು ಅವರು ಮುಂದಾದರು. ಆ ಬಳಿಕ ಪ್ರಬುದ್ಧ ಕರ್ನಾಟಕದ ಸ್ವರೂಪ ಮತ್ತು ವ್ಯಾಪ್ತಿ ವಿಶಾಲವಾಯಿತು. ಇಪ್ಪತ್ತನೆ ಶತಮಾನದ ಮೊದಲ ಮತ್ತು ಎರಡನೆಯ ತಲೆಮಾರಿನ ಪ್ರಮುಖ ಸಾಹಿತಿಗಳ ಲೇಖನಗಳು ಅದರಲ್ಲಿ ಬೆಳಕುಕಂಡಿವೆ. ಹೊಸಗನ್ನಡದ ಗದ್ಯವನ್ನು ರೂಪಿಸುವುದರಲ್ಲಿ, ವಿಜ್ಞಾನದ ಪರಿಭಾಷೆಯನ್ನು ಹುಟ್ಟುಹಾಕುವುದರಲ್ಲಿ ಪ್ರಬುದ್ಧ ಕರ್ನಾಟಕದ ಕೊಡುಗೆ ಅಪಾರ.

'ಪ್ರಬುದ್ಧ ಕರ್ನಾಟಕವು ಸಾಹಿತ್ಯ ವಿಮರ್ಶೆ, ಸಂಶೋಧನೆಗಳಲ್ಲಿ ದೊಡ್ಡ ಆದರ್ಶಗಳನ್ನು ಪಾಲಿಸಿಕೊಂಡು ಬಂದಿತೇ ಹೊರತು ಅದು ಯಾವತ್ತೂ ಪಂಥ, ಗುಂಪುಗಳಿಗೆ ಆಸ್ಪದ ಕೊಡಲಿಲ್ಲ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿದ್ದರೂ ಕನ್ನಡದ ಹಿತರಕ್ಷಣೆಗೆ ಸಂಬಂಧಿಸಿದಂತೆ ತನ್ನ ದೃಢವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಎಂದೂ ಹಿಂಜರಿಯಲಿಲ್ಲ'[೧೪] ಎಂಬ ಹಾಮಾನಾ ಮಾತು ಅಕ್ಷರಶಃ ಸತ್ಯ.

ಇದನ್ನು ಗೋರೂರು ರಾಮಸ್ವಾಮಿ ಅಯ್ಯಂಗಾರರ ಮಾತೊಂದನ್ನು ಉಲ್ಲೇಖಿಸಿ ಪುಷ್ಟೀಕರಿಸಬಹುದು. ".. ..ಶ್ರೀಮಾನ್ ಕೃಷ್ಣ ಶಾಸ್ತ್ರಿಗಳು, ಕವಿವರ್ಯ ಕೆ.ವಿ.ಪುಟ್ಟಪ್ಪನವರ (ಡಾಕ್ಟರ್, ಪದ್ಮ ವಿಭೂಷಣ) ಒಂದು ಕೃತಿಯ ವಿಷಯದಲ್ಲಿ ವ್ಯಕ್ತಪಡಿಸಿದ ಪ್ರಶಂಸೆ ಮೆಚ್ಚಿಕೆ, ಅತಿಶಯೋಕ್ತಿ ಅತ್ಯುಕ್ತಿಯೆಂದೂ, ಅದನ್ನು (ಶ್ರೀಮಾನ್ ಕೆ.ವಿ. ಪುಟ್ಟಪ್ಪನವರ ಪುಸ್ತಕವನ್ನು) ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಶ್ರೇಷ್ಠ ಗ್ರಂಥಗಳಿಗೆ ಹೋಲಿಸಿರುವುದು ತುಂಬ ಅಳತೆ ಮೀರಿದ ಹೊಗಳಿಕೆಯೆಂದೂ, ಇದರಿಂದ ಆಧುನಿಕ ಬರಹಗಾರರ ತಲೆ ತಿರುಗಿಹೋಗುವುದೆಂದೂ ಒಬ್ಬ ವಿದ್ವಾಂಸರು (ಅವರೂ ಆಧುನಿಕರೇ) ಶ್ರೀಮಾನ್ ಡಿ.ವಿ. ಗುಂಡಪ್ಪನವರೊಂದಿಗೆ ದೂರಿದರು. ಅದಕ್ಕೆ ಡಿವಿಜಿಯವರು 'ಶ್ರೀಮಾನ್ ಕೃಷ್ಣ ಶಾಸ್ತ್ರಿಗಳು ಹಾಗೆ ಹೇಳಿದರೆ, ಅದಕ್ಕೆ ಗ್ರಂಥ ಅರ್ಹವಾದದ್ದಾಗಿರಬೇಕು. (He has a sure

---

೧೪.ಹಾಮಾನಾ; ಸಾಹಿತ್ಯ ಸಲ್ಲಾಪ; ಕನ್ನಡ ಪ್ರಭ- ಮಾರ್ಚ್ ೩, ೧೯೬೯

taste. He never is swayed by any prejudice in his judgement)' ಎಂದು ಉತ್ತರವಿತ್ತರು. ಪ್ರಬುದ್ಧಕರ್ನಾಟಕದ ವಿಮರ್ಶೆ ಹೀಗೆ ನಿರ್ದುಷ್ಟವಾಗಿದ್ದುದರಿಂದಲೇ ಅದರಲ್ಲಿ ಬರುತ್ತಿದ್ದ ಅಭಿಪ್ರಾಯಗಳಿಗೂ ಲೇಖನಗಳಿಗೂ ವಿಮರ್ಶನಗಳಿಗೂ ಕನ್ನಡ ನಾಡಿನಲ್ಲಿ ಅಂತಹ ಬೆಲೆ ಇತ್ತು."[೧೫]

'ಪ್ರಬುದ್ಧ ಕರ್ನಾಟಕ'ದ ತಮ್ಮ ಮೊದಲನೆಯ ಲೇಖನದ ಕೊನೆಯಲ್ಲಿ ಎ.ಆರ್.ಕೃ. 'ನಮ್ಮಲ್ಲಿ ಬೆಳ್ಳಿಯಿಲ್ಲ ಭಂಗಾರವಿಲ್ಲ. ಯಾವುದು ಇದೆಯೋ ಅದನ್ನು ನಿರ್ವಂಚನೆಯಾಗಿ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ದೃಢದಿಂದಲೂ ನಿರ್ವಂಚನೆಯಿಂದಲೂ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿ ಸಹಾಯಕ್ಕೆ ಬಂದು ನಿಲ್ಲುವರೆಂದು ನಮಗೆ ಧೈರ್ಯವಿದೆ' ಎಂದು ಹೇಳಿದ್ದು ಆಮೇಲೆ ಸತ್ಯವಾಯಿತು.

ಕೃಷ್ಣ ಶಾಸ್ತ್ರಿಗಳ ಸಂಪಾದಕತ್ವ ಅನೇಕ ಲೇಖಕರ ಬರೆಹಗಳಿಗೆ ಹೊಸ ಹೊಳಪನ್ನು ನೀಡಿದೆ. '.. .. .. ಕಿರಿಯರ ಪ್ರಬಂಧಕ್ಕೆ ಕತ್ತರಿಯ ಪ್ರಯೋಗವನ್ನು ಮಾಡುವಂತೆಯೇ ಹಿರಿಯರ ಲೇಖನಕ್ಕೂ ಉಳಿಯ ಪೆಟ್ಟನ್ನು ಕೊಟ್ಟು ಕೊಟ್ಟಿದ್ದಾರೆ'[೧೬] ಎಂಬ ಎನ್.ಅನಂತ ರಂಗಾಚಾರ್ ಅವರ ಮಾತು ಶಾಸ್ತ್ರಿಗಳ ಪ್ರಭುತ್ವವನ್ನು ತೋರಿಸುವುದು.

'ಪ್ರಬುದ್ಧ ಕರ್ನಾಟಕ'ದಲ್ಲಿ ಒಂದು ಸಂಪ್ರದಾಯಶೀಲತೆ ಇತ್ತು. ಭಾರತೀಯತೆಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ನಾವು ಅದರಲ್ಲಿ ಕಾಣಬಹುದಾಗಿತ್ತು. ಅದರ ಸಂಚಿಕೆಗಳನ್ನು ಹಿಂದೂ ಪಂಚಾಂಗಕ್ಕೆ ಅನುಗುಣವಾಗಿ ವಿನಾಯಕ ಸಂಚಿಕೆ, ದೀಪಾವಳಿ ಸಂಚಿಕೆ, ಸಂಕ್ರಾಂತಿ ಸಂಚಿಕೆ, ಕಾಮನ ಸಂಚಿಕೆಯೆಂದು ಪ್ರಟಿಸಲಾಗುತ್ತಿತ್ತು. 'ಪ್ರಬುದ್ಧ ಕರ್ನಾಟಕ'ದ ಸಂಪುಟ ೩೧, ಸಂಚಿಕೆ ೨ನ್ನು ವಿರೋಧಿ ಸಂವತ್ಸರ, ದೀಪಾವಳಿ ಸಂಚಿಕೆ ಎಂದು ಪ್ರಕಟಿಸಲಾಗಿದೆ.

ಇಂಥ ಒಂದು ಸಂಪ್ರದಾಯ ಬದ್ಧತೆಗೆ ಜಯಕರ್ನಾಟಕವೂ ಹೊರತಾಗಿರಲಿಲ್ಲ. ಒಮ್ಮೆ ಈ ಪತ್ರಿಕೆ ತಡವಾಗಿ ಪ್ರಕಟವಾಯಿತು. ಅದಕ್ಕೆ ಅದರ ಸಂಪಾದಕರು ನೀಡಿದ ವಿವರಣೆ, "ಮುಂದಿನ ತಿಂಗಳು ಅಧಿಕ ಮಾಸವಿರುವುದರಿಂದ 'ಜಯಕರ್ನಾಟಕ'ದ ೧೦ನೆಯ ಸಂಚಿಕೆ ನಮ್ಮ ಪದ್ಧತಿಯ ಪ್ರಕಾರ ನಿಜ ಶ್ರಾವಣ ಶುದ್ಧ೧೫ಕ್ಕೆ ಹೊರಡುವುದು",- ಹೀಗೆ ಉದ್ದೇಶ ಪೂರ್ವಕವಾಗಿಯೇ ತಮ್ಮದೇ ಪದ್ಧತಿ ಅನುಸರಿಸುವ ಇವರು ಆ ಮೂಲಕ ತಮ್ಮದಲ್ಲದ ಪದ್ಧತಿ ಯನ್ನು ವಿರೋಧಿಸುತ್ತಿರುವುದನ್ನು ಅರಿಯಬಹುದು.

ಎ.ಆರ್.ಕೃಷ್ಣ ಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ'ದ ಸಂಪಾದಕರಾಗಿದ್ದ ಮತ್ತು

೧೫.ಎ.ಆರ್.ಕೃ. ಜೀವನ ಸಾಧನೆ: 'ಕೃಷ್ಣ ಶಾಸ್ತ್ರಿಗಳ ಮಾರ್ಗ',ಗೊರೂರು ರಾಮಸ್ವಾಮಿ ಅಯ್ಯಂಗಾರ,ಪುಟ,೧೮೧

೧೬.ಎ.ಆರ್.ಕೃ. ಜೀವನ ಸಾಧನೆ: 'ಪ್ರಾತಃಸ್ಮರಣೀಯರಾದ ಆಚಾರ್ಯ ಅಂಬಳೆ ಕೃಷ್ಣ ಶಾಸ್ತ್ರಿಗಳು' - ಎನ್. ಅನಂತ ರಂಗಾಚಾರ್ - ಪುಟ- ೧೩

ವೆಂಕಣ್ಣಯ್ಯನವರೊಂದಿಗೆ ಸಹ ಸಂಪಾದಕರಾಗಿದ್ದ ಕಾಲದಲ್ಲಿ ಸುಮಾರು "೨೬೦ ವಿದ್ಯಾರ್ಥಿಗಳೂ ವಿದ್ವಾಂಸರೂ ಅವರೊಡನೆ ಸಹಕರಿಸಿ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಅವರ ನೇತೃತ್ವದಲ್ಲಿ ೨೦೦ ನವೀನ ಪ್ರಾಚೀನ ಕವಿತೆಗಳು ಪ್ರಕಾಶಿತವಾಗಿವೆ. ಸಾಹಿತ್ಯ ಸಂಶೋಧನೆಗೆ ಸಂಬಂಧಪಟ್ಟ ೧೪೫ ಲೇಖನಗಳು ಪ್ರಚುರವಾಗಿವೆ. ೧೨೫ ಸಣ್ಣ ಕತೆಗಳು, ಪ್ರಬಂಧ, ಗದ್ಯ ಚಿತ್ರ ಮೊದಲಾದವು ರಚಿತವಾಗಿವೆ. ವಿವಿಧ ಜಾತಿಗೆ ಸೇರಿದ ೨೨ ನಾಟಕಗಳು ಹೊರಬಿದ್ದಿವೆ. ಭೌತಶಾಸ್ತ್ರ ರಸಾಯನ ಶಾಸ್ತ್ರ ಸಮಾಜ ಶಾಸ್ತ್ರ ಜೀವಶಾಸ್ತ್ರ ಗಣಿತ, ಮತ, ಧರ್ಮ, ಆಧುನಿಕ ವಿಜ್ಞಾನ, ಭೂಶೋಧನೆ, ಚಿತ್ರಕಲೆ, ವಾಸ್ತುಶಿಲ್ಪ, ಸಂಗೀತ, ಶಿಕ್ಷಣ, ಆಕಾಶವಾಣಿ, ಆಹಾರ ವಿಜ್ಞಾನ, ಪುಸ್ತಕ ಭಂಡಾರ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಉಚ್ಚ ತರಗತಿಯ ೮೫ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ೨೦ ಐತಿಹಾಸಿಕ ಪ್ರಬಂಧಗಳು ಬೆಳಕನ್ನು ಕಂಡಿವೆ. ೪೦೦ ಗ್ರಂಥಗಳು ವಿಮರ್ಶಿತವಾಗಿವೆ. ೧೨,೧೦೦ ಡೆಮ್ಮಿ ಆಕಾರದ ಪುಟಗಳ ಸಾಹಿತ್ಯ ಅಚ್ಚಾಗಿ ಕನ್ನಡಿಗರ ಕೈ ಸೇರಿದೆ. ಇಲ್ಲಿ ಪ್ರಕಟವಾದ ಲೇಖನಗಳ ಆಧಾರದ ಮೇಲೆ ಕಾಲಾನುಕ್ರಮದಲ್ಲಿ ೪೭ ಸ್ವತಂತ್ರ ಪುಸ್ತಕಗಳಾಗಿವೆ. ಪತ್ರಿಕೆಗೆ ಅನುಬಂಧವಾಗಿ ನಾಲ್ಕು ಗ್ರಂಥಗಳನ್ನು ಮುದ್ರಿಸಿ ಹಂಚಲಾಗಿದೆ."[೧೭] ಈ ಲೆಕ್ಕಾಚಾರ ಒಂದು ಸೀಮಿತ ಅವಧಿಯದು. ಆ ಬಳಿಕವೂ ಪ್ರಬುದ್ಧ ಕರ್ನಾಟಕ ಸಾಗಿ ಬಂದಿದೆ. ಇದರ ಮೇಲಿಂದಲೇ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅದರ ಕೊಡುಗೆಯನ್ನು ಲೆಕ್ಕಹಾಕಬಹುದು. ಕನ್ನಡ ಉಪಾಧ್ಯಾಯರಿಂದ ಪ್ರಬುದ್ಧ ಕರ್ನಾಟಕಕ್ಕೆ ನಾನು ಪ್ರತಿ ವರ್ಷವೂ ನಿರೀಕ್ಷಿಸುವುದು ಒಂದು ಲೇಖನ ಮತ್ತು ಒಂದು ವಿಮರ್ಶೆ ಎಂದು ಶಾಸ್ತ್ರಿಯವರು ಪ್ರಕಟಿಸಿದರು. ಮೂರು ಸಂಚಿಕೆಗಳಿಗೆ ಬೇಕಾಗುವಷ್ಟು ಲೇಖನಗಳನ್ನು ಶಾಸ್ತ್ರಿಗಳು ಮೊದಲೇ ಸಂಗ್ರಹಿಸಿ ಇಡುತ್ತಿದ್ದರಂತೆ.

ಗೆಳೆಯರ ಗುಂಪು ಮತ್ತು ಜಯಕರ್ನಾಟಕ: 'ಜಯಕರ್ನಾಟಕ' ಮಾಸ ಪತ್ರಿಕೆಯನ್ನು ೧೯೨೩ರಲ್ಲಿ ಆಲೂರ ವೆಂಕಟರಾಯರು ಆರಂಭಿಸಿದರು. ಇದನ್ನು ಅವರು ಮುಂದೆ 'ಗೆಳೆಯರ ಗುಂಪಿ'ಗೆ ವಹಿಸಿಕೊಟ್ಟರು. ಆಲೂರರ ಸಂಪಾದಕತ್ವದಲ್ಲಿ ಪತ್ರಿಕೆ ಬರುತ್ತಿದ್ದಾಗಲೂ ಗೆಳೆಯರ ಗುಂಪಿನ ಸಹಕಾರ ಪತ್ರಿಕೆಗೆ ಇತ್ತು. ಆಲೂರರು ಗುಂಪಿಗೆ ಗೆಳೆಯರಲ್ಲದಿದ್ದರೂ ಗುಂಪಿನ ಹಿರಿಯರಂತೆ ಇದ್ದರು. ಆರ್ಥಿಕ ಹೊರೆ ಇದ್ದಲ್ಲಿ ಸ್ನೇಹವನ್ನು ತೂಗಿಸಿಕೊಂಡು ಹೋಗುವುದು ಸುಲಭವಲ್ಲ. "ಇದೊಂದು ಪ್ರತ್ಯೇಕವಾದ ದರ್ಶನವೆಂದೇ ಹೇಳಬೇಕಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಯಾವ ಕೆಲಸದ ಹೊಣೆಯನ್ನೂ ಕನ್ನಡಿಗರು ವಹಿಸಿಕೊಂಡು, ನಡೆಸಿಕೊಂಡು ಬಂದಿರುವ ಉದಾಹರಣೆಗಳು ತೀರ ಕಡಿಮೆ. ಲೋಕಮಾನ್ಯ ಟಿಳಕರ ಸ್ನೇಹಿತರಾಗಿದ್ದ ಅಥವಾ ಅವರಿಂದ ಸ್ಫೂರ್ತಿ ಪಡೆದು ಅವರ ಆದರ್ಶವನ್ನು ತಮ್ಮ ಆದರ್ಶವನ್ನಾಗಿ ಮಾಡಿಕೊಂಡಿದ್ದ ಆಲೂರ ವೆಂಕಟರಾಯರು 'ಜಯ

೧೭.ಎನ್.ಅನಂತರಂಗಾಚಾರ; ಎಆರ್‌ಕೃ ಜೀವನ ಸಾಧನೆ- ಪ್ರಾತಃಸ್ಮರಣೀಯರಾದ ಆಚಾರ್ಯ ಅಂಬಳೆ ಕೃಷ್ಣ ಶಾಸ್ತ್ರಿಗಳು; ಪುಟ ೧೭

ಕರ್ನಾಟಕ' ಮಾಸ ಪತ್ರಿಕೆಗೆ ಒಂದು ಸಂಸ್ಥೆಯ ಸ್ವರೂಪವನ್ನು ಕೊಡಬಹುದಾಗಿತ್ತು",[೧೮] ಎಂದು ಗೆಳೆಯರ ಗುಂಪಿನವರಲ್ಲಿ ಒಬ್ಬರಾಗಿದ್ದ ಶೇ.ಗೋ. ಕುಲಕರ್ಣಿಯವರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ದೂರದರ್ಶಿತ್ವ ಬೇಕಾಗುತ್ತದೆ. ಭಾರತದಲ್ಲಿ, ಕರ್ನಾಟಕದಲ್ಲಿ ಸಾರ್ವಜನಿಕ ಸಂಸ್ಥೆಗಳು ನಡೆಯುವುದು ತೀರ ದುರ್ಲಭ ಎಂಬ ಮಾತನ್ನೂ ಅವರು ಹೇಳಿದ್ದಾರೆ.

ಆಲೂರ ವೆಂಕಟರಾಯರು ಏಳು ವರ್ಷಗಳ ಕಾಲ ಪತ್ರಿಕೆಯನ್ನು ನಡೆಸಿದ ಮೇಲೆ, ಅದನ್ನು ಗೆಳೆಯರ ಗುಂಪಿಗೆ ಹತ್ತು ವರ್ಷಗಳ ವರೆಗೆ ತಿಂಗಳಿಗೆ ಒಂದು ನೂರು ರುಪಾಯಿ ಕೊಡಬೇಕು ಎನ್ನುವ ಶರತ್ತಿನ ಮೇಲೆ ವಹಿಸಿಕೊಟ್ಟಿದ್ದರು. ಇದು ಅತಿ ಎನ್ನಿಸಿ ಕೊನೆಗೆ ಮೂರು ಸಾವಿರ ರುಪಾಯಿಗಳನ್ನು ಒಂದು ವರ್ಷದ ಅವಧಿಯಲ್ಲಿ ಕೊಡುವುದೆಂಬ ನಿರ್ಣಯಕ್ಕೆ ಬರಲಾಗುತ್ತದೆ. ಮುಂದೆ ಒಂದು ವರ್ಷದೊಳಗೇ ಆಲೂರರಿಗೆ ಗೆಳೆಯರ ಗುಂಪು ಮೂರು ಸಾವಿರ ರುಪಾಯಿಗಳನ್ನು ನೀಡುತ್ತದೆ.

"ಜಯಕರ್ನಾಟಕವು ಒಂದು ವ್ಯಾಪಾರ ವೃತ್ತಿಯೆಂದು ಪರಿಗಣಿಸಲ್ಪಡದೆ ನಾಡಿಗಾಗಿ, ನುಡಿಗಾಗಿ ನಿಸ್ವಾರ್ಥದಿಂದ ಹಾಗೂ ಕೆಲಮಟ್ಟಿಗೆ ತ್ಯಾಗದಿಂದ ಸೇವೆ ಸಲ್ಲಿಸುತ್ತಿರುವ ಸಮರ್ಥ ಕೆಲಸಗಾರರಿಂದ ಕೂಡಿದ ಒಂದು ಸಂಸ್ಥೆ ಎಂಬ ಭಾವನೆ ಜನರಲ್ಲಿ ಬರತೊಡಗಿತು. ಇದರೊಂದಿಗೆ ಗೆಳೆತನವನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ಸಾಧಿಸಬೇಕೆನ್ನುವ ಆದರ್ಶ ಗೆಳೆಯರದಾಗಬೇಕೆಂಬ ಹಂಬಲವನ್ನು ಇರಿಸಿಕೊಂಡ ಗೆಳೆಯರ ಸಂಸ್ಥೆ ಎಂದೂ ಅದಕ್ಕೆ ಸಮಾಜದಲ್ಲಿ ಒಂದು ಗೌರವದ ಸ್ಥಾನ ದೊರೆಯಿತು. ಗಾಂಧಿ ಚಳವಳಿಯು ಪ್ರಬಲವಾಗಿದ್ದ ಆಗಿನ ದಿನಗಳಲ್ಲಿ ಅಷ್ಟೇ ಮಹತ್ವವಾದ ಆದರ್ಶವನ್ನಿಟ್ಟುಕೊಂಡು ಕೆಲಸ ಮಾಡುವುದು ಅವಶ್ಯವಾಗಿತ್ತು, ಅನಿವಾರ್ಯವಾಗಿತ್ತು; ಇದರಲ್ಲಿ ಆತ್ಮ ತೃಪ್ತಿಯೂ ಇತ್ತು. ನುಡಿಯ ಸೇವೆ ನಾಡ ಸೇವೆಗೆ ಯಾವ ರೀತಿಯಿಂದಲೂ ಕಡಿಮೆ ಅಲ್ಲ ಎಂಬ ಅಭಿಮಾನವಿತ್ತು. ಅಂತೆಯೇ ಆಗ ಕಾಂಗ್ರೆಸ್ಸಿನ ಕೆಲಸಗಳಲ್ಲಿ, ಖಾದಿ ಕೆಲಸಗಳಲ್ಲಿ ಕೆಲಸ ಮಾಡುತ್ತಿದ್ದ ದೇಶ ಭಕ್ತರ ಹೆಗಲಿಗೆ ಹೆಗಲು ಹಚ್ಚಿ ನಾವು ಅಂತಹದೇ ಕೆಲಸ ಮಾಡುತ್ತಿರುವೆವೆಂಬ ಆತ್ಮವಿಶ್ವಾಸ ನಮ್ಮಲ್ಲಿ ಇತ್ತು. ಬಂದಿತ್ತು"[೧೯] ಎಂದು ಶೇ.ಗೋ. ಕುಲಕರ್ಣಿಯವರು ಹೇಳುವ ಮಾತು ಅತ್ಯಂತ ಮಹತ್ವದ್ದು. ಸ್ವಾತಂತ್ರ್ಯ ಚಳವಳಿಯ ಆ ದಿನಗಳಲ್ಲಿ ಇಂಥ ಪತ್ರಿಕೆ ನಡೆಸುವುದು ಕೂಡ ದೇಶ ಭಕ್ತಿಯ ಕೇಲಸವೇ ಎಂಬ ಭಾವನೆ ಇದ್ದದ್ದು ಆಗಿನ ಇಡೀ ವಾತಾವರಣವನ್ನು ಪ್ರತಿಬಿಂಬಿಸುವುದು.

ಪ್ರಭಾತ: 'ಜಯಕರ್ನಾಟಕ'ಕ್ಕಿಂತ ಸ್ವಲ್ಪ ಮೊದಲು ಹುಟ್ಟಿಕೊಂಡ ಪತ್ರಿಕೆ 'ಪ್ರಭಾತ'. ಕೇವಲ ಕವಿತೆಗಳ ಪ್ರಕಟಣೆಗಾಗಿಯೇ ಹುಟ್ಟಿಕೊಂಡ ಇದು ಹೊಸ

೧೮.ನಾನು ಕಂಡ ಗೆಳೆಯರ ಗುಂಪು- ಶೇ.ಗೋ. ಕುಲಕರ್ಣಿ, ಪುಟ- ೨೧೩-೨೧೪

೧೯.ನಾನು ಕಂಡ ಗೆಳೆಯರ ಗುಂಪು- ಶೇ.ಗೋ. ಕುಲಕರ್ಣಿ, ಪುಟ- ೨೨೮-೨೯

ಪ್ರಯೋಗಗಳಿಗೆ ವೇದಿಕೆಯಾಯಿತು. ಕಾವ್ಯದ ಛಂದಸ್ಸು ಹಳೆಯದೇ ಆದರೂ ಅಭಿವ್ಯಕ್ತಿಯ ರೀತಿಯಲ್ಲಿ ಹೊಸತನ ಇದ್ದುದನ್ನು ಇದರಲ್ಲಿಯ ಕವಿತೆಗಳಿಂದ ಅರಿಯಬಹುದು. 'ಪ್ರಭಾತ'ದ ಕವಿತೆಗಳನ್ನು ಗಮನಿಸಿದಾಗ ಮುಕ್ಕಾಲು ಭಾಗ ಷಟ್ಪದಿಗಳಲ್ಲಿ ಇವೆ. ಇಲ್ಲಿಯ ಕವಿತೆಗಳ ಶೀರ್ಷಿಕೆಗಳು- ಕಾಗದ, ಕವಿಯ ಸಾಮ್ರಾಜ್ಯ, ಕಾಲು ಗಾಡಿ (Cycle), ವಸಂತ ಋತುವಿನ ಮನೆ, ವಿಷಮ ವಿವಾಹ, ಭಕ್ತಿ ಕುಸುಮಾವಳಿ, ದೇವರಲ್ಲಿ ಪ್ರಾರ್ಥನೆ, ಕನ್ನಡ ನಾಡಿನ ಹಿರಿಮೆ, ತುತೂರಿ, ಜಾದಿಯ ಹೂ, ಕನ್ನಡ ನಾಡಿನ ಇತಿಹಾಸ, ಮುಂಜಾವು- ಹೀಗೆ ಹೊಸದು ಮತ್ತು ಹಳೆಯ ವಸ್ತುವಿನ ವಿಶ್ರಣವಿದೆ, ವೈವಿಧ್ಯವಿದೆ. ಆನಂದಕಂದರ 'ಭಕ್ತಿ ಕುಸುಮಾವಳಿ'ಯನ್ನು ಗಮನಿಸಿದರೆ ಹಳೆಯ ಬಂಧದೊಳಗೆ ಹೊಸದರತ್ತ ಇರುವ ತುಡಿತ ಕಾಣುತ್ತದೆ.

ಒಡೆಯ ನೀನೆಂದರಿದೇ ನಿ-।

ನ್ನಡಿಯ ಭಜನೆಯ ಮರೆತು ಬಿಟ್ಟೆನು।

ಮಡದಿ ಮಕ್ಕಳ ಮೋಹದಲ್ಲಿ ಮದಾಂಧನಾಗಿರುತ ॥

ಪೊಡವಿಯಂ ನಡೆದಿರುವ ಕಾಲಕೆ।

ಮಡದಿಯಾರ್ ಮೇಣ್ ಮಕ್ಕಳುಗಳಾರ್।

ಪೊಡವಿಯೊಡೆಯನೆ ಕಡೆಗೆ ನೀನಿರದಾರು ನನಗಿಹರೋ ॥[೨೦]

ಇಲ್ಲಿಯ ಭಾಷೆಯ ಸರಳತೆ ಮತ್ತು ಸೊಗಸು ಹಳೆಯ ವಸ್ತುವಿಗೆ ಹೊಸತನವನ್ನು ನೀಡಿದೆ.

ಈ ಹಳೆಯದು ಮತ್ತು ಹೊಸದರ ನಡುವಿನ ಮಸೆದಾಟವನ್ನು ಬೇಂದ್ರೆಯಂಥವರ ಕಾವ್ಯದಲ್ಲಿಯೇ ಕಾಣಬಹುದು.

"ತಾಳವಿಲ್ಲದೆಲೆ ಬೇತಾಳನಂದದಿ ಕುಣಿವ।

ಕಾಳ ನರ್ತಕನ ಕಾಲ್ಕೆಳಗೆ ತೊತ್ತಳಿಗೊಂಡು।

ಹಾಳಾಗಿ ಹುಡಿಗೂಡಿ ಹೋದ ಕನ್ನಡ ನಾಡಿಗಿದಿರಾಗಿ ಬಂದು ನಿಂತು॥

ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು।

ಬೀಳುಗಳ ಬದಿಗೆ ಬೀಳುಗಳ ಬಾಳುಗಳು।

ಕಾಳರಕ್ಕಸನ ಕೂಡೆ ಕೂಳು ಬಾಳಕವಾದ ನಾಡನಡುಮನೆಯ ಕಂಡೆ ॥"[೨೧]

---

೨೦. ಬೆಟಗೇರಿ ಕೃಷ್ಣಶರ್ಮ: 'ಭಕ್ತಿ ಕುಸುಮಾವಳಿ' ಪ್ರಭಾತ- ಮೇ-ಜೂನ್ -೧೯೧೯

೨೧. ಬೇಂದ್ರೆ: ಹಂಪಿ ವಿಜಯ ನಗರ ದರ್ಶನ- ಜ.ಕ. ಜುಲೈ ೧೯೨೩, ಪುಟ ೬೫೬

ಕಾವ್ಯದ ಶರೀರ ಷಟ್ಪದಿ. ಆತ್ಮ ನವನವೀನವಾಗಿರುವುದು ಈ ಕವಿತೆ ಓದಿದಾಗ ಅನುಭವಕ್ಕೆ ಬರುತ್ತದೆ. 'ಪ್ರಭಾತ', 'ಜಯಕರ್ನಾಟಕ'ಗಳು ಈ ರೀತಿಯಲ್ಲಿ ಹೊಸ ಕಾವ್ಯ ಪ್ರಯೋಗಕ್ಕೆ ವೇದಿಕೆಯಾಗಿ ದೊರೆತವು.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ: 'ಪ್ರಬುದ್ಧ ಕರ್ನಾಟಕ'ಕ್ಕಿಂತ ಸ್ವಲ್ಪ ಹಳೆಯದಾದ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಕವಿಕಾವ್ಯ ಪರಿಚಯ, ಕನ್ನಡ ಕಾವ್ಯ ಪ್ರಕಾರಗಳ ಪರಿಚಯ, ಸಂದೇಹಗಳು, ಸೂಚನೆಗಳು, ಸಾಹಿತ್ಯ ಸಮ್ಮೇಳನಗಳು, ಸಮ್ಮೇಳನಾಧ್ಯಕ್ಷರು, ಅಧ್ಯಕ್ಷರ ಭಾಷಣಗಳು ಮೊದಲಾದವುಗಳನ್ನು ಪ್ರಕಟಿಸುತ್ತ ಬಂದಿದೆ. 'ಸಾಹಿತ್ಯ ಪರಿಷತ್ಪತ್ರಿಕೆ'ಯನ್ನು ಎ.ಆರ್.ಕೃಷ್ಣ ಶಾಸ್ತ್ರಿಗಳು ನಾಲ್ಕು ವರ್ಷಗಳ ಕಾಲ ಸಂಪಾದಕರಾಗಿ ಮುನ್ನಡೆಸಿದರು. ಶಾಸ್ತ್ರಿಗಳ ಸಂಪಾದಕತ್ವದ ಬಗ್ಗೆ ಎಂ.ವಿ.ಸೀತಾರಾಮಯ್ಯನವರು ಹೇಳುವ ಮಾತುಗಳು ಮಹತ್ವದ್ದು. "ಬಹುಮಟ್ಟಿಗೆ ಪರಂಪರಾಗತ ಪಾಂಡಿತ್ಯಕ್ಕೆ ಮೀಸಲಾಗಿದ್ದ ಪತ್ರಿಕೆಯನ್ನು ಆಧುನಿಕ ಸಂಶೋಧನಾತ್ಮಕ ಪಾಂಡಿತ್ಯಕ್ಕೆ ತೆರವು ಮಾಡಿಕೊಡುವ ಹೊಣೆಗಾರಿಕೆಯನ್ನು ಹೊತ್ತಿದ್ದರು ಶಾಸ್ತ್ರಿಗಳು. ಪತ್ರಿಕೆಯಲ್ಲಿ ಅವರು ಮಾಡಿದ ಮಾರ್ಪಾಟುಗಳು ಹಳಬರನ್ನು ಎದುರುಹಾಕಿಕೊಳ್ಳದೆ ಹೊಸ ವಿದ್ವಾಂಸರನ್ನು ಸ್ವಾಗತಿಸಿದವು."[೨೨] ಒಳ್ಳೆಯ ಸಂಪಾದಕತ್ವ ಕೂಡ ಒಂದು ಪತ್ರಿಕೆಗೆ ಹೊಸ ರೂಪವನ್ನು ಕೊಡಬಲ್ಲುದು. ಪತ್ರಿಕೆಯ ಒಳ ಪುಟಗಳನ್ನು ಶ್ರೀಮಂತಗೊಳಿಸಿದ್ದರ ಜೊತೆಯಲ್ಲಿಯೇ ಪತ್ರಿಕೆಯ ಹೊರ ಪುಟವನ್ನೂ ಅವರು ಅಂದಗೊಳಿಸಿದರು. ಮುದ್ರಣಕ್ಕೆ ಉತ್ತಮ ಕಾಗದ ಬಳಸಿದರು. ಪತ್ರಿಕೆಯ ತೂಕ ಏರಬೇಕಾದರೆ ಬರವಣಿಗೆಯ ತೂಕದ ಜೊತೆ ಕಾಗದದ ತೂಕವೂ ಅಗತ್ಯ ಎಂಬ ನಂಬುಗೆ ಅವರದಾಗಿತ್ತು. ಇದರ ಉದ್ದೇಶ ಇಷ್ಟೇ, ದೇಶ ವಿದೇಶಗಳ ವಿದ್ವತ್ ಪತ್ರಿಕೆಗಳನ್ನು ವಿನಿಮಯ ಮಾಡಿಕೊಳ್ಳುವುದು. ಆ ಮೂಲಕ ಪರಿಷತ್ಪತ್ರಿಕೆಯ ಸಂಪಾದನ ಕಾರ್ಯಕ್ಕೂ ಪರಿಷತ್ತಿನಲ್ಲಿ ಸಂಶೋಧನೆ ಮಾಡುವವರಿಗೂ ಅನುಕೂಲ ಕಲ್ಪಿಸುವುದು. ಆ ಪತ್ರಿಕೆಗಳನ್ನೆಲ್ಲ ಚಂದಾ ಹಣ ಕೊಟ್ಟು ಖರೀದಿಸುವ ಸಾಮರ್ಥ್ಯ ಪರಿಷತ್ತಿಗೆ ಇಲ್ಲದ್ದರಿಂದ ಶಾಸ್ತ್ರಿಗಳು ದೂರಾಲೋಚನೆಯಿಂದ ಈ ಕ್ರಮ ಕೈಗೊಂಡರು. ಅಗ್ಗದ ಕಾಗದದ ಮೇಲೆ ಅಚ್ಚು ಹಾಕಿದ ಬಡಕಲು ಪತ್ರಿಕೆ ಕಳಿಸಿಕೊಟ್ಟರೆ, ಶ್ರೀಮಂತ ಪತ್ರಿಕೆಗಳು ನಮಗೆ ವಿನಿಮಯವಾಗಿ ಬರುತ್ತವೆಯೇ ಎಂದು ಅವರು ಪ್ರಶ್ನಿಸುತ್ತಿದ್ದರು.

ಶಾಸ್ತ್ರಿಗಳು ಪರಿಷತ್ಪತ್ರಿಕೆಯ ಸಂಪಾದಕರಾಗಿದ್ದುದು ಅದರ ೧೯ನೆಯ ಸಂಪುಟದಿಂದ ಮುಂದಿನ ನಾಲ್ಕು ಸಂಪುಟಗಳ ವರೆಗೆ. ಆ ಅವಧಿಯ ಸಂಚಿಕೆಗಳನ್ನು ಅದರ ಹಿಂದಿನ ಸಂಚಿಕೆಗಳೊಂದಿಗೆ ಹೋಲಿಸಿ ನೋಡಿದರೆ ವ್ಯತ್ಯಾಸ ಗೊತ್ತಾಗಿ ಬಿಡುತ್ತದೆ. ಶಾಸ್ತ್ರಿಗಳು ವಿನಿಮಯ ರೂಪದಲ್ಲಿ ಬರುತ್ತಿದ್ದ ಪತ್ರಿಕೆಗಳಲ್ಲಿ ಭರತ ಖಂಡದ ಭಾಷೆ, ಸಾಹಿತ್ಯ, ಚರಿತ್ರೆ, ಸಂಸ್ಕೃತಿ ಮೊದಲಾದವುಗಳ ಕುರಿತು ಪ್ರಕಟವಾದ ಲೇಖನಗಳು ಆ ವಿಷಯಗಳಲ್ಲಿ ಕೆಲಸ

೨೨.ಎ.ಆರ್.ಕೃ. ಜೀವನ ಸಾಧನೆ- ಪೂಜ್ಯ ಕೃಷ್ಣ ಶಾಸ್ತ್ರಿಗಳಿಂದ ನಾನು ಕಲಿತ ಪಾಠ- ಎಂ.ವಿ. ಸೀತಾರಾಮಯ್ಯ

ಮಾಡುವ ವಿದ್ವಾಂಸರು ಮತ್ತು ಆಸಕ್ತ ಜನರ ಗಮನಕ್ಕೆ ಬರಬೇಕು ಎಂಬ ಉದ್ದೇಶದಿಂದ, ಪ್ರಾಚ್ಯ ಲೇಖನ ಮಾಲೆ ಎಂಬ ಉಪಯುಕ್ತ ವಿಭಾಗವನ್ನು ಆರಂಭಿಸಿದರು. ಮೊದಲಿನ ಒಂದೆರಡು ಸಂಚಿಕೆಗಳಲ್ಲಿ ಲೇಖನಗಳ- ಲೇಖಕರ ಹೆಸರುಗಳಷ್ಟೇ ಪ್ರಕಟವಾದವು. ನಂತರ ಅವರು ಆ ಲೇಖನಗಳ ಸಾರವನ್ನು ಪ್ರಕಟಿಸಬೇಕೆಂಬ ನಿರ್ಧಾರವನ್ನು ಕೈಗೊಂಡರು.

ಒಂದು ಉದಾಹರಣೆ ನೋಡಬೇಕೆಂದರೆ:

1)Journal oF The Benares Hindu University, Vol.1, No.1 1937.

1. "Agasthya or the Rise and spread of Hindu Culture"-Mr.K.A.Neelakantha Sastri, M.A.

2. "State of Hinduism and Budhism in Sudraka`s Mrchhakatika"- Dr. S.K. Belvalkar, M.A., Ph.D.

[Sudraka seems to have used Sakara as an instrument for venting out his own views against contemporary Society and superstitios.]

2)Journal of Annamalai University,January 1937

1. "The age of Tholkappiam"- Mr. S.S. Bharathi

[5th or 6th Century B.C.: Vide also issue of May 1937]

3) ಜಯಕರ್ನಾಟಕ- ಮಾರ್ಚಿ ೧೯೩೭

1.ದ್ರಾವಿಡ ಲಿಪಿಯಿಂದ ಬ್ರಾಹ್ಮೀ ಲಿಪಿಯ ಉತ್ಪತ್ತಿ. ಲೇಖಾಂಕ 1. ಶ್ರೀ ಪ್ರ.ಗೋ. ಕುಲಕರ್ಣಿ

2.ಇತಿಹಾಸ ಸಂಶೋಧಕರು- ಶ್ರೀ ಎಸ.ಆರ್. ಶೇಷಗಿರಿರಾವ್, ಬಿ.ಎ.

4) ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ- ಎಪ್ರಿಲ್-ಮೇ ೧೯೩೭

ಪ್ರಕಾಶ ವರ್ಷುಡು- ರಸಾರ್ಣವಾಲಂಕಾರಮು

-ಶ್ರೀ ಈ.ವೆಂಕಟವೀರರಾಘವಾಚಾರ್ಯಲುಗಾರು, ಎಂ.ಎ.

ಶಾಸ್ತ್ರಿಗಳ ಈ ಉಪಕ್ರಮವೇ ಮುಂದೆ ಕನ್ನಡದಲ್ಲಿ ಲೇಖನ ಸೂಚಿಗಳು, ಗ್ರಂಥ ಸೂಚಿಗಳು, ಶಾಸನ ಸೂಚಿಗಳು ಬರುವುದಕ್ಕೆ ಪ್ರೇರಣೆ ನೀಡಿರಬಹುದು.

ಸಮಕಾಲೀನ ಪತ್ರಿಕೆಗಳಲ್ಲಿ ಬಂದಿರುವ ಇಂಥ ವಿಷಯಗಳನ್ನು ಕನ್ನಡ ವಿದ್ವಾಂಸರಿಗೆ ಪರಿಚಯಿಸಿದ ಹಾಗೆಯೇ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯಗಳ ಸಾರವು ಕನ್ನಡ ಬಾರದ ವಿದ್ವಾಂಸರ ಗಮನಕ್ಕೆ ಬರುವುದೂ ಅಷ್ಟೇ ಮುಖ್ಯ ಎಂದು ಶಾಸ್ತ್ರಿಗಳು

ಭಾವಿಸಿದ್ದರು. ಈ ಪತ್ರಿಕೆ ಇಂಗ್ಲೆಂಡ, ಅಮೆರಿಕ, ಜರ್ಮನಿ ಮೊದಲಾದ ಪಾಶ್ಚಾತ್ಯ ದೇಶಗಳಿಗೆ ಹೋಗುತ್ತಿತ್ತು. ಅಲ್ಲಿಯ ವಿದ್ವಾಂಸರು ಈ ಪತ್ರಿಕೆಯಲ್ಲಿಯ ವಿಷಯವನ್ನು ಅರಿಯಲಿ ಎಂಬ ಉದ್ದೇಶದಿಂದ ಅವರು Contents in Briefs ಎಂಬ ವಿಷಯ ಸಂಗ್ರಹ ಪತ್ರವನ್ನು ಇಂಗ್ಲಿಷಿನಲ್ಲಿ ಅಚ್ಚು ಹಾಕಿಸಿ, ಪತ್ರಿಕೆಯ ಮುಖಪುಟಕ್ಕೆ ಅಂಟಿಸಿ ಕಳಿಸುವ ವ್ಯವಸ್ಥೆಯನ್ನು ಮಾಡಿದರು.

ಇದಕ್ಕೆ ಒಂದು ಉದಾಹರಣೆಯನ್ನು ನೋಡೋಣ:

Vol.XXI. October- December 1936, No.4.

2.National Literature in kannada: By Mr. R.S. Mugali, M.A., B.T., Proffessor of Kannada, Willingdon College, Sangli.

"Prof. Mugali points out in this article that 'The love of the Land' has been from the earliest times a source of inspiration for poets of the Kannada country and gives examples from inscriptions, and works of Ancient and Modern periods of Kannada Literature"

ಶಾಸ್ತ್ರಿಗಳ ಇಂಥ ಒಂದು ಉಪಕ್ರಮದಿಂದ ಸಂಶೋಧಕರಿಗೆ ಆಕರವನ್ನು ಅರಿಯುವುದು ಸುಲಭವನ್ನಾಗಿ ಮಾಡಿತು. ಅವರು ಎರಡನೆಯ ಬಾರಿಗೆ ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದಾಗಲೂ ಇದನ್ನೇ ಅನುಸರಿಸಿದರು.

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಗೆ ಶಾಸ್ತ್ರಿಗಳು ಅಖಿಲ ಕರ್ನಾಟಕ ವ್ಯಾಪ್ತಿಯನ್ನು ತಂದುಕೊಟ್ಟರು. ಇದಕ್ಕಾಗಿ ಪತ್ರಿಕೆಯ ವಿಮರ್ಶೆ ವಿಭಾಗವನ್ನು ಅವರು ಯಶಸ್ವಿಯಾಗಿ ಬಳಸಿದರು. ಬೆಂಗಳೂರಿನ ಸುತ್ತಮುತ್ತ ಇದ್ದವರಿಂದಲೇ ಅವರು ಪುಸ್ತಕ ವಿಮರ್ಶೆ ಬರೆಸಬಹುದಾಗಿತ್ತು. ಆದರೆ ಹಾಗೆ ಮಾಡದೆ ನಾಡಿನ ಮೂಲೆ ಮೂಲೆಯಲ್ಲಿರುವ ವಿದ್ವಾಂಸರನ್ನು ಗುರುತಿಸಿ ಯಾರಿಗೆ ಯಾವುದರಲ್ಲಿ ಪರಿಶ್ರಮವಿದೆಯೋ ಅಂಥವರಿಗೇ ಆಯಾ ಪುಸ್ತಕಗಳನ್ನು ಕಳುಹಿಸಿ ವಿಮರ್ಶೆಯನ್ನು ತರಿಸಿಕೊಳ್ಳುತ್ತಿದ್ದರು. ಇದಕ್ಕಾಗಿ ಅವರು ಒಂದು ನೊಂದಣಿ ಪುಸ್ತಕವನ್ನು ಮಾಡಿದ್ದರು. ಅದರಲ್ಲಿ ಪುಸ್ತಕವನ್ನು ವಿಮರ್ಶೆಗೆ ಕಳುಹಿಸಿದ ತಾರೀಖು, ವಿಮರ್ಶೆ ಬಂದ ತಾರೀಖು, ವಿಮರ್ಶೆ ಸಕಾಲದಲ್ಲಿ ಬಾರದಿದ್ದರೆ ವಿಮರ್ಶಕರಿಗೆ ನೆನಪು ಕೊಡಲು ಪತ್ರ ಬರೆದ ತಾರೀಖು, ಅಂಚೆ ಹಾಸಲು (ಪುಸ್ತಕಗಳನ್ನು ಹಿಂದಿರುಗಿಸಲು ತಗಲುವ ಮೌಲ್ಯದ ಅಂಚೆ ಚೀಟಿಗಳನ್ನು ಪುಸ್ತಕದೊಂದಿಗೆ ಇರಿಸಲಾಗುತ್ತಿತ್ತು.) ಇವನ್ನೆಲ್ಲ ಬರೆದಿಡಲಾಗುತ್ತಿತ್ತು. ಕೆಲವು ಬಾರಿ ಐದಾರು ನೆನಪಿನ ಓಲೆಗಳನ್ನು ಬರೆದು ವಿಮರ್ಶೆಯನ್ನು ತರಿಸಿಕೊಂಡಿದ್ದೂ ಇತ್ತು. ಸಾಹಿತ್ಯ ಪರಿಷತ್ಪತ್ರಿಕೆಯ ಮೂಲಕ ಎ.ಆರ್.ಕೃಷ್ಣ ಶಾಸ್ತ್ರಿಗಳು ಒಂದು ಅನುಕರಣೀಯ ಪರಂಪರೆ ನಿರ್ಮಿಸಿದರು.

ವಿಶ್ವಕರ್ನಾಟಕ: ಕನ್ನಡತನದ ಪ್ರಸ್ತಾಪವಾದಾಗ ತಿ.ತಾ.ಶರ್ಮ ಅವರನ್ನು ಸ್ಮರಿಸದೆ ಇರಲು ಸಾಧ್ಯವಿಲ್ಲ. 'ವಿಶ್ವಕರ್ನಾಟಕ'ದ ಮೂಲಕ ದೊಡ್ಡ ಹೆಸರನ್ನು ಮಾಡಿದ ಅವರು ಪತ್ರಿಕೋದ್ಯಮವನ್ನು ಪ್ರವೇಶಿಸಿದ್ದು 'ದೇಶೀಯ ವಿದ್ಯಾಶಾಲಾ ಪತ್ರಿಕೆ'ಯ ಮೂಲಕ. ಇದನ್ನು ಆರಂಭಿಸಿದವರು ತುಂಟರ ಗುಂಪಿನವರು. ಕೋಲಾರ ಸಂಪದ್ಗಿರಿ ರಾಯರು, ಕಂದಾಡೆ ಕೃಷ್ಣಯ್ಯಂಗಾರರು ಸೇರಿ ಶಾಲೆಯ ಚಟುವಟಿಕೆಗಳನ್ನು ಜನಪ್ರಿಯಗೊಳಿಸಲು ೧೯೨೨ರಲ್ಲಿ ಇಂಗ್ಲಿಷಿನಲ್ಲಿ ಶಾಲಾಪತ್ರಿಕೆಯನ್ನು ಆರಂಭಿಸಿದರು. ಇದು ವರ್ಷದಲ್ಲಿ ಮೂರು ಬಾರಿ ಪ್ರಕಟಗೊಳ್ಳುತ್ತಿತ್ತು. ತಿ.ತಾ.ಶರ್ಮರು ದೇಶೀಯ ವಿದ್ಯಾಶಾಲೆಗೆ ಬಂದ ಮೇಲೆ ಪತ್ರಿಕೆಯ ಹೊಣೆಯನ್ನು ತಾವೇ ಹೊತ್ತುಕೊಂಡರು. ಕನ್ನಡಾಭಿಮಾನಿಯಾದ ಅವರು ೧೯೨೩ರ ಜುಲೈ ಸಂಚಿಕೆಯಿಂದ ಅದನ್ನು ಕನ್ನಡ ಪತ್ರಿಕೆಯಾಗಿಸಿದರು. ಈ ಬದಲಾವಣೆಯನ್ನು ಮಾಡಿದಾಗ, ಕರ್ನಾಟಕ ದೇಶಮಾತೆಯ ಸೇವೆಗಾಗಿ ದೇಶೀಯ ಶಿಕ್ಷಣದಲ್ಲಿ ಎಲ್ಲರಿಗೂ ಪ್ರಚಾರವನ್ನು ಮಾಡುವುದಕ್ಕಾಗಿ ಈ ಪತ್ರಿಕೆಯನ್ನು ಇಂಗ್ಲಿಷಿನಲ್ಲಿ ಪ್ರಕಟಿಸುವ ಉದ್ಯಮವನ್ನು ಕೈ ಬಿಡಲು ಸಿದ್ಧರಾಗಿದ್ದೇವೆ ಎಂದು ಪ್ರಕಟಿಸಿದರು.

ಆಂಗ್ಲ ಭಾಷೆಗೆ ಯುವ ಜನಾಂಗ ಮೋಹಗೊಳ್ಳುತ್ತಿದ್ದ ಸಂದರ್ಭದಲ್ಲಿ ವಿದ್ಯಾವಂತರ ಹೃದಯಗಳನ್ನು ಗೆಲ್ಲುವುದಕ್ಕೆ ಈ ಪತ್ರಿಕೆಯನ್ನು ಕನ್ನಡದಲ್ಲಿ ಪ್ರಕಟಿಸುವುದು ಅಗತ್ಯವಿದೆ ಎಂದು ಶರ್ಮ ಭಾವಿಸಿದರು. ತುಂಟರ ಗುಂಪಿನ ಮುಖವಾಣಿಯಾದ ಇದರ ಉದ್ದೇಶಗಳನ್ನು ಶರ್ಮರು ಹೀಗೆ ಹೇಳಿಕೊಂಡಿದ್ದಾರೆ: ೧)ಶಿಕ್ಷಣದ ಎಲ್ಲ ಹಂತಗಳಲ್ಲೂ ಕನ್ನಡ ಭಾಷೆಯನ್ನು ನೀತಿ ನಿರ್ಣಯ ಮಾಡಿ, ಪ್ರಭುತ್ವದವರು ಆಚರಣೆಗೆ ತರುವಂತೆ ಮಾಡಬೇಕು. ೨) ಕನ್ನಡ ಭಾಷಾ ಸಾಹಿತ್ಯಗಳ ಅಧ್ಯಯನದಲ್ಲಿ ನವೀನ ವೈಜ್ಞಾನಿಕ ರೂಪ ಬರಬೇಕು. ಉತ್ತಮವಾದ, ಪರಿಣಾಮಕಾರಿಯಾಗಿರುವ ಸರಳ ಗದ್ಯದ ನಿರ್ಮಾಣವಾಗಬೇಕು. ಇದಕ್ಕಾಗಿ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಬೇಕು. ಸಾಹಿತ್ಯ ರಚನೆಯಲ್ಲಿಯೂ ಹೊಸ ಪ್ರಯೋಗಗಳನ್ನು ನಡೆಸಬೇಕು. ೩) ಮಕ್ಕಳಲ್ಲಿ ವಿಚಾರ ಶಕ್ತಿಯನ್ನು, ಸೃಷ್ಟಿ ಶಕ್ತಿಯನ್ನು ಬೆಳೆಸಬೇಕು, ಪರೋಪಕಾರ ಬುದ್ಧಿಯನ್ನು ಪ್ರತಿಯೊಬ್ಬರೂ ತಮಗಿರುವ ಅವಕಾಶದಲ್ಲಿ ಆಚರಣೆಗೆ ತರಬೇಕು. ಮಕ್ಕಳಲ್ಲಿ ವಿದ್ಯಾರ್ಜನೆಯ ಜೊತೆಗೆ, 'ಸ್ವಾತಂತ್ರ್ಯವೇ ಜೀವನ, ದಾಸ್ಯವೇ ಸಾವು', 'ಬಡತನವೇ ಭಾಗ್ಯ', 'ಸೇವೆಯೇ ಜೀವನದ ಸಾಧನೆಯ ಸರ್ವಸ್ವ', ಈ ಮನೋಭಾವಗಳನ್ನು ಮೂಡಿಸಬೇಕು- ಈ ಉದ್ದೇಶಗಳಿಗಾಗಿ ಪತ್ರಿಕೆ ಶ್ರಮಿಸುತ್ತದೆ ಎಂದು ಪ್ರಕಟಿಸಿದರು. ಕನ್ನಡವು ಸರ್ವಾಂತರ್ಯಾಮಿಯಾಗಬೇಕು ಎಂಬ ಉದ್ದೇಶವನ್ನು ಇದರಲ್ಲಿ ಪ್ರಕಟವಾದ ಲೇಖನಗಳೆಲ್ಲ ಹೊಂದಿತ್ತು. ಶರ್ಮರಂಥ ದೂರ ದೃಷ್ಟಿಯ ಕನ್ನಡ ಪ್ರೇಮಿಯಿಂದಾಗಿಯೇ ಕನ್ನಡ ಸಾಹಿತ್ಯ ಬಲಗೊಂಡಿದ್ದು, ಕನ್ನಡ ನಾಡಿನ ಏಕೀಕರಣ ಸಾಧ್ಯವಾಗಿದ್ದು.

ತುಂಟರ ಗುಂಪಿನಲ್ಲಿ ಕೋಲಾರ ಸಂಪದ್ಗಿರಿರಾಯರು, ಕಂದಾಡೆ ಕೃಷ್ಣಯ್ಯಂಗಾರರು, ಕೆ.ಎಸ್. ಕೃಷ್ಣ ಅಯ್ಯರ್, ದ.ಕೃ. ಭಾರದ್ವಾಜ, ಕೈಲಾಸಂ, ಕೆ.ಎ.

ವೆಂಕಟರಾಮಯ್ಯ, ಅ.ನ.ಕೃ., ಸಿ.ಮಹಾದೇವಯ್ಯ, ಅನೇಕಲ್ ಸರ್ವಾಭಟ್ಟ ಕಣ್ಣನ್ ಮೊದಲಾದವರಿದ್ದರು. ಇವರೆಲ್ಲರೂ ತುಂಟರ ಚಿಳ್ಳಿ, ತುಂಟರ ಪಿಳ್ಳಿ, ತುಂಟರ ಕೊಳ್ಳಿ, ತುಂಟರ ಭಟ್ಟ, ತುಂಟರ ಗೊರವ, ತುಂಟರ ಕೊಂಟ, ತುಂಟರ ದತ್ತ.. .. ಮೊದಲಾದ ಹೆಸರುಗಳಿಂದ ಬರೆಯುತ್ತಿದ್ದರು. ತುಂಟರ ಗುಂಪಿನ ಸದಸ್ಯರು ನವೋದಯದ ಆರಂಭ ಕಾಲದಲ್ಲಿ ಕನ್ನಡದಲ್ಲಿ ಸ್ವತಂತ್ರ ಗದ್ಯಶೈಲಿಯನ್ನು ರೂಪಿಸಿದರು.

ಉದ್ಯೋಗ, ಹುಂಜಗಳು, ಶ್ರಾದ್ಧವೋ ಸರ್ವನಾಶವೋ?, ರೆ ರಾಜ್ಯ, ಇಂಗ್ಲಿಷ್ ಶಾಸ್ತ್ರಗಳ ಚೆಲ್ಲಾಟ, ಕೂಗೋ ಗುಡ್ಡ ಗುಂಪಿಗಂಟುವ ರೋಗ, ಕವಿತೆಯ ಗುಟ್ಟು- ಹೀಗೆ ಅನೇಕ ಉತ್ತಮ ಲೇಖನಗಳು ಇದರಲ್ಲಿ ಪ್ರಕಟವಾಗಿವೆ.

ತಿ.ತಾ.ಶರ್ಮರ ಕನ್ನಡ ಪ್ರೇಮವು ಅವರು ವಿಶ್ವಕರ್ನಾಟಕಕ್ಕೆ ಹೆಸರನ್ನಿಡುವಾಗಲೂ ಪ್ರಕಟಗೊಂಡಿದೆ. ತುಮಕೂರಿನ ಕೆ.ರಂಗಯ್ಯಂಗಾರ್ಯರು ನಡೆಸುತ್ತಿದ್ದ 'ಮೈಸೂರು ಕ್ರಾನಿಕಲ್' ಪತ್ರಿಕೆಯನ್ನು ಶರ್ಮರು ಸೇರಿದರು. ೧೯೨೫ರ ಆಗಸ್ಟ್ ೨ನೆ ತಾರೀಖಿನ 'ಮೈಸೂರು ಕ್ರಾನಿಕಲ್'ನ ಮೂರನೆ ಸಂಪುಟದ ೪೪ನೆ ಸಂಚಿಕೆ ಶರ್ಮ ಅವರ ಸಂಪಾದಕತ್ವದಲ್ಲಿ ಪ್ರಕಟವಾಯಿತು. ಕನ್ನಡ ಪತ್ರಿಕೆಗೆ ಇಂಗ್ಲಿಷ್ ಹೆಸರು ಬೇಡವೆಂದು ಅವರು ಅದಕ್ಕೆ 'ವಿಶ್ವಕರ್ನಾಟಕ' ಎಂದು ಹೆಸರಿಟ್ಟರು. 'ವಿಶ್ವ ಕ' ಎಂದರೆ ಸಮಸ್ತವೂ ಕರ್ನಾಟಕ ಎನ್ನುವ ಅರ್ಥದಲ್ಲಿ ಈ ಹೆಸರನ್ನು ಆಯ್ಕೆ ಮಾಡಿದರು. 'ವಿಶ್ವ ಕರ್ನಾಟಕ' ಆರಂಭಿಸಿದಾಗ ಇದರ ಮುಖ್ಯ ಉದ್ದೇಶ ಭಾರತದ ಸಂಪೂರ್ಣ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ. ೧೯೨೫ರಲ್ಲಿ 'ವಿಶ್ವಕರ್ನಾಟಕ'ವು ರಾಷ್ಟ್ರೀಯ ವಾರ ಪತ್ರಿಕೆಯಾಗಿ ಪ್ರಕಟವಾಯಿತು. ಇದು ಮುಂದೆ ೧೬-೦೭-೧೯೩೪ರಿಂದ ದಿನಪತ್ರಿಕೆಯಾಯಿತು.

'ವಿಶ್ವಕರ್ನಾಟಕ'ವು ಸ್ವಾತಂತ್ರ್ಯ ಸಂಗ್ರಾಮದ ಚಳವಳಿಗೆ ಅನುಗುಣವಾಗಿ ಮೂರು ಹಂತಗಳಲ್ಲಿ ವಿಕಾಸಗೊಂಡಿದೆ. ಮೊದಲ ಹಂತದಲ್ಲಿ (೧೯೨೫-೨೮) ವಿಶೇಷವಾಗಿ ನಾಡಿನ ಸಾಹಿತ್ಯ, ಕಲೆ, ನಾಡು-ನುಡಿಯ ಏಳಿಗೆಗಾಗಿ ಜನ ಸಾಮಾನ್ಯರ ಜ್ಞಾನಾಭಿವೃದ್ಧಿಗಾಗಿ ಪತ್ರಿಕೆ ಶ್ರಮಿಸಿದೆ. ಎರಡನೆ ಹಂತದಲ್ಲಿ (೧೯೨೮-೧೯೩೯) ಮೈಸೂರು ಸಂಸ್ಥಾನದಲ್ಲಿ ನಡೆದ ಗಲಭೆಗಳು, ಗಾಂಧೀಜಿಯ ಚಳವಳಿ ಇತ್ಯಾದಿಗಳ ವರದಿಯನ್ನು ಪ್ರಮುಖವಾಗಿ ಪ್ರಕಟಿಸಲಾಗಿದೆ ೧೯೩೯-೪೭ರ ೩ನೆ ಹಂತದಲ್ಲಿ ಮೈಸೂರಿನ ರಾಜಕೀಯ ಸುಧಾರಣೆಗಳನ್ನು, ಜನರ ಪ್ರತಿಕ್ರಿಯೆಗಳನ್ನು ವಿವರವಾಗಿ ಪ್ರಕಟಿಸಿದೆ. ನಿಟ್ಟೂರು ಶ್ರೀನಿವಾಸರಾವ್ ದಂಪತಿ ಕನ್ನಡಕ್ಕೆ ಅನುವಾದಿಸಿದ ಗಾಂಧೀಜಿಯವರ ಆತ್ಮಚರಿತ್ರೆ 'ಸತ್ಯಶೋಧನೆ'ಯನ್ನು 'ವಿಶ್ವಕರ್ನಾಟಕ'ವು ಧಾರಾವಾಹಿಯಾಗಿ ಪ್ರಕಟಿಸಿದೆ.

ನಾಡು ನುಡಿಯ ಸಂಸ್ಕೃತಿಯ ಮಹತ್ವವನ್ನು ಪ್ರಚಾರ ಮಾಡುವ ಮಹದಾಸೆ ಹೊಂದಿದ್ದ ತಿ.ತಾ.ಶರ್ಮರು ಪ್ರತಿ ಸಂಚಿಕೆಯಲ್ಲೂ ಐತಿಹಾಸಿಕ ಸ್ಮಾರಕವೊಂದನ್ನು ಇಲ್ಲವೆ

ಹೊಸ ಶಾಸನವೊಂದನ್ನು ಕುರಿತು ವಿವರಿಸುತ್ತಿದ್ದರು. 'ಪ್ರಾಚೀನ ದ್ರಾವಿಡ ನಾಗರಿಕತೆ ಪತ್ತೆ', 'ದ್ವಾರಕಾನಗರದ ಅವಶೇಷಗಳು', 'ಬಳ್ಳಿಗಾವೆಯ ಗಂಡಭೇರುಂಡ ಸ್ತಂಭ' ಇವೆಲ್ಲ ಗಮನಾರ್ಹವಾದ ಲೇಖನಗಳಾಗಿವೆ. ಪತ್ರಿಕೆಯ 'ಸಾಹಿತ್ಯ ಪ್ರಪಂಚ' ಅಂಕಣದಲ್ಲಿ ಪ್ರಕಟವಾಗಿರುವ ಬಿ.ವೆಂಕಟಾಚಾರ್ಯರ ಸ್ಮಾರಕ, ರನ್ನ ಕವಿ ಇಬ್ಬರಿದ್ದರೆ? ಪಂಪ ಮಹಾಕವಿಯ ಸ್ಮಾರಕೋತ್ಸವ, ಮೌರ್ಯ ಶಾತವಾಹನರ ಕಾಲವೂ ಕನ್ನಡ ಭಾಷೆಯೂ ಮೊದಲಾದ ಲೇಖನಗಳು ಇವತ್ತಿಗೂ ಅಭ್ಯಾಸಿಗಳ ಕುತೂಹಲ ಕೆರಳಿಸುವ ದಾಖಲೆಗಳಾಗಿ ಉಳಿದಿವೆ.

'ವಿಶ್ವಕರ್ನಾಟಕ'ವು ೧೯೩೨ರಿಂದ ತಿಂಗಳಿಗೆ ಎರಡರಂತೆ ಉಪ ಸಂಚಿಕೆಗಳನ್ನು ಹೊರಡಿಸಿತು. ಒಂದು ಸಾಹಿತ್ಯ ಸಂಚಿಕೆ. ಇನ್ನೊಂದು ಅರ್ಥಸಾಧಕ ಸಂಚಿಕೆ. ಇಂಗ್ಲಿಷಿನಲ್ಲಿ ಬರುತ್ತಿದ್ದ 'ಬುಕ್‌ಮನ್' ಹೋಲುವಂಥ ಪತ್ರಿಕೆಯಾಗಿದ್ದ ಸಾಹಿತ್ಯ ಸಂಚಿಕೆಯು ಎಂಟು ಪುಟಗಳನ್ನು ಹೊಂದಿತ್ತು. ಇದರಲ್ಲಿ ಕಾವ್ಯಾವಲೋಕನ, ಕವಿ ಕಲಾವಿಲಾಸ, ಕನ್ನಡದ ಮೆಯ್ಸಿರಿ, ಸಾಹಿತ್ಯ ಸಮಾಲೋಚನೆ. ವಾದ ಭೂಮಿ, ಸ್ವೀಕಾರ, ಶಬ್ದ ಸಂಪತ್ತು ಎಂಬ ಅಂಕಣಗಳನ್ನು ಒಳಗೊಂಡಿತ್ತು. ಕನ್ನಡ ಮೆಯ್ಸಿರಿ ಭಾಗದಲ್ಲಿ ಕನ್ನಡ ನಾಡಿನಲ್ಲಿ ನಡೆಯುತ್ತಿದ್ದ ವಿವಿಧ ಸಾಹಿತ್ಯ ಚಟುವಟಿಕೆಗಳನ್ನು ವರದಿಗಳನ್ನು ಪ್ರಕಟಿಸುತ್ತಿದ್ದರು. ಸಭೆಗಳಲ್ಲಿ ಅತ್ಯುತ್ತಮ ಭಾಷಣ ಇದ್ದರೆ ಅದನ್ನು ಯಥಾವತ್ತಾಗಿ ಪ್ರಕಟಿಸಲಾಗುತ್ತಿತ್ತು. ಬೇರೆ ಬೇರೆ ಭಾಷೆಯ ಸಾಹಿತ್ಯಕ್ಕೆ ಸಂಬಂಧಿಸಿದ ವಿವರಗಳೂ ಪ್ರಕಟಗೊಳ್ಳುತ್ತಿದ್ದವು. ಅನ್ಯ ಭಾಷೆಯ ಸಾಹಿತಿಗಳ ಪರಿಚಯವೂ, ಕವಿತೆಗಳೂ, ಪುಸ್ತಕ ವಿಮರ್ಶೆಯೂ ಇರುತ್ತಿದ್ದ ಈ ಸಾಹಿತ್ಯ ಸಂಚಿಕೆ ಸಂಗ್ರಹ ಯೋಗ್ಯವಾಗಿತ್ತು.

ತಿ.ತಾ.ಶರ್ಮರು ಕನ್ನಡ ಪತ್ರಿಕೋದ್ಯಮಕ್ಕೆ ಅನೇಕ ಹೊಸ ಶಬ್ದಗಳನ್ನು ನೀಡಿದರು. ಆ ಮೂಲಕ ಕನ್ನಡ ನುಡಿಯನ್ನು ಬಲಪಡಿಸಿದರು. ಸರ್ಪಗಾವಲು (picketing) ಅಖಂಡ ಕ್ಷೋಭೆ, ಅನುಗ್ರಹ, ಅಭ್ಯುದಯ, ಅಭೇದ ಬದ್ಧಿ, ಅರ್ಥ ವಿವಾದ, ಅನರ್ಥ ವ್ಯವಹಾರ, ಅಗ್ನಿ ಭಕ್ಷಕರು, ಅರ್ಧಚಂದ್ರ, ಪ್ರಯೋಗ, ಅರಿಕೆ, ಅಧಿವೇಶನ (session), ಅಧಿಲೇಖ್ಯ, ಅಸಂದಿಗ್ಧ, ಚಕ್ರಗೋಷ್ಠಿ (Round table conference), ಕರಾಳ ಶಾಸನ, ವೃತ್ತ ಪತ್ರಾಸುರ ಶಾಸನ, ಮುದ್ರಾ ರಾಕ್ಷಸ, ಕಂಠ ಕೌಪೀನ, ಪೌರನೀತಿ, ವಿರಾಮ ಖರ್ಚೆ, ನರೇಂದ್ರ ಭಾರತ (princly state), ಶ್ವೇತ ಪತ್ರ, ಭಿನ್ನವತ್ತಳೆ, ಕಪಿಮುಷ್ಟಿ ಇನ್ನೂ ಅನೇಕ ಶಬ್ದಗಳು ಇವತ್ತಿಗೂ ಚಲಾವಣೆಯಲ್ಲಿವೆ. ಕನ್ನಡ ನುಡಿಗೆ 'ವಿಶ್ವಕರ್ನಾಟಕ'ದ ಮೂಲಕ ತಿ.ತಾ. ಶರ್ಮರು ಮಾಡಿದ ಉಪಕಾರ ಮಹತ್ವದ್ದು.

ಸುಬೋಧ: ಸಾಹಿತ್ಯ ಪತ್ರಿಕೆಗಳ ಪ್ರಸ್ತಾಪ ಮಾಡುವಾಗ 'ಸುಬೋಧ' ಮಾಸಪತ್ರಿಕೆ ಮತ್ತು ಎಂ.ರಾಮರಾಯರನ್ನು ಮುಖ್ಯವಾಗಿ ಸ್ಮರಿಸಬೇಕು. ೧೯೩೧ರ ಸುಮಾರಿಗೆ ಬೆಂಗಳೂರು ಸಿಟಿ ಮಾರ್ಕೆಟ್ ಲೈನ್ ಮುಂಭಾಗದ ಒಂದು ಮಳಿಗೆಯಲ್ಲಿ

ಸುಬೋಧ ಮಾಸಪತ್ರಿಕೆ, ಸುಬೋಧ ಕುಸುಮಾಂಜಲಿ, ಹರಿದಾಸ ಕೀರ್ತನೆ ತರಂಗಿಣಿ- ನಿಯತಕಾಲಿಕೆಗಳು ಪ್ರಕಟಗೊಳ್ಳುತ್ತಿದ್ದವು. ಸುಬೋಧ ಕುಸುಮಾಂಜಲಿ ಗ್ರಂಥಮಾಲೆ ೧೯೧೫ರಲ್ಲಿ ಪ್ರಾರಂಭವಾಯಿತು. ಮೊದಲ ಗ್ರಂಥ ಚಂದ್ರಹಾಸ. ೧೯೨೨ರ ವರೆಗೂ ಈ ಗ್ರಂಥಮಾಲೆಯಲ್ಲಿ ಏಳು ಪುಸ್ತಕಗಳನ್ನು ಪ್ರಕಟಿಸಲಾಯಿತು. ಇದೇ ವರ್ಷ ಗ್ರಂಥಮಾಲೆಯನ್ನು ಮಾಸ ಪುಸ್ತಕಾವಳಿಯನ್ನಾಗಿ ಮಾರ್ಪಡಿಸಲಾಯಿತು. ಪ್ರತಿ ಪುಸ್ತಕವೂ ೬೦ರಿಂದ ೮೦ ಪುಟಗಳನ್ನು ಹೊಂದಿರುತ್ತಿತ್ತು. ಇದರ ಬೆಲೆ ೨ ಆಣೆ. ೧೯೫೧ರ ವರೆಗೆ ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯಲ್ಲಿ ಒಟ್ಟೂ ೧೪೦ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ಭಕ್ತಶಿರೋಮಣಿಗಳ ಚರಿತ್ರೆ ೨೭, ಮತೋದ್ಧಾರಕರು, ಧರ್ಮೋದ್ಧಾರಕರು ೨೨, ಪೌರಾಣಿಕ ಮಹಾಪುರುಷರು ೨೯, ಆಧುನಿಕ ಮಹಾಪುರುಷರು ೧೮, ವಿದೇಶೀಯ ಮಹಾಪುರುಷರು ೮, ಕವಿತಾ ಪುಸ್ತಕಗಳು ೩ ಪ್ರಕಟವಾಗಿವೆ. ಇವುಗಳ ಒಟ್ಟೂ ಪ್ರತಿಗಳ ಸಂಖ್ಯೆ ಮೂರುಲಕ್ಷಕ್ಕೂ ಅಧಿಕ ಎಂದರೆ ಈ ಮಾಸಿಕ ಗ್ರಂಥಾವಳಿ ಮಾಡಿರುವ ಕೆಲಸದ ಅಗಾಧತೆ ಅರಿವಾಗುವುದು.

ಎಂ.ರಾಮರಾಯರು ೧೯೨೫ರಲ್ಲಿ 'ಸುಬೋಧ' ಮಾಸ ಪತ್ರಿಕೆ ಆರಂಭಿಸಿದರು. ೧೯೨೭ರಲ್ಲಿ 'ಹರಿದಾಸ ಕೀರ್ತನ ತರಂಗಿಣಿ' ಎಂಬ ಹೆಸರಿನಲ್ಲಿ ದಾಸ ಸಾಹಿತ್ಯ ಪ್ರಕಟಣೆ ಪ್ರಾರಂಭಿಸಿದರು. ''ಕರ್ನಾಟಕದಲ್ಲಿ ಸುಪ್ರಸಿದ್ಧರೆನಿಸಿ ಜನತೆಗೆ ಭಕ್ತಿ, ಜ್ಞಾನ, ವೈರಾಗ್ಯಾದಿಗಳು, ಲೋಕ ನೀತಿ, ಧರ್ಮ ಸೂಕ್ಷ್ಮಗಳು, ವೇದ ಶಾಸ್ತ್ರ ಪುರಾಣಾದಿಗಳ ಸಕಲ ಧರ್ಮ ರಹಸ್ಯಗಳು ಇವನ್ನು ಮೃದು ಮಧುರ ತಿಳಿಗನ್ನಡ ಭಾಷೆಯಲ್ಲಿ...'' ಪ್ರಕಟಿಸಲಾಗಿದೆ. ಪುರಂದರ ದಾಸರು, ಕನಕ ದಾಸರು, ಜಗನ್ನಾಥ ದಾಸರು, ವಿಜಯ ದಾಸರು, ವಾದಿರಾಜ ಸ್ವಾಮಿಗಳು, ಶ್ರೀಪಾದರಾಯ ಸ್ವಾಮಿಗಳು ವ್ಯಾಸರಾಯ ಸ್ವಾಮಿಗಳು, ಗೋಪಾಲದಾಸರು, ಮೋಹನದಾಸರು ಇವರ ಹಾಡುಗಳು, ಹರಿಕಥಾಮೃತಸಾರ, ಹನುಮದ್ವಿಲಾಸ, ಕುಚೇಲೋಪಖ್ಯಾನ, ಕಾಳಿಯ ಮರ್ದನ ಕಾವ್ಯಗಳೂ ಇದರಲ್ಲಿ ಪ್ರಕಟವಾಗಿವೆ.

ಹಳೆಯ ಗ್ರಂಥಗಳ ಪ್ರಕಟಣೆ: ಸಾಹಿತ್ಯ ಪೋಷಣೆಗೆ ಹೊಸ ಲೇಖಕರನ್ನು ಪ್ರೋತ್ಸಾಹಿಸುವುದರೊಂದಿಗೆ ಹಳೆಯ ಗ್ರಂಥಗಳನ್ನು ಹುಡುಕಿ ಪ್ರಕಟಿಸುವುದೂ ಅಷ್ಟೇ ಮಹತ್ವದ್ದಾಗಿದೆ. ಈ ದಿಸೆಯಲ್ಲಿ ಎನ್.ಆರ್.ಕರಿಬಸವ ಶಾಸ್ತ್ರಿಗಳ 'ವೀರಶೈವ ಗ್ರಂಥ ಪ್ರಕಾಶಿಕೆ' ಹೆಸರಿಸಬೇಕಾದದ್ದು. ಸಿದ್ಧಾಂತ ಶಿಖಾಮಣಿ, ಸಂಸ್ಕೃತ ಪಂಡಿತಾರಾಧ್ಯ ಚರಿತ್ರೆ, ಚೆನ್ನಬಸವೇಶ ವಿಜಯಂ (ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವ ಪುರಾಣದ ಗದ್ಯಾನುವಾದ), ಬಸವರಾಜ ವಿಜಯ, ವೀರಶೈವ ಧರ್ಮ ಶಿರೋಮಣಿ, ರೇವಣ ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ವೀರಶೈವ ದೀಕ್ಷಾವಿಧಿ, ಶಿವಯೋಗ ಪ್ರದೀಪಿಕಾ, ಸೌಂದರ ಪುರಾಣ, ರಕ್ಷಾ ಶತಕ, ಶಂಕರಲಿಂಗ ಕಂದ, ಸ್ತುತಿ

ಮುಕ್ತಾವಳಿ, ಸಟೀಕಾ ವೃಷಭೇಂದ್ರ ವಿಜಯ, ಶತಕ ತ್ರಯ, ಬಸವೇಶ ಜನನ, ಕರ್ನಾಟಕ ಶಬ್ದಮಂಜರಿ, ವೀರಶೈವ ಪೂಜಾವಿಧಿ ಈ ನಿಯತಕಾಲಿಕೆಯಲ್ಲಿ ಪ್ರಕಟವಾದ ಗ್ರಂಥಗಳಲ್ಲಿ ಕೆಲವು.

ಇಂಥದ್ದೇ ಇನ್ನೊಂದು ಪತ್ರಿಕೆ ಮಲ್ಲಿಕಾರ್ಜುನರು ೧೯೩೨ರಲ್ಲಿ ಆರಂಭಿಸಿದ 'ಸದ್ಧರ್ಮ ದೀಪಿಕೆ'. ಇದರಲ್ಲಿ ೯೩ ಸಣ್ಣದೊಡ್ಡ ವೀರಶೈವ ಗ್ರಂಥಗಳು, ೧೩೭ ಸಂಶೋಧನ ಲೇಖನಗಳು ಪ್ರಕಟಗೊಂಡಿವೆ.

ಫ.ಗು.ಹಳಕಟ್ಟಿಯವರ 'ಶಿವಾನುಭವ' ವಚನ ಸಾಹಿತ್ಯಕ್ಕೇ ಮೀಸಲಾದ ಪತ್ರಿಕೆಯಾಗಿತ್ತು. ಇದೇ ದಾರಿಯಲ್ಲಿ ಸಾಗಿದ ಇನ್ನೊಂದು ಪತ್ರಿಕೆ ಡಿ.ಎಲ್. ನರಸಿಂಹಾಚಾರ್ ಅವರ 'ಶರಣ ಸಾಹಿತ್ಯ'. ಪ್ರಾಚೀನ ಸಾಹಿತ್ಯದ ಪ್ರಕಟಣೆಯೊಂದಿಗೆ ಅವುಗಳ ವಿಶ್ಲೇಷಣೆ, ವಿಮರ್ಶೆಗಳು ಇವುಗಳಲ್ಲಿ ನಡೆದವು.

ಕಥೆಗಾಗಿಯೇ ಬಂದ ಪತ್ರಿಕೆಗಳು: ೧೯೨೭ರಿಂದ ಬೆಂಗಳೂರಿನಿಂದ ಅ.ನ.ಕೃ. ಸಂಪಾದಕತ್ವದಲ್ಲಿ 'ಕಥಾಂಜಲಿ' ಪತ್ರಿಕೆ ಹೊರ ಬಂತು. ೧೪ ತಿಂಗಳುಗಳ ಕಾಲ ಇದು ನಡೆಯಿತು. 'ತಿಳಿಗನ್ನಡದ ಸಣ್ಣ ಕಥೆಗಳ ಮಾಸಪತ್ರಿಕೆ' ಎಂದು ಹೇಳಿಕೊಂಡರೂ ಇದರಲ್ಲಿ ಪದ್ಯಗಳೂ ಇದ್ದವು. ಗ್ರಂಥ ವಿಮರ್ಶೆಗಳೂ ಪ್ರಕಟಗೊಳ್ಳುತ್ತಿದ್ದವು. 'ಕಥಾಂಜಲಿ' ಭಿನ್ನ ಆಶೋತ್ತರಗಳನ್ನು ಹೊಂದಿದ ಪತ್ರಿಕೆ. ಪತ್ರಿಕೆಯನ್ನು ಮಾರುಕಟ್ಟೆಯಲ್ಲಿ ಜನರು ಕೊಂಡು ಓದುವ ರೀತಿಯಲ್ಲಿ ಅನಕೃ ಪತ್ರಿಕೆ ಹೊರಡಿಸಲು ನಿರ್ಧರಿಸಿದರು. ಇದಕ್ಕಾಗಿ ದಪ್ಪನೆಯ ಹೊಳಪು ಕಾಗದವನ್ನು ಮುದ್ರಣಕ್ಕೆ ಬಳಸುತ್ತಿದ್ದರು. ಕಲೆ ಹಾಗೂ ಸಿನಿಮಾ ಚಿತ್ರಗಳನ್ನು ಪತ್ರಿಕೆಯ ಪುಟಗಳಲ್ಲಿ ಸೇರಿಸುತ್ತಿದ್ದರು. ಕಥಾಂಜಲಿ ಲೇಖಕರ ಬಳಗದಲ್ಲಿ ಜಿ.ಪಿ. ರಾಜರತ್ನಂ, ರಾ.ಶಿ., ಮ.ನ.ಮೂರ್ತಿ, ಡಾ.ಗೋಪಾಲಕೃಷ್ಣ ರಾವ್ ಮೊದಲಾದವರು ಸೇರಿದ್ದಾರೆ. ದೇಶ, ವಿದೇಶಗಳ ಅನ್ಯ ಭಾಷೆಯ ಕಥೆಗಳನ್ನು ಟಿ.ಪಿ.ಕೈಲಾಸಂ ಅವರ ಸಹಕಾರದೊಂದಿಗೆ ಕನ್ನಡಿಸಿ ಕಥಾಂಜಲಿಯಲ್ಲಿ ಅನಕೃ ಪ್ರಕಟಿಸುತ್ತಿದ್ದರು. ನಿಯಮಿತವಾಗಿ ನಾಟಕ ವಿಮರ್ಶೆ ಇದರಲ್ಲಿ ಬರುತ್ತಿತ್ತು.

'ಕಥಾಂಜಲಿ' ಪ್ರಕಟವಾದ ಹೊಸತರಲ್ಲಿ ಇದರ ಪರಿಚಯ 'ವಾಗ್ಭೂಷಣ'ದ ಪುಸ್ತಕ ಪರಿಚಯದಲ್ಲಿ ಬಂದಿದೆ.[೨೩]

'ಇದೊಂದು ಚಿಕ್ಕ ಕಥೆಗಳ ಮಾಸಪತ್ರಿಕೆ ಈ ನಮ್ಮ ಕಡೆಗೆ ೧-೨ ಅಂಕಗಳು ಬಂದಿದ್ದು ಅವುಗಳಲ್ಲಿ ಅನೇಕ ಸುಂದರವಾದ ಕತೆಗಳು ಪ್ರಕಟವಾಗಿವೆ. ಕತೆಗಳಲ್ಲಿ ಕೆಲವು ಕಟ್ಟುಕತೆಗಳಂತೆ ತೋರಿದರೂ ಕತೆಯ ಮಟ್ಟನ್ನು ಬಿಡದಿರುವುದರಿಂದ ಓದುಗರಿಗೆ ಅವುಗಳಿಂದ ಆನಂದವಾಗುವುದು. ಮನೋರಂಜನೆಯೊಂದಿಗೆ ಕೆಲವು ತಾತ್ವಿಕ

೨೩.ವಾಗ್ಭೂಷಣ, ಸಂಪುಟ ೩೩ ನವೆಂ. ೧೯೨೯, ಸಂ.೩

ವಿಚಾರಗಳನ್ನು ಓದುಗರ ಮನಸ್ಸಿನಲ್ಲಿ ಬಿಂಬಿಸುತ್ತಿರುವುದರಿಂದ ಪ್ರಯೋಜನಕಾರಿಯಾಗಿದೆ. ವಾರ್ಷಿಕ ಚಂದಾ ೨-೮-೦...

ಕನ್ನಡದಲ್ಲಿ ಇಂತಹ ಪ್ರಯತ್ನವು ಇದೇ ಮೊದಲನೆಯದಾಗಿರುವುದರಿಂದ ಎಲ್ಲರೂ ಪ್ರೋತ್ಸಾಹಿಸಿ ಸಂಪಾದಕರ ಉತ್ಸಾಹವನ್ನು ಹೆಚ್ಚಿಸಬೇಕು. ಸಂಪಾದಕರು ಕಾಗದ ಮುದ್ರಣಾದಿಗಳನ್ನು ಇನ್ನೂ ಹೆಚ್ಚು ಒಳ್ಳೆಯ ಸ್ಥಿತಿಗೆ ತರಬಹುದು. ಚಿತ್ರಗಳನ್ನು ಸೇರಿಸಿದರೆ ಓದುಗರಿಗೆ ಇನ್ನಷ್ಟು ಉತ್ಸಾಹವುಂಟಾಬಗಹುದು....'

'ವಾಗ್ಭೂಷಣ'ದಲ್ಲಿ ಗುರುತಿಸಿರುವಂತೆ ಮನೋರಂಜನೆಯೊಂದಿಗೆ ಕೆಲವು ತಾತ್ವಿಕ ವಿಚಾರಗಳನ್ನು ನೀಡುವುದು ಅನಕೃ ಉದ್ದೇಶವಾಗಿತ್ತು. ಎಡಪಂಥೀಯಚಿಂತನೆಯ ಅನಕೃ ಅದಕ್ಕೆ ಅನುಗುಣವಾಗಿಯೇ ಪತ್ರಿಕೆಯನ್ನು ಸಿದ್ಧಪಡಿಸಿದ್ದನ್ನು ಇದು ಸೂಚಿಸುತ್ತದೆ. ಕತೆಗಳನ್ನೇ ಪ್ರಕಟಿಸುವ ಉದ್ದೇಶದ 'ಕಥಾಕುಂಜ' ಪತ್ರಿಕೆಯನ್ನು ೧೯೩೪ರಲ್ಲಿ ಅರವಿಂದ ಜೋಶಿ ಬೆಂಗಳೂರಿನಲ್ಲಿ ಆರಂಭಿಸಿದರು. ಎರಡು ವರ್ಷಗಳ ಕಾಲ ನಡೆದ ಈ ಪತ್ರಿಕೆಯ ಸಂಪಾದಕತ್ವವನ್ನು ಪ್ಯಾಟಿ ಶಾಮರಾಯರೂ ವಹಿಸಿದ್ದರು ಎನ್ನುವುದು ಶ್ರೀನಿವಾಸ ಹಾವನೂರ ಅವರು ನೀಡಿರುವ ಪಟ್ಟಿಯಿಂದ ತಿಳಿದು ಬರುತ್ತದೆ. ೧೯೩೩ರಲ್ಲಿ ಪ್ರಾರಂಭವಾದ 'ಕತೆಗಾರ'ದ ಸಂಪಾದಕರು ಜಿ.ಎ. ನರಸಿಂಹಮೂರ್ತಿ. ೧೯೫೪ರ ವರೆಗೂ ಇದು ನಡೆಯಿತು. ಎಂ.ಎನ್. ನಾರಾಯಣರಾವ್, ಎಂ.ಎನ್. ಗೋಪಾಲರಾವ್ ಅವರೂ ಇದರ ಸಂಪಾದಕರಾಗಿದ್ದಂತೆ ತಿಳಿದು ಬರುವುದು. ೧೯೪೨ರಲ್ಲಿ ಜಿ.ಎಸ್. ಕೃಷ್ಣರಾವ್ ಸಂಪಾದಕತ್ವದಲ್ಲಿ 'ಕಥಾ ಚಂದ್ರಿಕೆ' ಪ್ರಕಟವಾಯಿತು. ಇದು ಒಂದೇ ವರ್ಷ ಬಾಳಿತು. ವಿ.ಗುಪ್ತ ಎನ್ನುವವರು ೧೯೩೮ರಿಂದ ೫೬ರ ವರೆಗೆ 'ಕಥಾವಳಿ'ಯನ್ನು, ೧೯೫೩ರಿಂದ ೫೬ರ ವರೆಗೆ ವಾಮನ ಅನಂತ ಹೊದಿಕೆ ಎನ್ನುವವರು 'ಕಥಾ ಸಂಗ್ರಹ' ಪತ್ರಿಕೆಯನ್ನು ಪ್ರಕಟಿಸಿದರು. ಈ ಎಲ್ಲ ಪತ್ರಿಕೆಗಳು ಮಾಸಿಕಗಳು ಮತ್ತು ಮುಖ್ಯವಾಗಿ ಕತೆಗಳನ್ನು ಪ್ರಕಟಿಸುತ್ತಿದ್ದವು.

ಜಯಂತಿ: ಸಾಹಿತ್ಯವನ್ನು ಪೋಷಿಸಿದ ಪತ್ರಿಕೆಗಳಲ್ಲಿ ಬೆಟಗೇರಿ ಕೃಷ್ಣ ಶರ್ಮರ 'ಜಯಂತಿ'ಗೆ ವಿಶಿಷ್ಟ ಸ್ಥಾನವಿದೆ. ಏಕ ವ್ಯಕ್ತಿಸಾಹಸದ ಈ ಪತ್ರಿಕೆ ೧೯೩೮ರಿಂದ ೧೯೬೬ರ ವರೆಗೆ ನಡೆಯಿತು. ಕೃಷ್ಣಶರ್ಮರಿಗೆ ಪತ್ರಿಕೋದ್ಯಮ ಹೊಸದಲ್ಲ. ಅವರು ೧೯೨೧ರಲ್ಲಿಯೇ 'ಮಾತೃಭೂಮಿ'ಯ ೧೨ ಸಂಚಿಕೆಗಳನ್ನು ಹೊರಡಿಸಿದ್ದರು. ಆ ಬಳಿಕ ಅವರು ಧಾರವಾಡದ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿದ್ದಾಗ ೧೯೨೫ರಿಂದ ೧೯೨೬ರ ವರೆಗೆ 'ಸ್ವಧರ್ಮ' ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದ್ದರು. ಇದರಲ್ಲಿಯೇ ಬೆಟಗೇರಿ ಕೃಷ್ಣ ಶರ್ಮರ ಆರಂಭ ಕಾಲದ ಕಥೆಗಳು ಇವೆ. ಇಲ್ಲಿಯೇ ಅವರಿಗೆ 'ಆನಂದಕಂದ' ಎಂಬ ಕಾವ್ಯನಾಮ ಗಟ್ಟಿಯಾದದ್ದು. ಈ ಪತ್ರಿಕೆಯಲ್ಲಿ ನವರಾತ್ರಿ ಮತ್ತು ವಿಜಯ ದಶಮಿಗಳ ಕುರಿತು ಹಲವು ಲೇಖನಗಳನ್ನು ಬರೆಯುವುದರ ಮೂಲಕ 'ಆನಂದಕಂದ'ರು ಕರ್ನಾಟಕಕ್ಕೆ ಒಂದು

ನಾಡಹಬ್ಬವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ೧೯೨೫ರಲ್ಲಿ ನಾಡಹಬ್ಬದ ಆಚರಣೆ ಮೊದಲಾಯಿತು. ನಾಡಹಬ್ಬದ ಬಗ್ಗೆ ೧೯೨೭ರಲ್ಲಿ 'ಸ್ವಧರ್ಮ' ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಿತು. 'ಸ್ವಧರ್ಮ'ದ ಲೇಖಕರ ಬಳಗದಲ್ಲಿ ದ.ರಾ.ಬೇಂದ್ರೆ, ನಾ.ಶ್ರೀ. ರಾಜಪುರೋಹಿತ, ಬುರ್ಲಿ ಬಿಂದು ಮಾಧವ, ರಂ.ಶ್ರೀ. ಮುಗಳಿ, ಶ್ರೀಧರ ಖಾನೋಳ್ಕರ, ಕಾವ್ಯಾನಂದ, ಕೃಷ್ಣಕುಮಾರ ಕಲ್ಲೂರ ಸೇರಿದ್ದಾರೆ. ಇವರೆಲ್ಲ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದವರು. ಇದರಲ್ಲಿ 'ಸವಿ' ಎಂಬ ಸ್ಥಿರ ಶೀರ್ಷಿಕೆಯಲ್ಲಿ ಬೇಂದ್ರೆಯವರು ಮತ್ತು ಇತರ ಲೇಖಕರು ಕವಿತೆಗಳ ಸೌಂದರ್ಯ ವಿವರಿಸುವ ಲೇಖನಗಳನ್ನು ಬರೆದರು. ಬೇಂದ್ರೆಯವರು ಇದರಲ್ಲಿ ಆನಂದಕಂದರ ಕೆಲವು ಪದ್ಯಗಳನ್ನು ವಿಮರ್ಶಿಸಿದ್ದಾರೆ. 'ಸವಿ' ಸಹೃದಯ ರಸ ವಿಮರ್ಶೆಯಾಗಿತ್ತು. ಸ್ವತಂತ್ರ ಕಥೆಗಳನ್ನು ಉತ್ತರ ಕರ್ನಾಟಕದಲ್ಲಿ ಪ್ರಕಾಶಿಸಿದ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆಯೂ 'ಸ್ವಧರ್ಮ'ಕ್ಕಿದೆ.

'ಸ್ವಧರ್ಮ'ದ ಬಳಿಕ ಬೆಟಗೇರಿಯವರು ಗೆಳೆಯರ ಗುಂಪಿನ 'ಜಯಕರ್ನಾಟಕ'ದಲ್ಲಿಯೂ ಕೆಲವು ಕಾಲ ಕೆಲಸ ಮಾಡಿದರು. ೧೯೩೮ರಲ್ಲಿ 'ಜಯಂತಿ'ಯ ಮೊದಲ ಸಂಚಿಕೆ ಪ್ರಕಟವಾಗಿದ್ದಾಗ ಅದರ ಪುಟಗಳ ಸಂಖ್ಯೆ ೭೨. ನಂತರದ ಸಂಚಿಕೆಗಳೆಲ್ಲವೂ ೮೦ ಪುಟಗಳನ್ನು ಹೊಂದಿತ್ತು. 'ಜಯಂತಿ'ಯ ವಿಶೇಷ ಎಂದರೆ ಅದರ ನಿಯಮಿತತನ. ಪ್ರತಿ ತಿಂಗಳ ಮೊದಲನೆ ತಾರೀಖಿಗೆ ಅದು ಪ್ರಕಟಗೊಳ್ಳುತ್ತಿತ್ತು. ಸಂಯುಕ್ತ ಸಂಚಿಕೆಯಾಗಿ ಅದು ಎಂದೂ ಹೊರಬರಲಿಲ್ಲ. 'ಜಯಂತಿ' ಮೂರು ವರ್ಷ ಮುಗಿಸಿ ನಾಲ್ಕನೆ ವರ್ಷದಲ್ಲಿ ಕಾಲಿಡುತ್ತಿದ್ದಂತೆ ಅದರ ನಾಲ್ವರು ಪಾಲುದಾರರಿಗೆ ಇದು ಲಾಭದಾಯಕ ಉದ್ಯಮವಲ್ಲ ಎಂದೆನಿಸಿ ಅದನ್ನು ನಿಲ್ಲಿಸಿ ಬಿಡಲು ಯೋಚಿಸಿದರು. ಇದರ ಪರಿಣಾಮವಾಗಿ ೧೯೪೧ರಿಂದ ೧೯೬೧ರ ವರೆಗೆ ಬೆಟಗೇರಿಯವರೇ ನಡೆಸಿದರು. ನಂತರ ಅದನ್ನು ಸಿ.ಎಸ್.ಕುಲಕರ್ಣಿ ಎನ್ನುವವರಿಗೆ ವಹಿಸಿ ಕೊಟ್ಟರು.

ಪತ್ರಿಕಾ ಸಂಪಾದಕನ ವ್ಯವಸಾಯವೆಂದರೆ ಅದೊಂದು ಸಮಾಜಿಕ ಸಂಸ್ಕೃತಿಯ ಶಿಕ್ಷಣದ ವ್ಯವಸಾಯ. ಸಮಾಜದ ಘಟಕಗಳಾದ ವ್ಯಕ್ತಿ ವ್ಯಕ್ತಿಗಳಿಗೆಲ್ಲ ನಿಜವಾದ ಜ್ಞಾನ ವಿಜ್ಞಾನದ ಪರಿಚಯ ಮಾಡಿಕೊಟ್ಟು ಅವರ ಮನಸ್ಸು ಹೃದಯಗಳನ್ನು ಆದರ್ಶದತ್ತ ತಿರುಗಿಸುವುದು ಅವನ ಕರ್ತವ್ಯ. ತ್ಯಾಗ, ತಪಸ್ಸು ತಿಳಿವಳಿಕೆಗಳೇ ವ್ಯಕ್ತಿಯ ಆದರ್ಶದ ಸಾಧನಗಳೆಂಬುದನ್ನು ಉತ್ಕಟ ಭಾವನೆಯಿಂದ ಪ್ರಚಾರ ಮಾಡುವವನೇ ನಿಜವಾದ ಸಂಪಾದಕ ಎಂಬ ಧ್ಯೇಯ ಧೋರಣೆಯೊಂದಿಗೆ ಸಂಪಾದಕನ ಹೊಣೆಯನ್ನು ಹೊತ್ತವರು ಕೃಷ್ಣಶರ್ಮರು. ಸಾಂಸ್ಕೃತಿಕ ಪುನರುತ್ಥಾನದ ಆದರ್ಶ ಇಟ್ಟುಕೊಂಡ 'ಜಯಂತಿ'ಯ ಎಲ್ಲ ಸಂಚಿಕೆಗಳೂ ಈ ದಿಕ್ಕಿನಲ್ಲಿ ನಡೆಸಿದ ಪ್ರಯತ್ನಗಳೇ ಆಗಿವೆ. ಹೃದಯ ಮತ್ತು ಬುದ್ಧಿ ಎರಡಕ್ಕೂ ಸಂಸ್ಕಾರ ನೀಡುವ ಲೇಖನಗಳು 'ಜಯಂತಿ'ಯಲ್ಲಿ ಪ್ರಕಟವಾಗಿವೆ.

'ಜಯಂತಿ' ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟದ ಅಭಿವ್ಯಕ್ತಿಗೆ

ವೇದಿಕೆಯಾಗುವ ಅವಕಾಶವನ್ನು ಪಡೆಯಿತು. ಮೂವತ್ತರ ದಶಕದ ನವೋದಯ, ಆನಂತರದ ಪ್ರಗತಿಶೀಲ, ನವ್ಯ ಸಾಹಿತ್ಯ ಘಟ್ಟಗಳನ್ನು ದಾಖಲಿಸಿದ 'ಜಯಂತಿ' ಸಾಹಿತ್ಯಕವಾಗಿ ಪ್ರಾತಿನಿಧಿಕ ಪತ್ರಿಕೆಯಾಗಿತ್ತು. ಆದರೆ 'ಜಯಂತಿ'ಯ ಅಭಿಮಾನ ನವೋದಯದಲ್ಲೇ ಸ್ಥಾಯಿಯಾಗಿತ್ತು. ಹೀಗಾಗಿ ಕೆಲವು ನವ್ಯ ಲೇಖಕರ ಆಗ್ರಹಕ್ಕೂ ಅವರು ಒಳಗಾದರು. ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯ ಚಳವಳಿಗಳನ್ನು ನವೋದಯದ ದೃಷ್ಟಿಕೋನದಿಂದಲೇ 'ಜಯಂತಿ' ಗ್ರಹಿಸಲು ಯತ್ನಿಸಿತು. ಹೊಸ ಸಾಹಿತ್ಯ ಚಳವಳಿಯನ್ನು ಹುಚ್ಚು ಉತ್ಸಾಹ ಎಂದು ಅದು ಬಗೆಯಿತು.

'ಜಯಂತಿ'ಯ ವಿಶಿಷ್ಟತೆಯಾದ 'ಮಂಗನ ಮಲ್ಲಿನಾಥತನ'ದಲ್ಲಿ ಪ್ರಗತಿಶೀಲ ಸಾಹಿತ್ಯದ ಬಗ್ಗೆ ಬಂದ ಟೀಕೆಯನ್ನು ನೋಡಬಹುದು.

"ಮರಗತಶೀಲ ಸಾಹಿತ್ಯ!

ಈಚೆಗೆ ಕೂಗೆದ್ದ ಪ್ರಗತಿಶೀಲ ಸಾಹಿತ್ಯದ ಗಲಾಟೆ ಕೇಳಿ ಅನೇಕರು ಗಾಬರಿಗೊಂಡಿದ್ದಾರೆ. ಆದರೆ ಮಂಗರಾಯರಿಗೆ ಮಾತ್ರ ಯಾವ ಗಾಬರಿಯೂ ಇಲ್ಲ. ಮಂಗರಾಯರಿಗೆ ಪರಿಚಿತವಾದ ಮರಗತಶೀಲ ಸಾಹಿತ್ಯದ ತತ್ವಕ್ಕಿಂತ ಯಾವ ಹೆಚ್ಚಿನ ತತ್ವವೇನೂ ಇದರಲ್ಲಿ ಇಲ್ಲ! ಗುರಿಯಿಲ್ಲದೆ ಹುಚ್ಚು ಉತ್ಸಾಹದಿಂದ ಕಂಡಕಂಡವರ ಮರಕ್ಕೆಹಾರುವುದು!.. .."[೨೪] ಪ್ರಗತಿಶೀಲರ ಅತ್ಯುತ್ಸಾಹಕ್ಕೆ ವಿಡಂಬನೆ ಇದು. ಇದನ್ನು ಆದ್ಯ ರಂಗಾಚಾರ್ಯರು (ಶ್ರೀರಂಗ) ಬರೆಯುತ್ತಿದ್ದರು. ನಾಡು ನುಡಿಗಳ ಬಗೆಗೆ ಸಾಂದರ್ಭಿಕ ಟೀಕೆ ಟಿಪ್ಪಣಿಗಳು, ವಿಡಂಬನೆಗಳು ಈ ಶೀರ್ಷಿಕೆಯಲ್ಲಿ ಪ್ರಕಟಗೊಳ್ಳುತ್ತಿತ್ತು. ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ಔಷಧಿಯಂತೆ ಕಾರ್ಯಮಾಡಿದ ಇದು ಮುಂದೆ 'ಪ್ರಜಾವಾಣಿ'ಯ 'ಛೂ ಬಾಣ', ಲಂಕೇಶರ 'ಟೀ!ಟೀ!', 'ನಾಡೋಜ'ದ 'ಹುಚ್ಚಿಗೊಂದು ಚುಚ್ಚುಮದ್ದು' ಮೊದಲಾದವುಗಳಿಗೆ ಪ್ರೇರಣೆ ಒದಗಿಸಿದ್ದರೆ ಆಶ್ಚರ್ಯವಿಲ್ಲ.

'ಜಯಂತಿ'ಯ ಲೇಖಕರ ಬಳಗ ಬಹಳ ದೊಡ್ಡದಿತ್ತು. ಬೇಂದ್ರೆ, ಕಾರಂತ, ಗೌರೀಶ ಕಾಯ್ಕಿಣಿ, ಅನಕೃ, ಮಾಸ್ತಿ, ಗೋಪಾಲಕೃಷ್ಣ ಅಡಿಗ, ಶಾಂತಿನಾಥ ದೇಸಾಯಿ, ಚಂದ್ರಶೇಖರ ಪಾಟೀಲ ಮೊದಲಾದವರೆಲ್ಲ ಇದರಲ್ಲಿ ಬರೆದಿದ್ದಾರೆ. ಮೈಸೂರು ಭಾಗದಲ್ಲಿ ರಾಜಾಶ್ರಯದಲ್ಲಿ ಸಾಹಿತ್ಯ ಪೋಷಣೆಗೆ ಒಳಗಾದಾಗ, ಉತ್ತರ ಕರ್ನಾಟಕ ಭಾಗದಲ್ಲಿ ಪ್ರೋತ್ಸಾಹವಿಲ್ಲದೆ ಅದು ಸೊರಗುತ್ತಿತ್ತು. ಸೃಜನಶೀಲ ಲೇಖಕ ಒಬ್ಬಂಟಿತನವನ್ನು ಅನುಭವಿಸುತ್ತಿದ್ದ. ಇದನ್ನು ನಿವಾರಿಸುವ ವೇದಿಕೆಯಾಗಿ 'ಜಯಂತಿ' ಕಾರ್ಯನಿರ್ವಹಿಸಿತು. ಅದೇ ಆಗ ಬರೆಯಲು ಆರಂಭಿಸಿದ್ದ ಚೆನ್ನವೀರ ಕಣವಿಯವರ ಭಾವಚಿತ್ರ, ಹಾಕಿ

೨೪.ಜಯಂತಿ ಸೆಪ್ಟೆಂಬರ್ ೧೯೪೩

ಪರಿಚಯದೊಂದಿಗೆ ಅವರ ಲೇಖನ ಪ್ರಕಟಿಸಿದ್ದು ಕಾಣಬಹುದು. ಕೇವಲ ಕಣವಿ ಮಾತ್ರವಲ್ಲ ಆ ಕಾಲದ ಎಲ್ಲ ಲೇಖಕರಿಗೂ ಇದೇ ಆತಿಥ್ಯವಿತ್ತು. ಹೀಗೆ 'ಜಯಂತಿ' ಉತ್ತರ ಕರ್ನಾಟಕದಲ್ಲಿ ಲೇಖಕರ ಪಡೆಯನ್ನು ಹುಟ್ಟುಹಾಕಿತು. ಜೊತೆಯಲ್ಲಿ ಸದಭಿರುಚಿಯ ಓದುಗರನ್ನೂ ಬೆಳೆಸಿತು. ರಾಜಕೀಯವಾಗಿ ಉತ್ತರ ಕರ್ನಾಟಕದಲ್ಲಿ ಕನ್ನಡವು ಅತಂತ್ರಗೊಂಡಿದ್ದಾಗ ಈ ಪ್ರಯತ್ನ ಮೆಚ್ಚುಗೆಗೆ ಅರ್ಹವಾದುದು.

'ಜಯಂತಿ'ಯಲ್ಲಿ ಕನ್ನಡಕ್ಕೆ ಹೊಸತೆನಿಸಿದ 'ವಿಮರ್ಶೆಯ ಶಿಕ್ಷಣ ರಂಗ' ಎಂಬ ಶೀರ್ಷಿಕೆಯಡಿ ಪ್ರಾಯೋಗಿಕ ವಿಮರ್ಶೆ ಇದರಲ್ಲಿ ದೊರೆಯುತ್ತದೆ. ಕರ್ನಾಟಕದ ಏಕೀಕರಣದ ಬಗೆಗೂ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಕೆಲಸವನ್ನೂ ಅವರು ಮಾಡಿದ್ದಾರೆ. ಒಟ್ಟಾರೆ ಉತ್ತರ ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ಜಯಂತಿ ತನ್ನ ಛಾಪನ್ನು ಮೂಡಿಸಿದೆ.

ಉಷಾ: ಜಯಂತಿಯ ಸಂದರ್ಭದಲ್ಲಿ ಪ್ರಗತಿಶೀಲ ಚಳವಳಿಯ ಕುರಿತು ಮಾತು ಬಂತು. ಪ್ರಗತಿಶೀಲ ಚಳವಳಿಯನ್ನು ಬಲಪಡಿಸಿದ ಒಂದು ಪತ್ರಿಕೆಯನ್ನು ಇಲ್ಲಿ ಸ್ಮರಿಸಬೇಕು. ಅದು ಬಸವರಾಜ ಕಟ್ಟೀಮನಿಯವರು ಸಂಪಾದಕರಾಗಿದ್ದ 'ಉಷಾ' ಮಾಸಿಕ. ೧೯೪೪ರಲ್ಲಿ ಬೆಂಗಳೂರಿಗೆ ತೆರಳಿದ ಕಟ್ಟಿಮನಿಯವರು ಎಸ್.ನಂಜಪ್ಪನವರೊಂದಿಗೆ ಸೇರಿಕೊಂಡು 'ಉಷಾ' ಪತ್ರಿಕೆ ಆರಂಭಿಸಿದರು. 'ಉಷಾ'ದ ಮೂಲಕ ಅನೇಕ ತರುಣ ಲೇಖಕರು ಬೆಳಕಿಗೆ ಬಂದರು. ಕೋ.ಚೆನ್ನಬಸಪ್ಪ, ಪಾಟೀಲ ಪುಟ್ಟಪ್ಪ, ಕೆ.ಈಶ್ವರನ್, ಗೋಪಾಲಕೃಷ್ಣ ಅಡಿಗ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕಟ್ಟೀಮನಿಯವರು 'ಉಷಾ'ದ ಸಂಪಾದಕರಾಗಿದ್ದುದು ಕೇವಲ ಎರಡೇ ವರ್ಷ. ಈ ಅಲ್ಪ ಅವಧಿಯಲ್ಲಿಯೇ ಪತ್ರಿಕೆಯ ಕೊಡುಗೆ ಅಗಾಧವಾದದ್ದು. "ಅದರಲ್ಲಿ ಪ್ರಕಟವಾಗುತ್ತಿದ್ದ ಪ್ರಗತಿಶೀಲ ಕಥೆ, ಲೇಖನಗಳೂ, ನಿರ್ದಾಕ್ಷಿಣ್ಯವಾದ ಟೀಕೆ ಟಿಪ್ಪಣಿಗಳೂ, ಕೆಚ್ಚಿನ ಸಂಪಾದಕೀಯ ಬರವಣಿಗೆಯೂ ನಮ್ಮನ್ನು ಆಕರ್ಷಿಸಿದ್ದುವು. ಹಾಗೆಯೇ ಸಂಪಾದಕರ ಬಗ್ಗೆ ಕುತೂಹಲವನ್ನೂ ಕೆರಳಿಸಿದ್ದವು. ಧಾರವಾಡಕ್ಕೆ ಪತ್ರಿಕೆ ಬಂದರೆ ಒಂದೆರಡು ದಿನಗಳಲ್ಲಿಯೇ ಪ್ರತಿಗಳು ಮಾರಾಟವಾಗಿ ಹೋಗುತ್ತಿದ್ದವು,"[೨೫] ಎಂದು ಚನ್ನವೀರ ಕಣವಿಯವರು ಬರೆದಿದ್ದಾರೆ.

'ಉಷಾ' "ಪ್ರಗತಿಶೀಲ ಸಾಹಿತ್ಯದ ಒಂದು ಮಹಾಧ್ವನಿಯಾಗಿ, ಯುವಜನಾಂಗದ ಆಶೆ, ಆಕಾಂಕ್ಷೆಗಳಿಗೊಂದು ವೇದಿಕೆಯಾಗಿ, ಪಟ್ಟಭದ್ರ ಹಿತಾಸಕ್ತರಿಗೊಂದು ಸಿಂಹಸ್ವಪ್ನವಾಗಿ ಅದು ಮೆರೆಯುತ್ತಿತ್ತು. ನನ್ನಂಥ ಅನೇಕರು ಅದು ಯಾವಾಗ ಕೈಸೇರೀತೋ, ಯಾವಾಗ ಅದನ್ನೋದಿ ಸಂತೋಷಿಸಿ ಸರೀಕರೊಡನೆ ಪಾಲುಗೊಂಡೇವೋ ಎಂದು ತವಕಿಸುತ್ತಿದ್ದೆವು; ನಿಡು ನಿರೀಕ್ಷೆಯಲ್ಲಿರುತ್ತಿದ್ದೆವು" ಎಂದು ಎಂ.ಅಕಬರಅಲಿ ಬರೆಯುತ್ತಾರೆ. ಸಾಹಿತ್ಯ

೨೫.ಕಟ್ಟೀಮನಿ ಬದುಕು ಬರೆಹ; ಲೇಖನ- ಕ್ರಾಂತಿಕಾರಿ ಕಾದಂಬರಿಕಾರ- ಚನ್ನವೀರ ಕಣವಿ- ಪುಟ ೨೫

ಕ್ಷೇತ್ರದಲ್ಲಿ ತಪ್ಪಡಿಯಿಡಲನುವಾಗುತ್ತಿದ್ದ ತಮ್ಮ ಗದ್ಯ ಗೀತವೊಂದು ಕಟ್ಟೀಮನಿಯವರ ಸ್ನೇಹಿತರಾಗಿದ್ದ ತಮ್ಮ ಗುರುಗಳೊಬ್ಬರ ಮುಖಾಂತರ ಮೊದಲ ಬಾರಿಗೆ 'ಉಷಾ'ದಲ್ಲಿ ಪ್ರಕಟವಾಯಿತು ಎಂದೂ ಅವರು ಸ್ಮರಿಸಿದ್ದಾರೆ.[೨೬]

ಕಟ್ಟೀಮನಿ ಎಂಥ ಧೈರ್ಯಶಾಲಿ ಸಂಪಾದಕರಾಗಿದ್ದರು ಎನ್ನುವುದನ್ನು ಕೋ.ಚೆನ್ನಬಸಪ್ಪ ನೆನೆಯುತ್ತಾರೆ. ಬೆಳಗಾವಿಯ ಕೆಲವು ಗೆಳೆಯರು ಒಂದು ಕಥಾ ಸಂಕಲನಕ್ಕೆ ಕೋ.ಚೆ.ಯವರಿಗೆ ಒಂದು ಕಥೆ ಬರೆಯಲು ಹೇಳಿದ್ದರು. ಇವರು ಬರೆದ ಕಥೆ ಉಗ್ರವಾಗಿದೆ ಎಂಬ ಕಾರಣಕ್ಕೆ ಅದನ್ನು ಪ್ರಕಟಿಸಲು ಹಿಂಜರಿದರು. ಇದೇ ಸಂದರ್ಭದಲ್ಲಿ ಕಟ್ಟೀಮನಿಯವರು 'ಉಷಾ'ಗೆ ಲೇಖನ, ಕತೆ, ಕವನ ಕಳುಹಿಸಲು ಕೋರಿ ಪತ್ರ ಬರೆಯುವರು. ಇವರು ದ್ವಿತೀಯ ಮಹಾಯುದ್ಧದ ದುಷ್ಪರಿಣಾಮಗಳ ಬಗ್ಗೆ 'ಯಾರಿಗಾಗಿ' ಎಂಬ ಕತೆ ಬರೆದು ಕಳುಹಿಸಿದರು. ಅದು ಪ್ರಕಟವಾಗುತ್ತದೆ. ಏಕೀಕರಣದ ಪ್ರಶ್ನೆಯನ್ನು ಕುರಿತು ಅತ್ಯಂತ ಕಟುವಾದ ಲೇಖನಗಳನ್ನು ಅವರು ಒಂದಕ್ಷರವೂ ಬದಲಾಯಿಸದೆ ಉಷಾದಲ್ಲಿ ಪ್ರಕಟಿಸಿದರು ಎಂದಿದ್ದಾರೆ.[೨೭]

ಜೀವನ: ಈ ಅವಧಿಯ ಸಾಹಿತ್ಯ ಪತ್ರಿಕೆಗಳ ಪರಿಚಯವನ್ನು 'ಜೀವನ' ಪತ್ರಿಕೆಯಂದಿಗೆ ಮುಗಿಸಬಹುದು. 'ಜೀವನ' ಪತ್ರಿಕೆಯ ಇತಿಹಾಸವನ್ನು ನಾಲ್ಕು ಹಂತಗಳಲ್ಲಿ ಗುರುತಿಸಲಾಗುವುದು.

೧.ಧಾರವಾಡದ 'ಗೆಳೆಯರ ಗುಂಪು' ಪತ್ರಿಕೆ ನಡೆಸಿದ ಹಂತ.

೨.ಬೆಂಗಳೂರು 'ಜೀವನ ಕಾರ್ಯಾಲಯ' ಪತ್ರಿಕೆ ನಡೆಸಿದ ಹಂತ.

೩.ಬೆಂಗಳೂರು 'ಗಾಂಧಿ ಸಾಹಿತ್ಯ ಸಂಘ'ದ ಗೆಳೆಯರು ಪತ್ರಿಕೆ ನಡೆಸಿದ ಹಂತ.

೪.ಅಂತಿಮ ಹಂತ.

ಮಾಸ್ತಿಯವರು 'ಕಾವ್ಯಾರಾಮ' ಎಂಬ ಒಂದು ಸೇವಾಸಂಸ್ಥೆಯನ್ನು ಮತ್ತು ಅದೇ ಹೆಸರಿನ ಒಂದು ಮಾಸಪತ್ರಿಕೆಯನ್ನು ನಡೆಸುವ ಕನಸು ಕಂಡಿದ್ದರು. 'ಕಾವ್ಯಾರಾಮ'ವೇ 'ಜೀವನ' ಎಂಬ ಹೆಸರಿನಿಂದ ೧೯೩೯ರ ಜೂನ್ ತಿಂಗಳಿನಿಂದ ಧಾರವಾಡದಲ್ಲಿ ಆರಂಭವಾಯಿತು. ದ್ವಿತೀಯ ಮಹಾಯುದ್ಧದ ಕಷ್ಟ ನಷ್ಟದ ಕಾಲದಲ್ಲಿಯೂ ಪತ್ರಿಕೆ ದ.ರಾ.ಬೇಂದ್ರೆ, ವಿ.ಕೃ. ಗೋಕಾಕ ಮತ್ತು ರಂ.ಶ್ರೀ.ಮುಗಳಿ ಸಂಪಾದಕತ್ವದಲ್ಲಿ ಮಾಸ ಪತ್ರಿಕೆಯಾಗಿ ಚೆನ್ನಾಗಿ ನಡೆಯಿತು. ಕಾಗದದ ಕೊರತೆ ಮೊದಲಾದ ಕಾರಣಗಳಿಂದ ನಾಲ್ಕನೆ ವರ್ಷ ಪತ್ರಿಕೆಯನ್ನು ಅನಿವಾರ್ಯವಾಗಿ ತ್ರೈಮಾಸಿಕವನ್ನಾಗಿ ಮಾಡಬೇಕಾಯಿತು. 'ಜೀವನ' ಈ ಮೊದಲ ಹಂತದಲ್ಲಿ ನಡೆದದ್ದೇ ಆದರ ಅತ್ಯುತ್ತಮ ಕಾಲ ಎಂದು ಮಾಸ್ತಿಯವರೇ

೨೬.ಅದೇ- ಕುಂದರನಾಡಿನ ಕೆಚ್ಚು; ಎಂ.ಅಕಬರಅಲಿ ಪುಟ- ೭೦

೨೭.ಅದೇ- ಇಂಗಿತಜ್ಞ ಗೆಳೆಯ; ಕೋ.ಚೆನ್ನಬಸಪ್ಪ ಪುಟ- ೮೫

ಹೇಳಿದ್ದಾರೆ. "ಅಂದು ನಡೆದಷ್ಟು ಚೆನ್ನ ಮರಳಿ ಈಚೆಗೆ ಎಂದೂ ನಡೆದಿಲ್ಲ. ಆ ಗಾತ್ರ, ಆ ಲೇಖನ ವೈಭವ, ಆ ಉತ್ಸಾಹ ಆ ಮೂರು ವರ್ಷ ಪತ್ರಿಕೆಯ ಸ್ವರ್ಣ ಯುಗದ ಲಕ್ಷಣ ಆದವು"[೨೮] ಎಂದು ಮಾಸ್ತಿಯವರೇ ಹೇಳಿಕೊಂಡಿದ್ದಾರೆ. ಜೀವನಕ್ಕೆ ಸುಮಾರು ೧೫೦೦ ಚಂದಾದಾರರಿದ್ದರು. ಪ್ರತಿ ತಿಂಗಳು ಮೊದಲನೆ ತಾರೀಖಿಗೆ ಅದು ಹೊರಬರುತ್ತಿತ್ತು. ಜಿ.ಎಸ್. ಶಿವರುದ್ರಪ್ಪ, ರಾಮಚಂದ್ರ ಶರ್ಮ, ಕೆ.ಎಸ್. ನರಸಿಂಹಸ್ವಾಮಿ, ಬಾಗಲೋಡಿ ದೇವರಾಯ ಮೊದಲಾದವರು ಬೆಳಕಿಗೆ ಬಂದದ್ದು 'ಜೀವನ'ದ ಮೂಲಕವೇ.

ಸಾಹಿತ್ಯಕವಾಗಿ ಮಾಸ್ತಿಯವರ ಕಾಲದ ಜೀವನಕ್ಕಿಂತ ಬೇಂದ್ರೆ, ಮತ್ತು ಗೆಳೆಯರ ಕಾಲದ ಜೀವನವೇ ಸಂಪುಷ್ಟವಾದದ್ದು. ಮಾಸ್ತಿಯವರ ಕಾಲದಲ್ಲಿ ಅವರು ತಪ್ಪದೇ ಸಂಪಾದಕೀಯಗಳನ್ನು ಬರೆಯುತ್ತಿದ್ದರು. ಮಾಸ್ತಿಯವರು ಒಂದು ಸಲ ಸಂಪಾದಕೀಯವನ್ನು ಬರೆದಿರಲಿಲ್ಲ. ಆಗ ವಾಚಕರೊಬ್ಬರು, 'ಪತ್ರಿಕೆ ತಿಲಕವನ್ನು ಇಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು' ಎಂದು ಬರೆದಿದ್ದಾರೆ. ಸಾಹಿತ್ಯ ಪೋಷಣೆಗೆ ಹುಟ್ಟಿಕೊಂಡ ಜೀವನದ ಸಂಪಾದಕೀಯದಲ್ಲಿ ರಾಜಕೀಯ ವಿಚಾರಗಳೇ ಹೆಚ್ಚಿಗೆ ಇರುತ್ತಿದ್ದವು. ಇದು ಸರಿಯೇ ಎಂಬ ಪ್ರಶ್ನೆ ಆಗಾಗ ಎದ್ದಿದೆ. ಅದಕ್ಕೆ ಮಾಸ್ತಿಯವರ ಉತ್ತರ ಹೀಗಿತ್ತು, "ಈ ಟಿಪ್ಪಣಿಗಳು ಈ ಪರಿಮಾಣದಲ್ಲಿ ರಾಜಕೀಯವನ್ನು ಹರಿಸದೆ ಇದ್ದರೆ ಚೆನ್ನಾಗಿತ್ತು ಎಂದು (ವಾಚಕರು) ಸೂಚಿಸಿದ್ದಾರೆ. ಸಾಹಿತ್ಯ ಜೀವನವನ್ನೆಲ್ಲ ಒಳಗೊಳ್ಳುವ ತತ್ವ. ಅದು ರಾಜಕೀಯವನ್ನು ಬಿಟ್ಟು ಸೇವೆ ನಡಸಿಯೇನು ಎಂದು ಹೇಳುವಂತಿಲ್ಲ."[೨೯]

ಮಾಸ್ತಿ ತಮ್ಮ ಸಂಪಾದಕೀಯದಲ್ಲಿ, ಅನೇಕ ಸಂಗತಿಗಳನ್ನು ಕುರಿತು ತಮ್ಮ ಚಿಂತನೆಗಳಿಗೆ ರೂಪು ಕೊಟ್ಟಿದ್ದಾರೆ. ಕರ್ನಾಟಕದ ಅತ್ಯುಚ್ಚ ಸಂಸ್ಕೃತಿಯ ದೃಷ್ಟಿಯೇನು ಎಂಬುದನ್ನು ತಮ್ಮ ದೃಷ್ಟಿಕೋನದಿಂದ ತಿಳಿಸಲು ಪ್ರಯತ್ನಿಸಿದ್ದಾರೆ. ಲಿಬರಲ್ ಮನೋಭಾವದ ಭಾರತೀಯನೊಬ್ಬನ ಮನಸ್ಸು ಹೇಗೆ ಹರಿಯುತ್ತಿತ್ತು ಎಂಬುದನ್ನು ಈ ಟಿಪ್ಪಣಿಗಳು ಸೂಚಿಸುತ್ತವೆ. ಮಾಸ್ತಿಯವರ ಬದುಕು ಬರೆಹಗಳನ್ನು ಸರಿಯಾಗಿ ಗ್ರಹಿಸಲು ಈ ಟಿಪ್ಪಣಿಗಳ ತಿಳಿವಳಿಕೆ ಅಗತ್ಯ.[೩೦] ನಾಡು ನುಡಿಯ ಬಗ್ಗೆ, ದೇಶ, ಕಾಲ, ಧರ್ಮಗಳ ಬಗ್ಗೆ ಕಾಳಜಿ ಹೊಂದಿದ್ದ ಮಾಸ್ತಿಯವರ ಸಂಪಾದಕೀಯದ ದೊಡ್ಡ ಕೊರತೆ ಎಂದರೆ ಸಾಹಿತ್ಯದ ಸೊಗಸು, ಸೂಕ್ಷ್ಮ ಒಳನೋಟಗಳು ಅದರಲ್ಲಿ ಇಲ್ಲದೆ ಇದ್ದುದು. ಉಪದೇಶದ ದಾಟಿ ಧಾರಾಳವಾಗಿ ಅದರಲ್ಲಿ ಕಂಡುಬರುತ್ತದೆ.

ಮಾಸ್ತಿಯವರ ಕಾಲದ 'ಜೀವನ' ಅತ್ಯುತ್ತಮ ಸಾಹಿತ್ಯಪತ್ರಿಕೆಯೇನಾಗಿರಲಿಲ್ಲ. ಒಂದೆರಡು ಸಂದರ್ಭಗಳನ್ನು ಬಿಟ್ಟರೆ ಸಾಹಿತ್ಯಿಕ ವಾಗ್ವಾದಗಳಿಗೆ ಅದು ತೆರೆದುಕೊಳ್ಳಲಿಲ್ಲ.

---

೨೮. ಜೀವನ ಪತ್ರಿಕೆ ಉತ್ಸವ ಸಂಚಿಕೆ. ಮೇ ೧೯೬೫ – ಜೀವನ ಪತ್ರಿಕೆಯ ಕಥೆ – ಮಾಸ್ತಿ ವೆಂಕಟೇಶ ಅಯ್ಯಂಗಾರ – ಪುಟ ೧೩.

೨೯. ಮಾಸ್ತಿ ಸಮಗ್ರ ದರ್ಶನ: ಜೀವನ ಕಾರ್ಯಾಲಯದ ಮಾಸ್ತಿ – ಪುಟ ೧೫೬

೩೦. ಅದೇ, ಚಿ.ಶ್ರೀನಿವಾಸರಾಜು – ಪುಟ ೧೪

ಆಗೊಂದು ಈಗೊಂದು ಉತ್ತಮ ಸಾಹಿತ್ಯಕ ಲೇಖನಗಳು ಪ್ರಕಟವಾಗಿವೆ. ಕೆಲವು ನೀರಸ ಧಾರಾವಾಹಿಗಳು ಕಾಣಿಸಿಕೊಂಡಿವೆ. ಸಾಹಿತ್ಯ ಚಳವಳಿಗಳ ಕಾವು ತೀವ್ರಗೊಂಡ ಸಂದರ್ಭದಲ್ಲಿ ಸೃಜನಶೀಲ ಬರೆಹಗಳ ಬಗ್ಗೆ ಆರೋಗ್ಯಕರ ಸಂವಾದಕ್ಕೆ ಅದು ವೇದಿಕೆ ಆಗಲಿಲ್ಲ. ಮುಸಲ್ಮಾನರಲ್ಲಿ 'ಮೋಜಿನ್' ಇರುವ ಹಾಗೆ 'ಜೀವನ' ಪತ್ರಿಕೆಯಾಗಿತ್ತು ಮಾಸ್ತಿಯವರಿಗೆ. ಬೆಳಗಾದಾಗ ಜನರನ್ನು ಪ್ರಾರ್ಥನೆಗೆ ಕೂಗಿ ಎಬ್ಬಿಸುವುದು ಅವನ ಕೆಲಸ. 'ನಾನು ಕೂಗಿದಾಗ ಹೆಚ್ಚು ಜನ ಕೇಳಲಿಲ್ಲ' ಎನ್ನುವ ಮಾತನ್ನು ಅವನು ಆಡುವಂತಿಲ್ಲ. ಇಂತಹವರು ಮಲಗಿದ್ದಾಗ ಕೂಗಿ ಎಬ್ಬಿಸುವ ಕೆಲಸ ಅವನದು. ಕನ್ನಡ ನಾಡಿನಲ್ಲಿ ನಾನು ಮಾಡಿದುದು ಈ 'ಮೋಜಿನ್ ಕೆಲಸ' ಎಂದು ಅವರೇ ಹೇಳಿಕೊಂಡಿದ್ದು 'ಜೀವನ'ದ ಸರಿಯಾದ ಮೌಲ್ಯಮಾಪನ ಎನ್ನಬಹುದು.

ನವೋದಯ ಕಾಲದ ಪ್ರಮುಖ ಲೇಖಕರೆಲ್ಲ ಪತ್ರಿಕೆಯೊಂದನ್ನು ತಾವೇ ನಡೆಸುತ್ತಿದ್ದವರು. ಅವರ ಸಾಲಿಗೆ ಮಾಸ್ತಿಯವರೂ ಸೇರಿದರು. ಸಾಹಿತ್ಯ ಸೃಷ್ಟಿಗೆ ಕನ್ನೆ ನೆಲ ದೊರಕಿತ್ತು. ಅಭಿವ್ಯಕ್ತಿ ಹಲವು ನಿಟ್ಟಿನಲ್ಲಿ ಕಾಣಿಸಿಕೊಂಡಾಗ ಅದಕ್ಕೆ ವಾಹಕವಾಗುವ ಅವಕಾಶವನ್ನು 'ಜೀವನ' ಕಲ್ಪಿಸಿಕೊಂಡಿತು.

೧೯೪೭ರಲ್ಲಿ ಭಾರತ ಸ್ವಾತಂತ್ರ್ಯವನ್ನು ಗಳಿಸಿತು. ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ಕರ್ನಾಟಕದ ಏಕೀಕರಣ ಆಗಿತ್ತು. ಇದೇ ಸಮಯಕ್ಕೆ ಧ್ಯೇಯಕ್ಕಾಗಿ ನಡೆಸುತ್ತಿದ್ದ ಪತ್ರಿಕೆ ಉದ್ಯಮದ ಸ್ವರೂಪವನ್ನು ಪಡೆದುಕೊಂಡಿತು. ಮಾರುಕಟ್ಟೆಯ ಮೇಲೆ ಗಮನ ಕೇಂದ್ರೀಕರಿಸಿ ಪತ್ರಿಕೆಗಳು ಹೊರ ಬಂದವು. ಇದರ ಜೊತೆಯಲ್ಲಿಯೇ ಪತ್ರಿಕೆಗಳು ವಾಣಿಜ್ಯ ಜಾಹೀರಾತುಗಳ ಪ್ರಕಟಣೆಗೆ ಗಮನ ನೀಡತೊಡಗಿದವು. ಇದು ಔದ್ಯಮೀಕರಣಗೊಂಡ ಪತ್ರಿಕೆಯ ಅಗತ್ಯವೂ ಆಗಿತ್ತು. ಪತ್ರಿಕೆ ನಾಲ್ಕಾರು ಜನ ಸ್ನೇಹಿತರು ಸೇರಿ ಕಷ್ಟವೋ ನಷ್ಟವೋ ಹವ್ಯಾಸವೆಂದು ನಡೆಸುವುದು ಹಾಸ್ಯಾಸ್ಪದ ಸಂಗತಿಯಾಗಿ ಈಗ ತೋರತೊಡಗಿತು. ೩೦ರ ದಶಕದಲ್ಲಿಯೇ ಹುಟ್ಟಿಕೊಂಡ ಸಂಯುಕ್ತ ಕರ್ನಾಟಕ, ೫೦ರ ದಶಕದ ಪ್ರಜಾವಾಣಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಲ್ಲಿ ವ್ಯಾಪಕ ಜಾಲವನ್ನು ನೇಯ್ದವು. ನೂರಾರು ಕೆಲಸಗಾರರನ್ನು ಇಟ್ಟುಕೊಂಡು ಅವರಿಗೆ ಸಂಬಳ, ಭತ್ತೆ ನೀಡಿ ಲಾಭದಾಯಕವಾಗಿ ಪತ್ರಿಕೆಯನ್ನು ನಡೆಸತೊಡಗಿದ್ದನ್ನು ಕಾಣಬಹುದು. ಇವುಗಳ ಸಾಲಿಗೆ ೭೦ರ ದಶಕದಲ್ಲಿ ಕನ್ನಡಪ್ರಭ ಸೇರಿಕೊಂಡಿತು. ಕರಾವಳಿ ಭಾಗದಲ್ಲಿ ಉದಯವಾಣಿ ಜನಪ್ರಿಯವಾಯಿತು. ಈ ಪತ್ರಿಕೆಗಳು ಪ್ರಕಟಿಸುತ್ತಿದ್ದ ವಾರದ ಪುರವಣಿಗಳಲ್ಲಿ ಸಾಹಿತ್ಯದ ಭಾಗವೂ ಇರುತ್ತವೆ. ಒಟ್ಟಾರೆ ಇವುಗಳ ಆಯ್ಕೆ ಸರ್ವಜನ ಮಾನ್ಯವಾಗುವಂಥದ್ದಾಗಿತ್ತು. ಹೀಗಾಗಿ ಗಂಭೀರ ಸಾಹಿತ್ಯ, ಹೊಸ ಸಾಹಿತ್ಯ ಚಳವಳಿಗಳು, ಸಾಹಿತ್ಯಕ ಸಂವಾದ, ವಾಗ್ವಾದಗಳು ಇವುಗಳಿಗೆ ಬೇಕಾಗಲಿಲ್ಲ. ಇವುಗಳಿಗೆ ಅಪವಾದವೆನ್ನುವಂತೆ ನವ್ಯ ಸಾಹಿತ್ಯದ ಬರೆಹಗಳಿಗೆ ಪ್ರಜಾವಾಣಿ ಅವಕಾಶವನ್ನು ಒದಗಿಸಿತು. ವೈ.ಎನ್.ಕೃಷ್ಣಮೂರ್ತಿ ಅದರ ಸಂಪಾದಕರಾಗಿದ್ದಾಗ ನವ್ಯ

ಚಳವಳಿಗೆ ಅವರು ಉತ್ತೇಜನ ನೀಡಿದರು. ಆದರೆ ಎಲ್ಲ ಜನಪ್ರಿಯ ಪತ್ರಿಕೆಗಳೂ ಇಷ್ಟೊಂದು ಉದಾರವಾಗಿ ಇರಲಿಲ್ಲ. ಹೀಗಾಗಿ ಸಾಹಿತ್ಯಕ ಚಳವಳಿಗಳನ್ನೇ ಪ್ರತಿಪಾದಿಸುವ ಪತ್ರಿಕೆಗಳು ಮುಂದಿನ ದಿನಗಳಲ್ಲಿ ಹುಟ್ಟಿಕೊಂಡವು. ಸಾಕ್ಷಿ, ಸಂಕ್ರಮಣ, ರುಜುವಾತು, ಶೂದ್ರ ಹೀಗೆ ದೊಡ್ಡ ಪಟ್ಟಿಯನ್ನೇ ನೀಡಬಹುದು.

ಏಕೀಕರಣ, ಸಾಹಿತ್ಯ ಮತ್ತು ಪತ್ರಿಕೆ:

ಕನ್ನಡ ನವೋದಯ ಸಾಹಿತ್ಯದ ಪ್ರೇರಣೆಗಳ ಮೂಲ ನಾಡು ನುಡಿಗಳ ಪ್ರೇಮದಲ್ಲಿಯೇ ಇದೆ ಎನ್ನುವುದನ್ನು ಈಗಾಗಲೆ ಹೇಳಲಾಗಿದೆ. ನವೋದಯದ ಕಾಲದಲ್ಲಿ ಕನ್ನಡ ನಾಡಿನ ಏಕೀಕರಣದ ಚಳವಳಿ ತೀವ್ರವಾಗಿತ್ತು. ಸಹಜವಾಗಿಯೇ ಅದರ ಪ್ರಭಾವ ಅಂದಿನ ಸಾಹಿತ್ಯದ ಮೇಲೆ ಬಿದ್ದಿದೆ. ನಾಡಿನ ಏಕೀಕರಣದ ಜೊತೆಯಲ್ಲಿ ದೇಶದ ಸ್ವಾತಂತ್ರ್ಯವೂ ಸಾಹಿತಿಗಳ ಕಾಳಜಿಯಾಯಿತು. ಇವುಗಳ ಜೊತೆಯಲ್ಲಿ ಸಮಾಜದ ಸುಧಾರಣೆ ಆಗಬೇಕೆಂಬ ಕಾಳಜಿಯೂ ಅಂದಿನ ಸಾಹಿತಿಗಳಲ್ಲಿ ಇತ್ತು. ಇವೆಲ್ಲಕ್ಕೆ ಪೂರಕವಾಗಿ ಅಂದಿನ ಪತ್ರಿಕೆಗಳು ಕೆಲಸ ಮಾಡಿವೆ.

ಬಂಗಾಳ ವಿಭಜನೆಯ ನಂತರದ ಹಾಗೂ ಕರ್ನಾಟಕ ಏಕೀಕರಣದ ವರೆಗಿನ ಅವಧಿಯಲ್ಲಿ ಕನ್ನಡದಲ್ಲಿ ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯದ ಅಲೆಗಳು ಕಾಣಿಸಿಕೊಂಡವು. ಈ ಅವಧಿಯ ಕೊನೆಯಲ್ಲಿ ಪತ್ರಿಕೆ ನಡೆಸುವುದು ಲಾಭದಾಯಕ ಉದ್ಯೋಗವನ್ನಾಗಿ ಪರಿಗಣಿಸಲಾಯಿತು. ನುಡಿ ಸೇವೆಯೇ ನಾಡಸೇವೆ; ಅದು ದೇಶ ಸೇವೆಯ ಇನ್ನೊಂದು ರೂಪ ಎಂಬ ಭಾವನೆ ಈ ಅವಧಿಯಲ್ಲಿತ್ತು. ಶೇ.ಗೋ.ಕುಲಕರ್ಣಿಯವರ ಮಾತಿನಲ್ಲಿ ಈ ಭಾವವನ್ನು ನಾವು ಈಗಾಗಲೆ ಗಮನಿಸಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯವೂ ಬಂತು. ನಾಡು ಏಕೀಕರಣವೂ ಆಯಿತು. ಅಂದಮೇಲೆ ಪತ್ರಿಕೆಗಳ ಬಹು ದೊಡ್ಡ ಜವಾಬ್ದಾರಿ ಮುಗಿದಂತೆ ಭಾಸವಾಯಿತು. ಇಂಥ ಒಂದು ನಿರ್ವಾತ ಸಮಯದಲ್ಲಿ ಸಾಹಿತ್ಯದ ಮುಖ್ಯ ಕಾಳಜಿಗಳನ್ನು ಪ್ರತಿಪಾದಿಸಬೇಕಾದ ಅಗತ್ಯ ಕೆಲವರಿಗೆ ತೋರಿತು. ಹೀಗಾಗಿ ಕೇವಲ ಸಾಹಿತ್ಯ ಚಳವಳಿಗಳ ಪ್ರತಿಪಾದನೆಗಾಗಿ ಪತ್ರಿಕೆಗಳು ನಂತರದ ಅವಧಿಯಲ್ಲಿ ಕಂಡುಬಂದವು.

ನವೋದಯ ಸಾಹಿತ್ಯದ ಮೂಲ ಸೆಲೆಗಳಲ್ಲಿ ರಾಷ್ಟ್ರೀಯತೆಯೂ ಒಂದು. ಈ ರಾಷ್ಟ್ರೀಯತೆಯ ಪರಿಕಲ್ಪನೆ ಬಹುಮುಖಿಯಾದದ್ದು. ಅದು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಹೀಗೆ ವಿವಿಧ ನೆಲೆಗಳಲ್ಲಿ ಅರಳಿತು. ಈಗಲೂ ಹಿಂದಿನ ಸಾಮ್ರಾಜ್ಯಗಳನ್ನು ವರ್ಣಿಸುವ ಕಾದಂಬರಿಗಳು ಬಂದವು. ಆದರೆ ಈ ಕಾದಂಬರಿಗಳು

ಬಂದದ್ದು ರಾಷ್ಟ್ರೀಯತೆಯ ಭಾವನೆಗೆ ಇಂಬು ನೀಡಿ ಬಲಗೊಳಿಸುವುದಕ್ಕಾಗಿಯೇ ಇದ್ದವು.

ನವೋದಯ ಕಾಲದ ಪತ್ರಿಕೆಗಳಲ್ಲಿ ರಾಷ್ಟ್ರೀಯತೆಯ ಪ್ರಚೋದನೆ ಒಂದೆಡೆ ಇದ್ದರೆ ಹಿಂದೂ ಸನಾತನ ವಾದದ ಸಮರ್ಥನೆ ಮತ್ತು ವಿರೋಧ ಇನ್ನೊಂದು ಕಡೆ ಕಂಡು ಬರುತ್ತದೆ. ಇದು ಆ ಕಾಲದ ಸಾಹಿತ್ಯದಲ್ಲೂ ಪಡಿ ಮೂಡಿದೆ. ಕುವೆಂಪು ಆ ಕಾಲದ ಮಹಾನ್ ಲೇಖಕ. ವೈದಿಕ ಸಂಸ್ಕೃತಿಯ ಮೇಲೆ ಹಕ್ಕು ಸ್ಥಾಪಿಸಲು ಬ್ರಿಟಿಷರ ಆಗಮನವೇ ಕಾರಣವಾಯಿತು ಎಂಬ ನಂಬಿಕೆಯ ಜೊತೆಯಲ್ಲಿಯೇ ಬ್ರಿಟಿಷರಿಂದ ದೇಶ ಸ್ವತಂತ್ರವಾಗಬೇಕು, ಸ್ವಮತಾಕ್ರಮಣ ಅವರಿಂದ ನಡೆಯದಂತೆ ತಡೆಯಬೇಕು ಎಂಬ ಬದ್ಧತೆ ಉಳ್ಳವರು. ಸರ್ವೋದಯ ತತ್ವ ಸಾರುವ 'ಶ್ರೀರಾಮಾಯಣ ದರ್ಶನಂ' ಬರೆದ ಅವರೇ 'ಶೂದ್ರ ತಪಸ್ವಿ'ಯನ್ನೂ ಬರೆದರು.

ನವೋದಯದ ಸಂದರ್ಭದಲ್ಲಿ ದೇಶದಂತೆ ಕರ್ನಾಟಕದಲ್ಲೂ ರಾಷ್ಟ್ರೀಯತೆಯ ಚಳವಳಿ ತೀವ್ರವಾಗಿದ್ದ ಕಾಲ. ಅದೆಲ್ಲದರ ಹಿಂದಿನ ನಿಯಂತ್ರಕ ಶಕ್ತಿ ಮೋಹನದಾಸ ಕರಮಚಂದ ಗಾಂಧಿ ಎಂಬ ಮಹಾತ್ಮ. ಗಾಂಧೀಜಿಯ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುವುದರ ಜೊತೆಯಲ್ಲೇ ಅಸ್ಪೃಶ್ಯತೆ ನಿವಾರಣೆ ಚಳವಳಿ ಹಾಗೂ ಆರ್ಯ ಸಮಾಜದ 'ಶುದ್ಧೀ' ಚಳವಳಿಗೆ ವಿರುದ್ಧವಾಗಿ ಮೂವತ್ತರ ದಶಕದ 'ಜಯಕರ್ನಾಟಕ'ದ ಸಂಚಿಕೆಗಳಲ್ಲಿ ಆಲೂರ ವೆಂಕಟರಾಯರು ಮತ್ತು ಇತರರು ಲೇಖನಗಳನ್ನು ಬರೆದಿರುವರು. ಈ ಲೇಖನಗಳ ಭಾಷೆಯೇ ಉಗ್ರವಾದದ್ದು. ಮತೀಯ ಸಾಮರಸ್ಯ, ಜನಶಿಕ್ಷಣ ಕಾರ್ಯಕ್ರಮಗಳಿಗೆ ಇಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಲಾಗಿದೆ. ಆಲೂರರು 'ಶುದ್ಧಿಯೋ ಅದರ ನಗೆಚಾಟಿಕೆಯೋ' ಮೊದಲಾದ ಲೇಖನಗಳನ್ನು ಬರೆದರು. ಅಸ್ಪೃಶ್ಯರಿಗೆ ಜನಿವಾರ ಹಾಕಿ ಬ್ರಾಹ್ಮಣರನ್ನಾಗಿಸುವ ಪದ್ಧತಿಯನ್ನು ಖಂಡಿಸಿರುವ ಆಲೂರರು ಪುರಾಣಮತವಾದಿಗಳು. ಪೌರಾಣಿಕ ಕಥೆಗಳನ್ನೋ ಐತಿಹಾಸಿಕ ಕಥೆಗಳನ್ನೋ ಆಧುನಿಕ ಸಂದರ್ಭದಲ್ಲಿ ಅರ್ಥೈಸುವಂಥ ಪ್ರಯತ್ನ ನಡೆದಾಗ ಸನಾತನವಾದಿಗಳು ಅದನ್ನು ಪ್ರತಿಭಟಿಸಿದರು. ಕುವೆಂಪು ಅವರ 'ಶೂದ್ರ ತಪಸ್ವಿ' ಪ್ರಕಟವಾದಾಗ 'ಜೀವನ'ದಲ್ಲಿ ಮಾಸ್ತಿಯವರು ಇಂಥ ಪ್ರಯತ್ನ ಟೀಕಿಸಿದರು. ಅದನ್ನು ಸಮರ್ಥಿಸಿ ಕುವೆಂಪು ಬರೆದರು. ಈ ವಾಗ್ವಾದ ಮುಂದೆ ಇದೇ ರೀತಿಯ ಬರವಣಿಗೆಯ ಕವಲನ್ನು ಹುಟ್ಟುಹಾಕಲು ಕಾರಣವಾಯಿತು.

'ಜಯಕರ್ನಾಟಕ'ದಲ್ಲಿಯೇ ಪುರಾಣಮತವಾದಿಯೊಬ್ಬರು 'ವೈದಿಕ ಧರ್ಮಗ್ಲಾನಿಯೂ ಕ್ರಮೋನ್ನತಿಯೂ' ಎಂಬ ಮಾಲಿಕೆಯಲ್ಲಿ ಲೇಖನಗಳನ್ನು ಬರೆದರು. ಹಿಂದೂ ಸಮಾಜದಲ್ಲಿಯ ಅದುವರೆಗೆ ನಡೆದುಕೊಂಡು ಬಂದ ಪದ್ಧತಿಯನ್ನು ಅದರಲ್ಲಿ ಬಲವಾಗಿ ಸಮರ್ಥಿಸಲಾಯಿತು. ಬ್ರಿಟಿಷ್ ಶಿಕ್ಷಣದಿಂದ ಸಮಾಜದಲ್ಲಿ ಹಕ್ಕುಗಳಿಂದ ವಂಚಿತ ವರ್ಗವು ಪ್ರಶ್ನೆಗಳನ್ನು ಹಾಕಲು ತೊಡಗಿದ್ದು ಅನಾಹುತಕಾರಿಯಾಗಿ ಕಂಡಿತು

ಇಂಥವರಿಗೆ. ಅದಕ್ಕಾಗಿಯೇ ಇಂಥ ಶಿಕ್ಷಣ ನೀಡುವ ಬ್ರಿಟಿಷರಿಗಿಂತ ಶಿಕ್ಷಣ ಸಾರ್ವತ್ರಿಕಗೊಳಿಸದ ಮುಸ್ಲಿಂ ದೊರೆಗಳೇ ಸುರಕ್ಷಿತವಾಗಿ ಕಂಡಿತು ಇವರಿಗೆ. ಪರಮತದ ಆಕ್ರಮಣದ ವಿರುದ್ಧ ಸ್ವಮತವನ್ನು ಕಠಿಣಗೊಳಿಸುವುದೇ ಇವರಿಗೆ ಎದುರಿಸುವ ಮಾರ್ಗವಾಗಿ ತೋರಿತು. ಇದು ಆ ಕಾಲದ ಲೇಖಕರಾದ ಗಳಗನಾಥರು, ಕೆರೂರರು, ಆಲೂರರ ಬರೆಹಗಳಲ್ಲಿ ಕಂಡು ಬರುತ್ತದೆ. ಆಲೂರರು 'ಜಯಕರ್ನಾಟಕ'ದಲ್ಲಿ ಪ್ರಕಟಿಸಿದ ಲೇಖನಗಳು ಗಳಗನಾಥರ ಕಾದಂಬರಿಗಳಲ್ಲಿ ಅಧ್ಯಾಯಗಳಾಗಿ ಬಂದಿವೆ.[೩೧]

ಹೀಗೆ ಈ ಕಾಲದ ಪತ್ರಿಕೆಗಳು, ಆ ಮೂಲಕ ಈ ಕಾಲದ ಸಾಹಿತ್ಯದ ಮುಖ್ಯ ಕಾಳಜಿ ನಾಡು, ನುಡಿ, ದೇಶ, ಧರ್ಮಗಳ ರಕ್ಷಣೆಯಾಗಿರುತ್ತದೆ. ಈ ಕಾರ್ಯವನ್ನು ಅವು ಅತ್ಯಂತ ಶ್ರದ್ಧೆಯಿಂದ ಮಾಡುತ್ತವೆ. ದೇಶ ಕಾಲಾತೀತವಾಗಿ ಜನರೂ ಇಲ್ಲ ಜೀವನವೂ ಇಲ್ಲ. ಈ ಜೀವನದ ಪ್ರತಿಬಿಂಬವಾದ ಸಾಹಿತ್ಯವೂ ಇಲ್ಲ, ಪತ್ರಿಕೆಯೂ ಇಲ್ಲ ಎಂಬ ಅಂಶ ಅವುಗಳ ಅಭ್ಯಾಸದಿಂದ ದಟ್ಟವಾಗಿ ಮನವರಿಕೆಯಾಗುತ್ತದೆ.

ರಾಜಕೀಯ ಕಾರಣಗಳಿಗಾಗಿ ನವೋದಯದ ಆರಂಭದ ಕಾಲದಲ್ಲಿ ಕರ್ನಾಟಕವು ಸಾಂಸ್ಕೃತಿಕವಾಗಿ ಮೂರು ಮುಖ್ಯ ಭಾಗಗಳಲ್ಲಿ ಹಂಚಿ ಹೋಗಿತ್ತು. ಒಂದು ಧಾರವಾಡ, ಇನ್ನೊಂದು ಮಂಗಳೂರು, ಮತ್ತೊಂದು ಮೈಸೂರು. ಈ ಮೂರೂ ಸಾಂಸ್ಕೃತಿಕ ಕೇಂದ್ರಗಳಲ್ಲಿ ಹೆಚ್ಚೂಕಡಿಮೆ ಒಂದೇ ಕಾಲದಲ್ಲಿ ನವೋದಯ ಬರೆಹ ಕಾಣಿಸಿಕೊಂಡಿತು. ರಾಜಕೀಯ, ಸಾಂಸ್ಕೃತಿಕ, ಭೌಗೋಳಿಕ ಕಾರಣಗಳಿಗಾಗಿ ಈ ಮೂರು ಭಾಗಗಳಿಂದ ಬಂದ ಸಾಹಿತ್ಯ ಭಿನ್ನವಾಗಿತ್ತು. ಒಟ್ಟಾರೆಯಾಗಿ ಗಮನಿಸಿದಾಗ ದೇಶದ ಸ್ವಾತಂತ್ರ್ಯ ಚಳವಳಿ, ಗಾಂಧೀವಾದ, ಕನ್ನಡ ನಾಡಿನ ಏಕೀಕರಣ, ಭಾಷೆ-ಸಂಸ್ಕೃತಿಗಳ ಪುನರುಜ್ಜೀವನ, ಸಮಾಜ ಸುಧಾರಣೆ, ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯ ಇತ್ಯಾದಿಗಳು ಮಾಡಿದ ಪ್ರಭಾವ ಒಂದೇ ಎನ್ನಿಸಿದರೂ ಆಂತರ್ಯದಲ್ಲಿ ಈ ಮೂರು ಭಾಗಗಳ ಸಾಹಿತ್ಯದಲ್ಲಿ ಭಿನ್ನತೆ ಒಡಲೊಳಗೇ ಇತ್ತು. ಈ ಸೂಕ್ಷ್ಮಗಳನ್ನು ಸಾಹಿತ್ಯದ ಅಭ್ಯಾಸಿಗಳು ಗಮನಿಸಬೇಕು. ಸಮಾನ್ಯವಾಗಿ 'ಶ್ರೀ'ಯವರ 'ಇಂಗ್ಲಿಷ್‌ಗೀತ'ಗಳೇ ನವೋದಯ ಕಾವ್ಯದ ಮೇಲೆ ಪ್ರಭಾವ ಬೀರಿದವು ಎಂದು ಸಮಾನ್ಯೀಕರಿಸಿ ಹೇಳಿಕೆಯನ್ನು ನೀಡಿ ಬಿಡುತ್ತೇವೆ. ಆದರೆ ವಸ್ತು ಸ್ಥಿತಿ ಹಾಗಿಲ್ಲ.

ಐತಿಹಾಸಿಕವಾಗಿ 'ಶ್ರೀ'ಯವರ ಇಂಗ್ಲಿಷ್ ಗೀತಗಳು ಪ್ರಕಟವಾದದ್ದು ೧೯೨೧ರಲ್ಲಿ. ಅದರಲ್ಲಿ ಆಗ ೧೨ ಗೀತಗಳಿದ್ದವು. ಮತ್ತೆ ೨೪ ಗೀತಗಳು ಡಿ.ವಿ.ಗುಂಡಪ್ಪನವರ 'ಕರ್ನಾಟಕ ಜನಜೀವನ' ಪತ್ರಿಕೆಯಲ್ಲಿ ೧೯೨೪ರಲ್ಲಿ ಪ್ರಕಟವಾಗಿದೆ. ಮೈಸೂರು ಭಾಗದಲ್ಲಿ ತೀ.ನಂ.ಶ್ರೀ, ಕುವೆಂಪು ಮೊದಲಾದವರು ಇದರ ಪ್ರಭಾವಕ್ಕೆ ಒಳಗಾದರು. ಆದರೆ ಈ ಗೀತಗಳು ಉತ್ತರ ಕರ್ನಾಟಕವನ್ನು ತಲುಪಲಿಲ್ಲವೆಂದೇ ಹೇಳಬೇಕು. ಅಷ್ಟುಹೊತ್ತಿಗಾಗಲೇ ಧಾರವಾಡ

---

೩೧. ವಿವರಗಳಿಗೆ ನೋಡಿ- ರಹಮತ್ ತರಿಕೆರೆ- ಮರದೊಳಗಣ ಕಿಚ್ಚು- ಪುಟ ೧೯

ಭಾಗದಲ್ಲಿ ಬೇಂದ್ರೆಯವರು ದೊಡ್ಡ ಕವಿಗಳಾಗಿದ್ದರು. ೧೯೧೮ರಲ್ಲಿ ಅವರ ಮೊದಲ ಕವಿತೆ 'ತುತೂರಿ' 'ಪ್ರಭಾತ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ೧೯೨೨ರಲ್ಲಿ ಅವರ 'ಕೃಷ್ಣಾಕುಮಾರಿ' ಕವನ ಸಂಕಲನ ಪ್ರಕಟವಾಗಿದೆ. ಅವರ ಸುಪ್ರಸಿದ್ಧ ಕವಿತೆ 'ಬೆಳಗು' 'ಸ್ವಧರ್ಮ' ಪತ್ರಿಕೆಯಲ್ಲಿ ೧೯೧೯ರ ಸುಮಾರಿಗೆ ಪ್ರಕಟವಾಗಿದೆ. ಒಟ್ಟಾರೆಯಾಗಿ ಇದು ಬಿ.ಎಂ.ಶ್ರೀ.ಯವರ ಪ್ರಭಾವದಿಂದ ಬೇರೆಯಾಗಿಯೇ ರೂಪುಪಡೆದ ಕಾವ್ಯವಾಗಿತ್ತು. ಬೇಂದ್ರೆಯವರ ಹಾಗೆಯೇ ಮಧುರಚೆನ್ನ, ಆನಂದಕಂದ, ಶ್ರೀಧರ ಖಾನೋಳ್ಕರರು ತಮ್ಮ ಕಾವ್ಯ ರಚಿಸಿದರು. ಮೈಸೂರಿನವರಿಗಿಂತ ಇವರು ಭಿನ್ನವಾಗಿ ಕಾವ್ಯ ರಚಿಸಲು ಕಾರಣ ಈ ಭಾಗ ರಾಜಕೀಯವಾಗಿ ಮುಂಬೈ ಪ್ರಾಂತ್ಯದಲ್ಲಿತ್ತು. ಈ ಕಾರಣಕ್ಕಾಗಿ ಎಲ್ಲ ರಾಜಕೀಯ ಸಾಂಸ್ಕೃತಿಕ ಸಂಬಂಧಗಳು ಮರಾಠಿಯವರೊಂದಿಗೆ ನಡೆಯುತ್ತಿತ್ತು. ಮರಾಠಿ ಭಾಷೆಯು ಕನ್ನಡವನ್ನು ತುಳಿಯುತ್ತಿದೆ ಎಂಬ ಭಾವನೆಯೂ ಈ ಭಾಗದಲ್ಲಿತ್ತು. ಜೊತೆಯಲ್ಲಿ ಇವರೆಲ್ಲ ಜಾನಪದವನ್ನು ಸಂಗ್ರಹಿಸಿ ಪ್ರಕಟಿಸಿದವರು. 'ಜಯಕರ್ನಾಟಕ'ದ ಸಂಚಿಕೆಗಳಲ್ಲಿ ಜನಪದ ಕಾವ್ಯವನ್ನು ಪ್ರಕಟಿಸಲಾಗುತ್ತಿತ್ತು. ಬೇಂದ್ರೆ, ಮಧುರಚೆನ್ನ, ಆನಂದಕಂದ ಇವರೆಲ್ಲ ಜಾನಪದಕ್ಕೆ ಮಾರು ಹೋದವರು. ಹೀಗಾಗಿ ಇವರು ತಮ್ಮ ಕಾವ್ಯದಲ್ಲಿ ಜಾನಪದ ಸತ್ವವನ್ನು ತುಂಬಿದರು. ಮಾತ್ರಾ ಗಣಕ್ಕೆ ಬದಲಾಗಿ ಜಾನಪದದ ಅಂಶಗಣವನ್ನು ಅವರು ಬಳಸಿದ್ದು ಕಂಡುಬರುತ್ತದೆ. ಜೊತೆಯಲ್ಲಿ ಅನುಭಾವ ಸಾಹಿತ್ಯವೂ ಇವರ ಮೇಲೆ ಪ್ರಭಾವ ಬೀರಿದೆ. ಶಿಶುನಾಳ ಶರೀಫರು ಈ ಭಾಗದ ಜನಪ್ರಿಯ ಸಂತ. ಅವರ ಪ್ರಭಾವವೂ ಇವರ ಮೇಲಾಗಿದೆ. ಬೇಂದ್ರೆ, ಮಧುರಚೆನ್ನ, ವಿನಾಯಕ, ಮುಗಳಿ, ಸು.ರಂ.ಎಕ್ಕುಂಡಿ ಮೊದಲಾದವರೆಲ್ಲ ಈ ಅನುಭಾವ ಪ್ರಭೆಗೆ ಒಳಗಾದವರೇ. ಈ ಭಾಗದ ಕವಿಗಳನ್ನು ಪ್ರಭಾವಿಸಿದ ಇನ್ನೊಂದು ಅಂಶ ವಚನ ಸಾಹಿತ್ಯ. ಇದು ನವೋದಯ ಕಾವ್ಯಕ್ಕೆ ಬೇಕಾದ ತಂತ್ರ, ಸೂಕ್ಷ್ಮತೆಗಳನ್ನು ಒದಗಿಸಿತು.ಬ್ರಿಟಿಷರಿಗಿಂತ ಮೊದಲು ಈ ಭಾಗವನ್ನು ಮರಾಠರು ಆಳಿದ್ದರು. ಹೀಗಾಗಿ ರಾಜಕೀಯವಾಗಿ ಬ್ರಿಟಿಷರೊಂದಿಗೆ, ಸಾಂಸ್ಕೃತಿಕವಾಗಿ ಮರಾಠರೊಂದಿಗೆ ಇವರು ಹೋರಾಡಬೇಕಾಯಿತು. ಈ ಕಾರಣಕ್ಕಾಗಿಯೇ ಈ ಭಾಗದಲ್ಲಿ ದೇಶಭಕ್ತಿ ಗೀತೆಗಳು, ನಾಡ ಗೀತೆಗಳು ಉಳಿದ ಭಾಗಗಳಿಗಿಂತ ಹೆಚ್ಚಾಗಿ ಬಂದಿವೆ. ೧೯೩೮ರಲ್ಲಿ ಶ್ರೀಯವರು ಸಂಪಾದಿಸಿದ 'ಕನ್ನಡ ಬಾವುಟ' ಪ್ರಕಟವಾಗುವುದಕ್ಕೆ ಹತ್ತು ವರ್ಷ ಮೊದಲೇ ಅಂದರೆ ೧೯೨೮ರಲ್ಲಿ ಬೇಂದ್ರೆಯವರು ಸಂಪಾದಿಸಿದ 'ನನ್ನದು ಈ ಕನ್ನಡ ನಾಡು' ಸಂಕಲನ ಪ್ರಕಟವಾಗಿದೆ. ಈ ಎಲ್ಲ ಪ್ರಭಾವಗಳ ಗ್ರಹಣ ಧಾರಣಗಳ ಹಿಂದೆ 'ಗೆಳೆಯರ ಗುಂಪು' ಕೆಲಸ ಮಾಡಿದೆ.

ಇತ್ತ ಮಂಗಳೂರು ಕಡೆಯ ಹೊಸ ಕಾವ್ಯದ ಪ್ರಭಾವ ಬೇರೆಯೇ ಆಗಿತ್ತು. ಇಂಗ್ಲಿಷ್ ಕಾವ್ಯದ ಪರಿಚಯ ಇವರಿಗೆ ಇತ್ತು. ಹಟ್ಟಿಯಂಗಡಿ ನಾರಾಯಣ ರಾಯರ 'ಆಂಗ್ಲ ಕವಿತಾವಳಿ' ೧೯೧೯ರಲ್ಲಿಯೇ ಪ್ರಕಟವಾಗಿತ್ತು. ಆದರೆ ಅದು ಬಿ.ಎಂ.ಶ್ರೀ.ಯವರ ಕಾವ್ಯದಷ್ಟು ಹೊಚ್ಚ ಹೊಸತೆನಿಸುತ್ತಿರಲಿಲ್ಲ. ಪ್ರಾಚೀನ ಕಾವ್ಯ ಪರಂಪರೆಗೆ ಮುದ್ದಣ

ತೋರಿಸಿದ ಪ್ರತಿಕ್ರಿಯೆ ವಿನೂತನವಾದದ್ದು. ಪ್ರಾಚೀನ ಕಾವ್ಯದ ಬಗ್ಗೆ ಅವನ ಟೀಕೆ ಅವನ ಕಾವ್ಯದಲ್ಲಿಯೇ ವ್ಯಕ್ತವಾಗಿದೆ. 'ಕನ್ನಡಂ ಕತ್ತುರಿಯಲ್ತೆ' ಎಂದು ಹೇಳುವ ಮೂಲಕ ಸಂಸ್ಕೃತವನ್ನು ನಿರಾಕರಿಸುತ್ತಾನೆ. ಅಲ್ಲದೆ ಅವನು ಗದ್ಯದ ಮೇಲ್ಮೆಯನ್ನು ಹೇಳುತ್ತಾನೆ. ಇಂಥ ಸಂದರ್ಭದಲ್ಲಿಯೇ ಹಟ್ಟಿಯಂಗಡಿ ನಾರಾಯಣ ರಾಯರು ೧೯೧೮ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಯಲ್ಲಿ 'ಕನ್ನಡ ಕವಿತೆಯ ಭವಿತವ್ಯ' ಎಂಬ ಲೇಖನವನ್ನು ಬರೆದಿದ್ದರು. "ಈ ಲೇಖನದಲ್ಲಿ ಅವರು ಇಂಗ್ಲಿಷ್ ಮಾರ್ಗಗಳ ಅನುಸರಣೆಯಿಂದ ಕನ್ನಡ ಕಾವ್ಯದ ಪ್ರಸಂಗ, ರಚನೆ ಹಾಗೂ ಅಲಂಕಾರ ಇವು ಹೇಗೆ ಬದಲಾಗಬಹುದೆಂದು ವಿವರಿಸಿದ್ದರು. ಕವಿಗಳು ಪಾರಮಾರ್ಥಿಕ ವಿಷಯಗಳಿಗಿಂತ ರಾಷ್ಟ್ರಿಕ, ಸಾಮಾಜಿಕ, ಚಾರಿತ್ರಿಕ ಇತ್ಯಾದಿ ವಿಷಯಗಳಿಗೆ ಗಮನಕೊಡುವರು, ದೀರ್ಘ ಕಾವ್ಯದ ಬದಲು ಲಘು ಕಾವ್ಯ ರಚಿಸುವರು, ಛಂದಸ್ಸಿನಲ್ಲಿ ಹೊಸ ಮಾರ್ಗಗಳನ್ನು ಅನುಸರಿಸುವರು, ಮಾನಸಿಕ ಭಾವನೆಗಳಿಗೆ ಮೂರ್ತತ್ವವನ್ನು ಆರೋಪಿಸುವ ಉತ್ಪ್ರೇಕ್ಷೆಯನ್ನು ರೂಢಿಸಿಕೊಳ್ಳುವರು, ಹಳಗನ್ನಡಕ್ಕಿಂತ ನಡುಗನ್ನಡವನ್ನು ಹೆಚ್ಚಾಗಿ ಪ್ರಯೋಗಿಸುವರು- ಇತ್ಯಾದಿ ವಿಚಾರಗಳನ್ನು ಅವರು ಮಂಡಿಸಿದ್ದರು. ಹೊಸ ಕಾವ್ಯ ಸ್ವರೂಪದ ಬಗ್ಗೆ ಅವರಿಗಿದ್ದ ಅಸ್ಪಷ್ಟ ಕಲ್ಪನೆಗಳನ್ನು ಇದು ತೋರಿಸುತ್ತದೆ. ಇಂಗ್ಲಿಷ್ ಕಾವ್ಯದ ಮಾದರಿಗಳನ್ನು ಮುಂದಿಟ್ಟುಕೊಂಡು ಆ ಮಾದರಿಯಲ್ಲಿ ಕನ್ನಡ ಕಾವ್ಯದಲ್ಲಿ ಹೊಸ ಅಭಿವ್ಯಕ್ತಿ, ಹೊಸ ದೃಷ್ಟಿಕೋನ ಮತ್ತು ಹೊಸ ವಸ್ತು ಬರಬೇಕೆಂದು ಅವರು ಅಪೇಕ್ಷಿಸಿದರು. ದೀರ್ಘ ಕಾವ್ಯದ ಬದಲು ಛಂದಸ್ಸಿನಲ್ಲಿ ವೈವಿಧ್ಯವಿರುವ ಲಘು ಕಾವ್ಯ ಕನ್ನಡಕ್ಕೆ ಹೊಸ ನೀರು ತಂದೀತೆಂದು ನಂಬಿದ ಅವರು ಮಿಲ್ಟನ್, ಗ್ರೇ, ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಕಾಲಿನ್ಸ್, ವಿಟಿಯರ್ ಮುಂತಾದ ಕವಿಗಳ ಕವನಗಳನ್ನಲ್ಲದೆ ಶೇಕ್ಸಪಿಯರ್ ನಾಟಕಗಳಲ್ಲಿನ ಕೆಲವು ಸ್ವಯಂಪೂರ್ಣ ಕಾವ್ಯಭಾಗಗಳನ್ನು ಸಹ ಭಾಷಾಂತರಿಸಿದರು."[೩೨]

'ಇಂಗ್ಲಿಷ್ ಗೀತಗಳು' ಬರುವುದಕ್ಕಿಂತ ಮೊದಲೇ ಹಟ್ಟಿಯಂಗಡಿ ನಾರಾಯಣರಾಯರು ಹೊಸಗನ್ನಡ ಕವಿತೆಯ ಭವಿತವ್ಯದ ಬಗ್ಗೆ ಚಿಂತನೆ ನಡೆಸಿ ಕೆಲವು ಸ್ಪಷ್ಟ ಅಭಿಪ್ರಾಯಗಳನ್ನು ನೀಡಿದ್ದು ಮಹತ್ವದ್ದಾಗಿದೆ. ಇವರ ಭಾಷೆ ಸಂಸ್ಕೃತಭೂಯಿಷ್ಠ, ಕ್ಲಿಷ್ಟ ಮತ್ತು ಆಡಂಬರಯುತ. ಹಿಂದಿನ ಕಾವ್ಯದಂತೆ ಸಂಸ್ಕೃತ ಪದ ಪ್ರಯೋಗದಲ್ಲಿಯೇ ಗಾಂಭೀರ್ಯವನ್ನು ಮತ್ತು ಛಂದಸ್ಸಿನ ನಿಷ್ಠೆಯಲ್ಲಿಯೇ ಸೌಂದರ್ಯವನ್ನು ಕಂಡ ಭಾಷೆ ಅವರದು. ಆದರೆ ಬಿ.ಎಂ.ಶ್ರೀ.ಯವರು ಇಂಗ್ಲಿಷ್ ಕವಿತೆಗಳನ್ನು ಪರಿಚಯಿಸಿದ ಮೇಲೆ ಕಾವ್ಯದ ರೂಪ ವಸ್ತುವಿಗೆ ಅನುಗುಣವಾಗಿ ಬದಲಾಗುವಂಥದ್ದು, ಅದು ಸ್ಥಾಯಿಯಾದುದಲ್ಲ ಎಂಬ ಪ್ರಜ್ಞೆ ಮೂಡಿತು.

೩೨.ಕನ್ನಡ ನವೋದಯ ಕಾವ್ಯ: ಮಂಗಳೂರು ಕೇಂದ್ರ; ಹಟ್ಟಿಯಂಗಡಿ ನಾರಾಯಣರಾಯರ ಆಂಗ್ಲ ಕವಿತಾವಳಿ- ವಿ.ಎನ್. ಹೆಗಡೆ.- ಪುಟ ೨೪

ಹಟ್ಟಿಯಂಗಡಿ ನಾರಾಯಣರಾಯರ ಅನುವಾದ ಶ್ರೀಯವರ ಅನುವಾದಕ್ಕೆ ಸರಿಸಾಟಿಯಿಲ್ಲದೆ ಇರಬಹುದು. ಆದರೆ ಅವರು ಅಂದು ಸಾಮಾನ್ಯವಾಗಿ ಪ್ರಚಲಿತದಲ್ಲಿದ್ದ ಮೂರು ನಂಬಿಕೆಗಳನ್ನು ಮುರಿದರು. ಹೊಸಗನ್ನಡದಲ್ಲಿ ಕಾವ್ಯ ರಚಿಸಬಾರದು, ಆಂಗ್ಲ ಕವನಗಳನ್ನು ಅನುವಾದಿಸಬಾರದು ಮತ್ತು ಛಂದಸ್ಸಿನ ಹೊಸ ರೀತಿಗಳನ್ನು ಕಲ್ಪಿಸಬಾರದು- ಇವೇ ಆ ಮೂರು ನಂಬಿಕೆಗಳು. ಇದು ಮಂಗಳೂರು ಭಾಗದ ಕವಿಗಳ ಮೇಲೆ ಪರಿಣಾಮವನ್ನು ಬೀರದೆ ಇರಲಿಲ್ಲ. ಹೊಸಗನ್ನಡ ಕಾವ್ಯ ಹೊಸ ರೂಪ ತೊಟ್ಟುಕೊಳ್ಳಲು ಶ್ರೀಯವರಿಗೂ ಮೊದಲೇ ಇವರು ಪ್ರಯೋಗಶೀಲರಾಗಿದ್ದರು ಎಂಬುದು ಐತಿಹಾಸಿಕ ಸತ್ಯ. ಇದಕ್ಕೆ ಅವರು ಪತ್ರಿಕೆಗಳನ್ನೇ ಸಾಧನ ಮಾಡಿಕೊಂಡಿದ್ದರು.

ಮಂಗಳೂರು ಭಾಗದ ಕವಿಗಳ ಪ್ರಮುಖ ಸಮಸ್ಯೆ ಎಂದರೆ ಶಾಲೆಯಲ್ಲಿ ಕಲಿತ ಭಾಷೆಯನ್ನು ಅಭಿವ್ಯಕ್ತಿಯ ಮಾಧ್ಯವನ್ನಾಗಿ ಮಾಡಿಕೊಳ್ಳಬೇಕಾಗಿ ಬಂದುದು. ಪರಿಸರದ, ಮನೆಯ ಭಾಷೆಗಳಾಗಿದ್ದ ಕೊಂಕಣಿ, ತುಳು ಭಾಷೆಗಳಿಗೆ ಲಿಪಿ ಇರಲಿಲ್ಲ. ಹೀಗಾಗಿ ಇವರ ಕನ್ನಡ ಗ್ರಾಂಥಿಕ ಭಾಷೆ. ಕನ್ನಡದಲ್ಲಿ ಅವರು ಮಾತನಾಡಿದರೂ ಪುಸ್ತಕದ ಭಾಷೆಯ ಹಾಗೆ ಕೇಳಿಸುತ್ತಿತ್ತು. ಈ ಸಮಸ್ಯೆ ಬೇಂದ್ರೆ, ಮಾಸ್ತಿ ಡಿವಿಜಿ, ಪುತಿನ ಮೊದಲಾದವರಿಗೂ ಇತ್ತು. ಮಂಗಳೂರು ಭಾಗದ ಸಾಹಿತಿಗಳು ಗ್ರಾಂಥಿಕ ಕನ್ನಡದಲ್ಲಿ ಬರೆದರೂ ಅವರು ತುಳು ನಾಡ ಸಂಸ್ಕೃತಿಯನ್ನು ಬಿಡಲಿಲ್ಲ. ಸಾಂಸ್ಕೃತಿಕವಾದ ಅನೇಕ ಪದಗಳು ಅವರ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಹೀಗಾಗಿ ಧಾರವಾಡ ಭಾಗದಲ್ಲಿ ಹೇಗೆ ಆಡು ಭಾಷೆಗೆ ಹತ್ತಿರವಾದ ಸಾಹಿತ್ಯ ಸೃಷ್ಟಿಯಾಯಿತೋ ಅಂಥ ಸಾಹಿತ್ಯ ಇಲ್ಲಿ ಸೃಷ್ಟಿಯಾಗಲಿಲ್ಲ.

ಇದರ ಹೊರತಾಗಿ ನಾಡು ನುಡಿಯ ಬಗ್ಗೆ ಇಲ್ಲಿಯ ಕವಿಗಳ ಪ್ರೀತಿ, ಕಳಕಳಿ ಉಳಿದ ಭಾಗಗಳ ಕವಿಗಳಿಗಿಂತ ಕಡಿಮೆಯಾದುದಲ್ಲ. ರಾಷ್ಟ್ರೀಯ ಪ್ರಜ್ಞೆಯೂ ಹಾಗೆಯೇ. ಏಕೀಕರಣದ ಬಗೆಗಿನ ತುಡಿತವೂ ಅದೇ ರೀತಿ.

ಆದರೆ ಮೈಸೂರು ಭಾಗದಲ್ಲಿ ಪರಿಸ್ಥಿತಿ ಬೇರೆಯೇ ಇದ್ದಿತ್ತು. ಅಲ್ಲಿ ಕನ್ನಡ ದೊರೆಗಳ ಆಡಳಿತ ಇತ್ತು. ಹೀಗಾಗಿ ಕನ್ನಡ ಭಾಷೆಯು ಯಾವ ಆಪತ್ತಿಗೂ ಒಳಗಾಗಿರಲಿಲ್ಲ. ಸಾಹಿತ್ಯ ಸೃಷ್ಟಿಗೆ ರಾಜ ಪೋಷಣೆ ಇತ್ತು. ವಿಶ್ವವಿದ್ಯಾಲಯ ಇತ್ತು. ಹೀಗಾಗಿ ಸ್ವಾತಂತ್ರ್ಯದ ಬಗೆಗಿನ ಕಳಕಳಿ, ಏಕೀಕರಣದ ಬಗೆಗಿನ ಕೂಗು ಇವೆಲ್ಲ ತಡವಾಗಿಯೇ ಇಲ್ಲಿ ಕೇಳಿಬಂದುದು. ಏಕೀಕರಣ ಬೇಡ ಎನ್ನುವವರೂ ಇಲ್ಲಿದ್ದರು. ರಾಜಾಶ್ರಯ ಇಲ್ಲಿದ್ದುದರಿಂದ ಒಂದು ರೀತಿಯಲ್ಲಿ ಶಿಷ್ಟ ಭಾಷೆಯೇ ಇಲ್ಲಿ ಪ್ರಯೋಗಗೊಂಡಿತ್ತು. 'ಇಂಗ್ಲಿಷ್ ಕವಿತೆಗಳು' ಮೂಲಕ ಶ್ರೀಯವರು ಹೊಸ ಮಾರ್ಗವನ್ನೇ ತೆರೆದು ತೋರಿಸಿದರು. ಭಾವಗೀತೆಯ ಹೊಸ ಪ್ರಪಂಚವನ್ನು ಇದು ಕನ್ನಡದಲ್ಲಿ ತೆರೆಯಿತು. ಕುವೆಂಪುರಂಥ ಮಹಾನ್ ಕವಿಗಳು ಈ ದಾರಿಯಲ್ಲಿ ನಡೆದರು. ಈ ಭಾಗದಲ್ಲಿ ಸಾಹಿತ್ಯದ ಮಾರ್ಗದರ್ಶನ ಮಾಡಲು 'ಪ್ರಬುದ್ಧ ಕರ್ನಾಟಕ' ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಗಳು ಇದ್ದವು.

ಹೀಗೆ ಆಧುನಿಕ ಕನ್ನಡ ಸಾಹಿತ್ಯವು ನವೋದಯಲ್ಲಿ ರೂಪುಪಡೆಯುತ್ತಿದ್ದಾಗ ಕನ್ನಡನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರಯೋಗಕ್ಕೆ ಒಳಗಾಗಿತ್ತು. ಹಲವು ಮೂಲಗಳಿಂದ ಆಧುನಿಕ ಕನ್ನಡ ಸಾಹಿತ್ಯವು ಆರಂಭ ಘಟ್ಟದಲ್ಲಿ ಪುಷ್ಟಿಯನ್ನು ಪಡೆದುಕೊಂಡು ಸೃಷ್ಟಿಯಾಗತೊಡಗಿತು. ಸಾಹಿತ್ಯದ ಈ ಹುಚ್ಚುಹೊಳೆಯ ಪ್ರವಾಹವನ್ನು ಕಾಲುವೆಗಳಲ್ಲಿ ಹರಿಸಿ ಫಸಲು ಪಡೆಯುವಂಥ ಕಾರ್ಯವನ್ನು ಅಂದಿನ ಪತ್ರಿಕೆಗಳು ಮಾಡಿದವು. ಆಧುನಿಕ ಕನ್ನಡ ಸಾಹಿತ್ಯ ಹೀಗೆಯೇ ಇರಬೇಕು ಎಂದು ನಿರ್ದೇಶಿಸುವ ಪ್ರಯತ್ನಗಳು ನಡೆದವು. ಇಂಥ ಪ್ರಯತ್ನಗಳನ್ನು ಕೆಲವರು ವಿರೋಧಿಸಿದರು. ಪರಸ್ಪರ ತಮ್ಮ ವಾದವನ್ನು ಪತ್ರಿಕೆಗಳ ಮೂಲಕವೇ ಮಂಡಿಸಿದರು. ಇಂಥ ವಾದಗಳ ಆಧಾರದ ಮೇಲೆಯೇ ಆಧುನಿಕ ಕನ್ನಡ ಸಾಹಿತ್ಯ ಪಡೆದುಕೊಂಡ ತಿರುವುಗಳನ್ನು ಗುರುತಿಸುವ ಪ್ರಯತ್ನ ಇಲ್ಲಿಯದು.

ಸಾಹಿತ್ಯ ಪ್ರೇರಣೆ ಅಂದಿನ ಜನಜೀವನದಲ್ಲಿಯೇ ಇದೆ. ಇಂಥ ಪ್ರೇರಕ ಅಂಶಗಳನ್ನು ಪತ್ರಿಕೆಗಳು ಪ್ರತಿಪಾದಿಸಿವೆ. ಆರಂಭದ ಘಟ್ಟದಲ್ಲಿ ರಾಜಕೀಯವಾಗಿ ಹರಿದು ಹಂಚಿಹೋದ ಕನ್ನಡ ನಾಡಿನ ಬಗ್ಗೆ ಇರುವ ಕಳಕಳಿಯನ್ನು ನಾವು ಗುರುತಿಸುತ್ತೇವೆ. ಇದನ್ನು ಪತ್ರಿಕೆಗಳು ಬಲವಾಗಿ ಮಂಡಿಸಿದಾಗ ಅದು ಸಾಹಿತ್ಯದ ವಸ್ತುವೂ ಆಯಿತು. ಇದೇ ಮುಂದೆ ಕರ್ನಾಟಕ ಏಕೀಕರಣ ಚಳುವಳಿಯಾಗಿ ರೂಪು ತಳೆದು ವಿಶಾಲ ಮೈಸೂರು ರಾಜ್ಯದ ರಚನೆಯಲ್ಲಿ ಕೊನೆಗೊಳ್ಳುತ್ತದೆ. ಇದರ ಜೊತೆಯಲ್ಲಿ ರಾಷ್ಟ್ರವು ಸ್ವಾತಂತ್ರ್ಯವನ್ನು ಪಡೆಯಬೇಕು, ಪಾರತಂತ್ರ್ಯದ ಬೇಡಿ ಕಳಚಬೇಕು ಎಂಬ ಅಭಿಪ್ರಾಯವನ್ನು ಮೂಡಿಸಿದಾಗ ಅದೂ ಸಾಹಿತ್ಯದ ವಸ್ತುವಾಯಿತು. ಜೊತೆಯಲ್ಲಿ ಸಾಮಾಜಿಕ ಸುಧಾರಣೆಯ ಕಳಕಳಿ, ಗಾಂಧೀಜಿಯ ಹರಿಜನೋದ್ಧಾರ ಮೊದಲಾದವು ಸಾಹಿತ್ಯದ ವಸ್ತುವಾದವು. ಹೀಗೆ ಸಾಹಿತ್ಯವು ತನ್ನ ವಸ್ತುವನ್ನು ಆರಿಸಿಕೊಳ್ಳುವುದಕ್ಕೆ ಪತ್ರಿಕೆಗಳು ವಿಷಯವನ್ನು ಒದಗಿಸಿದ್ದನ್ನೂ ನಾವು ಕಾಣುತ್ತೇವೆ. ನಾಡಿನ ಏಕೀಕರಣ, ನುಡಿಯ ಬೆಳವಣಿಗೆಯ ಕಾಳಜಿ ಪ್ರತಿಪಾದನೆಯಾದಾಗ ಅವುಗಳಿಗೆ ಪ್ರತಿಭಟನೆ ಅಥವಾ ಪ್ರತಿಕ್ರಿಯಾತ್ಮಕ ಬರವಣಿಗೆ ಕಂಡು ಬಂದಿಲ್ಲ. ಆದರೆ ಸಮಾಜ ಸುಧಾರಣೆಯ ಬಗ್ಗೆ ಪ್ರತಿಪಾದನೆಯಾದಾಗ ಅದಕ್ಕೆ ವಿರುದ್ಧ ಅಭಿಪ್ರಾಯ ಲೇಖನಗಳ ರೂಪದಲ್ಲಿಯೂ ಸಾಹಿತ್ಯ ಕೃತಿಗಳ ರೂಪದಲ್ಲಿಯೂ ವ್ಯಕ್ತವಾಗಿದ್ದನ್ನು ಈಗಾಗಲೇ ಗಮನಿಸಿದ್ದೇವೆ. ಗುಲ್ವಾಡಿಯವರ 'ಇಂದಿರಾಬಾಯಿ'ಗೆ ಪ್ರತಿಕ್ರಿಯಾತ್ಮಕವಾಗಿಯೇ ಕೆರೂರರ 'ಇಂದಿರಾ' ಬಂದದ್ದು ಎಂಬುದನ್ನು ಗಮನಿಸಬೇಕು.

ಒಂದು ಭಾಷೆಯ ಸಾಹಿತ್ಯವು ಪುಷ್ಟಗೊಳ್ಳುವುದಕ್ಕೆ ಅನುವಾದಗಳೂ ನೆರವಾಗುತ್ತವೆ. ಅನುವಾದ ಕನ್ನಡ ಸಾಹಿತಿಗಳಿಗೆ ಹೊಸದೇನಲ್ಲ. ಆದಿ ಕವಿ ಪಂಪನೂ ಒಬ್ಬ ಅನುವಾದಕನೇ. ಸಂಸ್ಕೃತದಿಂದ ಪ್ರಾಕೃತದಿಂದ ಪ್ರಾಚೀನ ಕನ್ನಡದಲ್ಲಿಯೇ ಗ್ರಂಥಗಳನ್ನು ಅನುವಾದಿಸಿಯೋ ರೂಪಾಂತರಿಸಿಯೋ ಬರೆಯಲಾಗಿದೆ. ಅವೆಲ್ಲ ಭಾರತೀಯ ಸಾಂಸ್ಕೃತಿಕ ಪರಿಸರದಲ್ಲಿಯೇ ಸೃಷ್ಟಿಯಾದವು ಹಾಗೂ ಅನುವಾದ, ರೂಪಾಂತರಗೊಂಡವು. ಆದರೆ ಆಧುನಿಕರ ಸಮಸ್ಯೆ

ಬೇರೆಯೇ ಆದುದು. ಆಧುನಿಕ ಕನ್ನಡ ಸಾಹಿತ್ಯದ ಪ್ರೇರಣೆ ಇಂಗ್ಲಿಷಿನಲ್ಲಿತ್ತು. ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದ ಕೆಲವರು ಆ ಭಾಷೆಯ ಕಾವ್ಯ, ನಾಟಕ, ಕಾದಂಬರಿಗಳನ್ನು ಅನುವಾದಿಸಿದರು. ಪಾಶ್ಚಾತ್ಯ ಸಂಸ್ಕೃತಿಯ ಕೃತಿಯೊಂದನ್ನು ಭಾರತೀಯ ಸಂಸ್ಕೃತಿಯಲ್ಲಿ ಪುನರ್ ಸೃಷ್ಟಿಮಾಡುವಾಗ ಕೆಲವು ವಿಶಿಷ್ಟ ಸಮಸ್ಯೆಗಳು ತಲೆದೋರಿದವು. ಹೀಗಾಗಿ ಭಾಷಾಂತರ ಹೇಗಿರಬೇಕು ಎಂಬ ಬಗ್ಗೆ ಸಿದ್ಧಾಂತಪರವಾದ ಚರ್ಚೆಯು ಆರಂಭಕಾಲದಲ್ಲಿಯೇ ನಡೆದದ್ದು ಮಹತ್ವಪೂರ್ಣವಾದ ಅಂಶ. ಇಂಥ ಚರ್ಚೆಗಳೇ ಕನ್ನಡ ಸಾಹಿತ್ಯದಲ್ಲಿ ಭಾಷಾಂತರ ಮಾರ್ಗವನ್ನು ನಿರ್ಧರಿಸಿದವು.

ಹಳೆಯ ಮಾದರಿಯಲ್ಲಿ ಮಹಾಕಾವ್ಯವನ್ನು ಬರೆಯುವುದು ಆಧುನಿಕ ಸಂವೇದನೆಯವರಿಗೆ ಬೇಡವಾಯಿತು. ಅವರು ಇಂಗ್ಲಿಷ್ ಕವಿತೆಯ ಪ್ರಭಾವಕ್ಕೆ ಒಳಗಾಗಿ, ಹಳೆಯ ಛಂದಸ್ಸಿನಲ್ಲಿಯೇ ಹೊಸ ಕವಿತೆಗಳನ್ನು ಬರೆದರು. 'ಆಂಗ್ಲ ಕವಿತಾವಳಿ', 'ಇಂಗ್ಲಿಷ್ ಗೀತಗಳು' ಇವಕ್ಕೂ ಪೂರ್ವದಲ್ಲಿಯೇ ಆ ಕಾಲದ ಪತ್ರಿಕೆಗಳಲ್ಲಿ ಇಂಥ ಕವಿತೆಗಳು ಪ್ರಕಟಗೊಂಡಿವೆ. ಹಳೆಯ ಛಂದಸ್ಸಾದರೂ ಆಧುನಿಕ ಮನಸ್ಸು ಅಲ್ಲಿತ್ತು. ಹೀಗೆ ಹೊಸ ಕಾವ್ಯ ಬರುತ್ತಿದ್ದಾಗ ಹಳೆಯ ಛಂದಸ್ಸಿಗೇ ಜೋತುಬೀಳಬೇಕೆ? ಕನಿಷ್ಠ ಪದ್ಯ ರಚನೆಗೆ ತ್ರಾಸದಾಯಕವಾದ ಪ್ರಾಸವನ್ನು ಬಿಡಬಾರದೆ? ಎಂಬ ಚರ್ಚೆ ನಡೆದದ್ದು ಮಹತ್ವದ ಅಂಶ. ಗೋವಿಂದ ಪೈಗಳು, ಅವರ ಹಾಗೆಯೇ ಚಿಂತಿಸುವ ಇತರರು ಪ್ರಾಸತ್ಯಾಗವನ್ನು ಮಾಡಿ ಪದ್ಯಗಳನ್ನು ರಚಿಸಿದರು. ಅಂದಿನ ಪತ್ರಿಕೆಗಳು ಪ್ರಾಸ ತ್ಯಾಗ ಮಾಡಿದ ಹಾಗೂ ಪ್ರಾಸ ಸಹಿತ ಇರುವ ಪದ್ಯಗಳೆರಡನ್ನೂ ಪ್ರಕಟಿಸಿ ಪ್ರಾಸ ರಹಿತ ಪದ್ಯ ರಚನೆಗೆ ಮಾರ್ಗ ತೆರೆದವು. ಪ್ರಾಸ ಬೇಕೆ? ಬೇಡವೆ? ಎಂಬ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಇಂಥ ಚರ್ಚೆಗೆ ವೇದಿಕೆ ಒದಗಿಸುವ ಮೂಲಕ ಕನ್ನಡ ಸಾಹಿತ್ಯ ಹೊಸ ತಿರುವು ಪಡೆಯುವಲ್ಲಿ ಪತ್ರಿಕೆಗಳು ಜವಾಬ್ದಾರಿಯುತ ಕಾರ್ಯ ನಿರ್ವಹಿಸಿದವು.

ಕನ್ನಡ ಭಾವಗೀತೆಯ ಪ್ರಕಾರ ಒಂದೇ ರೀತಿಯಲ್ಲಿ ಹರಿದು ಬರುತ್ತಿರುವಾಗ ಪ್ರಗತಿಶೀಲ ಸಂವೇದನೆಯವರಿಗೆ, ತನ್ನ ಸುತ್ತಲಿನ ಸಮಾಜವನ್ನು ನಿರ್ಲಕ್ಷಿಸಿ ಇಂದ್ರ, ಚಂದ್ರರು, ಗಿಳಿ ಕೋಗಿಲೆಗಳ ಮೇಲೆ ಕಾವ್ಯ ಬರೆಯುವುದು ನಿರರ್ಥಕವೆನ್ನಿಸಿ ಅದನ್ನು ಪ್ರತಿಭಟಿಸಿದರು. ಹೀಗೆ 'ಪ್ರಗತಿಶೀಲ' ಸಾಹಿತ್ಯವು ಆ ಪ್ರಕಾರದ ನಿಲುವನ್ನು ಮಂಡಿಸುತ್ತಲೇ, ತನ್ನ ಹಿಂದಿನ ಸಾಹಿತ್ಯ ಮಾರ್ಗದಲ್ಲಿಯ ಕೊರತೆಯೇನು ಎಂಬುದನ್ನು ಪಟ್ಟಿ ಮಾಡಿತು. ಇಂಥ ಖಂಡನೆ ಮಂಡನೆಗಳ ಮೂಲಕವೇ ಪ್ರಗತಿಶೀಲ ಸಾಹಿತ್ಯ ತನ್ನ ಕವಲನ್ನು ಬೆಳೆಸಲು ಸಾಧ್ಯವಾಯಿತು.

'ನವ್ಯ'ದವರೂ ತಮ್ಮ ಸಾಹಿತ್ಯ ಪಂಥವನ್ನು ಪ್ರತಿಪಾದಿಸಿದ್ದು ಮತ್ತು ಗಟ್ಟಿಗೊಳಿಸಿದ್ದು ಪತ್ರಿಕೆಗಳ ಮೂಲಕವೇ. ಆಗ ಪತ್ರಿಕೆಗಳಲ್ಲಿ ಮಂಡನೆಯಾದ 'ನವ್ಯ' ಮೀಮಾಂಸೆ, ವಿಮರ್ಶೆಗಳು ಅನೇಕ ಕವಿಗಳು ಈ ಮಾರ್ಗದಲ್ಲಿ ಹೆಜ್ಜೆ ಇಡಲು ಪ್ರೇರಣೆ ನೀಡಿದವು.

ಪ್ರಗತಿಶೀಲ, ನವ್ಯ, ನವ್ಯೋತ್ತರ ಸಾಹಿತ್ಯ ಮಾರ್ಗಕ್ಕಿಂತ ನವೋದಯ ಸಾಹಿತ್ಯ ಮಾರ್ಗದ ಸಮಸ್ಯೆ ಬೇರೆಯೇ ರೀತಿಯದಾಗಿತ್ತು. ಪಾಶ್ಚಾತ್ಯ ಪ್ರಭಾವದಿಂದ ಆಧುನಿಕ ಕನ್ನಡದಲ್ಲಿ ಸಾಹಿತ್ಯವು ಹತ್ತು ಹಲವು ರೂಪಗಳನ್ನು ಪಡೆದುಕೊಳ್ಳತೊಡಗಿತ್ತು. ಪಾಶ್ಚಾತ್ಯ ರೂಪವನ್ನು ಕನ್ನಡದ ಸಂದರ್ಭದಲ್ಲಿ ಸಂವಾದಿಯಾಗಿಸುವುದು ಹೇಗೆ? ಈ ಸಮಸ್ಯೆ ನಂತರದ ಸಾಹಿತ್ಯ ಚಳುವಳಿಗಳಿಗೆ ಇರಲಿಲ್ಲ. ಸಾಹಿತ್ಯದ ವಸ್ತು, ರೂಪ, ಭಾಷೆ ಎಲ್ಲವನ್ನೂ ನವೋದಯದವರು ಸೃಷ್ಟಿಸಿಕೊಳ್ಳಬೇಕಿತ್ತು. ಹಳೆಯ ಸಾಹಿತ್ಯದಲ್ಲಿ ಇಲ್ಲದ ಹೊಸ ರೂಪಗಳಿಗೆ ಹೆಸರು ಕೊಡುವುದೂ ಇದರಲ್ಲಿ ಸೇರಿತ್ತು. 'ಕಾದಂಬರಿ' ಸಂದರ್ಭದಲ್ಲಿ ನಡೆದ ಚರ್ಚೆಯನ್ನು ಈಗಾಗಲೆ ಗಮನಿಸಲಾಗಿದೆ.

ಇಲ್ಲಿ ಗಮನಿಸಬೇಕಾಗಿರುವ ಇನ್ನೊಂದು ಅಂಶವೆಂದರೆ ನವೋದಯ ಸಾಹಿತ್ಯ ಮಾರ್ಗಕ್ಕೆ ಟೀಕೆಗಳು ಮತ್ತು ಖಂಡನೆಗಳು ಬಂದದ್ದು ಪ್ರಗತಿಶೀಲ, ನವ್ಯ ಮಾರ್ಗಗಳು ತೆರೆದುಕೊಳ್ಳುವ ಸಂದರ್ಭದಲ್ಲಿ. ಪ್ರಗತಿಶೀಲರು ತಮ್ಮ ಪಂಥವನ್ನು ಸ್ಥಾಪಿಸುವಾಗ ತಮಗಿಂತ ಹಿಂದಿನ ಸಂಪ್ರದಾಯವನ್ನು ಖಂಡಿಸಿದರು. ತಮಗಿಂತ ಹಿಂದಿನ ಪಂಥಕ್ಕಿಂತ ತಮ್ಮದು ಹೇಗೆ ಭಿನ್ನ ಎಂಬುದನ್ನು ಅವರು ಸ್ಪಷ್ಟಪಡಿಸಬೇಕಿತ್ತು. ಹಾಗೆ ನೋಡಿದರೆ ನವೋದಯದವರು ತಮ್ಮ ಸಾಹಿತ್ಯ ಮಾರ್ಗಕ್ಕೆ ಯಾವುದೇ ಹೆಸರನ್ನು ಕೊಟ್ಟಿರಲಿಲ್ಲ. ಈ ನಾಮಕರಣ ನಡೆದದ್ದು ಪ್ರಗತಿಶೀಲ, ನವ್ಯ ಸಂದರ್ಭದಲ್ಲಿಯೇ. ಪ್ರಗತಿಶೀಲರು ತಮ್ಮದು ಪ್ರಗತಿಶೀಲ ಎಂದು ಹೇಳಿಕೊಳ್ಳುವಾಗ ತಮಗಿಂತ ಹಿಂದಿನದು ಹೇಗೆ ಪ್ರಗತಿಶೀಲ ಅಲ್ಲ ಎನ್ನುವುದನ್ನು ಹೇಳುತ್ತ ಸಾಹಿತ್ಯ ಏಕೆ ಪ್ರಗತಿಶೀಲವಾಗಿರಬೇಕು ಎನ್ನುವುದನ್ನು ವಿವರಿಸಲು ಯತ್ನಿಸಿದರು. ನವ್ಯದವರೂ ಹಾಗೆಯೇ. ಬಂಡಾಯದವರೂ ಸಾಹಿತ್ಯದಲ್ಲಿ ಬಂಡಾಯ ಮನೋಧರ್ಮ ಏಕಿರಬೇಕು ಎನ್ನುವುದನ್ನು ವಿವರಿಸುತ್ತ ತಮಗಿಂತ ಹಿಂದಿನ ಸಾಹಿತ್ಯದಲ್ಲಿ ಏನಿರಲಿಲ್ಲ ಎನ್ನುವುದನ್ನು ಸಿದ್ಧಾಂತಪರವಾಗಿ ಮಂಡಿಸಿದರು.

ಇಂಥ ಸಿದ್ಧಾಂತಗಳ ಮಂಡನೆ, ಖಂಡನೆಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಿರ್ದಿಷ್ಟವಾದ ಪರಿಣಾಮಗಳನ್ನು ಉಂಟುಮಾಡಿವೆ. ಈಗಾಗಲೇ ಸಿದ್ಧ ಹೆಸರುಗಳನ್ನು ಪಡೆದಿರುವ ಸಾಹಿತ್ಯ ಪಂಥಗಳ ಶೀರ್ಷಿಕೆಯಲ್ಲಿಯೇ ಬದಲಾವಣೆಗೆ ಕಾರಣವಾದ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ನವೋದಯದ ಒಟ್ಟೂ ಪ್ರಜ್ಞೆ ನಾಡು-ನುಡಿ, ರಾಷ್ಟ್ರ, ಸಮಾಜ ಹಾಗೂ ಧರ್ಮದ ಬಗೆಗಿನ ಕಾಳಜಿಯಲ್ಲಿ ವ್ಯಕ್ತವಾಗಿದೆ. ಈ ಅಂಶಗಳೇ ನವೋದಯ ಸಾಹಿತಿಗಳ ಪ್ರಜ್ಞೆಯನ್ನು ನಿಯಂತ್ರಿಸಿದ್ದು. ಇಂಥ ಒಂದು ಪ್ರಜ್ಞೆ ರೂಪುಪಡೆಯುವುದಕ್ಕೆ ಅಂದಿನ ಸಮಾಜ ವ್ಯವಸ್ಥೆಯೇ ಕಾರಣ. ಜನಮನವನ್ನು ಸಮರ್ಥವಾಗಿ ಪ್ರತಿಪಾದಿಸಿದ್ದು ಅಂದಿನ ಪತ್ರಿಕೆಗಳೇ. ಈ ಮೂಲಕ ಪತ್ರಿಕೆಗಳು ಸಾಹಿತ್ಯ ಪ್ರವಾಹ ಹೀಗೆಯೇ ಹರಿಯಬೇಕು ಎಂದು ನಿರ್ದೇಶಿಸಿದವು.

ನಾಡು ನುಡಿ: ನವೋದಯ ಸಾಹಿತಿಗಳಿಗೆ 'ನಾಡು ನುಡಿ' ತಾವು ಧಾರಣ ಮಾಡಲೇಬೇಕಾದ 'ಕನ್ನಡ ಧರ್ಮ'ವಾಯಿತು. ನಾಡು ಮತ್ತು ನುಡಿಯನ್ನು ಅವರು ಒಟ್ಟೊಟ್ಟಿಗೇ ಗ್ರಹಿಸುತ್ತಾರೆ. ನಾಡಿಲ್ಲದೆ ನುಡಿಯಿಲ್ಲ; ನುಡಿಯಿಲ್ಲದೆ ನಾಡಿಲ್ಲ. ಇಂಥ ಪ್ರಜ್ಞೆಯೇ ಮುಂದೆ ಸ್ವಾತಂತ್ರ್ಯೋತ್ತರದಲ್ಲಿ ಭಾಷಾವಾರು ರಾಜ್ಯಗಳ ನಿರ್ಮಾಣಕ್ಕೆ ಕಾರಣವಾಗುತ್ತದೆ. ಈ ಭಾವನೆ ಬಲಗೊಳ್ಳಲು ಆ ಸಂದರ್ಭದ ರಾಜಕೀಯ, ಸಾಮಾಜಿಕ ಅಂಶಗಳೂ ಕಾರಣವಾದವು. ಬ್ರಿಟಿಷ್ ಆಡಳಿತವು ಬಂಗಾಳವನ್ನು ವಿಭಜಿಸಿದ್ದರಿಂದ ಒಂದು ಭಾಷೆಯನ್ನು ಆಡುವ ಜನರಿರುವ ಪ್ರದೇಶ ಒಂದು ಆಡಳಿತದಲ್ಲಿ ಇರಬೇಕು ಎಂಬ ಭಾವನೆ ಬೆಳೆಯುವುದಕ್ಕೆ ಕಾರಣವಾಯಿತು. ಇದಕ್ಕಿಂತ ಮೊದಲು ಕನ್ನಡ ನಾಡು ಬೇರೆಬೇರೆ ಆಡಳಿತದಲ್ಲಿ ಸೇರಿರುವ ಬಗ್ಗೆ ಅತೃಪ್ತಿ, ಅಸಮಾಧಾನ, ಹತಾಶೆ ವ್ಯಕ್ತವಾದುದನ್ನು ಗಮನಿಸಿದ್ದೇವೆ. ಆದರೆ ಈ ಬೇರೆಬೇರೆ ಆಡಳಿತದಲ್ಲಿದ್ದ ಪ್ರದೇಶಗಳು ಒಟ್ಟಿಗೆ ಸೇರಬೇಕು ಎಂಬ ಭಾವನೆ ಬಲಗೊಳ್ಳುವಂತೆ ಆಗಿದ್ದು ಬಂಗಾಲ ವಿಭಜನೆಯಿಂದ. ನಾಡಿನ ಜೊತೆಯಲ್ಲಿಯೇ ನುಡಿಯ ಬಗೆಗಿನ ಕಾಳಜಿಯನ್ನೂ ನಾವು ಗಮನಿಸಿದ್ದೇವೆ. ಅದು ಈ ಅವಧಿಯಲ್ಲಿಯೂ ಮುಂದುವರಿಯಿತು.

೧೯೦೭ರ ನವೆಂಬರ್ ತಿಂಗಳ 'ಶ್ರೀಕೃಷ್ಣ ಸೂಕ್ತಿ'ಯಲ್ಲಿ ನಮ್ಮ ದೇಶ ಭಾಷೆಯ ಈಗಿನ ದುಸ್ಥಿತಿಯನ್ನು ಎಂ.ಡಿ. ಅಳಸಿಂಗಾಚಾರ್ಯರು ಮನಮುಟ್ಟುವ ಹಾಗೆ ವಿವರಿಸಿದ್ದಾರೆ. "ಒಂದೆರಡು 'ಇಂಗ್ಲಿಷು' ಶಬ್ದಗಳನ್ನು ತಿಳಿದುಕೊಂಡ ಚಿಕ್ಕ ಹುಡುಗರು ಕೂಡ, ತಾವು ಮಾತನಾಡುವಾಗ, ತಮಗೆ ತಿಳಿದಿರುವಷ್ಟು ಪದಗಳನ್ನು ಸೇರಿಸಿ ಆಡುವುದಕ್ಕೆ ಪ್ರಯತ್ನಿಸುವರು. ನಮ್ಮ ಭಾಷೆಯನ್ನು ಆಡುವುದು ಕೂಡ ಅವಮಾನಕರವೆಂದು ಕೆಲವರ ಮನಸ್ಸಿನಲ್ಲಿ ಭಾವವಿರುವುದು" ಎಂದು ವ್ಯಥೆಯಿಂದ ಹೇಳುವರು. ಒಂದು ಭಾಷೆಯಲ್ಲಿ ನ್ಯೂನತೆ ಕಂಡು ಬಂದರೆ ಅದು ಆಯಾ ಜನಗಳ ನ್ಯೂನತೆಯೇ ಹೊರತು ಬೇರೆಯಲ್ಲ ಎಂದು ಎಚ್ಚರಿಸುವರು. ಇದರಿಂದ ತಮ್ಮ ಭಾಷೆಯನ್ನು ಅಪ್ರಯೋಜಕವೆಂದು ತಿರಸ್ಕರಿಸಿ ಅನಾದರಿಸುವವರು, ತಮ್ಮನ್ನು ತಾವೇ ಅಪ್ರಯೋಜಕರು ಎಂದಂತೆ ಅಲ್ಲವೆ? ಎಂದು ಪ್ರಶ್ನಿಸುವರು. ಅಳಸಿಂಗಾಚಾರ್ಯರ ಈ ಕಳಕಳಿಯ ಮಾತುಗಳು ಕೆಲವರನ್ನಾದರೂ ಪ್ರಚೋದಿಸಿದ್ದರೆ ಅದು ಭಾಷೆಗೆ ದೊಡ್ಡ ಕೊಡುಗೆಯೇ ಆಗಬಹುದು. ಸಾಹಿತ್ಯದ ಸಾಧನವಾದ ಭಾಷೆಯು ಕೆಲವೊಮ್ಮೆ ಅದೇ ಭಾಷಿಕರಿಂದಲೇ ಅವಜ್ಞೆಗೆ ಈಡಾದಾಗ ಸಾಹಿತ್ಯಪತ್ರಿಕೆಗಳು ಎಚ್ಚರಿಸಿವೆ.

ಇದೇ ಅಭಿಪ್ರಾಯಗಳು ಆ ಕಾಲದ ಸಾಹಿತ್ಯ ಕೃತಿಗಳಲ್ಲಿಯೂ ವ್ಯಕ್ತವಾಗಿದೆ. ಮಂಗಳೂರು ಭಾಗದಲ್ಲಿ ಈ ಭಾಷಿಕ ಕಾಳಜಿ ಇಂಗ್ಲಿಷ್ ವಿರುದ್ಧವಿದ್ದರೆ, ಧಾರವಾಡ ಭಾಗದಲ್ಲಿ ಇದು ಇಂಗ್ಲಿಷ್ ಜೊತೆಯಲ್ಲಿ ಮರಾಠಿಯ ವಿರುದ್ಧ ವ್ಯಕ್ತವಾಗಿದೆ. ಮೈಸೂರು ಭಾಗದಲ್ಲಿ ಇದು ಪಾರಸಿಕ ಭಾಷೆಯ ವಿರುದ್ಧವಿದೆ. ಎಂ.ಎಸ್.ಪುಟ್ಟಣ್ಣನವರ 'ಮುಸುಕು ತೆಗೆಯೇ ಮಾಯಾಂಗನೆ' ಕಾದಂಬರಿಯಲ್ಲಿ ಮೈಸೂರು ಅರಮನೆಯ ಆಡಳಿತದ

ಚಿತ್ರಣಕೊಡುವಾಗ ಈ ಪಾರಸಿಕ ಭಾಷೆಯ ಬಗೆಗಿದ್ದ ಅಸಹನೆ ವ್ಯಕ್ತವಾಗಿದೆ.

೧೯೦೮ರಲ್ಲಿ ಪ್ರಕಟವಾದ ಕೆರೂರು ವಾಸುದೇವರಾಯರ 'ಇಂದಿರಾ' ಕಾದಂಬರಿಯಲ್ಲಿ ಕನ್ನಡ ನುಡಿಯ ಬೆಳವಣಿಗೆಯ ವಿಚಾರದಲ್ಲಿ ಕೆಲವು ನಿರ್ದಿಷ್ಟ ವಿಚಾರಗಳನ್ನು ವ್ಯಕ್ತಪಡಿಸಲಾಗಿದೆ. ಕೆರೂರರು 'ರಾಜಹಂಸ' ಪತ್ರಿಕೆಯ ಸಂಪಾದಕರೂ ಹೌದು. ಈ ಪತ್ರಿಕೆ 'ಪ್ರಾಸ' ತ್ಯಾಗದ ವಿಚಾರದಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತ್ತು. ಸಾಹಿತ್ಯಕ ವಿಚಾರಗಳಲ್ಲಿ ಅದರ ಅಭಿಪ್ರಾಯಗಳಿಗೆ ಮಾನ್ಯತೆ ಇತ್ತು. 'ರಾಜಹಂಸ'ದಲ್ಲಿ ಪ್ರತಿಪಾದಿಸಿದ ವಿಚಾರಗಳನ್ನೇ ಕೆರೂರರು ತಮ್ಮ ಕಾದಂಬರಿಯ ಪಾತ್ರಗಳ ಮೂಲಕವೂ ವ್ಯಕ್ತಪಡಿಸಿದ್ದಾರೆ.

ಕಾದಂಬರಿಯ 'ವಿಜ್ಞಾಪನೆ'ಯಲ್ಲಿ ಅವರು, "ದಕ್ಷಿಣ ಕರ್ನಾಟಕದ ಕನ್ನಡಕ್ಕೂ ಉತ್ತರ ಕರ್ನಾಟಕದ ಕನ್ನಡಕ್ಕೂ ಹೆಚ್ಚು ಕಡಿಮೆ ಅದೆ. ಎರಡೂ ಪ್ರಾಂತಗಳ ಭಾಷೆಯನ್ನು ಒಂದಾಗಿ ಮಾಡುವುದಕ್ಕೆ ಅವಶ್ಯವಾಗಿ ಎಷ್ಟೋ ಕಾಲ ಹೋಗಬೇಕು. ಸದ್ಯಕ್ಕೆ ಕೆಲವು ಶಬ್ದಗಳಾಗಲಿ ಪ್ರಯೋಗಗಳಾಗಲಿ ನಮಗೂ ಮೈಸೂರು ಪ್ರಾಂತ ನಿವಾಸಿಗಳಿಗೂ ಪರಸ್ಪರರಿಗೆ ತಪ್ಪಾಗಿ ಕಂಡರೂ ಕಾಲಾಂತರದಿಂದ ಉಭಯತರಿಗೂ ಗ್ರಾಹ್ಯವಾಗಬಹುದೆಂದು ನಂಬಿ ಇಂಥ ಶಬ್ದ ಪ್ರಯೋಗಗಳ ಸಮಾವೇಶವನ್ನು ತಕ್ಕಮಟ್ಟಿಗೆ ಈ ಪುಸ್ತಕದಲ್ಲಿ ಮಾಡಿದೆ" ಎಂದು ಹೇಳುವರು. ಇದರ ಹಿಂದಿನ ಕಾರಣ ಕನ್ನಡ ನಾಡು ಒಂದೇ ಆಡಳಿತದಲ್ಲಿ ಇಲ್ಲದಿರುವುದು. ಜನರ ನಡುವೆ ಸಂಪರ್ಕದ ಕೊರತೆ ಇರುವುದು.

"ಪುರಾಣಮಿತ್ಯೇವ ನ ಸಾಧು ಸರ್ವಂ- ಎಂಬ ಪದದ ಭಾಷಾಂತರವು 'ಪ್ರವೇಶಮಲ್ತೈ ಪಳದಂದಯಲ್ಲಂ' ಎಂತಾಗಲು

ಲಲಿತವಹ ಕನ್ನಡದ ನುಡಿಯಲಿ

ತಿಳಿದು ತನ್ನೊಳು ತನ್ನ ಸುಖವನು

ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲ್ಲಿನ್ನೇನು?

ಎಂಬ ಅಭಿಮಾನಯುಕ್ತವಾದ ಉಕ್ತಿಗೆ ಅರದಾಳವೇ ಹತ್ತಿದಂತಾಗುತ್ತದಲ್ಲ! ಮೇಲೆ ತೋರಿಸಿದ ಉದಾಹರಣೆಯಲ್ಲಿ ಸಂಸ್ಕೃತವನ್ನು ಹಿಡುಕೊಂಡು ಕನ್ನಡದ ಅರ್ಥಮಾಡಬೇಕಾಗಿರುವದು" ಎಂದು ಹೇಳುವ ಕೆರೂರರು ಭಾಷೆ ಲಲಿತವಾಗಿಬೇಕು ಎಂಬ ಕಡೆಗೆ ಗಮನ ಸೆಳೆಯುವರು. ಸಾಹಿತ್ಯಕ್ಕೆ ಬಳಕೆಯಾಗುವ ಭಾಷೆ ಎಂಥದಿರಬೇಕು ಎಂಬ ಬಗ್ಗೆ ಆ ಕಾಲದ ಪತ್ರಿಕೆಗಳಲ್ಲಿ ವ್ಯಕ್ತಗೊಂಡ ಅಭಿಪ್ರಾಯಗಳು ಇಲ್ಲಿ ಪ್ರತಿಫಲಿಸಿರುವುದನ್ನು ಕಾಣಬಹುದು.

'ಇಂದಿರಾ'ದ ಒಡಲೊಳಗಿನಿಂದ ಈ ಭಾಗವನ್ನು ನೋಡಬೇಕು: 'ಮೃಚ್ಛ ಕಟಕ' ನಾಟಕ ಪ್ರದರ್ಶನದ ಬಗ್ಗೆ ನಡೆದ ಚರ್ಚೆಯ ಭಾಗ ಇದು-

“ಏನು ಮಣ್ಣೋ, ಕೃಷ್ಣಮಾಚಾರ್ಯರ ಮೃತ್‌ಶಕಟದಲ್ಲಿಯ ಕನ್ನಡ ಅಕ್ಷರಗಳ ಗುರುತು ಮಾತ್ರ ಹತ್ತಿತು. ಅದರರ್ಥವು ಬರೆದವರೊಬ್ಬರಿಗೇ ತಿಳಿದರೆ ಸೈ. ಅನ್ಯರ ಪಾಡೇನು? ಆ ಅಪ್ರತಿಮ ಗ್ರಂಥದ ಅರ್ಥ ಮಾಡುವುದಕ್ಕಾಗಿ ಮೂಲ ಸಂಸ್ಕೃತ ನಾಟಕವನ್ನು ಹಿಡುಕೊಂಡು ಅಕ್ಷರಾಕ್ಷರಕ್ಕೆ ತಲೆಯೊಡಕೊಂಡು ಪಂಡಿತರು ಮಣ್ಣು ಮುಕ್ಕಿಹೋದರು. ನಮ್ಮ ಆಚಾರ್ಯರಂಥವರು ಇನ್ನೂ ಹತ್ತು ಜನರು ಕೂಡಿ ಕನ್ನಡ ಭಾಷೆಯನ್ನು ಪರಿಶೋಧಿಸಿ ಬಿಟ್ಟರೆ, ಈ ಭಾಷೆಯು ಬರುವ ಹತ್ತು ವರ್ಷಗಳಲ್ಲಿ ಇತ್ತೋ ಇಲ್ಲವೋ ಎಂಬುದಾಗಿ ಹೋಗಲಿಕ್ಕೆ ಸಂದೇಹವಿಲ್ಲ. ಧಾರವಾಡ ದೇಶದಲ್ಲಿ ಕೂಡಾ ಕೆಲವು ಪಂಡಿತರು ‘ಅಳಲೀ ಭಕ್ತಿ’ ಎಂಬ ನ್ಯಾಯದಿಂದ ತಮ್ಮ ಕೈಲಾದ ಮಟ್ಟಿಗೆ ಈ ಮಹತ್ಕಾರ್ಯಕ್ಕೆ ನೆರವಾಗುತ್ತಿರುವರೆಂದು ‘ರಾಜಹಂಸ’ವು ಹೇಳುತ್ತದೆ.” (ಇಂದಿರಾ- ಪುಟ ೪೧).

ಕೆರೂರರು ಇಲ್ಲಿ ಭಾಷೆಯು ಜನರಿಂದ ದೂರವಾದರೆ ಅದಕ್ಕೊದಗುವ ಅಪಾಯದ ಬಗ್ಗೆ ಎಚ್ಚರಿಕೆ ನೀಡುತ್ತಾರೆ. ಸಂಕ್ರಮಣ ಕಾಲದಲ್ಲಿ ಇಂಥ ಎಚ್ಚರ ಆಗತ್ಯವಾಗಿಯೇ ಇತ್ತು. ಆ ಕೆಲಸವನ್ನು ‘ರಾಜಹಂಸ’ ಕೂಡ ಮಾಡುತ್ತಿತ್ತು ಎಂಬ ವಿಚಾರ ಇಲ್ಲಿಂದ ತಿಳಿದು ಬರುತ್ತದೆ.

ಸಾಹಿತ್ಯದ ಭಾಷೆ ಹಳಗನ್ನಡವೇ ಹೊಸಗನ್ನಡವೇ ಎಂಬ ಮುದ್ದಣನ ದ್ವಂದ್ವ ಆ ಕಾಲದ ಎಲ್ಲ ಸಾಹಿತಿಗಳಲ್ಲೂ ಇದ್ದಿತ್ತು. ಇಂಥ ದ್ವಂದ್ವಕ್ಕೆ ಕೊನೆಯ ಮಾತು ಎನ್ನುವಂಥ ಚರ್ಚೆ ಕೂಡ ‘ಇಂದಿರಾ’ದಲ್ಲಿ ಬಂದಿದೆ.

“ಮಹಾರಾಷ್ಟ್ರ ಗ್ರಂಥ ಸಂಗ್ರಹವು ದೊಡ್ಡದಿದ್ದು ಆ ಭಾಷೆಯಾದರೂ ಬಹು ಸೌಕರ್ಯವುಳ್ಳದ್ದೂ ಸುರಸವಾದದ್ದೂ ಇರುವುದು. ಕನ್ನಡವು ಕಾಡು ಜನರ ಭಾಷೆಯೇ ಸರಿ. ವಸ್ತುಸ್ಥಿತಿ ಹೀಗಿರುವುದು, ನಾನು ಸುಳ್ಳು ಹೇಳುವದಿಲ್ಲ” ಎಂದು ಡಾಕ್ಟರನು ನುಡಿದು ಹೆಮ್ಮೆಯಿಂದ ಎಲ್ಲರ ಕಡೆಗೂ ನೋಡಿದನು.

ದೇವಯಾನಿಯು ಸ್ವಸ್ಥಳಾಗಿ ಮೃದ್ವಾಸನದಲ್ಲಿ ಆತುಕೊಂಡು ಕುಳಿತವಳು ಎದ್ದು ಕುಳಿತು, “ಏನಂದಿರಿ ಡಾಕ್ಟರರೇ? ಕನ್ನಡ ಭಾಷೆಯಲ್ಲಿ ಬರೆದ ಕಾವ್ಯಗಳ ಮಾಧುರ್ಯವು ಮಹಾರಾಷ್ಟ್ರ ಭಾಷೆಯಲ್ಲಿ ಹುಡುಕಿದರೂ ಸಿಕ್ಕಲರಿಯದು. ಲಕ್ಷ್ಮೀಶ, ಷಡಕ್ಷರಿ, ಅಭಿನವ ಪಂಪ ಮುಂತಾದ ಕವಿಗಳ ಗ್ರಂಥಗಳನ್ನೋದಿದರೆ ರಸಜ್ಞರಿಗೆ ಉದ್ರೇಕ ಬಾರದಿರದು”

“ಆದರೆ ಹಳಗನ್ನಡವನ್ನು ಹೊಸಗನ್ನಡದಲ್ಲಿ ಕಲಿಸಿ, ಕರ್ಣಕಟುಗಳಾದ ಸಂಧಿಗಳನ್ನು ಜಾಣತನವೆಂದು ತಿಳಿದು ಮಾಡಿ ಅರ್ಥ ತಿಳಿಯುವುದೊತ್ತಟ್ಟಿಗಿರಲಿ, ಓದಲಿಕ್ಕೂ ಬಾರದಂಥ ಹೊತ್ತಿಗೆಗಳನ್ನು ಬರೆದವರೇ ಈಗ ಪಂಡಿತರೆಂದೆನಿಸುವರು. ಹಳಗನ್ನಡವು ಅಪ್ರಯುಕ್ತವಾದದ್ದೆಂದು ಹಿಂದಕ್ಕುಳಿಯಿತು. ಅದನ್ನು ಮತ್ತೆ ತೆಗೆಯುವುದರಲ್ಲಿ ಅರ್ಥವಿಲ್ಲ. ವೇದದ ಭಾಷೆಯಂಥ ಸಂಸ್ಕೃತದಲ್ಲಿ ಕಾಲಿದಾಸಾದಿಗಳಿಗೆ ಗ್ರಂಥ ಬರೆಯಲಿಕ್ಕೆ ಬರುತ್ತಿದ್ದಿಲ್ಲವೇನು? ಚಾಸರನಂಥ ಇಂಗ್ರಜಿಯಲ್ಲಿ, ಅಡ್ಡಿಸನ್ ಸ್ಕಾಟ್ ಪ್ರಭೃತಿಗಳಿಗೆ

ಬರೆಯುವುದು ಆಗಾಧವಾಗಿದ್ದಿಲ್ಲ. ಮಾತ್ರ ಅವರು ಬರೆದಿದ್ದರೆ ನಿಜವಾಗಿ ಮೂರ್ಖರೆಂದೆನ್ನಿಸಿಕೊಳ್ಳುತ್ತಿದ್ದರು. ಮಹಾ ಭಾರತದ ಕಾಲದಲ್ಲಿ ಧನುರ್ಬಾಣಗಳಿಂದ ಯುದ್ಧ ಮಾಡುತ್ತಿದ್ದರು. ಆಗಿನ ವೀರರ ಧನುರ್ವಿದ್ಯಾ ಕೌಶಲವನ್ನು ವ್ಯಾಸರು ಬಹು ರಮಣೀಯವಾಗಿ ವರ್ಣಿಸಿರುವರೆಂದು ನಾವು ಬಿಲ್ಲು ಬಾಣಗಳನ್ನು ಹಿಡುಕೊಂಡು ಹಲಹಲಲಲವೆಂದು ತಲೆ ಭಾರಾದ ಕಿರೀಟ ಹಾಕಿಕೊಂಡು ನಿಂತರೆ ಎಷ್ಟು ಉಪಹಾಸಕ್ಕೆ ಪಾತ್ರರಾಗುವೆವು! ಈ ಹಳಗನ್ನಡ ಪ್ರಿಯರೇ ಪ್ರಚಲಿತವಾದ ಕನ್ನಡ ಪ್ರಸಾರಕ್ಕೆ ಕಾಲ್ತೊಡ್ಡಕಾಗಿರುವರು. ಈ ಹೊಸಗನ್ನಡಕ್ಕೆ ಹೊಸ ಮಾದರಿಯ ಚಾಲನಿಯನ್ನು ಕೊಟ್ಟು ರಸಾಲಂಕಾರಗಳನ್ನು ವ್ಯಕ್ತಪಡಿಸುವಂತೆ ಸದ್ವಸ್ತು ವರ್ಣನೆಯುಳ್ಳ ಗ್ರಂಥಗಳನ್ನು ಪಂಡಿತರು ಬರೆಯಹತ್ತಿದರೆ ಮಹಾರಾಷ್ಟ್ರ ಭಾಷೆಯು ಎಷ್ಟು ಹಿಂದುಳಿದಿರುವುದೆಂಬುದನ್ನು ನಾವು ಹಿಂತಿರುಗಿ ನೋಡಬಹುದು. ಭಾಷಾ ಸೌಕರ್ಯಕ್ಕಾಗಿಯೇ ಮಹಾರಾಷ್ಟ್ರೀಯರು ಶಬ್ದ ಸಂಧಿಗಳ ಗೋಜಿಗೆ ಹೋಗಲಿಲ್ಲ. ಅರ್ಥ ಗಾಂಭೀರ್ಯದ ಕಡೆಗೇ ಅವರ ದೃಷ್ಟಿಯಿದ್ದದ್ದರಿಂದ ಮಹಾರಾಷ್ಟ್ರ ಭಾಷೆಯು ಈಗಿದ್ದ ಸ್ಥಿತಿಗೆ ಬಂದಿತು." (ಇಂದಿರಾ-ಪುಟ ೧೪೨-೧೪೩)

ಕೆರೂರರು ಇಲ್ಲಿ ಸ್ಪಷ್ಟವಾಗಿ ಸಮಕಾಲೀನ ಭಾಷೆಯನ್ನೇ ಸಾಹಿತ್ಯಕ್ಕೆ ಬಳಸಬೇಕು ಎನ್ನುವುದನ್ನು ಹೇಳುತ್ತಾರೆ. ಧಾರವಾಡದ ಕಡೆಗೆ ಕನ್ನಡಕ್ಕೆ ಪ್ರತಿಸ್ಪರ್ಧಿ ಭಾಷೆ ಮರಾಠಿಯಾಗಿತ್ತು. ಮರಾಠಿ ಭಾಷೆಗಿಂತ ಕನ್ನಡ ಕಡಿಮೆಯದಲ್ಲ ಎಂಬ ಸಮರ್ಥನೆಯ ಜೊತೆಯಲ್ಲಿಯೇ ಮರಾಠಿಯನ್ನು ಮೀರಲು ಕನ್ನಡದಲ್ಲಿ ಏನೇನು ಮಾಡಬೇಕು ಎಂಬ ಸ್ಪಷ್ಟ ವಿಚಾರಗಳು ಇಲ್ಲಿವೆ. ಕೆರೂರರ ಈ ಅಭಿಪ್ರಾಯಗಳನ್ನು ನಾವು 'ಶೋಧಕ'ದಲ್ಲಿ ವೆಂಕಟರಂಗೋ ಕಟ್ಟಿ ಬರೆದ ಸಂಪಾದಕೀಯದೊಂದಿಗೆ ಹೋಲಿಸಿ ನೋಡಬೇಕು. ಎರಡಕ್ಕೂ ಇರುವ ಸಾಮ್ಯ ಗೊತ್ತಾಗುತ್ತದೆ. ಇದು ಆ ಕಾಲದ ಪತ್ರಿಕೆಗಳು 'ಕನ್ನಡ ಧರ್ಮ'ವನ್ನು ಯಾವ ರೀತಿ ಎತ್ತಿ ಹಿಡಿದವು, ಸಾಹಿತ್ಯ ಕೃತಿಗಳು ಅದನ್ನು ಹೇಗೆ ಅನುಸರಿಸಿದವು ಎನ್ನುವುದಕ್ಕೆ ಒಂದು ಉದಾಹರಣೆ ಮಾತ್ರ. ಕಟ್ಟಿಯವರ ಕೃತಿಗಳನ್ನು ಕೆರೂರರು ಓದಿದ್ದರು ಎನ್ನುವುದಕ್ಕೆ 'ಇಂದಿರಾ'ದಲ್ಲಿಯೇ ಪುರಾವೆಗಳು ಸಿಗುತ್ತವೆ. (ಪುಟ-೧೮೫).

ಕೆರೂರರ ಅಭಿಪ್ರಾಯಗಳನ್ನು ಅನುಮೋದಿಸುವ ಒಂದು ಲೇಖನ 'ವಾಗ್ಭೂಷಣ'ದಲ್ಲಿ ಪ್ರಕಟವಾಗಿದೆ.[೩೩] ಇದನ್ನು ಬರೆದವರು ವಿದ್ವಾನ್ ಎಚ್.ಚನ್ನಕೇಶವಯ್ಯಂಗಾರ್ಯರು. ಲೇಖನದ ಹೆಸರು 'ಸಂಯುಕ್ತ ಕರ್ನಾಟಕ'. ಇದು ನಾಡಿನ ಏಕತೆಯ ಬಗ್ಗೆ ಮಾತ್ರ ಅಲ್ಲ ನುಡಿಯ ಏಕತೆಯ ಬಗ್ಗೆಯೂ ಹೇಳುತ್ತದೆ. ಒಂದೊಂದು ಭಾಗದಲ್ಲಿ ಕನ್ನಡ ಭಾಷೆಯ ಒಂದೊಂದು ರೂಪ ಬಳಕೆಯಾಗುತ್ತಿದ್ದ ಸಂದರ್ಭದಲ್ಲಿ ಇಂಥ ಕಳಕಳಿ ಸಹಜವಾಗಿಯೇ ಇದೆ.

೩೩.ವಾಗ್ಭೂಷಣ, ಸಂಪುಟ ೨೯, ಸಂಚಿಕೆ ೧೦, ಮೇ ೧೯೨೫

ಪ್ರಾಂತ ಭೇದ ತೊರೆಯಲು ಪ್ರಯತ್ನ: ಕರ್ನಾಟಕದಲ್ಲೆಲ್ಲ ಗ್ರಂಥಸ್ಥ ಭಾಷೆ ಒಂದೇ ರೀತಿಯಿರುವಂತೆ ಮಾಡಬೇಕೆಂದು ಅನೇಕ ವರ್ಷಗಳಿಂದ ನಡೆದ ಪ್ರಯತ್ನದ ಇತಿಹಾಸದ ಕಡೆಗೆ ಚನ್ನಕೇಶವಯ್ಯಂಗಾರ್ಯರು ಒಮ್ಮೆ ಗಮನ ಹರಿಸಿದ್ದಾರೆ. ಧಾರವಾಡದಲ್ಲಿ ನಡೆದ ಗ್ರಂಥಕರ್ತರ ಸಮ್ಮೇಳನದಲ್ಲಿ ಇದು ಮೊದಲಾಯಿತು ಎಂಬ ಅಂಶವನ್ನು ಅವರು ಹೇಳುವರು. ೧೯೧೫ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳದಲ್ಲಿ ಈ ಅಭಿಪ್ರಾಯಕ್ಕೆ ಬೆಂಬಲ ವ್ಯಕ್ತವಾಯಿತು ಎಂಬ ಅಂಶವನ್ನೂ ಹೇಳುವ ಅವರು, "ಅಂದಿನಿಂದ ಮೊನ್ನಿನ ಸಮ್ಮೇಳನದ ವರೆಗೂ ಭಾಷಾಭಿಮಾನಿಗಳು, ಅದರಲ್ಲಿಯೂ-ಮುಂಬಯಿ ಕರ್ನಾಟಕದವರು ಈ ವಿಷಯದಲ್ಲಿ ಬಹಳ ತಳಮಳಗೊಳ್ಳುತ್ತಿರುವರು. ಒಂದೇ ವಿಧವಾದ ಕ್ರಮಿಕ ಪುಸ್ತಕಗಳನ್ನು ಎಲ್ಲ ಪ್ರಾಂತ್ಯಗಳಲ್ಲಿಯೂ ಬಳಕೆಗೆ ತರಬೇಕೆಂದು ಬೇಗುದಿಯುತ್ತಿರುವರು...." ಎನ್ನುವ ಮೂಲಕ ಈ ವಿಷಯದಲ್ಲಿ ಉತ್ತರ ಕರ್ನಾಟಕದವರ ಕಳಕಳಿಯನ್ನು ಎತ್ತಿಹೇಳುವರು. ಭಾಷೆಯ ಏಕೀಕರಣಕ್ಕೆ ಸರ್ವತ್ರ ಒಂದೇ ವಿಧವಾದ ಕ್ರಮಿಕ ಪುಸ್ತಕಗಳನ್ನು ಬರೆಯಿಸಬೇಕೆಂಬುದು ಅವರ ಸಲಹೆ. ಇದು ಅದುವರೆಗೆ ನಡೆದ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿಯೂ ಕೇಳಿ ಬಂದಿತ್ತು. ಆದರೆ ಕ್ರಮಿಕ ಪುಸ್ತಕಗಳು ಉದ್ದೇಶಿತ ಪ್ರಭಾವ ಬೀರಿದವೆ? 'ಭಾಷಾ ಪ್ರವಾಹವು ಮುಂಬಯಿ ಕರ್ನಾಟಕದಲ್ಲಿ ರೂಢಿಸಿದ ಕ್ರಮಿಕ ಪುಸ್ತಕಗಳ ಪ್ರಭಾವವು ಬೀರದೆಯೇ ಹೇಗೆ ಗುಪ್ತಗಾಮಿನಿಯಾಗಿ ಹರಿದಿದೆಯೆಂಬುದನ್ನು ನೋಡಿರಿ' ಎನ್ನುವ ಲೇಖಕರು ಧಾರವಾಡ ಪ್ರಾಂತದಲ್ಲಿ ಹತ್ತು ಹನ್ನೆರಡು ವರ್ಷಗಳ ಹಿಂದೆ ಕಂಡು ಬರುತ್ತಿದ್ದ ಗ್ರಂಥಸ್ಥ ಭಾಷೆಗೂ ಈಗ ಕಾಣಬರುವ ಗ್ರಂಥಸ್ಥ ಭಾಷೆಗೂ ಉಂಟಾಗಿರುವ ತಾರತಮ್ಯವನ್ನು ವಿವೇಚಿಸುವರು. ಇದಕ್ಕೆ ಕಾರಣ ಕೇವಲ ಸಾಹಿತ್ಯ ಸಮ್ಮೇಳನ, ಪರಿಷತ್ತುಗಳಲ್ಲ. ವಿವಿಧ ಪ್ರಾಂತಗಳ ಜನರಲ್ಲಿ ಉಂಟಾಗಿರುವ ಪರಸ್ಪರ ಪರಿಚಯ, ಸೌಹಾರ್ದ ಎನ್ನುತ್ತಾರೆ. ಒಂದು ಪ್ರಾಂತದವರು ಇನ್ನೊಂದು ಪ್ರಾಂತದ ಭಾಷೆಯನ್ನು ಹೀಯಾಳಿಸುವುದಕ್ಕೆ ಕಾರಣ ಕನ್ನಡಕ್ಕೆ ಸೋಕಿರುವ ಪರಭಾಷೆಗಳ ಗಾಳಿ. ಅಲ್ಲದೆ ಒಂದು ಕಡೆಯವರು ಮತ್ತೊಂದು ಕಡೆಯವರು ಬಳಸುವ ಪದಗಳನ್ನು ಮಾತ್ರವೇ ಅಲ್ಲಗಳೆಯುತ್ತಿರುವುದು ಎಂಬ ನಿರ್ಣಯಕ್ಕೆ ಬರುವರು.

ಇಷ್ಟಕ್ಕಾಗಿಯೇ ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದೆಂದು ಹೇಳುವುದರಲ್ಲಿ ತಥ್ಯಾಂಶವಿಲ್ಲ. ರಚನೆಯೂ ಧೋರಣೆಯೂ ಕನ್ನಡಕ್ಕೆ ಸ್ವಭಾವವಾಗಿ ಇರಬೇಕಾದಂತೆ ಇದ್ದರೆ, ಹೊಸ ಪದಗಳು ಪೂರ್ವೋತ್ತರ ಸಂದರ್ಭಗಳಿಂದ ಸಾಮಾನ್ಯವಾಗಿ ಅರ್ಥವಾಗಬಹುದು ಎನ್ನುವ ಲೇಖಕರು ಈಗ ಕನ್ನಡದಲ್ಲಿ ಪ್ರಾಂತಸ್ಥ ಭೇದವೆಂದರೆ, ವಸ್ತ್ರೋಪಾದಿಯಲ್ಲಿರುವ ಬರಿಯ ಪದಗಳಿಂದಾಗಿಲ್ಲ, ಕನ್ನಡದ ತಿರುಳನ್ನೇ, ಕನ್ನಡದ ಪ್ರಾಣವನ್ನೇ ಹಿಂಡಿ ಹೀರುತ್ತಿರುವ ಕನ್ನಡಕ್ಕೆ ಹೊಸದಾದ ವಿಲಕ್ಷಣ ರಚನೆಯಿಂದ ವಿನೂತನ ಧೋರಣೆಯಿಂದ ಬಂದೊದಗಿದೆ ಎನ್ನುತ್ತ ಅದರ ಕಾರಣಗಳನ್ನು ವಿಶ್ಲೇಷಿಸುವರು. "...ಧಾರವಾಡ ಪ್ರಾಂತವು, ಎಂದರೆ ಬಹುಭಾಗದ ಮುಂಬಯಿ ಕರ್ನಾಟಕವು ಅನೇಕ

ಕಾಲ ಮಹಮ್ಮದೀಯರ ದಾಳಿಯಲ್ಲಿ ನರಳಿ ಬಿಸಿಲಿಂದ ಬೆಂಕಿಗೆ ಬಿದ್ದಂತೆ, ಮತ್ತೆ ಅನೇಕ ಕಾಲ ಪೇಶ್ವೆಗಳ ದಾಂಧಲೆಗೆ ಸಿಕ್ಕಿ ನುರುಗಿ ಹೋಯಿತು..." ಎನ್ನುವ ಲೇಖಕರು ಇದರಲ್ಲಿ ತಿಲಕರ 'ಕೇಸರಿ' ಪತ್ರಿಕೆಯ ಪಾತ್ರವೂ ಇರುವುದನ್ನು ಗುರುತಿಸುವರು. ಇದರಿಂದಾಗಿ ಕನ್ನಡದ ಹಲವು ಪದಗಳು ಕಣ್ಮರೆಯಾದುದಲ್ಲದೆ ಸಹಜವಾದ ಧೋರಣೆಯನ್ನೂ ರಚನೆಯನ್ನೂ ಕಳೆದುಕೊಂಡಿತು ಎನ್ನುವರು. ಈ ರೀತಿ ಬಂದ ಪಗಳನ್ನು ವಿವೇಕಿಗಳಾದವರು ಯಾರೂ ತಿರಸ್ಕರಿಸುವುದಿಲ್ಲ. ಇಂಗ್ಲಿಷ್ ಭಾಷೆಯ ಕೋಶದಲ್ಲಿ ಮುಕ್ಕಾಲು ಪಾಲಿನಷ್ಟು ಅನ್ಯರ ಹಂಗಿಗೆ ಗುರಿಯಾಗಿರುವಾಗ ಕನ್ನಡವು ಅನ್ಯದೇಶ್ಯ ಶಬ್ದಗಳನ್ನು ತಿರಸ್ಕರಿಸಬೇಕಿಲ್ಲ ಎಂಬ ಮಹತ್ವದ ಮಾತನ್ನು ಹೇಳುವರು. ಜೊತೆಯಲ್ಲಿ ಭಾಷೆಯ ಸಹಜ ಬೆಳವಣಿಗೆಯನ್ನು ಒಪ್ಪಿಕೊಳ್ಳಬೇಕೆಂಬ ಕಿವಿಮಾತು ಅದರಲ್ಲಿ ಅಡಗಿದೆ.

ನುಡಿಯ ಏಕೀಕರಣದಲ್ಲಿಯೇ ನಾಡಿನ ಏಕೀಕರಣವೂ ಇದೆ ಎಂಬ ಮಹತ್ವದ ಅಂಶವನ್ನು ಈ ಲೇಖಕರು ಮನಗಂಡಿದ್ದರು. "ಭಾಷೆಯೊಂದಾಗಿ ದೇಶವೊಂದಾಗಬೇಕೆ? ದೇಶವೊಂದಾಗಿ ಭಾಷೆಯೊಂದಾಗಬೇಕೆ? ಇದು 'ಹುಚ್ಚು ಬಿಡದ ಹೊರತು ಮದುವೆಯಾಗದು, ಮದುವೆಯಾಗದ ಹೊರತು ಹುಚ್ಚು ಬಿಡದು' ಎಂಬ ಹಾಗಿದೆ. ಪ್ರಪಂಚದ ನಾನಾ ರಾಷ್ಟ್ರಗಳ ಚರಿತ್ರೆಯನ್ನು ಪರಿಶೀಲಿಸಿದಲ್ಲಿ ದೇಶವನ್ನು ಬಿಟ್ಟು ಭಾಷೆಯಿಲ್ಲ, ಭಾಷೆಯನ್ನು ಬಿಟ್ಟು ದೇಶವಿಲ್ಲ. ದೇಶವು ಮುಂದಾದರೆ ಜೊತೆಯಲ್ಲಿ ಭಾಷೆಯೂ ಮುಂದಾಗುವುದು. ದೇಶವು ಬಿದ್ದರೆ ಭಾಷೆಯೂ ಬಿದ್ದಂತೆ. ಇದಕ್ಕೆ ನಮ್ಮ ಧಾರವಾಡ ಪ್ರಾಂತವೇ ಸಾಕ್ಷಿ. ಹಲವು ಸರಕಾರಗಳ ಅಧೀನಕ್ಕೆ ಒಳಪಟ್ಟಿರುವ ನಮ್ಮ ಕರ್ನಾಟಕ (ಕನ್ನಡ)ವನ್ನು ಒಮ್ಮೊಗವಾಗಿ ಮಾಡತೊಡಗುವುದು ಸುಲಭ ಸಾಧ್ಯವಲ್ಲ. ಕನ್ನಡ ನಾಡು ಒಂದಾಗದ ಹೊರತು ಕನ್ನಡ ಮಾತು ಒಂದಾಗುವುದು ಕಷ್ಟ. ಸಾವಿರ ಜನರು ಸಾವಿರ ಹೇಳಲಿ ನಾಡು ಒಂದಾಗದೆ ಮಾತು ಒಂದಾಗಲೆಂದು ಪ್ರಯತ್ನಿಸುವುದು ಮರಳೊಳಗೆ ಎಣ್ಣೆಯನ್ನು ಹಿಂಡಿದಂತೆ" ಎಂದು ಚನ್ನಕೇಶವಯ್ಯಂಗಾರ್ಯರು ಹೇಳುವರು. ಒಟ್ಟಾರೆ ನುಡಿಯು ಸಮೃದ್ಧವಾಗಬೇಕಾದರೆ ನಾಡು ಒಂದಾಗಬೇಕು ಎಂಬುದು ತಾತ್ಪರ್ಯ.

ಭಾಷೆಯ ಧಾರಣ ಸಾಮರ್ಥ್ಯ: ಇಂಗ್ಲಿಷ್ ಮೂಲದಿಂದ ಹೊಸಹೊಸ ಜ್ಞಾನ ಶಾಖೆಗಳು ಕನ್ನಡ ಭಾಷೆಗೆ ಬಂದಾಗ ಕನ್ನಡ ಭಾಷೆಯ ಧಾರಣ ಸಾಮರ್ಥ್ಯದ ಬಗೆಗೆ ಆಗಾಗ ಅಪನಂಬಿಕೆ ವ್ಯಕ್ತವಾಗಿದೆ. ಅದು ಈಗಲೂ ಇದೆ. ಶಾಸ್ತ್ರವಿಷಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ವಿವರಿಸುವಷ್ಟು ಸಹಜವಾಗಿ ಕನ್ನಡದಲ್ಲಿ ಸಾಧ್ಯವಿಲ್ಲ. ಇದಕ್ಕೆ ಪಾರಿಭಾಷಿಕ ಪದಗಳು ನಮ್ಮ ಭಾಷೆಯಲ್ಲಿ ಇಲ್ಲದಿರುವುದು ಎಂಬ ಮಾತು ಕೇವಲ ಇವತ್ತಿನದೇ ಅಲ್ಲ. ಡಿವಿಜಿಯವರ ಕಾಲದಲ್ಲಿಯೂ ಇಂಥ ಅಭಿಪ್ರಾಯವಿತ್ತು. ಅವರು ಆ ಕಾಲದಲ್ಲಿ ತಮ್ಮ ಬರೆಹಗಳಲ್ಲಿ ಮತ್ತು ಭಾಷಣಗಳಲ್ಲಿ ಇದನ್ನು ವ್ಯಕ್ತಪಡಿಸಿದ್ದಾರೆ. ಈ ಕೊರತೆಯಿಂದ ಪಾರಾಗುವ ಮಾರ್ಗವನ್ನು ಅವರು ಸೂಚಿಸಿದ್ದಾರೆ. ೧೯೩೯ರ ಜುಲೈ ತಿಂಗಳ

‘ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ’ಯಲ್ಲಿ ಪ್ರಕಟವಾದ ಅವರ ಲೇಖನದಲ್ಲಿ ಅವರು ಹಲವು ಉಪಾಯಗಳನ್ನು ಸೂಚಿಸಿದ್ದಾರೆ.[೩೪]

‘ಉಪನ್ಯಾಸಕನಿಗೆ ವಿಷಯ ಸ್ವಾಧೀನವಾಗಿದ್ದರೆ ತಕ್ಕ ಮಾತು ಅವನಿಗೆ ಕನ್ನಡದಲ್ಲಿಯೂ ಸಹ ಸ್ವಾಭಾವಿಕವಾಗಿ ಒದಗುತ್ತದೆ ಎಂದು ನನ್ನ ತಿಳಿವಳಿಕೆ’ ಎಂದು ಡಿವಿಜಿ ಹೇಳುತ್ತಾರೆ. ಭಾಷೆ ಯಾವಾಗಲೂ ವಿಚಾರಕ್ಕೆ ಅಧೀನವಾಗಿರುತ್ತದೆ ಎನ್ನುವ ಅವರು ಸರಿಯಾದ ಮಾತು ದೊರೆಯುವುದು ಮೊದಮೊದಲು ಸ್ವಲ್ಪ ಕಷ್ಟವಾಗಬಹುದು. ಈ ಸ್ವಲ್ಪ ಕಷ್ಟ ಕನ್ನಡಕ್ಕೆ ಮಾತ್ರ ವಿಶೇಷವಾದದ್ದೇನೂ ಅಲ್ಲ; ಅದು ಎಲ್ಲ ಭಾಷೆಗಳಿಗೂ ಸಹಜವಾದದ್ದು. ಹೊಸ ಭಾವ, ಹೊಸ ಅಭಿಪ್ರಾಯ, ಹೊಸ ತತ್ವ- ಇವಕ್ಕೆ ಹೊಸ ಶರೀರ, ಹೊಸ ಕವಚ, ಹೊಸ ವಾಹನ- ಇವು ಸೃಷ್ಟಿಯಾಗಬೇಕಾಗುವುದು ಸಹಜ. ಎಷ್ಟು ದಿನ ಅವು ಹೊಸದಾಗಿರುವುವೋ ಅಷ್ಟು ದಿವಸ ಅವು ಜನರಿಗೆ ಕಷ್ಟವೆಂದು ತೋರಬಹುದು ಎಂದು ಹೇಳುತ್ತಾರೆ. ಹೊಸದನ್ನು ಹೊಸದರಲ್ಲಿ ತಿರಸ್ಕರಿಸುವುದು ಇದು ಸಮಸ್ತ ಮನುಷ್ಯ ಸ್ವಭಾವಕ್ಕೂ ಸೇರಿದ ಲಕ್ಷಣ. ಭಾಷೆಯ ವಿಷಯದಲ್ಲಿಯೂ ಇದು ನಿಜ ಎನ್ನುವರು.

‘ಅನ್ಯ ದೇಶಗಳ ಅಭಿಪ್ರಾಯಗಳನ್ನೂ ಜ್ಞಾನವನ್ನೂ ನಮ್ಮ ಜನರಿಗೆ ಪರಿಚಯ ಮಾಡಿಕೊಡಬೇಕಾದರೆ ಕೆಲವು ಅಪರಿಚಿತ ಪದಗಳನ್ನು ಉಪಯೋಗಿಸಲೇ ಬೇಕಾಗುತ್ತದೆ. ಈ ನೂತನ ಪದ ಸೃಷ್ಟಿಯ ಕಾರ್ಯವು ಕಷ್ಟದ ಕೆಲಸವೇ ಹೌದು. ಆ ಕೆಲಸವನ್ನು ಮಾಡಿದ ಮೇಲೆ ಅದು ಜನರಲ್ಲಿ ರೂಢಿಗೆ ಬರುವವರೆಗೂ ಅವರಿಗೆ ಅದು ಕಷ್ಟವಾಗಿ ತೋರುವುದು ನಿಜ. ಆದರೆ ಒಂದು ಭಾಷೆಯನ್ನು ಬೆಳೆಸಿ, ಅದರ ಜನವನ್ನು ಮೇಲಕ್ಕೆತ್ತ ಬೇಕೆಂದು ಆಶೆ ಪಡುವವರು ಇಂಥಾ ಕಷ್ಟಕ್ಕೆ ಸಿದ್ಧರಾಗಿರಬೇಕು. ಇಷ್ಟುಮಟ್ಟಿನ ಕಷ್ಟವನ್ನು ಕನ್ನಡ ಭಾಷಣಕರ್ತರೂ ಲೇಖಕರೂ ಸಹಿಸಲು ಸಿದ್ಧರಾದರೆ, ಕನ್ನಡದಲ್ಲಿ ಒಂದು ಹೊಸ ಕಾಂತಿಯೂ ಉಂಟಾಗುವುದು ಅಸಾಧ್ಯವಾಗದು’ ಎನ್ನುವ ಮೂಲಕ ಡಿವಿಜಿ ಸಾಹಿತ್ಯ ಶ್ರೀಮಂತವಾಗುವ ಪರಿಯನ್ನು ವಿವರಿಸುವರು.

ಕೆರೂರರು, ಚನ್ನಕೇಶವಯ್ಯಂಗಾರ್ಯರು ಮತ್ತು ಡಿವಿಜಿಯವರು ಭಾಷೆಯನ್ನು ಬೆಳೆಸುವ ಬಗ್ಗೆ ಸಮಾನವಾದ ಕಳಕಳಿಯನ್ನು ಹೊಂದಿದ್ದಾರೆ. ಕಾಲಕಾಲಕ್ಕೆ ಇಂಥ ಅಭಿಪ್ರಾಯಗಳು ವ್ಯಕ್ತಗೊಂಡಿದ್ದರಿಂದಾಗಿಯೇ ಭಾಷೆಯು ಅಗತ್ಯ ಕಸುವನ್ನು ಪಡೆದುಕೊಂಡು ಬೆಳೆದು ಉಳಿದು ಬಂತು.

ಲೇಖಕ ಬಳಸುವ ಭಾಷೆಯು ಅವನಿಗೆ ಓದುಗರನ್ನು ಗಳಿಸಿಕೊಡಬೇಕೆ ಹೊರತು ಓದುಗರನ್ನು ಲೇಖಕನಿಂದ ದೂರಮಾಡಬಾರದು. “ಲೇಖಕರೇ ವಾಚಕರನ್ನು ಮರೆಯದಿರಿ!” ಎನ್ನುವ ಶ್ರೀ ಚಕ್ರಪಾಣಿ, ಲೇಖಕರಾದರೂ ವಾಚಕನ ಸ್ಥಾನದಲ್ಲಿ ಕುಳಿತು

೩೪.ಸಂಪುಟ ೧೯, ಸಂಚಿಕೆ ೨

ಆಲೋಚಿಸಬೇಕು ಎಂದು ಸಲಹೆ ನೀಡುವರು.[೩೫] 'ಜಯಕರ್ನಾಟಕ'ದಲ್ಲಿ ಪ್ರಕಟವಾದ ಈ ಲೇಖನ ಡಿ.ವಿ.ಜಿ.ಯವರ ಅಭಿಪ್ರಾಯವನ್ನು ಸಮರ್ಥಿಸುತ್ತದೆ ಎಂಬುದು ಇಲ್ಲಿ ಮುಖ್ಯ. ಕನ್ನಡಿಗರಿಗೆ ವಾಚನಾಭಿರುಚಿಯೇ ಇಲ್ಲ. ಈ ಅಭಿರುಚಿ ಲೋಪಕ್ಕೆ ಅಭಿಮಾನ ಶೂನ್ಯತೆಯೇ ಕಾರಣ ಎಂಬ ಮಾತುಗಳು ಸಮಂಜಸ ಎಂದು ಅವರು ಒಪ್ಪುವುದಿಲ್ಲ. ಕನ್ನಡದ ಮೇಲಿನ ಅಭಿಮಾನವೊಂದೇ ವಾಚಕರನ್ನು ಬೆಳೆಸಲಾರದು ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯ. ಒಂದೂರ ಭಾಷೆ ಇನ್ನೊಂದೂರಿಗೆ ತಿಳಿಯುವುದಿಲ್ಲ ಎಂಬ ಆಕ್ಷೇಪದಲ್ಲಿ ಹುರುಳಿಲ್ಲ ಎನ್ನುವ ಅವರು, ಲೇಖನ ಭಾಷೆಯೆಂದರೆ ಸಾಮಾನ್ಯವಾಗಿ ಗ್ರಹೀತವಾದ ಹೊಸಗನ್ನಡದಲ್ಲಿ ಬರೆದರೆ ಅರ್ಥವಾಗುವುದಕ್ಕೆ ಹೆಚ್ಚೇನೂ ತೊಡಕಾಗುವುದಿಲ್ಲ. ಒಂದೊಂದು ಶಬ್ದವು ಅಲ್ಲಲ್ಲಿ ತಿಳಿಯದಿದ್ದರೆ ಪುಸ್ತಕವೇ ನಿರರ್ಥಕವಾಗಲಾರದು ಎಂದು ಹೇಳುವರು. ಸಂವಹನದ ತೊಡಕು ತಲೆದೋರುವುದು ಒಂದು ಪ್ರದೇಶಕ್ಕೋ ಅಥವಾ ಒಂದು ಜಾತಿಗೋ ಸೀಮಿತವಾದ ಆಡುಭಾಷೆಯಲ್ಲಿ ಗ್ರಂಥ ಪ್ರಕಟವಾದಾಗ. ಇದು ೨೦ನೆ ಶತಮಾನದ ೪ನೆ ದಶಕದ ಸಮಸ್ಯೆಯೂ ಹೌದು, ಶತಮಾನದ ಕೊನೆಯ ದಶಕದಲ್ಲಿ ಬಂದ ದೇವನೂರು ಮಹಾದೇವರ 'ಕುಸುಮಬಾಲೆ' ಸಮಸ್ಯೆಯೂ ಹೌದು. ಇದನ್ನೇ ಚಕ್ರಪಾಣಿಯವರು, ಈ ಭಾಷೆಯನ್ನು ಸಮಗ್ರ ಕರ್ನಾಟಕವು ತಿಳಿಯದಿದ್ದರೆ ಅದು ವಾಚಕರ ನಿರಭಿಮಾನತೆಯೂ ಅಲ್ಲ, ಲೇಖಕರ ದುರ್ದೈವವೂ ಅಲ್ಲ; ಸಣ್ಣ ಪರಿಧಿಯೊಳಗೆ ಅಡಗುವ ಭಾಷಾ ಸ್ವರೂಪದ ಮೋಹವನ್ನು ಬಿಡಲಾರದೆ, ಸಮಗ್ರ ದೇಶದಲ್ಲಿ ಪ್ರಚಾರ ಹೊಂದಬೇಕೆಂಬ ಹಂಬಲವನ್ನು ತೊರೆಯಲಾರದೆ ಮಾಡಿದ ಪೇಚಾಟದ ಫಲ ಎನ್ನುವರು.

ಸಾಹಿತ್ಯದ ಸಾಧನವಾದ ಭಾಷೆ, ಜನರ ಅನುದಿನದ ಜೀವನಕ್ಕೆ ಬೇಕಾದ ಎಲ್ಲ ಜ್ಞಾನ ಸಾಮಗ್ರಿಯನ್ನೂ, ಎಲ್ಲ ವ್ಯವಹಾರ ಉಪಕರಣಗಳನ್ನೂ ಒದಗಿಸುವ ಶಕ್ತಿಯುಳ್ಳದ್ದಾಗಿರಬೇಕು ಎಂದು ಬಯಸುವ ಡಿವಿಜಿ ಅಂಥ ಸಂಪತ್ತನ್ನು ಕನ್ನಡಕ್ಕೆ ತಂದುಕೊಡಬೇಕೆಂಬುದು ನಮ್ಮ ಆಸೆ ಎನ್ನುವರು.[೩೬] 'ನಮ್ಮ ತೋಟದಲ್ಲಿರುವ ಗಿಡ ಬಳ್ಳಿಗಳು ವರ್ಷ ವರ್ಷವೂ ಚಿಗುರಿ ವರ್ಷ ವರ್ಷವೂ ಹೊಸದಾಗಿ ಹೂ ಬಿಡುವ ರೀತಿಯಲ್ಲಿ, ನಮ್ಮ ಸಾಹಿತ್ಯವೂ ಹೊಸಹೊಸ ಜೀವ ಕಾಂತಿಗಳನ್ನು ತೋರಬೇಕು. ಮರ ಹೊಸದಾಗಿ ಚಿಗುರಿಡದೆ ಕರಡಿ ಕಟ್ಟಿ ನಿಂತರೆ ಪುರಾಧಿಕಾರಿಗಳು ಅದನ್ನು ಕಡಿದುಬಿಟ್ಟಾರು. ಭಾಷೆ ನವ ಜೀವನದ ಹೊಸ ತಳಿರನ್ನು ತಳೆಯಲಾರದೆ ಹೋದರೆ ಲೋಕವು ಅದನ್ನು ನಿರಾಕರಿಸುವುದು ಸ್ವಾಭಾವಿಕವೇ ಆಗಿದೆ. ಭಾಷೆ, ಸಾಹಿತ್ಯಗಳು ನವನವೀನತೆಯನ್ನು ತಾಳಲಾರದೆ ಹೋದರೆ ಆ ಭಾಷೆಯನ್ನು ಆಡುವ ನವ ಜೀವನವೂ ನವೀನತೆಯನ್ನು ತೋರಲಾರದು' ಎನ್ನುವುದು ಅವರ ಖಚಿತ ಅಭಿಪ್ರಾಯ.

೩೫.ಜಯಕರ್ನಾಟಕ ಸಂಪುಟ ೧೬, ಸಂಚಿಕೆ ೨; ಸಾಹಿತ್ಯ ಗೋಷ್ಠಿ 'ತ್ರಿವೇಣಿ' ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಚಕ್ರಪಾಣಿಯವರ ಲೇಖನ ಪುನರ್ ಮುದ್ರಿಸಲಾಗಿದೆ.

೩೬.ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೨೧, ಸಂಚಿಕೆ ೨, ಏ-ಜೂ. ೩೬. ನವ್ಯತೆಯೇ ಜೀವನ- ಡಿವಿಜಿ

ಸಾಹಿತ್ಯವನ್ನು ಪಂಡಿತ ಗೋಷ್ಠಿಯಿಂದ ಪೇಟೆಯ ಚೌಕಕ್ಕೆ ತರಬೇಕಾದದ್ದು ನಮ್ಮ ಈಗಿನ ಕರ್ತವ್ಯವಾಗಿದೆ ಎಂದು ಡಿವಿಜಿ ಹೇಳುವರು. ಪೂರ್ವದಲ್ಲಿ ವಿದ್ವಾಂಸರಾದವರ ವಾಗ್ವಿಜೃಂಭಣೆಗೂ ಪುಣ್ಯವಂತರ ವಿನೋದ ಕಾಲಕ್ಷೇಪಕ್ಕೂ ಅವಕಾಶವನ್ನೊದಗಿಸುವುದು ಸಾಹಿತ್ಯದ ಕೆಲಸವಾಗಿತ್ತು. ಈಗಲಾದರೋ ಬಡವರಿಗೆ ಬದುಕನ್ನು ಸಹ್ಯವನ್ನಾಗಿ ಮಾಡುವುದೂ ಸಾಹಿತ್ಯದ ಕರ್ತವ್ಯವಾಗಿದೆ ಎಂಬುದು ಅವರ ದೃಢ ನಂಬುಗೆ.

ಪ್ರಾಚೀನ ಕಾವ್ಯಮೀಮಾಂಸೆಯಲ್ಲಿ ಯಾವನು 'ಸಹೃದಯ'ನಾಗಿದ್ದನೋ ಅವನೇ ಇಂದಿನ ಓದುಗ. ಭಾಷೆಯ ಬಳಕೆಯೂ ಓದುಗನ ಭಾಷಾ ಸಂಪತ್ತು ಎಷ್ಟಿದೆ ಎಂಬುದನ್ನು ಗಮನಿಸಿಯೇ ಮಾಡಬೇಕು ಎಂಬುದು ಚಕ್ರಪಾಣಿಯವರ ಅಭಿಪ್ರಾಯ. ಓದುಗನ ಸಾಹಿತ್ಯ ಜ್ಞಾನದ ಮಟ್ಟವಾವುದು, ಅಭಿರುಚಿಯ ಸ್ವರೂಪವೇನು? ಅದನ್ನು ಮುರಿಯದೆ ಯಾವ ಇಷ್ಟವಾದ ಕಡೆಗೆ ಅದನ್ನು ತಿರುಗಿಸಬಹುದು, ತಿರುಗಿಸಬೇಕು. ನಮ್ಮ ಲೇಖನದ ಫಲವಾಗಿ ಅವರಲ್ಲಿ ಯಾವ ಸಂಸ್ಕಾರವುಂಟಾಗಬಹುದು ಎಂದು ಸಾಕಲ್ಯವಾಗಿ ವಿಮರ್ಶಿಸಿ ಅನಂತರ ನಾವು ಬರೆದುದಾದರೆ, ನಮಗೆ ಅವರ ಕೊಡುಗೈಯನ್ನು ಹಿಡಿದು ಬೇಡುವ, ಒತ್ತಾಯಿಸುವ ಅಧಿಕಾರ ಬರುವುದು ಎಂದು ಅವರು ಹೇಳುವರು. ಇದೊಂದು ರೀತಿಯಲ್ಲಿ ಮಾರುಕಟ್ಟೆ ಆಧಾರಿತ ಚಿಂತನೆ ಎನ್ನಿಸುವುದು.

ಹೊಸತೆಂಬ ಒಂದು ರೀತಿಯ ಕವನ, ಲೇಖನಗಳು ಆರಂಭಿಸಿದ ಸಮಯದಲ್ಲಿ ಸಾಮಾನ್ಯ ಜನತೆಯ ಕಣ್ಣೊಮ್ಮೆ ಸ್ವಲ್ಪ ಅರಳಿತ್ತು. ಆದರೆ ಅಭಿಮಾನ ಮಾತ್ರದಿಂದ, ಕುತೂಹಲ ಮಾತ್ರದಿಂದ, ವಾಚನವನ್ನು ಹೆಚ್ಚು ಜನರು ಬೆಳೆಯಿಸಿಕೊಳ್ಳಲಾರದೆ ಹೋದರು. ಓದಲಿಕ್ಕೆ ತಿಳಿಯದ, ಅಥವಾ ಓದಿದರೂ ಅರ್ಥವಾಗದ, ಅರ್ಥವಾದರೂ ಚಮತ್ಕಾರವು ಹೊಳೆಯದ, ಹೊಳೆದರೂ ಹೃದಯಕ್ಕೆ ಸಂಸ್ಕಾರವನ್ನು ಕೊಟ್ಟು ತದನುರುಕ್ತಿಯನ್ನು ಹೆಚ್ಚಿಸಲಾರದ ಏಕರೂಪದ ಬರೆವಣಿಗೆಗಳೇ ಬರತೊಡಗಿ ಬೇಸರ ಹೊಂದಿದವರು ಹಲವರಿರುವರು ಎನ್ನುವ ಚಕ್ರಪಾಣಿ, ಇಂಥ ಸಂದರ್ಭದಲ್ಲಿ ಉತ್ತಮ ಕೃತಿ ಬಂದರೂ ತೆನ್ನಾಲಿ ರಾಮ ಬಾಯಿ ಸುಟ್ಟ ಬೆಕ್ಕಿನಹಾಗೆ ಮುಖ ತಿರುವುವ ಅಪಾಯದ ಕಡೆ ಬೆರಳು ಮಾಡುವರು. ಇದಕ್ಕೆ ಪರಿಹಾರವೇನು? ಇಂಥವರನ್ನು ಪುನಃ ಒಲಿಸಿಕೊಳ್ಳುವ ಬಗೆ ಹೇಗೆ? ಜನತೆಯ ಅವಶ್ಯಕತೆ- ಅಭಿರುಚಿ- ಸ್ಥಿತಿಗತಿಗಳನ್ನು ಸೂಕ್ಷ್ಮ ಬುದ್ಧಿಯಿಂದ ನಿರೀಕ್ಷಿಸಿ ಎಚ್ಚರಿಕೆಯಿಂದ ಬರೆಯುವ ಸಾಹಿತ್ಯ ತಪಶ್ಚರ್ಯೆಯನ್ನು ಕೈಗೊಳ್ಳಬೇಕು. ಇಷ್ಟ ಬಂದಂತೆ ಬರೆಯುವ ಲೇಖಕನಿಗೆ ಸ್ವಲ್ಪ ಸಂಯಮವನ್ನು ಕಲಿಸಬೇಕು. ಕೀರ್ತಿಯ ಹಂಬಲವನ್ನು ತತ್ಕಾಲ ಬಿಟ್ಟುಬಿಡುವ ವ್ರತವನ್ನು ಧರಿಸಬೇಕು; ಜನತೆಯ ಸೇವೆಯೆಂಬ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಇದಕ್ಕೆ ನಾವು ಸಿದ್ಧರಿಲ್ಲವಾದರೆ ಜನತೆಯನ್ನು ದೂರುವ ಕೆಲಸಕ್ಕಾದರೂ ಇಳಿಯದಿರಬೇಕು. ಅಥವಾ ನನ್ನಂಥವನು ಯಾವನಾದರೂ ಹುಟ್ಟಿಯಾನು, ಅಂಥವನಿಗಾಗಿ ಬರೆದೆ ಎಂದು ಹೇಳಿಕೊಳ್ಳುವ ಧೈರ್ಯವಾದರೂ

ನಮಗಿರಬೇಕು ಎಂದು ಅವರು ಹೇಳುತ್ತಾರೆ.

ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಬಿ.ಎಂ.ಶ್ರೀ.ಯವರು ೧೯೧೧ರಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ವಿಷಯವಾಗಿ ಮಾಡಿದ ಭಾಷಣ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಸಾಹಿತ್ಯಕವಾಗಿ ಮೈಸೂರು ರಾಜ್ಯ ಮತ್ತು ಉತ್ತರ ಕರ್ನಾಟಕ ಪ್ರದೇಶಗಳು ಒಂದಾಗುತ್ತಿದ್ದುದನ್ನೂ ಇದು ಸೂಚಿಸುತ್ತದೆ. ಉತ್ತರ ದಕ್ಷಿಣ ಭೇದವಿಲ್ಲದೆ ಎಲ್ಲರ ಕಾಳಜಿಯೂ ಕನ್ನಡ ನುಡಿಯ ಏಳ್ಗೆಯೇ ಆಗಿತ್ತು. ಬಿ.ಎಂ.ಶ್ರೀ. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು, ರಾಜಸೇವಾಸಕ್ತರು. ಅವರ ಪ್ರಕಾರ ಕನ್ನಡದ ಜಡತೆಗೆ ಕಾರಣವಾಗಿರುವುದು ಪರಕೀಯವಾದ ಇಂಗ್ಲಿಷಲ್ಲ. ಒಳಗಿನದಾದ 'ನಮ್ಮ'ದೇ ಆದ ಸಂಸ್ಕೃತ. ಈ ಕುರಿತು ಶ್ರೀಯವರಿಗೆ ದ್ವಂದ್ವಗಳಿರಲಿಲ್ಲ. ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯರೂಪಕ್ಕೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು ಎಂಬುದು ಅವರ ನಿಲುವಾಗಿತ್ತು. ಸಂಸ್ಕೃತದ ಬಗೆಗಿನ ವಿರೋಧದ ಸ್ವರೂಪವೇನು? ಅದು ಕೇವಲ ಸಾಹಿತ್ಯಕ ಪ್ರಭಾವಗಳ ಪ್ರಶ್ನೆ ಮಾತ್ರ ಆಗಿರಲಿಲ್ಲ. ದೃಷ್ಟಿಕೋನಗಳ ಬಗೆಗಿನ ಜಗಳವೂ ಆಗಿತ್ತು. ಶ್ರೀಯವರ ದೃಷ್ಟಿಕೋನ ಹೊಸದಾಗಿದ್ದರಿಂದಲೇ ಅವರು 'ಇಂಗ್ಲಿಷ್ ಗೀತಗಳ'ನ್ನು ನೀಡುವುದಕ್ಕೆ ಸಾಧ್ಯವಾಯಿತು. ಈ ಕೃತಿಯ ಐತಿಹಾಸಿಕ ಮಹತ್ವ ಗೊತ್ತೇ ಇದೆ. ಕನ್ನಡದ ಬಗೆಗಿನ ಅಂದಿನವರ ಧೋರಣೆಯನ್ನು ಶ್ರೀಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. "ಈ ನಮ್ಮ ಕನ್ನಡವನ್ನು ಏನು ಕೊಳ್ಳೆಹೋಗುತ್ತದೆಂದು ಕಾಪಾಡಬೇಕು; ಕಷ್ಟ ಬಿದ್ದು ಹೆಚ್ಚಿಸಬೇಕು? ಅದರಲ್ಲಿ ನಮಗೆ ವೈರವೂ ಇಲ್ಲ, ವಿಶ್ವಾಸವೂ ಇಲ್ಲ. ಅದು ಇದ್ದರೆಷ್ಟು, ಹೋದರೆಷ್ಟು? ನಿಮಗೆ ಇನ್ನೇನೂ ಕೆಲಸವಿಲ್ಲದಿದ್ದರೆ, ಅದನ್ನು ಹಚ್ಚಿಕೊಂಡು ಹೊತ್ತು ಕಳೆಯಿರಿ, ನಮಗೆ ದುಃಖವಿಲ್ಲ." ಜನ ಸಾಮಾನ್ಯರಲ್ಲಿ ಇಂಥ ಭಾವನೆ ಇದ್ದಾಗ ಕನ್ನಡ ಮಾತು ತಲೆ ಎತ್ತುವ ಬಗೆ ಹೇಗೆಂಬ ಅವರ ಚಿಂತನೆ ಮಹತ್ವ ಪಡೆದುಕೊಳ್ಳುತ್ತದೆ.

ಕನ್ನಡ ಎಂದಾಕ್ಷಣ ಅವಮಾನ ಎನ್ನುವ ಸ್ಥಿತಿಯನ್ನು ಕನ್ನಡಿಗರೇ ಬೆಳೆಸಿಕೊಂಡಿದ್ದಕ್ಕೆ ಐದು ಕಾರಣಗಳನ್ನು ದ.ರಾ.ಬೇಂದ್ರೆಯವರು ಗುರುತಿಸುತ್ತಾರೆ. "ಹೀಗಾಗಲಿಕ್ಕೆ ಅಂಥ ಕಾರಣಗಳೂ ಇರುವವು. ಎಷ್ಟೋ ದಿವಸಗಳಿಂದ ರಾಜಾಶ್ರಯವನ್ನು ಕಳೆದುಕೊಂಡು ತೊಳಲುತ್ತಿರುವ ಕರ್ನಾಟಕವು ಇಂಗ್ಲೀಷರ ಆಳಿಕೆಯಲ್ಲಿ ಭಿನ್ನ ಭಿನ್ನವಾಗಿದ್ದುದು ಮೊದಲನೆಯ ಕಾರಣವು. ಪೇಶ್ವೆಯರ ಆಳಿಕೆ ತೀರಿದ ಮೇಲೆ ಆರೇ ಅಮಲುದಾರರ ಆಳಿಕೆಯು ಎರಡನೆಯ ಕಾರಣವು; ರಾಜಾಶ್ರಯ ದೊರೆತ ಮೈಸೂರ ಕನ್ನಡವು ಯಾವುದೋ ಒಂದು ಕಾರಣದಿಂದ ನಮ್ಮ ಕೂಡ ಬಳಕೆ ಮಾಡದೆ ಇದ್ದದ್ದು ಮೂರನೆಯ ಕಾರಣ, ಕಾಲ ಪ್ರತಿಕೂಲತೆಯು ನಾಲ್ಕನೆ ಕಾರಣ, ಮೊದಲನೆಯ ತರಗತಿಯ ಕರ್ತೃತ್ವಶಾಲಿಗಳು ಹುಟ್ಟದಿದ್ದದ್ದು ಐದನೆಯ ಕಾರಣ"[೩೭] ಎಂದು ಅವರು ಪಟ್ಟಿ

೩೭.ಬೇಂದ್ರೆ ದ.ರಾ., ಸಾಹಿತ್ಯ ವಿರಾಟ್ ಸ್ವರೂಪ, (ಧಾ. ೧೯೭೪) ಪುಟ ೬೩೪

ಮಾಡುವರು. ಮೈಸೂರಿನವರ ಧೋರಣೆಯ ಕಾರಣವನ್ನು ನಾವು ಬಿ.ಎಂ.ಶ್ರೀಯವರಲ್ಲಿಯೇ ಗುರುತಿಸಬಹುದು. ಧಾರವಾಡ ಕಡೆಯ ಸಾಹಿತಿಗಳು ಅಖಂಡ ಕರ್ನಾಟಕದ ಪ್ರತೀಕವಾಗಿ ವಿಜಯ ನಗರದ ರತ್ನ ಸಿಂಹಾಸನವನ್ನು ಸ್ಮರಿಸುತ್ತಾರೆ. ಆದರೆ ಬಿ.ಎಂ.ಶ್ರೀ.ಯವರ ನಿಷ್ಠೆ ಮೈಸೂರು ಮಹಾರಾಜರ ಸಿಂಹಾಸನಕ್ಕಾಗಿತ್ತು. ಈ ಮೈಸೂರು ಅರಸರು ಒಂದು ರೀತಿಯಲ್ಲಿ ಬ್ರಿಟಿಷರ ಗುಲಾಮರಾಗಿದ್ದರು. ಶ್ರೀ ಅವರ ಕಾವ್ಯದಲ್ಲಿ ಬ್ರಿಟಿಷ್ ರಾಣಿಯ ಹೊಗಳಿಕೆಯೂ ಬರುತ್ತದೆ. ಒಟ್ಟಾರೆಯ ಕನ್ನಡದ ಪರಿಸ್ಥಿತಿ ಮೈಸೂರು ಭಾಗದಲ್ಲಿ ಚೆನ್ನಾಗಿ ಇದ್ದುದರಿಂದ ನಾಡು ನುಡಿಯ ಬಗೆಗಿನ ಅವರ ಕಾಳಜಿ ವ್ಯಕ್ತವಾಗುವುದು ಸ್ವಲ್ಪ ವಿಳಂಬವಾಗಿಯೇ.

೧೯೦೭ರ ಫೆಬ್ರವರಿ 'ವಾಗ್ಭೂಷಣ'ದಲ್ಲಿ ಆಲೂರ ವೆಂಕಟರಾಯರು ಕನ್ನಡಿಗರ ಅಳಿವು ಉಳಿವುಗಳು ಏಕೀಕರಣದಿಂದ ಮಾತ್ರ ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಡಲು ಯತ್ನಿಸಿದರು.

೧೯೧೭ರಲ್ಲಿ 'ಕನ್ನಡಿಗರ ಕರ್ತವ್ಯ' ಎಂಬ ಕೃತಿ ಪ್ರಕಟವಾಗಿದೆ. ಇದು ಕರ್ನಾಟಕ ಸಭಾ (ಸಭಾ ಅಥವಾ ಸಭೆ) ಮೂಲಕ ಹೊರಬಂದಿದೆ. ಇದು ಈಗಾಗಲೇ ನಾವು ನೋಡಿರುವ 'ಕನ್ನಡಿಗರ ಜನ್ಮ ಸಾರ್ಥಕತೆ' ಕೃತಿಗೆ ಪೂರಕವಾಗಿದೆ.

ಪತ್ರಿಕೆಗೆ ಎಂಥ ಲೇಖನ ಬೇಕು?: ಕನ್ನಡ ನುಡಿಯ ಏಳ್ಗೆಯ ಸಂಬಂಧದಲ್ಲಿ 'ವಾಗ್ಭೂಷಣ'ದ ಎರಡು ಸಂಚಿಕೆಗಳಲ್ಲಿ ನೀಡಿರುವ ಪ್ರಕಟಣೆಗಳನ್ನು ಗಮನಿಸುವುದು ಇಲ್ಲಿ ಉಚಿತವಾಗುತ್ತದೆ. ೧೯೧೮ರ ಮೇ ತಿಂಗಳ 'ವಾಗ್ಭೂಷಣ' ಪತ್ರಿಕೆಯಲ್ಲಿ ಪತ್ರಿಕೆಗೆ ಎಂಥ ಲೇಖನಗಳನ್ನು ಕಳುಹಿಸಬೇಕು ಎಂಬ ಸೂಚನೆ ಈ ರೀತಿ ಇತ್ತು.[೩೮]

"೧.ವಾಗ್ಭೂಷಣದಲ್ಲಿ ಭಾಷಾಂತರ, ಅನುವಾದಗಳಿಂದ ಸ್ವತಂತ್ರ ಲೇಖಗಳಿಗೆ ಮೊದಲು ಸ್ಥಳ ಸಿಕ್ಕುವುದು.

೨.ಪೌರಾಣಿಕ, ಸಾಮಾನ್ಯ ನೀತಿ ವಿಷಯಕ ವಿಷಯಗಳಿಗಿಂತ ವಿವೇಚನಾತ್ಮಕವಾದ ಸಾಮಾಜಿಕ, ಔದ್ಯೋಗಿಕ, ಐತಿಹಾಸಿಕ, ವ್ಯಾವಹಾರಿಕ, ಆರ್ಥಿಕ, ಧಾರ್ಮಿಕ, ವಾಙ್ಮಾತ್ರಕ ವಿಷಯಗಳ ಮೇಲಣ ಲೇಖನಗಳಿಗೆ ಮೊದಲು ಅಗತ್ಯವಾಗಿ ಸ್ಥಳ ಕೊಡಲಾಗುವುದು.

೩.ಹಳೆಯ ವಿಷಯಗಳ ಮೇಲೆ ಬರೆದ ಹಳೆಯ ತರದ ಕವಿತೆಗಳಿಗಿಂತ ಹೊಸ ವಿಷಯಗಳ ಮೇಲೆ ರಚಿಸಿದ ಸ್ಫೂರ್ತಿಕರವಾದ ಮನೋಹರವಾದ ಹೊಸತರದ ಸುಲಭ ಕವಿತೆಗಳು ಮೊದಲು ಮುದ್ರಿಸಲ್ಪಡುವವು.

೪.ಮೇಲೆ ೨ನೆ ಕಲಮಿನಲ್ಲಿ ಹೇಳಿದ ವಿವೇಚನ ಪರವಾದ ಲೇಖನಗಳನ್ನ

೩೮.ಸಂಪುಟ ೨೨, ಸಂಚಿಕೆ ೨

ಬರೆಯುವವರೇ ಸದ್ಯದ ಕಾಲದಲ್ಲಿ ಅವಶ್ಯವಾಗಿರುವುದರಿಂದ ಅವರ ಲೇಖನಗಳನ್ನು ಮುದ್ರಿಸುವುದಲ್ಲದೆ ವಾಗ್ಭೂಷಣದ ಅನುಕೂಲತೆಯ ಪ್ರಕಾರ ಅವರಿಗೆ ದ್ರವ್ಯ ಸಹಾಯವನ್ನೂ ಮಾಡಬಹುದು.”

‘ವಾಗ್ಭೂಷಣ’ದ ಇನ್ನೊಂದು ಸಂಚಿಕೆಯಲ್ಲಿ ಬರೆಹಗಾರರಿಗೆ ಮಾಡಿರುವ ವಿನಂತಿ ಈ ರೀತಿ ಇದೆ. “ನಮ್ಮ ಕಲೆ- ಇತಿಹಾಸ ಮುಂತಾದ ಕರ್ನಾಟಕಕ್ಕೆ ಸಂಬಂಧಿಸಿದ ಕನ್ನಡಿಗರಲ್ಲಿ ಜಾಗ್ರತಿಯನ್ನುಂಟುಮಾಡುವ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಡಬೇಕೆಂದು ವಾಗ್ಭೂಷಣದ ಬಹುದಿನದ ಕೋರಿಕೆಯಿದ್ದು ಲೇಖಕರು ಈ ಮಾತನ್ನು ಮರೆಯದಿರಬೇಕು.”[೩೯]

‘ವಾಗ್ಭೂಷಣ’ದ ಸಂಪಾದಕರ ನಿಲುವಿನಲ್ಲಿ ನಿರ್ದಿಷ್ಟವಾದ ಅಂಶಗಳಿವೆ. ಹೊಸ ಸಾಹಿತ್ಯ ಮಾರ್ಗ ಹೇಗಿರಬೇಕು ಎಂದು ಅವರು ನಿರ್ದೇಶಿಸುತ್ತಿದ್ದಾರೆ. ‘ಪೌರಾಣಿಕ ಮತ್ತು ಸಾಮಾನ್ಯ ನೀತಿ ವಿಷಯಕ ವಿಷಯ’ಗಳಿಗೆ ಅವರು ನಮಸ್ಕಾರ ಹೇಳುತ್ತಿದ್ದಾರೆ.

ನಾಡು ನುಡಿಯ ಬಗ್ಗೆ ಪ್ರೀತಿಯು ಹೆಚ್ಚಲು, ಅದನ್ನು ಭಾವನಾತ್ಮಕವನ್ನಾಗಿ ಮಾಡಿ ನಾಡವರ ಉಸಿರೊಳಗೆ ಮಿಳಿತಗೊಳ್ಳುವಂತೆ ಮಾಡಲು ಹಲವು ಪ್ರಯತ್ನಗಳು ಆ ಕಾಲದಲ್ಲಿ ನಡೆದವು. ಅಂಥ ಪ್ರಯತ್ನಗಳಲ್ಲಿ ಒಂದು ವಿದ್ಯಾರಣ್ಯರ ಉತ್ಸವವನ್ನು ನಾಡಹಬ್ಬವನ್ನಾಗಿ ಮಾಡಲು ಪ್ರೇರೇಪಿಸಿದ್ದು. ಅಂದಿನ ‘ಸ್ವಧರ್ಮ’ ಪತ್ರಿಕೆ ಈ ಬಗ್ಗೆ ಪ್ರಚಾರನ್ನು ಮಾಡಿತು. ಇವರಿಗಿಂತಲೂ ಎರಡು ವರ್ಷ ಮೊದಲೇ ಅದರೆ ೧೯೨೭ರಲ್ಲಿಯೇ ದ.ರಾ.ಬೇಂದ್ರೆ ಮತ್ತು ಬೆಟಗೇರಿ ಕೃಷ್ಣಶರ್ಮರು ವಿದ್ಯಾವರ್ಧಕ ಸಂಘದ ಮೂಲಕ ನವರಾತ್ರಿ ಹಬ್ಬವನ್ನು ‘ನಾಡಹಬ್ಬ’ವನ್ನಾಗಿ ಆಚರಿಸುವಂತೆ ಮಾಡಿದ್ದರು. ವಿದ್ಯಾವರ್ಧಕ ಸಂಘದ ಸಭೆಯಲ್ಲಿಯೆ ನಾಡಿನ ಏಕೀಕರಣಕ್ಕೆ ಸಂಬಂಧಿಸಿದಂತೆ ಇದಕ್ಕಿಂತ ಒಂಬತ್ತು ವರ್ಷಗಳ ಹಿಂದೆಯೆ ಗೊತ್ತುವಳಿಯೊಂದನ್ನು ಸ್ವೀಕರಿಸಿದ್ದು ವಾಗ್ಭೂಷಣದಲ್ಲಿ ದಾಖಲಾಗಿದೆ. ೭-೧೦-೧೯೧೭ರಂದು ನಡೆದ ಸಭೆಯ ಗೊತ್ತುವಳಿ ಈ ರೀತಿ ಇದೆ:-

“ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡವಿರುತ್ತದೆ. ಮದ್ರಾಸ್ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಈ ಜಿಲ್ಲೆಗಳು ಕೂಡ ಕನ್ನಡವಿದ್ದು ಕಡಪಾ, ಕರ್ನೂಲು, ಅನಂತಪೂರ ಮುಂತಾದ ಜಿಲ್ಲೆಗಳ ಎಷ್ಟೋ ಹಳ್ಳಿಗಳಲ್ಲಿ ತಾಲೂಕುಗಳೂ ಕನ್ನಡ ಇರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ, ಹಿತಕ್ಕೂ, ಬೆಳವಣಿಗೆಗೂ

೩೯.ಸಂಪುಟ ೩೨, ಸಂಚಿಕೆ ೮, ಮಾರ್ಚ್ ೧೯೨೯

ಅನುಕೂಲವಾಗುವುದು.''

ಕನ್ನಡದ ಬಗೆಗಿನ ಈ ಬಗೆಯ ಕಾಳಜಿ ವಿದ್ಯಾವರ್ಧಕ ಸಂಘದಿಂದ, ಅದರ ಮುಖವಾಣಿಯಾದ 'ವಾಗ್ಭೂಷಣ'ದಲ್ಲಿ ಹಲವು ಬಾರಿ ವ್ಯಕ್ತವಾಗಿದೆ. ಇದಕ್ಕೆ ಪೂರಕವಾಗಿ ಆಲೂರ ವೆಂಕಟರಾಯರು ೧೯೩೦ರಲ್ಲಿ ಮೈಸೂರಿನಲ್ಲಿ ನಡೆದ ೧೬ನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನದಿಂದ ನಾಡಿನ ಏಕೀಕರಣಕ್ಕೆ ನೀಡಿದ ಕರೆ ಮಹತ್ವದ್ದಾಗಿದೆ. ''ಚತುರ್ಮುಖವಾದ ಕರ್ನಾಟಕವು ಏಕಮುಖವಾಗಬೇಕಾಗಿದೆ.... ಆದುದರಿಂದ ಕನ್ನಡಿಗರೇ ಏಳಿರಿ, ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೋಸ್ಕರ ಟೊಂಕ ಕಟ್ಟಿರಿ. ಕರ್ನಾಟಕ ವಿಶ್ವವಿದ್ಯಾಲಯವಿಲ್ಲದ ವರೆಗೆ ನಮ್ಮ ಸಾಹಿತ್ಯ ದೇವತೆ ಪದಭ್ರಷ್ಟೆ, ಅದಾದ ಮೇಲೆಯೇ ಅವಳ ಪ್ರಾಣ ಪ್ರತಿಷ್ಠೆ'' ಎಂಬ ಮಾತು ಏಕೀಕರಣದ ಬಗೆಗಿನ ಉತ್ತರ ಕರ್ನಾಟಕ ಭಾಗದವರ ಬದ್ಧತೆಯನ್ನು ತೋರಿಸುತ್ತದೆ.

'ಕರ್ನಾಟಕ' ಶಬ್ದ ಜಡತೆಯನ್ನು ತೊಡೆದು ಹಾಕುವ ಮಂತ್ರದಂಡ ಅವರ ಪಾಲಿಗೆ. ಅದಕ್ಕಾಗಿಯೇ ಅವರು ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವರು? ಎಂದು ಪ್ರಶ್ನಿಸುತ್ತಾರೆ. ಕನ್ನಡಿಗರು ಹೇಡಿಗಳು; ಹಿಂದುಳಿದವರು, ಅಭಿಮಾನ ಶೂನ್ಯರು ಎಂದು ಮೊದಲಾದ ಕರ್ಣಕಟುವಾದ ನುಡಿಗಳಿಂದ ನಮ್ಮನ್ನು ಚುಚ್ಚುವವರಿಗೆ ನಾವು ನಮ್ಮ ಕ್ರಿಯಾಶಕ್ತಿಯಿಂದ ಉತ್ತರ ಕೊಡೋಣ. ಸಾಯಲಾದ ಕರ್ನಾಟಕಕ್ಕೆ ಇತಿಹಾಸದ ಸಂಜೀವಿನಿ ಮಾತ್ರೆಯನ್ನು ಹಾಕಿ ಚೇತನಗೊಳಿಸೋಣ. ನಮ್ಮ ಆಶಾ ವೃಕ್ಷವನ್ನು ಕೊಳೆಯಿಸಿ ಬಿಡುವಂತಹ ಹುಳುಗಳನ್ನು ಕೊಲ್ಲಲು ಇತಿಹಾಸವೇ ಮದ್ದು. ಕನ್ನಡಿಗರೇ 'ಕರ್ನಾಟಕ'ವೆಂಬ ಒಂದು ಶಬ್ದದಲ್ಲಿ ಎಂಥ ಅದ್ಭುತವಾದ ಮಾಂತ್ರಿಕ ಶಕ್ತಿಯು ತುಂಬಿರುತ್ತೆಂಬುದನ್ನು ಲಕ್ಷಕ್ಕೆ ತನ್ನಿರಿ! ಎಂದು ಕರೆ ಕೊಡುವರು. ಹಿಂದಿನ ಅರಸರು, ವೈಭವ, ಸಂಪತ್ತು, ಕವಿಗಳು ಎಲ್ಲರೂ ಹೋದರೂ 'ಕರ್ನಾಟಕ' ಎಂಬ ಶಬ್ದ ಮಾತ್ರ ದ್ರೌಪದಿಯ ಅಕ್ಷಯ ಪಾತ್ರೆಯ ಅಗುಳಿನಂತೆ ಇನ್ನೂ ಉಳಿದಿದೆ. ಇದೊಂದು ಅಗುಳಿನಿಂದ ಸಾವಿರಾರು ಜನರ ಹಸಿವೆಯನ್ನು ಹಿಂಗಿಸಬಹುದು. ಕಾರಣ ಗುಪ್ತಗಾಮಿನಿಯಾದ ಕರ್ನಾಟಕ ಸಂಸ್ಕೃತಿ ಗಂಗೆಯನ್ನು ಮೇಲಕ್ಕೆ ತರುವುದು ನಮ್ಮ ಕರ್ತವ್ಯ ಎಂದು ಅವರು ನಮ್ಮ ಕರ್ತವ್ಯವನ್ನು ನೆನಪಿಸುವರು.

ಆಲೂರರು ಚತುರ್ಮುಖ ಕನ್ನಡ ನಾಡನ್ನು ಕಂಡರೆ ಶಾಂತಕವಿಗಳು ಐದು ಮುಖದ ಕನ್ನಡ ನಾಡನ್ನು ನಮಗೆ ಪರಿಚಯಿಸುವರು. ಅವರ 'ಶ್ರೀ ವಿದ್ಯಾರಣ್ಯ ವಿಜಯ' ಕೀರ್ತನೆಯಲ್ಲಿ (೧೯೧೮) ಅವರು ಕರ್ನಾಟಕದ ಚಿತ್ರಣವನ್ನು ಈ ರೀತಿ ನೀಡುತ್ತಾರೆ:

'ಇದು ಮಮ್ಮೈ ಕನ್ನಡಿ ಕೇಳ್ ಗೆಳೆಯ

ಇದು ಮದ್ರಾಸದ ಕನ್ನಡಿಯು

ಇದು ಮೈಸೂರವರಿಡಿಗನ್ನಡಿ ಮೇಣ್

ಇದು ಕೊಡಗದ ಕನ್ನಡಿ ಕಾಣೈ

ಇದು ಭಾಗ್ಯದ ನಗರದ ಕನ್ನಡಿ ಕೂ-

ಡಿದರಿವು ನಿನ್ನಿಡಿ ಕನ್ನಡಿಯು

ಈ ನಿನ್ನ ಇಡಿ ಕನ್ನಡಿಯ ಹೆಸರೇನೆಂದರೆ

ಕರ್ನಾಟಕಮಿದು!' - ಅವರ ದೃಷ್ಟಿಯಲ್ಲಿ ಇದು ಪಂಚ ಭೂತಗಳ ಕನ್ನಡಿಯೂ ಹೌದು. ಕನ್ನಡ ಮಾತೆಯನ್ನು ಅವರು ಭುವನೇಶ್ವರಿಯನ್ನಾಗಿ ಪರಿಚಯಿಸುತ್ತಾರೆ.

ಬೇಂದ್ರೆಯವರಲ್ಲಿಯೂ ಕನ್ನಡ ನಾಡಿನ ಪಂಚ ಮುಖದ ವರ್ಣನೆ ಬಂದಿದೆ. ಪರಮೇಶ್ವರನ ಪಂಚಮುಖಕ್ಕೆ ಇದನ್ನು ಅವರು ಹೋಲಿಸುತ್ತಾರೆ. ಅವರ 'ಪಾರ್ವತಿ ನೀನೇ ಸಲಹು' ಕವನವನ್ನು ನೋಡಬೇಕು:

'ಬಡಗಣ ತೆಂಕಣ ಪಡುವಣ ಮೂಡಣ

ನಡುವಣ ಕನ್ನಡ ಪಂಚಶಿಖ

ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ

ಮೈದೋರಿತು ಇಗೊ ಪಂಚಮುಖ'

ಈ ಪಂಚ ಮುಖವನ್ನು ಏಕಮುಖವನ್ನಾಗಿ ಮಾಡಲು ಅವರು ಆಯಾ ಭಾಗಗಳ ಶಕ್ತಿದೇವತೆಯ ಮೊರೆಹೋಗುವರು. 'ಕಡಲ ಪಾವನ ಪರಂಪರೆ' ಕವಿತೆಯಲ್ಲಿ ಅವರು ಮೈಸೂರಿನ ಚಾಮುಂಡಿ, ಕೊಲ್ಲೂರ ಮೂಕಾಂಬೆ, ಗೋಕರ್ಣದ ಭದ್ರಕಾಳಿ, ಬಾದಾಮಿ ಬನಶಂಕ್ರಿ, ಗುಡ್ಡದಾ ಎಲ್ಲಮ್ಮ ಎಲ್ಲರ ಹರಕೆ ನಮ್ಮ ಮೇಲಿದೆ ಎಂಬ ಭರವಸೆಯನ್ನು ತಾಳುತ್ತಾರೆ. ಒಟ್ಟಾರೆ ಕನ್ನಡ ನಾಡು ಒಂದು ಆಡಳಿತಕ್ಕೆ ಒಳಪಡಬೇಕು ಎಂಬ ಬಯಕೆ ಅಂದಿನ ಪತ್ರಿಕೆಗಳಲ್ಲಿ ಆ ಮೂಲಕ ಸಾಹಿತ್ಯದಲ್ಲಿ ಒಡಮೂಡಿದ್ದವು.

ಬೆಳಗಾವಿ: ಕರ್ನಾಟಕದ ಏಕೀಕರಣದಲ್ಲಿ ಬೆಳಗಾವಿಯು ಮಹತ್ವದ ಅಂಶ. ಈ ಬೆಳಗಾವಿಯ ಮೇಲೆ ಮರಾಠಿಗರ ಕಣ್ಣು ಮೊದಲಿನಿಂದಲೂ ಇದೆ. ಇದನ್ನು ಮಹಾರಾಷ್ಟ್ರದ ಭಾಗವನ್ನಾಗಿ ಮಾಡಿಕೊಳ್ಳಬೇಕು ಎಂಬ ಹುನ್ನಾರು ಅವರು ಮೊದಲಿನಿಂದಲೂ ನಡೆಸುತ್ತ ಬಂದಿದ್ದಾರೆ. ಇದನ್ನು ಕನ್ನಡಿಗರೂ ಸಮರ್ಥವಾಗಿ ನಿಭಾಯಿಸುತ್ತಲೇ ಬಂದಿದ್ದಾರೆ. ಐತಿಹಾಸಿಕವಾಗಿ ನಾಡಿಗೂ ನುಡಿಗೂ ಸಂಬಂಧವಿರುವ ಈ ಒಂದು ಸಂದರ್ಭವನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನ್ನಿಸುತ್ತದೆ.

೧೯೨೮ರಲ್ಲಿ ಮರಾಠಿ ಸಾಹಿತ್ಯ ಸಮ್ಮೇಳನ ಗ್ವಾಲಿಯರದಲ್ಲಿ ನಡೆಯುತ್ತದೆ. ಈ

ಸಮ್ಮೇಳನದಲ್ಲಿ ಭಾಗವಹಿಸಲು ಒಬ್ಬಿಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕು ಎಂದು ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನವರು ಕರ್ನಾಟಕ ಸಾಹಿತ್ಯ ಪರಿಷತ್ತಿನವರಿಗೆ ಆಹ್ವಾನ ಕಳುಹಿಸುತ್ತಾರೆ. ಬೆಂಗಳೂರಿನಿಂದ ಯಾರೂ ಹೋಗುವವರಿಲ್ಲ, ಕಾರಣ ಧಾರವಾಡ ಕಡೆಯಿಂದ ಯಾರಾದರೂ ಹೋಗುವವರಿದ್ದರೆ ಹೋಗಬಹುದು ಎಂದು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ತಿಳಿಸುತ್ತಾರೆ. ಇಲ್ಲಿಂದ ದ.ರಾ.ಬೇಂದ್ರೆ, ಮತ್ತು ಬೆಟಗೇರಿ ಕೃಷ್ಣಶರ್ಮರು ಹೋಗುತ್ತಾರೆ. ಮುಂದಿನ ವಿವರಗಳಿಗೆ 'ವಾಗ್ಭೂಷಣ'ದ ಸಂಪಾದಕೀಯವನ್ನು ನೋಡಬೇಕು.[೪೦]

"ಕರ್ನಾಟಕದ ಪರವಾಗಿ ಈ ವಿಚಾರಗಳು ನಡೆದಿರುವಾಗ ಕರ್ನಾಟಕದಲ್ಲಿ ಸೇರಿಕೊಂಡು ಅದರಲ್ಲಿಯ ಜಲ ವಾಯುಗಳನ್ನು ಸೇವಿಸಿ ಉಪ್ಪನ್ನವನ್ನುಂಡುಕೊಂಡು ಬೆಳೆದ ಮರಾಟಿಗರಲ್ಲಿ ಕೆಲವರು ಒಂದು ಕುಚೋದ್ಯವನ್ನು ಹೂಡಿದರು. ಮುಂದಿನ ವರ್ಷ (೧೯೨೯)ದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನವನ್ನು ಬೆಳಗಾವಿಯಲ್ಲಿ ಕೂಡಿಸಬೇಕೆಂದು ಅವರ ಹವಣಿಕೆ! ಬೆಳಗಾವಿಯನ್ನು ಮರಾಟಿಯ ಕಾಲೊಳಗೆ ತುಳಿದಾಡಿಸಬೇಕೆಂದು ಅವರ ಕೋರಿಕೆಯಾಯಿತು. ಮಹಾರಾಷ್ಟ್ರ ಸಾಹಿತ್ಯ ಸೇವಕರ ಸೈನ್ಯವನ್ನು ಹುರಿದುಂಬಿಸಿ ಕರ್ನಾಟಕದ ಮೇಲೆ ದಾಳಿ ಕರೆಯಿಸಿ ಕನ್ನಡದ ಕೊಲೆ ಮಾಡಿಸಿಬಿಡಬೇಕೆಂದು ಅವರು ಹಂಬಲಿಸಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ ಕಳುಹಿಸುವ ಸಿದ್ಧತೆ ಮಾಡತೊಡಗಿದರು." ಇದನ್ನು ಕರ್ನಾಟಕದ ಪ್ರತಿನಿಧಿಗಳಾದ ಬೇಂದ್ರೆ, ಮತ್ತು ಬೆಟಗೇರಿಯವರು ವಿರೋಧಿಸುತ್ತಾರೆ. ಉಂಡಮನೆಯ ಗಳ ಎಣಿಸುವ ಈ ಅಲ್ಪಸಂಖ್ಯಾಕರ ಆಮಂತ್ರಣವನ್ನು ಕನ್ನಡಿಗರ ಮನಸ್ಸಿನ ವಿರುದ್ಧವಾಗಿ ಸ್ವೀಕರಿಸಬೇಡಿರೆಂದೂ ತಿಳಿಸುತ್ತಾರೆ. ಇದರ ಪರಿಣಾಮವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳು ಮರಾಠಿಗರ ತಿರಸ್ಕಾರಕ್ಕೊಳಗಾಗುತ್ತಾರೆ. ಅವರನ್ನು ಹಾದಿಹೋಕರಂತೆ ಕಾಣಲಾಯಿತು ಎಂದು 'ವಾಗ್ಭೂಷಣ' ಬರೆಯುತ್ತದೆ. ಗ್ವಾಲಿಯರದ ಅನುಭವಗಳನ್ನು ಬೇಂದ್ರೆ, ಮತ್ತು ಬೆಟಗೇರಿಯವರು ಪತ್ರಿಕೆಗಳಿಗೆ ವಿವರಿಸುತ್ತಾರೆ. ಆ ಬಳಿಕ ಕನ್ನಡಿಗರೆಲ್ಲ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನವು ಬೆಳಗಾವಿಯಲ್ಲಿ ನಡೆಯಕೂಡದೆಂದು ಕನ್ನಡಿಗರೆಲ್ಲರೂ ಒಮ್ಮನಸ್ಸಿನಿಂದ ಹೇಳುತ್ತ ಬಂದರು.

"ಬೆಳಗಾವಿಯಲ್ಲಿ ಕೂಡಲಿಕ್ಕಿರುವ ಪ್ರಾಂತಿಕ ಪರಿಷತ್ತನ್ನು ಸವದತ್ತಿಗೆ ದೂಡಿ ಬೆಳಗಾವಿಯು ಕರ್ನಾಟಕ ಪ್ರಾಂತದ ಕಾರ್ಯಕ್ಷೇತ್ರದಿಂದ ಹೊರಗಿರುವದೆಂದು ತೋರಿಸುವ ಪ್ರಯತ್ನವೂ ನಡೆದಿರುವುದಂತೆ! ಭಲೆ! ಮರಾಟರೇ ನಿಮ್ಮ 'ಗನಿಮೀ ಕಾವಾ' ಚೆನ್ನಾಗಿದೆ. ಈ ತರದ ಹೊಳ್ಳು ಹಂಚಿಕೆಗಳು ನಿಮಗೆ ಯಶಸ್ಸು ಕೊಡಬಹುದೆಂದು ನಾವು ನಂಬಲಾರೆವು" ಎಂದು ವಾಗ್ಭೂಷಣವು ಮರಾಠರ ಕುತಂತ್ರವನ್ನು ಬಯಲಿಗಿಡುವುದು.

೪೦.ಸಂಪುಟ ೩೨, ಸಂಚಿಕೆ ೮, ಮಾರ್ಚ್ ೧೯೨೯

"…. ಮರಾಟರಂತೂ ಈ ರೀತಿ ಕರ್ನಾಟಕದ ಮೇಲೆ ದಾಳಿ ಮಾಡುವುದನ್ನು ನಿಶ್ಚಯಿಸಿದ್ದಾರೆ. ನಾವು ಕನ್ನಡಿಗರು ಇದಕ್ಕೆ ಮಾಡತಕ್ಕುದೇನು? ಮರಾಟರ ಈ ದಾಳಿಯನ್ನು ಬಾಯಿಗೆ ಬಾಯಿ ಹಚ್ಚಿ ತಡೆಯುವುದು ಕನ್ನಡಿಗರ ಶಾಂತತಾ ಪ್ರಿಯ ಸರಳತೆಗೆ ಒಪ್ಪತಕ್ಕ ಮಾತೇ ಹೇಗೆ ಎಂಬದೊಂದು ಪ್ರಶ್ನೆಯುಳಿದಿದೆ. ಅದನ್ನು ಮುಂದೆ ವಿಚಾರಿಸೋಣ. ಮೊದಲು ಮರಾಟರು ಕನ್ನಡಿಗರನ್ನು ರೊಚ್ಚಿಗೇಳಿಸುವ ಕುಹಕ ಭಾವನೆಯಿಂದ ನಡೆಸುವ ಈ ಕಾರ್ಯವನ್ನು ಎಲ್ಲರೂ ಒಮ್ಮನಸ್ಸಿನಿಂದ ನಿಷೇಧಿಸೋಣ" ಎಂದು 'ವಾಗ್ಭೂಷಣ' ಕರೆ ಕೊಡುತ್ತದೆ.

ಇದೇ ಸಂಚಿಕೆಯಲ್ಲಿ 'ಓರ್ವ ಕನ್ನಡದ ಆಳು' ಬರೆದು ಕಳುಹಿಸಿದ ಪತ್ರವನ್ನು ಪ್ರಕಟಿಸಲಾಗಿದೆ. ಇದು ಆ ಒಬ್ಬನ ಅಭಿಪ್ರಾಯವನ್ನು ಸಂಕೇತಿಸುವುದಿಲ್ಲ, ಮುಂಬೈ ಕರ್ನಾಟಕದ ಎಲ್ಲ ಕನ್ನಡಿಗರ ಅಭಿಪ್ರಾಯವೂ ಆಗಿತ್ತು. ಮರಾಠಿಗರ ಆಕ್ರಮಣಕ್ಕೆ ಪ್ರತಿಕಾರ ಏನು ಎಂಬುದನ್ನು ಅವರು ವಿವರಿಸಿದ್ದಾರೆ. ಇದೆಲ್ಲ ಆ ಮರಾಠಿ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿಯೇ ವ್ಯಕ್ತವಾದ ಅಭಿಪ್ರಾಯಗಳು ಎನ್ನುವುದನ್ನು ಗಮನಿಸಬೇಕು. ಮರಾಠಿಗರು "…ಹಠದಿಂದ ಕನ್ನಡ ನಾಡಿನಲ್ಲಿಯೇ ತಮ್ಮ ಸಾಹಿತ್ಯ ಸಮ್ಮೇಳವನ್ನು ನೆರೆಯಿಸಿದರೆ ಕನ್ನಡಿಗರಲ್ಲಿ ಅವರು ತಮ್ಮ ವಿಷಯವಾಗಿ ಅನಾದರ ಭಾವವನ್ನು ತಾವೇ ಉಂಟುಮಾಡಿಕೊಂಡಂತೆ ಆಗುವುದು. ಆಗ ಕನ್ನಡ ನಾಡಿನವರು ಮರಾಠಿಗರ ವಿಷಯವಾಗಿ ತಮ್ಮಲ್ಲುಂಟಾದ ಅನಾದರ ಭಾವವನ್ನು ಕೆಳಗೆ ಹೇಳುವ ಉಪಾಯಗಳಿಂದ ವ್ಯಕ್ತಗೊಳಿಸಬೇಕಾಗುವುದು. ಮತ್ತು ಈ ಪ್ರಕಾರದ ಪರನಾಡಿನವರ ಆಕ್ರಮಣಕ್ಕೆ ತಮ್ಮ ಈ ವರೆಗಿನ ಔದಾಸೀನ್ಯವೇ ಕಾರಣವೆಂದು ತಿಳಿದು ಇನ್ನುಮುಂದೆ ಅವರ ಆಕ್ರಮಣವು ತಮ್ಮ ಮೇಲೆ ಆಗದಂತೆ ಮಾಡಬೇಕಾಗುವ ಕೆಳಗೆ ಹೇಳುವ ಉಪಾಯಗಳನ್ನು ಐದು ಮನೆಯ ಹಳ್ಳಿಯಿಂದ ದೊಡ್ಡ ಪಟ್ಟಣಗಳ ವರೆಗೂ ಸಮಗ್ರ ಕರ್ನಾಟಕದಲ್ಲಿ ಎಲ್ಲೆಲ್ಲಿಯೂ ಕನ್ನಡಿಗರು ಮಾಡುವರೆಂದು ಆಶಿಸುತ್ತೇವೆ.

೧.ಕನ್ನಡಿಗರು, ತಮ್ಮ ಮಕ್ಕಳು ಮರಾಠಿ ಭಾಷೆಯನ್ನು ಮತ್ತು ಮರಾಠಿ ಲಿಪಿಯನ್ನು ಕಲಿಯದಿರುವಂತೆ ಎಚ್ಚರ ಪಡಬೇಕು.

೨.ಒಂದು ವೇಳೆ ಕಲಿತಿದ್ದರೆ ಯಾವ ಕನ್ನಡಿಗನೂ ಕರ್ನಾಟಕದೊಳಗಿನ ಮರಾಠಿಗನೊಡನೆ ಮರಾಠಿಯಲ್ಲಿ ಮಾತನಾಡಕೂಡದು: ಹೀಗೆ ನಡೆದು ಮರಾಠಿಗನಿಗೆ ಕನ್ನಡವನ್ನು ಕಲಿತ ಹೊರ್ತು ಗತಿಯಿಲ್ಲವೆಂದು ಮನವರಿಕೆ ಮಾಡಿಕೊಡಬೇಕು.

೩.ಕನ್ನಡ ನಾಡಿನಲ್ಲಿ ಜೀವಿಸಿ ಮರಾಠಿಯನ್ನಾಡುವ ವಕೀಲ, ವ್ಯಾಪಾರಿ, ಡಾಕ್ಟರ, ಶಿಂಪಿ, ನಾಪಿತ, ಅಗಸ ಮುಂತಾದವರ ಸಂಗಡ ಬಳಕೆಯನ್ನು ಶಕ್ಯವಿದ್ದ ಮಟ್ಟಿಗೆ ಬಿಡಲಿಕ್ಕೆ ಪ್ರಯತ್ನಿಸಬೇಕು.

೪.ಕನ್ನಡ ನಾಡಿನಲ್ಲಿ ಎಲ್ಲಿಯೂ ಮರಾಠಿ ಲಿಪಿಯ ಬೋರ್ಡುಗಳು, ಸಾರ್ವಜನಿಕ ಪ್ರಕಟಣೆಗಳು, ಸರಕಾರಿ ಫಾರ್ಮುಗಳು ಮುಂತಾದವು ಉಂಟಾಗದಂತೆ ಪ್ರಯತ್ನಿಸಬೇಕು. ಇಂಜಿನಿಯರ್; ರೇಲ್ವೆ, ಪೋಸ್ಟಲ್ ಮುಂತಾದ ರಾಜಕೀಯ ವಿಭಾಗಗಳ ಅಧಿಕಾರಿಗಳನ್ನು ಪ್ರಾರ್ಥಿಸಿ ಈ ತರದ ವ್ಯವಸ್ಥೆಯನ್ನು ಮಾಡಿಸಿಕೊಳ್ಳಬೇಕು.

೫.ಕನ್ನಡ ಭಾಷೆಯಲ್ಲಿ ಮರಾಠಿ ಶಬ್ದಗಳ ಬಳಕೆಯು ಶಕ್ಯವಿದ್ದ ಮಟ್ಟಿಗೆ ಇಲ್ಲದಂತೆ ಮಾಡಬೇಕು. ಉಳಿದ ಭಾಷೆಗಳ ಶಬ್ದಗಳಿಗಿಂತ ಅವುಗಳ ಪ್ರವೇಶಕ್ಕೆ ಕಡೆಯ ನಂಬರು ಕೊಡಬೇಕು.

೬.ಮರಾಠಿ ನಾಟಕಗಳು ನಡೆದ ನಾಟಕ ಗೃಹಗಳ ಬಳಿಯಲ್ಲಿ ನಿವಾರಣ (ಪಿಕೆಟಿಂಗ್) ಕಾರ್ಯವನ್ನು ನಡೆಸಬೇಕು.

೭.ಕನ್ನಡ ನಾಡಿನಲ್ಲಿ ಮರಾಟಿಯ ಗ್ರಂಥಗಳು, ವರ್ತಮಾನ ಪತ್ರಗಳು, ಮಾಸ ಪತ್ರಿಕೆಗಳು ಮುಂತಾದ ವಾಙ್ಮಯವು ಸೇರದಂತೆ ಪ್ರಯತ್ನಿಸಬೇಕು. ಕನ್ನಡಿಗರ ಬಹುಮತವುಳ್ಳ ಇಲ್ಲವೆ ಬಹುಮತ ಮಾಡಿಕೊಳ್ಳಬಹುದಾದ ವಾಚನಾಲಯಗಳಲ್ಲಿ ಮರಾಠಿ ಪತ್ರಿಕೆಗಳಾಗಲಿ, ಪುಸ್ತಕಕ್ಕಾಗಲಿ ಪ್ರವೇಶವಾಗದಂತೆ ಮಾಡುವುದು. ಈಗ ಅವುಗಳಲ್ಲಿದ್ದ ಪುಸ್ತಕಗಳನ್ನು ಮರಾಟಿ ನಾಡಿಗೆ ಉಚಿತವಾಗಿ ಕಳುಹಿಬಿಡುವುದು. ಮರಾಟಿಯ ಪುಸ್ತಕವನ್ನು ಬಿಟ್ಟರೆ ಗತಿಯಿಲ್ಲವೆಂಬಂತಹ ಪುಸ್ತಕಗಳಿದ್ದರೆ ಅಂತಹ ಪುಸ್ತಕಗಳನ್ನು ಕನ್ನಡ ನಾಡಿನವರು ತೀವ್ರ ಸಿದ್ಧಪಡಿಸುವಂತೆ ಅನುಕೂಲತೆ ಮಾಡಿಕೊಡಬೇಕು.

೮.ಮರಾಟಿಗರ ಗಾಯನ, ವ್ಯಾಖ್ಯಾನ ಕೀರ್ತನ ಮೊದಲಾದವನ್ನು ಕೇಳದಿರುವುದು; ಮತ್ತು ಅವು ನಡೆವಲ್ಲಿ ನಿವಾರಣ ಕಾರ್ಯವನ್ನು ನಡೆಯಿಸುವುದು.

೯.ಮರಾಟಿ ಕವಿತೆ ಮುಂತಾದವನ್ನು ಸೇರಿಸಿ ನಡೆಯಿಸುವ ಕನ್ನಡಿಗರ ಪುರಾಣ, ಕೀರ್ತನ ಮುಂತಾದವನ್ನು ನಿರಾಕರಿಸುವುದು.

೧೦.ಕನ್ನಡಿಗನು ಮಾತೃ ಭಾಷೆಯಾಗಿದ್ದ ಕನ್ನಡಿಗನು ಕನ್ನಡ ನಾಡಿನ ಸಭೆಗಳಲ್ಲಿ ಮರಾಟಿಯನ್ನಾಡತೊಡಗಿದರೆ ಅವನ ಮೋ.... ಬೇಕು.

೧೧.ಕನ್ನಡ ನಾಡಿನ ಮುನಸಿಪಾಲಿಟಿ, ಲೋಕಲ್ ಬೋರ್ಡು ಮತ್ತು ಸಹಕಾರಿ ಸಂಘ ಮುಂತಾದ ಎಲ್ಲ ಸ್ಥಾನಿಕ ಸಂಸ್ಥೆಗಳಲ್ಲಿ ಮರಾಠಿ ಮಾತೃ ಭಾಷೆಯವನು ಲೋಕಮತದಿಂದ ಆರಿಸಲ್ಪಡದಂತೆಯೂ ಸರಕಾರದಿಂದ ನಿಯುಕ್ತನಾಗದಂತೆಯೂ ಪ್ರಯತ್ನಿಸಬೇಕು.

೧೨.ಕನ್ನಡ ನಾಡಿನ ಹಿತವಿಲ್ಲದ ಮರಾಟಿ ದೇಶದ ಕಾರ್ಯಗಳಿಗೆ ಹಣದ ಸಹಾಯವನ್ನು ಮಾಡದಿರುವಂತೆ ಕಟ್ಟುಮಾಡಿಕೊಳ್ಳಬೇಕು.

ಈ ದ್ವಾದಶ ಸೂತ್ರಗಳು ಬೆಳಗಾವಿಯ ಮಟ್ಟಿಗೆ ಇವತ್ತಿಗೂ ಅಗತ್ಯವೇನೋ? ಈ

ಪತ್ರಿಕೆ ಸಮರ್ಥನೆಯಾಗಿ 'ವಾಗ್ಭೂಷಣ'ದ ಸಂಪಾದಕರು, ಒಂದು ಘಟನೆಯನ್ನು ವಿವರಿಸಿದ್ದಾರೆ. ಧಾರವಾಡದ ಎಡ್ವರ್ಡ್ ಪಾರ್ಕಿನಲ್ಲಿ ದೇಶಪಾಂಡೆ ಗಂಗಾಧರ ರಾಯರು ಮರಾಠಿಯಲ್ಲಿ ಮಾತನಾಡತೊಡಗಿದಾಗ ಅದನ್ನು ಕಡಪಾ ರಾಘವೇಂದ್ರ ರಾಯರು ಪ್ರತಿಭಟಿಸಿ ದೇಶಪಾಂಡೆಯವರು ಕನ್ನಡದಲ್ಲಿಯೇ ಮಾತನಾಡುವಂತೆ ಮಾಡುವರು. ಕನ್ನಡಿಗರಲ್ಲಿಯೇ ಕೆಲವರು ರಾಘವೇಂದ್ರ ರಾಯರನ್ನು ಉತಾವಳಿ ಸ್ವಭಾವದವರು, ಕನ್ನಡದ ದುರಭಿಮಾನಿಗಳು ಎಂದು ಜರೆಯುತ್ತಾರೆ. ಆದರೆ ಈ ಉತಾವಳಿ ಸ್ವಭಾವದ ರಾಘವೇಂದ್ರ ರಾಯರ ಮಾತೇ ಈಗ ನಮಗೆ ಮನೆ ಮಾತಾಗಿದೆ; ಕನ್ನಡಿಗರ ಉದ್ಧಾರದ ಕಿವಿ ಮಾತಾಗಿದೆ ಎಂದು ವಾಗ್ಭೂಷಣದ ಸಂಪಾದಕರು ಹೇಳುತ್ತಾರೆ.

ಒಟ್ಟಾರೆ ನಾಡಿನಿಂದ ನುಡಿಯ ಬೆಳವಣಿಗೆ, ನುಡಿಗಾಗಿ ನಾಡು ಎಂಬ ಅರಿವಿನೊಂದಿಗೆ ನವೋದಯ ಸಂದರ್ಭದಲ್ಲಿ ಪತ್ರಿಕೆಗಳು ಕೆಲಸ ಮಾಡಿದವು. ಅದರ ಪ್ರತಿಫಲನವನ್ನು ನಾವು ಅಂದಿನ ಸಾಹಿತ್ಯ ಕೃತಿಗಳಲ್ಲಿಯೂ ಕಾಣುತ್ತೇವೆ.

ತಾಯಿಯ ಸ್ಥಾನದಲ್ಲಿ: ನವೋದಯದ ಎಲ್ಲ ಕವಿಗಳ ಕೃತಿಗಳನ್ನು ಪರಿಶೀಲಿಸಿದಾಗ ಈ ಕನ್ನಡ ಧರ್ಮವನ್ನು ಅವರು ನಿಷ್ಠೆಯಿಂದ ಪಾಲಿಸಿದ್ದು ಕಂಡು ಬರುತ್ತದೆ. ಬಿ.ಎಂ.ಶ್ರೀ.ಯವರ 'ಕನ್ನಡ ತಾಯ್ ಗೆಲ್ಗೆ, ಬಾಳ್ಗೆ!'ಯಲ್ಲಿ ಕನ್ನಡಿಗರೆಲ್ಲ ಒಡಹುಟ್ಟಿದವರು. ನಾಡು ನುಡಿ ನಡೆಗಳನು ಮುನ್ನಡೆಗೆ ನಡೆಸುತ್ತ ಮುಂದೆ ಸಾಗುವಿರಾ? ಎಂದು ಅವರು ಪ್ರಶ್ನಿಸುತ್ತಾರೆ. ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ- ಈ ಹಿರಿಯ ಕೂಗ-

'ಸಿರಿಗನ್ನಡಂ ಗೆಲ್ಗೆ; ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ'

ನಾಡನ್ನು ಮತ್ತು ನುಡಿಯನ್ನು ತಾಯಿಯ ಸ್ಥಾನದಲ್ಲಿಟ್ಟು ಗೌರವಿಸುವ ಪರಿಪಾಟ ನವೋದಯದಲ್ಲಿ ಆರಂಭವಾಯಿತು. ನಾಡು ನುಡಿಯೊಂದಿಗೆ ಇಂಥ ಭಾವನಾತ್ಮಕ ಸಂಬಂಧ ಏಕೀಕರಣದ ಹೋರಾಟದ ಸಂದರ್ಭದಲ್ಲಿ ಅಗತ್ಯವಾಗಿತ್ತು. ಕನ್ನಡ ಡಿಂಡಿಮವ ಬಾರಿಸುವ ಕುವೆಂಪು ಕೂಡ 'ಜೈ ಭಾರತ ಜನನಿಯ ತನುಜಾತೆ। ಜಯ ಹೇ ಕರ್ನಾಟಕ ಮಾತೆ।' ಎಂದು ಘೋಷಿಸುತ್ತಾರೆ. ತೀ.ನಂ.ಶ್ರೀಕಂಠಯ್ಯನವರು 'ಸ್ವಾಗತ'ದಲ್ಲಿ ,

ಒಬ್ಬ ಕನ್ನಡ ದೇವಿಯುದರದಿಂದೊಗೆದು,
ಒಬ್ಬ ಕನ್ನಡ ಜನನಿಯೆದೆಹಾಲ ಮೊಗೆದು
ಒಬ್ಬ ಮಾತೆಯ ಮಡಿಲು ತೊಡೆಗಳಲಿ ಕುಣಿದು,
ಒಬ್ಬ ತಾಯುಲಿಗಳನೆ ತೊದಲಿ ಕುಣಿದು,

ಬೆಳೆದ ಕನ್ನಡಿಗರೇ, ಬಂಧು ಕನ್ನಡಿಗರೇ

ಇನಿಯ ಕನ್ನಡಿಗರೇ, ಸ್ವಾಗತವು ನಿಮಗೆ!- ಎಂದು ಹಾಡಿದ್ದಾರೆ.

ಎಂ.ಗೋವಿಂದ ಪೈಗಳು ಕೂಡ ಕನ್ನಡವನ್ನು ತಾಯಿಯೆಂದೇ ಬಗೆಯುತ್ತಾರೆ. ಅವರ, 'ಕನ್ನಡಿಗರ ತಾಯಿ' ಪದ್ಯದಲ್ಲಿ

'ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೇ।

ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ।'

ಎಂದು ಹಾಡುತ್ತಾರೆ. ಕನ್ನಡಾಂಬೆಯ ಹಿರಿಮೆ ಸಾರುವ ಬೆನಗಲ್ ರಾಮರಾವ್ ಅವರು, 'ಕನ್ನಡವನುಳಿದೆನಗೆ। ಅನ್ಯ ಜೀವನವಿಲ್ಲ। ಕನ್ನಡವೇ ಎನ್ನುಸಿರು। ಪೆತ್ತೆನ್ನ ತಾಯಿ।' ಎಂದು ಹೇಳಿದ್ದಾರೆ.

ಹುಯಿಲಗೋಳ ನಾರಾಯಣರಾವ್ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಎಂದು ಹಾಡುತ್ತಾರೆ. ಸಾಲಿ ರಾಮಚಂದ್ರರಾಯರು 'ಕನ್ನಡದ ನೆಲದ ಪುಲ್ಲೆನಗೆ ಪಾವನ ತುಳಸಿ!' ಎನ್ನುತ್ತಾರೆ. ಶಾಂತ ಕವಿಗಳು 'ರಕ್ಷಿಸು ಕರ್ನಾಟಕ ದೇವಿ' ಬರೆಯುತ್ತಾರೆ. ಅಂಬಿಕಾತನಯದತ್ತರು 'ಕನ್ನಡ ನಾಡ ರಾಣಿ', ಕಯ್ಯಾರ ಕಿಞ್ಞಣ್ಣ ರೈ 'ಬೆಂಕಿ ಬಿದ್ದಿದೆ ಮನೆಗೆ' ಬರೆಯುವರು. ಪು.ತಿ.ನರಸಿಂಹಾಚಾರ್, 'ಕನ್ನಡ ಉಳಿಸಿ' ಕವಿತೆಯಲ್ಲಿ 'ಕನ್ನಡ ಉಳಿಸಿ- ಕನ್ನಡ ಬೆಳೆಸಿ। ಕನ್ನಡವನೆ ಬಳಸಿ' ಎಂದು ಕರೆ ನೀಡುವರು. ಅವರ ದೃಷ್ಟಿಯಲ್ಲಿ 'ನಾಡೇ ನುಡಿಯು, ನುಡಿಯೇ ನಾಡು' 'ಕನ್ನಡಕೇತಕೆ ಹೆರನುಡಿಯೊಜ್ಜೆ' ಎಂದು ಅವರು ಪ್ರಶ್ನಿಸುತ್ತಾರೆ. 'ಹಚ್ಚೇವು ಕನ್ನಡದ ದೀಪ' ಎಂದು ಕಾವ್ಯಾನಂದ ಬರೆಯುತ್ತಾರೆ. 'ಹೊಸಗನ್ನಡದ ಹಾಡು'ದಲ್ಲಿ ಗೋಪಾಲಕೃಷ್ಣ ಅಡಿಗರು,

'ಇಂದು ಕೂಡ ಆಗದೆ,

ಕನ್ನಡವೊಂದಾಗದೆ?

ಭೇದದ ಹುಳಿ ನೀಗದೇ...' ಎಂದು ವಿಷಾದಿಸುತ್ತಾರೆ.

'ಎಲ್ಲಾದರೂ ಇರು, ಎಂತಾದರೂ ಇರು

ಎಂದೆಂದಿಗೂ ನೀ ಕನ್ನಡವಾಗಿರು' ಎನ್ನುವ ಕುವೆಂಪು ಅವರಿಗೆ 'ಮೆಟ್ಟುವ ನೆಲ- ಅದೇ ಕರ್ನಾಟಕ'ವಾಗಿದೆ.

ಕನ್ನಡವೆನೆ ಕುಣಿದಾಡುವುದೆನ್ನೆದೆ

ಕನ್ನಡವೆನೆ ಕಿವಿ ನಿಮಿರುವುದು! ಎಂದು ಅವರು ಆತ್ಮೀಯವಾಗಿ ಹಾಡಿದ್ದಾರೆ.

'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ

ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೂಡುತ್ತದೆ' ಎಂದು ಅವರು ಹೇಳಿದ್ದಾರೆ.

ಕನ್ನಡದ ಬಗೆಗಿನ ಕುವೆಂಪು ಅವರ ಕಳಕಳಿ ಅನನ್ಯವಾದುದು. ಅನ್ಯಭಾಷೆಗಳ ಆಕ್ರಮಣದಲ್ಲಿ ಕನ್ನಡ ಬಡವಾಗುವುದನ್ನು ನೋಡಿ ಸಹಿಸುವುದು ಅವರಿಗೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಅವರು,

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ,

ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ!

ರಾಜನುಡಿಯೆಂದೊಂದು ರಾಷ್ಟ್ರ ನುಡಿಯೆಂದೊಂದು

ದೇವನುಡಿಯೆಂದೊಂದು ಹತ್ತಿ ಜಗ್ಗಿ

ನಿರಿನಿಟಿಲು ನಿಟಿಲೆಂದು ಮುದಿ ಮೂಳೆ ಮುರಿಯುತಿದೆ

ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!

ಕೂಗಿಕೊಳ್ಳಲು ಕೂಡ ಬಲವಿಲ್ಲ; ಮಕ್ಕಳೇ

ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ!

ಎಂದು ಅವರು ಟೀಕಿಸುತ್ತಾರೆ. ಇಂಗ್ಲಿಷಿನ ಹೇರಿಕೆಯ ವಿರುದ್ಧ ಅವರ ಆಕ್ರೋಶ ನೋಡಿ;

ಹೆಣಭಾರ! ಹೆಣಭಾರ! ಸಾಕೀ ಬಲಾತ್ಕಾರ;

ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ

ಇಂಗ್ಲೀಷಿನ, ಚಪ್ಪಡಿಯಡಿಯ ಹಸುಳೆ ಚೀತ್ಕಾರ

ಕೇಳಿಸದ ಕಿವುಡರಿರ ನಿಮಗೇಕೆ ಅಧಿಕಾರ?

ಕೇಳಿಯೂ ಧಿಮ್ಮನಿರೆ ಕೋಟಿ ಧಿಕ್ಕಾರ!

ಬೇಕಾದವರಿಗೆ ಕೊಡಿರೊ, ಬೇಡವೆಂದವರಾರೊ?

ಹೇರಿ ಎಲ್ಲರ ಮೇಲೆ ಕೊಲೆಗೈವಿರೇಕೋ?

ಎನ್ನುವ ಕುವೆಂಪು ಕನ್ನಡದ ಬಗ್ಗೆ ನಿರ್ಲಕ್ಷಿತವಾಗಿರುವ ಅಧಿಕಾರಶಾಹಿಗೇ ಧಿಕ್ಕಾರ ಹೇಳುವರು. ಇಂಗ್ಲಿಷ್ ಕಲಿಕೆ ಐಚ್ಛಿಕವಾಗಿರಬೇಕು ಎನ್ನುವುದು ಅವರ ಅಭಿಪ್ರಾಯ.

ಕುವೆಂಪು ಅವರ ಅಖಂಡ ಕರ್ನಾಟಕದ ಕನಸು ನೋಡಿ:

ನೃಪತುಂಗನೆ ಚಕ್ರವರ್ತಿ
ಪಂಪನಲ್ಲಿ ಮುಖ್ಯಮಂತ್ರಿ
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಾಣಪ್ಪ
ಸರ್ವಜ್ಞ ಷಡಕ್ಷರ;
ಸರಸ್ವತಿಯು ರಚಿಸಿದೊಂದು
ನಿತ್ಯ ಸಚಿವ ಮಂಡಲ,
ತನಗೆ ರುಚಿರ ಕುಂಡಲ
ಅಖಂಡ ಕರ್ನಾಟಕ;
ಅಲ್ತೋ ನಮ್ಮ ಕೀರ್ತಿಶನಿಯ ರಾಜಕೀಯ ನಾಟಕ
(ಅಖಂಡ ಕರ್ನಾಟಕ)

ಕುವೆಂಪು ಅವರು ನೃಪತುಂಗನನ್ನೇ ಚಕ್ರವರ್ತಿ ಎಂದು ಕರೆಯಲು ಕಾರಣ, ಅವನು ಸಾಹಿತಿಯೂ ಹೌದು, ಕನ್ನಡದ ಪ್ರಥಮ ಉಪಲಬ್ಧ ಕೃತಿ ಅವನ ಹೆಸರಿನಲ್ಲಿಯೇ ಇರುವುದು. ಒಟ್ಟಾರೆ ಇದೊಂದು ಪರಿಪೂರ್ಣ ಸಚಿವ ಮಂಡಲ.

ಕನ್ನಡಿಗರ ಉದಾರತೆಯೇ ದೋಷವಾಗಿರುವ ಪರಿಯನ್ನು ಜಿ.ಪಿ.ರಾಜರತ್ನಂ ಅವರ ಪದ್ಯದಲ್ಲಿ ನೋಡಬಹುದು.

ಕರೆದು ತಣಿಯರು ಕೊಟ್ಟು ತಣಿಯರು
ಸುರಿದು ಸೂರೆಯನಿಟ್ಟು ತಣಿಯರು
ಹರಿದು ತಮ್ಮದ ಹಂಚಿ ತಣಿಯರು ನಾಡನು ಇತರರಿಗೆ।
ಮೆರೆದು ತಣಿಯರು ನುಡಿಯೆ ಪರರದು
ಮೊರೆದು ತಣಿಯರು ನುಡಿಯೆ ಪರರದು
ನೆನೆದು ತಣಿಯರು ತಮ್ಮ ಜೀವನ ಪರರ ಬೆಳೆಗಾಗಿ॥

ನಾಡನ್ನು ಅನ್ಯರಿಗೆ ಬಿಟ್ಟುಕೊಡುವುದು, ಪರರ ನುಡಿಯನ್ನು ತಮ್ಮದೆಂದು ಆಡುವುದನ್ನು ರಾಜರತ್ನಂ ಇಲ್ಲಿ ವ್ಯಂಗ್ಯವಾಗಿ ವರ್ಣಿಸಿದ್ದಾರೆ.

ಕನ್ನಡ ನಾಡಿನ ಏಕೀಕರಣವನ್ನು ಬಯಸಿದ ಈ ಕವಿಗಳಲ್ಲಿ ಧಾರವಾಡ, ಮೈಸೂರು, ಮಂಗಳೂರು ಭಾಗದ ಕವಿಗಳೆಲ್ಲರೂ ಸೇರಿದ್ದಾರೆ. ಕೇವಲ ಕಾವ್ಯದಲ್ಲಿ ಮಾತ್ರವಲ್ಲ ಆ ಕಾಲದ ಇತರ ಬರೆಹಗಳಲ್ಲೂ ನಾಡು ನುಡಿಯ ಬಗೆಗಿನ ಕನ್ನಡ ಧರ್ಮ ಪಾಲನೆಯಾಗಿದೆ. ಹಂಪಿ, ವಿಜಯ ನಗರ ಸಾಮ್ರಾಜ್ಯ, ವಿದ್ಯಾರಣ್ಯರು ಇದರ ಹಿಂದಿನ ಪ್ರೇರಕ ಶಕ್ತಿಯಾಗಿದ್ದನ್ನು ಇಲ್ಲಿ ಗಮನಿಸಬಹುದು. ಡಿ.ವಿ.ಗುಂಡಪ್ಪನವರು 'ಶ್ರೀ ವಿದ್ಯಾರಣ್ಯ ವಿಜಯ' ಎಂಬ ಕೃತಿಯನ್ನು ರಚಿಸಿದ್ದಾರೆ. ಅದೇ ರೀತಿ ಎಂ.ಆರ್.ಶ್ರೀನಿವಾಸ ಮೂರ್ತಿ 'ನಾಗರಿಕ', ನರಸಿಂಗ ಲಕ್ಷ್ಮಣ ಹೆಗ್ಗಡೆ 'ಕರ್ನಾಟಕ ಸಿಂಹಾಸನ ನಾಟಕವು', ಶಾಂತ ಕವಿಗಳು 'ಶ್ರೀ ವಿದ್ಯಾರಣ್ಯ ವಿಜಯ', ಹೊಸಕೆರೆ ಚಿದಂಬರಯ್ಯ 'ವಿದ್ಯಾರಣ್ಯ ಕಾವ್ಯಂ', ಆಲೂರ ವೆಂಕಟರಾಯರು 'ವಿದ್ಯಾರಣ್ಯರ ಚರಿತ್ರೆ', ಸಿ.ವೆಂಕಟರಣಮಯ್ಯ 'ಶ್ರೀವಿದ್ಯಾರಣ್ಯ ಚರಿತ್ರ ಸಂಗ್ರಹ', ಭೀಮಾಜಿ ಜೀವಾಜಿ ಹುಲಿಕವಿ 'ಶ್ರೀ ವಿದ್ಯಾರಣ್ಯ ಸ್ವಾಮಿಗಳು' ಕೃತಿ ರಚಿಸಿದ್ದಾರೆ. ಇವೆಲ್ಲ ನಾಟಕಗಳೇ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಆರುನೂರು ವರ್ಷಗಳ ಉತ್ಸವದ ಸಂದರ್ಭದಲ್ಲಿ ಶ್ರೀರಂಗರು 'ಪರಮೇಶ್ವರ ಪುಲಿಕೇಶಿ' ನಾಟಕವನ್ನು ರಚಿಸಿದ್ದಾರೆ. ಜಯಕರ್ನಾಟಕವು ಈ ಸಂದರ್ಭದಲ್ಲಿ ವಿಜಯನಗರ ವಿಶೇಷ ಸಂಚಿಕೆಯನ್ನು ಹೊರಡಿಸಿತು. ವಿಜಯನಗರದ ಕಲ್ಲುಗಳನ್ನು ವರ್ಣಿಸಿ ಬೇಟಗೇರಿ ಕೃಷ್ಣಶರ್ಮ ಅವರು ಬರೆದ ಕವಿತೆಯ ಸಾಲುಗಳು ಇವು-

'ಹಾಳು ಪಟ್ಟಣದ ಬಂಡೆಯ ಬಳಗದ
ಗೋಳಿನ ಮೌನದ ಕೂಗನು ಕೇಳಿ
ಅರಮನೆ ಸಿರಿಮನೆಗಲ್ಲದೆಯಾದರೂ
ಸೆರೆಮನೆಗಾದರೂ ನಮ್ಮನು ಬಳಸಿ'

ಹಂಪೆಯ ಕಲ್ಲುಬಂಡೆಗಳು ಹೇಳುವ ಮಾತು ಇದು.

ಕನ್ನಡ ಧರ್ಮ ಬೋಧಿಸಿದ ಇತರ ಕೆಲವುಬರೆಹಗಳಾದ ಮಾಧವ ಕರುಣಾ ವಿಲಾಸ, ದುರ್ಗದ ಬಿಚ್ಚುಗತ್ತಿ, ಕನ್ನಡಿಗರ ಕರ್ಮಕಥೆ (ಗಳಗನಾಥ), ರಾಜಯೋಗಿ, ಅಶಾಂತಿ ಪರ್ವ (ಬೆಟಗೇರಿ ಕೃಷ್ಣ ಶರ್ಮ), ಮಯೂರ (ದೇವುಡು), ದೌಲತ್ (ವೀರಕೇಸರಿ ಸೀತಾರಾಮ ಶಾಸ್ತ್ರಿ), ಪರಮೇಶ್ವರ ಪುಲಿಕೇಶಿ (ಶ್ರೀನಿವಾಸ ಕೊರಟಿ), ಕಿತ್ತೂರು ಮುತ್ತಿಗೆ (ಮುದವೀಡು ಕೃಷ್ಣರಾವ್), ಎಚ್ಚಮ ನಾಯಕ (ನಾಗೇಶ), ನೂರ್ಮಡಿ ತೈಲಪ (ಬಿ.ಪುಟ್ಟಸ್ವಾಮಯ್ಯ) ಇವುಗಳಲ್ಲೆಲ್ಲ ಕನ್ನಡಿಗರ ಹಳೆಯ ವೈಭವವನ್ನು ಎತ್ತಿಹೇಳಿ ಪ್ರೇರಣೆ ನೀಡುವ ಉದ್ದೇಶ ಕಂಡುಬರುತ್ತದೆ.

ಒಟ್ಟಾರೆಯಾಗಿ ನವೋದಯದ ಸಂದರ್ಭದಲ್ಲಿ ಪತ್ರಿಕೆಗಳು ನಾಡಿಲ್ಲದೆ ನುಡಿಯ

ಬೆಳವಣಿಗೆ ಇಲ್ಲ ಎಂಬ ಅಂಶವನ್ನು ಮನದಟ್ಟು ಮಾಡಿಕೊಡುತ್ತವೆ. ಅದಕ್ಕೆ ಅನುಗುಣವಾಗಿ ಅನೇಕ ಸಾಹಿತ್ಯ ಕೃತಿಗಳು ಪ್ರಕಟವಾಗಿದ್ದನ್ನು ಈಗ ಗಮನಿಸಲಾಗಿದೆ. ಒಂದು ಆಡಳಿತದಲ್ಲಿ ನುಡಿಯನ್ನಾಡುವ ಜನರು ಸೇರಿರದೆ ಇರುವ ಕಾರಣವಾಗಿಯೇ ಭಾಷೆಯಲ್ಲಿಯೂ ಏಕರೂಪತೆ ಇಲ್ಲ ಎಂಬ ಅಂಶವನ್ನು ಕಂಡಿದ್ದಾರೆ. ಅನ್ಯಭಾಷೆಗಳ ಆಕ್ರಮಣಕ್ಕೆ ಅವರು ಅತ್ಯಂತ ಸೂಕ್ತವಾಗಿ ಪ್ರತಿಕ್ರಿಯಿಸಿದ್ದಾರೆ. ಉತ್ತರ ಕರ್ನಾಟಕವು ಏಕೀಕರಣದ ತುರ್ತನ್ನು ಮೊದಲು ಕಂಡುಕೊಳ್ಳುತ್ತದೆ. ಏಕೆಂದರೆ ಅದು ದೀರ್ಘ ಕಾಲದಿಂದ ಬೇರೆ ಆಡಳಿತದಲ್ಲಿ ಇದ್ದುದು. ಮೈಸೂರಿನಲ್ಲಿ ಕನ್ನಡ ದೊರೆಗಳೇ ಆಡಳಿತ ನಡೆಸುತ್ತಿದ್ದುದರಿಂದ ಅವರಿಗೆ ಏಕೀಕರಣದ ತುರ್ತು ಅಷ್ಟೊಂದು ತೀವ್ರವಾಗಿ ತಟ್ಟಲಿಲ್ಲ. ಮಂಗಳೂರು ಭಾಗದವರೂ ಏಕೀಕರಣವನ್ನು ಬಯಸುತ್ತಾರೆ. ಒಟ್ಟಾರೆಯಾಗಿ ನಾಡು ಒಂದಾಗುವುದಲ್ಲಿಯೇ ನುಡಿಯ ಏಳಿಗೆಯೂ ಇದೆ ಎಂಬುದು ಆ ಕಾಲದ ಎಲ್ಲ ಸಾಹಿತಿಗಳ ಅಭಿಪ್ರಾಯವೂ ಆಗಿತ್ತು.

ತಿದ್ದುವ- ಬೆನ್ನುತಟ್ಟುವ ಹಂತ:- ಹೊಸಗನ್ನಡ ಸಾಹಿತ್ಯ ವಿವಿಧ ಪ್ರೇರಣೆಗಳಿಗೆ ಒಳಪಟ್ಟು ಸೃಷ್ಟಿಯಾಗುತ್ತಿದ್ದಾಗ ಸಾಹಿತ್ಯಪತ್ರಿಕೆಗಳು ಅವುಗಳನ್ನು ತಿದ್ದುವ ಕೆಲಸ ಮಾಡಿದವು. ಪ್ರಬುದ್ಧ ಕರ್ನಾಟಕದ ಸಂದರ್ಭದಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳು ಮತ್ತು ಟಿ.ಎಸ್. ವೆಂಕಣ್ಣಯ್ಯನವರು ಇಂಥ ಕೆಲಸ ಮಾಡಿದರು. ಈ ಬಗ್ಗೆ ಸ್ವತಃ ಮಾಸ್ತಿಯವರೇ ಆಡಿದ ಮಾತುಗಳನ್ನು ಈಗಾಗಲೇ ಗಮನಿಸಿದ್ದೇವೆ. ಇವರಿಬ್ಬರನ್ನೂ ಮಾಸ್ತಿಯವರು ಹೊಸಗನ್ನಡದ ಅಶ್ವಿನಿ ದೇವತೆಗಳು ಎಂದು ಕರೆದಿದ್ದರು. ಇಪ್ಪತ್ತನೆ ಶತಮಾನದ ಮೊದಲ ಮೂರು ದಶಕಗಳಲ್ಲಿ ಆದರ್ಶ ವಿಮರ್ಶೆ ಎಂಬುದು ಇರಲಿಲ್ಲ. ಕನ್ನಡ ಭಾಷೆಯಲ್ಲಿ ಹೊಸಗನ್ನಡದಲ್ಲಿ ಸಾಹಿತ್ಯ ಕೃತಿಗಳು ಹೆಚ್ಚಬೇಕು ಎಂಬ ಉದ್ದೇಶದಿಂದ ಕೃತಿಗಳು ರಚನೆಯಾಗುತ್ತಿದ್ದವು. ಕೃತಿ ರಚನೆಗೆ ವಿವಿಧ ಪತ್ರಿಕೆಗಳಲ್ಲಿ ನೀಡಿರುವ ಕರೆಯನ್ನು ಈಗಾಗಲೆ ಗಮನಿಸಿದ್ದೇವೆ. ಒಟ್ಟಾರೆ ಕನ್ನಡ ಸರಸ್ವತಿಯನ್ನು ಶ್ರೀಮಂತಗೊಳಿಸುವುದು ಅವರ ಉದ್ದೇಶವಾಗಿತ್ತು. ಹೀಗಾಗಿ ಅಂದಿನ ವಿಮರ್ಶೆ ಕೂಡ ಓದುಗ ಲೋಕ ಬೆಳೆಯಬೇಕು ಎಂಬ ಉದ್ದೇಶದಿಂದಲೇ ಬರತೊಡಗಿದವು. ಹೀಗಾಗಿ ಇವನ್ನು ವಿಮರ್ಶೆ ಎನ್ನುವ ಹೆಸರಿನಿಂದ ಕರೆಯದೆ ತಿದ್ದುವ - ಬೆನ್ನುತಟ್ಟುವ ಕೆಲಸ ಎಂದೇ ಕರೆಯುವುದು ಸೂಕ್ತ ಎನ್ನಿಸುತ್ತದೆ. ವಿಮರ್ಶೆಯ ಗಮನ ಸಾಹಿತ್ಯದ ಓದುಗರನ್ನು ಹೆಚ್ಚಿಸುವುದು ಆಗಿದ್ದರಿಂದ ಸಹಜವಾಗಿಯೇ ಅದು ವ್ಯಾಖ್ಯಾನಮುಖಿಯಾಯಿತು. ರಸ ವಿಮರ್ಶೆಯಾಯಿತು. ಬಿ.ಎಂ.ಶ್ರೀಕಂಠಯ್ಯನವರು ಇಂಥ ವಿಮರ್ಶೆಗೆ ಒಂದು ಮಾರ್ಗವನ್ನು ಹಾಕಿಕೊಟ್ಟರು. ಕುವೆಂಪು, ಮಾಸ್ತಿ ಮೊದಲಾದವರು ಈ ದಾರಿಯಲ್ಲಿ ಮುನ್ನಡೆದರು. ಕೃತಿಯ 'ಗುಣ ಗ್ರಹಣ'ಕ್ಕೆ ಇವರದು ಆದ್ಯತೆ. ಹೀಗಾಗಿ ಕೃತಿಯು ಯಾವತ್ತೂ ಒಂದು ಆಹ್ವಾನ ಎನ್ನಿಸಲಿಲ್ಲ ಈ ಮಾರ್ಗದವರಿಗೆ. ನವೋದಯ ವಿಮರ್ಶಕರ ಎದುರು ಅಪಾರವಾದ ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ ರಾಶಿ ಇತ್ತು. ಅವುಗಳಿಗೆ ವ್ಯಾಖ್ಯಾನ ವಿವರಣೆ ನೀಡುವ ಜವಾಬ್ದಾರಿಯನ್ನು ಅವರು ವಹಿಸಿಕೊಂಡರು. ಧ್ವನಿ ಸಿದ್ಧಾಂತದ ಆಧಾರದ ಮೇಲೆ ಕಾವ್ಯದಲ್ಲಿಯ ಶ್ರೇಷ್ಠ ಭಾಗ

ಯಾವುದು, ರಸ ಘಟ್ಟಗಳು ಯಾವವು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಯಿತು. ಈ ಕಾರಣಕ್ಕಾಗಿಯೇ ಕಾಳಿದಾಸನನ್ನು ವಿಮರ್ಶಿಸುವಾಗ, ಅವನ ಕೃತಿಗಳಲ್ಲೆಲ್ಲ 'ಶಾಕುಂತಲ' ಶ್ರೇಷ್ಠ, ಅದರಲ್ಲಿಯೂ ಅದರ ನಾಲ್ಕನೆ ಅಂಕ ಶ್ರೇಷ್ಠ. ನಾಲ್ಕನೆ ಅಂಕದಲ್ಲಿಯೂ ಶಾಕುಂತಲೆಯನ್ನು ಬೀಳ್ಕೊಡುವಾಗ ಕಣ್ವ ಮುನಿಗಳು ಆಡುವ ಉಪದೇಶಪರವಾದ ನಾಲ್ಕು ಶ್ಲೋಕಗಳು ಅತ್ಯಂತ ಶ್ರೇಷ್ಠ ಎಂಬಂಥ ಮಾತುಗಳು ಕೇಳಿ ಬಂದವು. ಕಾಳಿದಾಸನನ್ನು ಉಪಮಾ ಕವಿಯೆಂದಿರುವುದೂ ಕುಮಾರವ್ಯಾಸನನ್ನು ರೂಪಕ ಚಕ್ರವರ್ತಿ ಎಂದಿರುವುದೂ ಇಂಥ ಮೌಲ್ಯ ಮಾಪನದ ಫಲವೇ ಆಗಿದೆ. ಇಂಥ ವಿಮರ್ಶೆ ಹೊಸಗನ್ನಡದಲ್ಲೂ ಬಂತು. ಎಸ್.ವಿ. ರಂಗಣ್ಣನವರು ಮುದ್ದಣನನ್ನು ಬೆಲೆ ಕಟ್ಟುವಾಗ 'ರಾಮಾಶ್ವಮೇಧ' ಕೃತಿಯನ್ನು ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು ಎಂದು ಹೇಳಿದರು. ನವೋದಯ ಕಾಲದ ವಿಮರ್ಶೆ ಇಂಥ ವಿಮರ್ಶೆಯೇ ಆಗಿತ್ತು.

ಇದು ಬೇಕು, ಅದು ಬೇಡ, ಅದು ಒಳ್ಳೆಯದು, ಇದು ಕೆಟ್ಟದ್ದು ಎಂಬ ಆಯ್ಕೆಯ ಪ್ರಶ್ನೆ ಎದುರಾದಾಗ ವಿಮರ್ಶೆ ತಲೆದೋರುತ್ತದೆ. ಆಯ್ಕೆ ಯಾವತ್ತೂ ಒಳ್ಳೆಯದರ ಕಡೆಗೇ ಇರುತ್ತದೆ. ಸಾಹಿತ್ಯದ ವಿಷಯದಲ್ಲಿಯೂ ವಿಮರ್ಶೆ ಇದೇ ರೀತಿಯದಾಗಿರುತ್ತದೆ. ಕೃತಿಯೊಂದನ್ನು ಓದುಗನೊಬ್ಬ ಓದಿದಾಗ ಅದರ ಬಗ್ಗೆ ಒಂದು ಅಭಿಪ್ರಾಯ ಮೂಡುತ್ತದೆ. ಕೃತಿ ಚೆನ್ನಾಗಿದೆಯೆಂದೋ, ಕೆಟ್ಟದ್ದು ಎಂದೋ, ಭಾಷೆ ಕ್ಲಿಷ್ಟ ಎಂದೋ ಒಟ್ಟಾರೆ ಒಂದು ಅಭಿಪ್ರಾಯ ಮೂಡುತ್ತದೆ. ಓದುಗನ ಬೌದ್ಧಿಕ ಮಟ್ಟಕ್ಕೆ ಅನುಸಾರವಾಗಿ ಈ ವಿಮರ್ಶೆ ಇರುತ್ತದೆ. ಸಾಮಾನ್ಯ ಓದುಗನೊಬ್ಬನಿಗೆ ಕೃತಿಯೊಂದನ್ನು ಓದುವಾಗ ಅದರ ಎಷ್ಟೋ ಅರ್ಥಗಳು ಗ್ರಹೀತವಾಗದೆ ಹೋಗಬಹುದು. ಅಂಥ ಸಂದರ್ಭದಲ್ಲಿ ವಿದ್ವಾಂಸರು ಆ ಕೃತಿಯ ಬಗೆಗೆ ಬರೆದಿರುವ ವಿಮರ್ಶೆಯನ್ನು ಓದುವುದರಿಂದ ಆ ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಒಬ್ಬೊಬ್ಬ ವಿಮರ್ಶಕನಿಗೆ ಒಂದು ಕೃತಿಯ ಬಗ್ಗೆ ಬೇರೆಬೇರೆಯದೇ ಆದ ಅಭಿಪ್ರಾಯಗಳು ಹೊರಡಬಹುದು. ಕೃತಿಯ ಅಭ್ಯಾಸ ಮಾಡುವವರು ಈ ಎಲ್ಲ ಅಭಿಪ್ರಾಯಗಳನ್ನು ಗ್ರಹಿಸಿ ಒಟ್ಟಾರೆಯಾದ ಒಂದು ಅಭಿಪ್ರಾಯವನ್ನು ಪಡೆಯಬಹುದು. ವಿಮರ್ಶೆ ಕೃತಿಯ ವಿವಿಧ ಮಗ್ಗಲುಗಳನ್ನು, ಸೌಂದರ್ಯವನ್ನು ಪರಿಚಯಿಸುತ್ತದೆ. ಆ ಮೂಲಕ ಸಾಮಾನ್ಯ ಓದುಗನಿಗೆ ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಒಂದೇ ಕೃತಿಯನ್ನು ವಿವಿಧ ಕಾಲಘಟ್ಟಗಳಲ್ಲಿ, ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಇಟ್ಟು ವಿಮರ್ಶೆ ಮಾಡಬಹುದು. ಹೀಗಾಗಿ ಕೃತಿಯೊಂದರ ಮರುಮೌಲ್ಯಮಾಪನ ಮೇಲಿಂದ ಮೇಲೆ ಆಗುತ್ತಲೆ ಇರುತ್ತದೆ. ಪಂಪನ ಕೃತಿಯನ್ನು ಹತ್ತನೆ ಶತಮಾನದ ಸಂದರ್ಭದಲ್ಲಿಟ್ಟು ನೋಡುವುದಕ್ಕೂ ಇಪ್ಪತ್ತನೆ ಶತಮಾನದ ಸಂದರ್ಭದಲ್ಲಿಟ್ಟು ವಿಮರ್ಶಿಸುವುದಕ್ಕೂ ಅಂತರವಿದೆ. ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ರಾಜಕೀಯ ದೃಷ್ಟಿಕೋನದಿಂದ, ಸಾಮಾಜಿಕ ದೃಷ್ಟಿಕೋನದಿಂದ, ಧಾರ್ಮಿಕ ದೃಷ್ಟಿಕೋನದಿಂದ, ಬಂಡಾಯ ದೃಷ್ಟಿಕೋನದಿಂದ, ದಲಿತ ಸಂವೇದನೆ, ಸ್ತ್ರೀ ಸಂವೇದನೆ

ಹೀಗೆ ವಿವಿಧ ರೀತಿಯಿಂದ ಅಭ್ಯಾಸ ಮಾಡಬಹುದು. ಇಡಿ ಕನ್ನಡ ಸಾಹಿತ್ಯ ಚರಿತ್ರೆಯನ್ನೇ ಚಾರಿತ್ರಿಕ ದೃಷ್ಟಿಕೋನದಿಂದ ಅಭ್ಯಾಸ ಮಾಡಿದವರೂ ಇದ್ದಾರೆ.

ಕವಿ ಪ್ರತಿಭೆ ಶ್ರೇಷ್ಠ; ವಿಮರ್ಶನ ಪ್ರತಿಭೆ ದ್ವಿತೀಯ ದರ್ಜೆಯದು ಎಂಬ ಅಭಿಪ್ರಾಯವಿದೆ. ಈ ಕಾರಣಕ್ಕಾಗಿಯೇ 'ನಾನೇರುವೆತ್ತರಕ್ಕೆ ನೀನೇರಬಲ್ಲೆಯಾ?' ಎಂದು 'ವಿಮರ್ಶಕ ವೈದ್ಯನಿಗೆ' ಆತ್ಮ ಪ್ರತ್ಯಯದಿಂದ ಸವಾಲು ಎಸೆದ ಕವಿಗಳೂ ಇದ್ದಾರೆ. ಕವಿ-ವಿಮರ್ಶಕರ ಸಂಬಂಧವನ್ನು ಎಣ್ಣೆ-ಸೀಗೇಕಾಯಿ ಸಂಬಂಧಕ್ಕೆ ಹೋಲಿಸುವವರಿದ್ದಾರೆ.

ಇಂಥ ಸಂದರ್ಭದಲ್ಲಿ ಸಾಹಿತಿ- ವಿಮರ್ಶಕ- ಓದುಗ ಇವರ ನಡುವೆ ಸಾಹಿತ್ಯ ಪತ್ರಿಕೆಯ ಕೆಲಸವೇನು? ಅದು ಯಾವ ರೀತಿಯಲ್ಲಿ ಕಾರ್ಯ ಮಾಡುತ್ತದೆ? 'ಸಂಕ್ರಮಣ'ದ ೨ನೆ ಸಂಚಿಕೆಯಲ್ಲಿ[೪೧] 'ವಿಮರ್ಶೆ: ಅಂದು ಇಂದು' ಬರೆದ ಕೆ.ಕೃಷ್ಣಮೂರ್ತಿಯವರು, 'ಇವನಾವ ಘನ ವಿಮರ್ಶಕ? ನನ್ನ ಭಾವಶ್ರೀಯನ್ನು ಅರಿಯುವ ಸಾಮರ್ಥ್ಯ ಇವನಿಗೆಲ್ಲಿಂದ ಬರಬೇಕು? ನಿಜವಾದ ಕಾವ್ಯ ವಿಮರ್ಶೆಯ ತಿರುಳನ್ನು ತಿಳಿಯಬೇಕಾದರವರು ನನ್ನ ಬಳಿಗೆ ಬನ್ನಿ. ನಾನೇ ತಿಳಿಸಿ ಹೇಳುತ್ತೇನೆ' ಎಂಬ ಕವಿ ಮನೋಧರ್ಮವನ್ನು ಪ್ರಸ್ತಾಪಿಸಿರುವರು. ಕವಿಯ ಇಂಥ ಸವಾಲಿಗೆ ವಿಮರ್ಶಕನೇನು ಕಮ್ಮಿ. ಇಂಥ ವಾದ ವಿವಾದಗಳಿಂದ ನೋಡುವವರಿಗೆ, 'ಇವನು ಕವಿಯೂ ಅಲ್ಲ, ಅವನು ವಿಮರ್ಶಕನೂ ಅಲ್ಲ' ಎಂದನ್ನಿಸುವ ಅಪಾಯದ ಕಡೆ ಗಮನ ಸೆಳೆದಿರುವರು. "ಕನ್ನಡದ ಮಟ್ಟಿಗೆ ಹೇಳುವುದಾದರೆ, ಸದ್ದುಗದ್ದಲಗಳಡಗಿ, ಈಗ ಕಾರ್ಯ ಪ್ರವೃತ್ತಿಯ ಕಡೆಗೆ ಕವಿ-ವಿಮರ್ಶಕರ ಒಲವು ಹೆಚ್ಚಾಗಿ ಹರಿಯುತ್ತಿವುದು ಶುಭ ಸೂಚನೆ. ಈ ಬಗೆಯ ಹೊಸ ಸಾಹಿತ್ಯಪತ್ರಿಕೆಗಳ ಉದಯ ಬರಲಿರುವ ಸಿದ್ಧಿಯ ದ್ಯೋತಕವಾಗಿದೆ" ಎಂದು ಹೇಳುವರು. ಅವರ ಈ ಮಾತು 'ಸಂಕ್ರಮಣ'ಕ್ಕಿಂತ ಹಿಂದಿನ ಸ್ಥಿತಿ ಹಾಗೂ 'ಸಂಕ್ರಮಣ' ಮತ್ತು ಅಂಥ ಪತ್ರಿಕೆಗಳು ವಹಿಸಬೇಕಾದ ಜವಾಬ್ದಾರಿಯ ಕಡೆ ಗಮನ ಸೆಳೆಯುತ್ತದೆ.

ಕವಿ ಕಾವ್ಯ ರಹಸ್ಯ, ಅದನ್ನು ವಿಮರ್ಶಕ ತೆರೆದು ತೋರಿಸುವುದರಿಂದ ಸಾಮಾನ್ಯ ಓದುಗನಿಗೆ ಆಗುವ ಲಾಭದ ಬಗೆಗೆ ಕೃಷ್ಣಮೂರ್ತಿಯವರು ಹೇಳುವ ಮಾತು ಇದು,- "ನಾನು ಜನಕ್ಕಾಗಿ ಬರೆಯುತ್ತಿಲ್ಲ; ನನ್ನ ಚಿತ್ತದ ಒತ್ತಡವನ್ನಿಳಿಸಿಕೊಳ್ಳುವುದಷ್ಟೇ ನನ್ನ ಉದ್ದೇಶ' ಎಂದು ಒಬ್ಬ ಕವಿ ಘೋಷಿಸಿದರೂ, ಮತ್ತೊಬ್ಬ ವಿಮರ್ಶಕ ಬಂದು, 'ಈ ಕವಿ ಇಂದಿನ ಜನ ಜೀವನದ ಇಂತಹ ಗುಪ್ತ ಇಲ್ಲವೆ ಸುಪ್ತ ಸಂವೇದನೆಗಳಿಗೆ ಇಷ್ಟು ಪ್ರಭಾವಶಾಲಿಯಾದ ಪ್ರತಿಮಾ ವಿಧಾನದಿಂದ ಅಭಿವ್ಯಕ್ತಿಯನ್ನು ತಂದಿದ್ದಾನೆ' ಎಂದು ಬಿಡಿಸಿ ತೋರಿಸಲು ಮುಂದಾಗುತ್ತಾನೆ. ಜನತೆಯ ರುಚಿಯನ್ನು ಸಂಸ್ಕರಿಸಲು ನೆರವಾಗುತ್ತಾನೆ." - ರುಚಿ ಸಂಸ್ಕಾರ ಎನ್ನುವ ಮಾತು ಮಹತ್ವದ್ದು. ಎಲ್ಲರ ರುಚಿಯೂ ಒಂದೇ ರೀತಿಯಲ್ಲಿ ಒಂದೇ ಸ್ತರದಲ್ಲಿ ಇರುವುದಿಲ್ಲ. ಅದನ್ನು ವಿಮರ್ಶೆ ಸಂಸ್ಕರಿಸಿ ಸಂಸ್ಕಾರ ನೀಡುತ್ತದೆ.

೪೧.ಸಂಪುಟ ೩.೨, ಸಂಚಿಕೆ ೮, ಮಾರ್ಚ್ ೧೯೨೯

ಸಾಹಿತ್ಯಪತ್ರಿಕೆಯೊಂದರ ಜವಾಬ್ದಾರಿಯ ಕಡೆಗೆ ಕೃಷ್ಣಮೂರ್ತಿಯವರು ಗಮನ ಸೆಳೆಯುತ್ತಾರೆ. ಅದೆಂದರೆ ನಮ್ಮ ವಿಮರ್ಶೆಯನ್ನು ಅನ್ಯ ಪ್ರಭಾವಗಳಿಂದ ಮುಕ್ತವಾಗಿರಿಸುವುದು. "ಅಂದು ಸಂಸ್ಕೃತ ಮಹಾಕಾವ್ಯ ಮಾರ್ಗದ ಅನುಕರಣದಿಂದ ಕನ್ನಡಕ್ಕೆ ಆದ 'ಅನರ್ಥ'ವನ್ನೂ, ಈಚೆಗೆ ಇಂಗ್ಲಿಷ್ ರೋಮ್ಯಾಂಟಿಕ್ ಸಂಪ್ರದಾಯದ ಅಂಧಾನುಕರಣದಿಂದ ಆದ 'ಅವನತಿ'ಯನ್ನೂ ಸೂಕ್ಷ್ಮವಾಗಿ ವಿವರಿಸಬಲ್ಲ ವೇಧಾವಿ ವಿಮರ್ಶಕನ ಮೇಲೆ... ಗುರುತರ ಹೊಣೆ ಇದೆ... ವಾಚನಾಭಿರುಚಿಯನ್ನುಳಿಸುವ ವಿಮರ್ಶೆ ನಮಗೆ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದೆ" ಎಂದು ಹೇಳುವ ಮೂಲಕ ಸಾಹಿತ್ಯಪತ್ರಿಕೆಗಳು ಎಂಥ ವಿಮರ್ಶೆಯನ್ನು ಬೆಳೆಸಬೇಕು ಎನ್ನುವುದನ್ನೂ ಸೂಚಿಸುತ್ತಾರೆ. ಸಂಕ್ರಮಣದ ಎರಡನೆಯ ಸಂಚಿಕೆಯಲ್ಲಿಯೇ ಈ ಮಾತು ಬಂದಿರುವುದೂ ಮಹತ್ವದ್ದೇ.

ವಿಮರ್ಶಕ ಪದವಿಗೇರುವವರಿಗೆ ಶಾಸ್ತ್ರಶಿಕ್ಷಣ ವಿಸ್ತಾರವಾಗಿದ್ದಷ್ಟೂ ಕ್ಷೇಮ. ಆದರೆ ಇವುಗಳನ್ನು ಕಲಿತವರೆಲ್ಲ ವಿಮರ್ಶಕರಲ್ಲ ಎನ್ನುವ ಮಾತನ್ನೂ ಕೃಷ್ಣಮೂರ್ತಿಯವರು ಹೇಳುವರು. ಸಾಹಿತ್ಯ ಮತ್ತು ವಿಮರ್ಶೆ ಎರಡರ ಮಾಧ್ಯಮವೂ ಭಾಷೆಯೇ. ಎಲ್ಲರಿಗೂ ಗೊತ್ತಿರುವ ಭಾಷೆಯೇ ಆದರೂ ಅದು ಕಾವ್ಯದಲ್ಲಿ ಬಳಕೆಯಾದಾಗ ಯಾರಿಗೂ ಪರಿಚಿತವಲ್ಲದ ಹೊಸ ಪ್ರಯೋಗವಾಗಿ ಕಾಣಿಸುವುದು. ಈ ಉಕ್ತಿ ವೈಚಿತ್ರ್ಯ ಅರಿಯುವುದಕ್ಕೇ ಶಾಸ್ತ್ರಶಿಕ್ಷಣ ಬೇಕು ಎಂದು ಅವರು ಹೇಳುವರು.

"ಕಾವ್ಯಲೋಲರಾಗಿ ತಾತ್ಕಾಲಿಕ ಮನೋ ವಿನೋದವನ್ನು ಪಡೆದವರೆಲ್ಲರೂ ಉತ್ತಮ ವಿಮರ್ಶಕರಾಗಿಬಿಡುವುದಿಲ್ಲ. ಇದುವರೆಗೆ ನಾವು ನೋಡಿದ್ದರ ಮೇಲೆ ಇನ್ನಷ್ಟು ಹೇಳಬಹುದು- ಆದರ್ಶ ಕವಿ, ಆದರ್ಶ ವಿಮರ್ಶಕ ಇಬ್ಬರೂ ಅಷ್ಟೇ ವಿರಲ; ಇಬ್ಬರೂ ಪರಸ್ಪರ ಉಪಕಾರಕರು; ಆದರೆ ಇಬ್ಬರೂ ತಮ್ಮ ಕ್ಷೇತ್ರದಲ್ಲಿ ಸ್ವತಂತ್ರರು. ಒಬ್ಬರು ಹೆಚ್ಚು, ಇನ್ನೊಬ್ಬರು ಕಡಿಮೆಯನ್ನುವುದು ಸಲ್ಲದು. ಕೂಸು ಹುಟ್ಟಲು ತಾಯಿಯ ನೆರವಿಗೆ ಸೂಲಗಿತ್ತಿಯೂ ಬೇಕು. ಕಾವ್ಯ ಹುಟ್ಟಿ ಹೆಸರುವಾಸಿಯಾಗಬೇಕಾದರೆ ವಿಮರ್ಶಕನೂ ಬೇಕು" ಎಂಬ ಮಾತು ನಾನೇರುವೆತ್ತರಕ್ಕೆ ನೀನೇರಬಲ್ಲೆಯಾ ? ಎಂಬ ಸವಾಲಿಗೆ ಸಮಾಧಾನದ ಉತ್ತರ ಎನ್ನಬೇಕು.

ಆರಂಭ ಕಾಲದ ವಿಮರ್ಶೆ: ಹೊಸಗನ್ನಡದ ಆರಂಭದ ಕಾಲದಲ್ಲಿ ವಿಮರ್ಶೆಯೆಂದರೆ ಪುಸ್ತಕದಲ್ಲಿಯ ಕೆಲವು ಉತ್ತಮಾಂಶಗಳನ್ನು ಎತ್ತಿ ಹೇಳಿ ಬೆನ್ನು ತಟ್ಟುವುದಷ್ಟೇ ಆಗಿತ್ತು. ಕೆಲವೊಮ್ಮೆ ಸ್ವಲ್ಪತೆಗಳಿಕೆಯೂ ಇರುತ್ತಿತ್ತು. ಇದರ ನಡುವೆ ಪುಸ್ತಕದ ಅಚ್ಚುಕಟ್ಟುತನದ ಬಗ್ಗೆಯೂ ನಾಲ್ಕು ಮಾತುಗಳು ಇರುತ್ತಿದ್ದವು. ಈಗಿನಂತೆ ವೃತ್ತಿವಂತ ವಿಮರ್ಶಕರು ಆಗ ಇರಲಿಲ್ಲ. ಸಾಹಿತ್ಯಾಸಕ್ತರು ಪತ್ರಿಕೆಗಳಲ್ಲಿ ಸಾಹಿತ್ಯದ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಇಂಥ ಅಭಿಪ್ರಾಯಗಳು ಒಮ್ಮೊಮ್ಮೆ ಇಡಿ ಸಾಹಿತ್ಯ ಮಾರ್ಗದ ಬದಲಾವಣೆಗೇ ಒತ್ತಾಯ ಪಡಿಸುವಂಥದ್ದೂ ಆಗಿರುತ್ತಿದ್ದವು.

ಶ್ರೀಕೃಷ್ಣ ಸೂಕ್ತಿಯಲ್ಲಿ ಪ್ರಕಟವಾದ ಇಂಥ ಒಂದು ಅಭಿಪ್ರಾಯವನ್ನು ಇಲ್ಲಿ ಗಮನಿಸಬೇಕು, "ತಮ್ಮ ಕವಿತಾ ಪ್ರೌಢಿಮೆಯನ್ನು ತೋರಿಸಿಕೊಳ್ಳಲು ಸಾಧ್ವೀ ಸ್ತ್ರೀಯರೊಡನೆ ಮಾತನಾಡುವ ಸಂದರ್ಭದಲ್ಲಿ ಪೃಥು ನಿತಂಬಿನಿಯೆಂದೂ, ಸುಮಧ್ಯಮೆಯೆಂದೂ ರಂಭೋರುವೆಂದೂ ಸುಶ್ರೋಣಿಯೆಂದೂ- ಅಸಾಂಗತ್ಯವುಳ್ಳ ಪದಗಳನ್ನುಪಯೋಗಿಸುವರು. ಕಾಳಿದಾಸನೂ ಕೂಡ ಹೈಮವತಿಯನ್ನರಸುತ್ತಿರಲು, ಆ ಸುಂದರಿಯ ಪೃಥು ನಿತಂಬವನ್ನೂ ಸ್ತನ ಯುಗ್ಮವನ್ನೂ ವರ್ಣಿಸದೆ ಇರಬಾರದಿತ್ತೆ? ಈ ವಿಷಯದಲ್ಲಿ ತಪ್ಪದಿರುವ ಕರ್ನಾಟಕ ಕವಿಗಳೇ ಇಲ್ಲ. ಪತಿವ್ರತಾ ಶಿರೋಮಣಿಯಾದ ದ್ರೌಪದಿಯ ಸೀರೆಯನ್ನು ಸೆಳೆಯಲೆತ್ನಿಸಿ ಶಾಶ್ವತವಾದ ಅಕೀರ್ತಿಯನ್ನು ಪಡೆದ ದುರ್ಯೋಧನನಿಗೂ ಈ ಕವಿಗಳಿಗೂ ಏನಾದರೂ ವ್ಯತ್ಯಾಸವಿದೆಯೇ?" ಎಂದು ಹೈಕೋರ್ಟಿನ ವಕೀಲರಾದ ಬಿ.ಸೀತಾರಾಮರಾವ ಪ್ರಶ್ನಿಸುತ್ತಾರೆ.[೪೨] ತಮ್ಮ ಲೇಖನಕ್ಕೆ ಅವರು ಕೊಟ್ಟ ಹೆಸರು 'ಪುರಾಣಮಿತ್ಯೇವ ನ ಸಾಧು ಸರ್ವಂ.' ಹಳೆಯದನ್ನೇ ಅನುಸರಿಸಿ ಕಾವ್ಯ ಬರೆಯುವ ಹೊಸ ಕವಿಗಳನ್ನು ತಮ್ಮ ವಕೀಲಿ ಶೈಲಿಯಲ್ಲಿ ಸೀತಾರಾಮರಾವ್ ಚೆನ್ನಾಗಿಯೇ ತರಾಟೆಗೆ ತಗೆದುಕೊಂಡಿದ್ದಾರೆ. ಆಧುನಿಕ ಕನ್ನಡ ಕಾವ್ಯ ಹೊಸತನಕ್ಕೆ ಹೊಂಚುಹಾಕುತ್ತಿರುವ ಸಮಯದಲ್ಲಿ ಪ್ರಕಟವಾದ ಈ ಲೇಖನ ಹೊಸ ಕಾವ್ಯ ಹೇಗಿರಬೇಕು ಎಂಬುದರ ಕಡೆಗೆ ಗಮನ ಸೆಳೆಯುತ್ತಿದೆ. ಈ ಕಾರಣಕ್ಕಾಗಿ ಈ ಲೇಖನಕ್ಕೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಸಿಗಲೇಬೇಕು.

ಆರಂಭ ಕಾಲದ ವಿಮರ್ಶೆಗಳೆಲ್ಲ ಇದೇ ರೀತಿಯಲ್ಲಿ ಇದ್ದವು ಎಂದೇನಲ್ಲ. ಅತಿ ಸಾಮಾನ್ಯವಾದ ವಿಮರ್ಶೆಗಳೂ ಪ್ರಕಟವಾಗಿವೆ. ಇದು ಬೆನ್ನು ತಟ್ಟುವ ಕೆಲಸ ಮಾತ್ರವಾಗಿ ಕಾಣುತ್ತದೆ. 'ಶ್ರೀಕೃಷ್ಣಸೂಕ್ತಿ'[೪೩]ಯಲ್ಲಿಯೇ ಪ್ರಕಟವಾಗಿರುವ ಇನ್ನೊಂದು ವಿಮರ್ಶೆಯನ್ನು ಇಲ್ಲಿ ನೋಡಬಹುದು. "ವಿವೇಕೋದಯ ಗ್ರಂಥಮಾಲೆಯ ತೃತೀಯ ಪುಸ್ತಕವಾದ 'ಶ್ರೀ ಶಂಕರ ಕಥಾಮೃತ'ವೆಂಬ ಹಸ್ತ ಪುಸ್ತಕವು ಪತ್ರಕರ್ತರಿಂದ ನಮಗೆ ಕಳುಹಲ್ಪಟ್ಟಿತು. 'ಸೂಕ್ತಿ'ಯ ವ್ಯಕ್ತ ಲೇಖಕರಾದ ಚಿದಂಬರಯ್ಯನವರಿಂದ ಬರೆಯಲ್ಪಟ್ಟುದರಿಂದ ಭಾಷಾ ವಿಷಯದಲ್ಲಿ ಬೇರೆ ಹೇಳಲೇಕೆ? ಅದ್ವೈತ ಮತ ಸ್ಥಾಪಕರಾದ ಶ್ರೀಶಂಕರಾಚಾರ್ಯರವರ ಚರಿತ್ರೆಯೂ, ಆಚಾರ್ಯಾವತಾರಕ್ಕೆ ಪೂರ್ವಭಾವಿಯಾದ ದೇಶಕಾಲ ಸ್ಥಿತಿಯೂ, ಆಚಾರ್ಯರ ಅದ್ವೈತ ಮತದ ತತ್ವ ರಹಸ್ಯವೂ ಇದರಲ್ಲಿ ಉದೀರತವಾಗಿವೆ."

ಕೃತಿಯ ಲೇಖಕರು 'ಸೂಕ್ತಿ'ಯ ವ್ಯಕ್ತ ಲೇಖಕರಾದುದರಿಂದ ಭಾಷಾ ವಿಷಯದಲ್ಲಿ ಬೇರೆ ಹೇಳಲೇಕೆ? ಎಂದು ಪ್ರಶ್ನಿಸುವ ವಿಮರ್ಶಕರು ಇದೇ ಕಾರಣಕ್ಕಾಗಿ ಆ ಕೃತಿಯನ್ನು ಓದುವ ಶ್ರಮವನ್ನು ವಹಿಸಿದಂತೆ ಕಾಣುವುದಿಲ್ಲ. ಕೃತಿಯ ಕುರಿತು ಖಚಿತವಾದ ಯಾವ ಮಾತುಗಳೂ ಇದರಲ್ಲಿ ಇಲ್ಲ. ಇದೇ ಸಂಚಿಕೆಯಲ್ಲಿ ಪ್ರಕಟವಾದ ಇನ್ನೊಂದು ಕೃತಿಯ

೪೨.ಶ್ರೀಕೃಷ್ಣಸೂಕ್ತಿ-ಮೇ ೧೯೦೮ ಪುಟ ೧೪೯

೪೩.ವಿಮರ್ಶೆ: ಶ್ರೀಕೃಷ್ಣಸೂಕ್ತಿ (ಜೂನ್ ೧೯೦೯) ಪುಟ ೧೪೯-೧೫೦ (ಸಂಪಾದಕರೇ ವಿಮರ್ಶಕರು).

ವಿಮರ್ಶೆ ಈ ರೀತಿ ಇದೆ.

"ನೀತಿ ಪರಂಪರೆಗಳನ್ನು ಪ್ರದರ್ಶಿಸುತ್ತಿರುವ ಈ ನಾಟಕವು (ವಲ್ಲೀ ಮುಖ ವಿಲಾಸ: ಮೈಸೂರು ಚಾಮರಾಜ ನಾಟಕ ಸಭೆಯ ಮೆಂಬರರೊಳಗೊಬ್ಬರಾದ ಸ್ಕೂಲ್ ಮಾಸ್ಟರ್ ಸುಬ್ಬರಾಯರಿಂದ ವಿರಚಿಸಲ್ಪಟ್ಟ ರೂಪಕವು.) ನೀತಿಪರರಾದ ವಾಚಕರೆಲ್ಲರಿಂದ ಓದಲ್ಪಟ್ಟರೆ, ಗ್ರಂಥಕಾರರ ಪ್ರಯತ್ನವು ಸಾರ್ಥಕವಾದುದೆಂದು ನಾವು ಸಂಭಾವಿಸುವೆವು." ಇಲ್ಲಿಯ ಕನ್ನಡ ವಾಕ್ಯ ಪ್ರಯೋಗವೂ ಕರ್ಮಣಿಯನ್ನು ಅನುಸರಿಸಿದೆ. ಕೃತಿಯ ಬಗ್ಗೆ ದಿವ್ಯ ಮೌನವನ್ನು ವಹಿಸಲಾಗಿದೆ.

ಇದು ಇಪ್ಪತ್ತನೆ ಶತಮಾನದ ಮೊದಲ ದಶಕದಲ್ಲಿಯ ವಿಮರ್ಶೆಯ ಸ್ಥಿತಿ. ಇನ್ನು ಎರಡನೆಯ ದಶಕದಲ್ಲಿಯ ಸ್ಥಿತಿಯು ಇದಕ್ಕಿಂತ ಭಿನ್ನವಾಗಿದೆ. ಸುಧಾರಣೆ ಕಂಡು ಬಂದಿದೆ. ಈ ದಶಕದ ಕೊನೆಯಲ್ಲಿ ಬಂದ ವಿಮರ್ಶೆಯೊಂದನ್ನು ಉದಾಹರಣೆಗೆ ಇಲ್ಲಿ ನೋಡಬಹುದು.

"ಲೋಕಮಾನ್ಯ ಬಾಳಗಂಗಾಧರ ಟಿಳಕ" ಕರ್ನಾಟಕ ಗೌರವ ಗ್ರಂಥ ಮಾಲೆಯ ೫ನೆಯ ಪುಷ್ಪ. ಪುಟಗಳು ೧೦. ಕ್ರಯ ೨ ಆಣೆ. ಈ ಚಿಕ್ಕ ಪುಸ್ತಕವನ್ನು ರಾ.ವಿ.ಎಸ್. ರಂಗ್ಯೆ ಶೇಣವಿ ಎಂಬವರು ಬರೆದಿದ್ದಾರೆ. ಪುಸ್ತಕದ ಭಾಷೆಯು ತಕ್ಕಮಟ್ಟಿಗೆ ಚನ್ನಾಗಿದೆ. ಆದರೆ ೧ ಸಾವಿರ ರು.ಗಳ ದಂಡು ಆಯಿತು. ಕೈ.ವಾ. ವಿಷ್ಣುಕೃಷ್ಣ ಚಿಪಳೂಣಕರ ಎಂಬೊಬ್ಬ ಚಪಲ ಗೃಹಸ್ಥರ ಎಂಬೀ ತರದ ದೋಷಗಳೂ ಕೆಲವು ಕಡೆ ಕಂಡು ಬರುತ್ತವೆ. ಕೇಸರಿ ಮರಾಠಾ ವರ್ತಮಾನ ಪತ್ರಗಳನ್ನು ೧೮೮೫ನೆಯ ಇಸವಿಯಲ್ಲಿ ಹೊರಡಿಸಲ್ಪಟ್ಟವೆಂಬುದು ಆ ಪತ್ರಗಳ ಮೇಲೆ ಕೊಟ್ಟ ವರ್ಷಗಳಿಂದ ಕಂಡು ಬರುತ್ತದೆ. ೧೦ ಪುಟಗಳಲ್ಲಿ ಲೋಕಮಾನ್ಯರಂಥ ಪ್ರಸಿದ್ಧಪುರುಷರ ಚರಿತ್ರವನ್ನು ವಾಚಕರಿಗೆ ಬೋಧಪ್ರದವಾಗುವಂತೆ ಬರೆಯುವುದು ಯಾರಿಗೂ ಅಸಾಧ್ಯವೇ. ಆದ್ದರಿಂದ ಪ್ರಸ್ತುತ ಪುಸ್ತಕವು ಚರಿತ್ರ, ನಾಯಕರ ಚರಿತ್ರದ ಬರೇ ಅನುಕ್ರಮಣಿಕೆಯೇ ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರಲ್ಲಿ ಕೊಟ್ಟ ಕೆಲವು ಚಲೋ ಇಂಗ್ಲಿಷ್ ಅವತರಣಗಳ ಕನ್ನಡ ಭಾಷಾಂತರಗಳನ್ನು ಕೊಟ್ಟಿಲ್ಲ. ಆದ್ದರಿಂದ ಅವು ಬರೇ ಕನ್ನಡವನ್ನೇ ಬಲ್ಲವರಿಗೆ ಕೇವಲ ನಿರರ್ಥಕವಾಗಿರುವವು. ೧೦ ಪುಟಗಳ ಪುಸ್ತಕದ ಬೆಲೆ ೨ ಆಣೆಯೆಂದರೆ ಬಹಳವೆಂದು ನಮಗೆ ತೋರುತ್ತದೆ. ಒಟ್ಟಿಗೆ ಕರ್ನಾಟಕಕ್ಕೆ ಗೌರವವನ್ನು ತರಲಪೇಕ್ಷಿಸುವ ಗ್ರಂಥಮಾಲೆಯಲ್ಲಿ ದೊಡ್ಡ ಗೃಹಸ್ಥರ ಚರಿತ್ರಗಳನ್ನು ಪ್ರಸಿದ್ಧಿಸಬೇಕಾದರೆ ಅವು ಪ್ರಸ್ತುತ ಪುಸ್ತಕಕ್ಕಿಂತಲೂ ದೊಡ್ಡವುಗಳೂ ಯೋಗ್ಯವಾದ ಬೆಲೆಯುಳ್ಳವುಗಳೂ ಆಗಿರಬೇಕೆಂದು ನಮ್ಮ ಅಭಿಪ್ರಾಯವಿರುತ್ತದೆ."[೪೪]

'ಪುಸ್ತಕಗಳ ಬಗ್ಗೆ ಅಭಿಪ್ರಾಯ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಈ ವಿಮರ್ಶೆ

೪೪.ವಾಗ್ಭೂಷಣ, ಎಪ್ರಿಲ್ ೧೯೨೦, ಸಂ.೧, ಸಂಪುಟ ೨೫.

ಕೃತಿಯ ಬಗೆಗೆ ಕೆಲವು ನಿರ್ದಿಷ್ಟವಾದ ತಳ್ಳಿಹಾಕಲಾಗದಂಥ ಮಾತುಗಳನ್ನು ಹೇಳಿದೆ. ಬೆನ್ನು ತಟ್ಟುವ ಕೆಲಸವನ್ನು ಬದಿಗಿಟ್ಟು ಇಂಥ ಪುಸ್ತಕವೊಂದರಲ್ಲಿ ಏನಿರಬೇಕು, ಪ್ರಕಟಿತ ಪುಸ್ತಕದಲ್ಲಿಯ ದೋಷಗಳೇನು? ಭಾಷೆಯ ಅಗತ್ಯವೇನು? ಇತ್ಯಾದಿಗಳ ಬಗೆಗೆ ಚಿಂತನೆ ವ್ಯಕ್ತಪಡಿಸಿರುವುದು ಕಾಣುವುದು. ಮುಂದಿನ ವಿಮರ್ಶೆಯ ದಾರಿಗೆ ಇದೊಂದು ತೋರು ಬೆರಳು ಎಂಬಂತೆ ಇದೆ.

೨೦ನೆ ಶತಮಾನದ ಮೂರನೆ ದಶಕದ ಕೊನೆಯಲ್ಲಿ ಬಂದ ಇನ್ನೊಂದು ವಿಮರ್ಶೆಯನ್ನು ಇಲ್ಲಿ ಗಮನಿಸಬೇಕು.

"ಕುಪ್ಪಾ ಭಟ್ಟನ ಯಾತ್ರೆ- ಶ್ರೀ ಗ.ರಾ. ಯಾಜಿ- ಸಂಪಾದಕ, ಕರ್ನಾಟಕ ಧುರೀಣ, ಕುಮಠಾ, ಇವರು ಬರೆದುದು ಬೆಲೆ ೦-೧-೬.

ಇದೊಂದು ಚಿಕ್ಕ ಪ್ರಾಪಂಚಿಕ ಕಥೆ. ಕುಪ್ಪಾ ಭಟ್ಟನು ಬಡ ಕುಟುಂಬದಲ್ಲಿ ವೈದಿಕ ಬ್ರಾಹ್ಮಣನ ಮಗನಾಗಿ ಹುಟ್ಟಿದ್ದರೂ ವೈದಿಕ ವಿದ್ಯೆಯಲ್ಲಾಗಲಿ, ವೃತ್ತಿಯಲ್ಲಾಗಲಿ ಒಲವಿಲ್ಲದೆ ವ್ಯಾಪಾರೋದ್ಯೋಗಗಳಲ್ಲಿ ಪ್ರವೃತ್ತಿಯುಳ್ಳವನಾಗಿದ್ದ. ಮುಂದೆ ಕಾಶಿ ಯಾತ್ರೆಯ ನೆವನದಿಂದ ದೇಶ ಸಂಚಾರಕ್ಕೆ ಹೊರಟು ಲೋಕಾನುಭವಗಳನ್ನು ಪಡೆದು ದೊಡ್ಡ ಅರಳೆಯ ವ್ಯಾಪಾರಿಯನ್ನು ಆಶ್ರಯಿಸಿ ಕೊನೆಗೆ ದೊಡ್ಡ ವ್ಯಾಪಾರಿಯಾಗಿ ಲಕ್ಷಗಟ್ಟಲೆಯಿಂದ ಹಣ ಗಳಿಸಿ ಶ್ರೀಮಂತನಾದುದೇ ಈ ಕತೆಯ ಮುಖ್ಯಾಂಶವು. ಹಳ್ಳಿಯ ಜೀವನದೊಳಗಿನ ಹಲವು ಸಂಗತಿಗಳೂ ಇದರಲ್ಲಿ ಯಥಾರೀತಿಯಾಗಿ ಚಿತ್ರಿತವಾಗಿವೆ. ಭಾಷೆಯು ಸುಲಭವಾಗಿ ಪರಿಣಾಮಕಾರಕವಾಗಿ ಮನೋರಂಜಕವಾಗಿದೆ. ಗ್ರಂಥಕರ್ತರು ಪತ್ರಿಕಾ ಸಂಪಾದಕರಂತಹ ಜವಾಬ್ದಾರಿಯ ತೆರಪಿಲ್ಲದ ವೃತ್ತಿಯಲ್ಲಿ ತೊಡಗಿಕೊಂಡವರಾದರೂ ಕೆಳತರಗತಿಯ ಜನಹಿತವನ್ನು ಬಯಸಿ ಇಂತಹ ಲಘು ಸಾಹಿತ್ಯೋದ್ಯಮಕ್ಕೆ ಮನಸ್ಸು ಮಾಡಿದುದು ಪ್ರಶಂಸನೀಯವಾಗಿದೆ. ಲೋಕಾದರವನ್ನು ಹೊಂದಿ ಹಲವು ಹೊತ್ತಿಗೆಗಳನ್ನು ಬರೆದು ಪ್ರಕಟಿಸಲೆಂದು ಬಯಸುವೆವು."[೪೫].

ಇದನ್ನು 'ಪುಸ್ತಕ ಪರಿಚಯ' ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿದೆ. ಕೃತಿಯ ಸಾರಾಂಶವನ್ನು ಹೇಳಿ, ಕೃತಿಕಾರರ ಪರಿಚಯ, ಪುಸ್ತಕದ ಬೆಲೆ ಎಲ್ಲವನ್ನೂ ವಿವರಿಸುವ ಇದು ಸಮರ್ಥವಾಗಿಯೇ ಕೃತಿಯನ್ನು ಪರಿಚಯಿಸಿದೆ. ಇಂಥ ಪರಿಚಯ ೨೦ನೆ ಶತಮಾನದ ಪತ್ರಿಕೆಗಳ ಭಾನುವಾರದ ಸಾಹಿತ್ಯಕ ಪುಟಗಳಲ್ಲಿಯೂ ಕಾಣಬಹುದು.

ಇದರಲ್ಲಿ ಪುಸ್ತಕವನ್ನು ಪರಿಚಯಿಸಿದವರು ಎರಡು ಮಹತ್ವದ ಮಾತುಗಳನ್ನು ಹೇಳಿದ್ದಾರೆ- ಕೆಳತರಗತಿಯ ಜನಹಿತ ಬಯಸುವುದು ಮತ್ತು ಲಘು ಸಾಹಿತ್ಯೋದ್ಯಮ. ಕೆಳತರಗತಿಯ ಜನರೆಂದರೆ ಸಾಮಾನ್ಯ ಓದುಗ. ಸಾಮಾನ್ಯ ಓದುಗನಿಗೆ ಪುಸ್ತಕವನ್ನು ಕೈಗೆತ್ತಿಕೊಂಡಾಗ ಕ್ಲಿಷ್ಟ ಎನ್ನಿಸಿಬಿಟ್ಟರೆ ಆತನು ಅದನ್ನು ಓದದೆ ಬಿಟ್ಟುಬಿಡುತ್ತಾನೆ. ಸಾಹಿತ್ಯ ಪಂಡಿತನ ಸೊತ್ತಾಗುತ್ತದೆ.

೪೫.ವಾಗ್ಭೂಷಣ, ಸಂಪುಟ ೩೩, ಸಂಚಿಕೆ ೪, ಡಿಸೆಂ.೧೯೨೯

ಸಾಹಿತ್ಯವೊಂದು ಜನಮಾನ್ಯವಾಗಬೇಕಾದರೆ ಬಹುಜನರು ಅದನ್ನು ಓದಬೇಕು. ಅದರ ಬಗೆಗೆ ಚರ್ಚಿಸಬೇಕು. ಹೊಸ ಸಾಹಿತ್ಯದ ಆರಂಭದ ಕಾಲದಲ್ಲಿ ಇಂಥ ಕಾಳಜಿಯನ್ನು ವ್ಯಕ್ತಪಡಿಸಿರುವುದು ಮಹತ್ವದ್ದಾಗಿದೆ.

ಕೃತಿಯೊಂದು ಸಮಾನ್ಯ ಓದುಗನನ್ನು ಆಕರ್ಷಿಸಬೇಕು ಎಂಬ ವಿಚಾರ ಆರಂಭದ ದಶಕಗಳಲ್ಲಿ ಎಲ್ಲರ ಕಾಳಜಿಯೂ ಆಗಿತ್ತು ಎನ್ನುವುದಕ್ಕೆ ಇನ್ನೊಂದು ಉದಾಹರಣೆಯನ್ನು ನೋಡಬಹುದು- "ರಮಾ ಮಾಧವ- ಶ್ರೀಯುತ ಬಿ. ರಾಮರಾವ ಇವರಿಂದ ರಚಿತವಾದುದು. ಇದೊಂದು ಕಲ್ಪಿತ ಗ್ರಂಥವು... ಕಥೆಯು ಮನಸ್ಸಿನ ಮೇಲೆ ಪರಿಣಾವನ್ನುಂಟು ಮಾಡುವುದು. ಭಾಷೆಯು ಸರಸವೂ ಲಲಿತವೂ ಸುಸಂಸ್ಕೃತವೂ ಇರುವುದು. ಕನ್ನಡದಲ್ಲಿ ಸುಲೇಖರೆಂದು ಪ್ರಸಿದ್ಧಿ ಪಡೆದ ಶ್ರೀರಾಮರಾಯರ ಭಾಷೆಯು ಕನ್ನಡಿಗರಿಗೆ ಸುಪರಿಚಿತವೂ, ಪ್ರಿಯವೂ ಆಗಿರುವುದರಿಂದ ಅದರ ಪ್ರಶಂಸೆಯು ಪುನರುಕ್ತವೇ ಸರಿ. ಓದಲಾರಂಭಿಸಿದರೆ ಮುಗಿಸಿ ಏಳಬೇಕೆಂದೆನಿಸುವುದು. ಸ್ತ್ರೀಯರೂ ಓದಲರ್ಹವಾಗಿದೆ."[೪೭]

ಇಲ್ಲಿ ಎರಡು ಅಂಶಗಳು ಉಲ್ಲೇಖಿತವಾಗಿವೆ. ಓದಲಾರಂಭಿಸಿದರೆ ಮುಗಿಸಿ ಏಳಬೇಕೆಂದೆನಿಸುವುದು- ಇದು ವಾಚಕರನ್ನು ಬೆಳೆಸುವ ರೀತಿ. ಇನ್ನೊಂದು ಸ್ತ್ರೀಯರೂ ಓದಲರ್ಹವಾಗಿದೆ- ಎನ್ನುವುದು. ಸಮಾಜದ ಅರ್ಧಭಾಗದಷ್ಟಿರುವ ಸ್ತ್ರೀಯರು ಪುಸ್ತಕಗಳನ್ನು ಓದುವುದು ಅನಿಷ್ಠ ಎಂಬ ಅಭಿಪ್ರಾಯವಿದ್ದ ಕಾಲದಲ್ಲಿ ಆ ಸ್ತ್ರೀ ಸಮೂಹವನ್ನು ಒಳಗೊಳ್ಳುವ ಕೃತಿ ಎಂದು ಗುರುತಿಸಿರುವುದು. ಆಗಿನ ಮುಖ್ಯ ಕಾಳಜಿ ಅಧಿಕ ಸಂಖ್ಯೆಯಲ್ಲಿ ಲೇಖಕರು ಬರೆಯಬೇಕು; ಜನರು ಓದಬೇಕು ಎನ್ನುವುದಾಗಿತ್ತು.

ಇಪ್ಪತ್ತನೆ ಶತಮಾನದಲ್ಲಿಯ ನಾಲ್ಕನೆ ದಶಕದಲ್ಲಿಯ ಒಂದು ವಿಮರ್ಶೆ ಇಲ್ಲಿದೆ. 'ಜಯಕರ್ನಾಟಕ'ದಲ್ಲಿ ಪ್ರಕಟವಾದ ಈ ವಿಮರ್ಶೆ ವಿಮರ್ಶಾತ್ಮಕ ಗುಣಗಳಿಂದಾಗಿ ಗಮನ ಸೆಳೆಯುತ್ತದೆ.[೪೮] ಪತ್ರಿಕೆಯ ವಿಮರ್ಶೆ ವಿಭಾಗ 'ವೀಣಾ ವಿತಾನ'ದಲ್ಲಿ ಇದು ಪ್ರಕಟವಾಗಿದೆ. ಪಂಡಿತ ಕೆ.ಶ್ರೀಕಂಠಶಾಸ್ತ್ರಿಯವರ 'ಪಿಳ್ಳಂಗೋವಿ' ಎಂಬ ಆರು ಕತೆಗಳಿರುವ ಒಂದು ಕಥಾ ಸಂಕಲನದ ವಿಮರ್ಶೆ ಇದು. ಕ್ರೌನ್೧/೮ ಪುಟಗಳು ೭೧, ಇದರ ಬೆಲೆ ೫ ಆಣೆ.

ಈ ವಿಮರ್ಶೆಯ ಮೊದಲ ಸಾಲನ್ನು ನೋಡಿ: "ಲಕ್ಷಣಕ್ಕೆ ಅಪವಾದಾತ್ಮಕ ದೃಷ್ಟಾಂತಗಳೆನ್ನುವಂತಿದ್ದ 'ಈ ಆರು ಕತೆಗಳ'ನ್ನು 'ಆರು ಚಿಕ್ಕ ಹರಟೆ'ಗಳೆಂದಿದ್ದರೆ ಹೆಚ್ಚು ಒಪ್ಪಬಹುದಾಗಿತ್ತು." ಆಗಲೇ ಕತೆ ಮತ್ತು ಹರಟೆಗಳ ಲಕ್ಷಣಗಳು ಪ್ರಚಲಿತವಿದ್ದವು ಎನ್ನುವುದು ಇದರಿಂದ ತಿಳಿಯುತ್ತದೆ. ಕತೆ ಎಂದರೆ ಹೀಗೆಯೇ ಇರಬೇಕು ಎನ್ನುವ ರೂಢಿಯ ಅಭಿಪ್ರಾಯ ಇದ್ದುದರಿಂದಲೇ ಅವರು ಇವುಗಳು ಕಥೆಯಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. 'ಚಿಕ್ಕ ಕತೆಯಲ್ಲಿ ಜೀವನ ಘಟನಾವಳಿಗಳಲ್ಲಿ ಒಂದನ್ನೇ ಕುರಿತು

---

೪೭. ವಾಗ್ಭೂಷಣ (ಜೂನ್ ೧೯೧೭) ಪುಟ ೩೭-೩೮

೪೮. ಜಯಕರ್ನಾಟಕ, ಸಂಚಿಕೆ ೧೭, ಸಂಪುಟ ೨.

ಕತೆಗಾರನು ತನ್ನ ಪಾತ್ರ, ವಸ್ತುಗಳನ್ನು ಹೆಣೆದಿರುವನು. ಆದರೆ ಇಲ್ಲಿ ಸಂಕಲಿತವಾಗಿದ್ದ ಕತೆಗಳಲ್ಲಿ 'ಮಳೆ ಅಯ್ನೋರು' 'ಒಡ್ಡತಮ್ಮ' ಚನ್ನಿ ಭಟ್ಟರು' ಇವು ಒಂದೊಂದು ವ್ಯಕ್ತಿಯ ಇಡೀ ಜೀವನದ ಮಾದರಿಯ ಚಿತ್ರಗಳಾಗಿವೆ. ಇವುಗಳಲ್ಲಿ ಚಿಕ್ಕ ಕತೆಯಲ್ಲಿ ಕಂಡು ಬರುವ ಸಂಗತಿ ಸನ್ನಿವೇಶಗಳಾವುವೂ ಇಲ್ಲ. ಪಾತ್ರ ಪ್ರಾಧಾನ್ಯತೆ ಇದ್ದರೂ ಅದಕ್ಕೆ ತಕ್ಕ ಹಿಡಿತವಿಲ್ಲದೆ ಹೋಗಿದೆ; ಎಂದರೆ ಪಾತ್ರ ಪರಿಚಯವು ವ್ಯಕ್ತಿ ಚರಿತ್ರ(biography)ಕ್ಕಿಳಿದು ಬಿಟ್ಟಿದ್ದರಿಂದ ನೂರಾರು ಪುಟಗಳಲ್ಲಿ ಹೇಳಬಹುದಾದ ಜೀವನ ವಿಸ್ತಾರವನ್ನು ಹತ್ತು ಹನ್ನೆರಡು ಪುಟಗಳಲ್ಲಿ ಸಂಗ್ರಹಿಸಿ ಹೇಳಿದಂತಾಗಿಯೂ ಶೈಥಿಲ್ಯವುಂಟಾಗಿದೆ ಎಂದು ಹೇಳುವ ಈ ವಿಮರ್ಶಕ ಸಣ್ಣಕತೆಯು ಹೇಗೆ ಇರಬೇಕು ಎಂಬ ಲಕ್ಷಣಗಳನ್ನು ಇಲ್ಲಿ ಹೇಳಿದಂತೆ ಆಗಿದೆ.

ಈ ಸಂಕಲನದಲ್ಲಿಯ ಒಂದು ಕತೆ 'ಆವೇಶ'. ಇದನ್ನು ಚಿಕ್ಕ ಕತೆಯೆನ್ನುವುದಕ್ಕಿಂತ ಉತ್ತಮ ತರಗತಿಯ ಹಾಸ್ಯ ಪ್ರಧಾನ ವಿಡಂಬನಾತ್ಮಕ ಹರಟೆಯೆಂದರೆ ಮತ್ತಷ್ಟು ಪ್ರಾಶಸ್ತ್ಯ ಬರಬಹುದು ಎನ್ನುತ್ತಾರೆ ಅವರು. 'ಗ್ರಹಗಳು'- ಗುರುಗಳು ಚಿಕ್ಕ ಮಕ್ಕಳಿಗೆ ಕಥಾ ರೂಪವಾಗಿ ಹೇಳುವ ವಸ್ತು ಪಾಠದಂತೆ, ಮನೋರಂಜಕವಾಗಿ ಜ್ಯೋತಿಷದಂತಹ ಒಂದು ಶಾಸ್ತ್ರೀಯ ವಿಷಯವನ್ನು ತಿಳಿಯಪಡಿಸುತ್ತದೆ. 'ಅಂದು ಕಳೆಯಿತು' ಎಂಬುದೂ ಉತ್ತಮ ಹರಟೆಗೆ ಉದಾಹರಣೆಯಾಗಿದೆ ಎಂದು ಅವರು ವಿಮರ್ಶಿಸುವರು.

ಶ್ರೀಕಂಠ ಶಾಸ್ತ್ರಿಗಳವರ ಶೈಲಿಯು ಸರಳವೂ ಹದಗೊಂಡುದೂ ಇದೆ. ಅರ ಕಥಾ ನಿರೂಪಣಾ ಕೌಶಲವು ಸುಗಮವಾಗಿದೆ. ಪಾತ್ರ ನಿರೂಪಣೆಯಲ್ಲಿ ಅಲ್ಲಲ್ಲಿ ಅಸ್ವಾಭಾವಿಕತೆಯುಂಟಾಗಿದ್ದರೂ ಜೀವನಕ್ಕೆ ಹೊರತಾಗದ 'ಮಾನಸ ಪುತ್ರ'ರನ್ನು ನಿರ್ಮಿಸಿದ್ದಾರೆ. ಆವೇಶದಲ್ಲಿ ಆವಿಷ್ಕೃತವಾದ ಇವರ ಹಾಸ್ಯದ ಬಗೆಯೂ, ಅಲ್ಲಲ್ಲಿ ಬರುವ ಕಾವ್ಯಪ್ರಾಯ, ರೀತಿ-ಭಾವಗಳೂ, ಗ್ರಂಥಕರ್ತರ ಕಲಾಭಿಜ್ಞತೆಯನ್ನು ಸ್ಪಷ್ಟಪಡಿಸುತ್ತದೆ. ತಿರುಳನ್ನು ಮುಟ್ಟಿನುಡಿದ ಒಂದೆರಡು ಮಾತಿಗೂ ಕಿವಿಗೂ... ಪಿಳ್ಳಂಗೋವಿಯ ಇಂಚರವು ಮೈತ್ರಿಯನ್ನುಂಟು ಮಾಡುವ ಸಂಕೋಲೆಯಾಗಬಹುದೆಂದು ಧಾರಾಳವಾಗಿ ಹೇಳಬಲ್ಲೆವು ಎಂದು ಈ ವಿಮರ್ಶೆ ಮುಗಿಯುತ್ತದೆ. ವಿಮರ್ಶೆಗೆ ಎತ್ತಿಕೊಂಡ ಅಥವಾ ಪರಿಚಯಿಸಲು ಆರಿಸಿಕೊಂಡ ಕೃತಿಯೇ ಸಾಮಾನ್ಯ ದರ್ಜೆಯದಾದುದರಿಂದ ಕೃತಿ ನಿಷ್ಠ, ಸಿದ್ಧಾಂತಪರ ವಿಮರ್ಶೆಯಾವುದೂ ಇಲ್ಲಿ ಮಂಡನೆಯಾಗಿಲ್ಲ.

'ಜಯಕರ್ನಾಟಕ'ದಲ್ಲಿ ಸಮಕಾಲೀನವಾಗಿ ಹೊರ ಬಂದ ವಿವಿಧ ವಿಶೇಷ ಸಂಚಿಕೆಗಳನ್ನು ವಿಮರ್ಶೆ ಮಾಡಲಾಗುತ್ತಿತ್ತು. 'ಕಂಠೀರವ' ದಸರಾ ಸಂಚಿಕೆ (೧೯೩೭) 'ಪ್ರಭಾತ'ದ ದಸರಾ ಸಂಚಿಕೆ, 'ನವ ಯುಗ'ದ ಪರ್ಯಾಯ ಸಂಚಿಕೆ, 'ತ್ರಿವೇಣಿ' ದೀಪಾವಳಿ ಸಂಚಿಕೆ ಇತ್ಯಾದಿಗಳನ್ನು ವಿಮರ್ಶಿಸಲಾಗಿದೆ. 'ಸಾಹಿತ್ಯ ಗೋಷ್ಠಿ' ಶೀರ್ಷಿಕೆಯಲ್ಲಿ ಇತರ ಪತ್ರಿಕೆಗಳಲ್ಲಿ ಬಂದವುಗಳಲ್ಲಿ ಉತ್ತಮವಾದುದನ್ನು ಆಯ್ದು ಪ್ರಕಟಿಸಲಾಗುತ್ತಿತ್ತು.

ಈ ಕಾಲದಲ್ಲಿ ವಿಮರ್ಶೆಯನ್ನು ಬೆಳೆಸುವ ಕೆಲಸವನ್ನು ಮೈಸೂರು ಕಡೆ 'ಪ್ರಬುದ್ಧ

ಕರ್ನಾಟಕ'ದ ಎ.ಆರ್.ಕೃಷ್ಣ ಶಾಸ್ತ್ರಿಗಳು, ಟಿ.ಎಸ್.ವೆಂಕಣ್ಣಯ್ಯನವರು ಮಾಡಿದರೆ ಧಾರವಾಡದ ಕಡೆ ಗೆಳೆಯರ ಗುಂಪಿನವರು ಮಾಡಿದರು. "ಗೆಳೆಯರ ಗುಂಪಿನವರು ಶಾಸ್ತ್ರೀಯವಾಗಿ ಕಾವ್ಯವನ್ನೂ ಕಾವ್ಯ ವಿಮರ್ಶನವನ್ನೂ ಅಭ್ಯಾಸಮಾಡಿದರು. ವಿಮರ್ಶೆಯೆಂದರೆ ಬರಹಗಾರನನ್ನು ಹೊಗಳುವುದಷ್ಟೇ ಅಲ್ಲ, ಕೃತಿಯ ತಿರುಳನ್ನು ಅರಿತು ಅದನ್ನು ತಾರ್ಕಿಕವಾಗಿ ಒರೆ ಹಚ್ಚಿ ವಿವೇಚಿಸುವುದು ಎಂಬುದನ್ನು ಗುಂಪಿನವರು ತಿಳಿದು, ಅದನ್ನು ತಮ್ಮ ವಿಮರ್ಶೆಗಳ ಆಧಾರವಾಗಿಟ್ಟುಕೊಂಡರು. ಈ ರೀತಿಯಲ್ಲಿ ವಿಮರ್ಶೆಯನ್ನು ಮಾಡಬೇಕಾದರೆ ವಿಮರ್ಶಕನು ಸಹೃದಯನಾಗಿರಬೇಕು. ಅಲ್ಲದೆ ಚೆನ್ನಾಗಿ ಅಭ್ಯಾಸಮಾಡಿ, ತಿಳಿವಳಿಕೆಯನ್ನು ಪಡೆದಿರಬೇಕು. ಇದನ್ನರಿತ ಗುಂಪಿನವರು ತೀವ್ರವಾದ, ಆಳವಾದ ಮತ್ತು ಸುವ್ಯವಸ್ಥಿತವಾದ ರೀತಿಯಲ್ಲಿ ಕಾವ್ಯಾಭ್ಯಾಸವನ್ನು ಮಾಡಿದರು...."[೪೮] ಎಂಬ ಅಭಿಪ್ರಾಯ ಗಮನಿಸಬೇಕು. ಗುಂಪಿನ ಬೆಳಗಾಂವಿ ರಾಮಚಂದ್ರರಾಯರು, 'ಪ್ರತಿಭೆ'ಯ ಬಗ್ಗೆ ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ ಬರೆಹಗಳಿಂದ ಉದಾಹರಣೆಗಳನ್ನು ನೀಡಿ ಪಾಂಡಿತ್ಯಪೂರ್ಣವಾದ ಲೇಖನವನ್ನು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಬರೆದರು.[೪೯] ಗೆಳೆಯರ ಗುಂಪಿಗೆ ಮುಖವಾಣಿಯಾಗಿ 'ಜಯಕರ್ನಾಟಕ' ಪತ್ರಿಕೆ ದೊರೆಯಿತು. ಗುಂಪಿನ ಗೆಳೆಯರ ಲೇಖನಗಳು ಇದರಲ್ಲಿ ಪ್ರಕಟವಾಗಿದ್ದವು. ಗೋಕಾಕರೂ ಆರಂಭದಲ್ಲಿ ಜಯಕರ್ನಾಟಕದಲ್ಲಿಯೇ ವಿಮರ್ಶೆಯನ್ನು ಬರೆದರು. ಜಯಕರ್ನಾಟಕದ ಪುಟಗಳನ್ನು ಒಮ್ಮೆ ತಿರುವಿ ಹಾಕಿದರೆ ಆರಂಭದ ಸಂಚಿಕೆಗಳ ವಿಮರ್ಶೆಗೂ ನಂತರದ ಸಂಚಿಕೆಗಳಲ್ಲಿ ಬಂದ ವಿಮರ್ಶೆಗೂ ಇರುವ ಅಂತರವನ್ನು ತಕ್ಷಣ ಗುರುತಿಸಬಹುದು.

ಉದಾಹರಣೆಗೆ, "ಗಿರಿಮಲ್ಲಿಕಾರ್ಜುನ ಶತಕಂ (ಕವಿ- ಶ್ರೀಯುತ ಆರ್.ತಾತಾ). ಇದು ಸನ್ಮಾನ ಗ್ರಂಥಾವಳಿಯಲ್ಲಿ ನಾಲ್ಕನೆಯದಾಗಿ ಶಿವಭಕ್ತಿ ಪ್ರಾಶಸ್ತ್ಯವನ್ನು ವರ್ಣಿಸುವ ರಸವತ್ತಾದ ಪದ್ಯಗ್ರಂಥವಾಗಿರುವುದು. ಇದರ ಶೈಲಿಯು ಹಳಗನ್ನಡದ ಉದ್ಗ್ರಂಥಗಳನ್ನು ಚೆನ್ನಾಗಿ ಹೋಲುವುದು. ಭಾಷೆಯು ಶುದ್ಧವಾಗಿಯೂ, ಪ್ರೌಢವಾಗಿಯೂ ಇರುವುದು. ಇದರಲ್ಲಿ ಶಿವಸಂಬಂಧವಾದ ಅನೇಕ ಕಥೆಗಳು ಅಡಕವಾಗಿದ್ದು ಅವುಗಳೆಲ್ಲಾ ಟಿಪ್ಪಣೆಗಳಲ್ಲಿ ವಿವರಿಸಲ್ಪಟ್ಟಿರುವುವು."[೫೦]

ವಿಮರ್ಶೆಯೆಂಬ ಶೀರ್ಷಿಕೆಯಲ್ಲಿ ಇದು ಅಚ್ಚಾಗಿದ್ದರೂ ಇದು ವಿಮರ್ಶೆಯಾಗಿರದೆ ಸಾಮಾನ್ಯ ಹೇಳಿಕೆಯಾಗಿದೆ. ಪುಸ್ತಕವನ್ನು ಓದದೆಯೂ ಈ ಮಾತುಗಳನ್ನು ಬರೆಯಬಹುದಾಗಿದೆ. ಈ 'ವಿಮರ್ಶೆ'ಯ ಜೊತೆಯಲ್ಲಿ ಇನ್ನೊಂದು ವಿಮರ್ಶೆಯನ್ನು ಹೋಲಿಸಿದೆ ಕಾಲದ ವ್ಯತ್ಯಾಸದ ಹಾಗೆ ಗುಣದ ವ್ಯತ್ಯಾಸವೂ ಇರುವುದು ಕಾಣುವುದು. "ಮೈಸೂರು ಮಕ್ಕಳು- ಇದನ್ನು ಬರೆದವರು ಈಗಲೀಗ ಕನ್ನಡಿಗರಿಗೆ ವಿಶೇಷ ವಿಶ್ವಾಸ

೪೮.ಹೊ.ಕ.ಇಂ.ಕಾ.ಪ್ರಭಾವ- ಪುಟ ೧೬೦-೧೬೧

೪೯.ಸಾಹಿತ್ಯ ಪರಿಷತ್ಪತ್ರಿಕೆ, ಜನವರಿ ೧೯೨೪, ಪುಟ ೨೭೧-೨೭೮

೫೦. 'ಅ': ಸಾಹಿತ್ಯ ಲೋಕದಲ್ಲಿ ವಿಮರ್ಶೆ- ಜಯಕರ್ನಾಟಕ, ಸಂ.೧, ಸಂಪುಟ ೧೨, ಅಕ್ಟೋ-೧೯೨೩, ಪುಟ ೯೩೩.

ವಿಷಯರಾದ ಶ್ರೀ ಬಿ.ಎಂ.ಶ್ರೀಕಂಠಯ್ಯನವರು. ಈ ಕವಿತೆಯಲ್ಲಿ ಪದಗಳನ್ನು ನಯವಾಗಿ ನೆಯ್ದಿರುವುದರಿಂದ ಸಹಜ ಸೌಂದರ್ಯವು ಮತ್ತಷ್ಟು ಹೆಚ್ಚಿದೆ. 'ಅಲ್ಲಲ್ಲಿ ನೋಡಿದರು ಬಾನಕೆರೆಯಲಿ ಹುದುಗಿ ಕಾರಮುಗಿಲಂತಿಹುದು ಬೆಟ್ಟ ಹಬ್ಬಿ' ಎಂಬ ಸಣ್ಣದಾದರೂ ಮನೋಹರವಾದ ಕಲ್ಪನೆಯೂ, 'ಕಾಡಿನಲಿ ನುಸಿಯುತ್ತ ಕಲ್ಲಿನಲಿ ಮೊರೆಯುತ್ತ' ಇತ್ಯಾದಿಯಾಗಿರುವಲ್ಲಿಯ ಶಬ್ದಸಾಮರ್ಥ್ಯವೂ ಶ್ಲಾಘನೀಯವಾಗಿದೆ. ಶ್ರೀಯವರ ದೇಶ ಭಕ್ತಿಯು ಹರಿದಲ್ಲೆಲ್ಲ ಹಾದಿಯನ್ನು ಮಾಡಿ ಭರದಿಂದ ಸಾಗುವ ಗಿರಿನಿರ್ಝರಿಣಿಯಂತಲ್ಲ, ಸಮ ನೆಲದಲ್ಲಿ ಸಾವಕಾಶವಾಗಿ ಮುಂದುವರಿಯುವ ತುಂಬು ತೊರೆಯಂತೆ. ಆದರೆ ಈ ಕವಿತೆಯನ್ನು ಬರೆಯುವಾಗ ಕವಿಗಳು ಆನಂದ ಪರವಶರಾಗಿ ವಿಶಾಲವಾದ ವಿಶ್ವವನ್ನು ಮರೆದ ಹಾಗಿದೆ. ಇಲ್ಲಿಯ ಕೊನೆಯ ಚರಣಗಳಲ್ಲಿ ಮಾತ್ರಾ ವ್ಯತ್ಯಾಸ ದೋಷದಿಂದ ಅವನ್ನು ಹಾಡುವುದಕ್ಕೆ ಬರುವುದಿಲ್ಲ."[೫೧] ಇದೊಂದು ರಸ ವಿಮರ್ಶೆ. ಮೊದಲಿನ ವಿಮರ್ಶೆಗೂ ಇದಕ್ಕೂ ಸುಮಾರು ಆರು ವರ್ಷಗಳ ಅಂತರವಿದೆ. ನೇರ ಮಾತುಗಳಲ್ಲಿ ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗದೆ, ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ಇಲ್ಲಿ ಅಭಿಪ್ರಾಯ ಮಂಡಿಸಲಾಗಿದೆ.

೧೯೩೧ರಲ್ಲಿ 'ಜಯಕರ್ನಾಟಕ'ದಲ್ಲಿ 'ವಿಮರ್ಶೆಯ ರೀತಿ ನೀತಿಗಳು' ಕುರಿತು ವಿ.ಕೃ. ಗೋಕಾಕರು ಲೇಖನವೊಂದನ್ನು ಬರೆದಿದ್ದಾರೆ. 'ವಿಮರ್ಶೆಯೆಂದರೆ ಕೇವಲ ಪುಸ್ತಕಾವಲೋಕನವಲ್ಲ. ಅದು ಸಾಹಿತ್ಯದ ಧ್ವಜಸ್ತಂಭವಾಗಿದೆ. ಸಾಹಿತ್ಯವೆಂದರೆ ಕೇವಲ ಅಬಾಧಿತ ತತ್ವಗಳ ಮೇಲೆ ನಿಂತ ಅಂತಸ್ತಿನ ಮನೆಯಾಗಿದೆ. ವಿಮರ್ಶೆಯೆಂದರೆ ಈ ತತ್ವಗಳ ಹಾಗೂ ಅವುಗಳ ಮೇಲೆ ನಿಂತ ಅಸ್ತಿವಾರದ ಸುಸ್ಥಿತಿಯನ್ನು ಕೆಡದಂತೆ ನೋಡಿಕೊಂಡು ಅವುಗಳ ಸೌಂದರ್ಯವನ್ನು ಹೆಚ್ಚಿಸುವ ಸಾಧನೆಯಾಗಿದೆ' ಎಂದು ಹೇಳಿದ್ದಾರೆ. ಸಾಹಿತ್ಯದ ತಿರುಳು ಹುರುಳಿಲ್ಲದಾದಾಗ ವಿಮರ್ಶೆ ಜೀವನವನ್ನು ತೂಗಿ ನೋಡಿ ಅದರಲ್ಲಿರುವ ಬೆಲೆಬಾಳುವ ಸಾಮಗ್ರಿಯನ್ನು ಸಾಹಿತ್ಯಕ್ಕೆ ಒದಗಿಸಿಕೊಡುವುದು ಎಂದೂ ಗೋಕಾಕರು ಹೇಳಿದ್ದಾರೆ. ಹೇಗೆ ನವೋದಯ ಕಾಲದಲ್ಲಿ ವಿಮರ್ಶೆ ಒಂದು ಸಿದ್ಧಾಂತದ ರೂಪವನ್ನು ಪಡೆಯತೊಡಗಿತ್ತು ಎಂಬುದಕ್ಕೆ ಇಲ್ಲಿ ಪುರಾವೆ ಸಿಗುತ್ತದೆ. ವಿಮರ್ಶೆ ಕೃತಿಯಲ್ಲಿಯ ದೋಷಗಳನ್ನು ಹುಡುಕಿ ಖಂಡಿಸುತ್ತದೆ. ಜೊತೆಯಲ್ಲಿ ಸಾಮಾನ್ಯ ಓದುಗ ಕೃತಿಯನ್ನು ಅರ್ಥಮಾಡಿಕೊಳ್ಳಲು ಅಸಮರ್ಥನಾದಾಗ ಅದು ಭಾಷ್ಯಕಾರನ ಪಾತ್ರವನ್ನೂ ವಹಿಸುವುದು ಎಂದು ಅವರು ಹೇಳಿದ್ದಾರೆ. ಸಾಹಿತ್ಯದ ಅಜರಾಮರವಾದ ತತ್ತ್ವಗಳನ್ನು ರಕ್ಷಿಸಿ ಬೆಳಗಿಸುವುದೇ ವಿಮರ್ಶೆಯ ಆದ್ಯ ಕರ್ತವ್ಯ ಎಂಬುದು ಅವರ ನಂಬಿಕೆ. ಜೊತೆಯಲ್ಲಿ ಅವರು ವಿಮರ್ಶೆಗೂ ಒಂದು ನಿರ್ಮಾಣ ಶಕ್ತಿ ಇದೆ ಎಂದಿದ್ದಾರೆ. ನಿಜವಾದ ವಿಮರ್ಶೆಯನ್ನು ಓದಿದಲ್ಲಿ ರಸಾನುಭವವು ಉದ್ಭವಿಸುವುದು; ಜೀವನದ ಅಪೂರ್ಣತೆಯು ಗೋಚರಿಸುವುದು; ಬಾಳಿನ ಸಮಸ್ಯೆಯ ಉತ್ತರವು ತಕ್ಕ ಮಟ್ಟಿಗೆ ಸಮರ್ಪಕವಾಗಿಯೂ

೫೧. 'ಮಂ': ಸಾಹಿತ್ಯ ಲೋಕದಲ್ಲಿ ವಿಮರ್ಶೆ – ಜಯಕರ್ನಾಟಕ, ಸಂ.೧ ಸಂಪುಟ ೧೨, ಅಕ್ಟೋ. ೧೯೨೩, ಪುಟ ೯೩೩

ಸಮಾಧಾನಕರವಾಗಿಯೂ ದೊರೆಯುವುದು. ಒಟ್ಟಾರೆಯಾಗಿ ವಿಮರ್ಶೆಯ ಹಾಗೂ ಉಳಿದ ವಾಙ್ಮಯದ ಮಾರ್ಗಗಳು ಬೇರೆಯಾಗಿದ್ದರೂ ಅವುಗಳ ಗುರಿ ಒಂದೇ ಆಗಿದೆ. ನೂರು ಕೀಳು ಕವಿಗಳಿಗಿಂತ ಓರ್ವ ಶ್ರೇಷ್ಠ ವಿಮರ್ಶಕ ಲೇಸು ಎಂಬುದು ಗೋಕಾಕರ ನಿಲುವು.

ಗೋಕಾಕರು ವಿಮರ್ಶೆಯಲ್ಲಿ ತೀರ್ಪು ನೀಡುವಂಥ ನ್ಯಾಯವಿಧಾಯಕ ವಿಮರ್ಶೆ (judicial criticism) ಸಪ್ರಮಾಣ ವಿಮರ್ಶೆ (Inductive criticism), ಸಪ್ರಮೇಯ ವಿಮರ್ಶೆ (Deductive criticism), ತುಲನಾತ್ಮಕ, ಐತಿಹಾಸಿಕ (Historical), ತಾತ್ವಿಕ (philosophical) ಹೀಗೆ ವಿವಿಧ ಪ್ರಕಾರಗಳನ್ನು ವಿವರಿಸುವರು. ಒಟ್ಟಾರೆ ಆರಂಭಕಾಲದಲ್ಲಿ ವಿಮರ್ಶೆಯನ್ನು ಬೆಳೆಸುವಲ್ಲಿ ಈ ಪರಿಚಯಾತ್ಮಕ ಲೇಖನ ಅತ್ಯಂತ ಮಹತ್ವದ್ದು. ಸಾಹಿತಿಗಳ ಪಾರಮ್ಯಕ್ಕೆ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾದ ಈ ಲೇಖನ ಸಾಹಿತಿಯ ಬೆಳವಣಿಗೆಯಲ್ಲಿ ವಿಮರ್ಶಕನ ಪಾತ್ರ ಮಹತ್ವದ್ದು ಎಂದು ಸಾರಿ ಹೇಳುತ್ತದೆ. ಜೊತೆಯಲ್ಲಿ ಈ ಮಹತ್ವದ ಪಾತ್ರವನ್ನು ನಿಭಾಯಿಸುವ ಕೆಲವು ಅಂಶಗಳನ್ನು ತಿಳಿಸಿಕೊಡುತ್ತದೆ.

'ಪ್ರಬುದ್ಧ ಕರ್ನಾಟಕ'ಕ್ಕೆ ೨೫ ವರ್ಷ ತುಂಬಿದ ಸಂದರ್ಭದಲ್ಲಿ ಲೇಖನವೊಂದನ್ನು ಬರೆದ ಮಾಸ್ತಿಯವರು, "ಹೊಸ ಸಾಹಿತ್ಯವನ್ನು ಕಲಿತಂತೆ ಹೊಸ ವಿಮರ್ಶೆಯನ್ನೂ ನಾವು ಇಂಗ್ಲಿಷ್‌ನಿಂದ ಕಲಿಯಬೇಕಾಗಿದ್ದಿತ್ತು. ಅದು 'ಪ್ರಬುದ್ಧ ಕರ್ನಾಟಕ'ದ ಮೂಲಕ ನಡೆಯಿತು" ಎಂದಿದ್ದಾರೆ.[೫೨] ಕೃಷ್ಣಶಾಸ್ತ್ರಿಗಳು ಮತ್ತು ವೆಂಕಣ್ಣಯ್ಯನವರು ಕೃತಿಗಳನ್ನು ವಿಮರ್ಶಿಸಲು ಬಳಸಿದ ಮಾನದಂಡಗಳು, ಅನ್ವಯಿಸಿದ ರೀತಿ, ಮೌಲ್ಯ ನಿರ್ಣಯ ಎಲ್ಲವೂ ಉನ್ನತ ಪರಂಪರೆಯನ್ನು ಹಾಕಿಕೊಟ್ಟಿತು.

ಇದೇ ಕಾಲದಲ್ಲಿ ಹೊಸ ವಿಮರ್ಶೆಯನ್ನು ರೂಪಿಸಿದ ಪತ್ರಿಕೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯೂ ಒಂದು. ಬಿ.ಎಂ.ಶ್ರೀಯವರ 'ಇಂಗ್ಲಿಷ್ ಗೀತಗಳು' ಕುರಿತು ಶ್ರೀ ಮಾ.ವೆಂ. ಎನ್ನುವವರು ಬರೆದ ವಿಮರ್ಶೆಯನ್ನು ಇಲ್ಲಿ ಗಮನಿಸಬಹುದು.

"ಶ್ರೀ ಶ್ರೀಕಂಠಯ್ಯನವರು ಪ್ರಯೋಗಿಸಿರುವ ಛಂದೋರೂಪಗಳು ಸುಂದರವಾಗಿವೆ; ಕಾವ್ಯ ವಸ್ತುವಿಗೆ ಅನುಕೂಲವಾಗಿವೆ. ಕನ್ನಡದ ಮರ್ಯಾದೆಗೆ ಒಪ್ಪಿವೆ. ಮುಖ್ಯವಾಗಿ ಶೈಲಿಯಲ್ಲಿಯೂ ಛಂದಸ್ಸಿನಲ್ಲಿಯೂ ಶ್ರೀಮಾನ್ ಶ್ರೀಕಂಠಯ್ಯನವರು ಮಾರ್ಗದರ್ಶಿಗಳು. ಇನ್ನು ಮೇಲೆ ಬರುವ ಕವಿಗಳು ಇವರು ತೋರಿಸಿ ಕೊಟ್ಟಿರುವ ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೆಂಬುದರಲ್ಲಿಯೂ ಇದರಿಂದ ನಮ್ಮ ಸಾಹಿತ್ಯವು ಪಂಡಿತರಿಗೆ ಮಾತ್ರವಲ್ಲದೆ ಈಗ್ಗಿಂತಲೂ ಹೆಚ್ಚಾಗಿ ಜನಸಾಮಾನ್ಯಕ್ಕೆ ನಿಲುಕುವಂತಾಗುತ್ತದೆಂಬುದಲ್ಲಿಯೂ ಸಂದೇಹವಿಲ್ಲ."[೫೩]

---

೫೨. ಮಾಸ್ತಿ; ನಮ್ಮ ಸಾಹಿತ್ಯದ ಅಶ್ವಿನೀ ದೇವತೆಗಳು; ಪ್ರಬುದ್ಧ ಕರ್ನಾಟಕ ಬೆಳ್ಳಿಯ ಸಂಚಿಕೆ, ಪುಟ ೩೧.

೫೩. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ; ಸಂಪುಟ ೧೩, ಸಂ.೨, ಜುಲೈ ೧೯೨೮

ಕಾವ್ಯಕ್ಕೆ ಕವಿ ಬಳಸಿದ ಛಂದಸ್ಸು ಅನುರೂಪವಾಗಿದೆಯೋ ಇಲ್ಲವೋ ಎನ್ನುವುದರ ವಿವೇಚನೆ ಇಲ್ಲಿದೆ. 'ಇಂಗ್ಲಿಷ್ ಗೀತಗಳು' ಒಂದು ಹೊಸ ಕಾವ್ಯ ಮಾರ್ಗವನ್ನು ತೆರೆಯ ಬಲ್ಲ ಸಾಮರ್ಥ್ಯ ಹೊಂದಿದೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ನಂತರದ ಇನ್ನೊಂದು ಮಾತು, ಸಾಹಿತ್ಯ ಪಂಡಿತರ ವರ್ತುಳದಿಂದ ದಾಟಿ ಪಾಮರರಿಗೂ ಸಮ್ಮತವಾಗಬೇಕು ಎಂಬ ಬಯಕೆ.

ಧಾರವಾಡ, ಮೈಸೂರು, ಬೆಂಗಳೂರುಗಳ ಹಾಗೆಯೇ ಮಂಗಳೂರು ಭಾಗದಲ್ಲಿಯೂ ಸಾಹಿತ್ಯ ಕೃತಿಗಳನ್ನು ವಿಮರ್ಶಿಸುವ ಪರಿಪಾಠ ಪತ್ರಿಕೆಗಳಲ್ಲಿ ಆರಂಭವಾಯಿತು. ಮೊದಲಿಗೆ ಇದು ಪುಸ್ತಕವನ್ನು ಪರಿಚಯಿಸುವ ಮಟ್ಟದಲ್ಲಿ ಇದ್ದದ್ದು ನಂತರ ಒಳ್ಳೆಯ ವಿಮರ್ಶೆಯಾಗಿಯೂ ಬೆಳೆದಿದೆ. ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಬಂದ ಈ ವಿಮರ್ಶೆಯನ್ನು ಇಲ್ಲಿ ಗಮನಿಸಬೇಕು. "ಕನ್ನಡದ ನಾಲ್ಕನೆಯ ಪುಸ್ತಕವು (ಅಭಿಪ್ರಾಯ) ಇಂತಹ ಪುಸ್ತಕಗಳು ಅನೇಕ ವಿದ್ವಜ್ಜನರು ಸೇರಿರುವ ಮಂಡಳಿಯಿಂದಲೇ ತಯಾರಾಗಬೇಕೆಂದು ನಮ್ಮ ಮತವಿರುವುದು. ತರಗತಿಯ ಪ್ರಮಾಣಕ್ಕನುಸರಿಸಬೇಕು; ಪಾಠಗಳ ಅನುಕ್ರಮವು ಸುಸಂಗತವಾಗಿರಬೇಕು; ವಿಷಯ ವೈವಿಧ್ಯವಿರಬೇಕು; ವಾಕ್ಯ ರಚನೆ, ವಿಷಯ ವಿವೇಚನೆಗಳು ಸುಲಭವೂ ಮನೋಹರವೂ ಆಗಿರಬೇಕು; ... ೫ನೆಯ ಪಾಠವು ಅತ್ಯುತ್ತಮವಾಗಿರುವುದು. 'ಸರ್ವಜ್ಞ'ನ ಪದ್ಯಗಳು ಯಥೋಚಿತವಾಗಿ ಸೇರಿಸುವಲ್ಲಿಯ ಜಾಣತನವು ಆಕರ್ಷಕವಾಗಿರುವುವು... 'ಕಂಕಣ ದೇವಿಯ ಅಂಗಳ'ದ ಪದ್ಯಗಳು, ದೇವರೋ ದೆವ್ವವೋ ಎಂಬ ಸಂದೇಹವನ್ನುಂಟುಮಾಡುತ್ತಿರುವುದರಿಂದ ಅದನ್ನು ಹಾಕಿದ್ದು ಎಷ್ಟು ಮಾತ್ರವೂ ಚಂದವಾಗಲಿಲ್ಲವೆಂದು ಸೂಚಿಸಬೇಕಾಗಿದೆ. 'ಪುಷ್ಪೋದ್ಭವ' ಕವಿತೆಯಲ್ಲಿ ಸ್ವಾರಸ್ಯವೇನೂ ಕಾಣಲಿಲ್ಲ."[೫೪]

ಶಾಲೆಯ ಪುಸ್ತಕವೊಂದರ ವಿಮರ್ಶೆ ಇದು. ಶಾಲೆಯ ಪುಸ್ತಕವೆಂದರೆ ಹೇಗಿರಬೇಕು, ಅದನ್ನು ಯಾರು ಸಿದ್ಧಪಡಿಸಿದರೆ ಒಳಿತು, ಸಿದ್ಧ ಪಠ್ಯದಲ್ಲಿ ಯಾವುದು ಚೆನ್ನಾಗಿದೆ, ಯಾವುದು ಚೆನ್ನಾಗಿಲ್ಲ ಇತ್ಯಾದಿ ಅಭಿಪ್ರಾಯಗಳು ಇದರಲ್ಲಿ ವ್ಯಕ್ತವಾಗಿದೆ. ಪುಸ್ತಕವನ್ನು ಇಡಿಯಾಗಿ ಓದಿರುವುದಕ್ಕೆ ಇದರಲ್ಲಿ ಪುರಾವೆ ಸಿಕ್ಕುತ್ತದೆ. ಇದೇ ರೀತಿಯಲ್ಲಿ ಪುಸ್ತಕಗಳನ್ನು ಪರಿಶೀಲಿಸಿದರೆ ಉತ್ತಮ ವಿಮರ್ಶೆಯನ್ನು ಮಾಡುವುದು ಸಾಧ್ಯವಿದೆ.

ಇದೇ ಸುಮಾರಿಗೆ ಎಂ.ಗೋವಿಂದ ಪೈಗಳು ಪಾಂಡೇಶ್ವರ ಗಣಪತಿರಾಯರ 'ಹೂಗೊಂಚಲು' ಕವನ ಸಂಕಲನವನ್ನು ವಿಮರ್ಶಿಸಿದ್ದಾರೆ.[೫೫] ಉತ್ತಮ ವಿಮರ್ಶೆಗೆ

---

೫೪. ಜಿಜ್ಞಾಸು; 'ಕನ್ನಡ ನಾಲ್ಕನೆಯ ಪುಸ್ತಕ'ದ ವಿಮರ್ಶೆ, ಸುವಾಸಿನೀ (ಜೂನ್ ೧೯೨೭) ಪುಟ ೩೦೨-೩೦೩

೫೫.ಎಂ.ಗೋವಿಂದಪೈ; ಪಾಂಡೇಶ್ವರ ಗಣಪತಿ ರಾಯರ 'ಹೂಗೊಂಚಲು'ನ ವಿಮರ್ಶೆ, 'ಉದಯ ಭಾರತ' (ಜೂನ್ ೧೯೨೮) ಪುಟ ೭೧-೭೨.

ಅದೊಂದು ಉದಾಹರಣೆಯಾಗಬಲ್ಲುದು.

"ಕವಿತೆಯಲ್ಲಿ ಆಯಾ ಕಾಲಕ್ಕೆ ಅನುಗುಣವಾದ ಭಾವನೆಗಳು, ಆ ಭಾವನೆಗಳ ಧ್ವನಿಗೆ ಅನುಗುಣವಾದ ರೂಪು ಮೊದಲಾದವು ಇಲ್ಲದಿದ್ದರೆ ಸಾವಿರಾರು ವರ್ಷಗಳ ಹಿಂದಿನ ಸವಗನ್ನು ಈಗಣ ಯೋಧನು ಹೇಗೆ ತೊಟ್ಟುಕೊಳ್ಳಬಹುದೋ? ಹೊಸ ಭಾವನೆಗಳಿಗೆ ಹೊಸ ಶೈಲಿ ಬಂಧಗಳೇ ಸಾಲವು. ಹೊಸ ಶಬ್ದ ಸೃಷ್ಟಿಯೂ ಬೇಕಾಗದಿರದು; ಎಂಬುದರಿಂದ ತನ್ನ ಭಾವನೆಗಳನ್ನು ತಟ್ಟನೆ ಮೂಡಿಸಲಿಕ್ಕೆ ಹಳೆಯ ಶಬ್ದಗಳು ನೆರವಾಗದೆಂದಾದರೆ, ಕವಿ, ಹೊಸ ಶಬ್ದಗಳನ್ನು ಕೂಡ ಸೃಷ್ಟಿಸಿ, ತನ್ನ ಭಾವನೆಗಳನ್ನು ಬೆಳಗಿಸಬೇಕೆಂದೇ ನನಗೆ ತೋರುತ್ತದೆ. ಆದುದರಿಂದ ಇದೆಲ್ಲ ಬಗೆಯ ನವೀನತೆಯು ಆಯಾ ಕಾಲದಲ್ಲಿ ಬರಲೇಬೇಕು. ಈ ಬಗೆಗಳ ನವೀನತೆಯಿಂದಲೇ ಕನ್ನಡಸಾಹಿತ್ಯದ ಪುನರುಜ್ಜೀವನವೆಂದು ನನ್ನ ದೃಢ ನಂಬಿಕೆ. ಕವಿಗೆ ಬೇಕಾದುದು ತುಂಬ ಸ್ವಾತಂತ್ರ್ಯ. ಅದನ್ನಾತನು ನೀಗಲಾಗದು.. .. ಹೆರವರ ಮಾತುಗಳಲ್ಲಿ ತನ್ನ ಮೂಗುದಾರವನ್ನು ಸಿಲುಕಲಿತ್ತಿರುವ ಕವಿ ತನ್ನ ಕವಿತಾ ಶಕ್ತಿಯನ್ನು ಕಳಕೊಂಡನೆಂದೇ ತಿಳಿಯಬೇಕು", ಎಂದು ಕಾವ್ಯ ತತ್ವವನ್ನು ಹೇಳುವವರು ಗೋವಿಂದಪೈಗಳು. ಕನ್ನಡ ಸಾಹಿತ್ಯದ ಪುನರುಜ್ಜೀವನ ಹೇಗೆಂಬುದನ್ನು ಇಲ್ಲಿ ಪೈಗಳು ಟೀಕಿಸಿದ್ದಾರೆ. ಹೊಸ ಹೊಸ ಭಾವನೆಗಳಿಗೆ ಹೊಸ ಹೊಸ ಶಬ್ದ ಸೃಷ್ಟಿಯ ಅಗತ್ಯವನ್ನು ಅವರು ಮನಗಂಡಿದ್ದಾರೆ. ತಮ್ಮ ಈ ಕಾಣ್ಕೆಯನ್ನು ಅವರು 'ಹೂ ಗೊಂಚಲು'ಗೆ ಅನ್ವಯಿಸಿ ನೋಡುವರು- "ಕೆಲವು ಕವಿತೆಗಳಲ್ಲಿ ಅಲ್ಲಲ್ಲಿ ನವೀನ ಭಾವನೆಗಳೂ ಇವೆ; ಉದಾ; ಇರುಳನ್ನು ಕುರಿತು, ಬೇರಲ್ಲ ನೀನು ಹಗಲಿನ ಮಾತೆ ಎಂ।ಬರಿವನೀಯೌ ಜಗಕೆ' ಎಂಬುದು ಕನ್ನಡ ವಾಙ್ಮಯದಲ್ಲಿ ತೀರ ಹೊಸತು.. .. 'ಮನೋರಮೆ' ಮೃದು ಗದ್ಯವೆಂದರೇನು? ಈ ಹೆಸರು ಈ ಛಂದಸ್ಸಿಗೆ ಹೇಗೆ ನೆರೆಯುತ್ತದೆ? 'ಗುಲಾಬಿ'ಗೆ ಕನ್ನಡದಲ್ಲಿ ಬೇರೆ ಶಬ್ದವಿಲ್ಲದಿದ್ದರೆ, 'ಪರದೆ' ಎಂಬುದರ ಎಡೆಯಲ್ಲಿ 'ತೆರೆಯ' ಎಂದಿರಿಸಲಾಗದೆ?" ಎಂಬಲ್ಲೆಲ್ಲ ಗೋವಿಂದ ಪೈಗಳ ವಿಮರ್ಶನ ಶಕ್ತಿ ಪ್ರಕಟಗೊಂಡಿದೆ. ಇದು ಪೂರ್ವಗ್ರಹವಿಲ್ಲದ ಕೃತಿ ನಿಷ್ಠ ವಿಮರ್ಶೆ. ದಾಕ್ಷಿಣ್ಯಕ್ಕೆ ಒಳಗಾಗದೆ ಸರಳ ಮಾತುಗಳಲ್ಲಿ ಹೇಳಬೇಕಾದುದನ್ನು ಹೇಳಿರುವುದು ವಿಮರ್ಶರ ನಿಶಿತ ಮತಿ, ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಕನ್ನಡದಲ್ಲಿ ಮುಂದೆ ಬಂದ ವಿಮರ್ಶೆಗೆ ಇದು ಮಾರ್ಗದರ್ಶಿಯಂತಿದೆ.

ಬೆಲೆ ಕಟ್ಟುವ ಹಂತ:- ಆರಂಭದ ಹಂತವನ್ನು ದಾಟಿದ ಮೇಲೆ ಸಾಹಿತ್ಯ ಕೃತಿಯನ್ನು ಹೊಗಳುವ, ಸಾಹಿತಿಯ ಬೆನ್ನು ತಟ್ಟುವ ಕೆಲಸವನ್ನು ಬದಿಗಿಟ್ಟು ಕೃತಿಯ ಬೆಲೆಗಟ್ಟುವ ಹಂತವನ್ನು ಕಾಣುತ್ತೇವೆ. ಕನ್ನಡದ ಮೊದಲ ವಿಮರ್ಶೆಯನ್ನು ಪ್ರಭಾವಿಸಿದ ಅಂಶಗಳು ಯಾವುವು? ನವೋದಯ ವಿಮರ್ಶೆ ಕಾಣಿಸಿಕೊಳ್ಳುವ ಹಂತದಲ್ಲಿ ದೇಶವು ಪಾರತಂತ್ರ್ಯಕ್ಕೆ ಒಳಗಾಗಿತ್ತು. ಹೊಸ ಸಾಹಿತ್ಯವು ಆಂಗ್ಲ ಮತ್ತಿತರ ಅನ್ಯ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿತ್ತು. ವಿಮರ್ಶೆಯೂ ಆಂಗ್ಲ ಪ್ರಭಾವದಿಂದಲೇ ನಮ್ಮಲ್ಲಿ ಬೆಳೆಯಿತು ಎನ್ನುವುದಕ್ಕೆ ಯಾರದೂ ಭಿನ್ನಾಭಿಪ್ರಾಯ ಇಲ್ಲ. ನವೋದಯದ ಸಂದರ್ಭದ ವಿಮರ್ಶೆಯ ಸ್ವರೂಪ

ಎಂಥದ್ದು?

ಸಾಹಿತ್ಯವಾಗಲಿ ವಿಮರ್ಶೆಯಾಗಲಿ ಶೂನ್ಯದಿಂದ ಹುಟ್ಟುವುದಿಲ್ಲ. ಹಾಗೂ ಕೇವಲ ಭಾವಜನ್ಯ ಬುದ್ಧಿಜನ್ಯ ಆಗಿರುವುದಿಲ್ಲ; ಬದಲಾಗಿ ಇವೆರೆಡೂ ಆಯಾ ಕಾಲದೇಶಗಳ ಸಾಂಸ್ಕೃತಿಕ ನೆಲೆಯಿಂದ ಜೀವನ ಪಡೆಯುತ್ತವೆ. ಒಂದು ಕಾಲಘಟ್ಟದ ಸಾಂಸ್ಕೃತಿಕ ಜವಾಬ್ದಾರಿಯನ್ನು ಸಾಹಿತಿ ಮತ್ತು ವಿಮರ್ಶಕರು ನಿಭಾಯಿಸುತ್ತಾರೆ. ಈ ಮಾತುಗಳ ಹಿನ್ನೆಲೆಯಲ್ಲಿ ನಾವು ನವೋದಯದ ವಿಮರ್ಶೆಯನ್ನು ಅರ್ಥಮಾಡಿಕೊಳ್ಳಬೇಕು. ನವೋದಯದ ಸಂದರ್ಭದಲ್ಲಿ ಬಂದ ಕೃತಿ ವಿವೇಚನೆಗಳೆಲ್ಲ ವಿಮರ್ಶೆಯೋ ಮೀಮಾಂಸೆಯೋ ಎಂದು ವಿಂಗಡಿಸಲು ಬಾರದಂಥದ್ದು. ಪ್ರಾಚೀನ ಕಾಲದಲ್ಲಿ ಬುದ್ಧಿ ಶಕ್ತಿಯನ್ನು ವ್ಯಯಿಸಿ ಕೃತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇರಲಿಲ್ಲ. ಆದರೆ ನವೋದಯದ ಕಾಲದಲ್ಲಿ ಅದನ್ನು ಕಾಣುವುದು ಒಳ್ಳೆಯ ಬೆಳವಣಿಗೆಯೇ. ವಿಮರ್ಶೆ ಓದುಗನಿಗೆ ಸಹಾಯ ಮಾಡುವ ಕಿಂಕರ ಅಲ್ಲ. ಅಥವಾ ಕೃತಿಯ ಅರ್ಥವನ್ನು ವಿದ್ಯಾರ್ಥಿಗಳಿಗೆ ಸರಳವಾಗಿ ತಿಳಿಸಿಕೊಡುವುದಲ್ಲ ಎಂಬ ಖಚಿತ ನಿಲುವು ನವೋದಯ ಕಾಲದವರದು. ನವೋದಯದವರ ಎದುರು ಕೆಲವು ಜವಾಬ್ದಾರಿಗಳಿದ್ದವು. ಅಪಾರವಾದ ಹಳೆಗನ್ನಡ ಕಾವ್ಯಗಳು ಅವರ ಎದುರಿಗೆ ಇತ್ತು. ಹೀಗಾಗಿ ಅವುಗಳಿಗೆ ವ್ಯಾಖ್ಯಾನ ವಿವರಣೆ ನೀಡುವುದು ಅವರ ದೊಡ್ಡ ಜವಾಬ್ದಾರಿಯಾಯಿತು. ಈ ಕಾರಣಕ್ಕಾಗಿ ನವೋದಯ ವಿಮರ್ಶೆ ವ್ಯಾಖ್ಯಾನಮುಖಿ ಆಯಿತು. ಕೃತಿಯ ರಸಗ್ರಹಣದ ಸಂದರ್ಭದಲ್ಲಿ ವಿಮರ್ಶೆ ವಿವರಣೆಯಾಯಿತು. ನವೋದಯ ವಿಮರ್ಶೆಯನ್ನು ಪ್ರೇರಿಸಿದ ಅಂಶಗಳು ಯಾವವು? ಸಾಹಿತ್ಯವನ್ನು ಪ್ರೇರಿಸಿದ ಅಂಶಗಳೇ ವಿಮರ್ಶೆಯನ್ನೂ ಪ್ರೇರಿಸಿವೆ. ಇಂಗ್ಲಿಷ್ ವಿದ್ಯಾಭ್ಯಾಸದಿಂದಾಗಿ ಆ ಭಾಷೆಯ ವಿಮರ್ಶೆಯ ತತ್ವ, ಸ್ವರೂಪಗಳು ಕನ್ನಡದಲ್ಲಿ ಕಾಣಿಸಿಕೊಂಡವು. ದೇಶ ಪರಸತ್ತೆಯಲ್ಲಿದ್ದುದು, ಕನ್ನಡ ನಾಡು ಹಲವು ಆಡಳಿತಗಳಲ್ಲಿ ಹಂಚಿ ಹೋಗಿದ್ದು ಆರಂಭದ ವಿಮರ್ಶಕರನ್ನು ಪ್ರಭಾವಿಸಿದ ಅಂಶಗಳಲ್ಲಿ ಮುಖ್ಯವಾದದ್ದು. ವಸಾಹತುಶಾಹಿ ಅನುಭವದ ಗ್ರಹಿಕೆಯ ದೆಸೆಯಿಂದ ಕನ್ನಡದಲ್ಲಿ ವಿಮರ್ಶೆಯ ತತ್ವಗಳು ಕಂಡು ಬಂದವು. ವಸಾಹತುಶಾಹಿಯೇ ನವವಿದ್ಯಾವಂತ ವರ್ಗವನ್ನು ಸೃಷ್ಟಿಸಿದ್ದು. ಈ ವರ್ಗದಲ್ಲಿ ಉಂಟಾದ ಅಭಿರುಚಿಯ ಬದಲಾವಣೆಯು ಕಾವ್ಯಮೀಮಾಂಸೆಯ ಜಾಗದಲ್ಲಿ ವಿಮರ್ಶೆಯನ್ನು ತಂದಿತು. ಈ ನವ ವಿದ್ಯಾವಂತರಿಗೆ ಆಂಗ್ಲ ವಿದ್ಯಾಭ್ಯಾಸದ ಜೊತೆಯಲ್ಲಿ ರಾಜಾರಾಮ ಮೋಹನರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ ಮೊದಲಾದವರ ಸಾಮಾಜಿಕ, ಆಧ್ಯಾತ್ಮಿಕ ಪರಿಷ್ಕರಣ ಮೂಲದ ವೈಚಾರಿಕ ಚಳುವಳಿಗಳು ಹಾಗೂ ಗಾಂಧೀವಾದ ಪ್ರಬಲವಾದ ಪ್ರೇರಣೆಯಾದವು. ಈ ಪ್ರೇರಣೆಗಳ ಹೊರತಾಗಿಯೂ ಆ ಕಾಲದ ತೀವ್ರವಾದ ರ್‍ಯಾಡಿಕಲ್ ವಿಚಾರಧಾರೆಗಳನ್ನು ಈ ವಿಮರ್ಶೆ ಒಳಗೊಳ್ಳಲಿಲ್ಲ. ಹೊಸ ವಿಚಾರಧಾರೆಗಳು ಮತ್ತು ಪರಂಪರಾಗತ ಮೌಲ್ಯಗಳ ನಡುವೆ ಇಲ್ಲಿ ತೀವ್ರ, ಸಂಘರ್ಷ ತಲೆದೋರುತ್ತದೆ. ಸಂಘರ್ಷವು ಒಂದು ಸಮನ್ವಯ ಸೂತ್ರದ

ಕಡೆಗೆ ವಾಲುತ್ತದೆ. ಅಲೌಕಿಕ ಆಸಕ್ತಿಯೇ ಜೀವನದ ಪರಮ ಮೌಲ್ಯವಲ್ಲ ಎಂದ 'ಧರ್ಮನಿರಪೇಕ್ಷ' ನಿಲುವು ಮತ್ತು ಮನುಷ್ಯ ತನ್ನ ಲೌಕಿಕ ಪರಿಮಿತಿಯಲ್ಲಿಯೇ ಸಹನಶೀಲ ಬದುಕನ್ನು ಕಟ್ಟಿಕೊಳ್ಳಬೇಕೆಂಬ ನೈತಿಕ ನಿಲುವುಗಳು ಜೀವನ ದೃಷ್ಟಿಗಳಾಗುತ್ತವೆ. ಸಾಹಿತ್ಯ ಸೃಷ್ಟಿಯ ಹಿಂದಿನ ನಿಲುವೂ ಇದೇ ಇದ್ದುದನ್ನು ಗಮನಿಸಬೇಕು. ಮಾಸ್ತಿಯವರ ಕಥೆಗಳನ್ನು ವಿಮರ್ಶಿಸುವಾಗ ಅವರ ಕಥೆಗಳ ಹಿಂದೆ ಇದೇ ಭಾವನೆ ಇದ್ದುದನ್ನು ವಿಮರ್ಶಕರು ಗಮನಿಸುತ್ತಾರೆ. ಇದ್ದುದನ್ನು ಇದ್ದಂತೆಯೇ ಒಪ್ಪಿಕೊಳ್ಳಬೇಕು ಎನ್ನುವುದು ನಿಲುವಾದರೂ ಅದರ ಶುದ್ಧತೆಯನ್ನು ಮಾತ್ರ ಸ್ವೀಕರಿಸುವ ವ್ರತ ಪಾಲನೆಯಾಗುತ್ತದೆ. ಇದು ಪಾರಂಪರಿಕ ನೈತಿಕ ದೃಷ್ಟಿಕೋನ. ಲೇಖಕ ಮತ್ತು ವಿಮರ್ಶಕನ ಸಂಬಂಧ ಇಂಥಲ್ಲಿ ಕೇವಲ 'ಸಹೃದಯ' ಸಂಬಂಧವಾಗುತ್ತದೆ. ಲೇಖಕನ ದೃಷ್ಟಿಕೋನದಿಂದ ಹೊರಗೆ ನಿಂತು ವಿಮರ್ಶಿಸುವ ನಿಲುವು ನವೋದಯ ವಿಮರ್ಶೆಗೆ ಸಾಧ್ಯವಾಗಲಿಲ್ಲ. ಪಾರಂಪರಿಕ ನೈತಿಕ ಶ್ರದ್ಧೆಗೆ ಹೊರತು ಎನ್ನಿಸಿದಾಗ ಮಾತ್ರ, ಲೇಖಕನ ದೃಷ್ಟಿಕೋನವನ್ನು ಪ್ರಶ್ನಿಸಿದ ಉದಾಹರಣೆ ದೊರೆಯುತ್ತದೆ.

ಶೂದ್ರ ಪ್ರಜ್ಞೆ: ಕುವೆಂಪು ಅವರು 'ಶೂದ್ರ ತಪಸ್ವಿ'ಯನ್ನು ಬರೆದಾಗ ಅದಕ್ಕೆ ಬಂದ ಪ್ರತಿಕ್ರಿಯೆ ಇಲ್ಲಿ ಮುಖ್ಯವಾಗುತ್ತದೆ. 'ಶೂದ್ರ ತಪಸ್ವಿ'ಯಲ್ಲಿ ಬರುವ ಈ ಮಾತನ್ನು ಗಮನಿಸಬೇಕು: "....ನಮ್ಮ ದೇಶದಲ್ಲಿ ನಮ್ಮ ಪುರಾಣ ಕಥೆಗಳು ವಸ್ತುಸಂಗ್ರಹ ಶಾಲೆಯ ನಿರ್ಜೀವ ಪ್ರಾಣಿಗಳಂತಿಲ್ಲ. ಅವುಗಳು ಜೀವ ಶಕ್ತಿಗಳಾಗಿ ನಮ್ಮ ಜನರ ಆಸೆ ಆಕಾಂಕ್ಷೆ ಸಂಸ್ಕೃತಿಗಳನ್ನು ಪೋಷಿಸುತ್ತವೆ. ಅಲ್ಲಿ ಬರುವ ವ್ಯಕ್ತಿಗಳ ನಡತೆಯಿಂದ ಈ ಜನ ತಮ್ಮ ನಿತ್ಯ ಜೀವನದ ಮತೀಯ ಮತ್ತು ಸಾಮಾಜಿಕ ಚೇಷ್ಟಿತಗಳನ್ನು ನಿರ್ಣಯಿಸುವ ಅಂಧ ಶ್ರದ್ಧೆಗೆ ಶರಣಾಗುತ್ತಾರೆ."

ಈ ಅಂಧ ಶ್ರದ್ಧೆಯ ವಿರುದ್ಧವೇ ಕುವೆಂಪು ಅವರು ಧ್ವನಿ ಎತ್ತುವುದು. ಪುರಾತನವಾದುದನ್ನು ಏಕೆ ಪ್ರಶ್ನಿಸುವುದು ಬೇಡ ಎಂದು ಅವರು ಪ್ರಶ್ನಿಸುತ್ತಾರೆ. "ಉತ್ತಮ ಶಿಲ್ಪಿ ಕಟ್ಟಿದ ದೇವಾಲಯದಲ್ಲಿ ಅದು ಹಳತಾಗುತ್ತ ಬಂದಂತೆಲ್ಲ, ಇಲಿ ಹಲ್ಲಿ ಬಾವಲಿ ಮೊದಲಾದ ಅನಾಹುತ ಜೀವ ಜಂತುಗಳೂ ಗೂಡುಬೀಡು ಮಾಡುವುದುಂಟು. ವಾಲ್ಮೀಕಿಯ ಮಹಾ ಕೃತಿಗೂ ಅಂತಹ ಗತಿ ಒದಗಿದರೆ ಅದು ಅದರ ಪುರಾತನತ್ವಕ್ಕೆ ಒಂದು ಅನಿವಾರ್ಯ ಲಕ್ಷಣವಾಗುತ್ತದೆ. ದೇವಾಲಯಕ್ಕೆ ಪೂಜೆಗೆಂದು ಹೋಗುವವರು ಯಾರೂ ಅಲ್ಲಿವೆ ಎಂಬ ಒಂದು ಕಾರಣದಿಂದಲೇ ಇಲಿ, ಹಲ್ಲಿ, ಬಾವಲಿಗಳನ್ನು ಹೇಗೆ ಪೂಜಿಸುವುದಿಲ್ಲವೋ ಹಾಗೆಯೇ ಮಹಾಕವಿಯ ಕೃತಿಯಲ್ಲಿ ಬಂದಿಳಿಕೆಗಳಂತೆ ಸೇರಿಕೊಂಡಿರುವ ಅಲ್ಪ ದೃಷ್ಟಿಯ ಕುಕವಿಕೃತವಾದ ಪ್ರಕ್ಷಿಪ್ತಗಳನ್ನು ತಿಳಿದವರು ಯಾರೂ ಗೌರವಿಸುವುದಿಲ್ಲ" ಎಂದು ಹೇಳುತ್ತಾರೆ.

ಶೂದ್ರ ತಪಸ್ವಿಯನ್ನು 'ಜೀವನ'ದಲ್ಲಿ ವಿಮರ್ಶಿಸುವ ಮಾಸ್ತಿ ಪುರಾತನ ಕಾವ್ಯದ ವಸ್ತುವಿನಲ್ಲಿ ಬದಲಾವಣೆ ಮಾಡಿಕೊಳ್ಳುವುದನ್ನು ಒಪ್ಪುವುದಿಲ್ಲ. "ವಕ್ರ ದೃಷ್ಟಿಯ ಹಿಂದಿನ

ಕಥೆಯನ್ನು ತಿದ್ದುವೆವೆಂದು ಹೋಗುವವರು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ. ಇಂದು ನಾನು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸ ಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ನಾನು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇನೆ" ಎಂದು ಹೇಳುತ್ತಾರೆ. ಆದರೆ ಕುವೆಂಪು ದೃಷ್ಟಿಯಲ್ಲಿ 'ಶಂಭೂಕ ವಧೆ' ಪ್ರಸಂಗ ವಾಲ್ಮೀಕಿ ಸೃಷ್ಟಿಯಲ್ಲ. ಯಾರೋ ಕುಕವಿಗಳು ಸೇರಿಸಿದ ಪ್ರಕ್ಷಿಪ್ತ.

ಕುವೆಂಪು ತಮ್ಮ ಕೃತಿಗಳ ಬಗೆಗೆ ಬಂದ ವಿಮರ್ಶೆಗಳಿಗೆ ಉತ್ತರಿಸಿದ್ದು ಕೇವಲ ಒಂದೇ ಒಂದು ಬಾರಿ ; ಅದು 'ಶೂದ್ರ ತಪಸ್ವಿ'ಯ ಬಗೆಗೆ ಮಾಸ್ತಿಯವರು ಬರೆದ ವಿಮರ್ಶೆಗೆ ಮಾತ್ರ. ಪುಟ್ಟಪ್ಪನವರ ಮಾರುತ್ತರ ನೋಡಿ: "ಈ ಟೀಕೆ ಮತ್ತು ಸೂಚನೆ ಅತ್ಯಂತ ಆಶ್ಚರ್ಯಕರವೂ ಹಾಸ್ಯಾಸ್ಪದವೂ ಆಗಿ ತೋರುತ್ತದೆ. 'ಅತ್ತ ಪುಲಿ ಇತ್ತ ದರಿ!' ಹೊಸ ಕಾಲದ ಹೊಸ ಧರ್ಮವನ್ನು ಹೇಳಲು ಹೊಸ ಕತೆಯನ್ನು ಕಟ್ಟಿದರೆ ಸಜೀವವಾಗಿ ವಿದ್ವೇಷದ ಉದ್ರೇಕ ಭೂತಗಳನ್ನು ಎಬ್ಬಿಸುತ್ತದೆ. ಆ ಸ್ಥಳದವರೂ, ಈ ಮಠದವರೂ, ಆ ಜಾತಿಯವರೂ, ಆ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೇ ಬೇಡವೆಂದು ಹಳೆಯ ಕಥೆಗಳನ್ನು ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ ಕ್ಷೇಮದ ವಿಚಾರವಾಗಿ ಕಾತರರಾಗಿ ಸೂಚನೆ ಕೊಡ ಹೋಗುತ್ತಾರೆ" ಎಂದಿರುವರು.

ಮಾಸ್ತಿಯವರು ಮೂಲ ಕಥೆಯನ್ನು ಗ್ರಹಿಸುವ ನೆಲೆಯೇ ಬೇರೆ. ಅದು ಸನಾತನವಾದದ್ದು. "ಉತ್ತರ ಕಾಂಡದಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣ ವ್ಯವಸ್ಥೆಯನ್ನು ಕುರಿತು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು ಜಾತಿ ಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ" ಎಂದು ಆಕ್ಷೇಪಿಸಿರುವರು.

ಇದಕ್ಕೆ ಕುವೆಂಪು ಅವರ ಸಮಾಧಾನ ಹೀಗೆ: "ಅವಿವೇಕ ತೀವ್ರವಾದ ಶ್ರದ್ಧೆಯಾದರೂ ಅವಿವೇಕವಾಗಿಯೇ ನಿಲ್ಲುತ್ತದೆ. ಆದ್ದರಿಂದ ತನ್ನ ಶ್ರದ್ಧಾಂಶದಲ್ಲಿ ಅಲ್ಲದಿದ್ದರೂ ಅವಿವೇಕಾಂಶದಲ್ಲಿ ತಿದ್ದುಪಡಿ ಪಡೆಯಬೇಕಾದುದೇ ಅತ್ಯಂತ ಅಗತ್ಯ".

ವರ್ಣಾಶ್ರಮ ವ್ಯವಸ್ಥೆಯಲ್ಲಿ ಮಾಸ್ತಿಯವರು ಅಚಲ ನಂಬಿಕೆಯನ್ನು ಹೊಂದಿದ್ದರು. ಇದಕ್ಕೆ 'ಜೀವನ'ದಲ್ಲಿ ಅವರು ಬರೆದ ಸಂಪಾದಕೀಯದಿಂದ ಉದಾಹರಣೆಗಳನ್ನು ನೀಡಬಹುದು. "ಬ್ರಾಹ್ಮಣ ಜಾತಿಯನ್ನು ಮೊದಲ ವರ್ಣ ಎಂದದ್ದು ಬ್ರಾಹ್ಮಣ ದುರಹಂಕಾರಿಯಾಗಲಿ ಎಂಬ ಅಪೇಕ್ಷೆಯಿಂದ ಅಲ್ಲ. ಯಾವುದೋ ಒಂದು ದೊಡ್ಡ ಗುರಿಯನ್ನು ಸಾಧಿಸುವುದಕ್ಕಾಗಿ, ಸಮಾಜದ ವರ್ಣ ವ್ಯವಸ್ಥೆಯನ್ನು ಆ ಉದ್ದೇಶಗಳ ಸಾಧನೆಗೆ ಸಹಾಯವಾಗುವಂತೆ ತಿದ್ದುವುದು ಪ್ರಾಜ್ಞ ಹಿಂದೂ ಮಹನೀಯರ ಇಂದಿನ ಕರ್ತವ್ಯ. ಜಾತಿಯೆನ್ನುವುದು ನಮ್ಮಲ್ಲಿ ಏರ್ಪಟ್ಟಿದ್ದು ಬೇರೆ ಬೇರೆ ರೀತಿಯ ಅನ್ನ, ವಸನ, ಆಚಾರದ ಜನ ಪರಸ್ಪರ ಸಹನೆಯಿಂದ ಮೈತ್ರಿಯಿಂದ ಬಾಳುವುದು ಸಾಧ್ಯವಾಗಲಿ ಎಂಬ ದೃಷ್ಟಿಯಿಂದ.

ಬಹುರೀತಿಯ ಜನ ತಮ್ಮ ತಮ್ಮ ರೀತಿಯಲ್ಲಿ ಬಾಳುತ್ತ ಹಿಂದೂ ಧರ್ಮದ ಮಕ್ಕಳಾಗಿ ಬಾಳಬೇಕು. ಇದು ಇಂದಿನ ಗುರಿ.'

'ಮದ್ರಾಸಿನ ಜಸ್ಟಿಸ್ ಪಕ್ಷ ಆಂಗ್ಲರ ಉಪದೇಶ ಕೇಳಿ ಬ್ರಾಹ್ಮಣರ ಮೇಲೆ ದ್ವೇಷ ಮಾಡಿ ಹಿಂದೂ ಧರ್ಮ ನಾಶಕ್ಕೆ ನಾಂದಿ ಹೇಳಿ ಈಗ ಹತ್ತಿರ ಹತ್ತಿರ ಐವತ್ತು ವರ್ಷ ಆಗಿದೆ. ವಿಷ ವೃಕ್ಷವನ್ನು ನೆಟ್ಟ ಜಸ್ಟಿಸ್ ಪಕ್ಷ ಈಗ ಇಲ್ಲ. ಆದರೆ ಈ ವೃಕ್ಷ ಬಿಟ್ಟ ಫಲ ದ್ರಾವಿಡ ಕಳಗಂ, ದ್ರಾವಿಡ ಮುನ್ನೇತ್ರ ಕಳಗಂ, ರಾಮಸ್ವಾಮಿ ನಾಯಕರು, ಇವರಂಥ ಇತರ ಜನ....'

'ನಮ್ಮ ಧರ್ಮದ ವರ್ಣ ವ್ಯವಸ್ಥೆಯನ್ನು ನಮ್ಮ ಸಂಸ್ಕೃತಿ ಉಳಿಸುವ ಒಂದು ಮುಖ್ಯ ಸಾಧನವಾಯಿತು ಎಂದು ನಮಗೆ ಕಾಣುತ್ತದೆ. ಇದು ಹಿಂದೂ ಧರ್ಮದಲ್ಲಿ ಒಂದು ದೋಷ ಎಂದು ಹೇಳಲಾರೆವು. ವರ್ಣವ್ಯವಸ್ಥೆಯು ದೋಷ ಎಂಬ ನಿರ್ಣಯಕ್ಕೂ ನಾವು ಬರಲಾರೆವು'."[೫೬]

ಈ ಮಾತುಗಳನ್ನು ನಾವು 'ಶೂದ್ರ ತಪಸ್ವಿ' ಕುರಿತ ವಾಗ್ವಾದದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಮಾಸ್ತಿಯವರ ಧೋರಣೆ ಇನ್ನಷ್ಟು ಸ್ಪಷ್ಟವಾಗುತ್ತದೆ.

'ಜೀವನ'ದಲ್ಲಿ ಆ ಬಳಿಕ ಅನೇಕರು ಪರ ವಿರುದ್ಧ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅನ್ಯ ಪತ್ರಿಕೆಗಳಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ. ಪುರಾಣ ಪ್ರತಿಮೆಗಳನ್ನು ಸಮಕಾಲೀನ ಸಂದರ್ಭದಲ್ಲಿ ಮುಖಾಮುಖಿಯಾಗಿಸುವ ಮೂಲಕ ಕುವೆಂಪು ಹೊಸಗನ್ನಡ ಸಾಹಿತ್ಯದಲ್ಲಿ ಹೊಸ ಮಾರ್ಗವನ್ನು ತೆರೆಯುತ್ತಾರೆ. ಪುರೋಹಿತಶಾಹಿ ಸಂಸ್ಕೃತಿಗೆ ಶೂದ್ರ ಪ್ರಜ್ಞೆಯ ಪ್ರತಿಕ್ರಿಯೆ ಇದು. ಪುರಾತನ ಕಥೆಯನ್ನು ಸಮಕಾಲೀನ ಸಂದರ್ಭದೊಂದಿಗೆ 'ತಗುಲ್ಚಿ' ಹೇಳುವ ಕ್ರಮ ಪಂಪನಷ್ಟೇ ಹಳೆಯದು. ಹೊಸಗನ್ನಡದಲ್ಲಿ ಕುವೆಂಪು ಇದನ್ನು ಸಾಮಾಜಿಕ ಬದಲಾವಣೆಯ ಸಾಧನವಾಗಿ ಬಳಸುತ್ತಾರೆ ಎನ್ನುವುದು ಮಹತ್ವದ ಅಂಶ. ಪೌರಾಣಿಕ, ಐತಿಹಾಸಿಕ ಪ್ರಸಂಗಗಳನ್ನು ಆಧುನಿಕ ನೆಲೆಯಲ್ಲಿ ಪುನರ್‌ಸೃಷ್ಟಿ ಮಾಡುವ ಪರಂಪರೆ ನಂತರ ಕನ್ನಡದಲ್ಲಿ ಬೆಳೆಯಿತು. ದೇಶ ಬ್ರಿಟಿಷರಿಂದ ಸ್ವತಂತ್ರವಾಗಬೇಕು ಎಂದು ಬಯಸುತ್ತಿದ್ದ ಕಾಲದಲ್ಲೇ ಕುವೆಂಪು ಸಾಮಾಜಿಕವಾಗಿ ಬ್ರಿಟಿಷರ ಆಗಮನದಿಂದ ದೇಶಕ್ಕೆ ಒಳ್ಳೆಯದೇ ಆಯಿತು ಎಂದು ತಿಳಿದವರು. 'ರಾಷ್ಟ್ರಕವಿ ಸಂದರ್ಶನ'ದಲ್ಲಿ ಕುವೆಂಪು ವ್ಯಕ್ತಪಡಿಸಿದ ಅಭಿಪ್ರಾಯಗಳು ಸ್ಫೋಟಕ ವೆನಿಸುವಂಥದ್ದು. "ಬ್ರಿಟಿಷರು ಬಂದುದರಿಂದಲೇ ಎಲ್ಲರಿಗೂ ವಿದ್ಯಾಭ್ಯಾಸ ಕೊಟ್ಟರು. ಇದರಿಂದಾಗಿ ನಮ್ಮಲ್ಲಿ ಆತ್ಮಾಭಿಮಾನವಾದರೂ ಮೂಡಿತು. ಪ್ರತಿಭಟಿಸುವಂಥ ಶಕ್ತಿಯಾದರೂ ಬಂದಿತು. ಅವರು ಬರದಿದ್ದರೆ ನಾನು ಎಲ್ಲಿರುತ್ತಿದ್ದೆ ಗೊತ್ತೇನು? ನಾನು ಕುಪ್ಪಳ್ಳಿಯಲ್ಲಿ ಸಗಣಿ ಹೊತ್ಕೊಂಡು,

---

೫೬. ಮಾಸ್ತಿ ವೆಂಕಟೇಶ ಅಯ್ಯಂಗಾರ್: ಜೀವನ ಸಂಪಾದಕೀಯ ೧ ಮತ್ತು ೨: ೧೯೬೭.

ಯಾರಾದ್ರೂ, ಒಬ್ಬ ಹಾರುವನ ಜಮೀನಿನಲ್ಲಿ ಕೆಲಸ ಮಾಡ್ಕೊಂಡು ಇರುತ್ತಿದ್ದೆ" ಎಂದಿದ್ದಾರೆ. "ಆಂಗ್ಲರು ಬರದಿದ್ದರೆ ಶೂದ್ರರು ಮನು ಧರ್ಮಶಾಸ್ತ್ರವನ್ನು ಪೂಜಿಸುತ್ತ ವರ್ಣವ್ಯವಸ್ಥೆಯನ್ನಪ್ಪಿಕೊಂಡು, ಜಾತೀಯತೆಯ ಕೆಸರಲ್ಲಿ ಒದ್ದಾಡುತ್ತ ನಾಯಿ ನರಿಗಳಿಗೂ ಕಡೆಯಾಗಿ ಬಾಳು ಸಾಗಿಸಬೇಕಾಗುತ್ತಿತ್ತು. ಅಸ್ಪೃಶ್ಯತಾ ನಿವಾರಣೆಯ ಪ್ರಯತ್ನವೂ ಸಾಧ್ಯವಾಗುತ್ತಿರಲಿಲ್ಲ. ಹೀಗಿರುವಾಗ ಪಾಶ್ಚಾತ್ಯ ಸಾಹಿತ್ಯದ ಹಿಡಿತದಿಂದ ತಪ್ಪಿಸಿಕೊಳ್ಳುತ್ತೇನೆನ್ನುವುದು ಕೂಪಮಂಡೂಕ ಪ್ರವೃತ್ತಿಯಾಗುತ್ತದೆ" ಎಂದು ಹೇಳುತ್ತಾರೆ. ಈ ಕಾರಣಕ್ಕಾಗಿಯೇ ಕುವೆಂಪು ಬಂಡಾಯ ಸಾಹಿತಿಗಳಿಗೂ ಪ್ರಿಯರಾಗಿದ್ದಾರೆ. ಬಂಡಾಯದ ಸಂದರ್ಭದಲ್ಲಿ ಕುವೆಂಪು ಅವರ ಕೃತಿಗಳ ಪುನರ್ ಮೌಲ್ಯೀಕರಣ ನಡೆಯಿತು.

ಇಷ್ಟೊಂದು ಉಗ್ರ, ವಿಚಾರವಾದಿಯಾದ ಕುವೆಂಪು ನವೋದಯ ವಿಮರ್ಶೆಗೆ ಒಂದು ಹೊಸ ರೂಪವನ್ನು ಕೊಡಬಹುದಿತ್ತು. ಅವರ ಕೃತಿಗಳಲ್ಲಿ ಕಂಡು ಬಂದ ಈ ಪ್ರಖರವಾದ ವೈಚಾರಿಕತೆ ವಿಮರ್ಶೆಯಲ್ಲಿ ಕಂಡುಬರುವುದಿಲ್ಲ. ಇದಕ್ಕೆ ವಸಾಹತುಶಾಹಿಯೇ ಕಾರಣ ಎನ್ನಬೇಕು. ವಿಮರ್ಶೆ ಕೂಡ ರಾಜಕೀಯ ಗುಪ್ತ ಅಸ್ತ್ರವೇ ಆಗಿತ್ತು ಆಗ. ಎರಡು ಸಂಸ್ಕೃತಿಗಳ ಮುಖಾ ಮುಖಿಯಲ್ಲಿ ನಮ್ಮ ನೆಲದ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕಾಗಿತ್ತು. ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣದ ಬಯಕೆಯು ಸಂಸ್ಕೃತಿಯ ಪುನರುಜ್ಜೀವನದ ಅಂಶವಾಗಿ ಮೈ ತಳೆಯುತ್ತದೆ. ಸಂಸ್ಕೃತಿಯ ಪುನರುಜ್ಜೀವನದ ಸಾಧನ ಸಾಹಿತ್ಯ. ಅದಕ್ಕಾಗಿ ಸಾಹಿತ್ಯ ಜನರನ್ನು ತಲುಪಬೇಕು ಎನ್ನುವುದು ಸಾಹಿತಿಗಳ ಕಾಳಜಿಯಾಯಿತು. ಈ ಸಾಹಿತ್ಯ ಜನರಿಗೆ ಅರ್ಥವಾಗಬೇಕು ಎಂದಾಗ ಅದು ವ್ಯಾಖ್ಯಾನಮುಖಿಯಾಯಿತು.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ನೀಡಬೇಕು ಎಂಬ ನವೋದಯದ ಕಳಕಳಿಗೆ ಅನುಗುಣವಾಗಿಯೇ ಅಂದಿನ ವಿಮರ್ಶೆ ಮೈದಾಳಿದೆ. ಒಳ್ಳೆಯದು ಎನ್ನುವಾಗ ಕೆಟ್ಟದ್ದು ಇರಬೇಕಲ್ಲವೆ? ಈ ಒಳ್ಳೆಯ ಮತ್ತು ಕೆಟ್ಟ ಸಾಹಿತ್ಯದ ಪರಿಕಲ್ಪನೆ ನವೋದಯದ ವಿಮರ್ಶಕರಿಗೆ ಇದ್ದಿತ್ತು. ಒಳ್ಳೆಯದನ್ನು ಅವರು ಮಾರ್ಗ ಸಾಹಿತ್ಯ ಎಂದು ಕರೆದರು. ಈ ಕಪ್ಪು ಬಿಳುಪಿನ ಪರಿಕಲ್ಪನೆ ಅಥವಾ 'ಜನರ ಅಭಿರುಚಿಯನ್ನು ತಿದ್ದುವ ಸಾಹಿತ್ಯ'ದಂಥ ಮಾತು ಸಾಹಿತ್ಯ ವಿಮರ್ಶೆಯಲ್ಲಿ ಸಹಜವಾಗಿ ಹುಟ್ಟುವುದಿಲ್ಲ. ಇದಕ್ಕೆ ಅಂದಿನ ಚಾರಿತ್ರಿಕ ಮತ್ತು ಸಾಮಾಜಿಕ ಅಂಶಗಳು ಕಾರಣವಾಗುತ್ತವೆ. ಈ ಮಾತನ್ನು ಹೇಳುವಾಗ ಮತ್ತೆ ನಾವು ಪಾರತಂತ್ರ್ಯ, ಏಕೀಕರಣಗಳ ಕಡೆಗೇ ಹೊರಳುತ್ತೇವೆ. ನವೋದಯದ ಪ್ರಮುಖ ವಿಮರ್ಶಕರಾದ ಮಾಸ್ತಿ, ಕುವೆಂಪು ಮೊದಲಾದವರೆಲ್ಲ ವಸಾಹತುಶಾಹಿಯ ಕಪಿಮುಷ್ಟಿಯಿಂದ ಹೊರಬರಬೇಕು ಎಂಬ ತಾತ್ವಿಕ ನಿಲುವನ್ನು ಹೊಂದಿದವರಾಗಿದ್ದರು. ಹೀಗಾಗಿ ಪರಂಪರಾನುಗತ ಮೌಲ್ಯಗಳ ಬಗ್ಗೆ ಶ್ರದ್ಧೆ, ಗೌರವ, ಪ್ರಶಂಸೆಯನ್ನು ಅವರು ತಳೆದರು. ಹೀಗೆಂದ ಮಾತ್ರಕ್ಕೆ ಅವರು ಬರೆದ ಸಹೃದಯ ವಿಮರ್ಶೆ ಪ್ರತಿಗಾಮಿಯಾದದ್ದು

ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಅದು ಪ್ರಜ್ಞಾಪೂರ್ವಕವಾಗಿ ಹೊಂದಿದ್ದು ಅಲ್ಲ. ಸಮಾಜದಲ್ಲಿಯ ಕ್ರೌರ್ಯ, ಶೋಷಣೆಗಳ ಬಗೆಗೆ ಅವರು ಅನುಕಂಪವನ್ನು ವ್ಯಕ್ತಪಡಿಸಬಲ್ಲವರಾಗಿದ್ದರು.

ನವೋದಯ ಸಾಹಿತಿಗಳಿಗೆ ವಿಮರ್ಶಕರ ಬಗೆಗೆ ಇದ್ದ ಧೋರಣೆಯ ಬಗ್ಗೆ ಇಲ್ಲಿ ಎರಡು ಮಾತನ್ನು ಹೇಳಬೇಕು. ನವೋದಯ ಸಾಹಿತಿಗಳು ವಿಮರ್ಶನ ಪ್ರತಿಭೆ ತಮಗೆ ಸಮನಾದುದು ಎಂದು ಪರಿಗಣಿಸಿದವರಲ್ಲ. ಕಾರಯಿತ್ರೀ ಪ್ರತಿಭೆ ಭಾವಯಿತ್ರೀ ಪ್ರತಿಭೆಗೆ ಅಡಿಯಾಳಾದುದು ಎಂಬುದು ಅವರ ಅವರ ಅಭಿಪ್ರಾಯ. ಈ ಕಾರಣಕ್ಕಾಗಿಯೇ ನವೋದಯ ವಿಮರ್ಶೆಯ ತತ್ತ್ವಗಳಲ್ಲಿ ಕವಿಗೆ ಎಲ್ಲಿದ ಮಹತ್ವ ಪ್ರಾಪ್ತವಾಗಿದೆ. ಕವಿಯೆಂದರೆ ಒಬ್ಬ ತತ್ವಜ್ಞಾನಿ, ಸಂತ, ದಾರ್ಶನಿಕ ಎಂದೆಲ್ಲ ಭಾವಿಸಲಾಗಿದೆ. ಕವಿಗಳಿಗೆ ಪ್ರತಿಭೆ ಮಹತ್ವದ್ದು ಎಂದು ತಿಳಿಯುವ ನವೋದಯ ಸಾಹಿತಿಗಳು ವಿಮರ್ಶನ ಪ್ರತಿಭೆಯನ್ನು ಕವಿ ಪ್ರತಿಭೆಗೆ ಸಮನಾದುದು ಎಂದು ಪರಿಗಣಿಸುವುದೇ ಇಲ್ಲ. ಅದಕ್ಕಾಗಿಯೇ ಕುವೆಂಪು ಅವರು 'ನಾನೇರುವೆತ್ತರಕ್ಕೆ ನೀನೇರ ಬಲ್ಲೆಯಾ?' ಎಂದು ವಿಮರ್ಶನ ಪ್ರತಿಭೆಗೆ ಸವಾಲು ಎಸೆಯುತ್ತಾರೆ. 'ಅಲ್ಲಿ ಹುಗಲಿಲ್ಲ ಓ ಬಿಯದ ಅದು ಪಕ್ಷಿಕಾಶಿ' ಎಂದು ಹೇಳುತ್ತಾರೆ. ವಿಮರ್ಶಕನೆಂದರೆ ಅವರ ದೃಷ್ಟಿಯಲ್ಲಿ ಕರುಣೆಯಿಲ್ಲದೆ ಕೊಲ್ಲುವ ಬೇಡನಾಗಿಬಿಡುತ್ತಾನೆ. ಹೀಗಾಗಿ ಸ್ವತಃ ಕುವೆಂಪು ಅವರೇ ಬರೆದ ವಿಮರ್ಶೆಯೂ ವ್ಯಾಖ್ಯಾನಮುಖಿಯಾಗಿದೆ. ಕಾವ್ಯಮೀಮಾಂಸೆಯ ತತ್ವಗಳನ್ನು ಅನ್ವಯಿಸಿ ರಸ ಸ್ಥಾನಗಳನ್ನು ಗುರುತಿಸುವುದಾಗಿಬಿಟ್ಟಿದೆ. ಇದು ನವೋದಯ ವಿಮರ್ಶೆಯ ಮಿತಿಯೂ ಆಗಿದೆ.

ಕವಿ ಪಾರಮ್ಯಕ್ಕೆ ಪ್ರಶ್ನೆ: ನವೋದಯ ವಿಮರ್ಶೆಯಲ್ಲಿ ಕವಿಗಿರುವ ಪಾರಮ್ಯವನ್ನು ವಿ.ಕೃ.ಗೋಕಾಕರು ಪ್ರಶ್ನಿಸುತ್ತಾರೆ. ೧೯೩೧ರಲ್ಲಿ 'ಜಯಕರ್ನಾಟಕ'ದಲ್ಲಿ 'ವಿಮರ್ಶೆಯ ರೀತಿ-ನೀತಿಗಳು' ಕುರಿತು ಬರೆಯುವ ಗೋಕಾಕರು "ಸಾಹಿತ್ಯ ಸಾಮ್ರಾಟರು ಇಲ್ಲದಾಗಲು ಪಾಳೆಯಗಾರರೆ ರಾಜಾಧಿರಾಜರಂತೆ ವರ್ತಿಸುವರು. ತಾವು ಸರಸ್ವತೀ ದೇವಿಯ ಪುತ್ರರಲ್ಲ, ಪತಿಗಳೆಂದು ತಿಳಿದುಕೊಳ್ಳುವರು. ಆಗ 'ನೀವು ಸಾಮ್ರಾಟರಲ್ಲ, ಪಾಳೆಯಗಾರರೆಂ'ದು ವಿಮರ್ಶಕನು ನಿರ್ಭೀತನಾಗಿ ಹೇಳುವನು. ಪ್ರತ್ಯುತ್ತರವೆಂದು ಆ ನಾಯಕರು ಅವನನ್ನು ಕೊಲ್ಲಬಹುದು. ಆದರೆ ಸತ್ಯವನ್ನು ಕೊಲ್ಲಬಹುದೆ? ಅದರಂತೆ ಕೆಲವು ಸಾಹಿತಿಗಳು ಕೀರ್ತಿವಂತರಾಗಿ ತಾವು ಉಸಿರಿದ್ದೇ ವೇದವೆಂದು ಭಾವಿಸುತ್ತಿರಬಹುದು.ಆಗ ಅವರ ಉಸಿರಿನಲ್ಲಿ ವೇದವು ಎಲ್ಲಿ ಲೋಪವಾಗಿದೆಯೆಂಬುದನ್ನು ವಿಮರ್ಶಕನು ವಿಂಗಡಿಸಿ ತೋರಿಸುವನು. ಇದಕ್ಕೆ ಪ್ರತಿಯಾಗಿ ಅವರು ವಿಮರ್ಶಕನನ್ನು ಹೀಯಾಳಿಸಬಹುದು, ಹಳಿಯ ಬಹುದು, ಹೂಳಬಹುದು. ಆದರೆ ಸತ್ಯವನ್ನು ಹೂಳಬಹುದೆ?" ಎಂದು ಪ್ರಶ್ನಿಸುತ್ತಾರೆ.

ವಿಮರ್ಶಕ ಅಪ್ರಿಯ ಸತ್ಯವಾದಿ ಎನ್ನುವ ಗೋಕಾಕರು, ಹೊಗಳಿಸಿಕೊಂಡು

ದಡ್ಡುಬಿದ್ದಿರುವ ಕೆಲವರಿಗೆ ತಮ್ಮ ಗ್ರಂಥಗಲ್ಲಿ ದೋಷಗಳಿವೆಯೆಂದರೆ ಅವರಿಗೆ ಸಹನವಾಗುವುದಿಲ್ಲ ಎನ್ನುತ್ತಾರೆ. ವಿಮರ್ಶಕನು ಪ್ರಿಯನಾಗಬಹುದು; ಇಲ್ಲವೆ ಅಪ್ರಿಯನಾಗಬಹುದು; ಆದರೆ ವಿಮರ್ಶಕನು ಸತ್ಯವಾದಿ ಎಂಬುದು ಅವರ ದೃಢವಾದ ಮಾತು.

ನವೋದಯ ಸಾಹಿತ್ಯ ತನ್ನ ಕಾಲದ ಒತ್ತಡಕ್ಕೆ ಅನುಗುಣವಾಗಿ ಪ್ರೇರಣೆ ಪಡೆದು ಅದಕ್ಕೆ ತಕ್ಕ ಅಭಿವ್ಯಕ್ತಿಯನ್ನು ಪಡೆಯಿತು. ಆ ಕಾಲದ ಸಾಹಿತಿಗೆ ಮಾರ್ಗಸೂಚಕ ತೋರುಬೆರಳಾಗಿ ಪತ್ರಿಕೆಗಳು ಕೆಲಸ ಮಾಡಿದವು. ಪತ್ರಿಕೆಗಳು ತಂದ ಒತ್ತಡದಲ್ಲಿ ನವೋದಯ ಸಾಹಿತ್ಯ ಯಾವ ರೂಪವನ್ನು ಪಡೆದುಕೊಂಡವು ಎಂಬುದನ್ನು ಗಮನಿಸಿದೆವು. ಸಾಹಿತ್ಯ ನಿರ್ಮಿತಿಗೆ ದಾರಿ ತೋರಿದ್ದು ಮಾತ್ರವಲ್ಲದೆ ನಿರ್ಮಿತ ಸಾಹಿತ್ಯವನ್ನು ತೂಗಿ ನೋಡಿ ಬೆನ್ನುತಟ್ಟಿತು, ಬಳಿಕ ಬೆಲೆಗಟ್ಟಿತು. ಇದುವರೆಗಿನ ವಿವರಣೆಗಳನ್ನು ಗಮನಿಸಿದಾಗ ನವೋದಯ ಸಾಹಿತ್ಯ ರೂಪುಪಡೆಯುವಲ್ಲಿ ಪತ್ರಿಕೆಗಳು ಮಾಡಿದ ಕಾರ್ಯ ಮನದಟ್ಟಾಗದೆ ಇರದು.

ಈ ಸಂದರ್ಭದಲ್ಲಿ ನಮೂದಿಸಬೇಕಾಗಿರುವ ಇನ್ನೊಂದು ಮಹತ್ವದ ವಿಷಯವೆಂದರೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ರೂಪವನ್ನು ನೀಡಿದ ಸಾಹಿತ್ಯಕ ಚರ್ಚೆ; ಅದು ಪ್ರಾಸ ಸಂಬಂಧಿಯಾದುದು. ಪದ್ಯ ರಚನೆಗೆ ತೊಡಕು ಎನಿಸಿದ್ದ ಪ್ರಾಸ ತ್ಯಾಗ ಹೊಸಗನ್ನಡ ಕವಿತೆಯಲ್ಲಿ ಒಂದು ಹೊಸ ತಿರುವು. ಒಂದು ಹೊಸ ಬೆಳವಣಿಗೆ. ಈ ಬೆಳವಣಿಗೆಯಲ್ಲಿ ಪತ್ರಿಕೆಗಳು ನಿರ್ಣಾಯಕ ಪಾತ್ರವನ್ನು ವಹಿಸಿವೆ. ಪತ್ರಿಕೆಗಳು ಅಂದು ನಿರ್ವಹಿಸಿದ ನಿರ್ಣಾಯಕ ಪಾತ್ರದಿಂದಾಗಿಯೇ ಹೊಸಗನ್ನಡ ಕವಿತೆಯಲ್ಲಿ ಪ್ರಾಸ ಬಿಟ್ಟು ಹೋಯಿತು. ಅದೇ ರೀತಿ ಅನುವಾದಗಳ ಸಂಬಂಧದಲ್ಲಿ ನಡೆದ ಚರ್ಚೆಯೂ ಅಷ್ಟೇ ಮಹತ್ವದ್ದು. ಹೊಸಗನ್ನಡ ಸಾಹಿತ್ಯದ ಆರಂಭದ ಕಾಲವನ್ನು ಬಿ.ಎಂ.ಶ್ರೀಯವರು ಅನುವಾದ ಯುಗವೆಂದೇ ಕರೆದಿದ್ದರು. ಇದರಿಂದ ಅನುವಾದದ ಮಹತ್ವ ಅರಿವಾಗುವುದು. ಆ ಅನುವಾದ ಹೇಗಿರಬೇಕು, ಹೇಗಿರಬಾರದು ಎಂಬ ಚರ್ಚೆಯೂ ಮಹತ್ವದ್ದೇ.

ಪ್ರಾಸ ತ್ಯಾಗ:

ನವೋದಯದ ಸಂದರ್ಭದಲ್ಲಿ ಇಡೀ ಹೊಸಗನ್ನಡ ಸಾಹಿತ್ಯಕ್ಕೇ ಹೊಸ ದಿಕ್ಕನ್ನು ನೀಡಿದ ವಾಗ್ವಾದವೊಂದು ಪತ್ರಿಕೆಗಳಲ್ಲಿ ನಡೆದು ಹೊಸ ಮಾರ್ಗವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಯಿತು. ಅದು ಪ್ರಾಸ ತ್ಯಾಗ ಕುರಿತ ವಾಗ್ವಾದ. ವಾಗ್ವಾದಗಳಿಂದ ಯಾವುದೇ ವಿಷಯವು ನಿಕಷಕ್ಕೆ ಸಿಲುಕಿ ಇನ್ನಷ್ಟು ಪರಿಷ್ಕಾರಕ್ಕೆ ಒಳಗಾಗುತ್ತದೆ. ವಾಗ್ವಾದಗಳು ಭಾಷೆಯ ಜೀವಂತಿಕೆಯನ್ನು ತೋರಿಸುತ್ತವೆ. ಇಂಥ ವಾಗ್ವಾದಗಳಿಗೆ ಸಾಹಿತ್ಯಪತ್ರಿಕೆಗಳು ಯಾವತ್ತೂ ವೇದಿಕೆಯಾಗುತ್ತಲೇ ಬಂದಿವೆ. ಕನ್ನಡದಲ್ಲಿ ಹೊಸ ಕಾವ್ಯ ಹುಟ್ಟು ಪಡೆದುಕೊಳ್ಳುತ್ತಿದ್ದಾಗ ನಡೆದ ಪ್ರಾಸ ಸಂಬಂಧಿ ವಾಗ್ವಾದ ಹೊಸ ಕಾವ್ಯಮಾರ್ಗದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವುದಕ್ಕೆ ಕಾರಣವಾಯಿತು.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಕೋಲಾಹಲ ಪ್ರಾಸಕ್ಕೆ ಸಂಬಂಧಿಸಿದ್ದು. ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ಈ ಪ್ರಾಸವನ್ನು ಬಿಡುವುದು ಅಷ್ಟು ಸುಲಭ ಇರಲಿಲ್ಲ. ಈಬಗ್ಗೆ ಆಗಿನ ಕಾಲದ ಪತ್ರಿಕೆಗಳಲ್ಲಿ ಸುದೀರ್ಘವಾದ ಚರ್ಚೆ ನಡೆದಿದೆ. ದ್ವಿತೀಯಾಕ್ಷರ ಪ್ರಾಸವನ್ನು ಅನುಸರಿಸುವುದರಿಂದ ಏನು ತೊಂದರೆಗಳು ಇವೆ, ಅದನ್ನು ತ್ಯಾಗ ಮಾಡುವುದರಿಂದ ಕಾವ್ಯಕ್ಕೆ ಏನು ಲಾಭ ಇತ್ಯಾದಿ ಸ್ವಾರಸ್ಯಕರ ವಾಗ್ವಾದವನ್ನು ಇಲ್ಲಿ ಅವಲೋಕಿಸಲಾಗಿದೆ.

ಪ್ರಾಸ ಪಾಲನೆಯಲ್ಲಿ ರಳ-ಕುಳ-ಕ್ಷಳದ ಗೊಂದಲವನ್ನು ಹರಿಹರ ನಿವಾರಿಸಿಕೊಂಡಾಗಲೂ ಇಂಥ ಪ್ರತಿಭಟನೆ ವ್ಯಕ್ತವಾಗಿದ್ದಿರಬಹುದು. ಆಧುನಿಕ ಕನ್ನಡದಲ್ಲಿ ಎಂ.ಗೋವಿಂದ ಪೈಯವರು ಪ್ರಾಸ ರಹಿತ ಪದ್ಯ ಬರೆಯುವುದಕ್ಕೆ ಮನಸ್ಸು ಹೊಂದಿದ್ದರು. ಅಂತ್ಯಪ್ರಾಸವನ್ನು ಬಿಟ್ಟು ಬರೆಯುವುದೆಂದರೆ 'ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲಿ ಕೈಯಿಕ್ಕುವ' ಸಾಹಸವಾಗಿ ಗೋವಿಂದಪೈಯವರಿಗೆ ಕಂಡಿತ್ತು. ಗೋವಿಂದ ಪೈಯವರು ಪ್ರಾಸವನ್ನು ಬಿಡುವ ಸಂಬಂಧ ಪಂಜೆ ಮಂಗೇಶರಾಯರ ಅಭಿಪ್ರಾಯವನ್ನು ಕೇಳುವರು. ಅವರಿಂದ ಉತ್ಸಾಹಜನಕ ಪ್ರತಿಕ್ರಿಯೆ ದೊರೆಯಲಿಲ್ಲ.

"೧೯೦೦ರ ವೇಳೆಗೇ ಪೈಯವರಲ್ಲಿ ಪ್ರಾಸ ತ್ಯಾಗದ ಯೋಚನೆ ಅಂಕುರಿಸಿದುದೇ ಅಚ್ಚರಿಯೆನಿಸುವುದು. ೧೯೦೨ನೆಯ ಆಗಸ್ಟ್ ತಿಂಗಳ 'ಸುವಾಸಿನೀ' ಪತ್ರಿಕೆಯಲ್ಲಿ ಪ್ರಕಟವಾದ ಪೈ ಅವರ 'ಕಾಲಿಯ ಮರ್ಧನ' ಆರು ಕಂದ ಪದ್ಯಗಳನ್ನೊಳಗೊಂಡುದು, ಇಲ್ಲಿ ಪ್ರಾಸವಿದೆ. (ಈ ಕವಿತೆ ಅವರ 'ಗಿಳಿವಿಂಡು' ಸಂಗ್ರಹದಲ್ಲಿ ಸೇರಿಲ್ಲ.) ಅನಂತರ ೧೯೦೩ರಿಂದ ೧೯೧೦ರ ತನಕವೂ ಅವರು ಪ್ರಾಸವನ್ನು ಇಟ್ಟೂ ಬಿಟ್ಟೂ ಬರೆಯುತ್ತಿದ್ದರು", ಎಂದು ಎಸ್.ಅನಂತನಾರಾಯಣ ಹೇಳಿರುವರು.[೫೭]

೫೭.ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ- ಪುಟ- ೩೮ -೩೯

ತಾವು ಪ್ರಾಸ ಬಿಟ್ಟ ಸಂದರ್ಭವನ್ನು ಗೋವಿಂದ ಪೈಗಳು ವರ್ಣಿಸುವುದು ಹೀಗೆ, "೧೯೧೧ನೆಯ ಎಪ್ರಿಲ್ ತಿಂಗಳಿನಲ್ಲಿ ನಾನು ಸುಮಾರು ಒಂದು ತಿಂಗಳು ಬಡೋದಾ ರಾಜ್ಯದ ನವಸಾರಿ ಎಂಬಲ್ಲಿದ್ದೆ. ಆಗ್ಗೆ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ. ಇನ್ನು ಮೀನ-ಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಲ್ಲಿ ಬಂತು."[೫೮]

ಪೈಯವರು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಾಸವಿಲ್ಲದ 'ಹೊಲೆಯನು ಯಾರು?' ಎಂಬ ಕವಿತೆಯನ್ನು ಪ್ರಕಟಿಸಿದರು. ಈ ಕವಿತೆಗೆ ಪ್ರಾಸವಿಲ್ಲದ ಕಾರಣಕ್ಕಾಗಿ ತೀವ್ರವಾದ ಪ್ರತಿಕ್ರಿಯೆ ಬಂತು. ತಮ್ಮ ಕವನವನ್ನು ಖಂಡಿಸಿದ ಹಲವು ಪತ್ರಗಳು 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟವಾದೊಡನೆ ಪೈಯವರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಮ್ಮನ್ನು ಸಮರ್ಥನೆ ಮಾಡಿಕೊಂಡು ಬರೆದರು.'ಸ್ವದೇಶಾಭಿಮಾನಿ'ಯಲ್ಲಿ ಅವರು, "ಕನ್ನಡಕ್ಕೆ ಪ್ರಾಸವೇನೂ ವೇದವಾಕ್ಯವೂ ಅಲ್ಲ, ಶಾಶ್ವತವೂ ಅಲ್ಲ. ಅದನ್ನು ಬೇಕಾದಾಗ ಬೇಕಾದಂತೆ ಬಿಟ್ಟು ಬಿಡಬಹುದು. ಅತ ಏವ ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ, ಛಂದಸ್ಸನ್ನೂ ವ್ಯಾಕರಣವನ್ನೂ ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂ ಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ. ಬೇಕಾದವರು ಈ ಹೊಸ ಹಾದಿಯನ್ನು ಹಿಡಿಯಲಿ ಬೇಡದವರು ಹಳೆಯ ಹಾದಿಯಲ್ಲೇ ನಡೆಯಲಿ,. . . ಇಂದು ಒಬ್ಬನೆ ನಡೆವ ಮೇಕೆ ದಾರಿಯೇ ಮುಂದೆ ತೇರು ಎಳೆವ ಹೆದ್ದಾರಿ" ಎಂದು ಬರೆದರು.

ಪ್ರಾಸ ಪರವಾಗಿ ಪ್ರಕಟವಾದ ಒಂದು ಪತ್ರವನ್ನು ಇಲ್ಲಿ ಗಮನಿಸಬೇಕು.[೫೯] "ಪ್ರಾಸ ಮರ್ಯಾದೆಯನ್ನನುಸರಿಸದ ಪದ್ಯಗಳು ಪುನಃ ಕರ್ನಾಟಕದಲ್ಲಿ ಅವತರಿಸಿರುವವೆಂಬ ವರ್ತಮಾನ ಕೊಟ್ಟುದುದಕ್ಕಾಗಿ ತಮಗೆ ಸಾವಿರ ಸಾವಿರ ನಮಸ್ಕಾರ! ಅಂದೊಮ್ಮೆ ಇದೇ ರೀತಿಯಲ್ಲಿ ಇದೇ ರೋಗವು ಹಬ್ಬುವುದಕ್ಕಾರಂಭವಾಗಿ 'ಸ್ವದೇಶಾಭಿಮಾನಿ'ಯಲ್ಲಿಯೂ 'ಸಾಧ್ವಿ'ಯಲ್ಲಿಯೂ ಬಹುಕಾಲ ತರ್ಕ ವಿತರ್ಕಗಳು ನಡೆದಿದ್ದವು... .." ಎಂದು ಹೇಳುವ ಮೂಲಕ ವಾಗ್ವಾದ ನಿರಂತರ ನಡೆದುದನ್ನು 'ಹಿತೈಷಿ' ಸೂಚಿಸುವರು. ಅವರ ದೃಷ್ಟಿಯಲ್ಲಿ ಪ್ರಾಸ ತ್ಯಾಗವು ಒಂದು ರೋಗ. ಮುಂದೆ ಅವರು, "ಬರೆದವರೂ ಪ್ರಕಟಿಸಿದವರೂ ಆರಾದರೇನು. ಈ ಪ್ರಾಸ ತ್ಯಾಗದಿಂದ ಕನ್ನಡನಾಡಿಗಾಗುವ ಪ್ರಯೋಜನವೇನೋ ತಿಳಿಯಬರುವುದಿಲ್ಲ. ಕರ್ನಾಟಕ ಮಧುಸೂದನದತ್ತರೆಂಬ ಬಿರುದು ಆರಿಗಾದರೂ ಬೇಕಿದ್ದರೆ, ಅವರು ಅದನ್ನು ಪ್ರಾಸ ತ್ಯಾಗದಿಂದ ಸಂಪಾದಿಸಬೇಕಾಗಿಲ್ಲ; ಸುಲಭ ಶೈಲಿಯನ್ನುಳ್ಳ, ಪ್ರಾಸಯುಕ್ತ ಪದ್ಯಗಳಿಂದಲೇ ಸಂಪಾದಿಸಬಹುದಾಗಿದೆ", ಎಂದು ಸಲಹೆ

೫೮.ಕನ್ನಾಡ ಸಾಹಿತ್ಯಜ್ಞರ ಆತ್ಮಕಥನ

೫೯.ಹಿತೈಷಿ; ಜಿ.ಕೆ.ಮೂರ್ತಿಯವರಿಗೆ ಪತ್ರ: ಮಧುರವಾಣಿ (ಆಗಸ್ಟ್ ೧೯೧೭- ಪುಟ ೩೭-೩೮)

ನೀಡುವರು. ಇಲ್ಲಿ ಕರ್ನಾಟಕದ ಮಧುಸೂದನದತ್ತರೆಂದು ಗೋವಿಂದ ಪೈಯವರನ್ನು ಉದ್ದೇಶಿಸಿಯೇ ಹೇಳಿದ್ದು. ಈ ಮೂದಲಿಕೆಗೆ 'ಅವರು ಎರಡು ಮೂರು ಬಂಗಾಲಿ ಕವಿತೆಗಳನ್ನು ಅನುವಾದ ಮಾಡಿದ್ದೇ ಕಾರಣ' ಎಂದು ಎಸ್. ಅನಂತನಾರಾಯಣ ಹೇಳುವರು.[೬೦] "ಇಷ್ಟರ ಮೇಲೆ ಕರ್ನಾಟಕ ಮಧುಸೂದನರ ಇಷ್ಟ, ಉಪ್ಪಿಲ್ಲದ ಸಾರನ್ನೇ ಬಡಿಸಬೇಕೆಂದಿದ್ದರೆ ಬಡಿಸಲಿ!. .. . ಕರ್ನಾಟಕ ದೇಶದಲ್ಲಿ ಪ್ರಾಸವಿಲ್ಲದ ಪದ್ಯಗಳು ತ್ರಾಸಿಲ್ಲದೆ ಹಾರಾಡುವುದಾದರೆ- ಕ್ರಾಸು ಹಾಕಿ ಪದ್ಯಗಳನ್ನೇಕೆ ನಿರ್ಮಿಸಬಾರದೆಂದು ಇದೂ ಒಂದು ಪ್ರಶ್ನೆ" ಎಂದು ಪ್ರಶ್ನೆ ಎಸೆಯುವ ಈ 'ಹಿತೈಷಿ'ಗಳಿಗೆ ಪ್ರಾಸವೆಂದರೆ ಊಟದಲ್ಲಿ ಉಪ್ಪು ಇದ್ದಹಾಗೆ.

ಪ್ರಾಸ ತ್ಯಾಗ ಮಾಡಿದವರನ್ನು ಪ್ರಾಸ ಸಹಿತ ಪದ್ಯದ ಮೂಲಕವೇ ಖಂಡಿಸಿದವರಿದ್ದಾರೆ. 'ಪ್ರಾಸನಿಂದಕಂಗೆ ಕಟುವಾಣಿ' ಎಂಬ ಶೀರ್ಷಿಕೆಯ ಪದ್ಯವನ್ನು ಬರೆದವರು 'ಗಥಾಧರ' ಎಂಬವರು. ಇದು 'ಮಧುರವಾಣಿ'ಯ ಫೆಬ್ರವರಿ ೧೯೧೯ರ ಸಂಚಿಕೆಯಲ್ಲಿ ಪ್ರಕಟವಾಯಿತು.[೬೧]

ಪ್ರಾಸನಿಂದಕಂಗೆ ಕಟುವಾಣಿ

ಕಂದ॥ ಕವಿಯಾಗಲಪೇಕ್ಷಿಸಿ ಯಾ।
ಕವಿತಾ ನಿಯಮಾನುರೋಧದಿಂ ನಡೆಯದ ಮಾ॥
ನವನೊಳ್ ಮೇಣ್ ಸಗ್ಗಕ್ಕೆಳ।
ಸುವ ಪಾಪಿಷ್ಠನೊಳದಾವದಿರ್ಕುಂ? ಭೇದಂ॥೧

ಪ್ರಾಸಮನಿಡುವೊಡೆ ನಿನಗಾ।
ಯಾಸಮದಪ್ಪೊಡೆ ಬಿಡುವುದು ಪದ್ಯರಚನೆಯಂ॥
ಸಾಸಮಿದಲ್ಲವೆ? ಲೋಕದೊ।
ಳಾಶಿಸುವುದು ಮದುವೆಯಂ ನಪುಂಸಕನುಂ ಪೇಳ್॥೨

ಚರಿಸಿದ ದಾರಿಯೊಳಂ ತಾ।
ನೆರಚುತೆ ಮಳಮಂ ತಿರುಗುವ ಸಿಂಬಳಬುಳುವೊಲ್॥
ಪೆರರ ಬಗೆಯೊಳಂ ನೀನೀ।
ದುರಭಿಪ್ರಾಯಮನದೇಕೆ ಪುಟ್ಟಿಸುವಯ್? ಪೇಳ್॥೩

ಕವಿ ಷೆಕ್ಸ್‌ಪಿಯರ್, ಕವಿ ಕೇ।
ಶವ ಸುತ, ಮಧುಸೂದನಾದಿಗಳವೊಲ್ ನೀನೂ॥
ಕವನಂಗೆಯ್, ಬೊಗಳ್ವುದೆ? ಬೊಗ।

೬೦.ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ

೬೧.ಉದ್ಧೃತ- ಹೊ.ಕ.ಇಂ.ಕಾ.ಪ್ರಭಾವ

ಳುವ ಕರ್ಚ್ಚಲ್ ಶಕ್ತಿಯಿಲ್ಲದಾ ಶ್ವಾನವೊಲ್।।೪
ಏಕಿಂತು 'ನಾನೃಷಿಃ ಕುರು।
ತೇ ಕಾವ್ಯಂ' ನುಡಿ ಜನಿಸಿತು? ಲೋಕದೆ ಮರುಳೇ।।
ಪ್ರಾಕಾರಮನೇರಿದೊಡಂ।
ಕಾಕಂ ಗರುಡಂಗೆ ತೊಣೆಯದಕ್ಕುಮೆ? ಪೇಳಯ್।।೫"

ಬಹುಶಃ ಪ್ರಾಸ ತ್ಯಾಗವನ್ನು ಇದಕ್ಕಿಂತ ಹೀನೋಪಮೆಗಳಿಂದ ಟೀಕಿಸುವುದು ಸಾಧ್ಯವಿಲ್ಲವೇನೋ? ಕೆಲವರೇನೋ ಸಮಾಧಾನಚಿತ್ತರಾಗಿ ಹೊಸ ಕವಿತೆಯನ್ನು ಸ್ವಾಗತಿಸಿದರು. ಆದರೂ ಮಲ್ಲಿಕಾರ್ಜುನ ಶಾಸ್ತ್ರಿ ಎಂಬವರು, 'ಶಬ್ದಮಣಿ ದರ್ಪಣವನ್ನು ನಿರಾಕರಿಸಿ ಶಾಸನವನ್ನು ಹಾಳು ಮಾಡಿ ಇಂಗ್ರಜಿಯಲ್ಲಿ ಟೆನಿಸನ್ ಎಂಬ ಮಹಾಕವಿಯಂತೆ ತಾವು ಕನ್ನಡಕ್ಕೆ ಟೆನಿಸನೆಂದು ಬರೆಯಲಾರಂಭಿಸಿದರು,'[೬೨] ಎಂದು ಟೀಕಿಸಿದ್ದಾರೆ.

ಅಂದಿನ ಪ್ರಮುಖ ಸಾಹಿತ್ಯಪತ್ರಿಕೆಗಳಾದ ಶ್ರೀಕೃಷ್ಣಸೂಕ್ತಿ, ವಾಗ್ಭೂಷಣ, ನಂದಿನಿ, ಬೋಧಿನಿ, ಸುವಾಸಿನೀ, ಮಧುರವಾಣಿ ಮುಂತಾದವು ಪ್ರಾಸ ಸಹಿತ, ಪ್ರಾಸ ರಹಿತ ಭೇದ ಎಣಿಸದೆ ಎಲ್ಲ ರೀತಿಯ ಪದ್ಯಗಳನ್ನು ಪ್ರಕಟಿಸುತ್ತಿದ್ದುದು ಮಹತ್ವದ ಸಂಗತಿಯೇ.

ಪ್ರಾಸವಿಲ್ಲದೆ ಏಕೆ ಪದ್ಯವನ್ನು ರಚಿಸಬಾರದು ಎಂಬುದಕ್ಕೆ ಹಟ್ಟಿಯಂಗಡಿ ನಾರಾಯಣರಾಯರು ತಮ್ಮದೇ ಆದ ಕಾರಣಗಳನ್ನು ನೀಡಿದ್ದಾರೆ.[೬೩] ಪ್ರಾಸವಿಲ್ಲದೆ ಪದ್ಯ ರಚಿಸುವುದೆಂದರೆ ಅವರ ದೃಷ್ಟಿಯಲ್ಲಿ ಹಣೆಗೆ ಬೊಟ್ಟಿಲ್ಲದಂತೆ. ತಮ್ಮ ವಾದಕ್ಕೆ ಅವರು ಸಂಗೀತದ ತಿಳಿವಳಿಕೆಯನ್ನು ಸಮರ್ಥನೆಗಾಗಿ ಬಳಸಿಕೊಂಡಿದ್ದಾರೆ. ಒಂದು ರಾಗದಲ್ಲಿ ವಾದಿ ಮತ್ತು ಸಂವಾದಿ ಎಂಬ ಎರಡು ಪ್ರಧಾನ ಸ್ವರಗಳಿರಬೇಕಂತೆ ಎನ್ನುವ ಅವರು ಅವುಗಳನ್ನು ಪದೇ ಪದೇ ತೋರಿಸಿದರೆ ರಾಗವು ಸ್ಪಷ್ಟವಾಗಿಯೂ ಸುಂದರವಾಗಿಯೂ ಕಾಣುವುದೆಂದು ಸಂಗೀತಜ್ಞರು ಹೇಳುವರು ಎಂದು ಹೇಳುತ್ತ ಈ ನಿಯಮವನ್ನು ಉಲ್ಲಂಘಿಸಿದರೆ ಸಂಗೀತವೇ ಅಳಿದು ಹೋಗದು. ಅಷ್ಟೇಕೆ, ಈ ಮರ್ಯಾದೆಗೆ ಉತ್ತರದಲ್ಲಿರುವ ಪ್ರಾಮುಖ್ಯವು ದಕ್ಷಿಣದಲ್ಲಿಲ್ಲವಂತೆ ಎಂದು ಹೇಳಿದ್ದಾರೆ. ಇದರ ಅರ್ಥ ಪ್ರಾಸದ ನಿಯಮವಿದ್ದರೂ ಅದರ ಉಲ್ಲಂಘನೆಯಿಂದ ಕವಿತೆಯೇ ಆಗುವುದಿಲ್ಲ ಎನ್ನುವುದು ಸುಳ್ಳು ಎಂಬುದು. ಪ್ರಾಸದ ಇತಿಹಾಸದ ಕಡೆಗೆ ಗಮನಹರಿಸುವ ಹ.ನಾರಾಯಣರಾಯರು, "ಕನ್ನಡಕ್ಕೆ 'ಸತತಂ ಪ್ರಾಸಂ' ಎಂದು ನೃಪತುಂಗನು ಬರೆದಿರುವನು. ಈ ಪದ್ಧತಿ ಎಷ್ಟು ಹಳೆಯದು ಎಂದು ಹೇಳಕೂಡದು. ಸಾಂಗತ್ಯದಲ್ಲಿ ನಾಗವರ್ಮನು ವರ್ಣಿಸಿದ ಅಕ್ಷರ ಮಾತ್ರಾ ಗಣಗಳ ಕ್ರಮವನ್ನು ಕಿತ್ತುಹಾಕಿದರೂ ಪ್ರಾಸವನ್ನು ಬಿಡಲಿಲ್ಲ. ಪ್ರಾಸಕ್ಕೆ ಕನ್ನಡಿಗರು ಇಷ್ಟು

೬೨.ಮಲ್ಲಿಕಾರ್ಜುನ ಶಾಸ್ತ್ರಿ: ಕವಿತೆ: ಶ್ರೀಕೃಷ್ಣ ಸೂಕ್ತಿ (ಜುಲೈ ೧೯೧೬) ಪುಟ ೧೨೩

೬೩.ಹಟ್ಟಿಯಂಗಡಿ ನಾರಾಯಣರಾಯರು: ಕವಿತಾ ವರ್ಧನ, ಕನ್ನಡ ಸಾಹಿತ ಪರಿಷತ್ಪತ್ರಿಕೆ- ಸಂಪುಟ ೩, ಸಂಚಿಕೆ ೪ (ಜನವರಿ ೧೯೧೯)

ಮರುಳಾದುದಕ್ಕೆ ಕಾರಣವಿಲ್ಲದಿರಬಹುದೆ? ಅನುಭವಕ್ಕೆ ಕಂಡುಬರುವುದೇನು?'' ಎಂಬ ಪ್ರಶ್ನೆಗಳನ್ನು ಮುಂದಕ್ಕೆ ಇಟ್ಟುಕೊಂಡು ಅವರು ಅದಕ್ಕೆ ಮೂರು ಕಾರಣಗಳನ್ನು ನೀಡುವರು.

೧.ಪ್ರಾಸಕ್ಕಿಂತಲೂ ಅಕ್ಷರ ಗಣಾನುಸರಣವೇ ಕಠಿಣ. ಒಂದು ಷಟ್ಪದಿಯಲ್ಲಿ ಆರು ಸ್ಥಳಗಳಲ್ಲಿ ಒಂದಕ್ಷರವನ್ನು ಇಟ್ಟರೆ ಸಾಕು. ಒಂದು ಅಕ್ಷರ ಗಣಗಳ ವೃತ್ತದಲ್ಲಿ ಗುರು ಲಘುಗಳನ್ನು ಎಷ್ಟು ನಿರ್ದಿಷ್ಟ ಸ್ಥಾನದಲ್ಲಿಡಬೇಕು? ಇಷ್ಟು ಪ್ರಯಾಸಪಟ್ಟರೂ ಕನ್ನಡ ತಾಳಗಳಿಗೆ ಎಷ್ಟು ವೃತ್ತಗಳನ್ನು ಹಾಡಬಹುದು!

೨.ಲೋಕಪ್ರಿಯವಾದ ಕವಿತೆಗಳನ್ನು ತಾಳ ಹಾಕಿ ಹಾಡಲಾಗುವಂತೆ ರಚಿಸುವುದು ಉಚಿತವಾದುದರಿಂದ, ಅವುಗಳಲ್ಲಿ ವಾದಿ ಸ್ವರದಂತೆ ಕೇಳಿಸುವ ಪ್ರಾಸವನ್ನು ಕಾಪಾಡುವುದು ಉಪಯುಕ್ತ ಪದ್ಧತಿ.

೩.ಅರ್ಥಕ್ಕೆ ತೇಜವಿಲ್ಲದೆಡೆಗಳಲ್ಲಿ ಆ ಕಂದಕವನ್ನು ಪ್ರಾಸದಿಂದ ಅಡಗಿಸಿದಷ್ಟು ಸುಲಭವಾಗಿ ಬೇರೆ ಶಬ್ದಾಲಂಕಾರಗಳಿಂದಾಗದು.

ಪ್ರಾಸವನ್ನು ಕನ್ನಡದಲ್ಲಿ ಮಾತ್ರ ಅನುಸರಿಸಲು ಕಾರಣವೇನಿರಬಹುದು? ಎಂಬ ಬಗ್ಗೆ ಚಿಂತಿಸುವ ಹ.ನಾರಾಯಣರಾಯರು, "ಕನ್ನಡದಲ್ಲಿ ಚರಣದ ಎರಡನೆಯ ಅಕ್ಷರವು ಪ್ರಾಸಕ್ಕೆ ಯುಕ್ತವೆಂದು ಪ್ರಾಚೀನ ಕವಿಗಳು ನಿರ್ಧರಿಸಿದ್ದು ತಪ್ಪೆಂದು ನಾನು ಸರ್ವಥಾ ಉಸುರಲಾರೆ. ಆದರೆ ಈ ಪ್ರಾಸಕ್ಕೆ ಬದಲಾಗಿ ಅಂತ್ಯಪ್ರಾಸವನ್ನು ಆಚರಿಸಿದರೆ ಇಂಪಾಗಲಾರದೆಂದೂ ವಾದಿಸಲಾರೆ. ಕೊಡಗರ ಹಾಡುಗಳಲ್ಲಿ ಅಂತ್ಯಪ್ರಾಸವೇ ಪ್ರಧಾನ. ಪ್ರಾಚೀನ ದ್ರಾವಿಡರ ಪದ್ಧತಿ ಹೀಗಿರಬಹುದಿತ್ತು. ನಾನೊಂದು ಸಾವಿರ ಚರಣಗಳನ್ನು ರಚಿಸಿರಬಹುದು. ಇದುವರೆಗೆ ಪ್ರಾಸಮುಂಡನಕ್ಕೆ ನನ್ನ ಕಿವಿ ಒಗ್ಗಲಿಲ್ಲ'' ಎಂದು ಹೇಳಿದ್ದಾರೆ. ಅಂತ್ಯ ಪ್ರಾಸಕ್ಕೆ ಅವರ ಒಲವು ಇದ್ದರೂ ಆದಿಪ್ರಾಸ ಬೇಡವೆಂದು ಅವರು ಹೇಳಲಿಲ್ಲ. ಸಂಗೀತದ ದೃಷ್ಟಿಯಿಂದ ಈ ವಾಗ್ವಾದದಲ್ಲಿ ಅವರು ಭಾಗಿಯಾದದ್ದು ವಿಶೇಷ.

ಗೋವಿಂದ ಪೈಯವರು ಮಂಗಳೂರು ಕಡೆ ಪ್ರಾಸತ್ಯಾಗ ಮಾಡಿ ಖಂಡನೆಗೆ ಒಳಗಾದರೆ ಧಾರವಾಡ ಭಾಗದಲ್ಲಿ ೧೯೧೮ಕ್ಕೆ ಮೊದಲು ಕಾವ್ಯಾನಂದ ಪುಣೇಕರರೂ ಪ್ರಾಸರಹಿತವಾಗಿ ಅನೇಕ ಕವನಗಳನ್ನು ರಚಿಸಿ ಖಂಡನೆಗೆ ಒಳಗಾಗಿದ್ದಾರೆ. ಕಾವ್ಯಾನಂದ ಪುಣೇಕರರನ್ನು ಖಂಡಿಸಿ ವಲ್ಲಭ ತಟ್ಟಿಯವರು ಬರೆದ ಕವನ 'ಪ್ರಭಾತ'ದಲ್ಲಿ ಪ್ರಕಟವಾಗಿದೆ.[೬೪]

ಪ್ರಾಸತ್ರಾಸಕೆ ತೊಡಕದೆ
ದೇಶದೊಳೀಗಿರ್ದ ಕನ್ನಡದ ನುಡಿ ಬಿಡದ।

೬೪.ಪ್ರಭಾತ- ಆಗಸ್ಟ್೧೯೧೮

ಮೋಸದಿ ಕದಿಯದೆ ಪರಪದ
ಮೀಸಲ ಕಲ್ಪನೆಯನೀವ ಕಾವ್ಯಾನಂದಂ॥

ಹಾಗೆ ನೋಡಿದರೆ ಇದೇನು ಅಂಥ ಕಟುವಾದ ಖಂಡನೆಯೇನಲ್ಲ. 'ವಾಗ್ಭೂಷಣ'ವು ಪ್ರಾಸ ಸಂಬಂಧ ಚರ್ಚೆಗೆ ಒಂದು ವೇದಿಕೆಯನ್ನೇ ಒದಗಿಸಿಕೊಟ್ಟಿತು. 'ಕರ್ನಾಟಕ ವೈಭವ', 'ಶುಭೋದಯ' ಪತ್ರಿಕೆಗಳಲ್ಲೂ ಪ್ರಾಸ ಸಂಬಂಧಿ ಚರ್ಚೆ ನಡೆದಿದೆ. 'ವಾಗ್ಭೂಷಣ'ದ ೧೯೧೮ರ ನವೆಂಬರ್ ತಿಂಗಳ ಸಂಚಿಕೆಯಲ್ಲಿ ನರಸಿಂಹ ಧೋಂಡೋ ಮುಳಬಾಗಿಲ ಅವರ 'ಕನ್ನಡ ಛಂದಸ್ಸಿನ ಕೊಲೆಯು' ಲೇಖನವನ್ನು ಪ್ರಕಟಿಸಿದ ಸಂಪಾದಕರು, ಆ ಲೇಖನದ ಕೊನೆಯಲ್ಲಿ, 'ಈ ವಿಷಯದ ಚರ್ಚೆಯಾಗುವುದು ಇಷ್ಟವಾಗಿರುವುದರಿಂದ ಈ ವಿಷಯದಲ್ಲಿ ಲೇಖಗಳು ಇನ್ನೂ ಬಂದರೆ ಅವುಗಳನ್ನು ಮುದ್ರಿಸುವೆವು'' ಎಂದು ಪ್ರಕಟಿಸಿರುವುದು ಮಹತ್ವದ್ದಾಗಿದೆ.

'ವಾಗ್ಭೂಷಣ'ದ ಸಂಪಾದಕರಿಗೆ ೧೯-೦೫-೧೮ರಂದು ಪತ್ರವೊಂದನ್ನು ಬರೆದ 'ಕನ್ನಡ ವಾಮನ' ಎಂಬವರು, ''ಸಾಂಪ್ರತ ಯುಗದಲ್ಲಿ ಪ್ರಾಸವನ್ನು ತೆಗೆದುಹಾಕಿ ಸುಲಭವಾದ ವಾಕ್ಯದಲ್ಲಿ ಪದ್ಯಗಳನ್ನು ರಚಿಸಬೇಕೆಂದು ಬಹಳ ಜನರ ತಲೆಯಲ್ಲಿ ವಿಚಾರಗಳು ತೂಗಾಡಹತ್ತಿವೆ. ಕಾರಣ ಅದೇ ಸರಣಿಯನ್ನು ಜನರಿಗೆ ತೋರಿಸುವುದಕ್ಕಾಗಿ ಬಂಗಾಲಿ ಭಾಷೆಯಲ್ಲಿ ಜೋಗೀಂದ್ರನಾಥ ಬಸು ಎಂಬವರು ಬರೆದ 'ಪೃಥ್ವೀರಾಜ' ಎಂಬ ಮಹಾಕಾವ್ಯದ ಒಂದು ಸರ್ಗವನ್ನು ಭಾಷಾಂತರಿಸಿ ಕಳಿಸಿದ್ದೇನೆ. ಇದಕ್ಕೆ ತಮ್ಮ ಪತ್ರಿಕೆಯಲ್ಲಿ ಆಶ್ರಯವು ದೊರೆತು ಮುದ್ರಣವಾದದ್ದು ನನ್ನ ಕಣ್ಣಿಗೆ ಬಿದ್ದಕೂಡಲೇ ಇದರ ಮುಂದಿನ ಸರ್ಗವನ್ನೂ ಬರೆದು ಕಳುಹಬೇಕೆಂದು ಮಾಡಿದ್ದೇನೆ. ಕಾರಣ ಮಹಾಶಯರು ಇದಕ್ಕೆ ಆಶ್ರಯಕೊಡಬೇಕೆಂದು ಬೇಡಿಕೊಳ್ಳುತ್ತೇನೆ'' ಎಂದು ವಿನಂತಿಸಿದರು. ಅದೇ ಪ್ರಕಾರ 'ಕನ್ನಡ ವಾಮನ'ರು ಉತ್ಪಲ ಚಂಪಕ ವೃತ್ತಗಳಲ್ಲಿ ಪ್ರಾಸರಹಿತವಾಗಿ ಬರೆದು ಕಳುಹಿಸಿದ 'ಪೃಥ್ವೀರಾಜನ ಯುದ್ಧದ ಸಿದ್ಧತೆ' ಕಾವ್ಯಭಾಗವನ್ನು ಪ್ರಕಟಿಸಲಾಗಿದೆ. ಆ ಹದಿನೆಂಟು ಪದ್ಯಗಳಲ್ಲಿಯ ಒಂದು ಪದ್ಯವನ್ನು ಉದಾಹರಣೆಗೆ ಇಲ್ಲಿ ಕೊಡಲಾಗಿದೆ.

ಹೊರಟವು ರಾಜರಪ್ಪಣೆಯ ಪತ್ರಗಳಾಗಲೆ ದೇಶದೇಶಕೆ।
ತಲುಪಿದವಯ್ಯ ಗೌಡ ಕುಲಕರ್ಣಿಗೆ ತಪ್ಪದೆ ಹಳ್ಳಿಪಳ್ಳಿಗೆ॥
ತಳಮಳವಾಯ್ತು ದಿಲ್ಲಿಯಜಮಿರಚಿತೋರದೊಳಿದ್ದ ಮಂದಿಗೆ।
ಹರುಷವದಾಯಿತೈ! ಖಲ! ಕನೋಜದ ರಾಜಗೆ ಜಮ್ಮು ಭೂಪಗೆ॥

ಇಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಅನುಸರಿಸದಿರುವುದು ಕಂಡು ಬರುತ್ತದೆ. ಇಂಥ ಪದ್ಯಗಳೇ ನರಸಿಂಹ ಧೋಂಡೋ ಮುಳಬಾಗಲ ಅವರಿಗೆ 'ಕನ್ನಡ ಛಂದಸ್ಸಿನ ಕೊಲೆಯು' ಲೇಖನ ಬರೆಯಲು ಪ್ರಚೋದನೆ ನೀಡಿತು.

''.... ಕನ್ನಡ ಛಂದಸ್ಸಿನ ಮುಖ್ಯ ನಿಯಮವೇನು? ಈ ಪ್ರಕಾರದ ಕವಿತೆಗಳನ್ನು

ಹಿಂದೆ ಸಾವಿರಾರು ವರ್ಷಗಳೊಳಗೆ ಯಾವನಾದರೂ ರಚಿಸಿರುವನೋ ಹ್ಯಾಗೆ? ಅಥವಾ ಇಂಥ ಕವಿತೆಗಳನ್ನು ರಚಿಸಲಿಕ್ಕೆ ಈಗಿನ ಕನ್ನಡ ವಿದ್ವಾಂಸರೆಂದೆನಿಸಿಕೊಂಡು ಹೋದವರ ಸಮ್ಮತಿಯಿರುವುದೋ ಹ್ಯಾಗೆ? ಪ್ರಾಸವಿಲ್ಲದಂಥ ಕವಿತೆಗಳ ಸಮಾವೇಶವು ಕನ್ನಡ ಗ್ರಂಥಗಳೊಳಗೆ ಆಗಬಹುದೋ ಹ್ಯಾಗೆ? ಪುರಾತನದ ಹಾಗೂ ಈಗಿನ ಕನ್ನಡ ವಿದ್ವಾಂಸರು, ಪ್ರಾಸವಿಲ್ಲದ ಕವಿತೆಗಳನ್ನು ರಚಿಸಬಾರದೆಂದು ಯಾಕೆ ನಿಯಮಿಸಿದರು?" ಇತ್ಯಾದಿ ಪ್ರಶ್ನೆಗಳನ್ನು ಎತ್ತುವ ಮುಳಬಾಗಲರು, ಆಂಗ್ಲ ಭಾಷೆಯನ್ನು ಅನುಸರಿಸಿಯೇ ಪ್ರಾಸರಹಿತವಾಗಿ ಬರೆಯುವ ಆಲೋಚನೆ ಬಂದಿದೆ ಎನ್ನುತ್ತ ಆಂಗ್ಲ ಭಾಷಾ ಪದ್ಧತಿಯನ್ನು ಕನ್ನಡ ಭಾಷಾ ಲಕ್ಷಣಗಳಲ್ಲಿ ಸಮಾವೇಶ ಮಾಡಬೇಕೆನ್ನುವುದು ಅಸಮಂಜಸ ಎನ್ನುವರು. ಸಂಸ್ಕೃತದಲ್ಲಿ ಪ್ರಾಸದ ಬಳಕೆ ಇಲ್ಲ. ಕನ್ನಡ ಕವಿಗಳಿಗೆ ಸಂಸ್ಕೃತದಲ್ಲಿಯೂ ಪಾಂಡಿತ್ಯವಿತ್ತು. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಸಂಬಂಧ ಸಾವಿರ ವರ್ಷಗಳಷ್ಟು ಹಳೆಯದು. ಹೀಗಿರುವಾಗ ಸಂಸ್ಕೃತದ ಪ್ರಭಾವದಿಂದ ಕನ್ನಡದಲ್ಲೂ ಪ್ರಾಸರಹಿತ ಕಾವ್ಯವನ್ನು ರಚಿಸಬಹುದಿತ್ತು. ಹಾಗೆ ಮಾಡಲಿಲ್ಲ. ಕನ್ನಡ ಮತ್ತು ಆಂಗ್ಲ ಭಾಷೆ ಸಂಬಂಧ ಕೇವಲ ಇಪ್ಪತ್ತೈದು ವರ್ಷಗಳ ಈಚಿನದು. ಆಂಗ್ಲ ಭಾಷೆಯ 'Blank Verse' ಅಂದರೆ ಪ್ರಾಸವಿಲ್ಲದೆ ಕವಿತೆಗಳನ್ನು ಕನ್ನಡದಲ್ಲಿ ಸೇರಿಸಬೇಕೆನ್ನುವುದು ಅಸಂಬದ್ಧವಾದದ್ದು ಎಂದು ಹೇಳುವರು.

"ವಸ್ತು ಸ್ಥಿತಿಯು ಹೀಗಿರಲು ಪುರಾತನ ವಿದ್ವಾಂಸರ ಮತದ ವಿರುದ್ಧವಾಗಿಯೂ, ಛಂದಸ್ಶಾಸ್ತ್ರದ ವಿರುದ್ಧವಾಗಿಯೂ, ರೂಢಿಯ ವ್ಯಾಕರಣ ವಿರುದ್ಧವಾಗಿಯೂ, ಭಾಷಾ ಸಂಪ್ರದಾಯದ ವಿರುದ್ಧವಾಗಿಯೂ, ರಚಿಸಲ್ಪಡುವ ಕವಿತೆಗಳು ಕನ್ನಡ ಭಾಷೆಯ ಕೊಲೆಯನ್ನು ಮಾಡುವವಲ್ಲದೆ, ಆ ಭಾಷೆಗೆ ಅಲಂಕಾರವಾಗಲಾರವು. ಹಾಗೂ ತನ್ನ ಭಾಷೆಯ ನಿಜವಾದ ಉನ್ನತಿಯ ಸಲುವಾಗಿ ಪ್ರಯತ್ನಿಸುವ ಪ್ರತಿಯೊಬ್ಬ ಕನ್ನಡಿಗನೂ ಹಾಗೂ ಮಾಸ ಪತ್ರಿಕೆಗಳೂ ಇಂಥ ಕವಿತೆಗಳಿಗೆ ಆಶ್ರಯ ಕೊಡಬಾರದು" ಎಂದು ಕರೆ ನೀಡುವರು.

ಈಗಿನ ಹಾಗೂ ಹಿಂದಿನ ಕವಿಗಳ ತುಲನೆ ಮಾಡುವ ಮುಳಬಾಗಲರು ಹಿಂದಿನವರ ಶಬ್ದ ಸಂಗ್ರಹ, ಭಾಷಾ ಪರಿಚಯ ಅತ್ಯಂತವಾಗಿದ್ದುದರಿಂದ ಈಗಿನ ಅರ್ಧಪಂಡಿತರಂತೆ ಪ್ರಾಸದ ತ್ರಾಸವು ಅನಿಸುತ್ತಿರಲಿಲ್ಲ ಎನ್ನುತ್ತ ಅದಕ್ಕೆ ಲಕ್ಷ್ಮೀಶನನ್ನು ಉದಾಹರಿಸಿರುವರು. ಛಂದಶ್ಶಾಸ್ತ್ರಕ್ಕೆ ಅನುಗುಣವಾಗಿ ಪ್ರಾಸಗಳ ಪರ್ವತವನ್ನೇ ಲಕ್ಷ್ಮೀಶನು ರಚಿಸಿದ್ದಾನೆ. ಜೈಮಿನಿ ಭಾರತದಂಥ ಕಾವ್ಯ ರಚಿಸುವಾಗ ಮೊದಲಿನ ಕವಿಗಳಿಗೆ ಪ್ರಾಸ ಬಿಡುವ ಆಲೋಚನೆ ಬರಲಿಲ್ಲ. ಆದರೆ ಈಗಿನ ಕವಿಗಳಿಗೆ ಕಾಗೆ ಗುಬ್ಬಿಗಳ ಕಥೆಯನ್ನು ಕವಿತಾ ರೂಪದಲ್ಲಿ ರಚಿಸುವಾಗ ಪ್ರಾಸ ಬಿಕ್ಕಟ್ಟಾಗುತ್ತಿದೆ ಎಂದು ಲೇವಡಿ ಮಾಡಿರುವರು. ಲಕ್ಷ್ಮೀಶನಿಗೆ, ಮುಂದೆ ಪ್ರಾಸವು ಸಾಯುವುದೆಂದು ತಿಳಿದಿದ್ದರೆ 'ಪ್ರಾಸದ ಸಮಾಧಿ' ಎಂಬ ಮತ್ತೊಂದು ಸಂಧಿಯನ್ನು ತಮ್ಮ ಕಾವ್ಯಕ್ಕೆ ಜೋಡಿಸುತ್ತಿದ್ದರು ಎಂದು ವ್ಯಂಗ್ಯವಾಗಿ ಹೇಳಿರುವರು.

ಶಾಸ್ತ್ರಸಮ್ಮತವಾದ ಲಕ್ಷಣಗಳಿಂದ ಯುಕ್ತವಾದ ಕವಿತೆಗಳನ್ನು ರಚಿಸುವ ಯೋಗ್ಯತೆ ಇದ್ದರೆ ಕವಿತೆಗಳನ್ನು ರಚಿಸಬೇಕು. ತಮ್ಮಲ್ಲಿ ಅಷ್ಟು ಭಾಷಾ ಜ್ಞಾನವೂ, ಶಬ್ದ ಸಂಗ್ರಹವೂ ಇಲ್ಲದಿದ್ದರೆ ಅದರ ಹವ್ಯಾಸಕ್ಕೆ ಯಾಕೆ ಹೋಗಬೇಕು? ಎಂದು ಮುಳಬಾಗಲ ಪ್ರಶ್ನಿಸುವರು. ಕವಿತೆಗಳನ್ನು ರಚಿಸಿ ವಿದ್ವಾಂಸರಾಗಬೇಕೆನ್ನುವವರು ಮೊದಲು ಛಂದಸ್ಸಾಸ್ತ್ರವನ್ನೂ, ಹಳಗನ್ನಡ ಹೊಸಗನ್ನಡ ವ್ಯಾಕರಣವನ್ನೂ ಭಾಷಾ ಲಕ್ಷಣವನ್ನೂ, ಅರಿತುಕೊಂಡು ಶಬ್ದ ಸಂಗ್ರಹವನ್ನು ಮಾಡಿಕೊಳ್ಳಬೇಕೆಂದು ಅವರು ಉಪದೇಶ ನೀಡಿರುವರು.

ಈ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಕೇಶವಶರ್ಮ ಗಲಗಲಿಯವರು 'ಪ್ರಾಸ ನಿರಾಸ' ಎಂಬ ಲೇಖನವನ್ನು ಬರೆದಿರುವರು. ಇದು 'ವಾಗ್ಭೂಷಣ'ದ ೧೯೧೯ ಜನವರಿ ಮತ್ತು ಫೆಬ್ರವರಿ ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಗಲಗಲಿಯವರು ಪ್ರಾಸ ಬೇಕು ಬೇಡ ಎಂಬ ಬಗ್ಗೆ ಪತ್ರಿಕೆಗಳಲ್ಲಿ ನಡೆದಿದ್ದ ವಾಗ್ವಾದವನ್ನು ಗಮನಿಸಿದ್ದಾರೆ. ಪ್ರಾಸ ತಗೆದುಹಾಕಬೇಕು ಎಂಬ ಬಗ್ಗೆ 'ಕರ್ನಾಟಕ ವೈಭವ'ದಲ್ಲಿ ಆರ್.ಜಿ.ಹಬ್ಬು ಲೇಖನ ಬರೆದ ಮೇಲೆ ಧಾರವಾಡ ಪ್ರಾಂತದಲ್ಲಿ ಮಂದವಾಗಿಯೇ ಏಕಾಗಲೊಲ್ಲದು; ಚಳವಳಿಯು ಎದ್ದಿದೆ ಎನ್ನುವರು. 'ಕನ್ನಡ ಕೋಗಿಲೆ'ಯ ಸಂಪಾದಕ ಎಂ. ತಿಮ್ಮಪ್ಪಯ್ಯ, ಕಾವ್ಯಾನಂದ ನರಸಿಂಹಾಚಾರ್ಯರು ಪ್ರಾಸವನ್ನು ತಗೆದುಹಾಕಬೇಕೆಂಬ ಬಗ್ಗೆ ಅನುಕೂಲಕರ ಮತವನ್ನು ನೀಡಿದ್ದಾರೆ. ಪ್ರಾಸ ಬಿಡುವುದರ ವಿರುದ್ಧವಿದ್ದ ರಾ.ಮಂಗೇಶರಾಯರಿಗೆ 'ವೈಭವ' ದ್ವಾರಾ ಯಥೋಚಿತ ಉತ್ತರ ಕೊಟ್ಟಾಗಿದೆ ಎಂದು ಅವರು ಲೇಖನ ಪೀಠಿಕೆಯಲ್ಲಿ ಹೇಳಿದ್ದಾರೆ.

ಸಾವಿರಾರು ವರ್ಷಗಳಿಂದ ಕನ್ನಡ ಕವಿತೆಗಳಲ್ಲಿ ಪ್ರಾಸಗಳನ್ನು ಇಡುತ್ತ ಬಂದಿದ್ದಾರೆ. ನಾವೂ ಇಡುತ್ತೇವೆಂಬದು ಸಮಂಜಸವಾದ ಉತ್ತರವಲ್ಲ ಎನ್ನುವ ಗಲಗಲಿಯವರು, ಮಹಾರಾಷ್ಟ್ರ ಭಾಷೆಯಲ್ಲಿ ಅಂತ್ಯ ಯಮಕ ಪ್ರಾಸವಿರುವುದು. ಗುಜರಾಥ ಭಾಷೆಯಲ್ಲಿ ಉಂಟು, ವಂಗ ಭಾಷೆಯಲ್ಲಿ ಪ್ರಕಾಶಿಸುತ್ತಿರುವುದು. ಅದರಂತೆ ನಮ್ಮ ಕನ್ನಡ ಕವಿತಾ ಭಾಮಿನಿಗೆ ಅಲಂಕರಣದಂತಿರುವ ಪ್ರಾಸದ ಮೇಲೆ ನಿಮ್ಮ ಕಟಾಕ್ಷವೇಕೆ? ಎಂದು ಪ್ರತಿಕಕ್ಷಿಗಳು ಕೇಳಬಹುದು. ಅವರಿಗೆ ನಮ್ಮ ಉತ್ತರ, ಆ ಭಾಷೆಗಳಲ್ಲಿ ಅಂತ್ಯ ಯಮಕವಿದ್ದರೂ ನಮ್ಮ ಕನ್ನಡಕ್ಕಿಂತಲೂ ಶಿಥಿಲವಾಗಿರುವದು. ನಾಲ್ಕು ಚರಣಗಳಲ್ಲಿ ಎರಡೇ ಚರಣಗಳ ಅಂತ್ಯಾಕ್ಷರವು ಒಂದೇ ಆಗಿರುವುದು ಎಂದು ಅವರು ಹೇಳುವರು.

ನಮ್ಮ ಪ್ರಾಚೀನ ಕನ್ನಡ ಕವಿಗಳು ವಿದ್ವಾಂಸರೇ ಇದ್ದರು. ಲಕ್ಷ್ಮೀಶ, ಆದಿಕವಿ ಪಂಪ, ರುದ್ರಭಟ್ಟ, ಕೇಶಿರಾಜರೂ ಪ್ರಾಸದ ಸಲುವಾಗಿ ತ್ರಾಸಬಟ್ಟದ್ದನ್ನು ಎಷ್ಟು ತೋರಿಸುವಾ? ಎಂದು ಅವರು ಪ್ರಶ್ನಿಸುವರು. ಒಂದು ಸಣ್ಣ ಅನುಷ್ಟುಪ್ ಛಂದಸ್ಸಿನ ಸಂಸ್ಕೃತ ಶ್ಲೋಕವನ್ನು ಪ್ರಾಸದ ಸಲುವಾಗಿ ಮಳವುದ್ದ ಷಟ್ಪದಿಯನ್ನಾಗಿ ಲಂಬಿಸಬೇಕಾಯಿತು ಎಂದು ಅವರು ಹೇಳುತ್ತಾರೆ. ಪ್ರಾಸಕ್ಕಾಗಿ ರಸಭಂಗಮಾಡಿ ನಿರರ್ಥಕ ಶಬ್ದಗಳನ್ನು ಪ್ರಯೋಗಿಸಿರುವ ಸಾವಿರಾರು ಕವಿತೆಗಳನ್ನು ಪ್ರಾಚೀನ ಕವಿಗಳ ಗ್ರಂಥಗಳಲ್ಲೇ ನಾವು ತೋರಿಸುವೆವು ಎಂದು

ಸವಾಲು ಹಾಕುವ ಅವರು, ಸುಮ್ಮಸುಮ್ಮನೆ ಈಗಿನ ಕವಿಗಳು ದಡ್ಡರು, ಆದ್ದರಿಂದ ಅವರಿಗೆ ಪ್ರಾಸ ತ್ರಾಸವೆಂದು ಆಧುನಿಕ ಕವಿಗಳ ಹೆಸರಿನಿಂದ ಕಲ್ಲು ಒಡೆಯುವುದರಲ್ಲಿ ಅರ್ಥವಿಲ್ಲ ಎಂದೂ ಹೇಳುವರು.

ಅಲಂಕಾರ, ವ್ಯಾಕರಣ ಶಾಸ್ತ್ರಗಳೆಲ್ಲ ಭಾಷೆಯ ಶುದ್ಧತೆಗಾಗಿ ಎನ್ನುವ ಅವರು, ಪ್ರಾಸವನ್ನು ಐಚ್ಛಿಕವಾಗಿ ಮಾಡಬೇಕೆಂಬುದು ನಮ್ಮ ಆಶಯ. ಕವಿಯ ಇಚ್ಛೆ ಇದ್ದರೆ ಅಶ್ವಧಾಟಿಯಂತೆ ಹೆಜ್ಜೆಜ್ಜೆಗೆ ಪ್ರಾಸವನ್ನು ಇಡಲಿ. ನಮ್ಮ ಅಡ್ಡಿಯಿಲ್ಲ. ದ್ವಿತೀಯಾಕ್ಷರವು ಯಮಕಿತವಾಗಿಯೇ ಇರಬೇಕೆಂಬ ನಿರ್ಬಂಧ ಬೇಡ. ಪ್ರಾಸವೈಕಲ್ಯದಿಂದ ಅದರ ಅನನ್ಯ ಭಕ್ತರಿಗೆ ದುಃಖವಾಗುತ್ತಿದ್ದರೆ (ಭವಿಷ್ಯ ಅನಭಿಜ್ಞನಾದ ಆ ವರಾಕ- ಲಕ್ಷ್ಮೀಶನು ಮರೆತು ಬಿಟ್ಟನು) ಅದರ ಉಪಾಸಕರು ಪ್ರಾಸ ಸಮಾಧಿಯೆಂಬ ಸಂಧಿಯನ್ನು ರಚಿಸಿ ೩೫ನೆ ಸಂಧಿಯಾಗಿ ಮಾಡಿ ಕುಶಲವಾಗಿ ಅದರ ಸ್ಮಾರಕವನ್ನು ಮಾಡಲಿ. ಕನ್ನಡ ಕವಿತಾ ಶರೀರದಲ್ಲಿ ಹುಣ್ಣಿನಂತಿರುವ ಈ ಅವಯವವನ್ನು ಕೊಯ್ದು ಬಿಡಬೇಕೆಂದು ಅದರ ಹಿತಚಿಕಿತ್ಸಕರು ಇಚ್ಛಿಸಿದರೆ, 'ಅಯ್ಯೋ ಇವರು ಕನ್ನಡ ಛಂದಸ್ಸಿನ ಕೊಲೆ ಮಾಡುತ್ತಾರೆ. ಕನ್ನಡ ಕವಿತ್ವದ ಕುತ್ತಿಗೆ ಕೊಯ್ಯುತ್ತಾರೆ' ಎಂದು ಸುಳ್ಳುಸುಳ್ಳೇ ಚೀರ್ರ್ಯಾಟವೆಬ್ಬಿಸಿ 'ನರಸಿಂಹ'ರು ಗರ್ಜನೆ ಮಾಡಿದರೆ ಅವರ ಬೆದರಿಕೆಗೆ ಸೊಪ್ಪುಹಾಕುವ ಅಳ್ಳೆದೆಯವರಾದ ಕನ್ನಡ ಕವಿಗಳು ಇನ್ನೂ ನಮ್ಮ ಕನ್ನಡ ಪ್ರಾಂತದಲ್ಲಿ ಇಲ್ಲದಿರುವದು ನಮ್ಮ ಸೌಭಾಗ್ಯವೇ ಸರಿ ಎಂದು ಗಲಗಲಿ ಹೇಳುವರು.

ವಾಗ್ವಾದವನ್ನು ಮುಂದುವರಿಸುವ ಇಚ್ಛೆ ಹೊಂದಿದ ಅವರು, "ವಾದ ರಣರಂಗದಲ್ಲಿ ನಿಂತ ಮೇಲೆ ಪ್ರತಿಕಕ್ಷಿಯ ಪ್ರತಿಯೊಂದು ಕೃತಿಯನ್ನು ಸ್ವಯಮೇವ ನಿರಾಕರಿಸಬೇಕು. 'ಇಂಥ ಕವಿತೆಗಳಿಗೆ ಆಶ್ರಯಕೊಡಬಾರದು. ಇವುಗಳನ್ನು ಓದಬಾರದು' ಮೊದಲಾದವು ವಾದಿಗಳ ಉತ್ತರಾತ್ಮಕ ಮಾತುಗಳಲ್ಲ. ಖಂಡನ ಚಾತುರ್ಯವೂ ಅವುಗಳಲ್ಲಿ ಕಂಡು ಬರುವುದಿಲ್ಲ. ಪ್ರಾಸ ಪಕ್ಷಪಾತಿಗಳು ಅದನ್ನು ಅನೇಕ ರೀತಿಯಿಂದ ಮಂಡಿಸಲಿ. ಅವುಗಳಿಗೆ ಸಂಪಾದಕರೂ ಆಶ್ರಯವನ್ನು ಕೊಡಲಿ. ಅವುಗಳಿಗೆಲ್ಲ ಉತ್ತರಕೊಡುವ ಕುತೂಹಲವೂ ನಮಗುಂಟು" ಎಂದು ಚರ್ಚೆಗೆ ಆಹ್ವಾನ ನೀಡಿಯೇ ಮುಗಿಸುವರು.

'ವಾಗ್ಭೂಷಣ'ದ ಮುಂದಿನ ಸಂಚಿಕೆಯಲ್ಲೂ ಕೇಶವ ಶರ್ಮಾ ಗಲಗಲಿಯವರ ಅಭಿಪ್ರಾಯವನ್ನೇ ಮತ್ತೆ ಪ್ರಕಟಿಸಲಾಗಿದೆ. ಈ ಬಾರಿ ಅವರು ೧೯೧೮ ಡಿಸೆಂಬರ್ ೧೩ನೆ ತಾರೀಖಿನ 'ಶುಭೋದಯ' ಪತ್ರಿಕೆಯಲ್ಲಿ ಪ್ರಾಸ ವಿಷಯವಾಗಿ ಪ್ರಕಟವಾದ ಎರಡು ವಿಚಾರ ಪೂರಿತ ಲೇಖನಗಳಿಗೆ ಪ್ರತಿಕ್ರಿಯೆಯಾಗಿ ಇದನ್ನು ಬರೆದಿರುವರು. ಒಂದು ಲೇಖವು ಪ್ರಾಸನಿರಸನಪರವಾಗಿದ್ದು, ಮತ್ತೊಂದು ಅದರ ಉತ್ತರಾತ್ಮಕವಾಗಿ ಪ್ರಾಸ ಮಂಡನಪರವಾಗಿದೆ. ಪ್ರಾಸ ಮಂಡನ ಪರವಾಗಿ ಅದರಲ್ಲಿ 'ಶುಭೋದಯ'ದ ಸಂಪಾದಕರಾದ ಕೆರೂರು ವಾಸುದೇವಾಚಾರ್ಯರು ತಮ್ಮ ಅಭಿಪ್ರಾಯ ಮಂಡಿಸಿದ್ದರು.

ಪ್ರಾಸದ ಆಶ್ರಯ ಮಾಡಿದಾಗ್ಗೆ ಯತಿಭಂಗ ಉಂಟಾದರೆ ಅಡ್ಡಿಯಿಲ್ಲವೆಂದು ಶಾಸ್ತ್ರಕಾರರು ಹೇಳಿರುವರು. ಅಂದಬಳಿಕ ಯತಿ ಭಂಗ ವಿಚಾರ ಮಾಡುವ ಕಾರಣವೇ ಇಲ್ಲವೆಂದು ಶುಭೋದಯದಲ್ಲಿ ಬರೆದುದಕ್ಕೆ ಪ್ರತಿಕ್ರಿಯಿಸುವ ಗಲಗಲಿ ಅವರು, ಯತಿಭಂಗದಿಂದ ಉಂಟಾಗುವ ಅನರ್ಥ ಪರಂಪರೆಯನ್ನು ವಾಸುದೇವಾಚಾರ್ಯರು ವಿಚಾರಿಸಿರುವರೋ? ಎಂದು ಪ್ರಶ್ನಿಸುತ, 'ಪೃಥ್ವೀಶಕೋ-ಟೀರವ್ಯಾಪ್ತಿಗೆ ಸಂದಚಕ್ರ ರವಿದೈತ್ಯಧ್ವಾಂತಮಂಗೆಲ್ದ ಭೂಭಾರಚ್ಛೇದ ವಿನೋದಿ ಕೃಷ್ಣ ನಮಗೀಗಾನಂದ ಸಂದೋಹಮಂ' ಈ ರುದ್ರಭಟ್ಟನ ಕವಿತೆಯಲ್ಲಿ ಪ್ರಾಸಪರಾಧೀನನಾದ ಕವಿಗೆ ಕೋ ಒತ್ತಟ್ಟಿಗೆ ಟೀರ ಒತ್ತಟ್ಟಿಗೆ ಮಾಡಬೇಕಾಯಿತು. 'ಕೋ ಟೀರ' ಶಬ್ದವು ಒತ್ತಟ್ಟಿಗೆ ಇದ್ದರೆ ಎಷ್ಟು ಸ್ವಾರಸ್ಯವು ಬರುತ್ತಿತ್ತು! ಪರಂಪರಾಭಿಮಾನವನ್ನು ಸ್ವಲ್ಪ ಬದಿಗಿಟ್ಟು ವಿಚಾರಿಸಬೇಕು" ಎಂದು ಸಲಹೆ ನೀಡಿರುವರು.

ಪ್ರಾಚೀನ ಕವಿಗಳು ಮುಖ್ಯಪ್ರಾಸದ ಗುದ್ದಿಯನ್ನು ಕಟ್ಟಿಕೊಂಡಿದ್ದರಿಂದಲೇ ಕನ್ನಡದಲ್ಲಿ ಸಂಸ್ಕೃತದ ಮನೋರಮವಾದ ಉಪಜಾತಿ, ಮಂಜುಭಾಷಿಣಿ, ದ್ರುತ ವಿಲಂಬಿತ ಮೊದಲಾದ ಲಘು ವೃತ್ತಗಳು ವಿಪುಲವಾಗಿ ಪ್ರಚಾರದಲ್ಲಿ ಬರಲಿಲ್ಲ. ಕನ್ನಡ ಕವಿತಾ ಭಾಮಿನಿಯ ಸಲುವಾಗಿ ಷಟ್ಪದಿ ಮೊದಲಾದ ಆರಾರು ಚರಣಗಳುಳ್ಳ ದೀರ್ಘ ವೃತ್ತಗಳನ್ನು 'ಸ್ಪೆಶಲ್' ಮಂಜೂರ ಮಾಡಬೇಕಾಯಿತು ಎಂದು ಹೇಳುವ ಗಲಗಲಿ, ಕರ್ನಾಟಕ ಕವಿತಾ ಸುಂದರಿಯ ಸಲುವಾಗಿ ವಾಙ್ಮಯ ಸಭೆಯಲ್ಲಿ ಚಂಪಕಮಾಲೆ, ಉತ್ಪಲಮಾಲೆ, ಮತ್ತೇಭವಿಕ್ರೀಡಿತ ಮೊದಲಾದ 'ರಿಜರ್ವ್ ಖುರ್ಚಿಗಳು' ಸನ್ನದ್ಧವಾಗಿ ಇಡಲ್ಪಟ್ಟವು. ಪ್ರಾಸಪರವಶರಾದ ಕವಿಗಳು ಸಲೆ ವಲಂ ಮೊದಲಾದ ನಿರರ್ಥಕ ಪದಗಳನ್ನು ಉಪಯೋಗಿಸಬೇಕಾಯಿತು ಎಂದು ಹೇಳುವರು. ಗುಣ ದೋಷ ವಿಚಾರ ಮಾಡಿದರೆ ಪ್ರಾಸಭಂಗದಿಂದ ಯಾವ ಹಾನಿಯೂ ಉಂಟಾಗುವುದಿಲ್ಲ. ಯತಿಭಂಗದಿಂದ ಮಾತ್ರ ಕವಿತಾ ಅನ್ನುವಾಗ ತೊಂದರೆ, ಕ್ಲಿಷ್ಟೋಚ್ಚಾರ, ಸ್ವಾರಸ್ಯಲೋಪ ಉಂಟಾಗುತ್ತಿರಲು ಯತಿ ಭಂಗ ವಿಚಾರವನ್ನು ಕಟ್ಟಿಕೊಳ್ಳುವುದರಲ್ಲಿ ಅರ್ಥವಿಲ್ಲವೆಂದು ಹೇಳುವುದು ಹೇಗೆ? ಎಂದು ಅವರು ಪ್ರಶ್ನಿಸುವರು. ಪಂಪನು ಪ್ರಾಸತ್ರಾಸಕ್ಕೊಳಗಾಗಿ ಛಂದಸ್ಸಿನ ನಿಯಮವನ್ನು ಭಂಗಮಾಡಿದ್ದಾನೆ. ಮುಳಬಾಗಲರ ಭಾಷೆಯಿಂದ ಹೇಳಬೇಕಾದರೆ ಕನ್ನಡ ಛಂದಸ್ಸಿನ ಕೊಲೆ ಮಾಡಿದ್ದಾನೆ ಎಂದು ಹೇಳಬೇಕಾಗಿದೆ ಎಂದು ಅವರು ಹೇಳುತ್ತಾರೆ. ಕವಿತಾ ಸುಂದರಿಯ ಪಾದಗಳಲ್ಲಿರುವ ಮುಖ್ಯಪ್ರಾಸವೆಂಬ ಶೃಂಖಲೆಯನ್ನು ಕಡಿದು ಒಗೆದು ಆಕೆಯನ್ನು ಬಂಧಮುಕ್ತಳನ್ನಾಗಿ ಮಾಡಿರಿ. ಸ್ವಚ್ಛಂದವಾಗಿ ಆಕೆಯು ನಮ್ಮ ಕರ್ನಾಟಕ ವಾಙ್ಮಯೋಪವನದಲ್ಲಿ ವಿಹರಿಸಲಿ ಎಂದು ಅವರು ಹಾರೈಸುತ್ತಾರೆ.

ಇದುವರೆಗಿನ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಹಾದೇವ ಪ್ರಭಾಕರ ಪೂಜಾರ ಅವರು, 'ಪ್ರಾಸ ವಿಚಾರವು' ಎಂಬ ಸುದೀರ್ಘವಾದ ಲೇಖನವೊಂದನ್ನು

‘ವಾಗ್ಭೂಷಣ’ದಲ್ಲಿ ಪ್ರಕಟಿಸುವರು.[೬೫] ‘ಪ್ರಾಸವೆಂದರೇನು?’ ಎಂಬ ಪ್ರಶ್ನೆಯನ್ನು ಹಾಕಿಕೊಂಡು ನೃಪತುಂಗನು ಪ್ರಾಸಕ್ಕೆ ನೀಡಿದ ವ್ಯಾಖ್ಯೆಯನ್ನು ಉಲ್ಲೇಖಿಸುವರು. ಪ್ರಾಸದ ಮುಖ್ಯಭೇದಗಳು, ಉಪಭೇದಗಳನ್ನು ಅವರು ವಿವರಿಸುವರು. ನೃಪತುಂಗನು ಪ್ರಾಸವನ್ನು ಶಬ್ದಾಲಂಕಾರಗಳಲ್ಲಿ ಸೇರಿಸಿರುವನು. ಆದರೆ ಅದು ಶಬ್ದಾಲಂಕಾರಗಳಲ್ಲಿ ಸೇರುವುದೋ ಇಲ್ಲವೋ ಹೇಗೇ ಇರಲಿ, ಅದು ಕನ್ನಡ ಕವಿತೆಯ ಮುಖ್ಯ ಲಕ್ಷಣಗಳಲ್ಲೊಂದಾಗಿರುವದು. ಮತ್ತು ಪ್ರಾಸವು ತಪ್ಪಿದರೆ ನಾಗವರ್ಮನು ಹೇಳುವಂತೆ ಕಾವ್ಯವು ಶೋಭಿಸಲಾರದೆಂಬುದಿಷ್ಟೇ ಅಲ್ಲ, ಅದು ಛಂದೋಬದ್ಧಕಾವ್ಯವೆಂದೆನಿಸಲಾರದು; ಅಂದರೆ ಪ್ರಾಸವು ಕನ್ನಡದಲ್ಲಿ ಶಬ್ದಾಲಂಕಾರ ಮಾತ್ರವಲ್ಲ, ಛಂದೋಲಕ್ಷಣದಷ್ಟು ಮಹತ್ವವು ಅದಕ್ಕೆ ಇರುವದು. ಕನ್ನಡದ ಕವಿಗಳು ಬಹು ಪೂರ್ವಕಾಲದಿಂದ ಪ್ರಾಸವನ್ನು ಪಾಲಿಸುತ್ತ ಬಂದಿರುವರು ಎಂದು ಪೂಜಾರ ಸಮಾಲೋಚಿಸುವರು. ಕನ್ನಡಕ್ಕೆ ಬಹು ಪರಿಯಿಂದ ಮಾದರಿಯಾಗಿರುವ ಸಂಸ್ಕೃತದಲ್ಲಿ ಪ್ರಾಸವೆಂಬುದು ಇಲ್ಲ. ಅನುಪ್ರಾಸವೆಂಬುದು ಅಲ್ಲಿ ಉಂಟು. ಅನುಪ್ರಾಸಕ್ಕೂ ಕನ್ನಡದ ಪ್ರಾಸಕ್ಕೂ ಲಕ್ಷಣ ಸಾಮ್ಯವಿಲ್ಲ ಎಂಬ ಅಂಶವನ್ನು ಅವರು ಗಮನಿಸುವರು. ಪ್ರಾಸದ ನಿಯಮವು ಕನ್ನಡ ಕವಿಗಳ ಪಾಲಿಗೆ ಹೇಗೆ ಬಂದಿತು? ಒಬ್ಬನೂ ಇದನ್ನು ಉಲ್ಲಂಘಿಸದೆ ತಪ್ಪದೆ ಪಾಲಿಸುವ ಪ್ರಯತ್ನವನ್ನು ಮಾಡುವಷ್ಟು ಮೋಹವು ಹೇಗೆ ಉಂಟಾಯಿತು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಅದಕ್ಕೆ ಅವರು ನೃಪತುಂಗನಲ್ಲೇ ಉತ್ತರ ಹುಡುಕಿರುವರು.

ದೋಸಮನೆ ಗುಣದವೋಲು

---------ಯತಿಯಂ ಮಿಕ್ಕರ್॥

ದೋಷ(ವೆನಿಸಿದ ಯತಿ ಭಂಗ)ವನ್ನೇ ಕನ್ನಡದಲ್ಲಿ ಗುಣದಂತೆ ತೋರ್ಪಡಿಸಿ ಖಂಡಪ್ರಾಸ (ಪ್ರಾಸ?)ವನ್ನು ಮುಖ್ಯವಾಗಿ ಇಟ್ಟುಕೊಂಡು ಯತಿಯನ್ನು ಮಿಕ್ಕರು. ಅಂದರೆ ಯತಿ ಭಂಗವನ್ನು ಮಾಡಿದುದಕ್ಕಾಗಿ ಪ್ರಾಸವನ್ನು ಪಾಲಿಸುವರೆಂದು ಹೇಳಿದಂತಾಗಿದೆ. ಯತಿಯನ್ನು ಬಿಟ್ಟಿದ್ದರಿಂದ ಕವಿತೆಗೆ ಬಂದ ಕುಂದನ್ನು ಪ್ರಾಸದಿಂದ ನೀಗಲಾಡಿಸಿದಂತಾಯಿತೆಂದು ಭಾವಿಸಿದರೆಂದು ತೋರುತ್ತದೆ. ಇಲ್ಲವೆ ಪ್ರಾಸಕ್ಕಾಗಿ ಯತಿಯನ್ನು ಮಿಕ್ಕರೋ? ಎಂದು ಪೂಜಾರ ಅರ್ಥೈಸಿದ್ದಾರೆ. ಭಾಗವತರಾಟದಲ್ಲಿ ಗೋಪಾಲಕರೂ ತೊತ್ತುಗಳೂ ಹಾಡುವ ಪದ್ಯಗಳಲ್ಲಿ ಅನುಪ್ರಾಸದ ಮೋಹ ಇರುವುದನ್ನು ಅವರು ಗುರುತಿಸುವರು. ಮೊದಲಿಗೆ ಇದು ಕೌತುಕ ಎನಿಸಿದರೂ ಕ್ರಮೇಣ ಅದು ನೀರಸ ಎನಿಸುವುದು ಎಂಬ ಮಹತ್ವದ ಅಂಶವನ್ನು ಅವರು ಹೇಳಿದ್ದಾರೆ.

೬೫.ವಾಗ್ಭೂಷಣ- ಸಂಪುಟ ೨೩, ಸಂಚಿಕೆ ೧೨, ಮಾರ್ಚ್ ೧೯೧೯

ಕಾವ್ಯಮಾರ್ಗದಲ್ಲಿ ಪ್ರಾಸದ ಸ್ಥಾನವೇನು? ಎಂಬ ಪ್ರಶ್ನೆಗೆ ಪೂಜಾರ ಅವರು ಕೊನೆಯ ಸ್ಥಾನ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಇಲ್ಲದೆ ಇಲ್ಲ. ಅಲಂಕಾರಗಳು ಶರೀರಕ್ಕೆ ಶೋಭೆಯನ್ನುಂಟುಮಾಡುವಂತೆ ಕಾವ್ಯಕ್ಕೆ ಶೋಭೆಯನ್ನುಂಟುಮಾಡುವವೇ ಹೊರತು ಕಾವ್ಯತ್ವವನ್ನುಂಟುಮಾಡಲಾರವು. ಅಲಂಕಾರಗಳಲ್ಲಿಯೂ ಶಬ್ದಾಲಂಕಾರಗಳು, ಅರ್ಥಾಲಂಕಾರಗಳಿಗಿಂತ ಕಡಿಮೆ ತರದವು. ಕನ್ನಡದ ಪ್ರಾಸವು ಅನುಪ್ರಾಸದ ಆಭಾಸರೂಪವಾಗಿರುವದೆಂದು ಇಟ್ಟುಕೊಂಡರೂ ಕಾವ್ಯಮಾರ್ಗದಲ್ಲಿ ಅದಕ್ಕೆ ಮಹತ್ವವೇನೂ ಇಲ್ಲ ಎಂಬುದು ಅವರ ತೀರ್ಮಾನ.

ಕಾವ್ಯದೃಷ್ಟಿಯಿಂದ ಛಂದೋಬದ್ಧತೆಗೆ ಅಷ್ಟೊಂದು ಪ್ರಾಮುಖ್ಯವಿಲ್ಲ. ಛಂದಸ್ಸಂಬಂಧವಿಲ್ಲದ ಗದ್ಯಭಾಗವೂ ಕಾವ್ಯವೇ. ಕವಿಯ ಮುಖದಿಂದ ಹೊರಟ ರಸಲಹರಿಯು ಇಲ್ಲವೆ ಭಾವಲಹರಿಯು ಕಾವ್ಯವು. ಅದಕ್ಕೆ ಛಂದಸ್ಸಂಬಂಧ ಕೃತ್ರಿಮವಾದುದು; ಸಹಜವಾದುದಲ್ಲ. ಕವಿಯ ಹೃದಯಾಬ್ಧಿಯಲ್ಲಿದ್ದ ರಸ ಲಹರಿಗಳು ಸ್ವಾಭಾವಿಕವಾಗಿ ಹೊರಬೀಳುವುದು ಆತನಾಡುವ ವಾಕ್ಯಗಳ ರೂಪದಿಂದಲೇ. ಅವು ಅಕ್ಷರಗಳ ಇಲ್ಲವೆ ಮಾತ್ರೆಗಳ ಲೆಕ್ಕ ನೋಡಲಾರವು ಎಂಬ ಮಾತನ್ನು ಪೂಜಾರ ಹೇಳುವರು. ಇದೇ ಮುಂದೆ ವಿ.ಕೃ.ಗೋಕಾಕರು ಛಂದಸ್ಸನ್ನು ತೊರೆದು ಕಾವ್ಯ ಬರೆಯುವುದಕ್ಕೆ ಸ್ಫೂರ್ತಿ ನೀಡಿರಬಹುದು. ಪ್ರಾಸ ನಿರ್ಬಂಧದಿಂದ ಕಾವ್ಯದಲ್ಲಿ ನಿರರ್ಥಕತ್ವ, ಅಧಿಕಪದತ್ವ ಎಂಬ ದೋಷಗಳು ಉಂಟಾಗುವವು ಎಂದು ಪೂಜಾರ ಉದಾಹರಣೆ ನೀಡಿರುವರು.

ಭವಿಷ್ಯದಲ್ಲಿ ರಸಪ್ರಧಾನವಾದ ಕಾವ್ಯವನ್ನು ಮಾಡುವ ಕವಿಗಳು ತಮಗೆ ಪ್ರಾಸದ ತೊಂದರೆಯಾದರೆ ಅದನ್ನು ಮೀರಬಹುದು. ಪ್ರಾಸೋಪಪ್ರಾಸಾದಿ ಭೇದಗಳು ಲಕ್ಷಣ ಶಾಸ್ತ್ರದಲ್ಲಿ ಸೇರಿದುದು ಹೇಗೆ? ಕವಿಗಳು ಅಂತು ಬೇರೆಬೇರೆ ಪ್ರಾಸಗಳುಳ್ಳ ಕಾವ್ಯಗಳನ್ನು ರಚಿಸಿದುದರಿಂದೇ ಅಲ್ಲವೆ? ಲಕ್ಷಣ ಶಾಸ್ತ್ರವು ಭಾಷೆಯನ್ನು ಅನುಸರಿಸುವುದೇ ಹೊರತು ಭಾಷೆಯು ಲಕ್ಷಣ ಶಾಸ್ತ್ರವನ್ನು ಅನುಸರಿಸಲಾರದು ಎಂಬ ಅವರ ಮಾತು ಮಹತ್ವದ್ದು. ಪ್ರಾಸಾತಿಕ್ರಮಣದಿಂದ ಕನ್ನಡ ಭಾಷೆಯ ಕನ್ನಡತನಕ್ಕೂ ಕನ್ನಡಿಗರ ಕನ್ನಡತನಕ್ಕೂ ಕೇಡು ಒದಗೀತೆಂದು ತಾವು ಭಾವಿಸುವುದಿಲ್ಲ ಎಂದು ಪೂಜಾರರು ಮುಗಿಸಿರುವರು.

ಈ ಲೇಖಕರ ಅಭಿಪ್ರಾಯದಲ್ಲಿ ತಮ್ಮ ಅಭಿಪ್ರಾಯದ ಬಹ್ವಂಶ ಬಂದಿರುವುದರಿಂದಲೂ, ಈ ಬಗ್ಗೆ ಸಾಕಷ್ಟು ಚರ್ಚೆ ಆಗಿರುವುದರಿಂದಲೂ ಈ ಕುರಿತು ಮತ್ತೆ ಲೇಖನಗಳನ್ನು ಪ್ರಕಟಿಸುವ ಅವಶ್ಯಕತೆ ತೋರುವುದಿಲ್ಲವೆಂದು ಸಂಪಾದಕರು ವಾಗ್ವಾದಕ್ಕೆ ತಮ್ಮ ಪತ್ರಿಕೆಯಲ್ಲಿ ಕೊನೆ ಹೇಳುವರು.

ಇಪ್ಪತ್ತನೆ ಶತಮಾನದ ಆರಂಭದ ಎರಡು ದಶಕಗಳಲ್ಲಿ ಕನ್ನಡ ಕಾವ್ಯದ ಅವಿಭಾಜ್ಯ ಅಂಗವಾದ ಪ್ರಾಸ ತ್ಯಾಗದ ಬಗ್ಗೆ ಪಾಂಡಿತ್ಯಪೂರ್ಣವಾದ ಚರ್ಚೆ ನಡೆಯಿತು. ಎರಡನೆಯ

ದಶಕದ ಕೊನೆಯಲ್ಲಿ ಒಂದು ಅಂತಿಮ ನಿರ್ಣಯಕ್ಕೆ ಬಂದಹಾಗೆ ಆಗಿತ್ತು. ಪ್ರಾಸವನ್ನು ಬೇಕಾದವರು ಬಳಸಬಹುದು, ಬೇಡದವರು ಬಿಡಬಹುದು ಎಂಬುದು ಸಾಮಾನ್ಯವಾಗಿ ಒಪ್ಪಿತ ಅಂಶವಾಗಿತ್ತು. ನವೋದಯ ಕಾವ್ಯದ ಮಹಾನ್ ಕವಿಗಳ ಕಾವ್ಯ ಇನ್ನೂ ಬರುವ ಪೂರ್ವದಲ್ಲಿಯೇ ಅವರಿಗೊಂದು ಮಾರ್ಗ ಸಿದ್ಧಗೊಂಡಿತ್ತು. ಬಿ.ಎಂ.ಶ್ರೀ., ಬೇಂದ್ರೆ, ಕುವೆಂಪು, ಪುತಿನ, ವಿ.ಸೀ. ಮೊದಲಾದವರೆಲ್ಲ ಪ್ರಾಸಮುಕ್ತವಾಗಿಯೇ ತಮ್ಮ ಕವಿತೆಗಳನ್ನು ರಚಿಸಿದ್ದಾರೆ.

ಪ್ರಾಸದ ಬಗ್ಗೆ ವಿವರವಾದ ಮಾಹಿತಿ ನಮಗೆ ದೊರೆಯುವುದು ಕನ್ನಡದ ಉಪಲಬ್ಧ ಆದಿಗ್ರಂಥ ಕವಿರಾಜ ಮಾರ್ಗದಲ್ಲಿಯೇ. ಅಂದರೆ ಅದಕ್ಕೂ ಪೂರ್ವದಲ್ಲಿಯೇ ಪ್ರಾಸದ ಬಳಕೆ ಕನ್ನಡ ಕಾವ್ಯದಲ್ಲಿ ರೂಢವಾಗಿತ್ತು. ಪ್ರಾಸದ ಪ್ರಾಚೀನತೆಯನ್ನು ಹುಡುಕುತ್ತ ಹೋದರೆ ಶಾಸನಗಳಲ್ಲಿ ಇದು ದೊರೆಯುತ್ತದೆ. ಕನ್ನಡದ ಮೊದಲ ಪದ್ಯವೆಂದು ಪರಿಗಣಿತವಾಗಿರುವ ತಮಟಕಲ್ಲು ಶಾಸನದಲ್ಲಿಯೇ ಪ್ರಾಸದ ಬಳಕೆಯಾಗಿದೆ. ಇದರ ಕಾಲ ಕ್ರಿ.ಶ.ಸು. ೫೦೦.

ಫಣಿಮಣಿ ಅನ್ತು ಭೋಗಿ ಫಣದುಳ್ಮನದೋನ್।
ರಣಮುಖದುಳ್ಳಿ ಕೋಲ ನೆರಿಯರ್ಕ್ಕುಮನಿನ್ದ್ಯ ಗುಣನ್॥
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್।
ಗುಣಮಧುರಾಂಕ ದಿವ್ಯಪುರುಷನ್ ಪುರುಷ ಪ್ರವರನ್॥

ಅತ್ಯಷ್ಟಿ ಛಂದಸ್ಸಿನ ಕನಕಾಬ್ಜಿನೀ ಹೆಸರಿನ ಅಪೂರ್ವ ವೃತ್ತವಿದು. ಕನ್ನಡದ ಮೊದಲ ಉಪಲಬ್ಧ ತ್ರಿಪದಿ ಎಂದು ಪರಿಗಣಿತವಾಗಿರುವ, ಕ್ರಿ.ಶ. ಸುಮಾರು ೭೦೦ರ ಬಾದಾಮಿ ಶಾಸನದ 'ಸಾಧುಗೆ ಸಾಧು ಮಾಧೂ(ಧು)ರ್ಯ್ಯಂಗೆ ಮಾಧೂ(ಧು)ರ್ಯ್ಯಂ...' ಇದರಲ್ಲಿಯೂ ಪ್ರಾಸವನ್ನು ಪಾಲಿಸಲಾಗಿದೆ. ಕ್ರಿ.ಶ.ಸು.೭೦೦ರ ಶ್ರವಣಬೆಳುಗೊಳ ಶಾಸನದಲ್ಲಿಯೂ ಪ್ರಾಸ ಪಾಲನೆಯಾಗಿದೆ. ಹೀಗೆ ಅನೂಚಾನವಾಗಿ ಸುಮಾರು ೧೫೦೦ ವರ್ಷಗಳ ಕಾಲ ಕನ್ನಡ ಕಾವ್ಯದ ಭಾಗವಾಗಿದ್ದ ಪ್ರಾಸವನ್ನು ಬಿಡಬೇಕು ಎಂಬ ಆಲೋಚನೆ ಬಂದದ್ದೇ ಅಪೂರ್ವ.

ಈವರೆಗಿನ ಚರ್ಚೆಯಲ್ಲಿ ಗಮನಿಸಿರುವಂತೆ, ಕನ್ನಡ ಭಾಷೆಯೊಂದಿಗೆ ಬಹುಕಾಲದ ಸಾಹಚರ್ಯವನ್ನು ಹೊಂದಿರುವ ಸಂಸ್ಕೃತದಲ್ಲಿ ಇದು ಇಲ್ಲ. ಹಾಗೆಯೇ ಇಂಗ್ಲಿಷ್ ಕಾವ್ಯದಲ್ಲಿಯೂ ಈ ದ್ವಿತೀಯಾಕ್ಷರ ಪ್ರಾಸವಿಲ್ಲ. ಆಧುನಿಕ ಕವಿಗಳಲ್ಲಿ ಪಾಂಡಿತ್ಯದ ಕೊರತೆಯಿಂದಾಗಿಯೇ ಪ್ರಾಸವನ್ನು ಬಿಡಲು ಮುಂದಾಗಿದ್ದಾರೆ ಎಂಬ ಆರೋಪದಲ್ಲಿಯೂ ಹುರುಳಿಲ್ಲದಿರುವುದು ಕಾಣುತ್ತದೆ. ಪ್ರಾಸಾಧೀನರಾದ ಮಹಾಕವಿಗಳೇ ಪ್ರಾಸದಿಂದ ಕಷ್ಟಕ್ಕೆ ಒಳಗಾದುದು ಇಲ್ಲಿಯ ವಿವೇಚನೆಯಲ್ಲಿ ಬಂದಿದೆ.

ಈ ಪರಂಪರೆಯನ್ನು ಪ್ರಶ್ನಿಸುವ ಮನೋಭಾವವೇ ಆಶ್ಚರ್ಯಕರವಾದದ್ದು. ಇದು

ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮ ಎಂದೇ ಹೇಳಬೇಕು. ಆಂಗ್ಲರ ಆಗಮನದಿಂದ ಸಮಾಜದ ವಿವಿಧ ಸ್ತರಗಳಲ್ಲಿ ಪುನರುಜ್ಜೀವನ ಕಾಣಿಸಿಕೊಂಡಿತ್ತು. ಅದರ ಫಲವಾಗಿಯೇ ಪ್ರಾಸದ ಬಗೆಗೆ ವಾಗ್ವಾದ ಸಾಧ್ಯ ಆದದ್ದು.

ಪ್ರಾಸವನ್ನು ಬಿಡಬೇಕೆಂಬ ವಿಚಾರ ಹೊಸಗನ್ನಡ ಸಾಹಿತ್ಯ ಬೆಳೆದು ಬಂದ ರಾಜ್ಯದ ಮೂರು ಕೇಂದ್ರಗಳು ಎಂದು ಗುರುತಿಸಲಾದ ಧಾರವಾಡ, ಮಂಗಳೂರು ಮತ್ತು ಮೈಸೂರುಗಳಲ್ಲಿ ಏಕಕಾಲದಲ್ಲಿ ನಡೆದಿದೆ. ಈ ಮೂರೂ ಭಾಗಗಳ ಸಾಹಿತ್ಯಪತ್ರಿಕೆಗಳು ಇದಕ್ಕೆ ವೇದಿಕೆಯನ್ನು ಒದಗಿಸಿವೆ. ಎರಡೂ ಪಕ್ಷದವರ ಅಭಿಪ್ರಾಯವನ್ನು ಮಂಡಿಸುವುದರ ಜೊತೆಯಲ್ಲಿ ಪ್ರಾಸ ಸಹಿತ, ಪ್ರಾಸ ರಹಿತ ಎರಡೂ ರೀತಿಯ ಪದ್ಯಗಳನ್ನು ಇವು ಪ್ರಕಟಿಸಿವೆ. ಪ್ರಾಸ ಪರವಾಗಿದ್ದವರು ಪ್ರಾಸ ರಹಿತ ಪದ್ಯಗಳನ್ನು ಪ್ರಕಟಿಸಬಾರದು ಎಂದು ಕರೆ ನೀಡಿದ್ದನ್ನು ಅವು ಲಕ್ಷ್ಯಕ್ಕೆ ತಂದುಕೊಂಡಿಲ್ಲ.

ಒಟ್ಟಾರೆಯಾಗಿ ಪ್ರಾಸ ತ್ಯಾಗದ ಬಗೆಗೆ ಆಲೋಚನೆ ಮೂಡುವುದಕ್ಕೆ ಆಧುನಿಕ ಶಿಕ್ಷಣದಿಂದ ತರಬೇತಾದ ಮನಸ್ಸು, ಪುನರುಜ್ಜೀವನ ವಾತಾವರಣ, 'ಹಳೆಯದೆಲ್ಲ ಹೊನ್ನಲ್ಲ' ಎಂಬ ಚಿಕಿತ್ಸಕ ಬುದ್ಧಿ, ಹೊಸದರ ಕಡೆಗಿನ ತುಡಿತ ಇವುಗಳೇ ಕಾರಣ ಎಂದು ಹೇಳಬಹುದು. ಹೊಸಗನ್ನಡ ಸಾಹಿತ್ಯ ಪಡೆದುಕೊಂಡ ಈ ಮಹತ್ವದ ತಿರುವಿನಲ್ಲಿ ಸಾಹಿತ್ಯ ಪತ್ರಿಕೆಗಳು ಜವಾಬ್ದಾರಿಯಿಂದ ವರ್ತಿಸಿ ತಮ್ಮ ಹೊಣೆ ನಿರ್ವಹಿಸಿವೆ ಎಂದೇ ಹೇಳಬೇಕು.

ಪ್ರಾಸ ತ್ಯಾಗ ವಾಗ್ವಾದದಲ್ಲಿ ವೇದಿಕೆ ಒದಗಿಸಿದ ಪ್ರಮುಖ ಪತ್ರಿಕೆಗಳು:

೧.ವಾಗ್ಭೂಷಣ, ೨.ಶುಭೋದಯ, ೩. ಕರ್ನಾಟಕ ವೈಭವ, ೪.ಮಧುರವಾಣಿ, ೫.ಸ್ವದೇಶಾಭಿಮಾನಿ, ೬.ಸಾಧ್ವಿ, ೭.ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೮.ಶ್ರೀಕೃಷ್ಣ ಸೂಕ್ತಿ ೯.ಪ್ರಭಾತ, ೧೦.ಕನ್ನಡ ಕೋಗಿಲೆ.

ಅನುವಾದ ವಾಗ್ವಾದ :

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಇಂಗ್ಲಿಷ್ ಹಾಗೂ ಇತರ ಐರೋಪ್ಯ ಭಾಷೆಗಳಿಂದ ಮತ್ತು ಇತರ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಗಳು ನಡೆದವು. ಅನುವಾದ, ಭಾವಾನುವಾದ, ರೂಪಾಂತರಗಳು ಕನ್ನಡ ಸಾಹಿತ್ಯಕ್ಕೆ ಹೊಸದೇನಲ್ಲ. ಮಾರ್ಗಸಾಹಿತ್ಯದ ಕಾಲದಲ್ಲಿ ಪ್ರಾಕೃತ, ಸಂಸ್ಕೃತಗಳಿಂದ ಮೂಲ ಆಕರಗಳನ್ನು ಪಡೆದು ಕನ್ನಡದಲ್ಲಿ ಕೃತಿ ರಚನೆ ಮಾಡಿ ಮಹಾಕವಿಗಳೆನ್ನಿಸಿಕೊಂಡವರು ಇದ್ದಾರೆ. ಪಂಪ ಭಾರತದಲ್ಲಿ ಮಾಡಿಕೊಂಡ ಬದಲಾವಣೆಗಳು ಇಂದಿನ ವಿಮರ್ಶಕರ ಟೀಕೆಗೆ ಗುರಿಯಾಗಿವೆ. ಪಂಪ ಮಹಾಭಾರತದ ಅರ್ಜುನನನ್ನು ತನ್ನ ದೊರೆ ಅರಿಕೇಸರಿಯೊಂದಿಗೆ ಸಮೀಕರಿಸಿದ್ದು, ದ್ರೌಪದಿಗೆ ಅರ್ಜುನನೊಬ್ಬನನ್ನೇ ಪತಿಯಾಗಿಸಿದ್ದು, ಯುದ್ಧದ ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾಗುವುದು ಇವೆಲ್ಲ ಪಂಪ ಮಾಡಿಕೊಂಡಿದ್ದ ಮಾರ್ಪಾಟುಗಳಾಗಿತ್ತು. ಇದು

ಆಧುನಿಕ ವಿಮರ್ಶಕರಿಗೆ ಸರಿ ಬಂದಿಲ್ಲ. ಸಂಸ್ಕೃತ, ಪ್ರಾಕೃತ ಕಾವ್ಯಗಳನ್ನು ಕನ್ನಡಕ್ಕೆ ತರುವ ಪಂಪನ ಪರಂಪರೆ ಪೊನ್ನ, ರನ್ನರಲ್ಲಿಯೂ ನಾವು ಕಾಣುತ್ತೇವೆ. ನಮ್ಮ ಮೊದಲ ಉಪಲಬ್ಧ ಕೃತಿ ಕವಿರಾಜಮಾರ್ಗದಲ್ಲಿಯೇ ಸಾಕಷ್ಟು ಅನುವಾದ ಪದ್ಯಗಳಿವೆ. ಅದೇ ರೀತಿ ಹೊಸಗನ್ನಡದ ಆರಂಭ ಕಾಲದಲ್ಲಿ ಇಂಗ್ಲಿಷ್, ಬಂಗಾಳಿ, ಮರಾಠಿಗಳಿಂದ ಸಾಹಿತ್ಯ ಕೃತಿಗಳು ಅನುವಾದವಾಗಿ ಬಂದವು. ಇಂಗ್ಲಿಷ್‌ನಿಂದ ಅನುವಾದವಾಗಿ ಬಂದ ಕೃತಿಗಳ ಬಗೆಗೆ ತೀವ್ರ ಟೀಕೆಗಳು ಎದುರಾಗಿವೆ. ಅಂಕಿತನಾಮಗಳು, ಸ್ಥಳನಾಮಗಳನ್ನು ಬದಲಿಸಿದ ಬಗೆಗೆ ಕಟು ಟೀಕೆ ಮಾಡಲಾಗಿದೆ. ಅನುವಾದ ಹೇಗಿರಬೇಕು? ಹೇಗಿರಬಾರದು ಎಂಬ ಬಗ್ಗೆ ಪತ್ರಿಕೆಗಳಲ್ಲಿ ವಾಗ್ವಾದ ನಡೆದಿದೆ. ನಂತರ ಅದು ಭಾಷಾಂತರದ ಕುರಿತು ಒಂದು ಕೃತಿ ರಚಿಸುವುದಕ್ಕೆ ಕಾರಣವಾಯಿತು.

ಆಗಿನ ಹೊಸ ಶಿಕ್ಷಣ ಕಲಿತ ಜನರಿಗೆ ಭಾಷಾಂತರ ಅನಿವಾರ್ಯ ಎನಿಸಿತ್ತು. ಸರಕಾರಿ ಕಚೇರಿಗಳಲ್ಲಿ ಇದ್ದವರು ಹೆಚ್ಚಾಗಿ ಭಾಷಾಂತರ ಕಾರ್ಯವನ್ನೇ ಮಾಡಬೇಕಿತ್ತು. ಆಳುವ ಬ್ರಿಟಿಷ್ ಪ್ರಭುಗಳಿಗೆ ಕಚೇರಿ ದಫ್ತರುಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಬೇಕಿತ್ತು. ಭಾಷಾಂತರಿಗಳೆಂದೇ ನೌಕರಿಗೆ ತಗೆದುಕೊಳ್ಳಲಾಗುತ್ತಿತ್ತು. ಕಂದಾಯ ಇಲಾಖೆ, ಶಿಕ್ಷಣ ಇಲಾಖೆಗಳಿಂದ ಹಿಡಿದು ಪುರಾತತ್ವ ಇಲಾಖೆಯ ವರೆಗೆ ಎಲ್ಲೆಡೆಗೂ ಅನುವಾದಕರಿದ್ದರು. ಶಾಸನಗಳನ್ನು ಸಂಶೋಧಿಸಿದವರು ಅದನ್ನು ಇಂಗ್ಲಿಷ್‌ಗೆ ಅನುವಾದಿಸಿ ವರದಿ ಸಲ್ಲಿಸಬೇಕಿತ್ತು. ಇಂಥ ವ್ಯವಸ್ಥೆಯಲ್ಲಿ ಭಾಷಾಂತರ ಆ ಕಾಲದಲ್ಲಿ ನಿತ್ಯಕರ್ಮ ಎನ್ನುವಂತಾಗಿತ್ತು.

ಇಂಥ ಭಾಷಾಂತರಿಗಳಲ್ಲಿ ಸಾಹಿತ್ಯದ ಬಗ್ಗೆ ಅಭಿರುಚಿ ಇದ್ದವರು ಅನ್ಯಭಾಷೆಯ ಗ್ರಂಥಗಳನ್ನು ಅನುವಾದಿಸತೊಡಗಿದರು. ಇಂಥ ಭಾಷಾಂತರಿಗಳಿಗೆ ಆಂಗ್ಲರಲ್ಲಿ ಶೇಕ್ಸ್‌ಪಿಯರ್ ಮೆಚ್ಚಿನವನಾದ. ಆತನ ನಾಟಕಗಳು ಅನುವಾದಗೊಂಡಹಾಗೆಯೇ ಕಥಾರೂಪದಲ್ಲಿಯೂ ಬಂದಿವೆ. ಶೇಕ್ಸ್‌ಪಿಯರನ ಬಹುತೇಕ ಕೃತಿಗಳು ಕನ್ನಡದಲ್ಲಿ ಅನುವಾದಗೊಂಡಿದ್ದು ಹೊಸಗನ್ನಡದ ಆರಂಭದ ದಶಕಗಳ ವೈಶಿಷ್ಟ್ಯ. ಕನ್ನಡದ ಮೊಟ್ಟಮೊದಲ ಕಾದಂಬರಿ 'ಯಮುನಾಬಾಯಿ ಪರ್ಯಟನ' (೧೮೬೯) ಒಂದು ಅನುವಾದ ಕೃತಿಯೇ. ಮರಾಠಿಯಲ್ಲಿ ಬಾಬಾಪದಮಂಜಿ ಎನ್ನುವವರು ಬರೆದುದನ್ನು ಕನ್ನಡಕ್ಕೆ ಸೋಲೋಮನ್ ಭಾಸ್ಕರ ತಂದರು.

ಒಬ್ಬ ಅನುವಾದಕನಿಗೆ ಭಾರತೀಯ ಸಂದರ್ಭದಲ್ಲಿ ಇರುವ ಸವಾಲುಗಳು ಹಲವು. ''ಭಾರತದ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಸಾಹಿತ್ಯ ಕೃತಿಗಳನ್ನು ಅನುವಾದಿಸುವಾಗ ಪಾರಿಭಾಷಿಕ ಮತ್ತು ಸಾಂಸ್ಕೃತಿಕ ಶಬ್ದಗಳ ಅಡಚಣೆ ಹೆಚ್ಚಾಗಿ ಉಂಟಾಗುವುದಿಲ್ಲ. ನಮ್ಮ ಸಾಹಿತ್ಯ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವುದು ನಿಜವಾಗಿಯೂ ಕಷ್ಟ. ಏಕೆಂದರೆ ಇದು ಒಂದು ಸಂಸ್ಕೃತಿಯಲ್ಲಿ ಬೆಳೆದು ಅಭಿವ್ಯಕ್ತವಾದ ಅನುಭವವನ್ನು ಇನ್ನೊಂದು ಸಂಸ್ಕೃತಿಯ ಅಭಿವ್ಯಕ್ತಿ ಮಾಧ್ಯಮವಾದ ಭಾಷೆಯಲ್ಲಿ

ರೂಪುಕೊಡುವ ಕ್ರಮ. ಭಾರತೀಯ ಭಾಷಾ ಕೃತಿಗಳ ಇಂಗ್ಲಿಷ್ ಅನುವಾದವನ್ನು ಭಾರತದ ಕೆಲವು ಇಂಗ್ಲಿಷ್ ಸಾಹಿತ್ಯ ಪ್ರಕಾಶಕರು ಪ್ರಕಟಿಸುತ್ತಾರಾದರೂ ಅದು ಬಹತೇಕ ಭಾರತದಲ್ಲೇ ಹುಟ್ಟಿ ಬೆಳೆದರೂ ಯಾವ ಭಾರತೀಯ ಭಾಷೆಯಲ್ಲಿಯೂ ಪ್ರಭುತ್ವವಿಲ್ಲದ ಇಂಗ್ಲಿಷ್ ಓದುಗರಿಗೆ ಸೀಮಿತವಾಗಿದೆ"[೬೬] ಎಂದು ಎಸ್.ಎಲ್. ಭೈರಪ್ಪ ಹೇಳಿದ್ದಾರೆ.

೧೯ನೆ ಶತಮಾನದ ಕೊನೆಯಲ್ಲಿ 'ಕನ್ನಡಿಗರ ಜನ್ಮಸಾರ್ಥಕತೆ'[೬೭] ಎಂಬ ಪುಸ್ತಕವನ್ನು ಬರೆದ ವಲ್ಲಭ ಮಹಾಲಿಂಗ ತಟ್ಟಿ ಮಾಸ್ತರು ಭಾಷಾಂತರದ ಬಗ್ಗೆ ಕೆಲವು ನಿರ್ದಿಷ್ಟ ವಿಚಾರಗಳನ್ನು ಹೇಳಿದ್ದಾರೆ. ಭಾಷೆಯು ಭಾಷಾಂತರದಿಂದ ಹೇಗೆ ಶ್ರೀಮಂತಗೊಳ್ಳುವುದು, ಭಾಷಾಂತರವು ಹೇಗಿರಬೇಕು ಎಂಬಿತ್ಯಾದಿ ವಿವರಗಳನ್ನು ಇದು ಒಳಗೊಂಡಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಭಾಷಾಂತರ ಆರಂಭವಾಗಿ ೫೦ ವರ್ಷಗಳೂ ಆಗಿರಲಿಲ್ಲ. ಆಗಲೇ ಇಂಥ ವಿಚಾರ ಪ್ರಚೋದಕ ಲೇಖನ ಮತ್ತು ಪುಸ್ತಕ ಪ್ರಕಟವಾಗಿದ್ದು ಮಹತ್ವದ ಅಂಶವಾಗಿದೆ.

ಪರಭಾಷೆಯ ಪದ್ಯ ಗ್ರಂಥಗಳನ್ನು ಇದ್ದಕ್ಕಿದ್ದ ಹಾಗೆ ಭಾಷಾಂತರಿಸುವುದು ಅತಿಶಯ ಶ್ರಮದ ಕೆಲಸ ಎಂದು ಹೇಳುವ ತಟ್ಟಿಯವರು ಗದ್ಯಕ್ಕಿಂತ ಪದ್ಯದ ಅನುವಾದ ಕಷ್ಟ ಎಂದು ಅಭಿಪ್ರಾಯಪಡುತ್ತಾರೆ. ಇದು ಅಂದಿಗೂ ಇಂದಿಗೂ ಎಂದೆಂದಿಗೂ ಸತ್ಯವಾದ ಮಾತು. ಯಾವ ಭಾಷೆಯ ಗ್ರಂಥಗಳ ಭಾಷಾಂತರ ಮಾಡಬೇಕಾವುದೋ, ಆ ಭಾಷೆಯ ವ್ಯಾಕರಣ, ಅರ್ಥ ಸ್ವಾರಸ್ಯ, ಛಂದೋ ನಿಯಮಗಳು ಚೆನ್ನಾಗಿ ಗೊತ್ತಿರಬೇಕಾಗುತ್ತದೆ. ಮತ್ತು ಅದರಷ್ಟೇ ವ್ಯಾಪಕಾರ್ಥವುಳ್ಳ ಸ್ವಭಾಷೆಯ ಶಬ್ದಗಳು ಬೇಗನೆ ನೆನಪಾಗುವಂತೆ ನಿಪುಣತೆಯಿರಬೇಕಾಗುತ್ತದೆ. ಎರಡೂ ಭಾಷೆಗಳ ಮರ್ಮವಂತೂ ಗೊತ್ತಿರಲಿಕ್ಕೇ ಬೇಕು. ಇದಲ್ಲದೆ ಮೂಲ ಗ್ರಂಥಕಾರನ ಸ್ಥಿತಿ, ರೀತಿ, ಸ್ವಭಾವವು, ತಿಳಿವಳಿಕೆಯು, ವಿಚಾರ ಸರಣಿಯು, ಭಾಷಾ ಪದ್ಧತಿಯು ಇವೆಲ್ಲವುಗಳ ಸಂಬಂಧದ ಸಮವೃತ್ತಿಯುಳ್ಳವನೇ ಭಾಷಾಂತರಿಸುವ ಕೆಲಸಕ್ಕೆ ಯೋಗ್ಯನಾಗುವನು ಎಂಬ ತಟ್ಟಿಯವರ ಮಾತು ಯಥಾಯೋಗ್ಯವಾಗಿದೆ.

ಯಾವ ಭಾಷೆಯಿಂದ ಯಾವ ಭಾಷೆಗೆ ಮಾಡುವ ಭಾಷಾಂತರ ಹೆಚ್ಚು ಸಮರ್ಥ ಮತ್ತು ಸುಲಭ ಎಂಬ ಬಗ್ಗೆ ತಟ್ಟಿಯವರು ವಿಚಾರಪೂರ್ಣವಾದ ಮಾತುಗಳನ್ನು ಹೇಳಿದ್ದಾರೆ. ಒಮ್ಮೊಮ್ಮೆ ಭಾಷೆಯ ಸಂಬಂಧದಿಂದಲೂ ಭಾಷಾಂತರದ ಕೆಲಸವು ಕಠಿಣವಾಗುವುದು. ಸಂಸ್ಕೃತದಿಂದ ಮರಾಠಿಯಲ್ಲಿ, ಲ್ಯಾಟಿನದಿಂದ ಇಂಗ್ಲಿಷದಲ್ಲಿ ಭಾಷಾಂತರಿಸುವುದು ಸುಲಭವಾದಂತೆ, ಸಂಸ್ಕೃತ- ಇಂಗ್ಲಿಷ್- ಮಹಾರಾಷ್ಟ್ರ ಭಾಷೆಗಳಿಂದ ಕನ್ನಡದಲ್ಲಿ ಭಾಷಾಂತರಿಸುವದು ಸುಲಭವಲ್ಲ. ಆದರೆ ತಮಿಳ, ತೆಲುಗು ಭಾಷೆಗಳ ಗ್ರಂಥಗಳನ್ನು

೬೬.ಗಾಂಧಿ ಬಜಾರ್; ಸಂಪುಟ ೧೨, ಸಂಚಿಕೆ ೧, ಜನವರಿ ೧೯೯೯.

೬೭.ಇದನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ೧೮೯೯ರಲ್ಲಿ ಪ್ರಕಟಿಸಿತು. ಇದು 'ವಾಗ್ಭೂಷಣ ಗ್ರಂಥಮಾಲೆ'ಯ ೧೫ನೆ ಕೃತಿ. ಇದು ಪುಸ್ತಕ ರೂಪದಲ್ಲಿ ಬರುವುದಕ್ಕೆ ಮೊದಲು 'ಧನಂಜಯ'ದಲ್ಲಿ ಲೇಖನ ರೂಪದಲ್ಲಿ ಪ್ರಕಟವಾಗಿತ್ತು.

ಕನ್ನಡದಲ್ಲಿ ಭಾಷಾಂತರಿಸುವುದು ಸುಲಭವಾಗಬಹುದು. ಆದರೂ ಕೆಲವೆಡೆಯಲ್ಲಿ ಬಿಸಿಲಲ್ಲಿ ಕನ್ನಡಿಯನ್ನು ಹಿಡಿದು, ಸೂರ್ಯಪ್ರಕಾಶವನ್ನು ಕತ್ತಲೆಯಲ್ಲಿ ಕೆಡವಿದರೆ, ಆದರಲ್ಲಿ ಉಷ್ಣತೆಯೂ ತೇಜಸ್ಸೂ ಬಿಸಿಲಿಗಿಂತ ಹೇಗೆ ಕಡಿಮೆಯಾಗಿರುವವೋ ಹಾಗೆಯೇ ಭಾಷಾಂತರಿಸಿದ್ದರಲ್ಲಿ ತಥ್ಯವೂ ರಸವೂ ಕಡಿಮೆಯಾಗಿರುವವು ಎಂದು ತಟ್ಟಿಯವರು ನೀಡಿರುವ ಉಪಮಾನ ವಿಶಿಷ್ಟವಾಗಿದೆ.

ಭಾಷಾಂತರದ ಬಗ್ಗೆ ಸರ್ ಉಯಿಲ್ಯಮ್ ಜೋನ್ಸ್‌ನೆಂಬವನು (ಸರ್ ವಿಲಿಯಂ ಜೋನ್ಸ್- ಇವನು ಶಾಕುಂತಲ ನಾಟಕವನ್ನು ಇಂಗ್ಲಿಷಿಗೆ ಅನುವಾದಿಸಿದ್ದಾನೆ) ವ್ಯಕ್ತಪಡಿಸಿದ ಅಭಿಪ್ರಾಯವನ್ನು ತಟ್ಟಿಯವರು ಉದಾಹರಿಸಿರುವರು. 'ಒಂದು ಭಾಷೆಯ ಕವಿತೆಗಳನ್ನು ಮತ್ತೊಂದು ಭಾಷೆಯಲ್ಲಿ ಭಾಷಾಂತರಿಸುವವನು ಒಂದು ಸೀಸೆಯೊಳಗಿನ ಪನ್ನೀರನ್ನು ಮತ್ತೊಂದರಲ್ಲಿ ಸುರುವುವ ಗಂಧಿಗನಂತೆ ಇರುತ್ತಾನೆ. ಪನ್ನೀರಿನ ಕುಪ್ಪಿಯ ಬಾಯಿ ತೆರೆದು ಸುರುವುವಷ್ಟರಲ್ಲಿ ಸುವಾಸನೆಯೆಲ್ಲ ಹಾರಿಹೋಗಿ ಬರಿಯ ನೀರು ಮಾತ್ರ ಮತ್ತೊಂದು ಸೀಸೆಯಲ್ಲಿ ನಿಲ್ಲುವುದು' ಎಂಬ ಉದಾಹರಣೆ ಅತ್ಯಂತ ಉಚಿತವಾದದ್ದು.

ಭಾಷಾಂತರ ರೂಪದ ಪದ್ಯ ಗ್ರಂಥಗಳನ್ನು ರಚಿಸುವವರು ಸ್ವತಂತ್ರ ಕವಿತೆಗಳನ್ನು ರಚಿಸುವವರಿಗಿಂತ ಎಷ್ಟೋ ಹೆಚ್ಚು ಜವಾಬದಾರಿಯುಳ್ಳ ಕೆಲಸವನ್ನು ಕಯ್ಕೊಂಡಂತೆ ಎಂಬ ಅಭಿಪ್ರಾಯಕ್ಕೆ ತಟ್ಟಿಯವರು ಬರುವರು.

ಭಾಷಾಂತರದ ಪ್ರಯೋಜನವೇನು? ಎಂಬ ಬಗ್ಗೆಯೂ ಅವರು ಕೆಲವು ಮನನೀಯ ಮಾತುಗಳನ್ನು ಹೇಳಿದ್ದಾರೆ. ಕೆಲವು ಭಾಷಾಂತರದ ಗ್ರಂಥಗಳು ಸ್ವಭಾಷೆಯವುಗಳೆಂದು ಹೇಳಿಕೊಳ್ಳುವಷ್ಟು ರಮ್ಯವಾಗಬಹುದು. ಹಾಗೂ ಭಾಷಾಂತರದ ಕವಿತಾ ಗ್ರಂಥಗಳಿಂದ ಭಾಷೆಗೆ ಭೂಷಣವಾಗುವದು. ಪರಭಾಷೆಯ ಗ್ರಂಥಕರ್ತರ ಅನುಭವವು, ವಿಚಾರವು, ಉತ್ಕೃಷ್ಟ ಕಲ್ಪನೆಗಳು, ದೇಶಾಚಾರಗಳು ಮುಂತಾದವುಗಳು ಸ್ವಭಾಷೆಯ ಜನರಿಗೆ ಗೊತ್ತಾಗುವವು. ಅವತರಣಗಳನ್ನು ತಕ್ಕೊಳ್ಳುವಾಗ ಈ ಬಗೆಯ ಪದ್ಯ ಗ್ರಂಥಗಳು ಹೆಚ್ಚು ಉಪಯೋಗಿಸುವವು. ಒಟ್ಟಿನಿಂದ ವಿಚಾರಿಸಲು ಪರಭಾಷೆಯ ಪದ್ಯಗ್ರಂಥಗಳನ್ನು ಭಾಷಾಂತರಿಸುವುದರಿಂದ ಬಹು ಪ್ರಯೋಜನವಾಗುತ್ತಲೇ ಹೋಗುವದು. ಆದರೆ ಆ ಕೆಲಸವನ್ನು ಮೇಲೆ ವಿವರಿಸಿದ ಯೋಗ್ಯತೆಯುಳ್ಳ ಪಂಡಿತರು ಕಯ್ಕೊಳ್ಳ ತಕ್ಕದ್ದು, ಇಲ್ಲದಿದ್ದರೆ ಭಾಷೆಗೆ ಗ್ರಾಮ್ಯತ್ವವು ಬರುವ ಸಂಭವವುಂಟು ಎಂದು ತಟ್ಟಿ ಮಾಸ್ತರು ಎಚ್ಚರಿಸುವರು. ಇದು ೧೮೯೯ರಷ್ಟು ಹಿಂದೆಯೇ ಎನ್ನುವುದನ್ನು ಮರೆಯಬಾರದು.

ತಟ್ಟಿ ಮಾಸ್ತರ ಕಾಲಕ್ಕಾಗಲೇ ಅನೇಕ ಅನುವಾದ ಗ್ರಂಥಗಳು ಬೇರೆಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿದ್ದವು. ಅವುಗಳನ್ನೆಲ್ಲ ಪರಿಶೀಲಿಸಿದ ಬಳಿಕವೇ ಅವರು ಈ ಅಧಿಕಾರಯುತವಾದ ಮಾತುಗಳನ್ನು ಹೇಳಿರುವುದು ಗಮನಾರ್ಹ.

೧೯೦೭ರ ನವೆಂಬರ್ ತಿಂಗಳ 'ಶ್ರೀಕೃಷ್ಣಸೂಕ್ತಿ'ಯಲ್ಲಿ ಎಂ.ಡಿ. ಅಳಸಿಂಗಾಚಾರ್ಯ ಅವರು ಭಾಷಾಂತರಿಂದ ಭಾಷಾಭಿವೃದ್ಧಿಗೆ ಆಗುವ ಪ್ರಯೋಜನದ ಬಗ್ಗೆ ಹೇಳಿರುವ ಈ ಮಾತನ್ನು ಗಮನಿಸಬೇಕು- ಉಭಯ ಭಾಷೆಗಳನ್ನು ತಿಳಿದವರು ತಾವು ಭಾಷಾಂತರದಿಂದ ಸಂಗ್ರಹಿಸಿದ, ಸಾರವತ್ತಾಗಿಯೂ ಜನರಂಜಕವಾಗಿಯೂ ಇರುವ ವಿಷಯಗಳನ್ನು ಸ್ವಭಾಷೆಯಲ್ಲಿ ಬರೆದಿಡುತ್ತಿದ್ದರೆ.. .. ಭಾಷಾಭಿವೃದ್ಧಿಗೆ ಹೇತುವಾಗುವದು. ಸ್ವದೇಶೀಯ-ವಿದೇಶೀಯಗಳೆಂಬ ಭೇದವನ್ನಿಟ್ಟುಕೊಂಡು ಅತ್ಯಾದರವನ್ನಾಗಲಿ, ತಿರಸ್ಕಾರವನ್ನಾಗಲಿ ತೋರಿಸುವುದು ತಪ್ಪು ಎನ್ನುವ ಅವರು, ಎರಡನ್ನೂ ತಕ್ಕ ಮಟ್ಟಿಗೆ ಸಮಸ್ಥಿತಿಯಿಂದ ಆದರಿಸುತ್ತಿರಬೇಕು ಎನ್ನುವರು. ವಿದೇಶೀಯವೆಂಬ ಭಾವದಿಂದ ಭಾಷಾಂತರಗಳನ್ನು ತಿರಸ್ಕರಿಸಿ ಸ್ವದೇಶ ಭಾಷೆಯಲ್ಲಿಯೇ ಅತ್ಯಾದರವನ್ನು ತೋರಿಸಿದರೆ ಆ ಭಾಷಾಂತರಗಳಲ್ಲಿರುವ ಸಾರವಾದ ಅಂಶಗಳನ್ನು ಸಂಗ್ರಹಿಸಲು ಅವಕಾಶವಿಲ್ಲದೆ ಹೋಗುವುದು. ವಿದೇಶೀಯ ಭಾಷೆಯನ್ನು ಅತ್ಯಾದರದಿಂದ ಅಭ್ಯಸಿಸುತ್ತ ಸ್ವಭಾಷೆಯನ್ನು ತಿರಸ್ಕರಿಸಿದರೆ, ತಾವು ಅದರಿಂದ ಗ್ರಹಿಸಿದ ಸಾರಾಂಶಗಳನ್ನು ತಮ್ಮ ಭಾಷೆಯಲ್ಲಿ ಬರೆದು ಭಾಷೆಯನ್ನು ವೃದ್ಧಿಗೆ ತರುವಂತೆ ಮಾಡುವುದಕ್ಕೆ, ತಕ್ಕ ವ್ಯುತ್ಪತ್ತಿಯನ್ನು ಸಂಪಾದಿಸಲು ಅವಕಾಶವಿಲ್ಲದೆ ಹೋಗುವುದು. ಆದ್ದರಿಂದ ಇವೆರಡನ್ನೂ ಸಮದೃಷ್ಟಿಯಿಂದ ಆದರಿಸುತ್ತಿದ್ದಷ್ಟೂ ಭಾಷಾಭಿವೃದ್ಧಿಗೆ ಹೇತುವಾಗುವುದು. ನದಿನದಗಳೆಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡು ತನ್ನಲ್ಲಿ ತಾನೇ ಉಕ್ಕಿ ಅಡಗುತ್ತಿರುವ ಸಮುದ್ರದಂತೆ ಅನೇಕ ಹೊಸ ವಿಷಯಗಳನ್ನು ತಿಳಿದುಕೊಂಡು ತಮ್ಮಲ್ಲಿ ತಾವೇ ಉಕ್ಕಿ ಆನಂದಪಡುವುದರಿಂದಲೇನು?.. .. ಆದುದರಿಂದ ಈಗಿನ ಆಂಗ್ಲೇಯ ವಿದ್ಯಾಭ್ಯಾಸದಲ್ಲಿ ಪ್ರವರ್ತಿಸಿ ವರ್ಧಿಷ್ಣುಗಳಾದ ವಿದ್ಯಾರ್ಥಿಗಳೆಲ್ಲರೂ.. .. ತಮ್ಮ ಭಾಷೆಯನ್ನೂ ದೇಶವನ್ನೂ ವೃದ್ಧಿ ಸ್ಥಿತಿಗೆ ತರಬೇಕೆಂಬುದುದೊಂದುದ್ದೇಶವನ್ನು ಇಟ್ಟುಕೊಂಡಿರಬೇಕು. ಉಭಯ ಭಾಷಾಭಿಜ್ಞತೆ ಇದ್ದಹೊರತು ಇದು ಸಾಧ್ಯವಲ್ಲ ಎಂಬ ಮಾತನ್ನೂ ಆಳಸಿಂಗಾಚಾರ್ಯರು ಹೇಳುವರು. ಭಾಷೆಯ ಅಭಿವೃದ್ಧಿಯ ದೃಷ್ಟಿಯಿಂದ ಆಚಾರ್ಯರು ಆಡಿದ ಮಾತಿನ ಹಿಂದಿನ ಕಳಕಳಿಯನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಮರಾಠಿಯ ಖಾಂಡೇಕರ ಅವರ ಎಂಟು ಕತೆಗಳನ್ನು ವಿ.ಎಂ. ಇನಾಂದಾರ ಅವರು 'ದೃಷ್ಟಿಲಾಭ' ಎಂಬ ಹೆಸರಿನ ಸಂಕಲನದಲ್ಲಿ ಅನುವಾದಿಸಿದ್ದರು. 'ಜಯಕರ್ನಾಟಕ'ದಲ್ಲಿ ನಾ.ಕು. ಅವರು 'ವೀಣಾ ವಿತಾನ' ಕಾಲಂನಲ್ಲಿ ಇದನ್ನು ವಿಮರ್ಶಿಸಿದ್ದಾರೆ. ಇಲ್ಲಿಯ ವಿಮರ್ಶಕರ ಆಕ್ಷೇಪ ಇರುವುದು ಮರಾಠಿಯಿಂದ ಭಾಷಾಂತರಿಸಿರುವುದಕ್ಕೆ. ಇದಕ್ಕೆ ಕಾರಣ ಧಾರವಾಡ ಭಾಗದಲ್ಲಿ ಕನ್ನಡದ ಮೇಲೆ ಮರಾಠಿ ಸವಾರಿ ಮಾಡುತ್ತಿದೆ ಎಂಬ ಭಾವ ಸಾರ್ವತ್ರಿಕವಾಗಿ ಬಲವಾಗಿದ್ದುದು. 'ನೀವು ಎರಡನೆ ಮೂರನೆ ತರಗತಿಯ ಗ್ರಂಥಕರ್ತರ ಕೃತಿಗಳನ್ನು ಭಾಷಾಂತರಿಸುವುದಕ್ಕಿಂತಲೂ ಸ್ವತಂತ್ರ ಕೃತಿಗಳನ್ನು ಎಷ್ಟೇ ಸಾಧಾರಣ ತರಗತಿಯವಾದರೂ ಅಡ್ಡಿಯಿಲ್ಲ, ರಚಿಸುವುದು ಹೆಚ್ಚು ಶ್ರೇಯಸ್ಕರ' ಎಂದು

ಕನ್ನಡದ ಹೆಸರುವೆತ್ತ ಸಾಹಿತಿಗಳೊಬ್ಬರು ಹೇಳಿದ್ದನ್ನು ವಿಮರ್ಶಕ ನಾ.ಕು. ಗಂಭೀರವಾಗಿಯೇ ಕೃತಿಕಾರರಿಗೆ ಸೂಚಿಸಿದ್ದಾರೆ. ಹೆಸರುವೆತ್ತ ಸಾಹಿತಿಗಳ ಸಲಹೆಯಲ್ಲಿ ಇರುವ ಮುಖ್ಯ ಅಂಶವೆಂದರೆ ಭಾಷಾಂತರ ಕೃತಿಗಳಿಗಿಂತ ಸ್ವತಂತ್ರ ಕೃತಿಗಳು ಉತ್ತಮ. ಇದು ಭಾಷೆಯನ್ನು ಸಮೃದ್ಧಗೊಳಿಸುತ್ತದೆ ಎನ್ನುವುದು. ಅನುಕರಣದಿಂದ ಸಂಸ್ಕಾರಕ್ಕೆ ಅನ್ನವು ದೊರೆಯಬಹುದಾದರೂ ಅನುಕರಣವೇ ಅವರ ಜೀವನ ಸರ್ವಸ್ವವಾಗಬಾರದಲ್ಲವೆ? ಎಂದು ನಾ.ಕು. ಪ್ರಶ್ನಿಸುವರು. ಅನುವಾದದಿಂದಲೇ ಕನ್ನಡ ಸಾಹಿತ್ಯವು ಪರಿಪುಷ್ಟವಾಗಬೇಕಾದಲ್ಲಿ ಇಂಗ್ಲಿಷ್-ಫ್ರೆಂಚ್-ಇಟಾಲಿಯನ್, ಸಂಸ್ಕೃತ ಮೊದಲಾದವುಗಳಿಂದ ಯಾವ ನಿಜವಾದ ಸಂಸ್ಕಾರ ದೊರೆಯಬಹುದೋ ಅಂತಹ ಸಂಸ್ಕಾರವು ಮರಾಠಿಯಿಂದ ದೊರೆಯಬಹುದೇ ಎಂಬ ಬಗ್ಗೆ ನಮಗೇಕೋ ಧೈರ್ಯವಿಲ್ಲ ಎಂದು ಅವರು ಹೇಳುವರು. ಅವರ ಈ ಮಾತಿನ ಉದ್ದೇಶವಿಷ್ಟೇ, ಮರಾಠಿ ಕೂಡ ಕನ್ನಡದಷ್ಟೇ ಎಳೆಯ ಭಾಷೆ. ಹಾಗೊಂದುವೇಳೆ ಕನ್ನಡ ಸಾಹಿತ್ಯ ಪುಷ್ಟವಾಗಬೇಕಾದರೆ ಅದಕ್ಕಿಂತ ಪ್ರಬುದ್ಧವಾದ ಸಾಹಿತ್ಯ ಹೊಂದಿರುವ ಭಾಷೆಯಿಂದ ಅನುವಾದಮಾಡಬೇಕು ಎನ್ನುವುದು. ಅಲ್ಲದೆ ಅವರು ಇಲ್ಲಿ ಅನುವಾದಿಸಿರುವ ಯೋಗ್ಯತೆಯ ಕತೆಗಳು ಕನ್ನಡದಲ್ಲಿಯೂ ಇವೆ. ಕನ್ನಡದಲ್ಲಿ ಇಲ್ಲದಂಥವನ್ನು ಅನುವಾದಿಸಿದರೆ ಭಾಷೆಗೆ ಅನುಕೂಲ ಎನ್ನುತ್ತ, ಅನುವಾದವನ್ನು ಮಾಡಲೇಬಾರದೆಂದು 'ಹುಂಬಾಗುತಿಗಿ'ಯಿಂದ ಹೇಳುವ ಮಾತಲ್ಲ ಇದು ಎನ್ನುವರು. ಮರಾಠಿಯಿಂದ ಅನುವಾದ ಬೇಡ ಎಂದುದಕ್ಕೆ ಭಗಿನಿ ಭಾಷೆಯ ಮೇಲಿನ ದ್ವೇಷವಲ್ಲ ಎಂದು ಅವರು ಸ್ಪಷ್ಟಪಡಿಸುವರು. ಅನುವಾದಕ್ಕಿಂತ ಸ್ವತಂತ್ರ ನಿರ್ಮಿತಿಗಳನ್ನು ಪ್ರಸಿದ್ಧಪಡಿಸುವುದರಿಂದ ಕನ್ನಡತನವನ್ನು ಕಾಯ್ದುಕೊಳ್ಳುವುದು ಸಾಧ್ಯ ಎಂಬುದು ಅವರ ಮತ. ಕನ್ನಡದ ಕೃತಿಗಳೇ ಅನ್ಯಭಾಷೆಗೆ ಅನುವಾದಗೊಳ್ಳುವಷ್ಟು ಯೋಗ್ಯತಾಸಂಪನ್ನವಾದುವೂ ಇವೆ. ಕಾರಣ ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆ ತಂದುಕೊಡಬೇಕಾದರೆ ಇನ್ನು ಮೇಲೆ ಹೆಚ್ಚಾಗಿ ಸ್ವತಂತ್ರ ಕೃತಿಗಳನ್ನು ರಚಿಸಬೇಕು ಎಂದು ಹೇಳುವ ನಾ.ಕು. ಅವರಿಗೆ ಅನುವಾದ ಪ್ರಿಯವಾದ ವಿಷಯವಲ್ಲವೆಂದು ಹೇಳಬೇಕು.

ಅನ್ಯ ಭಾಷೆಗಳಿಂದ ಕೃತಿಗಳನ್ನು ಅನುವಾದಿಸಿ ನಮ್ಮ ಭಾಷೆಯನ್ನು ಶ್ರೀಮಂತಗೊಳಿಸಿಕೊಳ್ಳಬೇಕೆಂಬ ಕಳಕಳಿ ಬಹಳ ಹಿಂದಿನದು. ಇಂಗ್ಲಿಷ್ ಸಾಹಿತ್ಯದಿಂದ ಸ್ಫೂರ್ತಿಗೊಂಡು ಅದರಷ್ಟೇ ಸಂಪದ್ಯುಕ್ತವಾದ ಕಾವ್ಯವನ್ನು ಕನ್ನಡದಲ್ಲಿಯೂ ಸೃಷ್ಟಿಸಬೇಕೆಂಬ ಯೋಚನೆಯನ್ನು 'ಶ್ರೀ'ಯವರಿಗೂ ಮೊದಲು ಎಷ್ಟೋ ಜನರು ಮಾಡಿದ್ದರು ಎನ್ನುವ ಎಸ್.ಅನಂತನಾರಾಯಣ[೭೮] ಇತರ ಭಾಷೆಗಳಲ್ಲಿನ ಗ್ರಂಥಗಳನ್ನು ಭಾಷಾಂತರಿಸಲು ತಕ್ಕ ಉತ್ತೇಜನ ಕೊಟ್ಟು ಭಾಷಾಭಿವೃದ್ಧಿಯನ್ನು ಮಾಡಿಸಿ ಎಂದು ೧೮೮೭ರ 'ಹಿತಬೋಧಿನೀ' ಪತ್ರಿಕೆಯಲ್ಲಿ ಮೈಸೂರು ಅರಮನೆಯ ಅಧಿಕಾರಿಗಳಿಗೆ ಕರೆಕೊಟ್ಟಿದ್ದನ್ನು ಉಲ್ಲೇಖಿಸುವರು.

೭೮.ಹೊ.ಕ.ಇಂ.ಕಾ.ಪ್ರಭಾವ- ಪುಟ- ೨೮

ಭಾಷಾಂತರವು ಹೆಚ್ಚು ಅಭಿವೃದ್ಧಿ ಹೊಂದಿದ ಶಾಖೆಯಲ್ಲ. ಅಲ್ಲದೆ ಭಾಷಾಂತರದಂತಹ ಕ್ಲಿಷ್ಟ, ತಿರಸ್ಕೃತ ಮತ್ತು ಪರಿಶ್ರಮದಾಯಕ ಕಾರ್ಯಕ್ಕೆ ಜನಪ್ರಿಯ ಸಾಹಿತ್ಯ ಲೋಕದಲ್ಲಿ ಹೆಚ್ಚಿನ ಪ್ರತಿಷ್ಠೆಯೂ ಇಲ್ಲ ಎನ್ನುವ ಭಾಲಚಂದ್ರ, ನೇಮಾಡೆ, ಉತ್ತಮ ಭಾಷಾಂತರ ಮಾಡುವುದಕ್ಕಿಂತ ಸಾಮಾನ್ಯ ಸಾಹಿತ್ಯವನ್ನು ರಚಿಸುವುದೇ ಹೆಚ್ಚು ಮಹತ್ವವಾದುದು ಎಂಬುದು ಸರ್ವತ್ರ, ಒಪ್ಪಿತ ವಿಚಾರವಾಗಿದೆ ಎನ್ನುವರು.[೧೯]

ಭಾಷಾಂತರ ಹೇಗಿರಬೇಕು ಎಂಬ ಬಗ್ಗೆ ಆಧುನಿಕ ಕನ್ನಡ ಸಾಹಿತ್ಯದ ಆರಂಭ ಕಾಲದ ಪತ್ರಿಕೆಗಳಲ್ಲಿ ಬಂದ ಚರ್ಚೆಯೊಂದನ್ನು ಇಲ್ಲಿ ಗಮನಿಸಬೇಕು.

ಭಾಷಾಂತರಕ್ಕೂ ರೂಪಾಂತರಕ್ಕೂ ಇರುವ ವ್ಯತ್ಯಾಸವೇನು? ಇಂಗ್ಲಿಷ್ ಭಾಷೆಯ ಕೃತಿಯ ಅನುವಾದ ಮಾಡುವಾಗ ಅಲ್ಲಿಯ ಪ್ರದೇಶದ ಹೆಸರುಗಳನ್ನು, ಸ್ಥಳ ನಾಮಗಳನ್ನು ನಮ್ಮಲ್ಲಿಯ ಹೆಸರು ಸ್ಥಳನಾಮಗಳನ್ನಾಗಿ ಮಾರ್ಪಡಿಸಿಕೊಳ್ಳಬಹುದೆ? ಅನುವಾದಕ ಹೀಗೆ ಮಾಡಲು ಎಷ್ಟರಮಟ್ಟಿಗೆ ಸ್ವತಂತ್ರ? ಇಂಥ ಬದಲಾವಣೆಗಳು ಮೂಲ ಸಾಹಿತಿಗೆ ದ್ರೋಹ ಬಗೆದಂತೆ ಅಲ್ಲವೆ?

ಷೇಕ್‌ಸಾದಿಯ ವಚನಗಳ ಅನುವಾದ ಮಾಡಿರುವ ರವೀಂದ್ರನಾಥ ಠಾಕೂರರು 'The translations are not always literal. The originals being some times abridged and some times paraphrased' ಎಂದು ಹೇಳಿರುವರು. ಅವರ ದೃಷ್ಟಿಯಲ್ಲಿ ಅನುವಾದಕನಿಗೆ ರೂಪಾಂತರಿಸುವ, ಹಿಗ್ಗಿಸುವ, ಕುಗ್ಗಿಸುವ ಸ್ವಾತಂತ್ರ್ಯವಿದೆ. ಆದರೆ ಔಚಿತ್ಯ ಮೀರಬಾರದು.

ಇಂಥ ರೂಪಾಂತರಗಳನ್ನು ವಿರೋಧಿಸುವವರು ಇದ್ದಾರೆ. "ಈ ರೂಪಾಂತರ ಮಹಾಮೋಹಕ್ಕೆ ಸಿಕ್ಕಿ ದಿನದಿನಕ್ಕೆ ನಮ್ಮಲ್ಲಿ ಸ್ವಪ್ರಯತ್ನವೇ ಮಾಯವಾಗುತ್ತಿದೆ... ಈ ರೀತಿಯ ಸುಲಭಮಾರ್ಗವನ್ನು ಹಿಡಿಯುವುದು ಕನ್ನಡ ಭಾಷೆಗಾಗಲಿ, ಸಾಹಿತ್ಯಕ್ಕಾಗಲಿ ಶ್ರೇಯಸ್ಕರವಲ್ಲ. ಪರಸಾಹಿತ್ಯದ ಅನುಕರಣವೆಂದರೆ ಮೂಲ ಕಾವ್ಯದ ಮುಖ್ಯ ಭಾವವು ಅನುವಾದದಲ್ಲಿ ಪ್ರತಿಫಲಿಸಿದೆ ಎಂದು ತೃಪ್ತರಾಗಿ ಮಿಕ್ಕ ವಿಷಯಗಳನ್ನು ಅಲಕ್ಷ್ಯ ಮಾಡುವುದಲ್ಲ. ಫಲವು ನ್ಯಾಯವಾದರೆ ಸಾಧನವೂ ನ್ಯಾಯವೇ ಎಂಬ ತತ್ವವನ್ನು ನಂಬಿ, ಮೂಲವನ್ನು ರೂಪಾಂತರಿಸಿ ನಮ್ಮದಾಗಿ ಮಾಡಿಕೊಳ್ಳುವುದೂ ಅಲ್ಲ. ಅದನ್ನು ಭಾಷಾಂತರಿಸಿ ನಮ್ಮ ಜನರಿಗೆ ಅದರ ನಿಜ ರೂಪವನ್ನೂ ಮೇಲ್ಮೆಯನ್ನೂ ತೋರಿಸಿಕೊಟ್ಟು ಸ್ವಪ್ರತಿಭೆಯಿಂದ ಬರೆಯುವ ಕವಿಗಳಿಗೆ ಮಾದರಿಯನ್ನೊದಗಿಸುವುದು"[೨೦] ಎಂದು ನಂ.ಶಿವರಾಮ ಶಾಸ್ತ್ರಿಗಳು ಹೇಳಿದ್ದಾರೆ. ರೂಪಾಂತರಕ್ಕಿಂತ ಭಾಷಾಂತರ ಒಳ್ಳೆಯದು

೧೯.ಭಾಷಾಂತರ ಮೀಮಾಂಸೆಯ ಸ್ವರೂಪ- ಭಾಲಚಂದ್ರ, ನೇಮಾಡೆ: ಕನ್ನಡಕ್ಕೆ ವಿಠ್ಠಲರಾವ ಗಾಯಕವಾಡ; ಸಂಕ್ರಮಣ ೨೯೪ ಸಂಪುಟ ೩೨, ಸಂಚಿಕೆ ೨, ಫೆ.೧೯೯೭

೨೦.ನಂ.ಶಿವರಾಮ ಶಾಸ್ತ್ರಿ; ಕಾವ್ಯಾವಲೋಕನ; ಪ್ರಬುದ್ಧಕರ್ನಾಟಕ, ಸಂಪುಟ ೧೪, ವಿನಾಯಕ ಸಂಚಿಕೆ, ಪುಟ ೧೫

ಎಂದು ಅವರ ಅಭಿಪ್ರಾಯ. ಏಕೆಂದರೆ, ಭಾಷಾಂತರದಲ್ಲಿ ಆ ಕವಿಯ ಪ್ರತಿಭೆ, ಅವನ ವಿಶಿಷ್ಟ ಗುಣ ಇವುಗಳನ್ನು ತರಲು ಪರಿಚಯ ಮಾಡಿಕೊಡಲು ಅವಕಾಶವಿದೆ. ಆದರೆ ರೂಪಾಂತರ ಮಾಡುವಾಗ ನಮ್ಮ ಕಲ್ಪನೆಗೆ ಒಗ್ಗದ ವಿಷಯವನ್ನು, ಮೂಲದಲ್ಲಿ ಅದು ಎಷ್ಟೇ ಮುಖ್ಯವಾಗಿರಲಿ, ಬಿಟ್ಟುಬಿಡುವುದೂ ಸಾಧ್ಯವಿದೆ. ಎಂದಮೇಲೆ ಮೂಲ ಕೃತಿಯ ಸಂಪೂರ್ಣ ಸತ್ವವನ್ನು ತರಲು, ರೂಪಾಂತರದಲ್ಲಿ ಸಾಧ್ಯವೇ ಇಲ್ಲವೆಂದು ಒಪ್ಪಬೇಕು. ಈ ದೃಷ್ಟಿಯಿಂದಲ್ಲದೆ ಬೇರೊಂದು ದೃಷ್ಟಿಯಿಂದಲೂ ಈ ರೂಪಾಂತರಕ್ಕಿಂತ ಭಾಷಾಂತರ ಒಳ್ಳೆಯದೆನಿಸುತ್ತದೆ. “ಹೀಗೆ ಜನ್ಮಾಂತರವನ್ನು ಪಡೆದ ಕಾವ್ಯಗಳನ್ನು ಓದಿ ನಾವು ಆನಂದಪಡುವಾಗ, ಅದಕ್ಕೆಲ್ಲ ಕಾರಣ ಮೂಲ ಕವಿಯ ಮಹಿಮೆಯೆಂದಾಗಲಿ ಅವನ ಚಾತುರ್ಯವೆಂದಾಗಲಿ, ಪ್ರತಿಭೆಯೆಂದಾಗಲಿ ನಮಗೆ ಸ್ವಲ್ಪವಾದರೂ ಜ್ಞಾಪಕ ಬರುತ್ತದೆಯೇ?. ... ನಮ್ಮ ಆನಂದದಲ್ಲಿ ಅದೆಲ್ಲಾ ನಮ್ಮ ಮನಸ್ಸಿಗೆ ‘ಕನ್ನಡ’ವೆಂದೇ ತೋರುತ್ತದೆ. ... ರೂಪಾಂತರಗಳು ಎಷ್ಟು ಮುದ್ದಾಗಿವೆ, ಮನೋಹರವಾಗಿವೆ; ಆದರೇನು? ಇವು ಹರಣಕ್ಕೆ ಸಮವಾಗುವುದಿಲ್ಲವೆ?” ಎಂದು ಶಿವರಾಮ ಶಾಸ್ತ್ರಿಗಳು ಪ್ರಶ್ನಿಸಿರುವರು. ರೂಪಾಂತರಕ್ಕೆ ಸಂಬಂಧಿಸಿದಂತೆ ಶಾಸ್ತ್ರಿಗಳು ಎತ್ತಿದ ಪ್ರಶ್ನೆ ಭಾಷಾಂತರಕ್ಕೂ ಅನ್ವಯಿಸುತ್ತದೆ. ಹೀಗಾಗಿ ಶಾಸ್ತ್ರಿಗಳ ಆಕ್ಷೇಪಗಳನ್ನು ರೂಪಾಂತರಕಷ್ಟೇ ಸೀಮಿತಗೊಳಿಸಬೇಕಾಗಿಲ್ಲ. ರಕ್ತಾಕ್ಷಿ ನಾಟಕ, ಕಿಂದರಜೋಗಿ ಕಾವ್ಯ, ‘ಸೋಹ್ರಾಬ್ ಮತ್ತು ರುಸ್ತುಂ’ ಮೊದಲಾದವುಗಳನ್ನು ನಾವು ನೋಡಿದಾಗ ರೂಪಾಂತರವೂ ಭಾಷೆಗೆ ಅಗತ್ಯ ಎಂದು ಒಪ್ಪಿಕೊಳ್ಳುವುದು ಅನಿವಾರ್ಯ.

ರೂಪಾಂತರ ಹೇಗಿರಬಾರದು ಎನ್ನುವ ಬಗ್ಗೆ ೨೦ನೆ ಶತಮಾನದ ಆರಂಭಕಾಲದಲ್ಲಿಯೇ ನಡೆದ ಈ ವಾಗ್ವಾದ ಉಲ್ಲೇಖನಾರ್ಹ. ನೇರವಾದ ನಾಟಕ ರೂಪವಲ್ಲದೆ, ಶೇಕ್ಸ್‌ಪಿಯರನು ನಾಟಕ ಕಥೆಗಳ ಮೂಲಕವಾಗಿಯೂ ಕನ್ನಡದಲ್ಲಿ ಕಾಣಿಸಿಕೊಂಡಿದ್ದಾನೆ. (ಲ್ಯಾಂಬ್ಸ್ ಟೇಲ್ಸ್- ಅನುಸರಣೆ). ಇಲ್ಲಿಯೂ ಅವಕ್ಕೆ ಭಾರತೀಯ ಆವರಣವನ್ನು ಕಲ್ಪಿಸಲಾಯಿತು. ಶೇಕ್ಸ್‌ಪಿಯರ್‌ನನ್ನು ಕನ್ನಡದಲ್ಲಿ ತಂದ ಬಗೆಯನ್ನು ಟೀಕಿಸಲಾಗಿದೆ. ಶ್ರೀಕಂಠೇಶ ಗೌಡ ಅವರ ‘ಪ್ರತಾಪರುದ್ರದೇವ’ ಪ್ರಕಟವಾದಾಗ ‘ಭಾಷಾಭಿಮಾನಿ’ಯೊಬ್ಬರು ೧೮೯೭ರ ‘ವಿದ್ಯಾದಾಯಿನೀ’ ಪತ್ರಿಕೆಯಲ್ಲಿ ಟೀಕಿಸಿದರು. ಆ ಲೇಖನ ಮಾಲೆ, ಪ್ರತ್ಯುತ್ತರಾದಿಗಳು ಮುಂದಿನ ಹಲವು ಸಂಚಿಕೆಗಳಲ್ಲಿ ನಡೆಯಿತು. ಈ ನಾಟಕದ ಮುಖಪುಟದಲ್ಲಿಯ ‘ಕನ್ನಡಿಗರಿಗಾಗಿ ಬರೆಯಲ್ಪಟ್ಟ ಇಂಗ್ಲಿಷ್ ಉದ್ದಾಮ ಗ್ರಂಥ’ ಎಂಬ ವಾಕ್ಯವೇ ‘ಭಾಷಾಭಿಮಾನಿ’ಯ ಟೀಕೆಗೆ ಗುರಿಯಾಗಿದೆ. ‘ಈ ಕಾರ್ಯ ಒಳ್ಳೆಯದೇ. ಆದರೆ ಹಾಗೆ ಮಾಡುವವನಿಗೆ ಯೋಗ್ಯತೆ ಬೇಕಲ್ಲ?’ ಎಂದು ಅವರು ಛಾಟಿ ಏಟು ನೀಡುವರು. ಶ್ರೀಕಂಠೇಶಗೌಡರು ತಮ್ಮ ನಾಟಕಕ್ಕೆ ಸುದೀರ್ಘವಾದ ಒಂದು ಮುನ್ನುಡಿಯನ್ನು ಬರೆದು ಇಂಗ್ಲಿಷ್ ನಾಟಕವನ್ನು ಹೇಗೆ ಅನುವಾದಿಸಬೇಕು, ನಾಟಕದ ಭಾಷೆ ಇತ್ಯಾದಿಗಳ ಬಗ್ಗೆ ವಿವರಿಸಿದ್ದು ಈ ‘ಭಾಷಾಭಿಮಾನಿ’ಯ ಟೀಕೆಗೆ ಒಳ್ಳೆಯ

ಆಹಾರವನ್ನು ಒದಗಿಸಿತು.

ಇಂಗ್ಲಿಷ್ ಭಾಷೆಯು ಹಲವು ಭಾಷೆಯ ಪದಗಳನ್ನು ಲೀಲಾಜಾಲವಾಗಿ ಸೇರಿಸಿಕೊಂಡು ಶಬ್ದ ಸಂಪತ್ತನ್ನು ಹೆಚ್ಚಿಸಿಕೊಂಡಿದೆ. ಆದುದರಿಂದ ಶಬ್ದ ದಾರಿದ್ರ್ಯವಿಲ್ಲ.. ಕನ್ನಡದಲ್ಲಿ ಶಬ್ದ ದಾರಿದ್ರ್ಯವಿದೆ ಎಂಬ ಶ್ರೀಕಂಠೇಶಗೌಡರ ಮಾತಿನಲ್ಲಿ ಕನ್ನಡ ಶಬ್ದ ಸಂಪತ್ತನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ಎಂಬ ಚಿಂತನೆಯಿದೆ. ಪ್ರಪಂಚದಲ್ಲಿ ರಸವತ್ತಾಗಿರುವ ವಿಶಿಷ್ಟ ಭಾಷೆಗಳನ್ನು ಸಂಧಿಸುತ್ತಿರುತ್ತಾ, ಆ ಭಾಷೆಗಳಲ್ಲಿರತಕ್ಕ ಅಸಾಧಾರಣವಾದ ಶಬ್ದಗಳನ್ನು ಅವರ ಕಾವ್ಯ ರಚನಾ ಚಮತ್ಕಾರಗಳನ್ನು ತೆಗೆದುಕೊಂಡು ಮತ್ತು ತೆಗೆದುಕೊಳ್ಳುತ್ತಾ, ಸಮುದ್ರದಂತಾಗಿರುವ ಇಂಗ್ಲಿಷ್ ಭಾಷೆಯ ಶಬ್ದಗಳಿಗೆ ಸಮಾನ್ಯ ವಿಷಯವನ್ನು ಬರಿಯಬೇಕಾದರೂ ಹತ್ತು ಪಂಗ್ತಿಗೆ ಹದಿನಾರು ಕಡೆ ಪರಭಾಷೆಯನ್ನಪೇಕ್ಷಿಸುವ ಕನ್ನಡದಲ್ಲಿ ಸಮಾನಾರ್ಥವನ್ನು ಕೊಡುವ ಪ್ರತಿ ಶಬ್ದಗಳನ್ನು ದೊರಕಿಸಿಕೊಳ್ಳಬೇಕು. ಇಲ್ಲದಿದ್ದರೆ, ಸಂಸ್ಕೃತದಲ್ಲಿ ಹುಡುಕಬೇಕು... ಎನ್ನುವ ಗೌಡರು ಕನ್ನಡ ಅನುವಾದಕನ ಸಮಸ್ಯೆಯನ್ನು ಪ್ರಸ್ತಾಪಿಸಿದ್ದಾರೆ.

ಇಂಗ್ಲಿಷ್ ಗ್ರಂಥಗಳಲ್ಲಿರುವಷ್ಟು ಸ್ವಾರಸ್ಯ ಸಂಸ್ಕೃತ ಗ್ರಂಥಗಳಲ್ಲಿಲ್ಲ. ಷೇಕ್ಸ್‌ಪಿಯರ್‌ನಲ್ಲಿರತಕ್ಕ ಸ್ವಾರಸ್ಯ ಕಾಳಿದಾಸನಲ್ಲಿಲ್ಲವೆಂದಾದರೂ ಒಪ್ಪಬೇಕು ಎಂಬ ಅವರ ಮಾತು ಸಹಜವಾಗಿಯೇ ಟೀಕೆಗಳನ್ನು ಆಹ್ವಾನಿಸಿತು. ನಾಟಕದಲ್ಲಿ ಗದ್ಯದಲ್ಲಿ ಮಾತ್ರವಲ್ಲ ಪದ್ಯದಲ್ಲಿಯೂ ಕೆಲವುಮಟ್ಟಿಗಾದರೂ ಹೊಸಗನ್ನಡವನ್ನು ಸೇರಿಸದಿದ್ದರೆ ಅವು ನಾಟಕಶಾಲೆಗೆ ಉಪಯೋಗವಾಗುವುದಿಲ್ಲ ಎಂಬ ಮಾತನ್ನು ಹೇಳುವ ಗೌಡರಿಗೆ ಭಾರತೀಯ ಪುರಾಣಗಳಲ್ಲಿಯ ಅದ್ಭುತಗಳನ್ನು ರಂಗದ ಮೇಲೆ ಆಧುನಿಕ ಕಾಲದಲ್ಲಿ ತರುವುದು ಹೇಗೆಂಬ ಜಿಜ್ಞಾಸೆ ಮೂಡಿದೆ. ರಾವಣ ಪಾತ್ರಧಾರಿಯನ್ನು ಹತ್ತು ತಲೆಯೊಂದಿಗೆ ರಂಗದ ಮೇಲೆ ಹೇಗೆ ತರುವುದು. ಒಂಟಿ ತಲೆ ಎರಡು ಕೈಯ ರಾವಣನನ್ನು ಪ್ರೇಕ್ಷಕರು ಒಪ್ಪಿಕೊಳ್ಳುವರೆ ಎಂಬ ಪ್ರಶ್ನೆ ಹಾಕಿಕೊಳ್ಳುತ್ತಾರೆ. ಪಾಶ್ಚಾತ್ಯ ನಾಟಕಗಳನ್ನು ಅವರು ಓದಿದ್ದರಿಂದ ಇಂಥ ಪ್ರಶ್ನೆಗಳು ಅವರನ್ನು ಕಾಡಿವೆ. ಇಂಥ ವಿಚಾರಗಳನ್ನೆಲ್ಲ 'ಭಾಷಾಭಿಮಾನಿ' ಟೀಕಿಸಿದ್ದಾರೆ.

'ಸೋಜಿಗವೇ ಪೇಳೆ ಕಬ್ಬ ಗೌಡಂ' ಎಂಬ ಶೀರ್ಷಿಕೆ ಹೊಂದಿರುವ ಈ ಟೀಕಾ ವಿಮರ್ಶೆಯು ಶೇಕ್ಸ್‌ಪಿಯರನ ಪದ್ಯ ಕಾವ್ಯದ ಅನುವಾದ ಕನ್ನಡದಲ್ಲಿ ಸರಿಯಾಗಿ ಆಗಿಲ್ಲ ಎಂದು ಹೇಳುವುದು. ಗೌಡರು ಇನ್ನೂ ತಮಗೆ ರೂಢಿಯಿಲ್ಲದ ಪದ್ಯಕಾವ್ಯ ಸರಣಿಯನ್ನು ಬರೆಯಲು ಯತ್ನಿಸದೆ ವಚನ ರೂಪವಾಗಿಯೇ ಬರೆದಿದ್ದರೆ ನೆಟ್ಟಗಿತ್ತು ಎಂದು ಭಾಷಾಭಿಮಾನಿ ಹೇಳಿದ್ದಾರೆ. ಕಥೆಯನ್ನು ಭಾರತೀಯ ಪರಿಸರಕ್ಕೆ ತರುವಾಗ ಶ್ರೀಕಂಠೇಶಗೌಡರು (ಮ್ಯಾಕ್‌ಬೆತ್‌ನ) ವೀರಸೇನನ ಬದಲು ಪ್ರತಾಪರುದ್ರದೇವನನ್ನು ನಾಯಕನನ್ನಾಗಿ ಮಾಡಿರುವರು. ಇಂಥ ಮಾರ್ಪಾಡಿಗೆ ಅನುವಾದಕರು ಶೇಕ್ಸ್‌ಪಿಯರನ

ಕ್ಷಮೆ ಕೇಳಬೇಕು ಎನ್ನುವರು. ಮೂಲ ವಸ್ತುವಿನಲ್ಲಿ ಬದಲಾವಣೆ ಮಾಡಿಕೊಳ್ಳಬಾರದು ಎನ್ನುವ 'ಭಾಷಾಭಿಮಾನಿ'ಯ ಅಭಿಪ್ರಾಯ ಒಪ್ಪಬೇಕು. ಆದರೆ ಭಾರತೀಯ ಪರಿಸರದ ಹೆಸರನ್ನು ಇಟ್ಟಿದ್ದಕ್ಕೆ ಅವರ ಆಕ್ಷೇಪ ಇದ್ದಹಾಗಿಲ್ಲ.

ಶ್ರೀಕಂಠೇಶಗೌಡರು ತಮ್ಮ ಮುನ್ನುಡಿಯಲ್ಲಿ, 'ಮೂಲ ಗ್ರಂಥದ ಯಾವ ಭಾಗದಲ್ಲಿ ಸ್ವಾರಸ್ಯವು ಒಪ್ಪುವುದೋ ಭಾಷಾಂತರಿಸಿದ ಗ್ರಂಥದ ಆ ಭಾಗದಲ್ಲಿ ಇಲ್ಲದಿದ್ದರೂ ಒಟ್ಟು ಗ್ರಂಥದಲ್ಲಿದ್ದರೆ ಎರಡು ಗ್ರಂಥಗಳಲ್ಲಿಯೂ ಸ್ವಾರಸ್ಯವೆಂಬುದು ಒಂದೇ ಆಗಿ ತಾನೇ ಇರುವುದು' ಎಂದು ಹೇಳಿದ್ದರು. ಇದನ್ನು ಒಪ್ಪದ 'ಭಾಷಾಭಿಮಾನಿ'ಯು 'ರಸವೆಂಬುದು ಉಚಿತ ಸ್ಥಾನದಲ್ಲಿ ಬರತಕ್ಕಂಥಾದ್ದು; ಭಾಷಾಂತರದಲ್ಲಿ ಸಿಕ್ಕಸಿಕ್ಕಲ್ಲಿ ಇಡುವುದಾದರೆ ಹೇಗೆ?' ಎಂದು ಪ್ರಶ್ನಿಸುತ್ತಾರೆ.

ಶ್ರೀಕಂಠೇಶಗೌಡರ ಮುನ್ನುಡಿಗೆ ಟೀಕೆ ಇನ್ನೂ ಮುಂದುವರಿಯುತ್ತದೆ, "ಗ್ರಂಥಾದಿಯಲ್ಲಿ ಇವರು ಯಾವನೋ ಇಟಾಲಿಯನನೊಬ್ಬನು ಬರೆದ ವಾಕ್ಯವನ್ನು ತಗೆದುಕೊಂಡು, ಆ ವಾಕ್ಯವನ್ನು ಖಂಡಿಸ ಯತ್ನಿಸಿ, ಪಿಷ್ಟ ಪೇಷಣ ನ್ಯಾಯವಾಗಿ ಕೆಲವು ಕಡೆ ಹೇಳಿದ್ದನ್ನೇ ಹೇಳಿಕೊಂಡು, ಕೆಲವೆಡೆ ತಾವು ಹೇಳಿರುವ ವಾಕ್ಯಗಳಿಗೇ ವಿರುದ್ಧವಾಗಿ ಪೂರ್ವಾಪರ ಸಂಬಂಧವಿಲ್ಲದೆ ವಿಷಯ ವಿಚಾರವನ್ನು ಮಾಡಿ, ಮುಗ್ಗರಿಸಿ ಹಳ್ಳಕ್ಕೆ ಬಿದ್ದು ಏಳ ಯತ್ನಿಸಿ ಪುನಃ ಜಾರಿ ಕುಕ್ಕರಿಸುವವನಂತೆ ಏನೋ ಉಪಕ್ರಮ ಮಾಡಿ ಪೇಚಾಡಿ ಪೇಚಾಡಿ ಕಡೆಗೆ ಎಲ್ಲಿಯೋ ವಿರಮಿಸಿರುವರು" ಎಂದು ಹೇಳುವರು.

ಸಂಸ್ಕೃತದಿಂದ ಕನ್ನಡಕ್ಕೆ ಶಬ್ದಗಳನ್ನು ತಗೆದುಕೊಳ್ಳುವಂತೆ ಇಂಗ್ಲಿಷ್‌ನಿಂದಲೂ ಶಬ್ದಗಳನ್ನು ತಗೆದುಕೊಳ್ಳಬಹುದು ಎಂಬ ಶ್ರೀಕಂಠೇಶಗೌಡರ ಅಭಿಪ್ರಾಯಕ್ಕೆ 'ಭಾಷಾಭಿಮಾನಿ'ಯ ಸಮ್ಮತಿ ಇಲ್ಲ. ಕನ್ನಡ ಶಬ್ದ ಸ್ವರೂಪವು ಇಂಗ್ಲಿಷ್‌ಗಿಂತಲೂ ಸಂಸ್ಕೃತಕ್ಕೆ ಹತ್ತಿರವಾಗಿರುತ್ತದೆ; ಹಾಗೂ ಸಂಸ್ಕೃತ ಶಬ್ದಗಳಿಗೆ ಕನ್ನಡ ಪ್ರತ್ಯಯಗಳನ್ನು ಸುಲಭವಾಗಿ ಹಚ್ಚಿ ಕನ್ನಡ ವಾಕ್ಯದಲ್ಲಿ ಸರಾಗವಾಗಿ ತಗೊಳ್ಳಬರುತ್ತದೆ; ಈ ಸೌಲಭ್ಯ ಇಂಗ್ಲಿಷ್‌ಗಿಲ್ಲ- ಎಂದು ಅವರು ವಿವರಿಸುವರು.

ನಾಟಕದ ಅನುವಾದದಲ್ಲಿ ವಿಭಕ್ತಿ ಮತ್ತು ಕ್ರಿಯಾ ಪ್ರತ್ಯಯಗಳು ಇಲ್ಲ. ಹಳಗನ್ನಡ ಹೊಸಗನ್ನಡ ಪ್ರತ್ಯಯಗಳ ಕಲಬೆರಕೆಯಾಗಿದೆ, ಗ್ರಾಮ್ಯ ಶಬ್ದಗಳನ್ನು ಬಳಸಲಾಗಿದೆ ಎಂಬ ದೋಷಗಳನ್ನು 'ಭಾಷಾಭಿಮಾನಿ'ಯು ನಾಟಕದಿಂದ ಹೆಕ್ಕಿ ತೋರಿಸುತ್ತಾರೆ. ಇಂಥ ದೋಷಗಳನ್ನು ಪುಟಪುಟಗಳಲ್ಲೂ ಅವರು ಕಾಣುತ್ತಾರೆ. ಇಷ್ಟೆಲ್ಲ ವಿಚಾರ ಮಾಡಿದ 'ಭಾಷಾಭಿಮಾನಿ' ಕೊನೆಯಲ್ಲಿ ಹೇಳುವುದು ಹೀಗೆ- "ಇಷ್ಟೆಲ್ಲ ವಿಚಾರ ಮಾಡಿದ ಅನಂತರದಲ್ಲಿ ಈ 'ಪ್ರತಾಪರುದ್ರದೇವ' ಎಂಬ ಗ್ರಂಥವನ್ನು ಯಾವ ಗ್ರಂಥಗಳ ಜೊತೆಗೆ ಸೇರಿಸಬೇಕೋ ನಿಷ್ಕರ್ಷಿಸುವುದು ಪ್ರಯಾಸವಾಗಿದೆ... ಸರಿಯಾದ ಭಾಷಾಂತರವೂ ಅಲ್ಲದೆ, ಸ್ವಂತವಾಗಿ ಸಂವಿಧಾನವನ್ನು ಅನುಸರಿಸಿಯೂ ಬರೆಯದೆ, ಲಕ್ಷಣ ಗ್ರಂಥವೂ

ಅಲ್ಲದೆ, ಓದುವುದಕ್ಕೆ ಆಹ್ಲಾದಕರವಾಗದಂತೆ ಬರೆದ ಗ್ರಂಥವನ್ನು ಏನೆಂದು ಕರೆಯೋಣ?"

ಬಹುಶಃ ಇದಕ್ಕೆ ಶ್ರೀಕಂಠೇಶಗೌಡರು ಉತ್ತರಕೊಟ್ಟ ಹಾಗಿಲ್ಲ. ಆದರೆ ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಪಿ.ಆರ್.ಕರಿಬಸವಶಾಸ್ತ್ರಿಯವರು ನೀಡಿದ ಉತ್ತರ 'ವಿದ್ಯಾದಾಯಿನಿ'ಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿದೆ. "ಇದು ರೂಪಾಂತರ, ಭಾಷಾಂತರವಲ್ಲ; ಆದ ಕಾರಣ ಬಹಳಷ್ಟು ಹೋಲಿಸುವುದು ಬೇಡ. ಇದರಲ್ಲಿಯ ಗುಣಗಳನ್ನೊಂದನ್ನೂ 'ಭಾಷಾಭಿಮಾನಿ'ಯು ಗಮನಿಸಿಲ್ಲ. ಆದ್ದರಿಂದ ಇವನನ್ನು 'ದೋಷಾಭಿಮಾನಿ'ಯೆಂದು ಕರೆಯುವುದು ಸೂಕ್ತ." ಒಟ್ಟಾರೆ ೧೮೯೬ರಷ್ಟು ಹಿಂದೆಯೇ ಭಾಷಾಂತರದ ಬಗ್ಗೆ ಇಷ್ಟೊಂದು ಪ್ರಬುದ್ಧವಾದ ಚರ್ಚೆ ನಡೆದದ್ದು ಸಾಹಿತ್ಯದ ಬೆಳವಣಿಗೆಗೆ ದೊಡ್ಡ ಕೊಡುಗೆಯೇ.

ಭಾಷಾಂತರ ರೂಪಾಂತರಗಳ ಸಂಬಂಧದಲ್ಲಿ ನಡೆದ ಇಂಥ ಚರ್ಚೆಯ ಫಲವಾಗಿಯೇ ೧೯೧೫ರಲ್ಲಿ ಒಂದು ಪುಸ್ತಕ ಹೊರ ಬಂತು. ಇದನ್ನು ಬರೆದವರು ತಮ್ಮನ್ನು 'ಇಂಗ್ಲಿಷ್-ಕನ್ನಡ ಭಾಷಾಂತರ ವೈರಿ'ಯೆಂದು ಕರೆದುಕೊಂಡಿರುವರು. ಇವರ ಹೆಸರು ಎ.ಬಿ. ಏಯಾಟ್‌ನ್ ಕಿರಸನು (ಕೃಷ್ಣಯ್ಯ ಎಂಬ ಹೆಸರಿನ ತಿರುಗು ಮುರುಗು) ಎಂದು ಶ್ರೀನಿವಾಸ ಹಾವನೂರ ಹೇಳಿದರೆ, ಅಯ್ಯಟ್ನಕಿರ್ಸ್ (ಬಿ.ಎ.ಶ್ರೀಕಂಠಯ್ಯ) ಎಂದು ಡಾ.ಕೋ.ವಸಂತಲಕ್ಷ್ಮಿ ಹೇಳಿದ್ದಾರೆ. ಕುತೂಹವುಳ್ಳವರು ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ' ಕೃತಿಯನ್ನು ನೋಡಬಹುದು.

ಭಾಷಾಂತರಕಾರ ಮೂಲವನ್ನು ಉಲ್ಲೇಖಿಸದೆ ಇರುವುದರ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿದೆ. 'ವಾಗ್ಭೂಷಣ'ದಲ್ಲಿ ಪ್ರಕಟವಾದ ತಮ್ಮ 'ಕರ್ನಾಟಕ ಸ್ವಪ್ನವಾಸವದತ್ತಂ' ಪ್ರಸ್ತಾವನೆಯಲ್ಲಿ ಭೀಮಾಜಿ ಜೀವಾಜಿ ಹುಲಿಕವಿಯವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಗಮನಿಸಬೇಕು. "ನಮ್ಮ ಭಾಷೆಯಲ್ಲಿ ಭಾಷಾಂತರ ಗ್ರಂಥಗಳೇ ಸ್ವತಂತ್ರ ಗ್ರಂಥಗಳಿಗಿಂತ ಹೆಚ್ಚಾಗಿ ರಚಿತವಾಗಹತ್ತಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಮೂಲ ಗ್ರಂಥದ ವಿಷಯವಾಗಿಯೂ ಆ ಗ್ರಂಥ ಕರ್ತೃವಿನ ವಿಷಯವಾಗಿಯೂ ಸ್ವಲ್ಪವಾದರೂ ಉಲ್ಲೇಖವನ್ನು ಮಾಡದೆ ಸ್ವತಃ ಬರೆದಂತೆ ಜನರಲ್ಲಿ ಆಭಾಸವನ್ನುಂಟುಮಾಡುವ ಪ್ರಯತ್ನವು ಭಾಷೆಗಾಗಲಿ ಲೇಖಕನಿಗಾಗಲಿ ಶ್ರೇಯಸ್ಕರವಲ್ಲ; ಮತ್ತು ಗ್ರಂಥ ಕರ್ತರಿಗೂ ಪ್ರಕಾಶಕರಿಗೂ, ಲೇಖಕರಿಗೂ ಇರತಕ್ಕ ಹಕ್ಕುಗಳನ್ನ ಉಲ್ಲಂಘಿಸುವುದೂ ಮನುಷ್ಯಧರ್ಮವಲ್ಲ.. .. .."[೭೧] ಇದು ಪ್ರತಿಯೊಬ್ಬ ಭಾಷಾಂತರಕಾರ ಯಾವತ್ತೂ ಪಾಲಿಸಬೇಕಾದ ಅಗತ್ಯವಾಗಿದೆ. ಇದು ಪ್ರಾಮಾಣಿಕತೆಯ ಪ್ರಶ್ನೆಯೂ ಹೌದು. ಮೂಲ ಉಲ್ಲೇಖಿಸದಿದ್ದರೆ ಈಗ ಅದನ್ನು ಕೃತಿಚೌರ್ಯ ಎಂದು ಕರೆಯಲಾಗುತ್ತಿದೆ.

---

೭೧. ವಾಗ್ಭೂಷಣ- ಸಂಪುಟ ೨೯, ಸಂಚಿಕೆ ೩, ಅಕ್ಟೋಬರ್ ೧೯೨೪.

ಹೊಸಗನ್ನಡದ ಆರಂಭ ಕಾಲದಲ್ಲಿ ಆಂಗ್ಲ ಸಾಹಿತ್ಯ ಓದಿಕೊಂಡವರಿಗೆ ಷೇಕ್ಸ್‌ಪಿಯರ್ ಅತ್ಯಂತ ಆಕರ್ಷಕನಾಗಿ ಕಂಡನು. ನವೋದಯ ಪೂರ್ವ ಘಟ್ಟದಲ್ಲಿ ಷೇಕ್ಸ್‌ಪಿಯರ್‌ನ ಹಲವು ಅನುವಾದಗಳು ಬಂದಿವೆ. ಆದರೆ ಅವುಗಳಿಗೆ ಅನುವಾದ ಎನ್ನುವ ಬದಲು ರೂಪಾಂತರ ಎಂದು ಹೇಳುವುದೇ ಸರಿ. ಆ ಕಾಲದಲ್ಲಿದ್ದ ರಂಗಭೂಮಿಯನ್ನು ಗಮನದಲ್ಲಿಟ್ಟುಕೊಂಡು ಇವುಗಳನ್ನು ರೂಪಾಂತರಿಸಲಾಗಿದೆ. 'ಕೆರೂರರ ಸುರತ ನಗರದ ಶ್ರೇಷ್ಠಿ', (ಮರ್ಚೆಂಟ್ ಆಫ್ ವೇನಿಸ್) ಮತ್ತು 'ವಸಂತಯಾಮಿನೀ ಸ್ವಪ್ನ ಚಮತ್ಕಾರ' (ಮಿಡ್ ಸಮ್ಮರ್ ನೈಟ್ಸ್ ಡ್ರೀಮ್), ಬಸವಪ್ಪ ಶಾಸ್ತ್ರಿಗಳ 'ಶೂರಸೇನ ಚರಿತ್ರೆ' (ಒಥೆಲೋ), ಎಂ.ಎಲ್. ಶ್ರೀಕಂಠೇಶಗೌಡರ 'ಪ್ರತಾಪರುದ್ರದೇವ' (ಮ್ಯಾಕ್‌ಬೆತ್), ಆನಂದರಾಯರ 'ರಾಮವರ್ಮ ಲೀಲಾವತಿ' (ರೋಮಿಯೋ ಆ್ಯಂಡ್ ಜೂಲಿಯಟ್), ಗುಂಡೋ ಕೃಷ್ಣ ಚುರಮುರಿಯವರ 'ರಾಘವೇಂದ್ರರಾವ್' (ಒಥೆಲೋ), ಗದಿಗೆಯ್ಯ ಹೊನ್ನಾಪುರ ಮಠರ 'ತ್ರಾಟಿಕಾ ನಾಟಕ' (ದಿ ಟೇಮಿಂಗ್ ಆಫ್ ದಿ ಶ್ರ್ಯೂ), ಎಂ.ಎಸ್. ಪುಟ್ಟಣ್ಣನವರ 'ಹೇಮಚಂದ್ರ ರಾಜ ವಿಲಾಸ' (ಕಿಂಗ್ ಲಿಯರ್) ಮೊದಲಾದವುಗಳ ಹೆಸರುಗಳನ್ನು ಗಮನಿಸಿದಾಗ ಅದರ ಸ್ವರೂಪವೂ ಗೊತ್ತಾಗಿ ಬಿಡುವುದು. ಪರಿಚಿತವಾದ ಆಂಗ್ಲ ಪರಿಸರದ ಕಥೆಯನ್ನು ಭಾರತೀಯ ಪರಿಸರಕ್ಕೆ ಒಗ್ಗಿಸಿಕೊಳ್ಳುವ ಸವಾಲನ್ನು ಈ ಆರಂಭಕಾಲದ ಅನುವಾದಕರು ಎದುರಿಸಿದರು. ಅವರಿಗೆ ತಮ್ಮ ರಂಗಭೂಮಿಗೆ ಒಂದು ನಾಟಕವನ್ನು ನೀಡಬೇಕು ಎಂಬ ಉದ್ದೇಶ ಇದ್ದುದರಿಂದ ಷೇಕ್ಸ್‌ಪಿಯರ್ ನಾಟಕದಲ್ಲಿಯ ಪದ್ಯಗಳನ್ನು ಪದ್ಯಗಳನ್ನಾಗಿಯೇ ಅನುವಾದಿಸುವುದಕ್ಕೂ ಅವರು ಹೋಗುವುದಿಲ್ಲ. ಅವರ ಎದುರಿಗೆ ಕನ್ನಡ ಸಾಹಿತ್ಯವನ್ನು ಹಿಗ್ಗಿಸಬೇಕು ಎಂಬ ಮೂಲ ಉದ್ದೇಶವಿತ್ತು. ಅಂದಿನ ಕಾಲದ ಪತ್ರಿಕೆಗಳಲ್ಲಿ ಅನ್ಯ ಭಾಷೆಯಿಂದ ಕೃತಿಗಳನ್ನು ಅನುವಾದಿಸಿ ಕನ್ನಡವನ್ನು ಶ್ರೀಮಂತಗೊಳಿಸಲು ಕರೆ ನೀಡಲಾಗುತ್ತಿತ್ತು. ಇವನ್ನೆಲ್ಲ ಅನುವಾದಿಸಿದವರು ವಿಶ್ವವಿದ್ಯಾಲಯಗಳ ವಿದ್ವಾಂಸರಲ್ಲ. ಹೆಸರು ಪಡೆದ ಕವಿಗಳೂ ಅಲ್ಲ. ಅಂದಿದ್ದ ಕಂಪನಿ ನಾಟಗಳ ರೀತಿಯಲ್ಲಿ ರಂಗ ಪ್ರವೇಶ, ಸೂತ್ರಧಾರ-ನಟಿ ಪ್ರವೇಶ ಇತ್ಯಾದಿಗಳನ್ನೂ ಈ ರೂಪಾಂತರಗಳಲ್ಲಿ ಅಳವಡಿಸಲಾಗಿದೆ. ಈ ರೂಪಾಂತರಕಾರರ ಎದುರಿಗೆ ಸಾಮಾನ್ಯ ಪ್ರೇಕ್ಷಕ ಇದ್ದನು. ಅವನಿಗೆ ಅರ್ಥವಾಗುವ ಹಾಗೆ ಬರೆಯಬೇಕು ಎಂಬುದು ಅವರ ಉದ್ದೇಶವಾಗಿತ್ತು. ಹಾಗೆ ನೋಡಿದರೆ ಆರಂಭದ ಈ ಅನುವಾದಕರು ತಮ್ಮ ಕಾರ್ಯದಲ್ಲಿ ಸಫಲರಾದರೆಂದೇ ಹೇಳಬೇಕು.

ನವೋದಯ ಕಾಲದಲ್ಲಿಯೂ ಅನುವಾದವು ರೂಪಾಂತರದಂತೆಯೇ ನಡೆಯಿತು. ಇಲ್ಲಿ ಮೂಲ ಗದ್ಯಕ್ಕೆ ಗದ್ಯ ಪದ್ಯಕ್ಕೆ ಪದ್ಯವನ್ನು ಮಾಡಿ ಮೂಲಕ್ಕೆ ಹೆಚ್ಚು ನಿಷ್ಠವಾಗಲು ಯತ್ನಿಸಲಾಯಿತು. ಇದಕ್ಕೆ ಕಾರಣ ಈ ಅನುವಾದಗಳನ್ನು ಕೈಗೆತ್ತಿಕೊಂಡವರು ಕವಿಗಳಾಗಿದ್ದರು. ಕುವೆಂಪು, ಡಿವಿಜಿ, ಮಾಸ್ತಿ, ಮೂರ್ತಿರಾವ ಇವರೆಲ್ಲ ಇಂಥ ಅನುವಾದ ಮಾಡಿದ್ದಾರೆ. ನಾಟಕಕ್ಕೆ ಇವರು ಸರಳ ರಗಳೆಯನ್ನು ಬಳಸಿದರು. ಇವರ ದೃಷ್ಟಿಯಲ್ಲಿ

ರಂಗಭೂಮಿ ಇರಲಿಲ್ಲ. ಈ ನಾಟಕಗಳು ರಂಗಭೂಮಿಗೆ ಹೊಂದುವುದಿಲ್ಲ ಎಂಬ ಅರಿವಿನಿಂದಲೇ ಅವರು ಬರೆಯುತ್ತಾರೆ. ನವೋದಯದ ಅನುವಾದಕರೂ ರಂಗಭೂಮಿಗೆ ತಕ್ಕುದಾಗಿ ಷೇಕ್ಸ್‌ಪಿಯರ್‌ನನ್ನು ನೀಡಲು ಶಕ್ತರಾಗುವುದಿಲ್ಲ. ಷೇಕ್ಸ್‌ಪಿಯರ್‌ನ ಭಾಷೆ ಅವರ ಸರಳ ರಗಳೆ, ಕಂದಗಳಿಗೆ ವಶವಾಗುವುದಿಲ್ಲ. ಆದರೆ ಇದು ನವ್ಯದವರಲ್ಲಿ ಸಿದ್ಧಿಸುತ್ತದೆ. ನವ್ಯದವರ ಭಾಷೆಯ ರೂಪಕನಿಷ್ಠತೆ, ಧ್ವನಿಪೂರ್ಣತೆ, ನಾಟ್ಯಪೂರ್ಣತೆಗಳು ಷೇಕ್ಸ್‌ಪಿಯರ್‌ನನ್ನು ಸಮರ್ಥವಾಗಿ ಅನುವಾದಿಸುವಲ್ಲಿ ಯಶಸ್ವಿಯಾಗುತ್ತದೆ. ಇದಕ್ಕೆ ಲಂಕೇಶರ 'ದೊರೆ ಈಡಿಪಸ್'ನನ್ನು ಉದಾರಹಣೆಯಾಗಿ ನೀಡಬಹುದು. ಎಚ್.ಎಸ್. ಶಿವಪ್ರಕಾಶರ 'ಕಿಂಗ್ ಲಿಯರ್', ರಾಮಚಂದ್ರದೇವರ 'ಮ್ಯಾಕ್‌ಬೆಥ್', ಕೆ.ಎಸ್.ನಿಸಾರ್ ಅಹ್ಮದ್ ಅವರ 'ಮಿಡ್ ಸಮರ್ ನೈಟ್ ಡ್ರೀಮ್' ಮೊದಲಾದವುಗಳೂ ಈ ಸಾಲಿಗೆ ಸೇರುತ್ತವೆ. ಇವುಗಳನ್ನು ರಂಗದ ಮೇಲೆಯೂ ಪ್ರದರ್ಶಿಸ ಬಹುದು. ಮುಕ್ತ ಛಂದದ ನಾಟಕೀಯವಾದ ಈ ಭಾಷೆ ಕಾವ್ಯದ ಕಾವನ್ನೂ ಉಳಿಸಿಕೊಂಡಿದೆ, ಆಡುಮಾತಿನಂತಿದ್ದರೂ ಲಯಬದ್ಧವಾಗಿಯೂ ಇದೆ.

ಭಾಷಾಂತರವು ಇಂದು ಪ್ರಬುದ್ಧವಾದ ಮೀಮಾಂಸೆಯಾಗಿ ಬೆಳೆದಿದೆ ನಿಜ. ಅದರ ಈಗಿನ ಸ್ಥಿತಿಗೆ ಆರಂಭದಲ್ಲಿಯ ಇಂಥ ತಪ್ಪು ಹೆಜ್ಜೆಗಳೇ ಕಾರಣ. ನಡೆಯುವ ಮಗು ಎಡವುತ್ತದೆ. ಎಡವುವ ಮಗುವೇ ಮುಂದೆ ಎವರೆಸ್ಟನ್ನೂ ಏರಬಹುದು, ಚಂದ್ರಲೋಕಕ್ಕೂ ಹೋಗಬಹುದು. ಒಟ್ಟಾರೆ ಇಂಥ ವಾಗ್ವಾದವೇ ಅತ್ಯುತ್ತಮ ಅನುವಾದ ಕೃತಿಗಳು ಬರುವುದಕ್ಕೆ ಕಾರಣವಾಗಿದೆ.

ಸಮಾಜಮುಖಿ ಸಾಹಿತ್ಯ:

ನವೋದಯ ಸಾಹಿತ್ಯದ ಅತಿ ಭಾವುಕತೆಗೆ ಪ್ರತಿಕ್ರಿಯೆಯಾಗಿ ಪ್ರಗತಿಶೀಲ ಸಾಹಿತ್ಯ ಕನ್ನಡದಲ್ಲಿ ಹುಟ್ಟುಪಡೆಯಿತು. ಚಳವಳಿಯ ಮೂಲಕವಾಗಿ ಹುಟ್ಟು ಪಡೆದ ಸಾಹಿತ್ಯ ಪ್ರಗತಿಶೀಲ ಸಾಹಿತ್ಯ. ಕನ್ನಡದಲ್ಲಿ ನಾಲ್ವತ್ತರ ದಶಕದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯ ಮತ್ತು ಚಳವಳಿ ಕೆಲವು ಗಮನಾರ್ಹ ಹೆಜ್ಜೆಗುರುತುಗಳನ್ನು ಬಿಟ್ಟು ಹೋಗಿವೆ. ಪ್ರಗತಿಶೀಲತೆ ಕೇವಲ ಕನ್ನಡದಲ್ಲಿ ಕಾಣಿಸಿಕೊಂಡ ಚಳವಳಿಯಾಗಿರಲಿಲ್ಲ. ಇಡೀ ಭಾರತೀಯ ಸಾಹಿತ್ಯದಲ್ಲಿಯೇ ಅದು ಮೂಡಿ ಬಂತು. ರಶಿಯಾದ ಕಮ್ಯುನಿಸ್ಟ್ ಕ್ರಾಂತಿಯ ಬಳಿಕ ಅಲ್ಲಿಯ ಸಾಹಿತ್ಯದಿಂದ ಪ್ರೇರಣೆ ಪಡೆದು ಹುಟ್ಟಿಕೊಂಡ ಸಾಹಿತ್ಯ ಇದು. ಸಾಹಿತಿಗಳು ತಮ್ಮ ಸುತ್ತಮುತ್ತಲಿನ ಸಮಾಜಕ್ಕೆ ನಿಷ್ಠರಾಗಿರಬೇಕು. ಅಲ್ಲಿಯ ನೋವು ಕಷ್ಟ ಕೋಟಲೆಗಳಿಗೆ ಅವರ ಸ್ಪಂದಿಸಬೇಕು. ಅದನ್ನು ಬಿಟ್ಟು ಗಿಳಿ ಕೋಗಿಲೆಗಳು, ಇಂದ್ರ, ಚಂದ್ರರ ಮೇಲೆ ಕಾವ್ಯ ಬರೆಯುವುದು ಸಲ್ಲ ಎಂಬ ಘೋಷಣೆಯೊಂದಿಗೆ ಸಾಹಿತ್ಯ ಸಾಮಾಜಿಕ ನಿಷ್ಠೆಯನ್ನು ಹೊಂದಿರಬೇಕು ಎಂಬ ಅರಿವಿನೊಂದಿಗೆ ಪ್ರಗತಿಶೀಲ ಸಾಹಿತಿಗಳು ಕೃತಿಗಳನ್ನು ರಚಿಸುವ ಸಂಕಲ್ಪ ಮಾಡಿದರು.

ಪ್ರಗತಿಶೀಲ ಸಾಹಿತ್ಯ ಭಾರತದಲ್ಲಿ ಹುಟ್ಟಿಕೊಳ್ಳುವ ಸಂದರ್ಭದಲ್ಲಿ ಫ್ಯಾಸಿಸಂ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಜಗತ್ತಿನಲ್ಲಿ ಪ್ರಭಾವಶಾಲಿಯಾಗಿದ್ದವು. ಭಾರತೀಯ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಅವರು ಧ್ವನಿಯೆತ್ತಬೇಕಿತ್ತು. ಕನ್ನಡದಲ್ಲಿ ಒಟ್ಟಾರೆ ಭಾರತೀಯ ಸಂದರ್ಭದಲ್ಲಿ ಪ್ರಗತಿಶೀಲ ಸಾಹಿತ್ಯ ಹುಟ್ಟುಪಡೆದದ್ದು ೪೦ರ ದಶಕದ ಆರಂಭದಲ್ಲಿ. ಸಾಹಿತ್ಯ ಸಮಾಜದ ಎಲ್ಲ ವರ್ಗದವರ ನೋವು, ನಲಿವು, ಬದುಕಿನ ರೀತಿ ನೀತಿ ಹಾಗೂ ಸಂಸ್ಕೃತಿಗಳನ್ನು ಒಳಗೊಳ್ಳಬೇಕೆಂಬ ಕಳಕಳಿ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಳ್ಳುವ ಪೂರ್ವದಲ್ಲಿಯೇ ಇತ್ತು. ಕನ್ನಡದ ಸಾಹಿತ್ಯ ಪತ್ರಿಕೆಗಳಲ್ಲಿ ಈ ಬಗೆಗೆ ಕರೆ ನೀಡಿರುವುದನ್ನು ಇಲ್ಲಿ ಗಮನಿಸಬೇಕು.

'ಜಯಕರ್ನಾಟಕ'ದ ೧೬ನೆ ಸಂಪುಟದ ೨ನೆ ಸಂಚಿಕೆಯಲ್ಲಿ ಆದರ ಸಂಪಾದಕರಾದ ಬೆಳಗಾವಿ ರಾಮಚಂದ್ರರಾಯರು ಕವಿ- ಸಾಹಿತಿ- ಸಾಹಿತ್ಯ ಮೊದಲಾದವುಗಳ ಬಗೆಗೆ 'ಅಂದು -ಇಂದು' ಲೇಖನದಲ್ಲಿ ತಮ್ಮ ಅಭಿಪ್ರಾಯ ಮಂಡಿಸಿರುವರು. ಇಲ್ಲಿ ಪಾಶ್ಚಾತ್ಯ ಮೀಮಾಂಸೆಯ ಅಭಿಪ್ರಾಯಗಳನ್ನೂ ಪರಿಗಣಿಸಲಾಗಿದೆ. ಒಂದು ಕಾಲಕ್ಕೆ ಕವಿಯು ಕಲಾಕೋವಿದನು ಪ್ರಪಂಚದ ಪರಿವೆಯಿಲ್ಲದೆ ತನ್ನೊಳಗೆ ತಾನೇ ತನ್ಮಯನಾಗಿ ರಸಾಸ್ವಾದನೆ ಮಾಡಬಲ್ಲವನಾಗಿದ್ದನು. ಆಗಿನ ಜಗತ್ತು ಅವನ ಭಾವ ಜೀವಕ್ಕೆ ಅನುಕೂಲವಾಗಿತ್ತು. ಕಾವ್ಯ ಶಿಲ್ಪಾದಿ ಕಲೆಗಳು ಮಾತ್ರವಲ್ಲ, ಧರ್ಮವೂ ಮಾನವನ ಏಕಾಂತಿಕ ಆತ್ಮೋನ್ನತಿಗೆ ಸಹಾಯಕವಾಗಿತ್ತು ಎನ್ನುವ ಬೆಳಗಾವಿ ರಾಮಚಂದ್ರರಾಯರು, ಈಗ ಅದು ಸಾಧ್ಯವಿಲ್ಲ ಎನ್ನುವರು. ಇದಕ್ಕೆ ಕಾರಣ ಜೀವನದ ಘರ್ಷಣೆ ಹೆಚ್ಚಿರುವುದು ಎನ್ನುತ್ತಾರೆ ಅವರು.

ಜಗತ್ತು ನಮ್ಮ ಹೊಸ್ತಿಲಿಗೆ ಬಂದು ತಾಕುತ್ತಿದೆ. ವಿಶ್ವವು ಕಿರಿದಾಗಿದೆ. ಅಗಸ್ತ್ಯನು ಸಪ್ತ ಸಮುದ್ರಗಳನ್ನು ಆಪೋಷಣೆ ಮಾಡಿದ್ದನಂತೆ. ಅಹುದು; ವಿಜ್ಞಾನದ ಮಹಿಮೆಯಿಂದ ಮಾನವನಿಂದು ಅಭಿನವ ಅಗಸ್ತ್ಯನಾಗಿದ್ದಾನೆ. ಏಳು ಕಡಲುಗಳು ಆತನ ಬೊಗಸೆಯಲ್ಲಿ ಹಿಡಿಸುತ್ತಿವೆ. ಮಾನವನಿಂದು ಭೂಮಿಯ ಸಾಮ್ರಾಟನು. ಇನ್ನು ವಿಶ್ವದ ವಿರಾಟನಾಗಲು ಹವಣಿಸುತ್ತಿರುವನು ಎಂದು ಹೇಳುವ ಮೂಲಕ ಅವರು ಮಾನವನ ಅನುಭವ ಕ್ಷಿತಿಜ ಯಾವ ರೀತಿ ವಿಸ್ತರಿಸುತ್ತಿದೆ ಎಂಬುದನ್ನು ವಿವರಿಸುವರು.

"... ಇಂದಿನ ಕವಿಶೇಖರನಾಗಲಿ, ಕಲಾಕೋವಿದನಾಗಲಿ, ಧರ್ಮ ಮಾರ್ತಾಂಡನಾಗಲಿ ಜೀವನದ ನಿಕಟತೆಯನ್ನು ಅಲ್ಲಗಳೆಯಲಾರನು; ಹಾಗೆ ಮಾಡಿದರೆ ಅವನೊಬ್ಬ ಅರೆ ಮರಳ", ಎನ್ನುವ ಮಾತುಗಳಲ್ಲಿ ಕವಿಯೊಬ್ಬನ ಸಿದ್ಧತೆಗಳು ಏನಿರಬೇಕು ಎಂಬುದನ್ನು ಅವರು ಹೇಳುವರು.

ಸಾಹಿತ್ಯದ ವಸ್ತು ಹಿಂದೆ ಏನಿತ್ತು ಇಂದು ಏನಾಗಿದೆ ಎಂಬುದನ್ನು ರಾಮಚಂದ್ರರಾಯರು ವಿವರಿಸುವುದು ಹೀಗೆ; "ಅಂದಿನವರ ಕಣ್ಣಿನಲ್ಲಿ ಮಾನವನೊಬ್ಬ ತಪ್ಪುಗಾರ. ಆದುದರಿಂದ ತಪ್ಪೊಪ್ಪುವಿಕೆ, (confessions), ಪ್ರಾಯಶ್ಚಿತ್ತ ವಿಧಾನ, ಆತ್ಮ ದಂಡನೆಗಳನ್ನು ಅವರು ನಿರ್ಮಿಸಿದ್ದರು. ಇಂದಿನವರ ತಿಳಿವಳಿಕೆಯಂತೆ ಮಾನವನ ಅಳು-ನಗುಗಳು, ತಪ್ಪು-ಒಪ್ಪುಗಳು, ಒಳಿತು-ಕೆಡಕುಗಳು ಜೀವನ ಸಂಗೀತದ ಸಪ್ತ ಸ್ವರಗಳು." ಆಂಗ್ಲ ಕವಿಯ ಉಕ್ತಿಯಂತೆ "ದುಃಖದ ಸಾಲೆಯಲ್ಲಿ ನಾವು ಕಲಿಯುವ ಅನುಭವಕ್ಕೆ ದೇವತೆಗಳ ಅನುಭವವೂ ಸಾಟಿಯಾಗಲಾರದು." (All your beauty cannot win Truth we learn in pain and sighs-ಏ.ಈ.) ಇಂದಿನ ಕವಿಯು ಅಳು ನಗುವಿನ ಆಳವನ್ನು ತಿಳಿದಿರಬೇಕು; ಇಂದಿನ ಧರ್ಮಜ್ಞನು ತಪ್ಪು ಒಪ್ಪುಗಳ ದಾರಿಯನ್ನು ತುಳಿದಿರಬೇಕು; ಇಂದಿನ ನೀತಿಜ್ಞನು ಒಳಿತು ಕೆಡಕುಗಳ ಕಳಗುಳದಲ್ಲಿ ಇಳಿದಿರಬೇಕು ಎನ್ನುವ ಮಾತನ್ನು ಬೆಳಗಾವಿ ರಾಮಚಂದ್ರ ರಾಯರು ಹೇಳುವರು.

ಲೇಖಕನ ಅನುಭವದ ಬುತ್ತಿ ದೊಡ್ಡದಾದಷ್ಟೂ ಸಾಹಿತ್ಯದ ಸತ್ವ ಹೆಚ್ಚುವದೆಂಬ ನಂಬಿಕೆ ಅವರದು. ಅದಕ್ಕಾಗಿಯೇ, 'ನೋಟಕರ ಭೂಮಿಕೆಯು ಹಳಮಾತಾಯಿತು. ಕಣಕ್ಕಿಳಿದು ಮೈ ಮಣ್ಣುಮಾಡಿಕೊಳ್ಳಬೇಕು. ಹಾಗಲ್ಲದೆ ಬಾಳಿನ ಕಾಳಗದ ಕಟ್ಟು ನಿಟ್ಟುಗಳು ತಿಳಿಯವು' ಎನ್ನುವ ಮಾತನ್ನು ಹೇಳುವರು. "ನಿಮ್ಮ ಸಾಧನೆಯು ಬಯಲನ್ನು ಮತ್ತು ಸಮುದ್ರ ತಡಿಗಳನ್ನು ಎದುರಿಸಬಲ್ಲವೆ?" (Can your performance face the open fields and the sea-side) ಎಂಬ ವಾಲ್ಟ್ ವ್ಹಿಟ್ಮನ್ನನ ಮಾತುಗಳನ್ನು ಸ್ಮರಿಸುವರು. ಜೀವನ ಸಂಘರ್ಷಣೆಯಿಂದ ಹುಟ್ಟುವ ಸಾಹಿತ್ಯ- ಸಂಸ್ಕೃತಿ- ಕಲೆಗಳಿಗೆ ನಿಕಟಾನುಭವದ ಮುದ್ರೆಯಿರುವುದು. ನೇಗಿಲು ಹೊಡೆಯುವವ, ಉಳಿ ಹಿಡಿಯುವವ, ತಿದಿಯೂದುವವ, ತಿಗರಿ ತಿರುಗಿಸುವವ ಕವಿಯಾಗಬೇಕು. ಸೆರೆಯಾಳು- ಅರಾಜಕವಾದಿ- ನಗ್ನ

ಸಂಪ್ರದಾಯಿ- ಗಿರಣಿ ಕೆಲಸಗಾರ- ಕಾದಾಳು ಹಾಡುಗಾರನಾಗಬೇಕು ಎಂಬ ರಾಮಚಂದ್ರರಾಯರ ಕಳಕಳಿ ತಮ್ಮ ಕಾಲಕ್ಕಿಂತ ಸ್ವಲ್ಪ ಮುಂದಾಗಿಯೇ ಯೋಚಿಸಿದಂತೆ ತೋರುತ್ತದೆ. ಅವರ ಈ ಮಾತುಗಳು ಬಂಡಾಯ-ದಲಿತ ಚಿಂತಕನೊಬ್ಬ ಆಡುತ್ತಿರುವಂತೆ ಭಾಸವಾಗುತ್ತಿದೆ.

ತಳಮಟ್ಟದವರು ಕವಿಯಾಗುವುದು ಯಾವಾಗ? ಹಾಗಾಗಬೇಕಾದರೆ ಸಂಸ್ಕೃತಿಯು ನೇಗಿಲು -ಉಳಿ- ತಿದಿ- ತಿಗರಿ ಹಿಡಿಯುವವರ ಮಟ್ಟಕ್ಕೆ ಮುಟ್ಟಬೇಕು. ಜ್ಞಾನ ಗಂಗೆಯು ಅಲ್ಲಿಯವರೆಗೂ ಮುಟ್ಟಬೇಕು. ಆಗ ಜೀವನದ ನಿಜವಾದ ಸೊಲ್ಲು ಕೇಳಿಸುವುದು. ಓಲಗದ ಲಲ್ಲೆವಾತು, ಕನ್ನಡವಕ್ಕಿಯ ಕಲಿಕೆವಾತು ಅಲ್ಲಿರಲಾರದು. ಬಂಟನ ಬಿರುನುಡಿ, ಪತಿತನ ಕಹಿನುಡಿ, ಪ್ರಯತ್ನವಾದಿಯ ಹರಳು ನುಡಿ ಆಗ ಮಿಡಿಯುವುದು ಎಂದು ಹೇಳುವ ಮೂಲಕ ಅವರು ಜೀವಂತ ಭಾಷೆಯ ಬಳಕೆ ಸಾಹಿತ್ಯಕ್ಕೆ ಅಗತ್ಯ ಎನ್ನುವರು.

ಬಾಳುವೆಯ ಸಾಣೆ ಕಲ್ಲಿಗೆ ನಮ್ಮ ಕಿರುಜೀವನವನ್ನೊಡ್ಡಬೇಕು, ಮೈ ತರಿಯಬೇಕು; ನೆತ್ತರು ಹರಿಯಬೇಕು, ಆಗ ಆ ನುಡಿಯ ಕಿಡಿ ಹಾರುವುದು. ಅದುವೇ ಸಾಹಿತ್ಯದ ಜೀವ ಜೀವಾಳ; ಸಂಸ್ಕೃತಿಯ ಸಾರ ಸರ್ವಸ್ವ ಎನ್ನುವ ಮೂಲಕ ಸಾಹಿತ್ಯದ ವ್ಯಾಖ್ಯೆಯನ್ನು ಸುದೀರ್ಘ ಪ್ರಸ್ತಾವನೆಯೊಂದಿಗೆ ನೀಡುವರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಲೇಖನಕ್ಕೆ ಚಾರಿತ್ರಿಕ ಮಹತ್ವವಿದೆ. ಸಾಹಿತ್ಯ ವಾಹಿನಿಗೆ ಹೊಸ ದಿಕ್ಕನ್ನು ತೋರಬೇಕೆಂಬ ಬಯಕೆ ಎದ್ದು ಕಾಣುತ್ತಿದೆ. ರೋಮ್ಯಾಂಟಿಕ್ ಕಾವ್ಯ ತನ್ನ ಉತ್ತುಂಗದಲ್ಲಿದ್ದಾಗ, ಅದು ಜೀವನ ವಿಮುಖವಾಗಿದೆ ಎಂಬ ಭಾವನೆ ಮೂಡುತ್ತಿದ್ದಾಗ ಸಾಹಿತ್ಯ ಹೇಗಿರಬೇಕು ಎಂಬ ಈ ಆಲೋಚನೆ ಆ ಕಾಲಕ್ಕೆ ಅತ್ಯಂತ ನವೀನವಾದದ್ದು. ಇದು ಪ್ರಕಟವಾದ ವರ್ಷ ೧೯೩೮. ಪ್ರಗತಿಪಂಥ ಹುಟ್ಟಿಕೊಂಡದ್ದು, ಪ್ರಗತಿಶೀಲ ಲೇಖಕರ ಸಮ್ಮೇಳನ ಜರುಗಿದ್ದು ಇವೆಲ್ಲ ಆ ನಂತರದ ಬೆಳವಣಿಗೆ.

ಪ್ರಗತಿಶೀಲ ಚಳವಳಿ ಹುಟ್ಟಿಕೊಳ್ಳುವ ಪೂರ್ವದಲ್ಲಿಯೇ ಕನ್ನಡದಲ್ಲಿ ಪ್ರಗತಿಶೀಲ ಧೋರಣೆಯ ಸಾಹಿತ್ಯ ಸೃಷ್ಟಿಯಾಗಿತ್ತು. ಆನಂದಕಂದರ 'ಮಾಲ್ಕಿ ಹಕ್ಕು', ಕೊರಡ್ಕಲ್ ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ', ಭಾರತಿಸುತ ಅವರ 'ಮೋಚಿ' ಇಂಥ ಕಥೆಗಳಾಗಿವೆ. 'ಧನಿಯರ ಸತ್ಯನಾರಾಯಣ' ರಚನೆಯಾದ ವರ್ಷ ತಿಳಿಯದಾದರೂ ಅದು ಮೊದಲು ಸಂಕಲನದಲ್ಲಿ ಸೇರಿದ್ದು ೧೯೩೮ರಲ್ಲಿ. ಅದಕ್ಕೂ ಪೂರ್ವದಲ್ಲಿಯೇ ಅದನ್ನು ಬರೆದಿರುವ ಸಾಧ್ಯತೆ ಇದೆ. ಸಾಮಾಜಿಕ ಅನ್ಯಾಯವೊಂದರ ಹೃದಯ ಕಲಕುವ ಚಿತ್ರಣ ಅದರಲ್ಲಿದೆ. ಪ್ರಗತಿಶೀಲ ಕಥೆಗಳಲ್ಲಿ ಇರುವಹಾಗೆಯೇ ಶ್ರೀಮಂತಿಕೆಯ ಹೃದಯಹೀನತೆ ಮತ್ತು ಬಡತನದ ಮುಗ್ಧತೆ ಇವುಗಳ ನಡುವಿನ ಅಂತರವನ್ನು ಮನಮುಟ್ಟುವಹಾಗೆ ಇದರಲ್ಲಿ ಚಿತ್ರಿಸಲಾಗಿದೆ. ಈ ಚಿತ್ರಣದಲ್ಲಿ ಸೂಕ್ಷ್ಮತೆ ಇದೆ. ಕಲಾತ್ಮಕತೆ ಇದೆ. ಅನ್ಯಾಯಕ್ಕೊಳಗಾಗುವವರು ಇಲ್ಲಿ ಚಿಕ್ಕ ಮಕ್ಕಳು. ಈ ಕಾರಣಕ್ಕಾಗಿಯೇ ಇಲ್ಲಿ ಅವರ

ರೋಷ ಉತ್ಕಟ ಸ್ಥಿತಿಯಲ್ಲಿ ಪ್ರಕಟವಾಗಲು ಸಾಧ್ಯವಾಗಿದೆ. ಎಲ್ಲಿಂದಲೋ ಬಾಳೆಯ ಗಿಡವನ್ನು ತಂದು ನೆಟ್ಟು ನೀರೆರೆದು ಅದು ಎಲೆಬಿಟ್ಟು ಪಲ್ಲವಿಸಿ ಗೊನೆಯನ್ನೂ ಬಿಟ್ಟಾಗ ಬಾಲಕರ ಮುಗ್ಧತೆಗೆ ಅನುಗುಣವಾಗಿ ಅವರು ಸಂತೋಷವನ್ನು ಅನುಭವಿಸುತ್ತಾರೆ. ಬಾಳೆ ಗೊನೆ ಹಣ್ಣೂ ಆಗುತ್ತದೆ. ಆಗ ನೆಲದ ಮಾಲಿಕ ಬಂದು ಅದನ್ನು ಹಕ್ಕಿನಿಂದ ಬೇಡುತ್ತಾನೆ. ಸಮಾಜದಲ್ಲಿದ್ದ ಒಡೆಯ ಒಕ್ಕಲುವಿನ ವಿಷಮ ಸಂಬಂಧವನ್ನು ಇದು ಸಂಕೇತಿಸುತ್ತದೆ. ತಾವು ನೆಟ್ಟುಬೆಳೆಸಿದ್ದುತಮಗೇ ಎಂಬ ಮುಗ್ಧತೆಯಲ್ಲಿದ್ದಮಕ್ಕಳಿಗೆ ವಾಸ್ತವ ಹಠಾತ್ತನೆ ಎದುರಾದಾಗ ಅದು ರೋಷವಾಗುತ್ತದೆ. ಮಕ್ಕಳ ಮುಗ್ಧತೆಗೆ ವಾಸ್ತವದ ಅರಿವಿಲ್ಲ. ಆದರೆ ಅವರ ಹೆತ್ತವರಿಗೆ ಅದರ ಅರಿವಿದೆ. ಆದರೆ ಅಸಹಾಯಕತೆ. ತನ್ನ ನೆಲದಲ್ಲಿ ಬೆಳೆದುದೆಲ್ಲ ತನ್ನದೇ ಎಂದು ಭಾವಿಸುವ ಧನಿಯರ ಹಕ್ಕು ಪ್ರತಿಪಾದನೆ ಅಂದಿನ ವ್ಯವಸ್ಥೆಗೆ ಅನುಗುಣವಾಗಿಯೇ ಇದೆ. ಈ ವ್ಯವಸ್ಥೆಯ ವಿರುದ್ಧ ಮಕ್ಕಳು ಸಿಡಿದೇಳುವುದು ಅತ್ಯಂತ ಕಲಾತ್ಮಕ ಅಂತ್ಯ. ಮಕ್ಕಳಲ್ಲಿ ತಾರತಮ್ಯ ಜ್ಞಾನ ಇರುವುದಿಲ್ಲ, ಮಕ್ಕಳು ದೇವರ ಸಮಾನ, ಮಕ್ಕಳ ಮನಸ್ಸು ಬಿಳಿಯ ಹಾಳೆ ಇದ್ದಹಾಗೆ ಎಂಬೆಲ್ಲ ನಂಬಿಕೆಗಳ ಹಿನ್ನೆಲೆಯಲ್ಲಿ ಅವರು ತೋರುವ ಪ್ರತಿಭಟನೆ ನ್ಯಾಯವಾದುದೇ ಎಂಬ ನಿರ್ಧಾರಕ್ಕೆ ಓದುಗ ತಲುಪುವಂತಾಗುತ್ತದೆ. ಒಟ್ಟಾರೆ ಇದೊಂದು ಪ್ರಗತಿಶೀಲ ಕಥೆಗೆ ಉತ್ತಮ ಉದಾಹರಣೆಯಾಗಿದೆ.

ಭಾರತೀಪ್ರಿಯರ (ದಿ.ಎಸ್.ವೆಂಕಟರಾವ್) 'ಮೋಚಿ' ಪ್ರಕಟವಾದದ್ದು ೧೯೩೨ರಲ್ಲಿ. ಕಥೆಯ ಆರಂಭ ಆಕರ್ಷಕವಾಗಿದೆ. ಸಂಭಾಷಣೆಗಳಲ್ಲಿಯೇ ಕಥೆಯನ್ನು ವಿಸ್ತರಿಸಲಾಗಿದೆ. ಕಥೆಯಲ್ಲಿ ದಟ್ಟವಾದ ವಿಷಾದದ ಧ್ವನಿ ಇದೆ. ಸಮಾಜದ ಕೆಳಸ್ತರದಲ್ಲಿದ್ದ ಮೋಚಿಯಂಥ ವ್ಯಕ್ತಿಯನ್ನು ಕಥೆಗೆ ಬಳಸಿಕೊಂಡದ್ದು ಮತ್ತು ಆತನಲ್ಲಿಯೂ ಪ್ರಾಮಾಣಿಕತೆ ಇದೆ ಎಂಬುದನ್ನು ಸಹಾನುಭೂತಿಯಿಂದ ಚಿತ್ರಿಸಿದ್ದು, ಅವನ ಸ್ವಾಭಿಮಾನವನ್ನು ಎತ್ತಿ ಹಿಡಿದದ್ದು ಪ್ರಗತಿಶೀಲತೆಯ ದ್ಯೋತಕವಾಗಿದೆ. ಕೇವಲ ವೈಯಕ್ತಿಕ ಸಹಾನುಭೂತಿ, ಸಹಾಯಗಳ ನೆಲೆಯಲ್ಲಿ ಬಡತನದಂಥ ಸಾಮಾಜಿಕ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲ, ಅದು ವ್ಯಕ್ತಿಗಳ ಸ್ವಾಭಿಮಾನವನ್ನು ತಾಕುವುದರಿಂದ ಸರಿಯಾದ ಪರಿಹಾರವೂ ಅಲ್ಲ ಎಂಬ ಸಂದೇಶವನ್ನು ಕಥೆ ನೀಡುತ್ತದೆ. ಕಥೆಯಲ್ಲಿಯ ನಿರೂಪಕನಿಗೆ ಅದು ಅರ್ಥವಾಗುತ್ತದೆ. ಸದ್ಯದ ವ್ಯವಸ್ಥೆಯಲ್ಲಿ ಹೆಚ್ಚಿನದೇನನ್ನೂ ಮಾಡುವುದು ತನಗೆ ಸಾಧ್ಯವಿಲ್ಲವಲ್ಲ ಎಂಬ ನಿರೂಪಕನ ವಿಷಾದದಲ್ಲಿ ಕಥೆ ಮುಗಿಯುತ್ತದೆ. ಬಡತನದಂಥ ಸಾಮಾಜಿಕ ಸಮಸ್ಯೆಯನ್ನು ಸಾಮಾಜಿಕ ನೆಲೆಯಲ್ಲಿಯೇ ನಿವಾರಿಸಬೇಕು ಎಂಬ ಸಂದೇಶವನ್ನು ಕಥೆ ನೀಡುತ್ತದೆ. ಇದೊಂದು ಪ್ರಗತಿಶೀಲ ಧೋರಣೆಯೇ ಸರಿ.

ವಿಚಿತ್ರದ ಸಂಗತಿಯೆಂದರೆ ಪ್ರಗತಿಶೀಲ ಚಳವಳಿ ಹುಟ್ಟಿಕೊಂಡಮೇಲೆ, ಆ ಚಳವಳಿಯ ಮುಂಚೂಣಿಯಲ್ಲಿದ್ದವರು ಬರೆದ ಕಥೆಗಳು ಈ ಮಟ್ಟಕ್ಕೆ ಏರಲಿಲ್ಲ ಎನ್ನುವುದು. ಧ್ವನಿಪೂರ್ಣವಾಗಿ ಸಮಸ್ಯೆಯ ಸೂಕ್ಷ್ಮಗಳನ್ನು ಹಿಡಿದಿಡಬಲ್ಲ ಸಂಕೀರ್ಣ ಕಥೆಗಳು ಪ್ರಗತಿಶೀಲರ ಕಾಲದಲ್ಲಿ ಬರಲಿಲ್ಲ. ಉದಾಹರಣೆಗೆ ಅನಕೃ ಅವರ 'ಅನ್ನದ

ಕೂಗು' ಕಥೆಯ ವಸ್ತು 'ಮೋಚಿ' ಕಥೆಯ ವಸ್ತುವನ್ನೇ ಹೊಂದಿದೆ. ಪರಿಸರ ಬೇರೆಯಾಗಿದ್ದರೂ ಎರಡರ ಆಶಯವೂ ಒಂದೇ; ಬಡತನ ಮತ್ತು ಅದನ್ನು ನಿವಾರಿಸಲು ವೈಯಕ್ತಿಕ ನೆಲೆಯಲ್ಲಿ ನಡೆದ ಪ್ರಯತ್ನ. 'ಮೋಚಿ'ಯಲ್ಲಿ ಕೇವಲ ವೈಯಕ್ತಿಕ ನೆಲೆಯಲ್ಲಿ ಈ ಸಾಮಾಜಿಕ ಸಮಸ್ಯೆಗೆ ಉತ್ತರವಿಲ್ಲವೆಂದು ವಿಷಾದಿಸಿ, ಪರ್ಯಾಯವಾಗಿಯಾದರೂ ಬೇರೆ ಬಗೆಯ ಪರಿಹಾರದ ಅವಶ್ಯಕತೆ ಸೂಚಿಸುತ್ತದೆ. 'ಅನ್ನದ ಕೂಗು'ದಲ್ಲಿ ಇಂಥ ಯಾವುದೇ ಸೂಚನೆಯಿಲ್ಲ. ಬದಲಾಗಿ ವೈಯಕ್ತಿಕ ನೆಲೆಯ ಪರಿಹಾರವನ್ನೇ ಉತ್ಸಾಹದಿಂದ ವೈಭವೀಕರಿಸುತ್ತದೆ. ಇದು ಪ್ರಗತಿಶೀಲ ಧೋರಣೆಗೆ ವಿರುದ್ಧ ಎನಿಸದೆ ಇರದು. ವಿಚಾರಶೀಲತೆಗಿಂತ ಉದ್ವೇಗವೇ ಇಲ್ಲಿ ಹೆಚ್ಚು. ಭಾವುಕತೆ ಅಧಿಕ. ಒಟ್ಟಾರೆ ತಾತ್ವಿಕ ತಳಹದಿಯೇ ದುರ್ಬಲವಾದದ್ದು.

ಪ್ರಗತಿಶೀಲ ಚಳವಳಿಗೂ ಪೂರ್ವದಲ್ಲಿಯ ಇಂಥ ಪ್ರಗತಿಶೀಲ ಸಾಹಿತ್ಯ ಸೃಷ್ಟಿಗೆ 'ಜಯಕರ್ನಾಟಕ'ದಲ್ಲಿಯ ಬೆಳಗಾವಿ ರಾಮಚಂದ್ರರಾಯರ ಲೇಖನ ಸ್ಫೂರ್ತಿ ನೀಡಿರಬಹುದು.

'ಜಯಂತಿ'ಯಲ್ಲಿ ಪ್ರಗತಿಶೀಲ ಸಾಹಿತ್ಯದ ವಿಡಂಬನೆ ಬಂದಿದ್ದರೂ ಬೆಟಗೇರಿ ಕೃಷ್ಣ ಶರ್ಮರು ಪ್ರಗತಿಶೀಲ ಚಿಂತನೆಯಿಂದ ದೂರಾದವರು ಆಗಿರಲಿಲ್ಲ.

"ಕತ್ತಲೆ ಮುಸುಕಿದ ಜೀವನದಲ್ಲಿ ಆಶೆಗಳ ದೀಪಮಾಲೆಯನ್ನು ಹಚ್ಚಿ ಅವುಗಳ ಬೆಳಕನ್ನು ಅನುಭವಿಸಬೇಕೆನ್ನುವ, ಬದುಕಬೇಕೆಂಬ ಬಯಕೆ ಹೆಚ್ಚಿಸಬಹುದಾದ ದೀಪಾವಳಿ ಇಂದು ಎಲ್ಲಿದೆ? ಸುಜಲಾ.. ಸುಫಲಾ. .. ಆದ ಭಾರತ ಮಾತೆಯ ಮಕ್ಕಳಿಂದು ಕೂಳಿಲ್ಲದೆ ಸಾವಿರ ಸಂಖ್ಯೆಯಲ್ಲಿ ಸಾಯುತ್ತಿದ್ದಾರೆ.. .. ಹಸಿವೆಯ ವ್ಯಸನದಿಂದ ಹಾಸಿಗೆ ಹಿಡಿದಿರುವ ಮಕ್ಕಳು ಹಾರಾಡುವ ಆಕಾಶದೀಪದಲ್ಲಿ ಯಾವ ಸೊಗಸನ್ನು ಕಂಡಾರು?"[೭೨] ಎನ್ನುವ ಶರ್ಮ ಯಾವ ಪ್ರಗತಿಶೀಲ ಸಾಹಿತಿಯ ಚಿಂತನೆಗಿಂತ ಕಡಿಮೆಯಾಗಿ ಚಿಂತಿಸಿದವರಲ್ಲ. ನವ್ಯ ಸಾಹಿತ್ಯದ ಹಿಂದಿನ ಹಳಹಳಿಕೆಯೂ ಅವರಲ್ಲಿ ಕಂಡು ಬಂದಿದೆ.

"ಭಾರತಕ್ಕೆ ಸ್ವಾತಂತ್ರ್ಯ ಬಂದಿದೆ ನಿಜ. ಆದರೆ ಸ್ವಾತಂತ್ರ್ಯಸಿದ್ಧಿಯ ಮುಖ್ಯೋದ್ದೇಶವಾದ ಸಮೃದ್ಧಿ ಜೀವನ ನಮ್ಮಲ್ಲಿ ಬಂದಿದೆಯೇ? ನಾವು ನಡೆಯುತ್ತಿರುವ ದಾರಿ ಪ್ರಗತಿದಾಯಕವಾಗಿ ಕಾಣುತ್ತಿದೆಯೆ?"[೭೩] ಎಂಬಲ್ಲಿ ಸ್ವಾತಂತ್ರ್ಯಾನಂತರದ ನಿರಾಶೆ ಕಂಡುಬಂದಿದೆ. ಜೊತೆಯಲ್ಲಿ ಯಾವುದೇ ರಾಜಕೀಯ ಅಥವಾ ಸಾಮಾಜಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಮನುಷ್ಯನ ಜೀವನ ಸಮೃದ್ಧತೆಯ ಕಲ್ಪನೆ, ಉದ್ದೇಶ ಇರಬೇಕೆನ್ನುವ ಆದರ್ಶವನ್ನೂ ನಿರೂಪಿಸುತ್ತಾರೆ.

ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ವಾದಗಳು ಸಾಹಿತ್ಯದಲ್ಲಿ ಸಾಮಾಜಿಕ ರಾಜಕೀಯ

೭೨.ಜಯಂತಿ ; ನವೆಂಬರ್ ೧೯೪೩; ಸಂಪಾದಕೀಯ
೭೩.ಜಯಂತಿ : ಸೆಪ್ಟೆಂಬರ್ ೧೯೫೦: ಸಂಪಾದಕೀಯ

ಪ್ರಜ್ಞೆಯ ಅಭಿವ್ಯಕ್ತಿಯ ಬಗೆಗೆ ಪ್ರತಿರೋಧವನ್ನು ಒಡ್ಡುತ್ತಲೇ ಬಂದಿವೆ. ಕಾವ್ಯವೆಂದರೆ ಎಲ್ಲ ಗೊಂದಲ-ಗದ್ದಲದ ನಡುವೆಯೂ ಏಕಾಂತವನ್ನು ಹುಡುಕಿಕೊಂಡು ಹೋಗುವ ವಿಶೇಷ ವಸ್ತು, ಏನೆಲ್ಲ ಸಾಮಾಜಿಕ ಏರುಪೇರುಗಳ ನಡುವೆಯೂ ವ್ಯಕ್ತಿಯ ಅಂತರಂಗದ ಸೂಕ್ಷ್ಮ ವ್ಯಾಪಾರ- ಎನ್ನುವ ಭಾವನೆಯನ್ನು ಈ ವಾದಗಳು ನೀರೆರೆದು ಬೆಳೆಸಿವೆ. ಸಾಮಾಜಿಕ ಗೊಂದಲಗಳೇ ಬೇರೆ, ಕವಿಯ ಅಂತರಂಗವೇ ಬೇರೆ ಎಂಬ ಕಲ್ಪನೆ ಈ ವಾದಗಳ ಹಿಂದಿವೆ. ಸಾಮಾಜಿಕ ಸಮಸ್ಯೆಯನ್ನು ಸಾಹಿತ್ಯ ಕೃತಿ ಪ್ರತಿಪಾದಿಸಿದರೆ ಅದು ಸಾಹಿತ್ಯವಾಗಿಯೂ ಯಶಸ್ವಿಯಾಗುವುದಿಲ್ಲ, ಸಮಾಜ ವಿಮರ್ಶೆಯಾಗಿಯೂ ಪರಿಣಾಮ ಬೀರುವುದಿಲ್ಲ ಎಂಬ ತರ್ಕ ಇಲ್ಲಿಯದು.

ಸಾಹಿತ್ಯದ ಸಾಮಾಜಿಕ ಬದ್ಧತೆಯನ್ನು ಒತ್ತಿ ಹೇಳುವುದು ಎಡಪಂಥೀಯ ಧೋರಣೆಯಾಗಿದೆ. ಇದನ್ನು ನಾವು ಪ್ರಗತಿಶೀಲ ಸಾಹಿತ್ಯದಲ್ಲಿ ಗುರುತಿಸಬಹುದು. ಸಾಮಾಜಿಕ ಸಮಸ್ಯೆಯನ್ನು ಕೈಗೆತ್ತಿಕೊಂಡು ಬರೆದ ಬಹುತೇಕ ಸಾಹಿತ್ಯ ಕೇವಲ ಪ್ರಚಾರದ ಸರಕಾಗಿ ಬಿಡುವ ಅಪಾಯ ಇಲ್ಲದೆ ಇಲ್ಲ. ಅದನ್ನೇ ಶ್ರೇಷ್ಠ ಸಾಹಿತ್ಯ ಎಂದು ಭ್ರಮಿಸುವ ಅಪಾಯವೂ ಇದೆ. ಅನಕೃ ಮೊದಲಾದವರ ಕೃತಿಯಲ್ಲಿ ಈ ಅಪಾಯವನ್ನು ಗುರುತಿಸಬಹುದು. ನಿರಂಜನ, ಕಟ್ಟಿಮನಿ ಒಂದು ಕಡೆ ಅನಕೃ ನೇತೃತ್ವದ ಗುಂಪು ಇನ್ನೊಂದು ಕಡೆ ಆಗುವುದಕ್ಕೆ ಇದೇ ಕಾರಣ. ಪ್ರಗತಿಶೀಲರ ಕಾಲದಲ್ಲಿ ಸಾಹಿತ್ಯದಲ್ಲಿ ಎಡಪಂಥೀಯ ಧೋರಣೆಗಳಿಗೆ ಪ್ರಾಮುಖ್ಯ ಸಿಗತೊಡಗಿದವು. ಸಾಹಿತ್ಯ ಸಾಮಾಜಿಕ, ರಾಜಕೀಯ ಬದ್ಧತೆಯನ್ನು ಹೊಂದಿರಬೇಕೆಂಬ ಮಾತು ಕೇಳಿ ಬಂತು. ಸಾಹಿತ್ಯ ಸಾಮಾಜಿಕ ಬದಲಾವಣೆಯ ವಾಹಕವಾಗಬೇಕು, ಶೋಷಿತರ ಪರವಾಗಿ ನಿಲ್ಲಬೇಕು, ಕ್ರಾಂತಿಯ ಹರಿಕಾರನಾಗಬೇಕು, ಸ್ಪಷ್ಟವಾಗಿ ಪ್ರಗತಿಯ ಪಕ್ಷಪಾತಿಯಾಗಬೇಕು ಎಂಬ ಕೂಗೆದ್ದಿತು. ಸಾಹಿತ್ಯ ಸಮಕಾಲೀನ ರಾಜಕೀಯವನ್ನು ಧಾರಣ ಮಾಡುವುದು ಹೇಗೆ? ಸಾಹಿತ್ಯ ಕೃತಿಯೊಂದರಲ್ಲಿ ಇದು ಹೇಗೆ ಆಕಾರ ಪಡೆಯುತ್ತದೆ? ಈ ರಾಜಕೀಯವೆನ್ನುವುದು ಕೃತಿಯೊಳಗೆ ಚಿತ್ರಿತವಾದ ರಾಜಕೀಯ ಘಟನೆ, ರಾಜಕೀಯ ವ್ಯಕ್ತಿಗಳ ಪ್ರಶ್ನೆಯಷ್ಟೇ ಅಲ್ಲ; ಲೇಖಕನ ನಿಜ ಜೀವನದ ರಾಜಕೀಯ ಬದ್ಧತೆಯೂ ಅಲ್ಲ; ಅಥವಾ ಕೃತಿಯೊಳಗಿನ ಘೋಷಣೆ ರೂಪದ ವಾಕ್ಯಗಳೂ ಅಲ್ಲ. ಕೃತಿಯ ವಸ್ತು ರಾಜಕೀಯ ಸಂಗತಿ ಆಗಿದ್ದ ಮಾತ್ರಕ್ಕೇ ಕೃತಿಗೆ ರಾಜಕೀಯ ಆಯಾಮ ದೊರೆಯಲಾರದು. ನಮ್ಮ ಮನೆ, ಕುಟುಂಬ, ಪ್ರೀತಿ, ಅಭಿವ್ಯಕ್ತಿ ಸ್ವಾತಂತ್ರ್ಯ, ನಮ್ಮ ಜೀವಿಸುವ ಹಕ್ಕು, ನಮ್ಮ ಉದ್ಯೋಗ, ನಮ್ಮ ಆಸೆ, ಕನಸು, ಭಯಗಳೂ ಸಾಮಾಜಿಕ ಆಯಾಮವನ್ನು ಹೊಂದಿವೆ. ಈ ಕಾರಣಕ್ಕಾಗಿಯೇ ಅವು ರಾಜಕೀಯ ಶಕ್ತಿಯಾಗಿಯೂ ರೂಪುಪಡೆಯುತ್ತವೆ. ಈ ಸೂಕ್ಷ್ಮಗಳನ್ನು ಸಾಹಿತಿಗಳು ಅರಿಯಬೇಕು. ಈ ಅರಿವಿನೊಂದಿಗೆ ಬರೆದಾಗ ರಾಜಕೀಯ ಅರ್ಥವಂತಿಕೆಯನ್ನು ಪಡೆಯುವುದು ಸಾಧ್ಯವಾಗುತ್ತದೆ.

ಪ್ರಗತಿಶೀಲ ಸಾಹಿತ್ಯ ಕನ್ನಡದಲ್ಲಿ ಹುಟ್ಟಿಕೊಳ್ಳುವ ಹೊತ್ತಿಗೆ ದೇಶಕ್ಕೆ ಸ್ವಾತಂತ್ರ್ಯ

ದೊರೆಯುವ ಸೂಚನೆಗಳು ಸ್ಪಷ್ಟವಾಗಿದ್ದವು. ಹೀಗಾಗಿ ಸ್ವಾತಂತ್ರ್ಯದ ಬಗೆಗಿನ ತುಡಿತದ ಜೊತೆಗೆ ಅಸಮಾನತೆಯನ್ನು ತೊಡೆದು ಹಾಕುವ, ವ್ಯವಸ್ಥೆಯನ್ನು ಬದಲಿಸುವ, ವರ್ಗರಹಿತ ಸಮಾಜವನ್ನು ನಿರ್ಮಿಸ ಬೇಕೆಂಬ ಆಶಯಗಳು ಪ್ರಾಮುಖ್ಯತೆ ಪಡೆಯುತ್ತವೆ.

ನವೋದಯ ಸಾಹಿತ್ಯ ಆರಂಭವಾದಾಗ ಲೇಖಕರು ದೇಶದ ಇತಿಹಾಸ, ಸಂಸ್ಕೃತಿಗಳ ಬಗೆಗೆ ಹೊಸ ಅಭಿಮಾನವನ್ನು ಪ್ರಕಟಿಸಿದರು. ಉದಾರತೆ, ಮಾನವತಾವಾದ ಲೇಖಕರ ಮುಖ್ಯ ಜೀವನದೃಷ್ಟಿಯಾಗಿತ್ತು. ಮನುಷ್ಯ ಚೇತನ ಮೂಲಭೂತವಾಗಿ ಉದಾತ್ತವಾದದ್ದು ಎಂಬ ರಮ್ಯ ಕಲ್ಪನೆ ಸಾಮಾನ್ಯರ ಬದುಕಿನತ್ತ ಗಮನ ಸೆಳೆಯುವಂತೆ ಮಾಡಿತು. ಸಮಾಜದ ಕೆಳವರ್ಗದ ಜನರ ಸುಖಸಂತೋಷಗಳು ಚಿತ್ರಿತವಾಗಿರುವ ಕೃತಿಗಳಲ್ಲಿ ಮನುಷ್ಯನ ಆಂತರಿಕ ಘನವಂತಿಕೆ, ಸಹನಶಕ್ತಿ, ವೀರಗಳು ಸಾಮಾನ್ಯರ ಬದುಕಿನಲ್ಲೂ ಇರಲು ಸಾಧ್ಯವೆಂಬುದನ್ನು ತೋರಿಸಲಾಗಿದೆ. ಆದರೆ ಪ್ರಗತಿಶೀಲ ಲೇಖಕರು ಸುಧಾರಣಾವಾದಿ ಮನೋಭಾವದವರಾಗಿದ್ದರು. ಭಾರತೀಯ ಸಮಾಜದ ಎಷ್ಟೋ ಮೌಲ್ಯಗಳು ಇಂದಿನ ಬದುಕಿಗೆ ಸಂಗತವಾಗಿಲ್ಲವೆಂಬುದನ್ನು ಅರ್ಥಮಾಡಿಕೊಂಡರು. ಹಳೆಯ ಮೌಲ್ಯಗಳ ಬಗೆಗೆ ಅವರು ಸಂದೇಹ ವ್ಯಕ್ತಪಡಿಸಿದರು. ಮಾಸ್ತಿಯಂಥವರ ಬಗೆಗೇ ಪ್ರಗತಿಶೀಲ ಲೇಖಕರಿಗೆ ಅಸಮಾಧಾನವಿತ್ತು. ಮಾಸ್ತಿಯಂಥವರು ನಮ್ಮ ಸಂಸ್ಕೃತಿಯ ವಿಸಂಗತಿಗಳನ್ನು ಗುರುತಿಸುತ್ತಾರಾದರೂ ಈ ವಿಸಂಗತಿಗಳ ನಡುವೆಯೂ ತಮ್ಮ ವೈಯಕ್ತಿಕ ಘನವಂತಿಕೆಯಿಂದ ಪಾರಾಗಿ ಬರುವಂಥ ಪಾತ್ರಗಳನ್ನು ವೈಭವೀಕರಿಸಿದ್ದಾರೆ. ಇಂಥ ವಿಸಂಗತಿಗಳಿಂದಾಗಿ ಅನ್ಯಾಯವಾಗಿ ದುಃಖಕ್ಕೀಡಾಗುವ ಪಾತ್ರಗಳ ಬಗೆಗೆ ಅವರಿಗೆ ಎಷ್ಟೇ ಸಹಾನುಭೂತಿ ಇದ್ದರೂ ಸಮಸ್ಯೆಗಳ ಮೂಲಗಳನ್ನೇ ಅರಸಿಕೊಂಡು ಹೋಗಿ ಅವುಗಳನ್ನು ಪ್ರಶ್ನಿಸುವುದಿಲ್ಲ. ಇಂದಿನ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾಗಬೇಕೆಂದು ಆಗ್ರಹಿಸುವುದಿಲ್ಲ. ಒಟ್ಟಾರೆಯಾಗಿ ಅದು ಕ್ರಾಂತಿಕಾರಿ ದೃಷ್ಟಿಯಲ್ಲ. 'ಜೀವನ' ಮಾಸಿಕದಲ್ಲಿ ಸಣ್ಣಕತೆಯ ವಸ್ತುವಿನ ಆಯ್ಕೆಯ ಬಗ್ಗೆ ಬರೆಯುವ ನಿರಂಜನರು, ರಾಷ್ಟ್ರೀಯ ಚಳವಳಿಗೆ ಮೇಲಿಂದ ಮೇಲೆ ಆಗುತ್ತಿದ್ದ ಸೋಲಿನಿಂದ ಸೂಕ್ಷ್ಮಜೀವಿಯಾದ ಕಥೆಗಾರನ ಮೇಲೆ ಆಘಾತ ಉಂಟಾಯಿತು. ಈ ಸಂದರ್ಭದಲ್ಲಿ ಸಣ್ಣ ಕತೆ ಇನ್ನಷ್ಟು ವಿವಿಧತೆಯಿಂದ ಜನಜೀವನಕ್ಕೆ ಸಮೀಪ ಹೋಗಬೇಕಿತ್ತು. ಆದರೆ ಹಾಗೆ ಆಗಲಿಲ್ಲ. ಹೊಸ ಸಮಸ್ಯೆಗಳನ್ನು ಎದುರಿಸಲು ಇಚ್ಛಿಸದ ಹಲವರು ಸಣ್ಣ ಕತೆಗಳನ್ನು ಬರೆಯುವುದನ್ನೇ ಬಿಟ್ಟರು ಎನ್ನುವ ಮಾತನ್ನು ಹೇಳುತ್ತಾರೆ. ಕಟ್ಟಿಮನಿಯವರ 'ಕಾರವಾನ್', ಚದುರಂಗರ 'ಶವದ ಮನೆ' ತ.ರಾ.ಸು.ರವರ 'ದ್ರೋಹಿ', ಪಾಟೀಲ ಪುಟ್ಟಪ್ಪನವರ 'ಸಾವಿನ ಮೇಜವಾನಿ', ಅರ್ಚಿಕ ವೆಂಕಟೇಶರ 'ಜೀವನ ಸಂಗ್ರಾಮ' ಇಲ್ಲೆಲ್ಲ ಈ ಸಮಸ್ಯೆಯನ್ನು ಎದುರಿಸಿದ್ದನ್ನು ಕಾಣಬಹುದು. ಇವು ಕಟ್ಟಿಮನಿ ಸಂಪಾದಕರಾಗಿದ್ದ 'ಉಷಾ' ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಎಂಬುದು ಗಮನಾರ್ಹ.

ಮುಖ್ಯವಾಗಿ ಸಾಮಾಜಿಕ ವಿಷಮತೆ, ಶೋಷಣೆಗಳ ವಿರುದ್ಧದ ಸಮರದಲ್ಲಿ

ಲೇಖಕರು ಮುಂಚೂಣಿಯಲ್ಲಿ ಇರಬೇಕು ಎಂಬುದು ಪ್ರಗತಿಶೀಲರ ವಾದವಾಗಿತ್ತು. ಸಮಾಜದ ಸದ್ಯದ ವ್ಯವಸ್ಥೆಯ ಬಗೆಗೆ ತೀವ್ರವಾಗಿ ಅಸಮಾಧಾನಗೊಂಡ ಅವರು ಪರಂಪರಾಗತ ಮೌಲ್ಯಗಳನ್ನು ಪ್ರಶ್ನಿಸಿದರು. ಅವರ ದೃಷ್ಟಿಯಲ್ಲಿ ನವೋದಯ ಸಾಹಿತ್ಯವೆಂದರೆ ನಗರದ ಸುಶಿಕ್ಷಿತ ಮಧ್ಯಮವರ್ಗದ ಹಗಲುಗನಸಿನ ಕಲಾತ್ಮಕ ಅಭಿವ್ಯಕ್ತಿ. ಬದುಕಿನ ವಾಸ್ತವತೆಯ ಸ್ಪರ್ಶ ಅದಕ್ಕಿಲ್ಲ. ನಮ್ಮ ಸಂಸ್ಕೃತಿಯ ಹಿಂದಿರುವ ಮೋಸವನ್ನು ಬಯಲಿಗೆಳೆಯಬೇಕು, ಲೇಖಕ ಸಾಮಾಜಿಕ ಜವಾಬ್ದಾರಿಯ ಉತ್ತರದಾಯಿತ್ವ ಹೊಂದಿರಬೇಕು ಎಂಬುದು ಪ್ರಗತಿಶೀಲರ ಧೋರಣೆ. ೧೯೫೩ರಲ್ಲಿ 'ಸಾಹಿತಿ ಮತ್ತು ಸಮಾಜ' ಎಂಬ ಲೇಖನವನ್ನು 'ಜಯಭೇರಿ'ಯಲ್ಲಿ ಪ್ರಕಟಿಸಿದ ನಿರಂಜನರು ಲೇಖಕನಿಗೆ ಸಾಮಾಜಿಕ ಜವಾಬ್ದಾರಿ ಇದೆ ಎಂಬ ಮಾತನ್ನು ಹೇಳಿದ್ದಾರೆ. ಯಾವುದೋ ಭಾವನೆ ವಿಚಾರ, ಬರೆಹಗಾರನ ಹೃದಯದಲ್ಲೋ ಮೆದುಳಲ್ಲೋ ಇರುವಷ್ಟು ಕಾಲ, ಅವುಗಳಿಂದ ಬಾಧಿತನಾಗುವವನು ಅವನೊಬ್ಬನೇ. ಆದರೆ ಆತ ಬರೆದ ಕೃತಿ ಓದುಗರ ಕೈಗೆ ಬಿದ್ದಮೇಲೆ, ಓದುವವರೆಲ್ಲ ಆ ಕೃತಿಯಿಂದ ಬಾಧಿತರಾಗುತ್ತಾರೆ. ಆಗ ಕರ್ತೃ ಓದುಗರಿಗೆ ಜವಾಬ್ದಾರನಾಗುತ್ತಾನೆ ಎಂಬ ಮಹತ್ವದ ಮಾತುಗಳು ಅಲ್ಲಿವೆ.[೭೪]

ಸಾಹಿತ್ಯ ಕೂಡ ಚಳವಳಿಯಾಗಬಹುದು ಎಂಬ ಮಾತು ಕೇಳಿ ಬಂದದ್ದು ಬಹುಶಃ ಪ್ರಗತಿಶೀಲರ ಕಾಲದಲ್ಲಿ. ತಮ್ಮ ಸಾಹಿತ್ಯ ಆಂದೋಲನವನ್ನು ಅವರು ಪ್ರಗತಿಶೀಲ ಚಳವಳಿ ಎಂದು ಕರೆದುಕೊಂಡರು. ಅವರಿಗೂ ಪೂರ್ವದಲ್ಲಿ ಸಾಹಿತ್ಯವನ್ನು ಚಳವಳಿ ಎಂದು ಕರೆದಿರಲಿಲ್ಲ. ಸಂಘರ್ಷ ಪ್ರತಿರೋಧ ಇದ್ದಾಗ ಚಳವಳಿ ಅನಿವಾರ್ಯವಾಗುತ್ತದೆ. ಪ್ರಗತಿಶೀಲರಿಗೆ ನವೋದಯದವರೊಂದಿಗೆ ಅಂದರೆ ರೋಮ್ಯಾಂಟಿಕ್ ಪಂಥದವರೊಂದಿಗೆ ಸಂಘರ್ಷವಿತ್ತು. ಅದನ್ನು ಅವರು ವಿರೋಧಿಸಬೇಕಾಗಿತ್ತು. ಆ ವಿರೋಧ ಕಾರಣವಾಗಿಯೇ ಅವರು ತಮ್ಮ ಸಾಹಿತ್ಯ ಮಾರ್ಗವನ್ನು ಪ್ರಗತಿಶೀಲ ಚಳವಳಿ ಎಂದು ಕರೆದುಕೊಂಡರು. ಈ ಚಳವಳಿ ಎಂಬ ಶಬ್ದದ ಬಳಕೆಗೆ ಸ್ವಾತಂತ್ರ್ಯ ಸಂಗ್ರಾಮ ಕಾಲದ ಚಳವಳಿಗಳು ಪ್ರೇರಣೆ ನೀಡಿರಬಹುದು. ಚಳವಳಿಗಳಿಗೆ ಎರಡು ಮಗ್ಗಲುಗಳು ಇರುತ್ತವೆ; ಒಂದು ಇರುವ ವ್ಯವಸ್ಥೆಯನ್ನು ವಿರೋಧಿಸುವುದು, ಇನ್ನೊಂದು ಒಪ್ಪಿಕೊಂಡ ಆದರ್ಶವನ್ನು ಪ್ರತಿಪಾದಿಸಿ, ಸಮಾಜದಲ್ಲಿ ಪ್ರತಿಷ್ಠಾಪಿಸುವುದು. ಚಳವಳಿ ಯಾವ ಮಗ್ಗುಲಿನಿಂದ ಆರಂಭವಾದರೂ ಅದರ ಗುರಿ ಮಾತ್ರ ತನ್ನ ಆದರ್ಶಗಳ ಪ್ರತಿಪಾದನೆ ಹಾಗೂ ಪ್ರತಿಷ್ಠಾಪನೆಯೇ ಆಗಿರುತ್ತದೆ. ಚಳವಳಿ ಸಾಹಿತ್ಯಕ್ಕೆ ಸಂಬಂಧಿಸಿದಾಗ ಅದು ಆಲೋಚನೆ, ಭಾವನೆ ಮತ್ತು ಅಭಿವ್ಯಕ್ತಿ ಮಟ್ಟದ ಚಳವಳಿಗಳಾಗುತ್ತವೆ. ಭಾಷೆ ಇವುಗಳ ಸಾಧನವಾಗುತ್ತದೆ.

ಪ್ರಗತಿಶೀಲರು ಅರ್ಥ ಕಳೆದುಕೊಂಡ ಸಾಂಪ್ರದಾಯಿಕ ಮೌಲ್ಯಗಳ ಬಗೆಗೆ ತಮ್ಮ

೭೪.ನಿರಂಜನ: ಬುದ್ಧಿ ಭಾವ ಬದುಕು- ಪುಟ ೩೯-೪೦

ಅಸಮಾಧಾನವನ್ನು ಪ್ರಕಟಿಸಿದ್ದು ನಿಜ. ಆದರೆ ಸಮಸ್ಯೆಗಳ ಸೂಕ್ಷ್ಮಗಳನ್ನು ಗ್ರಹಿಸಿ ಅವುಗಳನ್ನು ಎಲ್ಲ ಮುಖಗಳಿಂದಲೂ ಪರೀಕ್ಷಿಸಿ ನೋಡಬಲ್ಲ ವಸ್ತುನಿಷ್ಠತೆ ಅವರಿಗಿರಲಿಲ್ಲ. ಎಷ್ಟೋ ಹೊಸ ಹೊಸ ಸಮಸ್ಯೆಗಳು ಪ್ರಗತಿಶೀಲರಲ್ಲಿ ಮೈದಾಳುತ್ತವೆ. ಆದರೆ ಅವುಗಳ ಆಳವಾದ ಚಿತ್ರಣ ಅಲ್ಲಿ ದೊರೆಯುವುದಿಲ್ಲ. ತಾವು ಸಾಧನವಾಗಿ ಮಾಡಿಕೊಂಡ ಹೊಸ ಸಾಮಾಜಿಕ ಕಳಕಳಿಯನ್ನು ಅಭಿವ್ಯಕ್ತಿಸಬಲ್ಲ ಸೂಕ್ಷ್ಮ ತಂತ್ರಗಳನ್ನು ಅವರು ರೂಪಿಸಿಕೊಳ್ಳಲಿಲ್ಲ. ನಾಟಕೀಯತೆ ಎದ್ದು ಕಾಣುವಹಾಗೆ ಮೂಡಿದವು. ಭಾಷಣದ ಆವೇಶವೂ ಅದಕ್ಕೆ ಸೇರಿಕೊಂಡಿತು. ಇದರಿಂದಾಗಿ ಬರೆವಣಿಗೆಗೆ ದಕ್ಕಬೇಕಾದ ಕಾವ್ಯದ ಸೂಕ್ಷ್ಮತೆ ಅವರಿಗೆ ದಕ್ಕದೆ ಹೋಯಿತು. ಪ್ರಗತಿಶೀಲರು ತಮ್ಮ ಗಮನವನ್ನು ಕೇಂದ್ರೀಕರಿಸಿದ್ದು ಆರ್ಥಿಕ ಅಂಶದ ಮೇಲೆ. ಹಿಂದಿಯಲ್ಲಿ ಯಶಪಾಲ ಅವರ 'ಮನುಷ್ಯನ ರೂಪ' ಕಾದಂಬರಿಯಲ್ಲಿ ಕಾದಂಬರಿಯ ನಾಯಕಿ ಹಳ್ಳಿಯ ಅಪ್ರಬುದ್ಧೆ ಸಿನಿಮಾ ನಟಿಯಾಗಿ ಬೆಳೆಯುತ್ತಾಳೆ. ನಟಿಯಾಗಿ ಹೆಸರು ಮಾಡಿದ ಮೇಲೆ ಗಂಡ ಎದುರಿಗೆ ಬಂದು ನಿಂತಾಗ ಅವನನ್ನು ಗುರುತಿಸಲು ನಿರಾಕರಿಸುತ್ತಾಳೆ. ಆರ್ಥಿಕವಾಗಿ ಆಗಿರುವ ಅಸಮಾನತೆಯೇ ಇದಕ್ಕೆ ಕಾರಣ. ಹೀಗೆ ಪ್ರಗತಿಶೀಲರು ಮನುಷ್ಯನ ಹಸಿವಿನ ಬಗೆಗೆ ಬರೆದರು. ಹಸಿವೆಗಾಗಿ ತಮ್ಮ ದುಡಿಮೆ ಮತ್ತು ಆತ್ಮಗೌರವವನ್ನು ಮಾರಿಕೊಳ್ಳುವ ಗಂಡಸರು, ತಮ್ಮ ದೇಹವನ್ನು ಮಾರಿಕೊಳ್ಳುವ ಹೆಂಗಸರ ಬಗೆಗೆ ಬರೆದರು. ಈ ಎರಡನೆಯ ಬಗೆ ಅನಕೃ ಅವರ ಕೆಲವು ಕೃತಿಗಳಲ್ಲಿ ಕಾಮಕೇಳಿಯ ವರ್ಣನೆಗಾಗಿ ಬಂದವು ಎಂಬ ಟೀಕೆಗಳು ಬಂದವು. ನಿರಂಜನರು ಪತ್ರಿಕೆಗಳ ಮೂಲಕ ಅನಕೃ ಅವರ ಇಂಥ ಕಾದಂಬರಿಗಳನ್ನು ಖಂಡಿಸಿದ್ದಾರೆ.

ಅನಕೃ ಅವರಿಗಿಂತ ಭಿನ್ನವಾಗಿ ಬರೆದ ಕೆಲವರ ಕಥೆಗಳನ್ನು ಇಲ್ಲಿ ನೋಡಬೇಕು. ಕೋ. ಚೆನ್ನಬಸಪ್ಪ ಇವರ 'ದಾಸರಯ್ಯನ ಪಟ್ಟೆ' ಶೋಷಕರನ್ನು ದುಷ್ಟರನ್ನಾಗಿ, ಶೋಷಿತರನ್ನು ಒಳ್ಳೆಯವರನ್ನಾಗಿ ತೋರಿಸುವ ಕಪ್ಪು ಬಿಳುಪು ಮಾದರಿಯನ್ನು ಅನುಸರಿಸುತ್ತದೆ. ಇದು ಒಮ್ಮೊಮ್ಮೆ ಶೋಷಕರನ್ನು ಅತಿ ದುಷ್ಟರನ್ನಾಗಿಸುವ ನಾಟಕೀಯತೆಯಲ್ಲಿ ಮುಕ್ತಾಯವಾಗುವ ಅಪಾಯವಿದೆ. ಇದರಿಂದ ಕೃತಕತೆ ತಲೆಹಾಕಿ ಪರಿಣಾಮ ಊನವಾಗುತ್ತದೆ. ಇವರದೇ 'ಮುಕ್ಕಣ್ಣನ ಮುಕ್ತಿ'ಯಲ್ಲೂ ಇದೇ ರೀತಿ ಆಗುತ್ತದೆ. ಕೋ.ಚೆ. ಅವರಿಗೆ ಶೋಷಿತರ, ಹಳ್ಳಿಯ ಒಕ್ಕಲಿಗರ ಪರಿಚಯ ಚೆನ್ನಾಗಿದೆ. ಅವರ ಆಶೆ, ಭೂಮಿಯ ಹಂಬಲ, ದುಡಿಮೆ, ದನ-ಕರುಗಳ ಮೇಲಿನ ಪ್ರೀತಿ ಇತ್ಯಾದಿ ವಿವರಗಳನ್ನು ಸರಿಯಾಗಿ ಹಿಡಿದಿಡಬಲ್ಲರು. 'ದಾಸರಯ್ಯನ ಪಟ್ಟೆ'ಯಲ್ಲಿಯಂತೆ ಗೇಣಿದಾರರ ಸಮಸ್ಯೆಗಳನ್ನೂ ಅವರು ಬಲ್ಲರು. ಆದರೂ ಈ ವಿವರಗಳೆಲ್ಲ ಬರೀ ವಿವರಗಳಾಗಿಯೇ ನಮಗೆ ದೊರೆಯುತ್ತವೆಯೇ ಹೊರತು ತಾತ್ವಿಕ ತುಡಿತದ ಅಭಾವ ತಟ್ಟನೆ ಗೋಚರಿಸುತ್ತದೆ.

ಪ್ರಗತಿಶೀಲರಲ್ಲಿಯ ಮತ್ತೊಬ್ಬ ಪ್ರಮುಖ ಕಥೆಗಾರ ಬಸವರಾಜ ಕಟ್ಟೀಮನಿ. ಅವರ 'ಗಿರಿಜಾ ಕಂಡ ಸಿನಿಮಾ', 'ಜೀವನ ಕಲೆ', 'ಬೂಟ್‌ಪಾಲಿಶ್', 'ಸೆರೆಯಿಂದ ಹೊರಗೆ' ಮೊದಲಾದ ಕಥೆಗಳಲ್ಲಿ ಪ್ರಗತಿಶೀಲತೆಯ ಮನೋಧರ್ಮ ಕಾಣುತ್ತದೆ. ವ್ಯವಸ್ಥೆಯ ಬಗೆಗಿನ

ಸಿಟ್ಟು ಕಟ್ಟೀಮನಿಯವರ ಬರೆಹಗಳಲ್ಲಿ ಸ್ಥಾಯಿಯಾಗಿದೆ. ಈ ಸಿಟ್ಟೇ ಅವರ ಕಥೆಗಳಲ್ಲಿಯ ಪಾತ್ರಗಳು ವ್ಯವಸ್ಥೆಯ ವಿರುದ್ಧ ಏನಾದರೂ ಮಾಡಲು ಬಂಡೇಳಲು ಕಾರಣವಾಗುತ್ತವೆ. ಆದರೆ ಈ ಎಲ್ಲ ಕಥೆಗಳಲ್ಲಿಯ ಘಟನೆಗಳು ವಾಸ್ತವ ಇದ್ದರೂ ಅವನ್ನೆಲ್ಲ ಬುದ್ಧಿಪೂರ್ವಕವಾಗಿ ಜೋಡಿಸಿದಂತೆ ತೋರುವುದು. 'ಗಿರಿಜಾ ಕಂಡ ಸಿನಿಮಾ'ದಲ್ಲಿ ಹರೆಯದ ಮುಗ್ಧ ಹುಡುಗಿಯೊಬ್ಬಳಿಗೆ ಅವಳ ಗಂಡ ಸುತ್ತಲಿನ ಬದುಕಿನ ದುಃಖ, ಬಡತನಗಳ ದಾರುಣ ಚಿತ್ರಗಳನ್ನು ತೋರಿಸುತ್ತ ಹೋಗಿ, ಇಂಥ ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಡುವುದು ಎಷ್ಟು ಅಗತ್ಯ ಎಂಬುದನ್ನು ಬಿಂಬಿಸುತ್ತಾನೆ. ಪರದೆಯ ಮೇಲೆ ಸಿನಿಮಾ ನೋಡಬೇಕಿದ್ದ ಆ ಯುವತಿ ನಿಜ ಜೀವನವನ್ನೇ ಸಿನಿಮಾದಂತೆ ನೋಡಿ ಮನಃಪರಿವರ್ತನೆ ಹೊಂದುತ್ತಾಳೆ.

ಕಟ್ಟೀಮನಿಯವರ ಕಥೆಯೊಂದನ್ನು ವಿಮರ್ಶಿಸುವ ಲಂಕೇಶ, ಮಾರ್ಕ್ಸ್ ಪ್ರಭಾವದಿಂದ ಬಡವರ ಬಗೆಗೆ ಹಾಗೂ ಅವರ ದುರಂತದ ಬಗೆಗೆ ಬರೆಯುವುದನ್ನು ಆರಂಭಿಸಿದ ನಮ್ಮ ಲೇಖಕರು ಮಾರ್ಕ್ಸ್‌ನ ಬುದ್ಧಿಶಕ್ತಿಯನ್ನು ಮತ್ತು ತರ್ಕಬದ್ಧತೆಯನ್ನು ಅರ್ಥಮಾಡಿಕೊಳ್ಳದೇ ಹೋದುದಕ್ಕಾಗಿ ಆಶ್ಚರ್ಯಪಡುವರು. ಇದಕ್ಕೆ ಕಾರಣ ಗುರುತಿಸುವ ಲಂಕೇಶ, "ಲೇಖಕರಿಗೆ ತಮ್ಮ ಮಾನವೀಯತೆಯ ಬಗ್ಗೆ ಗೊಂದಲವಿದೆ. ಇದು ತಾವು ಚಿತ್ರಿಸುವ ಬದುಕಿನ ಅರ್ಥಮರ್ಥ ತಿಳಿವಳಿಕೆಯಿಂದ ಬಂದದ್ದು" ಎಂದಿರುವರು. ಪ್ರಗತಿಶೀಲರಲ್ಲಿ ಅನೇಕರಿಗೆ ತಾವು ಬಡವರ ಬದುಕಿನ ಬಗೆಗೆ ಬರೆಯಬೇಕು ಎಂಬ ಬದ್ಧತೆ ಇದೆ. ಆದರೆ ಅದರ ಅನುಭವ ಇಲ್ಲ. ಈ ಸಂದರ್ಭದಲ್ಲಿ ನಾವು, ಸಮಕಾಲೀನತೆಯ ಬಗೆಗೆ ಬರೆದ ಗೋಕಾಕರು, ಅಡದೆ ಉಣಬಡಿಸುವ ಅಪಾಯದ ಬಗ್ಗೆ ಸೂಚಿಸಿದ್ದನ್ನು ನೆನಪಿಸಿಕೊಳ್ಳಬೇಕು. ಪ್ರಗತಿಶೀಲರು ತಾವು ಚಿತ್ರಿಸುವ ಸಮಸ್ಯೆಗಳೆಲ್ಲ ಒಂದು ಬೆಳವಣಿಗೆಯ ಫಲ ಎಂಬ ಸಮಗ್ರ ಚಿಂತನೆಯ ಅಭಾವವನ್ನು ಎದುರಿಸುತ್ತಿದ್ದರು. ಈ ಅಭಾವವು ಅವರ ಕೃತಿಗಳಲ್ಲಿ ತೋರುವುದು. ಪ್ರಗತಿಶೀಲರ ಹೆಚ್ಚಿನ ಕೃತಿಗಳಲ್ಲಿ ಪ್ರಗತಿಶೀಲ ಪ್ರಜ್ಞೆ ವರ್ತಮಾನಕ್ಕೆ ಪ್ರತಿಕ್ರಿಯಿಸುವುದರಲ್ಲೇ ಸೀಮಿತವಾಗುವುದು.

ಪ್ರಗತಿಶೀಲರಲ್ಲಿ ಹೆಚ್ಚು ತತ್ತ್ವನಿಷ್ಠರಾದ ನಿರಂಜನ (ಕುಳಕುಂದ ಶಿವರಾಯ)ರ 'ಕೊನೆಯ ಗಿರಾಕಿ' ಹೆಚ್ಚು ಯಶಸ್ವಿಯಾದ ಕಥೆ . ಪ್ರಗತಿಶೀಲರ ಕಥೆಗಳಲ್ಲಿ ವಾಸ್ತವ ಚಿತ್ರಣ ಇಡಿಕಿರಿದಿದ್ದರೆ ಈ ಕಥೆಯಲ್ಲಿ ಸಾಂಕೇತಿಕತೆ ಇದೆ. ಕಾಮುಕರ ಕೈಯಲ್ಲಿ ಸಿಕ್ಕು ಕ್ರೂರ ಶೋಷಣೆಗೊಳಗಾಗುವ ಈ ಕಥೆಯ ನಾಯಕಿ ಒಬ್ಬ ಮೂಕಿ. ನಮ್ಮ ಸುತ್ತಲಿನ ಸಮಾಜದ ಸಾವಿರಾರು ಜನ ಮೂಕ ಶೋಷಿತರ, ತುಳಿತಕ್ಕೊಳಗಾದರೂ ಹೇಳಿಕೊಳ್ಳಲು ಬಾಯಿಲ್ಲದವರ ಪ್ರತಿನಿಧಿಯಾಗುತ್ತಾಳೆ ಆಕೆ. ಹಸಿವೆ, ರೋಗಗಳಿಂದ ಅವಳು ಸತ್ತಾಗ ಅವಳ ದೇಹದ ಅಳಿದುಳಿದ ಮಾಂಸವನ್ನು ಕುಕ್ಕಿ ತಿನ್ನಲೆಂದು ಹದ್ದೊಂದು ಸುತ್ತತೊಡಗುತ್ತದೆ- ಅದೇ ಕೊನೆಯ ಗಿರಾಕಿ. ಸಾವಿನ ನಂತರವೂ ಮುಂದುವರಿಯುವ ಶೋಷಣೆಯ ಕರಾಳ ಚಿತ್ರ. ಶೋಷಕರೆಲ್ಲರ ಪ್ರತಿನಿಧಿಯಾಗಿ ಹದ್ದು ಕಾಣಿಸಿಕೊಳ್ಳುವುದು. ಸಂಕೇತಗಳ ಮೂಲಕ

ಅರ್ಥ ಪರಂಪರೆ ಹೊಮ್ಮಿಸುವ ಪ್ರಯತ್ನ ಇಲ್ಲಿಯದು. ಇದು ಕಥೆಯ ಧ್ವನಿಶಕ್ತಿಯನ್ನು ಹೆಚ್ಚಿಸಿದರೂ ಫಾರ್ಮುಲಾದ ಪ್ರಗತಿಶೀಲ ಕಥೆಗಳಂತೆ ಈ ಕಥೆಯೂ ಭಾವೋದ್ವೇಗದಿಂದ ಹೊರತಾಗಿಲ್ಲ. ಏಕಮುಖದಲ್ಲಿ ವಿವರಗಳೆಲ್ಲ ಜೋಡಣೆಯಾಗುವುದರಿಂದ ಪರಿಣಾಮ ಸರಳವಾಗಿಬಿಡುತ್ತದೆ.

ಪ್ರಗತಿಶೀಲ ಚಳವಳಿಯ ಆರಂಭದ ಕಾಲದಲ್ಲಿ 'ವಾಣಿ' ಮಾಸಿಕದಲ್ಲಿ 'ಹೊಸ ಸೃಷ್ಟಿಯ ಪ್ರಸವದ ಕಡೆಗೆ' ಎಂಬ ಲೇಖನ ಪ್ರಕಟಿಸುವ ನಿರಂಜನರು ಪ್ರಗತಿಶೀಲ ಸಾಹಿತ್ಯ ಭಾರತದಲ್ಲಿ ಯಾವ ರೀತಿ ಬೆಳೆದುಬಂತು ಎಂಬುದನ್ನು ವಿವರಿಸಿ, ಕರ್ನಾಟಕದಲ್ಲಿ ಪ್ರಗತಿಶೀಲ ಆಂದೋಲನಕ್ಕೆ ಬಾಲಪೀಡೆ ತಗುಲಿ ಶೈಶವದಲ್ಲೇ ತೀರಿಕೊಂಡಿತು ಎಂದು ಹೇಳಿದ್ದಾರೆ. ಪ್ರಗತಿಶೀಲರೆಂದು ಪರೇಡ್ ಮಾಡುವವರಂತೂ ತಮ್ಮ ಗುರುತರವಾದ ಹೊಣೆಗಾರಿಕೆಯನ್ನು ಪ್ರತಿ ಹೆಜ್ಜೆಗೂ ತಿಳಿದಿರುವುದು ಲೇಸು. ಪ್ರಗತಿಶೀಲರ ಆಂದೋಲನ ಸಂಕುಚಿತ ಮನೋವೃತ್ತಿಯ, ಇದನ್ನೇ ಬರೆಯಿರಿ- ಇದನ್ನೇ ಬಿಡಿರಿ ಎನ್ನುವ ಸರ್ವಾಧಿಕಾರಿ ಮನೋಭಾವನೆಯ, ವಿಧ್ವಂಸಕ ಚಳವಳಿಯಲ್ಲ. ಹಿರಿಯ ಪರಂಪರೆಯನ್ನು ಉಳಿಸಿಕೊಂಡು, ಹೊಸ ಹಾದಿಯಲ್ಲಿ, ಪುರೋಗಾಮಿಯಾಗಿ, ಸರ್ವವ್ಯಾಪಿಯಾಗಿ ರಚನಾತ್ಮಕವಾದ ರೀತಿಯಲ್ಲಿ ಅದು ಸಾಗಬೇಕು. ಗರ್ಭಸ್ರಾವಕ್ಕಲ್ಲ, ಹೊಸ ಸೃಷ್ಟಿಯ ಪ್ರಸವಕ್ಕೆ, ಆ ಕಾರ್ಯ ವಿಧಾನದ 'ಗತಿ'ಯನ್ನು ಶೀಘ್ರಗೊಳಿಸುವುದಕ್ಕೆ, ಪ್ರಗತಿಶೀಲರು ನೆರವಾಗಬೇಕು, ದುಡಿಯಬೇಕು ಎಂದು ನಿರಂಜನರು ಕರೆ ಕೊಟ್ಟಿದ್ದಾರೆ. ಚಳವಳಿಯ ಉದ್ದೇಶ ದಾರಿ ತಪ್ಪಿದಾಗ ಅದನ್ನು ಸರಿದಾರಿಯಲ್ಲಿ ತರುವ ಉದ್ದೇಶವನ್ನು ಇಲ್ಲಿ ಗುರುತಿಸಬಹುದು.

ಇಂಥ ಪ್ರಯತ್ನವನ್ನು ನಿರಂಜನರು ನಿರಂತರ ಮಾಡುತ್ತ ಬಂದರು. ೧೯೫೨ರಲ್ಲಿ ಅವರು 'ಪ್ರಜಾವಾಣಿ'ಯಲ್ಲಿ 'ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ?' ಎಂಬ ಲೇಖನವನ್ನು ಬರೆದರು. ಇದರಲ್ಲಿ ಅವರು ಹಿರಿಯೂರಿನಲ್ಲಿ ನಡೆದ ಪ್ರಗತಿಶೀಲ ಸಮಾವೇಶದ ವಿವರಗಳನ್ನು ನೀಡುತ್ತ ಸಾಹಿತ್ಯದಲ್ಲಿ ಕಾಮ ಪ್ರಚೋದನೆ ಕುರಿತು ಕೆಲವು ಮಾತುಗಳನ್ನು ಹೇಳುತ್ತಾರೆ. ಅ.ನ.ಕೃ. ಅವರ ನಟಸಾರ್ವಭೌಮ, ನಗ್ನಸತ್ಯ, ಶನಿಸಂತಾನ ಕಾದಂಬರಿಗಳ ಬಗ್ಗೆ ಬಂದ ಟೀಕೆಗಳ ಹಿನ್ನೆಲೆಯಲ್ಲಿ ಅದನ್ನು ಖಂಡಿಸುವುದಕ್ಕಾಗಿ ಈ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಎಂಬ ಅ.ನ.ಕೃ. ಕೃತಿಯನ್ನು ಈ ಸಮ್ಮೇಳನದಲ್ಲಿಯೇ ಬಿಡುಗಡೆಗೊಳಿಸಿದ್ದು. ಈ ಹಿನ್ನೆಲೆಯಲ್ಲಿ ನಿರಂಜನರ ಈ ಲೇಖನ ಮಹತ್ವದ್ದಾಗಿದೆ.

ಹಿರಿಯೂರು ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷ ದ.ಕೃ.ಭಾರದ್ವಾಜರು ಸಾಹಿತ್ಯದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಡಗಿದ್ದರೆ ಆತ್ಮವನ್ನು ಜಾಗೃತಗೊಳಿಸಿ ವಿಕಾಸಗೊಳಿಸುವುದೇ ಅದರ ಮುಖ್ಯ ಕೆಲಸ. ನಮ್ಮಲ್ಲಿರುವ ಆತ್ಮವನ್ನು ಜಾಗೃತಗೊಳಿಸುವುದೇ

ಅದರ ಗುರಿ.. ಸಾಹಿತ್ಯವು ಯಾವನನ್ನೂ ಧರ್ಮಾಂತರಗೊಳಿಸುವುದಿಲ್ಲ. ಅಥವಾ ಅದು ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವುದಿಲ್ಲ. ಅದು ನಮ್ಮ ಮನಸ್ಸನ್ನು ಬದಲಾಯಿಸುವುದು, ನಮ್ಮ ಹೃದಯವನ್ನು ಮಿಡಿದು ನಮ್ಮ ಆತ್ಮ ಶಾಂತಿ ಸುಖವನ್ನು ಅನುಭವಿಸುವಂತೆ ಮಾಡುವುದು.. ಎಂದೆಲ್ಲ ಹೇಳಿದ್ದರು. ಪ್ರಗತಿಶೀಲ ಆಶಯಗಳಿಗೆ ವಿರುದ್ಧವಾಗಿದ್ದ ಈ ಮಾತುಗಳನ್ನು ನಿರಂಜರು ಈ ಲೇಖನದಲ್ಲಿ ಖಂಡಿಸಿದ್ದಾರೆ. ರಾಯಲಸೀಮೆ- ಕೋಲಾರಗಳ ಕ್ಷಾಮ; ಸ್ವಾತಂತ್ರ್ಯ ನೀಡದೇ ಹೋದ ಸುಖ; ಕೋಟಿ ಜನತೆಯ ಸಂಕಟದ ನಿಟ್ಟುಸಿರು; ಬಾಳ್ವೆಗಾಗಿ, ಭವಿಷ್ಯತ್ತಿಗಾಗಿ ಮಾನವನ ಹೋರಾಟ- ಇವೆಲ್ಲದರ ವಾಸ್ತವಿಕ ಚಿತ್ರಣ ಸಾಹಿತ್ಯದಲ್ಲಾಗಬೇಕೆಂದು, ಸಮಾಜದ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಪ್ರಗತಿಶೀಲ ಸಾಹಿತಿಗಳು ಮುದಾಗಬೇಕೆಂದು ಭಾರದ್ವಾಜರು ಹೇಳಲಿಲ್ಲ. ಹಾಗೆ ಹೇಳುವ ಅವಶ್ಯಕತೆ ಅವರಿಗೆ ತೋರಲಿಲ್ಲ! ಎಂದು ನಿರಂಜರು ಟೀಕಿಸಿದ್ದಾರೆ.[೭೫]

ಅದೇ ವರ್ಷದ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ಬೆಂಗಳೂರಿನಲ್ಲಿ ಜರುಗಿದ ಕನ್ನಡ ಕತೆಗಾರರ-ಕಾದಂಬರಿಕಾರರ ಸಮ್ಮೇಳನದಲ್ಲಿ ಕಾಮಪ್ರಚೋದಕ ಸಾಹಿತ್ಯ ರಚಿಸಬಾರದೆಂದು ಲೇಖಕರಿಗೆ ಮನವಿ ಮಾಡಿಕೊಂಡು ನಿರ್ಣಯ ಅಂಗೀಕರಿಸಿತ್ತು. ಆ ನಿರ್ಣವನ್ನು ಹಿರಿಯೂರು ಪ್ರಗತಿಶೀಲರ ಸಮ್ಮೇಳನದಲ್ಲಿ ಖಂಡಿಸಿ ನಿರ್ಣಯ ಅಂಗೀಕರಿಸಲಾಗುತ್ತದೆ. ಬೆಂಗಳೂರು ಸಮ್ಮೇಳನದ ನಿರ್ಣಯ ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ತಂದಿದೆ. ಅಂಥ ನಿರ್ಣಯಗಳನ್ನು ಸಂಘ ಸಂಸ್ಥೆಗಳು ಮಾಡುವುದರಿಂದ ಸಾಹಿತ್ಯಕ್ಕೆ ಹಾನಿಯಾಗುವುದೆಂದು ಹಿರಿಯೂರಿನಲ್ಲಿ ಅಂಗೀಕರಿಸಲಾದ ನಿರ್ಣಯದಲ್ಲಿ ಹೇಳಲಾಗಿತ್ತು.

ಇದನ್ನು ನಿರಂಜನರು ಖಂಡಿಸಿದ್ದಾರೆ. ಪ್ರಗತಿಶೀಲ ಚಳವಳಿ ಹುಟ್ಟಿದಾಗ ಕೆಲವು ಸಂಪ್ರದಾಯವಾದಿ ಸಾಹಿತಿಗಳು ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂತು ಎಂದು ಆಕ್ರೋಶ ಮಾಡಿದರು. ಶ್ರಮಜೀವಿಗಳ ಜೀವನ ಚಿತ್ರಿಸಿ ಎಂದೆಲ್ಲ ಹೇಳಲು ನೀವು ಯಾರು- ಎಂದರು. ಈಗ, ಕಾಮ ಪ್ರಚೋದಕ ಸಾಹಿತ್ಯ ರಚನೆ ಸಲ್ಲದು ಎಂದಾಗ, ಕೆಲವು ಪ್ರಗತಿಶೀಲ ಲೇಖಕರೇ, ಲೇಖಕನ ಸ್ವಾತಂತ್ರ್ಯಕ್ಕೆ ಧಕ್ಕೆ ತಗುಲಿತು ಎನ್ನುತ್ತಾರೆ ಎಂದು ಟೀಕಿಸುತ್ತಾರೆ. ಜೀವನದ ಒಂದು ಅಂಶವಾದ ಕಾಮದ ಚಿತ್ರಣ ಸಾಹಿತ್ಯದಲ್ಲಿ ಅನಿವಾರ್ಯ. ಆದರೆ ಮಾನವನ ನೈಸರ್ಗಿಕ ದೌರ್ಬಲ್ಯಗಳ ಲಾಭ ಪಡೆದು ಕೇವಲ ಕಾಮೋದ್ದೀಪನೆಯನ್ನೇ ಉದ್ದೇಶವಾಗುಳ್ಳ ಕ್ಷುದ್ರ ಸಾಹಿತ್ಯ ರಚಿಸುವುದು ಹೇಯಕರವಾದದ್ದು. .... ಇದನ್ನು ವಿಚಾರಿಗಳಾದ ಓದುಗರು ಖಂಡಿಸಬಾರದೆ? ಜನ ಹಿತೈಷಿಗಳಾದ ಪ್ರಗತಿಶೀಲರು ಖಂಡಿಸುವುದು ಬೇಡವೆ? ದಿನನಿತ್ಯದ ಜೀವನ ಸಮಸ್ಯೆ- ಹೋರಾಟಗಳಿಂದ ಮಾನವನ ಗಮನವನ್ನು ದೂರ ಸೆಳೆದು, ಅವನ ಕರ್ತೃತ್ವ ಶಕ್ತಿಯನ್ನು

೭೫.ನಿರಂಜನ: ಬುದ್ಧಿ ಭಾವ ಬದುಕು- ಪುಟ- ೨೬

ಕುಂಠಿತಗೊಳಿಸಿ, ಅವನನ್ನು ನಿರ್ವೀರ್ಯನಾಗಿಯೂ ನಿಶ್ಚೇಷ್ಟಿತನಾಗಿಯೂ ಮಾಡುವ ಕ್ಷುದ್ರ ಸಾಹಿತ್ಯ ರಚಿಸುವುದೆಂದರೆ ಪ್ರಗತಿಗೆ ದ್ರೋಹ ಬಗೆದಂತೆಯೇ ಸರಿ ಎಂದು ಅವರು ಘೋಷಿಸುತ್ತಾರೆ. ಪ್ರಗತಿಶೀಲ ಲೇಖಕರ ಚಳವಳಿ ಆರಂಭವಾದಾಗ ಇರಿಸಿಕೊಂಡ ಉದಾತ್ತ ಧ್ಯೇಯ-ಗುರಿಗಳು ಈಗೆಲ್ಲಿ ಹೋದವು? ಎಂದು ನಿರಂಜನರು ಪ್ರಶ್ನಿಸುತ್ತಾರೆ.

೧೯೫೩ರ ಚಿತ್ರಗುಪ್ತದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಸೂಳೆ' ಎಂಬ ಲೇಖನವನ್ನು ಪ್ರಕಟಿಸುವ ನಿರಂಜನರು, ಟಿ.ಪಿ.ಕೈಲಾಸಂ ೧೯೧೯ರಲ್ಲಿ ಬರೆದ 'ಮೊಮ್ಮಗಳ ಮುಯ್ಯಿ' ಕೃತಿಯನ್ನು ಪರಿಚಯಿಸುವರು. ಕೈಲಾಸಂ ಅವರದೇ ಆದ 'ಸೂಳೆ' ಕೃತಿಯನ್ನೂ ಪ್ರಸ್ತಾಪಿಸುವರು. ಕೈಲಾಸಂ ಬರೆದ ಕೃತಿಯ ಮಟ್ಟಕ್ಕೆ ಅನಕೃ ಅವರ ಕೃತಿಗಳು ಬರಲಿಲ್ಲ. ಮಹಾ ಮೇರುವಿನಂತಿದ್ದ ಕೈಲಾಸಂ ಕೃತಿಯ ಎದುರು ಅನಕೃ ಅವರ ಮೂರು ಕೃತಿಗಳು ಬೆಟ್ಟಗಳು ಕೂಡ ಆಗಿರಲಿಲ್ಲ, ತಿಪ್ಪೆಗುಂಡಿಗಳಾಗಿದ್ದವು ಎಂದು ಟೀಕಿಸಿದ್ದಾರೆ. ಅ.ನ.ಕೃ. ಕಾದಂಬರಿಗಳು ಪ್ರಗತಿಯ ದೃಷ್ಟಿಗೆ ಎಳ್ಳು ನೀರು ಬಿಟ್ಟುದು ಮಾತ್ರವಲ್ಲ; ನಮ್ಮ ಬರೆಹಗಾರರು ಪ್ರಗತಿಗಿದಿರಾದ ಹಾದಿಯಲ್ಲಿ ಕೆಳಕ್ಕೆ ಜಾರುವುದು ಹೇಗೆ ಸಾಧ್ಯವೆಂದು ತೋರಿಸಿಕೊಟ್ಟವು. ವೈಶ್ಯಾ ಪದ್ಧತಿಯ ಮೂಲೋತ್ಪಾಟನೆಯೇ ತಮ್ಮ ಗುರಿಯೆಂದು ಅವರು ಮುನ್ನುಡಿಗಳಲ್ಲಿ ಎಷ್ಟು ಹೇಳಿಕೊಂಡರೂ ಒಳಗಿನ ತಿರುಳು ಹಳಸಿ ಹೋಗಿದ್ದ ಕಾಮಕೇಳಿಗಳ ವಿಕೃತ ವಿಲಾಸಗಳ ರಸಪುಷ್ಟ ವರ್ಣನೆಯಾಗಿತ್ತು ಎಂದು ಬರೆದಿದ್ದಾರೆ.

೧೯೫೩ರಲ್ಲಿ ರಾಷ್ಟ್ರಬಂಧು ಪತ್ರಿಕೆಯ ವಿಶೇಷಾಂಕದಲ್ಲಿ 'ಪ್ರಗತಿಶೀಲ ಸಾಹಿತ್ಯ; ಗೊತ್ತು, ಗುರಿ' ಎಂಬ ಲೇಖನ ಬರೆದ ನಿರಂಜನರು ಪ್ರಗತಿಶೀಲರ ಬಗೆಗೆ ಬಂದ ಟೀಕೆಗಳಿಗೆ ಉತ್ತರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಪ್ರಗತಿಶೀಲರ ಘೋಷಣೆಯನ್ನು ಅವರು ಅದರಲ್ಲಿ ಪ್ರಕಟಿಸಿದ್ದಾರೆ. ಅದೇ ವರ್ಷ ಅವರು ಪ್ರಜಾವಾಣಿಯಲ್ಲಿ ಪ್ರಗತಿಶೀಲತೆಯ ಹುಟ್ಟು ಎಂಬ ಲೇಖನ ಬರೆದು ಭಾರತದಲ್ಲಿ ಪ್ರಗತಿಶೀಲ ಚಳವಳಿ ಹೇಗೆ ಹುಟ್ಟಿತು. ಅದಕ್ಕೂ ಪೂರ್ವದಲ್ಲಿ ಲಂಡನ್ನಿನಲ್ಲಿ ಭಾರತೀಯ ಲೇಖಕರು ಪ್ರಗತಿಶೀಲ ಚಳವಳಿಯ ಬಗೆಗೆ ಯಾವಯಾವ ರೂಪುರೇಷೆಗಳನ್ನು ಹಾಕಿದರು ಎಂಬುದನ್ನೆಲ್ಲ ವಿವರಿಸಿದ್ದಾರೆ. ಅದೇ ವರ್ಷ ಚಿತ್ರಗುಪ್ತದಲ್ಲಿ ಎಂ.ವಿ.ಸೀತಾರಾಮಯ್ಯನವರು ಬರೆದ ಲೇಖನವೊಂದರಲ್ಲಿ ಪ್ರಗತಿಶೀಲತೆಯ ಬಗೆಗೆ ತಪ್ಪು ಕಲ್ಪನೆ ಉಂಟು ಮಾಡುವಂಥ ಅಭಿಪ್ರಾಯಗಳಿದ್ದವು. ಅದನ್ನು ವಿಮರ್ಶಿಸಿ ನಿರಂಜನರು ಅದರಲ್ಲಿಯೇ ಮತ್ತೊಂದು ಲೇಖನ ಬರೆಯುವರು. ಬದುಕಿಗಾಗಿ ಕಲೆ ಎಂಬ ತತ್ವವನ್ನು ಪ್ರತಿಪಾದಿಸಿದ ಬೆಲಿನ್ಸ್ಕಿಯ ವಿಚಾರಗಳನ್ನು ನಿರಂಜನರು ೧೯೫೮ರಲ್ಲಿ 'ಪ್ರಬುದ್ಧ ಕರ್ನಾಟಕ'ದ ಸಂಚಿಕೆಯೊಂದರಲ್ಲಿ ಮಾಡಿಕೊಡುವರು.

ಪ್ರಗತಿಶೀಲ ಚಳವಳಿ ತೀವ್ರವಾಗಿದ್ದ ಕಾಲದಲ್ಲಿಯೇ ವಿ.ಕೃ.ಗೋಕಾಕರು ರಾಣೆಬೆನ್ನೂರಿನ ಜಿಲ್ಲಾ ಸಾಹಿತ್ಯ ಸಮ್ಮೇಲನದಲ್ಲಿ ಅಧ್ಯಕ್ಷೀಯ ಭಾಷಣದಲ್ಲಿ ಸಾಹಿತ್ಯದಲ್ಲಿ

ಪ್ರಗತಿ ಹೇಗೆ ಎಂಬುದನ್ನು ವಿವರಿಸಿದ್ದಾರೆ. ಸಾಹಿತ್ಯ ಪೂರ್ಣವಾಗಬೇಕಾದರೆ ಅಂತರ್ಮುಖತೆ ಹಾಗೂ ಸಮಾಜಿಕತೆಗಳು ಇರಬೇಕು ಎಂದು ಹೇಳಿದ್ದಾರೆ.

ಜೀವನಕ್ಕೂ ಸಾಹಿತ್ಯಕ್ಕೂ ಪ್ರಗತಿ ಇರಲಿ ಇಲ್ಲವೆ ಇಲ್ಲದಿರಲಿ; ಅದಕ್ಕೆ ಗತಿ (Movement) ಇದೆ ಎಂದು ಗೋಕಾಕ ಹೇಳಿದ್ದಾರೆ. ಇದಕ್ಕೆ ಕಾಲದ ಆವರಣವೇ ಕಾರಣ ಎಂಬುದು ಅವರ ಅಭಿಪ್ರಾಯ. ಪ್ರಗತಿಶೀಲರ ಟೀಕೆಗಳ ಹಿನ್ನೆಲೆಯಲ್ಲಿ ಹಿಂದಿನ ಸಾಹಿತ್ಯವನ್ನು ಅವರು ಒರೆಗೆ ಹಚ್ಚಿ ನೋಡಿದ್ದಾರೆ. ಪ್ರಗತಿಶೀಲರ ಟೀಕೆಯು ಸಾಧುವಲ್ಲ. ಪ್ರತಿಯೊಬ್ಬ ಲೇಖಕನನ್ನು ಆತನು ಬದುಕಿದ್ದ ಕಾಲವು ಪ್ರಭಾವಿಸಿರುತ್ತದೆ. ಪ್ರಗತಿಶೀಲರ ವಾದವನ್ನು ಕಾಮ್ರೇಡ್ ವಾದವೆಂದು ನಾವು ಸುಮ್ಮನಿರುವುದು ಸಾಧ್ಯವೂ ಅಲ್ಲ, ಯೋಗ್ಯವೂ ಅಲ್ಲ ಎಂದು ಅವರು ಹೇಳಿದ್ದಾರೆ. ಪ್ರಗತಿಶೀಲರ ಸಿದ್ಧಾಂತವನ್ನು ಅವರು ರಶಿಯಾದಿಂದ ಬಂದದ್ದು ಎಂಬುದನ್ನು ಗುರುತಿಸುವ ಹಾಗೆಯೇ ಅದು ಮಜೂರಿಗಾರರು ಮತ್ತು ತಿಜೋರಿಗಾರರ ನಡುವಿನ ಸಂಘರ್ಷದ ಚಿತ್ರ ಎಂದು ತಿಳಿಯುವರು. ಅದಕ್ಕಾಗಿಯೇ ಅವರು, ಹುಬ್ಬಳ್ಳಿ, ಸೊಲ್ಲಾಪುರ ,ಗದುಗಿನಲ್ಲಿರುವ ಗಿರಣಿಗಳ ಜೀತದಾಳುಗಳು ನಮಗೆ ಪರಿಚಿತರಾಗಿದ್ದಾರೆಯೇ? ಎಂದು ಪ್ರಶ್ನಿಸಿದ್ದಾರೆ. ಇಂಥವರು ಸಾವಿರಾರು ಜನ. ಅವರ ಜೀವನದ ರುದ್ರ ದೃಶ್ಯಗಳು ಇನ್ನೂ ಮೊತ್ತದಲ್ಲಿ ನಮ್ಮೆದುರು ಬರಬೇಕಾಗಿದೆ. ಮೈಸೂರು ಮಹಾರಾಜರ ಚರಿತ್ರವೂ ಅಲ್ಲಿಯ ಕೆಲವು ಮಹನೀಯರ ಜೀವನ ವೃತ್ತಾಂತವೂ ನಮಗೆ ವಿದಿತವಾಗಿವೆ. ಆದರೆ ಕೋಲಾರದ ಚಿನ್ನದ ಗಣಿಗಳಲ್ಲಿ ದುಡಿಯುವ ದೀನರು, ಭದ್ರಾವತಿಯಲ್ಲಿ ಕ್ಷುದ್ರರಾಗಿ ದುಡಿಯುವ ಯಂತ್ರಯೋಗಿಗಳು, ಮಂಡ್ಯದಲ್ಲಿ ಸಕ್ಕರೆಯಿಂದ ಸಿರಿವಂತರ ಬಾಯಿಯನ್ನು ಸಿಹಿಯಾಗಿಸಿ ತಮ್ಮ ಬಾಳಿನ ಕಹಿಯನ್ನು ಕಳೆಯಲು ಸಮರ್ಥರಾಗದ ಮಜೂರಿಗಾರರು- ಇವರ ಜೀವಿತದ ರೀತಿ ನಮಗೆ ಗೊತ್ತಿದೆಯೆಂದು ಎದೆ ತಟ್ಟಿ ಹೇಳಬಲ್ಲೆವೇ? ಎಂದು ಅವರು ಪ್ರಶ್ನಿಸುವರು. ಒಕ್ಕಲಿಗನ ಜೀವಿತ, ಬೇರೆ ಬೇರೆ ಜಾತಿ-ಮತಗಳ ವಿವಿಧ ರೂಢಿಗಳು, ಅಂಚೆ- ಅಲೆಯಂತೆ ಅಲೆದನಿ (Telephone)ಗಳ ಮಜೂರಿ ವರ್ಗ, ಸೈನಿಕ, ಹಡಗದಾಳು, ವೈಮಾನಿಕ, ಅನ್ಯ ಪ್ರಾಂತಗಳ ಜನತೆ, ಬೇರೆ ರಾಷ್ಟ್ರಗಳ ಜೀವಿತ,- ಈ ಎಲ್ಲ ವಸ್ತು ಸಂಪತ್ತಿಯಿಂದ ಇನ್ನೂ ಕನ್ನಡ ಸಾಹಿತ್ಯದ ಅಭ್ಯುದಯವಾಗಬೇಕಾಗಿದೆ ಎಂದು ಹೇಳುವರು.

ಈ ವಿವರಣೆಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಪ್ರಗತಿಶೀಲತೆ ಬಗ್ಗೆ ಗೋಕಾಕರ ತಿಳಿವಳಿಕೆ ಸೀಮಿತವಾದದ್ದು ಎನ್ನಿಸದೇ ಇರದು. ದುಡಿಯುವ ವರ್ಗದ ಚಿತ್ರಣವೇ ಪ್ರಗತಿಶೀಲ ಚಳವಳಿಗಾರರ ಬೇಡಿಕೆ ಎನ್ನುವಂತೆ ಅವರು ಮಾತನಾಡಿದ್ದಾರೆ. ಗೋಕಾಕರ ಈ ಮಾತುಗಳನ್ನು ಹೈದರಾಬಾದದ ಅಖಿಲಭಾರತ ಉರ್ದೂ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಕೃಷನ್‌ಚಂದರ ಮಾತುಗಳೊಂದಿಗೆ ಹೋಲಿಸಿ ನೋಡಬೇಕು. ಗೋಕಾಕರು ಅಲ್ಲಿಂದಲೇ ಅಭಿಪ್ರಾಯ ಎತ್ತಿಕೊಂಡಹಾಗೆ ಸಾಮ್ಯ

ತೋರುವುದು.[೭೬]

ಸಾಹಿತ್ಯದಲ್ಲಿ ಸಮಕಾಲೀನತೆ ಎಂಬ ಮಹತ್ವದ ಮಾತನ್ನು ಗೋಕಾಕರು ಈ ಸಂದರ್ಭದಲ್ಲಿ ಹೇಳಿದ್ದಾರೆ. ಸಮಕಾಲೀನತ್ವವು ಇನ್ನೂ ಸಂಪೂರ್ಣವಾಗಿ ನಮ್ಮ ಸಾಹಿತ್ಯದಲ್ಲಿ ಒಡಮೂಡಿಲ್ಲ. ಈ ಮಾತು ಇಡೀ ಭಾರತಕ್ಕೆ ಅನ್ವಯಿಸುತ್ತದೆ. ನಮ್ಮ ರಾಜಕೀಯ ಸ್ಥಿತಿಯಿಂದ ಉಂಟಾಗುವ ನಿರ್ಬಂಧಗಳೂ ಇದಕ್ಕೆ ಕಾರಣವಾಗಿವೆ ಎನ್ನುವ ಗೋಕಾಕರು, ಸಾಹಿತ್ಯದ ಸಮಕಾಲೀನತ್ವಕ್ಕೆ ಮಹತ್ವ ಕೊಡುವಾಗ ಇನ್ನೊಂದು ಮಾತನ್ನು ನಾವು ಮರೆಯ ಬಾರದು ಎಂದು ಹೇಳುತ್ತಾರೆ. ಒಮ್ಮೊಮ್ಮೆ 'ಅಪ್ ಟು ಡೇಟ್' ಇಲ್ಲವೆ 'ಕಾಲೋಚಿತ' ಲೇಖಕರಾಗಬೇಕೆಂಬ ಹಂಬಲದಿಂದ ಜೀವನ ಸಾಮಗ್ರಿಯನ್ನು ಅಡದೆ ಅನ್ನವೆಂದು ಸಾಹಿತಿಗಳು ಬಡಿಸುತ್ತಾರೆ. ಅದನ್ನು ಜೀರ್ಣವಾಗಿಸದೆ ಅದರಲ್ಲಿ ಭಾವನೆಗಳನ್ನು ಬೆರೆಸಹೋಗಿ ಪ್ರಚಾರ ಸಾಹಿತ್ಯದಂಥ ಸಾಹಿತ್ಯವನ್ನು ನಿರ್ಮಿಸುತ್ತಾರೆ. ಈ ಮಾತು ಅನೇಕ ಸಲ ಯಂತ್ರಯೋಗಿಗಳನ್ನು ಕುರಿತು ಬರೆದ ಕೃತಿಗಳಿಗೂ ಅನ್ವಯಿಸುತ್ತದೆ. ... .. ಪತ್ರಿಕಾ ಸಾಹಿತ್ಯಕ್ಕೂ ಲಲಿತ ಸಾಹಿತ್ಯಕ್ಕೂ ಇರುವ ಅಂತರವೇ ಇದು. ಖಂಡನೆ- ಮಂಡನೆ, ವಿಮರ್ಶೆ- ಪರಾಮರ್ಶೆ, ಪುರಸ್ಕಾರ- ತಿರಸ್ಕಾರಗಳು ಸಂಪಾದಕನು ಕೈಗೊಳ್ಳಬೇಕಾದ ಸಾಧನಗಳಾಗಿವೆ. ಆದರೆ ಸಮಕಾಲೀನ ಸನ್ನಿವೇಶಗಳು ಯೋಗ್ಯ ಸಾಹಿತ್ಯವಾಗಬೇಕಾದರೆ- ಮಳೆ ಬಂದು ಬಿದ್ದ ನೀರು ಬುಗ್ಗೆಯಾಗಿ ಮೇಲಕ್ಕೇಳಲು ವೇಳೆ ಹಿಡಿಯುವಂತೆ- ಕೆಲವೊಂದು ಕಾಲಾವಧಿ ಬೇಕು. ಇಂಥ ಸನ್ನಿವೇಶಗಳನ್ನು ಜೀರ್ಣಿಸುವುದರ ಕಡೆಗೆ ನಮ್ಮ ಸಾಹಿತಿಗಳ ದೃಷ್ಟಿಯಿರಬೇಕು ಎಂಬ ಮಾತನ್ನು ಅವರು ಹೇಳುವರು.[೭೭]

ಮಹಾಕಾವ್ಯವು ತತ್ಕಾಲ-ಅನಂತಗಳ ನಡುವೆ ಸೇತುವೆ ಕಟ್ಟುವುದು. ಸಮಕಾಲೀನತ್ವವಿಲ್ಲದೆ ಹೋದರೆ ಸಾಹಿತ್ಯವು ಒಂದು ಅಂಗದಲ್ಲಿ ಊನವಾದಂತೆ. ಇದು ಯಾವಾಗಲೂ ನಮ್ಮ ಲಕ್ಷ್ಯದಲ್ಲಿರಬೇಕು.

ಆದರೆ ಇದರ ಜೊತೆಗೆ ಬರಿ ಪ್ರಗತಿಶೀಲ ಸಂಘದ ಸದಸ್ಯತ್ವದಿಂದ, ಇಲ್ಲವೆ ಸಮತಾವಾದವನ್ನು ಸಾಧಿಸುವುದರಿಂದ ಸಾಹಿತ್ಯ ಗುಣ ಇಲ್ಲವೆ ಪ್ರಗತಿಯು ಯಾವ ಕೃತಿಯಲ್ಲಿಯೂ ಕಂಡುಬರಲಾರದೆಂಬುದನ್ನೂ ನಾವು ನೆನಪಿಡಬೇಕಲ್ಲವೆ? ಯಾವ ಕೃತಿಯೇ ಆಗಲಿ, ಅದನ್ನು ಯಾರೇ ಬರೆದಿರಲಿ,- ಮೊದಲು ಅದು ಉಳಿದ ಎಲ್ಲ ಕೃತಿಗಳಂತೆ ಸಾಹಿತ್ಯವಾಗಿದೆಯೋ ಇಲ್ಲವೋ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಆ ಮೇಲೆ- ಅದರಲ್ಲಿ ಪ್ರಗತಿಯಿದೆಯೆ? ಇದ್ದರೆ ಎಂಥ ಪ್ರಗತಿ? ಇವೇ ಮೊದಲಾದ ಪ್ರಶ್ನೆಗಳು ಬರುವವು ಎಂದು ಗೋಕಾಕರು ಹೇಳಿದ್ದಾರೆ.

ಪ್ರಗತಿಶೀಲರು ತಮ್ಮ ಸಿದ್ಧಾಂತವನ್ನು ಬಲವಾಗಿಯೇ ತಮ್ಮ ಕೃತಿಗಳಲ್ಲಿ

---

೭೬ ವಿವರಗಳಿಗೆ ನೋಡಿ- ನಿರಂಜನ: ಬುದ್ಧಿ ಭಾವ ಬದುಕು- ಪುಟ ೧೫.

೭೭ .ಸಾಹಿತ್ಯದಲ್ಲಿ ಪ್ರಗತಿ- ಇದೇ ಹೆಸರಿನ ಲೇಖನ- ೧೯೪೪

ಪ್ರತಿಪಾದಿಸಿದರು. ಸಮಾಜವು ಆಂದೋಲನದಲ್ಲಿ ಸಿಕ್ಕಾಗ ಬರೆಹಗಾರ ತನ್ನ ಹಿತ ದೃಷ್ಟಿಯಿಂದ ತಾನು ಅಡಗಿಕೊಂಡ ಸ್ವಪ್ನಸದನದಿಂದ ಹೊರಗಿಳಿಯಬೇಕು ಎಂಬುದು ಪ್ರಗತಿಶೀಲರ ಘೋಷಣೆ. ಪ್ರಗತಿಶೀಲ ಬರೆಹಗಾರರಾದ ನಾವು ಇಂದು ನಮ್ಮ ಹಾಗೂ ಜಗತ್ತಿನ ಸಕಲ ಜನತೆಯ ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂಗಳ ವಿರುದ್ಧ ಹೋರಾಟದಲ್ಲಿ ಬೆಂಬಲಿಗರಾಗಿ ನಿಲ್ಲುತ್ತೇವೆ ಎನ್ನುವುದು ಅವರ ಪ್ರತಿಜ್ಞೆ. ಪ್ರತಿಗಾಮಿ ಸಾಮ್ರಾಜ್ಯಶಾಹಿ ನಮ್ಮ ಸ್ವಾತಂತ್ರ್ಯದ ದಾರಿಯಲ್ಲಿ, ಐಕ್ಯತೆಯ ಮಾರ್ಗದಲ್ಲಿ ಅಡ್ಡ ನಿಂತಾಗ ಪ್ರಗತಿಶೀಲತೆ ನಮ್ಮ ಜನತೆಗೆ ಆಶೆ ಸ್ವಾತಂತ್ರ್ಯಗಳ ಸಂದೇಶವನ್ನು ಸಾರಿ ಸಂಘಟಿತವಾದ ಯತ್ನದ ಮುಂದೆ ಸ್ವಾತಂತ್ರ್ಯ ಅನಿವಾರ್ಯವೆಂದು ತೋರಿಸಿಕೊಡಬೇಕಾಗಿದೆ ಎಂಬುದು ಆಶಯ.

ಪ್ರಗತಿಶೀಲ ಚಳವಳಿಯಲ್ಲಿ ತಮ್ಮನ್ನು ಗುರುತಿಸಿಕೊಂಡ ಕನ್ನಡದ ಪ್ರಮುಖ ಬರೆಹಗಾರರಲ್ಲಿ ಕೆಲವರನ್ನು ಬಿಟ್ಟರೆ ಬಹುಪಾಲು ಇತರರು ಮಾರ್ಕ್ಸ್‌ವಾದಿಗಳಾಗಿರಲಿಲ್ಲ. ಸೈದ್ಧಾಂತಿಕವಾಗಿ ಕೆಲವರು ಆ ವಾದದ ಜನಪರತೆಯ ಬಗ್ಗೆ ಸಹಾನುಭೂತಿ ಯುಳ್ಳವರಾಗಿದ್ದರು. ಇನ್ನು ಕೆಲವರು ರಷ್ಯದ ಕುರಿತು ಹೊಂದಿದ್ದ ಮೆಚ್ಚುಗೆಯು ಪರೋಕ್ಷವಾಗಿ ಮಾರ್ಕ್ಸ್‌ವಾದವನ್ನು ಅವರು ಸಮರ್ಥಿಸುವ ಹಾಗೆ ಮಾಡಿತು. ಪ್ರಗತಿಶೀಲ ಸಾಹಿತ್ಯವೆಂದರೇನೆಂಬ ಇವರ ಗ್ರಹಿಕೆಯಾಗಲಿ ಅದಕ್ಕೆ ಹಿನ್ನೆಲೆಯಾದ ಸಾಮಾಜಿಕ ಸಿದ್ಧಾಂತದ ದೃಷ್ಟಿ- ಪ್ರಜ್ಞೆಯಾಗಲಿ ಏಕ ರೂಪದ್ದಾಗಿರಲಿಲ್ಲ.[೭೮]

ಪ್ರಗತಿಶೀಲರಲ್ಲಿ ಪ್ರಮುಖ ಕೊರತೆಯನ್ನು ಅವರ ವಿಮರ್ಶಾಪ್ರಜ್ಞೆಯಲ್ಲಿ ಗುರುತಿಸಬಹುದು. ಸಾಹಿತ್ಯ ಮಾರ್ಗಗಳ ಗ್ರಹಿಕೆ ಅವಲೋಕನದಲ್ಲಿ ಏಕರೂಪತೆ, ಸ್ಥೂಲ, ಸಾಮಾನ್ಯೀಕರಣದಲ್ಲಿ ಅಭಿಪ್ರಾಯ ಸಾಮ್ಯ ಪ್ರಗತಿಶೀಲರಲ್ಲಿ ವ್ಯಕ್ತವಾಗದಿರುವುದಕ್ಕೆ ಕಾರಣ ಪ್ರಗತಿಶೀಲ ಆಂದೋಲನ ವಿಮರ್ಶೆಯನ್ನು ಬೆಳೆಸಲಿಲ್ಲ ಎಂಬುದೇ ಆಗಿದೆ. ನವೋದಯ ಸಾಹಿತ್ಯ ಬೆಳೆದಾಗ ಅದರ ಜೊತೆಯಲ್ಲಿಯೇ ನವೋದಯ ವಿಮರ್ಶೆ ಬೆಳೆಯಿತು. ಟಿ.ಎಸ್.ವೆಂಕಣ್ಣಯ್ಯನವರು, ಎ.ಆರ್.ಕೃಷ್ಣಶಾಸ್ತ್ರಿಗಳು, ಬಿ.ಎಂ.ಶ್ರೀಕಂಠಯ್ಯನವರು, ಡಿ.ವಿ.ಜಿ., ಎಸ್.ವಿ.ರಂಗಣ್ಣ, ವಿ.ಸೀತಾರಾಮಯ್ಯ ಮೊದಲಾದವರು ನವೋದಯ ವಿಮರ್ಶೆಯನ್ನು ಬೆಳೆಸಿದರು. ಆದರೆ ಪ್ರಗತಿಶೀಲರಲ್ಲಿ ಇದು ಆಗಲಿಲ್ಲ. ಪ್ರಗತಿಶೀಲರಲ್ಲಿ ಮುಂಚೂಣಿಯಲ್ಲಿದ್ದ ಅನಕೃ ತಮ್ಮ ಎಲ್ಲ ಕೃತಿಗಳನ್ನು ಸಿದ್ಧಾಂತಪರವಾಗಿ ಬರೆಯಲಿಲ್ಲ. ಹೀಗಾಗಿ ಅವರು ಮಾರ್ಕ್ಸ್‌ವಾದಿ ಚಿಂತಕರಿಗೆ ಸೇರಲಿಲ್ಲ. ಅನಕೃ ಅವರ ಜೀವನ ಯಾತ್ರೆ, ಉದಯ ರಾಗ ಕಾದಂಬರಿಗಳನ್ನು ಪ್ರಗತಿಶೀಲ ಕೃತಿಗಳು

---

೭೮. ವಿವರಗಳಿಗೆ ನೋಡಿ–ಅಶೋಕ ಶೆಟ್ಟರ್: ಕನ್ನಡ ಸಾಹಿತ್ಯದ ಪ್ರಗತಿಶೀಲ ಪರ್ವ: ಒಂದು ಚಾರಿತ್ರಿಕ ನೋಟ, ಸಂಕ್ರಮಣ ೨೨೮, ಸಂಪುಟ ೨೬, ಸಂಚಿಕೆ ೮, ಆಗಸ್ಟ್ ೧೯೯೦.

ಎಂದು ಒಪ್ಪಿಕೊಂಡರೂ ಇನ್ನುಳಿದ ಕೆಲವು ಕೃತಿಗಳನ್ನು ಹಾಗೆಂದು ಒಪ್ಪಿಕೊಳ್ಳುವುದು ಸಾಧ್ಯವಿರಲಿಲ್ಲ. ತಮ್ಮ ಕೃತಿಗಳಿಗೆ ಟೀಕೆಗಳು ಬಂದಾಗ ಅದನ್ನು ಸಹಿಸಿಕೊಳ್ಳುವಂಥ ಸಹನಶೀಲರು ಅನಕೃ ಆಗಿರಲಿಲ್ಲ. ಅನಕೃ ಅವರಿಗೆ ದೊಡ್ಡ ಓದುಗ ಪಡೆ ಇತ್ತು. ಅವರ ಕಾದಂಬರಿಯ ಒಂದು ಪುಟಕ್ಕೆ ಇಷ್ಟು ಹಣ ಎಂದು ಪ್ರಕಾಶಕರು ನಿಗದಿ ಮಾಡಿಕೊಂಡು ಅವರಿಂದ ಕೃತಿಯನ್ನು ಪ್ರಕಟಣೆಗೆ ಪಡೆಯುತ್ತಿದ್ದರು. ಹೀಗಾಗಿ ಜನಪ್ರಿಯ ಮಾರ್ಗವನ್ನು ಹಿಡಿಯುವುದು ಅವರಿಗೆ ಅನಿವಾರ್ಯವೂ ಆಗಿತ್ತು. ಜೀವನ ನಿರ್ವಹಣೆಗೆ ಸಾಹಿತ್ಯ ರಚನೆಯೇ ಉದ್ಯೋಗ ಎನ್ನುವ ಹಾಗೆ ಆಗಿತ್ತು. ಕೇವಲ ಅನಕೃ ಮಾತ್ರವಲ್ಲ, ತರಾಸು ಕೂಡ ಜನಪ್ರಿಯ ಲೇಖಕರೇ ಆಗಿದ್ದರು. ಹೀಗಾಗಿ ಸಿದ್ಧಾಂತಪರವಾಗಿ ಬರೆಯುವುದು ಅವರಿಗೆ ಸಾಧ್ಯವಾಗಲಿಲ್ಲ. ಅವರ ಮಹತ್ವಾಕಾಂಕ್ಷೆಯ ಕೃತಿಗಳಾದ 'ಸಾಹಿತ್ಯ ರತ್ನ', 'ನಟಸಾರ್ವಭೌಮ' ಗಳನ್ನು ಮಾರ್ಕ್ಸ್‌ವಾದಿ ವಿಮರ್ಶಕರು ಅಗ್ಗದ ಜನಪ್ರಿಯತೆಯ ದಾರಿ ಹಿಡಿದ ಕೃತಿಗಳಾಗಿ ಕಂಡರು. ಈ ವೇಳೆಗೆ ಬಸವರಾಜ ಕಟ್ಟೀಮನಿಯವರು 'ಉಷಾ' ಪತ್ರಿಕೆಯನ್ನು ನಡೆಸುತ್ತಿದ್ದರು. ಅದರಲ್ಲಿ ಅವರು ನಟಸಾರ್ವಭೌಮ ಕೃತಿಯನ್ನು ವಿಟಸಾರ್ವಭೌಮ ಎಂದು ಟೀಕಿಸಿದರು. ಪ್ರಗತಿಶೀಲ ಆಂದೋಲನದ ಬರೆಹ- ಕತೆಗಳಿಗೆ ಸಾಕಷ್ಟು ಅವಕಾಶ ಕೊಡುತ್ತಿದ್ದ ಆ ಪತ್ರಿಕೆಯಲ್ಲಿ ಅನಕೃ ಕುರಿತು ಕಠೋರ ಟೀಕೆಗಳು ಬಂದವು. ೧೯೪೫ರಲ್ಲಿ 'ವಾಣಿ' ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ನಿರಂಜನರು, "ಕಳೆದ ಎರಡು ವರ್ಷಗಳಲ್ಲಿ ಚಿತ್ರವಿಚಿತ್ರವಾಗಿ ನಮ್ಮ ನಾಡಿನಲ್ಲೂ, ಪ್ರಗತಿಶೀಲ ಲೇಖಕರ ಆಂದೋಲನ ಹುಟ್ಟಿಕೊಂಡು ಬೆಳೆದಿದೆ.. ಅಸಹಿಷ್ಣುತೆ ನಮ್ಮ ಧರ್ಮವಾಗಿದೆ. ಪರ ನಿಂದೆ ಅನುದಿನದ ಆಚರಣೆಯಾಗಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ಅಂದಿನ ಕಲುಷಿತ ವಾತಾವರಣವನ್ನು ತಿಳಿಸುತ್ತದೆ. ಪ್ರಗತಿಶೀಲ ಸಿದ್ಧಾಂತಪರ ಇದ್ದವರು ಸಾಹಿತ್ಯ ಚಳವಳಿಯನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲು ಕೈಗೊಂಡ ಕ್ರಮ ಇದಾಗಿದೆ. ಇದಕ್ಕೆ ಅವರು ಬಳಸಿಕೊಂಡ ಮಾಧ್ಯಮ ಪತ್ರಿಕೆಯಾಗಿದೆ. ಪ್ರಗತಿಶೀಲ ಚಳವಳಿಯನ್ನು ಕಮ್ಯುನಿಸ್ಟ್ ಪಾರ್ಟಿಯ ಅಂಗವನ್ನಾಗಿ ಮಾಡಲು ಕೆಲವರು ಪ್ರಯತ್ನಿಸಿದರು ಎನ್ನುವುದು ಅನಕೃ ಆರೋಪ. ರಷ್ಯಾ, ಚೀಣ ಮಾದರಿಯ ಕಮ್ಯುನಿಸಂ ನಮ್ಮ ದೇಶಕ್ಕೆ, ನಮ್ಮ ಸಾಹಿತ್ಯಕ್ಕೆ ಅನಗತ್ಯ ಎಂಬ ನಂಬಿಕೆಯವರು ಅನಕೃ. ನಮ್ಮ ಉಪನಿಷತ್ತುಗಳಲ್ಲಿಯೇ ಅವರು ಸಾಮ್ಯವಾದದ ತತ್ವಗಳನ್ನು ಗುರುತಿಸುತ್ತಾರೆ. ತಮ್ಮ ಕೃತಿಗಳ ಬಗೆಗೆ ಬಂದ ಟೀಕೆಗಳಿಗೆ ಉತ್ತರಿಸಲು ಅವರು 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಎಂಬ ಕೃತಿಯನ್ನು ರಚಿಸಿದರು.

ಪ್ರಗತಿಶೀಲರಲ್ಲಿ ಪ್ರಮುಖವಾಗಿ ಕಂಡುಬರುವುದು ವ್ಯವಸ್ಥೆಯ ಬಗೆಗಿನ ರೊಚ್ಚು, ಆವೇಶ, ಭಾವಾತಿರೇಕ. ಇದರ ಪರಿಣಾಮವಾಗಿ ಭಾಷೆ ತನ್ನ ಸೂಕ್ಷ್ಮತೆಯನ್ನು, ಚಿತ್ರಣ ಕಲಾತ್ಮಕ ಸ್ಪರ್ಶವನ್ನು, ಗ್ರಹಿಕೆ ವಾಸ್ತವಿಕತೆಯನ್ನು ಕಳೆದುಕೊಂಡುಬಿಡುತ್ತದೆ. ಅನಕೃ, ತರಾಸು, ಕಟ್ಟೀಮನಿ ಮೊದಲಾದವರಿಗೆ ಈ ಮಾತು ಅನ್ವಯಿಸುತ್ತದೆ. ಅನೇಕ ಐತಿಹಾಸಿಕ ಕೃತಿಗಳನ್ನು ರಚಿಸಿದ ತರಾಸು ಅವರಲ್ಲಿ ಇತಿಹಾಸದ ಶಕ್ತಿಗಳ ಸಂಘರ್ಷದ ವಸ್ತುನಿಷ್ಠ ಗ್ರಹಿಕೆಯ

ಅಭಾವ ಕಾಣುತ್ತೇವೆ. ಇತಿಹಾಸದ ಘಟನೆಗಳಲ್ಲೂ ಮಾನವರ ಕ್ರಿಯೆಗಳು ಮೂರ್ತರೂಪ ಪಡೆಯುವಂಥದ್ದು ಎಂಬ ಅರಿವು ಅವರಲ್ಲಿಲ್ಲ. ತರಾಸು ಅವರ 'ದುರ್ಗಾಸ್ತಮಾನ' ಕಾದಂಬರಿಯ ಬಗೆಗೆ ಶಿವರಾಮು ಕಾಡನಕುಪ್ಪೆ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಇದನ್ನು ನಾವು ಕಾಣಬಹುದು. "ಆಧುನಿಕ ಲೇಖಕನಾಗಿ ಇತಿಹಾಸದ ವಸ್ತುವೊಂದನ್ನೆತ್ತಿಕೊಂಡು ತಾವು ಬರೆಯುವಾಗ ಸಮಕಾಲೀನ ಮೌಲ್ಯಗಳು ಅದರಲ್ಲಿ ವ್ಯಕ್ತವಾಗಬೇಕಾದ ಅಗತ್ಯ, ಗತಕಾಲದ ಚಿತ್ರಣ ವರ್ತಮಾನದ ದೃಷ್ಟಿಕೋನದಿಂದ ಹೊಸ ಅರ್ಥ-ರೂಪ ಪಡೆಯಬೇಕಾದ ಮಹತ್ವ, ವಸ್ತು ಇತಿಹಾಸವಾದರೂ ವರ್ತಮಾನದ ಬದುಕಿಗೆ ಅದು ಹೇಗೆ ಸಂಗತವೆನ್ನುವ ಪ್ರಶ್ನೆ ಇವಾವವೂ ತರಾಸು ಅವರನ್ನು ಬಾಧಿಸದೆ ಒಂದು ಪುಟ್ಟ ಪಾಳೆಗಾರಿ ಸಂಸ್ಥಾನದ ರಾಜನೊಬ್ಬನ ಕುರಿತ ಭಾವುಕ ಅಭಿಮಾನವೇ ಮುಖ್ಯವಾಗಿ ಲೇಖಕನ ವಸ್ತುನಿಷ್ಠ ದೃಷ್ಟಿ ತೀರಾ ಸಂಕುಚಿತವಾಗಿದೆ" [೭೯] ಎಂಬ ಅಭಿಪ್ರಾಯ ಅಂಥ ಎಲ್ಲ ಐತಿಹಾಸಿಕ ಕಾದಂಬರಿಗಳಿಗೆ ಅನ್ವಯಿಸುವಂಥದ್ದು.

ಪ್ರಗತಿಶೀಲ ಕೃತಿಗಳು ಕತೆ, ಕಾದಂಬರಿಗಳ ರೂಪದಲ್ಲಿ ಮಾತ್ರವಲ್ಲದೆ ಶ್ರೀರಂಗರಂಥ ನಾಟಕಕಾರರು, ಅಡಿಗ, ರಾಮಚಂದ್ರ ಶರ್ಮರಂಥ ಕವಿಗಳ ಕೃತಿಗಳಲ್ಲೂ ಕಾಣಸಿಕೊಂಡಿದೆ. ಕನ್ನಡ ಸಾಹಿತ್ಯವನ್ನು ವಾಸ್ತವ ವಾದದ ದಿಕ್ಕಿನಲ್ಲಿ ಕೊಂಡೊಯ್ದ ಕಾರಣಕ್ಕೆ ಪ್ರಗತಿಶೀಲರ ಸಾಧನೆ ಮಹತ್ವದ್ದೇ. ನವೋದಯ ಸಾಹಿತ್ಯವನ್ನು ಪ್ರಗತಿಶೀಲರು ಹಲವು ಬಗೆಯಲ್ಲಿ ಪ್ರಶ್ನಿಸಿದರು. ಅನೇಕ ಸವಾಲುಗಳನ್ನು ಎಸೆದರು. ಈ ಒಂದು ಮುಖಾಮುಖಿ ಮುಂದೆ ನವ್ಯದವರು ನವೋದಯಕ್ಕೆ ಪ್ರಹಾರವನ್ನು ಕೊಡುವುದಕ್ಕೆ ಸುಲಭವನ್ನಾಗಿ ಮಾಡಿತು. ಪ್ರಗತಿಶೀಲ ಚಳವಳಿ ಸಾಹಿತ್ಯದ ಸಹಜ ಬೆಳವಣಿಗೆಯಾಗಿ ಮೂಡಿಬಂದದ್ದು ಅಲ್ಲ. ನವೋದಯ ಸಾಹಿತ್ಯ ಸೃಷ್ಟಿ ಇನ್ನೂ ಶಕ್ತಿಶಾಲಿಯಾಗಿಯೇ ಇದ್ದಾಗ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡಿದ್ದೂ ಅದು ಅಪೇಕ್ಷಿತ ಯಶಸ್ಸು ಸಾಧಿಸುವುದು ಸಾಧ್ಯವಾಗಲಿಲ್ಲ. ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಳ್ಳುವುದಕ್ಕೆ ಈ ಮಣ್ಣಿನಿಂದಲೇ ಪ್ರಚೋದನೆ ಮೂಡಿ ಬರಲಿಲ್ಲ. ಅದಕ್ಕೆ ಪೂರಕವಾದ ಸಾಮಾಜಿಕ ಪ್ರೇರಣೆ ಚಳವಳಿ ರೂಪದಲ್ಲಿ ಕಾಣಿಸಿಕೊಳ್ಳಲಿಲ್ಲ. ಆದರೆ ನವ್ಯದ ಯಶಸ್ಸಿನಲ್ಲಿ ಪ್ರಗತಿಶೀಲದ ಪಾಲನ್ನು ಅಲ್ಲಗಳೆಯುವಂತಿಲ್ಲ.

ಪ್ರಗತಿಶೀಲ ವಿಮರ್ಶಕರು ಸಾಹಿತ್ಯದಲ್ಲಿ ಪ್ರತಿಗಾಮಿ ನಿಲುವುಗಳನ್ನು, ರಾಜಕಾರಣಗಳನ್ನು ಗುರುತಿಸುತ್ತಾರೆ. ಸಾಹಿತ್ಯದ ಓದು ಸೌಂದರ್ಯಾನುಭವಕ್ಕಾಗಿ ಮಾತ್ರ ಅಲ್ಲ. ಅದೊಂದು ಸಾಮಾಜಿಕ ಅನುಸಂಧಾನ. ಸಾಹಿತ್ಯ ಮತ್ತು ವಿಮರ್ಶೆಯ ನಡುವಣ ಸಂಬಂಧ ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧ ಎಂದು ಅವರು ತಿಳಿಯುತ್ತಾರೆ. ಸಾಹಿತ್ಯ ಕೃತಿ ತನಗೆ ತಾನೇ ಸ್ವತಂತ್ರ ಅಲ್ಲ. ಸಮಾಜದ ನಡುವೆ ಸಾಹಿತ್ಯ ಕೃತಿ ಬಂದಾಗ

೭೯.ಉದ್ಧೃತ- ಅಶೋಕ ಶೆಟ್ಟರ್

ಸಮಾಜ ಅದಕ್ಕೆ ತನ್ನದೇ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ. ವಿಮರ್ಶೆಯ ಬೀಜ ಇಲ್ಲಿಯೇ ಇರುವುದು. ಇಲ್ಲಿ ಸಮಾಜ ಎಂದರೆ ಅಮೂರ್ತ ಕಲ್ಪನೆಯಲ್ಲ. 'ಪ್ರತಿಗಾಮಿ ಎಂಬುದು ಒಂದು ರಾಜಕೀಯ ಪರಿಕಲ್ಪನೆಯಾದರೂ ಮೂಲತಃ ಒಂದು ನಿರ್ದಿಷ್ಟ ಐತಿಹಾಸಿಕ ಬೆಳವಣಿಗೆಯಲ್ಲಿ ಜರುಗುವ ಸಾಮಾಜಿಕ ಸಾಂಸ್ಕೃತಿಕ ಘರ್ಷಣೆಯ ಸಂದರ್ಭದಲ್ಲಿ ಯಾವ ಶಕ್ತಿಗಳು ಈ ಘರ್ಷಣೆಯನ್ನು ಹತ್ತಿಕ್ಕಲು ಹವಣಿಸುತ್ತವೆ, ಚಲನಶೀಲತೆಗೆ ಅಡ್ಡಿಯಾಗುತ್ತವೆ ಮತ್ತು ಹಿಂದಕ್ಕೆ ಜಗ್ಗುತ್ತವೆಯೋ ಅಂಥ ಶಕ್ತಿಗಳು ಪ್ರತಿಗಾಮಿಯಾಗಿರುತ್ತವೆ' ಎಂಬ ಅಭಿಪ್ರಾಯವನ್ನು ಇಲ್ಲಿ ಗಮನಿಸಬೇಕು.[೮೦]

ಪ್ರಗತಿಪರ ವಿಮರ್ಶಕನಿಗೆ ಒಂದು ಸಾಹಿತ್ಯ ಕೃತಿಯನ್ನು ಸಮಾಜದೊಳಗೆ, ಜನತೆಯ ನಡುವೆ ಇಟ್ಟು ಮೌಲ್ಯಮಾಪನ ಮಾಡುವುದು ಮುಖ್ಯವಾಯಿತು. ಕಲೆ ಕಲೆಗಾಗಿಯೂ ಅಲ್ಲ, ವಿಮರ್ಶೆ ವಿಮರ್ಶೆಗಾಗಿಯೂ ಅಲ್ಲ. ಅವು ಸಮಾಜದ ಪ್ರತಿಕ್ರಿಯೆಯಾಗಿರಬೇಕು ಎಂಬ ನಿಲುವು ಕೃತಿ ನಿಷ್ಠ ವಿಮರ್ಶೆ, ರೂಪವಾದಿ ವಿಮರ್ಶೆಗಳನ್ನು ವಿರೋಧಿಸಿತು.

ಇಲ್ಲಿಯೇ ನಾವು 'ಜಯಕರ್ನಾಟಕ'ದಲ್ಲಿ ಪ್ರಕಟವಾದ ಒಂದು ಲೇಖನವನ್ನು ಗಮನಿಸಬೇಕು.[೮೧] ಇದನ್ನು ಬರೆದವರು ಜವಾಹರಲಾಲ ನೆಹರೂ ಅವರು. ಪ್ರಕಟವಾದ ವರ್ಷ ೧೯೩೮. ಹಿಂದೀ ಪತ್ರಿಕೆಯೊಂದರಲ್ಲಿ ಪ್ರಕಟವಾದ ಈ ಲೇಖನವನ್ನು ಅನುವಾದಿಸಿ ಅದರಲ್ಲಿ ಪ್ರಕಟಿಸಲಾಗಿದೆ. 'ಪ್ರಗತಿಪರ ಲೇಖಕರು' ಎಂಬುದು ಲೇಖನದ ಶೀರ್ಷಿಕೆ. ಆ ಕಾಲದ ಸಾಹಿತ್ಯಿಕ ಪತ್ರಿಕೆಗಳು ಆಯಾ ಕಾಲದ ಸಾಹಿತ್ಯಕ ಒಲವುಗಳನ್ನು ಗುರುತಿಸಿ ಅದೇ ರೀತಿಯ ಲೇಖನಗಳನ್ನು ಪೂರಕವಾಗಿ ಪ್ರಕಟಿಸುತ್ತಿತ್ತು ಎನ್ನುವುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಇದರಲ್ಲಿ ನೆಹರೂ ಅವರು ಪ್ರಗತಿಪರ ಸಾಹಿತ್ಯವೆಂದರೇನು? ಸಾಹಿತ್ಯ ನಿರ್ಮಿತಿಯು ಯಾರ ಸಲುವಾಗಿ ನಡೆಯುತ್ತದೆ? ಬರೆಹಗಾರರು ಬರೆಯುವುದಾದರೂ ಯಾತಕ್ಕೆ?.. ಇವೇ ಮೊದಲಾದ ಪ್ರಶ್ನೆಗಳನ್ನು ಕೇಳಿಕೊಂಡಿದ್ದಾರೆ. ಲೇಖಕರ ಲೇಖನದ ಹಿಂದೆ ದೊಡ್ಡ ತತ್ವವಿರದಿದ್ದರೆ ಇಲ್ಲವೆ ಉದಾತ್ತ ವಿಚಾರ ಸರಣಿಯಿರದಿದ್ದರೆ ವಾಚಕರ ಮನಸ್ಸಿನ ಮೇಲೆ ಅದರ ಪರಿಣಾಮವಾಗಲಾರದು. ಜಗತ್ತಿನಲ್ಲಿ ಬರೆಹಗಾರರು ಸಾವಿರಗಟ್ಟಲೆ ಹುಟ್ಟುತ್ತಾರೆ; ಆದರೆ ಚಿರಕಾಲೀನ ಕೃತಿಗಳ ಹಿಂದೆ ಯಾವೊಂದು ದೊಡ್ಡ ತತ್ವವಾಗಲಿ, ಒಂದು ವ್ಯಾಪಕ ಪ್ರಮೇಯವನ್ನು ಬಿಡಿಸುವ ಪ್ರಯತ್ನವಾಗಲಿ ಇದ್ದುದು ಕಂಡು ಬರುತ್ತದೆ ಎಂದು ನೆಹರೂ ಹೇಳುತ್ತಾರೆ.

ಸಾಹಿತ್ಯದ ಪ್ರಸಾರವಾಗುವಷ್ಟು ರಾಜಕೀಯ ಚಳವಳಿಯದಾಗಲಾರದು. ಸಾಹಿತ್ಯೋಪಾಸಕರು ಹೋಗುವಲ್ಲೆಲ್ಲ ರಾಜನೀತಿ ವಿಶಾರದರು ಹೋಗಲಾರರು.

೮೦.ವಿವರಗಳಿಗೆ ನೋಡಿ- ಎಸ್.ಶಿವಾನಂದ- ಸಂಕ್ರಮಣ- ೮೭-೮೮

೮೧.ಸಂಪುಟ ೧೬, ಸಂಚಿಕೆ ೨

ಲೇಖಕನು ಸಾಮಾನ್ಯ ಜನತೆಯ ಸಾದಾ ಸೀದಾ ಮಾತುಗಳನ್ನು ಬಲ್ಲವನಾಗಿರುವನು; ಅದರ ಸಹಾಯದಿಂದ ಕಲ್ಪನಾ ಪ್ರಪಂಚವನ್ನೂ, ವಾಸ್ತವ ಪ್ರಪಂಚವನ್ನೂ ಸಂಧಿಸುವ ಸೇತುವೆಯನ್ನು ಕಟ್ಟಬಲ್ಲನು. ಸಾಮಾನ್ಯ ಜನತೆಯು ಕೂಡ ಆ ಸೇತುವೆಯ ಮಾರ್ಗವಾಗಿ ಆದರ್ಶ ಪ್ರಪಂಚದ ಮೆಟ್ಟಿಲನ್ನು ಮುಟ್ಟಬಹುದು. ಆದರ್ಶ ವಿಶ್ವವನ್ನು ಕಲ್ಪನೆಯಿಂದ ಒಮ್ಮೆ ತಿಳಿದುಕೊಂಡರೆ, ಜನಸಾಮಾನ್ಯರು ಅದನ್ನು ಮುಟ್ಟಿಯೇ ಬಿಡುವ ಪ್ರಯತ್ನಕ್ಕೆ ತೊಡಗುತ್ತಾರೆ ಎನ್ನುವ ನೆಹರೂ ಸಾಹಿತ್ಯದ ಅಂತಿಮ ಗುರಿ ಮನುಷ್ಯನೇ ಎನ್ನುವುದನ್ನು ವಿವರಿಸುವರು. ಸಾಹಿತ್ಯ ತನ್ನಷ್ಟಕ್ಕೆ ತಾನೇ ಪರಿಪೂರ್ಣವಲ್ಲ. ಅದರಿಂದ ಸಮಾಜಕ್ಕೆ ಏನಾದರೂ ಪ್ರಯೋಜನ ಆಗಬೇಕು. ಹಾಗಂತ ಅವರು ಸಾಹಿತಿಯ ವ್ಯಕ್ತಿವೈಶಿಷ್ಟ್ಯವನ್ನು ಅಲ್ಲಗಳೆಯುವುದಿಲ್ಲ.

ಸಾಹಿತಿಯಾಗಲಿ, ಕಲಾಕೋವಿದನಾಗಲಿ ತನ್ನದೊಂದು ವೈಶಿಷ್ಟ್ಯವುಳ್ಳವನಾಗಿರುತ್ತಾನೆ; ಅದಕ್ಕೆ ವ್ಯಕ್ತಿತ್ವ (individuality) ಎನ್ನುವರು. ವ್ಯಕ್ತಿತ್ವವಿರದವನು ಕಲಾವಿದನಾಗಲಾರನು. ಆದರೀ ವ್ಯಕ್ತಿತ್ವವು ಅವನನ್ನು ಸಮಾಜದಿಂದ ದೂರಕ್ಕೊಯ್ಯುವಂತಹದ್ದಾಗಿದ್ದರೆ, ಅಥವಾ ಸಮಾಜ ಪೀಡಕ ಪರಿಸ್ಥಿತಿಯ ದೆಸೆಯಿಂದ ಆ ವ್ಯಕ್ತಿತ್ವದ ಬೆಳಕು ಬೀಳುತ್ತಿದ್ದರೆ, ಆ ಲೇಖಕನು ಕೆಲಸಕ್ಕೆ ಬಾರದವನಾಗಿರುವನು. ಅವನ ಲೇಖನ ಶಕ್ತಿಯು ಸಮಾಜವನ್ನು ಪ್ರಗತಿಪರವಾಗಿ ಮಾಡಲಾರದು. ಆದರೆ ಅವನ ವ್ಯಕ್ತಿತ್ವದಲ್ಲಿ ಸಮಾಜದ ಸುಖ ದುಃಖಗಳಿಗೊಂದು ಸ್ಥಾನವಿದ್ದಿದ್ದರೆ ಮಾತ್ರ, ಅದಕ್ಕೊಂದು ಮಹತ್ವ ಬರುವುದು. ಅದರಲ್ಲಿ ರಾಷ್ಟ್ರದ ಶಕ್ತಿಯು ಕೇಂದ್ರೀಭೂತವಾಗಿರುವುದು ಮತ್ತು ಅದನ್ನುಳ್ಳವನು ರಾಷ್ಟ್ರವನ್ನಲ್ಲಾಡಿಸುವ ಸಾಮರ್ಥ್ಯವುಳ್ಳವನಾಗುವನು ಎನ್ನುವ ಮಾತಿನಲ್ಲಿ ಯಾರು ಪ್ರಗತಿಪರ ಲೇಖಕರು ಎನ್ನುವುದನ್ನು ಅವರು ಹೇಳುವರು.

ಬರೆಹಗಾರನು ಬರೆಯುವುದೇತಕ್ಕೆ? ಏಕೆಂದರೆ, ಅವನ ಕಲ್ಪನಾ ಲೋಕದಲ್ಲಿ ಹೊಸದೊಂದು ಜಗತ್ತು ರೂಪುಗೊಂಡಿರುತ್ತದೆ. ಅವನಿಗೆ ಅನಿಸುವುದು, ತಾನು ಆ ಹೊಸ ಸೃಷ್ಟಿಯನ್ನು ಮುಟ್ಟಬಲ್ಲನೆಂದು. ಆದರೆ ಹಾಗೆ ಮಾಡುವ ಒಂದು ಉಪಾಯವು ಅವನಮಟ್ಟಿಗಿರುತ್ತದೆ; ಅದೆಂದರೆ ಅವನ ಆದರ್ಶದ ಸ್ಪುರದ್ದರ್ಶನವನ್ನು ಬೇರೆಯವರಿಗೆ ಮಾಡಿಸುವುದು. ಅಲ್ಲದೆ ವಾಸ್ತವಿಕ ಮತ್ತು ಕಾಲ್ಪನಿಕ ಜಗತ್ತುಗಳ ನಡುವಿನ ಅಂತರವನ್ನು ಜೋಡಿಸುವ ಸೇತುವೆಯನ್ನು ಕಟ್ಟುವುದು. ಲೇಖಕರು ಈ ಸಂಧಿಕಾರ್ಯವನ್ನು ಮಾಡುವರು. ಓದುಗರು ಕುತೂಹಲದಿಂದಲಾದರೂ ಈ ನವನಿರ್ಮಾಣವನ್ನು ಮೊಟ್ಟಮೊದಲು ದಿಟ್ಟಿಸಿದರೆ, ಅವರು ಸ್ವತಂತ್ರವಾಗಿಯೇ ಆ ಸೃಷ್ಟಿಯತ್ತ ಹೋಗಲು ಪ್ರಯತ್ನಿಸುವರು ಎನ್ನುವ ನೆಹರೂ ಲೇಖಕನ ಜವಾಬ್ದಾರಿಯನ್ನು ತಿಳಿಸಿಕೊಡುವರು. ಪ್ರಗತಿಶೀಲ ಚಿಂತನೆಯ ವಿಮರ್ಶೆಯ ಮಾನದಂಡಗಳನ್ನು ನಾವು ನೆಹರೂರವರ ಈ ಲೇಖನದಲ್ಲಿಯೇ ಕಂಡುಕೊಳ್ಳಬಹುದಾಗಿದೆ.

ಸಾಹಿತ್ಯ ವಿಮರ್ಶೆಯ ಮೂಲ ಪ್ರಶ್ನೆ ಅಂದರೆ ಕಲೆಗೂ ಜೀವನಕ್ಕೂ ಇರುವ ಸಂಬಂಧವನ್ನು ವಿವರಿಸುವುದು. ಈ ಒಂದು ಅಂಶದ ಮೇಲಿಂದಲೇ ವಿಮರ್ಶಕ, ಸಾಹಿತಿ, ಲೇಖಕರನ್ನು ಪುರೋಗಾಮಿ ಅಥವಾ ಪ್ರತಿಗಾಮಿ ಎಂದು ವಿಂಗಡಿಸಬಹುದು. ಪ್ರಗತಿಪರ ವಿಮರ್ಶೆ ಹೇಗಿರುತ್ತದೆ? ಪ್ರಗತಿಪರ ವಿಮರ್ಶಕನಿಗೆ ಕಲೆಯಾಗಲಿ ಸಾಹಿತ್ಯವಾಗಲಿ ಕಲೆಗಾರನ ಅಥವಾ ಸಾಹಿತಿಯ ವ್ಯಕ್ತಿಗತ ಸೊತ್ತಲ್ಲ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಕಲಾಕೃತಿಯೊಂದರ ಉಗಮಕ್ಕೆ ಆ ಕಲಾಕಾರನ ಬುದ್ಧಿಶಕ್ತಿಯೇ ಸಂಪೂರ್ಣ ಕಾರಣವಲ್ಲ. ಸಾಹಿತ್ಯ ಸೃಷ್ಟಿಯು ಸಾಮಾಜಿಕ ಪ್ರಜ್ಞೆಯ ವಿವಿಧ ಸ್ವರೂಪಗಳ ಪರಿಣಾಮವಾಗಿರುತ್ತದೆ. ಸಮಾಜವೇ ಸಾಹಿತ್ಯದ ಉಗಮಕ್ಕೆ ಕಾರಣ. ಈ ಕಾರಣಕ್ಕಾಗಿಯೇ ಸಾಹಿತ್ಯವನ್ನು ಸಮಾಜದ ಪ್ರತಿಬಿಂಬ ಎಂದು ಕರೆಯುವುದು. ಇಂಥ ಸಂದರ್ಭದಲ್ಲಿಯೇ ಸಾಹಿತ್ಯದಲ್ಲಿ ಸಮಕಾಲೀನತೆ ಎಂಬ ಮಾತು ಕೇಳಿ ಬಂದುದು. ಸಮಾಜವನ್ನು ಬಿಟ್ಟು ಸಾಹಿತಿ ಇಲ್ಲ. ಸಾಹಿತಿಯು ಸಮಾಜದ ಒಂದು ಅಂಗ. ಸಾಹಿತಿಯಾದವನು ತಾನು ಬದುಕಿದ ಸಮಾಜವನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸ ಬೇಕು ಎಂಬುದು ಪ್ರಗತಿಪರ ವಿಮರ್ಶಕನ ನಿಲುವಾಗಿರುತ್ತದೆ. ಆದರೆ ಪ್ರತಿಗಾಮಿ ವಿಮರ್ಶಕರ ನಿಲುವು ಇದಕ್ಕೆ ವಿರುದ್ಧವಾಗಿರುತ್ತದೆ. ಸಾಹಿತ್ಯ ಸೃಷ್ಟಿಯಲ್ಲಿ ಸಮಾಜದ ಪಾತ್ರವನ್ನು ಅವರು ಒಪ್ಪುವುದಿಲ್ಲ. ಅವರು ಕಲೆಗಾಗಿ ಕಲೆ ಎಂಬ ತತ್ವವನ್ನು ಮುಟ್ಟುವರು.

ಈ ಕಾರಣಕ್ಕಾಗಿಯೇ ಪ್ರಗತಿಶೀಲ ವಿಮರ್ಶಕರಿಗೂ ಪ್ರತಿಗಾಮಿ ವಿಮರ್ಶಕರಿಗೂ ಸಂಘರ್ಷ. ಕೃತಿಯನ್ನು ಕೃತಿಕಾರನಿಂದ ಬೇರ್ಪಡಿಸಿ ವಿಶ್ಲೇಷಿಸುವುದಕ್ಕೆ ಪ್ರಗತಿಪರ ವಿಮರ್ಶಕರ ವಿರೋಧವಿದೆ. ಏಕೆಂದರೆ ಹೀಗೆ ಮಾಡುವುದರಿಂದ ಒಂದು ಸಾಹಿತ್ಯ ಕೃತಿ ಹುಟ್ಟಿಕೊಂಡ ಸಾಂಸ್ಕೃತಿಕ, ಸಾಮಾಜಿಕ ಸಂದರ್ಭದಿಂದ ಕೃತಿಯನ್ನು ದೂರ ಮಾಡಿದಂತೆ ಎಂದು ಅವನು ಭಾವಿಸುತ್ತಾನೆ. ಕೃತಿಕಾರ ತನ್ನ ಕಾಲದ ಸಾಂಸ್ಕೃತಿಕ ಒತ್ತಡಗಳನ್ನು, ಸಾಮಾಜಿಕ ಸಂವೇದನೆಗಳನ್ನು ತನ್ನ ಕೃತಿಯಲ್ಲಿ ಹೇಗೆ ಮೈಗೂಡಿಸಿಕೊಂಡಿದ್ದಾನೆ ಎಂಬುದು ಆತನಿಗೆ ಮಹತ್ವದ್ದಾಗುತ್ತದೆ. ಸಮಕಾಲೀನತೆಯಿಂದ ಹೊರತಾದ ವಿಮರ್ಶೆಗೆ ಯಾವುದೇ ರೀತಿಯ ಸಾಂಸ್ಕೃತಿಕ ಜವಾಬ್ದಾರಿ ಇರುವುದಿಲ್ಲ. ಜನಪರ ತಾತ್ವಿಕ ಮೌಲ್ಯಗಳನ್ನು ಹೊಂದಿರುವುದಿಲ್ಲ.

ಪ್ರಗತಿಪರ ವಿಮರ್ಶಕನ ನಿಲುವು ನವ್ಯ ವಿಮರ್ಶೆಯನ್ನು ವಿರೋಧಿಸುವಂತಿವೆ. ಸಾಮಾನ್ಯವಾಗಿ ನವೋದಯ ಸಾಹಿತ್ಯದ ನಂತರ ಪ್ರಗತಿಶೀಲ ಸಾಹಿತ್ಯವನ್ನು ಹೆಸರಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಪ್ರಗತಿಶೀಲ ಚಿಂತನೆಗಳು ನವೋದಯ ಮತ್ತು ನವ್ಯ ಎರಡಕ್ಕೂ ಪ್ರತಿಕ್ರಿಯಾತ್ಮಕವಾಗಿ ಮೂಡಿವೆ. ಇದಕ್ಕೆ ಕಾರಣಗಳನ್ನು ಹುಡುಕಲು ಬಹಳ ದೂರ ಹೋಗಬೇಕಾಗಿಲ್ಲ. ಪ್ರಗತಿಶೀಲ ಚಳವಳಿ ಪ್ರಬಲವಾಗಿದ್ದ ಕಾಲದಲ್ಲಿ ಪ್ರಗತಿಶೀಲ ವಿಮರ್ಶೆ ಕನ್ನಡದಲ್ಲಿ ಬಲವಾಗಿ ಬೇರು ಬಿಡಲಿಲ್ಲ. ಆದರೆ ನವ್ಯೋತ್ತರ

ಕಾಲದಲ್ಲಿ ಬಂಡಾಯ ಮತ್ತು ದಲಿತ ಚಳವಳಿಯ ಕಾಲಕ್ಕೆ ಪ್ರಗತಿಪರ ವಿಮರ್ಶೆ ಬಲಗೊಂಡಿತು. ಪ್ರಗತಿಶೀಲ ಸಾಹಿತ್ಯವೇ ಬಂಡಾಯದ ರೂಪದಲ್ಲಿ ಮರುಹುಟ್ಟು ಪಡೆಯಿತು ಎನ್ನುವುದಕ್ಕೆ ಬೇರೆ ಪುರಾವೆ ಬೇಕಿಲ್ಲ. ಪ್ರಗತಿಶೀಲ ಕಾಲದಲ್ಲಿ ಆ ಚಳವಳಿಯಲ್ಲಿದ್ದವರು ಸಾಹಿತ್ಯ ಸೃಷ್ಟಿಗೆ ಹೆಚ್ಚಿನ ಮಹತ್ವಕೊಟ್ಟರು. ವಿಮರ್ಶೆಯನ್ನು ಕಡೆಗಣಿಸಿದರು. ಅನಕೃ ಅಂಥವರಿಗೆ ತಮ್ಮ ಕೃತಿಯ ಬಗ್ಗೆ ಟೀಕೆಗಳು ಬಂದರೆ ತೀವ್ರ ಅಸಹನೆ ಉಂಟಾಗುತ್ತಿತ್ತು ಎಂಬ ಮಾತನ್ನು ಈಗಾಗಲೆ ಹೇಳಲಾಗಿದೆ. ಪ್ರಗತಿಶೀಲ ಚಳವಳಿ ಉಗ್ರವಾಗಿದ್ದ ಕಾಲದಲ್ಲಿ ನವೋದಯದ ಉದ್ದಾಮ ಸಾಹಿತಿಗಳು ಇನ್ನೂ ಕೃತಿ ರಚನೆಯಲ್ಲಿ ತೊಡಗಿದ್ದರು. ನವೋದಯದ ಸವಾಲುಗಳಿಗೆ ಪ್ರಗತಿಶೀಲರು ಸಮರ್ಪಕವಾಗಿ ಉತ್ತರಿಸುವುದು ಸಾಧ್ಯವಾಗಲಿಲ್ಲ. ಅಲ್ಲದೆ ನವ್ಯ ಸಾಹಿತ್ಯವು ಪ್ರಗತಿಶೀಲರು ನವೋದಯದ ವಿರುದ್ಧ ಎತ್ತಿದ ಆಕ್ಷೇಪಗಳನ್ನು ತಮ್ಮ ಸಾಹಿತ್ಯ ಮಾರ್ಗದ ಸಮರ್ಥನೆಗೆ ಬಳಸಿಕೊಂಡರು. ನವ್ಯದವರು ನವ್ಯ ಕೃತಿಗಳ ವಿಮರ್ಶೆಗೆ ಹೊಸ ಮಾನದಂಡಗಳನ್ನು ಸೃಷ್ಟಿಸಿದರು. ನವೋದಯ ಮತ್ತು ನವ್ಯದವರಿಬ್ಬರಿಗೂ ನವ್ಯೋತ್ತರ ಕಾಲದಲ್ಲಿ ಪ್ರಗತಿಶೀಲ ದೃಷ್ಟಿಕೋನದಿಂದ ಉತ್ತರವನ್ನು ನೀಡಲಾಯಿತು. ನವೋದಯ ಕಾಲದಲ್ಲಿ ಕವಿಗಿದ್ದ ಶ್ರೇಷ್ಠತೆ ಇಲ್ಲಿ ಕಡಿಮೆಯಾಗಿಬಿಡುತ್ತದೆ. ಕವಿ ಇಲ್ಲಿ ಸರ್ವತಂತ್ರ ಸ್ವತಂತ್ರನಲ್ಲ.

೧೯೫೫ರ 'ಕನ್ನಡ ನುಡಿ'ಯ ವಿಶೇಷಾಂಕದಲ್ಲಿ ನಿರಂಜನರು ಬರೆದ ಲೇಖನವೊಂದು ಪ್ರಕಟವಾಗಿದೆ. ಅದರಲ್ಲಿ ಅವರು ಸಾಹಿತ್ಯ ವಿಮರ್ಶೆ ಹೇಗಿರಬೇಕು ಎಂಬ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಜೀವನವನ್ನು ವೈಜ್ಞಾನಿಕವಾಗಿ ನೋಡಲೊಪ್ಪದ, ಬದುಕಿಗೂ ಸಾಹಿತ್ಯಕ್ಕೂ ಸಂಬಂಧವಿದೆಯೆಂದು ನಂಬದ, ಕೆಲವರು ವಿಮರ್ಶೆಯ ಕಾರ್ಯಕ್ಕೆ 'ಶುದ್ಧ ಸಾಹಿತ್ಯ'ದ ಅಳತೆಗೋಲನ್ನು ಬಳಸುವುದುಂಟು. 'ಕಲೆಗಾಗಿ ಕಲೆ' ಎನ್ನುವ ಘೋಷವನ್ನು ಮುಂದಿಡುವವರೂ ಅದೇ ಜನ. ವಿಚಾರದ ಅಂಶ ಎಳ್ಳಿನಷ್ಟೂ ಇಲ್ಲದ ಸಾಹಿತ್ಯವೊಂದೇ ಅವರ ದೃಷ್ಟಿಯಲ್ಲಿ ಶುದ್ಧ ಸಾಹಿತ್ಯ. ಬರೆಯುವ ಚಟಕ್ಕೋಸ್ಕರ ಬರೆದರಾಯಿತು. ಏನನ್ನು ಬೇಕಾದರೂ, ಉದ್ದಕ್ಕೂ ಕುಣಿಯುವ ಪದಗಳ ಮೋಹಕ ಜೋಡಣೆ. ಸಮಾಜದಲ್ಲಿನ ಅತ್ಯಂತ ಪ್ರಭಾವಶಾಲಿ ಶಕ್ತಿಯಾದ ಸಾಹಿತ್ಯವನ್ನು ನಿರ್ವೀರ್ಯಗೊಳಿಸಬಲ್ಲವರೇ 'ಶುದ್ಧ ಸಾಹಿತ್ಯ'ದ ಮಾತನ್ನಾಡುತ್ತಾರೆ. ಜನಜಾಗೃತಿಗೆ ಹೆದರುವವರೇ 'ಪರಿಶುದ್ಧ ಕಲೆ'ಯ ಬಡಬಾವುಟವನ್ನೆತ್ತಾರೆ ಎನ್ನುವ ಮಾತುಗಳಲ್ಲಿ ಸಾಹಿತ್ಯ ಕೃತಿಯನ್ನು ಯಾವ ಮಾನದಂಡದಿಂದ ಅಳೆಯಬೇಕು ಎಂಬ ಬಗೆಗೆ ಸಲಹೆ ಇದೆ. ಸೌಂದರ್ಯವೆನ್ನುವುದು ಮಾಯೆ, ಸೌಂದರ್ಯದ ಸಾಕ್ಷಾತ್ಕಾರ ಒಳಗಣ್ಣಿಗೆ ಮಾತ್ರ ಆಗುವಂಥದ್ದು. ಕಲಾಕೃತಿಯ ಸನ್ನಿಧಿಯಲ್ಲಿ ತನಗುಂಟಾಗುವ ಭಾವಗಳನ್ನು ವ್ಯಕ್ತಗೊಳಿಸುವದಷ್ಟೇ ವಿಮರ್ಶಕನ ಹೊಣೆ ಎಂಬೆಲ್ಲ ಮಾತುಗಳಿಗೆ ನಿರಂಜನರ ಸಮ್ಮತಿ ಇಲ್ಲ. ಇಂಥ ಧೋರಣೆಯಿಂದ ಸಾಹಿತಿಗಾಗಲೀ ಸಮಾಜಕ್ಕಾಗಲೀ ಒಳಿತಾಗದೆಂಬುದು ಅವರ ಸ್ಪಷ್ಟ ವಿಚಾರ.

ಹಾಗಾದರೆ ವಿಮರ್ಶಕ ಏನು ಮಾಡಬೇಕು? ಸಾಹಿತ್ಯ ಕೃತಿಯಲ್ಲಿ ಸೃಷ್ಟಿಯಾಗಿರುವ ಪ್ರತಿಬಿಂಬವನ್ನು ಮೂಲದೊಡನೆ ಹೋಲಿಸಿ ನೋಡುವುದೇ ಮೊದಲ ಹೆಜ್ಜೆ. ಪ್ರತಿಯೊಂದು ಕೃತಿಯೂ ವಾಸ್ತವ ಬದುಕಿನ ಕಾಲ್ಪನಿಕ ಪ್ರತಿಬಿಂಬ. ಆ ರೀತಿಯ ತುಲನೆಯೊಡನೆ ಮೂಡಿ ಬರುವ ಪ್ರಶ್ನೆಗಳಿವು: ಆರಿಸಿಕೊಂಡಿರುವ ವಸ್ತುವಿನ ವಿಷಯದಲ್ಲಿ ಬರೆಹಗಾರನ ದೃಷ್ಟಿ ಪ್ರಾಮಾಣಿಕವಾಗಿದೆಯೆ? ಅದನ್ನು ಆಂತರಿಕ ಪ್ರೇರಣೆಯಿಂದ ಆತ ಬರೆದಿರುವನೆ? ಕೃತಿಯಲ್ಲಿ ಪ್ರತಿಪಾದಿತವಾಗಿರುವ ವಿಚಾರದ ಮೌಲ್ಯವೆಷ್ಟು? ಯುಗಧರ್ಮ ಆ ಕೃತಿಯಲ್ಲಿ ಪ್ರತಿಧ್ವನಿತವಾಗಿದೆಯೆ? ಅದು ಕಲೆಯೆ ಅಥವಾ ಬರಿಯ ವಿಚಾರಗಳ ನೀರಸ ಧೋರಣೆಯೆ? ಆತ ತೋರಿರುವ ಕಲಾವಂತಿಕೆಯ ಶ್ರದ್ಧೆ ಎಷ್ಟು? ಸಮಕಾಲೀನ ಸಾಹಿತ್ಯದಲ್ಲಿ ಅದರ ಸ್ಥಾನಗಳೇನು?- ಈ ಎಲ್ಲ ಪ್ರಶ್ನೆಗಳಿಗೆ ದೊರೆಯುವ ತರ್ಕಬದ್ಧ ಉತ್ತರವೇ ವಿಮರ್ಶೆ ಎಂಬಲ್ಲಿ ಪ್ರಗತಿಶೀಲ ವಿಮರ್ಶಕನಿಗೆ ಸ್ಪಷ್ಟ ಸೂಚನೆಗಳಿವೆ.

ಪ್ರಗತಿಶೀಲ ಸಾಹಿತ್ಯಕೃತಿ ಹೇಗಿರಬೇಕು ಎನ್ನುವುದಕ್ಕೆ ನಿರಂಜನರು ಕೆಲವು ಬೆಲೆಯುಳ್ಳ ಮಾತುಗಳನ್ನು ಅಲ್ಲಿಯೇ ಹೇಳಿದ್ದಾರೆ. ಒಂದು ಕೃತಿಯ ವಾಚನದಿಂದ ಓದುಗ ಹೆಚ್ಚು ಬುದ್ಧಿವಂತನಾದರೆ, ಮನುಷ್ಯರನ್ನೂ ಸಮಾಜವನ್ನೂ ಕುರಿತಾದ ಅವನ ತಿಳಿವಳಿಕೆ ಹೆಚ್ಚಿದರೆ, ಆ ಸೃಷ್ಟಿ ಸಾರ್ಥಕವಾದಂತೆಯೇ. ಓದಿದ ಬಳಿಕ ಪರಿಹಾರ ತನ್ನಿಂ ತಾನಾಗಿಯೇ ಸ್ಪಷ್ಟವಾಗುವಂತಹ ಕೃತಿಯೇ ಉತ್ತಮವಾದದ್ದು. ಕೃತಿಯಲ್ಲಿ ಅಡಕವಾಗಿರುವ ಯಾವುದೇ ವಿಚಾರ, ಕಥೆಯ ಬೆಳವಣಿಗೆಯೊಡನೆ ಸನ್ನಿವೇಶಗಳೊಡನೆ ಒಂದುಗೂಡಿ ತೋರಬೇಕಲ್ಲದೆ, ತಾನೇ ಪ್ರತ್ಯೇಕವಾಗಿ ಕಾಣಿಸಿಕೊಳ್ಳಬಾರದು. ಇದು ಒಬ್ಬ ಪ್ರಗತಿಶೀಲನ ದೃಷ್ಟಿಯಲ್ಲಿ ಸಾಹಿತ್ಯ ಕೃತಿ ಇರಬೇಕಾದ ರೀತಿ. ನಿರಂಜನರಂಥ ಬದ್ಧತೆಯುಳ್ಳ ಲೇಖಕ ಇದನ್ನು ಸಾಹಿತ್ಯ ಪತ್ರಿಕೆಯೊಂದರಲ್ಲಿ ಪ್ರತಿಪಾದಿಸಿದಾಗ ಅದು ನಿಜಕ್ಕೂ ಮಾರ್ಗದರ್ಶಕ ಮಾತುಗಳಾಗುತ್ತವೆ.

ಒಂದು ಕಲಾಕೃತಿಯ ಮೌಲ್ಯ ಮಾಪನಕ್ಕೆ ತೊಡಗುವ ಪ್ರಗತಿಶೀಲ ವಿಮರ್ಶಕನಿಗೆ ಆ ಕಲಾಕೃತಿ ನಮ್ಮ ಸಾಮಾಜಿಕ ಸತ್ಯವನ್ನು ಎಷ್ಟು ಸ್ಪಷ್ಟವಾಗಿ ಮತ್ತು ಕಲಾತ್ಮಕವಾಗಿ ಒಡಮೂಡಿಸುತ್ತದೆ ಎಂಬುದು ಮುಖ್ಯ ಕಾಳಜಿಯಾಗುತ್ತದೆ. ಸಾಮಾಜಿಕ ಸತ್ಯದ ಮೂಲಕವೇ ಸಮಾಜಿಕ ಪ್ರಜ್ಞೆಯ ಸ್ವರೂಪವನ್ನು ಆತ ವಿಶ್ಲೇಷಿಸುತ್ತಾನೆ. ಪ್ರಗತಿಶೀಲರಿಗೂ ಉಳಿದವರಿಗೂ ಇರುವ ವ್ಯತ್ಯಾಸವೇನು? ಪ್ರಗತಿ ವಿರೋಧಿ ಸಾಹಿತ್ಯ ಮತ್ತು ವಿಮರ್ಶೆಗಳು ವಿವಿಧ ಸಾಮಾಜಿಕ ಶಕ್ತಿಗಳ ಅಸ್ತಿತ್ವವನ್ನು ಗುರುತಿಸುವ ಮಟ್ಟಿಗೆ ಹೋದರೂ ಅವುಗಳ ಸ್ವಭಾವದ ಕುರಿತು ಚಿಂತಿಸುವ ಮಟ್ಟಿಗೆ ಹೋಗುವುದಿಲ್ಲ. ಆದ್ದರಿಂದ ಈ ವರ್ಗಕ್ಕೆ ಸೇರಿದ ವಿಮರ್ಶಕರು ವ್ಯಕ್ತಿಗತ ದೃಷ್ಟಿಕೋನವನ್ನು ಸಮಾಜದ ಮೇಲೆ ಹೇರುವರು. ಈ ಮೂಲಕ ಸಾಹಿತ್ಯ ಮತ್ತು ಕಲೆಯನ್ನು ಜನರಿಂದ ದೂರ ಮಾಡುವರು. ಇದು ಅಂತಿಮವಾಗಿ ಅಂತರ್ಮುಖತೆಯೋ, ಆತ್ಮ ಪ್ರಜ್ಞೆಯೋ, ಕಲೆಗಾಗಿ ಕಲೆಯೋ ಘೋಷಣೆಯಲ್ಲಿ ಪರ್ಯಾವಸಾನವಾಗಿಬಿಡುವುದು.

ಲೇಖಕ ತನ್ನ ಕಾಲದ ಸಮಾಜದೊಂದಿಗೆ ಹೊಂದಿರುವ ಸಂಬಂಧವನ್ನು ಅಳೆಯಲು ಬೌದ್ಧಿಕ, ಸೈದ್ಧಾಂತಿಕ ಅಂಶಗಳು ಶ್ರೇಷ್ಠ ಒರೆಗಲ್ಲುಗಳು ಎಂದು ಭಾವಿಸುವ ಪ್ರಗತಿಶೀಲ ವಿಮರ್ಶಕನು ಕೃತಿಯ ಮೌಲ್ಯ ನಿರ್ಣಯ ಮಾಡುವಾಗ ಬೌದ್ಧಿಕ, ಸೈದ್ಧಾಂತಿಕ ಮತ್ತು ಕಲಾತ್ಮಕ ಅಂಶಗಳನ್ನು ಒಗ್ಗೂಡಿಸಿ ನೋಡುವನು. ವಸ್ತು ಸಮಾಜದ್ದು. ಅದನ್ನು ಆಯ್ದುಕೊಂಡು ಕಲಾತ್ಮಕ ಜೋಡಣೆ ಮಾಡಬೇಕಾಗುತ್ತದೆ. ಈ ರೀತಿಯ ಜೋಡಣೆ ಮಾಡುವಾಗ ಬುದ್ಧಿಯನ್ನು ಸೈದ್ಧಾಂತಿಕ ಸ್ಪಷ್ಟತೆಯೊಂದಿಗೆ ದುಡಿಸಿಕೊಳ್ಳಬೇಕಾಗುತ್ತದೆ. ಕೃತಿಯಲ್ಲಿ ಪ್ರತಿಬಿಂಬಿತವಾಗುವ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬುದ್ಧಿಮತ್ತೆಗಳು ಕೃತಿಯ ಸ್ವಭಾವವನ್ನು ನಿರ್ಧರಿಸುತ್ತವೆ ಎಂಬುದು ಪ್ರಗತಿಶೀಲರ ಸಿದ್ಧಾಂತ. ಸಾಹಿತ್ಯ ಕೃತಿ ಸಮಾಜವನ್ನು ಮುಂದಕ್ಕೆ ಒಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿರಬೇಕು, ಆ ಮೂಲಕ ಅದು ಜ್ಞಾನವನ್ನೊದಗಿಸಬೇಕು. ಇದನ್ನು ನಿರಾಕರಿಸುವುದೆಂದರೆ ಕಲಾತ್ಮಕ ಸತ್ಯ ಮತ್ತು ಜ್ಞಾನದ ಸಾಧ್ಯತೆಯನ್ನು ಅಲ್ಲಗಳೆದಂತೆ. ಪ್ರಗತಿಪರ ವಿಮರ್ಶಕ ಕಲೆ ಮತ್ತು ಸತ್ಯವನ್ನು ಹೋಲಿಸಿ ನೋಡುವನು.

ಪ್ರಗತಿಶೀಲ ವಿಮರ್ಶೆಯು ಇಷ್ಟೊಂದು ಸಿದ್ಧಾಂತಪರವಾಗಿದ್ದರೂ ನವೋದಯದಿಂದ ಪೂರ್ತಿಯಾಗಿ ಹೊರಬರುವುದು ಅದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಪ್ರಗತಿಶೀಲ ಸಾಹಿತ್ಯ ಮೀಮಾಂಸೆಯು ಎತ್ತಿದ ಪ್ರಶ್ನೆಗಳು ನಮ್ಮ ದೇಶದ ಮಾದರಿಗಳಲ್ಲ ಎನ್ನುವ ಪ್ರತಿಕ್ರಿಯೆ ಕನ್ನಡದಲ್ಲಿ ಮೂಡಿದ್ದು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರಷ್ಯಾದಲ್ಲಿ ಸಂಭವಿಸಿದ ಆಗಸ್ಟ್ ಕ್ರಾಂತಿ, ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷದ ಉದಯ ಮೊದಲಾದವುಗಳಿಂದ ಕೆಲವು ಪ್ರಗತಿಪರ ಲೇಖಕರ ತಾತ್ವಿಕ ಬದ್ಧತೆಯಿಂದಾಗಿ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡಿದ್ದು. ಅದು ಚಳವಳಿ ಎನಿಸಿಕೊಂಡ ಕಾರಣ ಅದರ ಪ್ರಚಾರ ವೇದಿಕೆಗಳ ಮೂಲಕವೇ ನಡೆಯಿತು. ಕೆಲವೊಮ್ಮೆ ಅದು ಭೂಗತ ಚಟುವಟಿಕೆಯಾಗಿಬಿಡುತ್ತದೆ. ನಿರಂಜನರಂಥವರೂ ಕೆಲವು ಕಾಲ ಭೂಗತರಾಗಿದ್ದರು. ಇಂಥ ಸನ್ನಿವೇಶದಲ್ಲಿ ಪ್ರಗತಿಶೀಲ ಸಾಹಿತ್ಯವನ್ನು ಬೆಳೆಸುವ ಉದ್ದೇಶದಿಂದಲೇ ಪತ್ರಿಕೆಗಳು ಹುಟ್ಟಿಬರಲಿಲ್ಲ. ಉಷಾ, ವಾಣಿ, ಚಿತ್ರಗುಪ್ತ ಮುಂತಾದ ಇರುವ ಕೆಲವು ಪತ್ರಿಕೆಗಳಲ್ಲಿಯೇ ಪ್ರಗತಿ ಪಂಥದ ಪ್ರತಿಪಾದನೆ, ಪ್ರಗತಿಶೀಲರ ಕೃತಿಗಳ ಖಂಡನೆ, ಸಮರ್ಥನೆಗಳು ನಡೆದವು. ಈ ಕಾರಣದಿಂದ ಕನ್ನಡ ಪ್ರಗತಿಶೀಲ ಸಾಹಿತ್ಯ ವಾಹಿನಿಯ ಬೆಳವಣಿಗೆಗೆ ಪತ್ರಿಕೆಗಳ ಕೊಡುಗೆ ಸೀಮಿತವಾದದ್ದು ಎಂದೇ ಹೇಳಬೇಕು. ಪ್ರಗತಿಶೀಲ ವಿಚಾರಧಾರೆಯೇ ಮುಂದೆ ನವ್ಯೋತ್ತರ ಕಾಲದಲ್ಲಿ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಗಟ್ಟಿತನದೊಂದಿಗೆ ಮೈ ತಳೆಯುತ್ತದೆ. ಆಗ ಅವಕ್ಕೆ ಸಾಹಿತ್ಯಪತ್ರಿಕೆಗಳ ಬೆಂಬಲವೂ ದೊರೆಯುತ್ತದೆ.

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಗತಿಶೀಲಪರ್ವ ವಿಫಲ ಪ್ರಯೋಗ ಅಲ್ಲ. ನವ್ಯೋತ್ತರ ಕಾಲದಲ್ಲಿ ಅದು ಮರುಹುಟ್ಟು ಪಡೆಯುತ್ತದೆ.

ಸ್ವಾತಂತ್ರ್ಯದ ಭ್ರಮನಿರಸನ:

ನವೋದಯ ಕಾಲದಲ್ಲಿ ಸ್ವಾತಂತ್ರ್ಯ ಗಳಿಕೆ ಸಾಹಿತಿಗಳ ಧ್ಯೇಯವಾಗಿತ್ತು. ಪ್ರಗತಿಶೀಲರ ಕಾಲದಲ್ಲಿ ಸುಖೀ ಸಮಾಜ ಸಾಧನೆ ಆದರ್ಶವಾಗಿತ್ತು. ೧೯೪೭ರಲ್ಲಿ ದೇಶ ಸ್ವಾತಂತ್ರ್ಯವನ್ನು ಗಳಿಸಿತು. ಗಳಿಸಿದ ಸ್ವಾತಂತ್ರ್ಯ ಜನರಲ್ಲಿದ್ದ ಅಪಾರವಾದ ನಿರೀಕ್ಷೆಗಳನ್ನು ನಿಜಗೊಳಿಸಲಿಲ್ಲ. ಇದರಿಂದಾಗಿ ಸ್ವಾತಂತ್ರ್ಯದ ಬಗೆಗೆ ಇದ್ದ ಭ್ರಮೆಗಳೆಲ್ಲ ನಿರಸನಗೊಂಡವು. ಇಂಥ ಭ್ರಮನಿರಸನವನ್ನು ಅಭಿವ್ಯಕ್ತಿಸಬೇಕಾದ ಸಾಹಿತ್ಯ ಅದುವರೆಗಿನ ದೇಶನಿಷ್ಠೆಯ ಸಾಹಿತ್ಯದಿಂದ ಭಿನ್ನರೂಪ ಪಡೆಯುವುದು ಅನಿವಾರ್ಯವಾಯಿತು. ಇದು ನವ್ಯ ಸಾಹಿತ್ಯದ ರೂಪದಲ್ಲಿ ಪ್ರಕಟಗೊಂಡಿತು.

ಕನ್ನಡದಲ್ಲಿ ನವ್ಯ ಸಾಹಿತ್ಯ ವ್ಯಾಪಕ ಪ್ರಚಾರವನ್ನು ಪಡೆದದ್ದು ಹಾಗೂ ಈ ಸಾಹಿತ್ಯಕ್ಕೊಂದು ಸಿದ್ಧಾಂತವನ್ನು ಕಟ್ಟಿದ್ದು ಐವತ್ತರ ದಶಕದಲ್ಲಿಯೇ. ಇದಕ್ಕೂ ಪೂರ್ವದಲ್ಲಿಯೇ ನವ್ಯ ಸಂವೇದನೆಯ ಕಥೆಗಳು ಪ್ರಕಟವಾಗಿದ್ದನ್ನು ವಿಮರ್ಶಕರು ಗುರುತಿಸಿದ್ದಾರೆ. ಆದರೆ ನವೋದಯ ಸಾಹಿತ್ಯದ ಆಶಯಗಳ ವಿರುದ್ಧವಾಗಿ ನವ್ಯವನ್ನು ತಂದು ಪ್ರತಿಷ್ಠಾಪಿಸಿದ್ದು ಐವತ್ತರ ದಶಕದಲ್ಲಿಯೇ. ನವ್ಯ ಸಾಹಿತ್ಯ ರಚನೆಯಾಗುತ್ತಿದ್ದಂತೆಯೇ ಅದರ ಬಗೆಗೆ ವ್ಯಾಪಕವಾದ ಪರ ವಿರೋಧ ಅಭಿಪ್ರಾಯಗಳ ಮಂಡನೆ ಆ ಕಾಲದಲ್ಲಿ ಪತ್ರಿಕೆಗಳಲ್ಲಿ ನಡೆದಿದೆ. ಸುಮಾರು ಮೂರು ದಶಕಗಳ ಕಾಲ ನವ್ಯದ ಖಂಡನೆ ಮತ್ತು ಅದರ ಪರ ವಕಾಲತ್ತು ನಡೆಯಿತು. ನವ್ಯ ಸಾಹಿತ್ಯ ಇಂದು ಸಾಹಿತ್ಯ ಚರಿತ್ರೆಯ ಒಂದು ಭಾಗವಾಗಿದೆ, ನಿಜ. ಆದರೆ ಅದು ಕನ್ನಡ ಸಾಹಿತ್ಯಕ್ಕೆ ನೀಡಿದ ಕಾಯಕಲ್ಪ ಅತಿ ವಿಶಿಷ್ಟವಾದದ್ದು. ಇದರಲ್ಲಿ ಪತ್ರಿಕೆಗಳ ಪಾತ್ರವಂತೂ ಇದ್ದೇ ಇದೆ. ನವ್ಯ ಸಾಹಿತ್ಯ ಪ್ರಬಲವಾಗಿದ್ದ ಐವತ್ತು, ಅರವತ್ತು ಮತ್ತು ಎಪ್ಪತ್ತರ ದಶಕಗಳಲ್ಲಿ ನವ್ಯವು ಕನ್ನಡದ ಸಂದರ್ಭದಲ್ಲಿ ತಲೆದೋರಿದ ಅಗತ್ಯದ ಬಗೆಗೆ ಪತ್ರಿಕೆಗಳಲ್ಲಿ ವಾಗ್ವಾದಗಳು ನಡೆದಿವೆ. ನವ್ಯದ ಹುಟ್ಟಿನ ಬಗೆಗಿನ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ನೀಡುವ ಪ್ರಯತ್ನವನ್ನೂ ಅಲ್ಲಿ ಮಾಡಲಾಗಿದೆ. ಕನ್ನಡದ ಖ್ಯಾತ ನಾಮರೇ ಇಂಥ ವಾಗ್ವಾದದಲ್ಲಿ ಭಾಗಿಯಾಗಿದ್ದಾರೆ.

'ಸಮುದ್ರ ಗೀತಗಳು' ಕನ್ನಡ ಕಾವ್ಯದಲ್ಲಿ ಹೊಸ ಸಾಧ್ಯತೆಯನ್ನು ತೆರೆದಿಡುತ್ತದೆ. ಇಲ್ಲಿಯ ಕಾವ್ಯ ವಿಷಯ, ಛಂದಸ್ಸು, ಹೊಸ ಹೊಸ ಲಯಗಳು, ರೂಪಕಗಳು, ಸಂಕೇತಗಳು, ಪ್ರತಿಮೆಗಳ ಪ್ರಯೋಗ ವಿಶಿಷ್ಟವಾದದ್ದು. ಇವೆಲ್ಲವನ್ನು ತಂದ ವಿ.ಕೃ.ಗೋಕಾಕರು ನವ್ಯಕಾವ್ಯದ ಪ್ರವರ್ತಕರಾಗಿದ್ದಾರೆ. ಇವುಗಳಲ್ಲಿ ಗೋಕಾಕರು ನೂರಕ್ಕೆ ನೂರರಷ್ಟು ಯಶಸ್ವಿಯಾಗದಿದ್ದರೂ 'ಸಮುದ್ರ ಗೀತಗಳು' ಕನ್ನಡ ನವ್ಯ ಕಾವ್ಯದ ಧ್ವಜವನ್ನು ಎತ್ತಿ ಹಿಡಿಯಿತು ಎಂದು ಹೇಳಬೇಕು. ಸಮುದ್ರದಾಚೆಗೆ ತೆರಳಿದ ಕವಿಯಲ್ಲಿ ಹೊಸ ಹೊಸ ಭಾವಗಳು ಮೊಳಕೆಯೊಡೆದಿದ್ದವು. ಸಂಕುಚಿತ ವಲಯದಿಂದ ಸ್ವಚ್ಛಂದ ಸಮುದ್ರದ

ಸಾನ್ನಿಧ್ಯದಲ್ಲಿ ಛಂದಸ್ಸಿನ ಕಟ್ಟುಗಳನ್ನು ಕಳೆದುಕೊಳ್ಳುವುದು ಅನಿವಾರ್ಯ ಎನ್ನಿಸಿತು ಗೋಕಾಕರಿಗೆ. ಆದಕ್ಕಾಗಿಯೇ ಅವರು,

'ಸಮುದ್ರವ ಸೆರೆಹಿಡಿದವರುಂಟೆ?
ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು!'

ಎಂದು ಕರೆ ಕೊಟ್ಟರು. ಮಹಾನ್ ಸಮುದ್ರವನ್ನು ಕಂದ, ಷಟ್ಪದಿ, ವೃತ್ತ ಸಾಂಗತ್ಯಗಳಲ್ಲಿ ಹಿಡಿದಿಡುವುದು ಸಮುದ್ರವನ್ನು ಸ್ವತಃ ನೋಡಿದವರು ಮಾಡುವ ಕೆಲಸವಲ್ಲ. 'ಯಾವುದೇ ಬಂಧನಕ್ಕೆ ಒಳಗಾಗದ ಸಮುದ್ರವನ್ನು ವರ್ಣಿಸುವಾಗ ಛಂದಸ್ಸಿನ ಬಂಧನವೇಕೆ?' ಎಂಬುದು ಅವರ ನಿಲುವು. ಆದಕ್ಕಾಗಿ ಅವರು ಸಮುದ್ರಕ್ಕೆ ಸ್ವಾತಂತ್ರ್ಯವನ್ನು ಘೋಷಿಸುತ್ತಾರೆ.

ನೀರು ನೀರಾಗಿ ಬೆಳಗು
ನಾದಮಯವಾಗು ಹೊರಗು ಒಳಗು
ಹಿಗ್ಗು ಹಿಗ್ಗಾಗಿ ಹರಿ, ತಗ್ಗು ತಗ್ಗಾಗಿ ಸರಿ
ಉಕ್ಕಲಿ ಚಿಮ್ಮಲಿ ಸಮುದ್ರದ ಸ್ವಾತಂತ್ರ್ಯ!

ಸಮುದ್ರದ ಸಕಲ ಮುಖಗಳನ್ನು ಛಂದ ಮುಕ್ತ ವರ್ಣನೆಯಲ್ಲಿ ಹಿಡಿದಿಡುವುದು ಸಾಧ್ಯ. ಹೇಗೆ ಸಮುದ್ರವು ವಿಶಾಲವಾಗಿದೆಯೋ ಅದೇ ರೀತಿ ಕಾವ್ಯದ ಅಭಿವ್ಯಕ್ತಿ ಸಾಧ್ಯತೆಗಳೂ ವಿಶಾಲವಾದದ್ದು ಎಂಬ ನಂಬಿಕೆ ಗೋಕಾಕರದ್ದು. ಆದಕ್ಕಾಗಿಯೇ ಈ ಅಭಿವ್ಯಕ್ತಿ ಮಾರ್ಗದಲ್ಲಿ ಅಡ್ಡಿಗಳಾಗಿ ಬರುವ ಛಂದದ ಬಂಧವನ್ನು ಅವರು ಹರಿದೊಗೆಯುತ್ತಾರೆ.

ಹೊಸದೆಲ್ಲ ಹುಟ್ಟಿ ಬರಲಿ
ಬೇಡಯ್ಯ ಬಂಧಗಳ ಬಂಧಿವಾಸ;
ಸಾಕಯ್ಯ ವೃತ್ತಗಳಾವರ್ತ
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ

ಎಂದು ಹಾರೈಸುತ್ತಾರೆ. ಛಂದಸ್ಸನ್ನು ಬಿಟ್ಟು ಕಾವ್ಯ ರಚನೆ ಇಲ್ಲದ ಅಂದಿನ ದಿನದಲ್ಲಿ ಇದೊಂದು ದೊಡ್ಡ ಸಾಹಸದ ಮಾತೇ ಸರಿ. ನವೋದಯದ ಆರಂಭದಲ್ಲಿ ಆದಿ ಪ್ರಾಸವನ್ನು ತೊರೆಯುವಾಗ ಗೋವಿಂದ ಪೈಗಳ ತೊಳಲಾಟವನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಅದೇ ರೀತಿಯ ಸಂಕಟವನ್ನು ಗೋಕಾಕರೂ ಅನುಭವಿಸುತ್ತಾರೆ. ಛಂದಸ್ಸಿನ ಕಟ್ಟನ್ನು ಕಿತ್ತೊಗೆಯಲು ಗೋಕಾಕರಿಗೆ ಗೋವಿಂದ ಪೈಗಳೇ ಪ್ರೇರಣೆಯಾಗಿರಬಹುದು. ಸಂಪ್ರದಾಯದ ಕಟ್ಟನ್ನು ಕಿತ್ತೊಗೆಯುವಾಗ ಕವಿಗೆ ಆತಂಕ ಸಹಜವಾಗಿ ಕವಿದಿದೆ. ತಮ್ಮನ್ನು ಗೇಲ್ ಮಾಡುವವರಿಗೆ ಅವರ ಸಮಾಧಾನದ ನುಡಿ ಹೀಗಿದೆ;

'ಸ್ವಚ್ಛಂದ ಛಂದದಲ್ಲಿ

ಜಲಕ್ರೀಡಾ ವೃತ್ತದಲ್ಲಿ
ಅನುದಿನವು ತೆರೆಗಳು ಹಿಡಿವ ತಾಳಲಯದಲ್ಲಿ
ಗೀತವನೊರೆದೆನೆಂದು ಗೀಳ್ ಮಾಡಬೇಡ'

ನವೋನವವಾದ ಸಮುದ್ರದ ಅನುಭವವನ್ನು ವರ್ಣಿಸುವಾಗ ಇಂಥ ಸ್ವಾತಂತ್ರ್ಯ ಕವಿಗೆ ಅನಿವಾರ್ಯ ಎಂಬುದು ಗೋಕಾಕರ ನಿಲುವು. ಅದಕ್ಕಾಗಿಯೇ ಅವರು ಕವಿಗಳಿಗೆ ಕೊಡುವ ಕರೆ ಗಮನಾರ್ಹವಾದದ್ದು-

ವೃತ್ತ ಬಂಧಗಳು ಸಂಧಿಸಿ ಬಂದ
ಸಮುದ್ರವಾಗು ಕವಿಯೇ!
ಕವಿಗಳ ಸಮುದ್ರಗುಪ್ತನಾಗು!

ಇತಿಹಾಸದಲ್ಲಿ ಸಮುದ್ರಗುಪ್ತನ ಕಾಲ ಸುವರ್ಣಕಾಲ ಎಂದು ವರ್ಣಿತವಾಗಿದೆ. ಛಂದಸ್ಸಿನ ಬಂಧದಿಂದ ಕವಿಗಳು ಹೊರ ಬಂದು ಕಾವ್ಯ ರಚಿಸಿದರೆ ಕನ್ನಡ ಕಾವ್ಯ ಸುವರ್ಣ ಯುಗವನ್ನು ಕಾಣಬಹುದು ಎಂಬ ನಂಬಿಕೆ ಅವರದು. ಕಾವ್ಯ ಇಲ್ಲಿ ಘೋಷಣೆಯಾಗಿದೆ ನಿಜ. ಆದರೆ ಹೊಸ ಮಾರ್ಗವನ್ನು ರೂಢಿಸುವಾಗ ಇಂಥ ಹೇಳಿಕೆಗಳು ಸಾಮಾನ್ಯ. ಹೊಸ ಮಾರ್ಗ ಪ್ರವರ್ತಕರಿಗೆ ಇದು ಅನಿವಾರ್ಯ ಕೂಡ.

'ಸಮುದ್ರ ಗೀತಗಳು' ಕನ್ನಡ ಕಾವ್ಯ ಪ್ರವಾಹಕ್ಕೆ ಹೊಸ ಹರಿವನ್ನು ತೋರಿಸುವ ಸ್ಪಷ್ಟ ಉದ್ದೇಶವನ್ನು ಹೊಂದಿರುವಂಥದ್ದು. "ಸಮುದ್ರ ಗೀತಗಳಲ್ಲಿ ಸಾಧಿಸಿರುವ ಗದ್ಯಲಯ, ಸ್ವಚ್ಛಂದ ಪ್ರವೃತ್ತಿ, ಪ್ರತಿಮಾ ನಿಯೋಜನೆ ಹಾಗೂ ನಿಯಮರಾಹಿತ್ಯ ಇವು ನವ್ಯ ಕಾವ್ಯ ಭೂಮಿಯನ್ನು ಅಣಿಗೊಳಿಸುವಲ್ಲಿ ಸಹಾಯಕವಾಗಿವೆ"[೮೨] ಎಂಬ ಬುದ್ಧಣ್ಣ ಹಿಂಗಮಿರೆಯವರ ಮಾತು ಸರಿಯಾಗಿದೆ.

ನವ್ಯ ಸಾಹಿತ್ಯ ಎಂದಾಗ ತಕ್ಷಣದ ಪ್ರತಿಕ್ರಿಯೆ ನವ್ಯ ಕಾವ್ಯವನ್ನು ಕುರಿತೇ ಇರುತ್ತದೆ. ಐವತ್ತರ ದಶಕದ ಆರಂಭದಲ್ಲಿ ನವೋದಯದಿಂದ ಭಿನ್ನವಾದ ಸಾಹಿತ್ಯ ರಚನೆಯ ಅಗತ್ಯವನ್ನು ಗೋಪಾಲಕೃಷ್ಣ ಅಡಿಗರು ಪ್ರತಿಪಾದಿಸಿದ್ದಾರೆ. 'ಜಯಕರ್ನಾಟಕ'ದಲ್ಲಿ 'ಹೊಸ ದಿನದ ಆಹ್ವಾನ'[೮೩] ಎಂಬ ಲೇಖನವನ್ನು ಅವರು ಬರೆದಿದ್ದಾರೆ. ಇದರಲ್ಲಿ ಅವರು ಕಾವ್ಯ ಹೊಸ ರೂಪ ಪಡೆಯಬೇಕಾದ ಅಗತ್ಯವನ್ನು ಸ್ಪಷ್ಟ ಮಾತುಗಳಲ್ಲಿ ಮಂಡಿಸಿದ್ದಾರೆ. ೧೯೨೦ರಿಂದ ಸ್ವಾತಂತ್ರ್ಯ ಬರುವ ತನಕದ ಕಾಲ ಆದರ್ಶ ನಿಷ್ಠೆಯ ಸರಳಕಾಲ. ಆಸೆಯ, ಆವೇಶದ,

---

೮೨.ಹೊಸ ಕಾವ್ಯ ಹೊಸ ದಿಕ್ಕು- ಪುಟ ೬

೮೩..ಎಂ. ಗೋಪಾಲಕೃಷ್ಣ ಅಡಿಗ- 'ಹೊಸ ದಿನದ ಆಹ್ವಾನ' 'ಜಯ ಕರ್ನಾಟಕ' (೧೧-೧೨-೧೯೫೨) ಪುಟ-೨

ಹೋರಾಟದ, ಬಿಗಿದ ಮನಸ್ಸಿನ, ತುಟಿ ಕಚ್ಚಿದ ಸಂಘಟನೆಯ ಕಾಲ ಅದು. ಒಟ್ಟಿನಲ್ಲಿ ಕಳೆದ ತಲೆಮಾರಿನ ಕವಿತೆ ಮುಖ್ಯವಾಗಿ ಏಕಮುಖವಾಗಿತ್ತು. ಸ್ವಾತಂತ್ರ್ಯದ ವಾಂಛೆಯೋ, ಪ್ರಗತಿಯ ಸ್ವಪ್ನವೋ, ಪುರಾತನ ಸಂಸ್ಕೃತಿಯ ಪುನರುತ್ಥಾನದ ಕನಸೋ ಅಂತೂ ಇಂಥ ಒಂದು ಆದರ್ಶ ಜನರ ಮನಸ್ಸಿನಲ್ಲಿ ಏಕ ಸೂತ್ರತೆಯನ್ನು ತಂದಂತೆ ಕಾವ್ಯದಲ್ಲಿ ಕೂಡ ಒಂದು ಸರಳ ಸಮರಸ ಕಂಡುಬಂದಿತು ಎಂದು ಅಡಿಗರು ಆ ಲೇಖನದಲ್ಲಿ ಹೇಳಿದ್ದಾರೆ. ಇಲ್ಲಿ ಅವರು ನವ್ಯದ ಹಿಂದಿನ ಸಾಹಿತ್ಯದ ಪ್ರೇರಣೆಗಳನ್ನು ಸೂತ್ರೀಕರಿಸುವರು.

ನಂತರ ಅವರು, ಕಾಲ ಬದಲಿದಂತೆ ಕಾವ್ಯ ರೂಪವೂ ಬದಲುತ್ತದೆ ಎಂಬ ಮಾತನ್ನು ಪ್ರತಿಯೊಂದು ಕಾವ್ಯ ಪರಂಪರೆಯೂ ಸಾರುತ್ತದೆ ಎಂದಿದ್ದಾರೆ. ಕಾವ್ಯದ ಮೂಲ ವಸ್ತುವಿನಲ್ಲಿ ಅಷ್ಟು ಪರಿವರ್ತನೆಯಾಗದಿದ್ದರೂ ಕವಿಯ ದೃಷ್ಟಿಯಲ್ಲಿ, ಕಾವ್ಯದ ರೀತಿಯಲ್ಲಿ ಕ್ರಾಂತಿ ಆಗುತ್ತ ಬಂದಿದೆ.... ಹೊಸ ಜನಾಂಗ ಬಂದು, ಹೊಸ ಸಮಸ್ಯೆಗಳು- ಅವು ಸಾಮಾಜಿಕವಿರಲಿ, ವೈಯಕ್ತಿಕವಿರಲಿ- ತಲೆದೋರಿದಾಗ, ಅದೇ ಜೀವನ, ಅದೇ ವಿದ್ಯಮಾನಗಳು ಕವಿಯ ಹೃದಯದಲ್ಲಿ ಹೊಸ ಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸುತ್ತವೆ... ತಲೆಮಾರಿನಿಂದ ತಲೆಮಾರಿಗೆ ಈ ರೀತಿ ಜೀವನ ಮತ್ತು ಪದ್ಯ ಕಾವ್ಯಗಳಲ್ಲಿ ಮಾರ್ಪಾಟು ತಲೆದೋರುತ್ತ ಬಂದಿದೆ ಎಂದು ಹೇಳುತ್ತಾರೆ.

ಸಾಹಿತ್ಯ ಜೀವನಾನುಭವಗಳ ಮೊತ್ತ. ಈ ಅನುಭವದ ಭೂತ, ವರ್ತಮಾನ, ಭವಿಷ್ಯದ್ರೂಪಗಳನ್ನು ಅಳವಡಿಸಿ ಏಕೋದ್ದೇಶವನ್ನು ಸಾಧಿಸುವುದು- ಇದೇ ನವ್ಯ ಕವಿಯು ದಾಟಿ ಗೆಲ್ಲಬೇಕಾದ ಬೆಂಕಿಯ ಹೊಳೆ. ಹೀಗೆ ಮಾತ್ರ ಕಾವ್ಯ ಸತ್ಯವನ್ನು ಬಿತ್ತರಿಸುವುದು ಸಾಧ್ಯ ಎಂದು ನವ್ಯ ಕಾವ್ಯದ ಮುಂದಿರುವ ಸವಾಲನ್ನು ಅಡಿಗರು ಗುರುತಿಸಿದ್ದಾರೆ. ನವ್ಯ ಕಾವ್ಯಕ್ಕೆ ಹೊಸ ಶಬ್ದ ಸಂಪತ್ತು ಬೇಕು ಎನ್ನುವ ಅವರು, ನಮ್ಮ ಹಿರಿಯರು ಬಳಕೆಗೆ ತಂದ ಶಬ್ದಗಳು ಈಗ ಅತಿ ಉಪಯೋಗದಿಂದ ಸವಕಲು ನಾಣ್ಯಗಳಾಗಿವೆ. ಅಂಥ ಶಬ್ದಗಳಿಂದ ಹೊಚ್ಚ ಹೊಸ ಭಾವನೆಗಳು ವ್ಯಕ್ತಗೊಳ್ಳುವುದು ಸಾಧ್ಯವಿಲ್ಲ. ಹೊಸ ಕಾಲದ ಹೊಸ ಮನಃಸ್ಥಿತಿಯನ್ನು ನಿರೂಪಿಸಲು ಅಂಥ ಶಬ್ದಗಳು ಅವು ಅತಿ ಬಳಕೆಯಿಂದ ಕೆಡದಿದ್ದರೂ ಅಸಮರ್ಥವಾಗುತ್ತವೆ ಎನ್ನುವುದು ಅವರ ನಂಬಿಕೆ. ಈ ಹಿನ್ನೆಲೆಯಲ್ಲಿಯೇ ನವ್ಯ ಸಾಹಿತ್ಯ ಭಾಷೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ.

ಕನ್ನಡ ಕಾವ್ಯವು ರೋಮ್ಯಾಂಟಿಕ್‌ನಿಂದ ಬೇರೆಯಾದ ಅಭಿವ್ಯಕ್ತಿಯನ್ನು ಪಡೆದುಕೊಳ್ಳಬೇಕಾದ ಅಗತ್ಯ ಏನಿತ್ತು ಎನ್ನುವುದನ್ನು ಅಡಿಗರು ಹೇಳಿದ್ದಾರೆ. 'ಜಯಕರ್ನಾಟಕ'ಕ್ಕಿಂತ ಒಂದು ತಿಂಗಳು ಮೊದಲೇ ಅವರು 'ಕರ್ಮವೀರ'ದಲ್ಲಿ ಬರೆದ ಲೇಖನದಲ್ಲಿ ಹೊಸ ಕಾವ್ಯದ ಅಗತ್ಯ ಏಕೆ ಉಂಟಾಯಿತು ಎಂಬುದನ್ನು ವಿವರಿಸಿದ್ದಾರೆ.[೮೪] ನಮ್ಮ ಹಿರಿಯರು ನಿಂತಿದ್ದ ನೆಲದ ಮೇಲೆ ನಾವು ನಿಂತಿದ್ದರೂ ನಾವು ಅದನ್ನು ಕಾಣುವ

೮೪.ಅಡಿಗ: ಇಂದಿನ ಕಾವ್ಯದ ಹಿನ್ನೆಲೆ; ಕರ್ಮವೀರ -೧೦-೧೧-೧೯೫೨

ದೃಷ್ಟಿಯಲ್ಲಿ ಮಾತ್ರ, ಈಗ ಮಹತ್ತರ ಬದಲಾವಣೆಯಾಗಿದೆ. ೧೯೪೭ರ ನಂತರ ಆದರ್ಶದ ಬಿಗಿ ತಪ್ಪಿ ಬಾಳು ಸಡಿಲಾಯಿತು. ಮತ್ತೆ ವಿಚಾರ ಸಂಕರ, ತುಮುಲ ಹೆಚ್ಚಿತು. ಸುಪ್ತವಾಗಿದ್ದ ದುರ್ಗುಣಗಳೆಲ್ಲ ಮತ್ತೆ ಹೆಡೆಯೆತ್ತಿದುವು.. ಜಡ, ಸ್ವಾರ್ಥ, ಕಪಟ, ಲಾಭಬಡುಕತನ, ಅಶಾಂತಿ, ಬಡತನ, ಅಸತ್ಯ, ವಿರಸ ಇವು ತಾಂಡವವಾಡತೊಡಗಿದವು; ಈಗಲೂ ತಾಂಡವವಾಡುತ್ತಿವೆ ಎಂದು ಹೇಳುತ್ತಾರೆ.

ಅದಕ್ಕಾಗಿಯೇ ಅಡಿಗರು,

'ಕಟ್ಟುವೆವು ನಾವು ಹೊಸ ನಾಡೊಂದನು
ರಸದ ಬೀಡೊಂದನು'

ಎಂದು ಬರೆಯುತ್ತಾರೆ. ಹೊಸ ನಾಡೊಂದನು ಕಟ್ಟಬೇಕೆಂಬ ಕವಿಯ ಬಯಕೆ ಇಡೀ ಜನಾಂಗದ ಧ್ವನಿಯಾಗುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ. ಅಡಿಗರದೇ ಆದ 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಪದ್ಯ ನವ್ಯ ಕಾವ್ಯದ ರಾಜಕೀಯ ವಿಡಂಬನ ಶಕ್ತಿಯನ್ನು ಎತ್ತಿ ತೋರಿಸುತ್ತದೆ. ಇಲ್ಲಿಯ ವ್ಯಂಗ್ಯ ಸಮಕಾಲೀನ ಸಂದರ್ಭದ ಅಭಿವ್ಯಕ್ತಿಯ ಹೊಸ ಮಾರ್ಗವನ್ನು ತೆರೆಯುತ್ತದೆ. ಈ ಪದ್ಯದ ಮೂಲ ದ್ರವ್ಯ ಪಕ್ಕಾ ರಾಜಕೀಯ ಎಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿಯೇ ನವೋದಯ ಮತ್ತು ನವ್ಯ ಕಾವ್ಯದ ನಡುವಿನ ಅಂತರ ಭಾರತದ ಸ್ವಾತಂತ್ರ್ಯ ಗಳಿಕೆ ಎಂಬ ಅಭಿಪ್ರಾಯ ಅಡಿಗರ ಮಾತುಗಳಲ್ಲಿ ಕಂಡು ಬರುತ್ತದೆ. ಸ್ವಾತಂತ್ರ್ಯದ ಬಗ್ಗೆ ಅಪಾರವಾದ ಕನಸುಗಳನ್ನು ಕಾಣಲಾಗಿತ್ತು. ಅವು ಈಡೇರದೆ ಹೋದಾಗ ಹತಾಶೆ ಉಂಟಾಗುತ್ತದೆ. ವ್ಯವಸ್ಥೆಯ ಬಗ್ಗೆ ಆಕ್ರೋಶ ಮೂಡುತ್ತದೆ. ಇದು ಹೊಸ ಕಾವ್ಯದ ಸೃಷ್ಟಿಗೆ ಕಾರಣವಾಗುತ್ತದೆ. ತೇಜಸ್ವಿಯವರ 'ತಬರನ ಕತೆ'ಯಲ್ಲಿ ಇಂಥ ಹತಾಶೆಯ ಚಿತ್ರ, ಢಾಳವಾಗಿ ಕಾಣಿಸಿಕೊಳ್ಳುತ್ತದೆ. ಕೊನೆಗೆ ಬ್ರಿಟಿಷ್ ಸತ್ತೆಯೇ ಉತ್ತಮವಾಗಿತ್ತೇನೋ ಎಂಬ ಮಾತುಗಳು ಪಾತ್ರಗಳ ಬಾಯಲ್ಲಿ ಕೇಳಿಬರುತ್ತವೆ. ಇಂಥ ಹೊಸ ಅನುಭವಗಳನ್ನು ಹಳೆಯ ರೋಮ್ಯಾಂಟಿಕ್ ಭಾವನೆಗಳಲ್ಲಿ ಒಡಮೂಡಿಸುವುದು ಕಷ್ಟವೇ ಸರಿ.

ಸ್ವಾತಂತ್ರ್ಯಾನಂತರದ ಬದುಕಿನ ಸಂಕೀರ್ಣತೆಯನ್ನು ಚಿತ್ರಿಸಲು ಭಾಷೆಗೆ ಹೊಸ ಕಸುವು ಬೇಕು ಎಂದು ಅಡಿಗರಿಗೆ ಅನ್ನಿಸುತ್ತದೆ. ಸ್ಥಿತ್ಯಂತರಗಳು ತಲೆದೋರಿದ ಬಳಿಕ ಬರಿ ಭಾಷೆ ಮಾತ್ರವಲ್ಲ ಛಂದಸ್ಸಿನಲ್ಲೂ ಬದಲಾವಣೆ ಅಗತ್ಯವೆಂದು ಅವರಿಗೆ ತೋರುತ್ತದೆ. "ದಿಜ್ಮೂಢ ವೃತ್ತಿಯ ಅಲ್ಲೋಲಕಲ್ಲೋಲವನ್ನು ರೂಪುಗೊಳಿಸಲು ಇಂದು ಛಂದಸ್ಸಿನಲ್ಲಿಯೂ ಅನೇಕ ಮಾರ್ಪಾಡು ಆಗುತ್ತಿದೆ. ಅರ್ಥದ, ಭಾವದ ತಿರುವುಮುರುವುಗಳನ್ನೂ ಡೊಂಕು ಕೊಂಕುಗಳನ್ನೂ ಗತಿ ಲಂಘನಗಳನ್ನೂ ಯಥಾವತ್ತಾಗಿ ಮೂರ್ತಿಗೊಳಿಸುತ್ತ ಹೊಸ ಛಂದಸ್ಸಿನ ಗತಿ, ಭಾವ ಗತಿಗೆ ಹೊಂದಿಕೊಂಡು ನಡೆಯುತ್ತದೆ... ತನಗೆ ಸಹಜವಾದ ಶಬ್ದ ಸಂಗೀತದಿಂದ ಓದುವವನಿಗೆ ಮೋಡಿ ಹಾಕುತ್ತ ರಚಿತವಾಗುತ್ತಿದೆ" ಎಂದು ಅಡಿಗರು

'ಜಯಕರ್ನಾಟಕ'ದಲ್ಲಿ ಬರೆದಿರುವರು.

ನವ್ಯದ ಸಂದರ್ಭದಲ್ಲಿ ಭಾಷೆ ತನ್ನೆಲ್ಲ ಮಡಿವಂತಿಕೆಯನ್ನು ಕಳೆದುಕೊಳ್ಳುತ್ತದೆ. ಸಮಕಾಲೀನತೆಯನ್ನು ಹಿಡಿದಿಡುವಾಗ ಈ ಮಣ್ಣಿನ ಭಾಷೆಯನ್ನು ಅಂಗೀಕರಿಸಿ ಅದು ಜೀವಂತಿಕೆಯನ್ನು ಪಡೆದುಕೊಳ್ಳುತ್ತದೆ. ರಮ್ಯದ ಕಾಲದಲ್ಲಿಯ ಅದೆಷ್ಟೋ ಅರ್ಥ ಶಿಥಿಲತೆಯ ಶಬ್ದಗಳು ಹಿಂದೆ ಸರಿದವು. ಅವುಗಳ ಸ್ಥಾನದಲ್ಲಿ ನಿರ್ದಿಷ್ಟ ಅರ್ಥದೊಂದಿಗೆ ಶಬ್ದಗಳು ಬಳಕೆಯಾದವು. ಪ್ರತಿಮೆಗಳು, ಸಂಕೇತಗಳು ಬಳಕೆಯಾದವು. ಆಡು ಮಾತು ಹೊಸ ಅರ್ಥಗಾಂಭೀರ್ಯದೊಂದಿಗೆ ಬಳಕೆಯಾಯಿತು. ಕಂಬಾರರ 'ತಕರಾರಿನವರು' ಸಂಕಲನದಲ್ಲಿಯ 'ಮಾವೋತ್ಸೆತುಂಗನಿಗೆ' ಕವನ ನೋಡಬೇಕು

'ದುಷ್ಟಾ ಕೆತ್ತಿಸಿ ಬಡದೇನು ಗೂಟಾ,
ಮಿಂಡ ಭಂಡತನ, ಲಬೋ, ಲಬೋ ಹೊಯ್ಕೊಂಡು...'

ಹೀಗೇ ಸಾಗುವ ಈ ಕವಿತೆಯಲ್ಲಿ ಬಯ್ಗುಳ ಧಾರಾಳವಾಗಿ ಪ್ರಯೋಗವಾಗಿದೆ. ಇವೆಲ್ಲ ನವೋದಯದಲ್ಲಿ ಸಾಧ್ಯವೇ ಇರಲಿಲ್ಲ. ಮೂಢಾ, ಧಡ್ಡಾ, ಬಚ್ಚಾ ನೀ ಇನ್ನೂ ಅಕ್ಕಲ್ ಕಾ ಕಚ್ಚಾ ಇತ್ಯಾದಿ ಪದ ಪ್ರಯೋಗ ಇಲ್ಲಿದೆ. ಇಲ್ಲಿ ಕಂಬಾರರು ಲಂಕೇಶರ 'ದೇಶಭಕ್ತ ಸೂಳೆ ಮಗನಿಗೆ' ಪದ್ಯವನ್ನು ನೆನಪಿಸುತ್ತಾರೆ.

ಆಧುನಿಕ ಬದುಕು ಬರಿ ಗೊಂದಲದ ಗೂಡಾಗಿರುವುದು ಅಡಿಗರ 'ಎಳೆಹರೆಯ'ದಲ್ಲಿ ಚೆನ್ನಾಗಿ ವರ್ಣಿತವಾಗಿದೆ. ..

ಎಲ್ಲೆಲ್ಲು ಹೆರಿಗೆ ಮನೆ; ಬೇನೆ, ಸಂಕಟ, ನಗೆ,
ಕೊರಡು ಚಿಗುರಿದ ಚೆಲುವು ಚೀರು, ಕೇಕೆ...

ಸುಖ ದುಃಖಗಳು ಕವನದ ನಾಯಕನಿಗೆ ಒಂದರ ಹಿಂದೆ ಒಂದರಂತೆ ದರ್ಶನ ನೀಡುತ್ತವೆ. ರೂಪದ ಹಿಂದೆ ವಿರೂಪ, ಸುಖದ ಜೊತೆಯಲ್ಲಿ ದುಃಖ, ಸಿಹಿಯ ಜೊತೆಯಲ್ಲಿ ಕಹಿ ಈ ದ್ವಂದ್ವಗಳ ಸಾಲು ಕವಿತೆಯ ನಾಯಕನನ್ನು ಅಸ್ವಸ್ಥಗೊಳಿಸುತ್ತದೆ.

'ನರ್ಸುಗಳು ಡಾಕ್ಟರರು ಹೆರಿಗೆ ಮನೆಯೊಳ ಹೊರಗೆ
ಅವರ ಬೆನ್ನಿಗೆ ಸದಾ ನಾಲ್ಕು ಮಂದಿ
ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ....'

ಇಲ್ಲಿ ಕವಿ ಬದುಕಿನ ದ್ವಂದ್ವ ಚಿತ್ರವನ್ನು ಮುಂದುವರಿಸುತ್ತಾರೆ. ಸುಖವೆಂದರೆ ಸುಖವನ್ನು ಮಾತ್ರವಲ್ಲ, ಸೌಂದರ್ಯವೆಂದರೆ ಸೌಂದರ್ಯಮಾತ್ರವಲ್ಲ ಅವೆರಡನ್ನೂ ಸಮಪ್ರಮಾಣದಲ್ಲಿ ಬದುಕು ಸ್ವೀಕರಿಸಬೇಕಾಗುತ್ತದೆ. ಎನ್ನುವ ಸಂದೇಶ ಸಾರುತ್ತಾರೆ.

ಈ ಲೋಕ ಎಷ್ಟು ಗೊಂದಲಕಾರಿ ಎಂಬುದನ್ನು ಗಡಿಯಾರದಂಗಡಿಯ ಈ ಚಿತ್ರ ಇನ್ನಷ್ಟು ಸ್ಪಷ್ಟಪಡಿಸುತ್ತದೆ.-

‘ಈಗ ಈ ಲೋಕ ಅಸ್ತವ್ಯಸ್ತ ಗಡಿಯಾರ
ಬಿಚ್ಚಿ ಯಂತ್ರೋಪಯಂತ್ರಗಳ ಚೆಲ್ಲಾಪಿಲ್ಲಿ
ಚೆಲ್ಲಿ, ಕೈಕಟ್ಟಿ ಕುಳಿತ ರಿಪೇರಿಯವನಂತೆ
ಯಾವ ತಿರುಗಣೆ ಮೊಳೆಯನ್ನೆಲ್ಲಿ ಹಾಕಲಿ? ಮತ್ತೆ ಈ
ಸುರುಳಿ ತಂತಿಯನ್ನೆಲ್ಲಿ ತುರುಕಲಿ?
ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇವೆ. ಇಲ್ಲ
ಸಾವಯವ ಶಿಲ್ಪದ ಸಮಗ್ರೀಕರಣಬಲ’

ಇಲ್ಲಿ ಸಂಕೇತಗಳ ಮೂಲಕ ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಯನ್ನು ಕವಿ ಮನಮುಟ್ಟಿಸಿದ್ದಾರೆ. ಇಂಥದ್ದೇ ಮನಸ್ಥಿತಿಯನ್ನು ನವ್ಯ ಕಾದಂಬರಿ ಎಂದು ಗುರುತಿಸಲಾಗುವ ಗಿರಿಯವರ ‘ಗತಿ ಸ್ಥಿತಿ’ಯಲ್ಲಿಯೂ ನಾವು ಕಾಣಬಹುದು. ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬುದು ಗೊತ್ತಿಲ್ಲದ ನಿರುದ್ದಿಶ್ಯವಾದ ಬದುಕು. ಓಡುವುದು ಓಡುವುದು ಓಡುವುದು.. ಓಟಕ್ಕೆ ಕೊನೆಯೆಂಬುದೇ ಇಲ್ಲ. ಓಟಕ್ಕೆ ಕಾರಣವೂ ಗೊತ್ತಿರುವುದಿಲ್ಲ.

ಕೆ.ವಿ. ತಿರುಮಲೇಶ ಅವರ ‘ಮಹಾ ಪ್ರಸ್ಥಾನ’ದಲ್ಲಿಯ ಅರಸುವಿಕೆ ಇದನ್ನೇ ಸೂಚಿಸುತ್ತದೆ. ಕಾವ್ಯವನ್ನು ಹೇಗೆ ಬಲಗೊಳಿಸುವುದು, ಕಾವ್ಯಕ್ಕೆ ಸಮಗ್ರೀಕರಣ ಬಲವನ್ನು ಒದಗಿಸುವದು ಹೇಗೆ ಎಂಬ ಚಿಂತೆಯನ್ನು ಅಲ್ಲಿ ಗುರುತಿಸಬಹುದು.

‘ಶಬ್ದಗಳೆ ಪ್ರತಿಮೆಗಳೆ ಪ್ರತೀಕಗಳೆ ಬನ್ನಿ ಧ್ವನಿಗಳೇ ಬನ್ನಿ ಮೂಡಿಸಿರಿ
ಬಿದ್ದ ಈ ಹೋರಿಯ ಈ ಕುದುರೆಯ ಈ ಮಾನವನ ಈ
ಭಗ್ನಾವಶೇಷ ಅಸ್ತವ್ಯಸ್ತದಲ್ಲಿ ನಿಂತ ಹೆಣ್ಣಿನ
ಮಣ್ಣಿನ ರಕ್ತದ ಕ್ರೌರ್ಯದಲ್ಲಿ ಬಿಟ್ಟ ಕಲೆಯ ಅರ್ಥ
ಶಬ್ದಗಳೇ, ಪ್ರತಿಮೆಗಳೇ ಪ್ರತೀಕಗಳೆ ಪ್ರತಿಧ್ವನಿಗಳೇ
ನನ್ನ ಧ್ವನಿಗಳೇ ಬನ್ನಿ’

ಎಂಬಲ್ಲಿ ಕಾವ್ಯವನ್ನು ಬಲಗೊಳಿಸಲು ಏನೇನು ಬೇಕು ಎಂಬ ಬಗ್ಗೆ ಕವಿ ಚಿಂತನೆ ನಡೆಸಿರುವುದನ್ನು ಕಾಣಬಹುದಾಗಿದೆ.

ನವ್ಯ ಕಾವ್ಯ ಛಂದಸ್ಸಿನಲ್ಲಿ ನಡೆಸಿದ ಹೊಸ ಪ್ರಯೋಗ ಯಶಸ್ವಿಯಾದರೂ ಹೃದಯಸಾಲದು ಎಂಬ ಕೊರಗನ್ನು ಬಿ.ಸಿ.ರಾಮಚಂದ್ರಶರ್ಮರು ‘ಪ್ರಜಾವಾಣಿ’ಯಲ್ಲಿ ವ್ಯಕ್ತಪಡಿಸಿದ್ದಾರೆ.[೮೫] “ಕಾವ್ಯದ ಮಾತು ಗುಡುಗಿನ ಹಾಗೆ- ಅಬ್ಬರ ಹೆಚ್ಚು. ನವ್ಯ ಕಾವ್ಯದಲ್ಲಿ ಕೌಶಲವಿದೆ. ಛಂದಸ್ಸಿನಲ್ಲಿ ನಡೆಸಿದ ಪ್ರಯೋಗ ಅನೇಕ ಕಡೆ ಯಶಸ್ವಿಯಾಗಿದೆ. ಪ್ರತಿಮೆಗಳನ್ನು ಜೋಡಿಸುವ ಕ್ರಮ ತುಂಬ ಸೊಗಸು. ಆದರೂ ಹೃದಯ ಸಾಲದು.

೮೫.ಶರ್ಮ; ಪ್ರತಿಭಾ ಸಂದರ್ಶನ- ವಿ.ಸೀ. ಪ್ರಜಾವಾಣಿ- ೭-೧೦-೧೯೫೬

ಸಾಹಿತ್ಯದ ಸಂಪದಂಶಕ್ಕೆ ನವ್ಯ ಕಾವ್ಯ ತಂದು ಸೇರಿಸಿರುವುದು ಕಡಿಮೆ" ಎನ್ನುವ ಮೂಲಕ ಅವರು ಕೊರತೆಯನ್ನೂ ಗುರುತಿಸುವರು.

ಕಾವ್ಯ ಕ್ಲಿಷ್ಟತೆ: ನವ್ಯ ಕಾವ್ಯದ ಸಂದರ್ಭದಲ್ಲಿ ಮುಖ್ಯವಾಗಿ ಕೇಳಿಬಂದ ಟೀಕೆ ಅದು ಕ್ಲಿಷ್ಟ, ಸಾಮಾನ್ಯರಿಗೆ ಅರ್ಥವಾಗುವಂಥದ್ದಲ್ಲ ಎಂಬುದು. ನವ್ಯ ಕಾವ್ಯದಲ್ಲಿಯ ನಿರಾಶೆ ಅದು ಹುಟ್ಟಿಕೊಂಡ ಕಾಲದ ಪ್ರತಿಫಲನವಲ್ಲ, ಆರೋಪಿಸಿಕೊಂಡದ್ದು. ಇಂಗ್ಲಿಷ್ ಕಾವ್ಯದ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟ ಇಂಗ್ಲಿಷ್ ಪ್ರೊಫೆಸರುಗಳು ಮಾಡಿದ ಪ್ರಯೋಗ ಇದು ಎಂಬ ಮಾತು ಕೇಳಿಬಂತು. ಇದಕ್ಕೆ ಸಮಾಧಾನ ಹೇಳುವ ಪ್ರಯತ್ನವೂ ಆಗ ನಡೆಯಿತು. 'ಜನಪ್ರಗತಿ'ಯು ಕನ್ನಡದ ನವ್ಯ ಕಾವ್ಯಗಳ ಬಗೆಗೆ ಅನೇಕ ಲೇಖನಗಳನ್ನು ಪ್ರಕಟಿಸುತ್ತಿತ್ತು. ಆರ್.ಎಸ್.ರಾಮರಾವ ಅವರು ಬರೆದ 'ಕನ್ನಡ ನವ್ಯ ಕಾವ್ಯ' ಎಂಬ ಲೇಖನವು ಜನಪ್ರಗತಿಯಲ್ಲಿ ಪ್ರಕಟವಾಗಿತ್ತು.[೮೬] ಆ ಲೇಖನದಲ್ಲಿ ಅವರು, ಜಟಿಲವಾದ ಜೀವನದ ವಾಸ್ತವ ಚಿತ್ರವನ್ನು ಹಾಗೆಯೇ ಕೊಡುವುದಕ್ಕೆ ಯತ್ನಿಸುತ್ತದೆ ನವ್ಯಕಾವ್ಯ. ಆದ್ದರಿಂದ ಶೈಲಿಯಲ್ಲಿ, ವಾಣಿಯಲ್ಲಿ ಜಟಿಲತೆ ಕಂಡು ಬರಬಹುದು. ಅದರಲ್ಲಿ ಭಾವ ಸಮಗ್ರವಾಗಿ ಬರುತ್ತದೆ ಎಂದು ಹೇಳುವ ಮೂಲಕ ಜಟಿಲತೆಗೆ ಕಾರಣವನ್ನು ಹುಡುಕಲು ಯತ್ನಿಸಿದ್ದಾರೆ.

ಇದಕ್ಕೂ ಮೊದಲು 'ಜನಪ್ರಗತಿ'ಯಲ್ಲಿಯೇ ಬಿ.ಸಿ.ರಾಮಚಂದ್ರ ಶರ್ಮ ಅವರು ನವ್ಯ ಕಾವ್ಯದ ಕ್ಲಿಷ್ಟತೆ ಕುರಿತು ಲೇಖನವನ್ನು ಬರೆದಿದ್ದರು.[೮೭] "ನವ್ಯ ಕಾವ್ಯವು ಸ್ವಲ್ಪ ಮಟ್ಟಿಗೆ ಕ್ಲಿಷ್ಟವೆಂಬುದು ವಾಸ್ತವ" ಎಂಬ ಅಂಶವನ್ನು ಒಪ್ಪುವ ರಾಮಚಂದ್ರ ಶರ್ಮ, ಇದಕ್ಕೆ ನವ್ಯ ಕವಿಯ ಪಾಂಡಿತ್ಯ ಕಾರಣ ಎಂದು ಊಹಿಸುವರು. ಕಾವ್ಯದಲ್ಲಿ ಬಳಸುವ ಪದಗಳ ಮೂಲಕವಾಗಿ ಬಂದ ಕ್ಲಿಷ್ಟತೆ ಇದಲ್ಲ. ಏಕೆಂದರೆ ನವ್ಯ ಕವಿ ಜನರಾಡುವ ಮಾತುಗಳನ್ನೇ ಬಳಸುವವನು ಎಂದು ಅವರು ಅಭಿಪ್ರಾಯ ಪಡುವರು. ಮೊದಲನೆ ಮಹಾಯುದ್ಧ ಮುಗಿದಾಗ ಎಲಿಯಟ್ ಹೇಳಿದ: 'ಸದ್ಯಕಂತೂ ಕಾವ್ಯ ಸುಲಭವಾಗಿರುವುದು ಸಾಧ್ಯವಿಲ್ಲ' ಎಂದು. ಅಡಿಗರು ಅದೇ ಮಾತನ್ನು ಕನ್ನಡ ನವ್ಯ ಕಾವ್ಯದ ಬಗೆಗೂ ಹೇಳಿದರು ಎಂಬುದನ್ನು ಶರ್ಮ ಸ್ಮರಿಸುತ್ತಾರೆ.

ನವ್ಯ ಕಾವ್ಯದ ಕ್ಲಿಷ್ಟತೆಯ ಬಗೆಗೆ 'ಕನ್ನಡ ನುಡಿ'ಯಲ್ಲಿ ನಿರಂಜನರು ಬರೆದ ಲೇಖನದಲ್ಲಿಯ ಈ ಮಾತುಗಳನ್ನು ಗಮನಿಸಬೇಕು. "ಸಾಮಾಜಿಕ ಜೀವನದಿಂದ, ಜೀವನ ಪ್ರವಾಹದಿಂದ, ದೂರಹೋಗುವ ಬರೆಹಗಾರನಿಗೆ ಒಳ್ಳೆಯ ನಿದರ್ಶನವೆಂದರೆ ನಮ್ಮ ನವ್ಯ ಕವಿ. ಈಗ ಈತ ಸೃಷ್ಟಿಸುವುದು ವೈಯಕ್ತಿಕ ಕಾವ್ಯವನ್ನು, ಮಾತನಾಡುವುದು ವೈಯಕ್ತಿಕ ಪ್ರತಿಮೆಗಳ ಮೂಲಕ. ಕವಿವಾಣಿ ವಿಶ್ವವಾಣಿಯಾಗುವ ಕಾಲ ಕಳೆದಂತೆಯೇ! ಈ ಸಿನಿಕತನ, ನಿರಾಶಾವಾದ, ವಕ್ರ ತಾತ್ವಿಕ ದೃಷ್ಟಿ - ಎಷ್ಟು ಸರಿಯೋ ಎಷ್ಟು ತಪ್ಪೋ,

---

೮೬.ಜನಪ್ರಗತಿ-೭-೨-೧೯೫೪ 'ಕನ್ನಡ ನವ್ಯ ಕಾವ್ಯ' - ಆರ್.ಎಸ್.ರಾಮರಾವ
೮೭.ಜನಪ್ರಗತಿ-೮-೧೧-೧೯೫೩ 'ನವ್ಯ ಕಾವ್ಯ - ಕ್ಲಿಷ್ಟತೆ' - ಬಿ.ಸಿ.ರಾಮಚಂದ್ರಶರ್ಮ

ಓದುಗರಿಗೆ ಅದು ತಿಳಿದರೆ ತಾನೆ? ಯಾಕೆ ಹೀಗೆ - ಎಂದು ನವ್ಯ ಕವಿಯನ್ನು ಕೇಳಿ ನೋಡಿ. ದೊರೆಯುವ ಉತ್ತರ ಎಂಥದ್ದು? 'ನಾನು ಬರೆಯೋದು ಇವತ್ತು ಹತ್ತೇ ಜನರಿಗೆ ತಿಳಿದರೂ ಸಾಕು. ನಾಳೆಯ ಜನರೆಲ್ಲ ನನ್ನ ಕೃತಿಯನ್ನು ಖಂಡಿತವಾಗಿಯೂ ಕೊಂಡಾಡುವರು'."[೮೮] ಇಂಥ ಟೀಕೆ ನವ್ಯ ಕಾವ್ಯದ ಬಗೆಗೆ ವ್ಯಾಪಕವಾಗಿ ಕೇಳಿಬಂದವು.

೧೯೫೩ರಲ್ಲಿ 'ಚಿತ್ರಗುಪ್ತ'ದಲ್ಲಿ 'ರೊಮ್ಯಾಂಟಿಕ್ ಕಾವ್ಯ; ನವ್ಯ ಕಾವ್ಯ; ಜನಕಾವ್ಯ...' ಎಂಬ ಲೇಖನ ಬರೆದ ನಿರಂಜನರು ಅದರಲ್ಲಿ ರಾಮಚಂದ್ರಶರ್ಮರ 'ಹೃದಯ ಗೀತ' ಕವನ ಸಂಕಲನವನ್ನು ವಿಮರ್ಶಿಸುತ್ತ ನವ್ಯದ ಬಗ್ಗೆ ಕೆಲವು ಟೀಕಾತ್ಮಕವಾದ ಮಾತುಗಳನ್ನು ಹೇಳುತ್ತಾರೆ. ನವ್ಯ ಕಾವ್ಯದ ಹೆಸರಿನಲ್ಲಿ ಕನ್ನಡ ಕವಿತೆಯನ್ನು ಚಕ್ರಬಂಧ ಸ್ಪರ್ಧೆಯ ಮಟ್ಟಕ್ಕಿಳಿಸುವ ಒಂದು ಯತ್ನ ಈಗ ಆಗುತ್ತಿದೆ ಎಂಬ ಅವರ ಮಾತುಗಳು ನವ್ಯ ಕಾವ್ಯದ ಕ್ಲಿಷ್ಟತೆಯ ಕುರಿತು ಆಡಿದುದೇ ಆಗಿದೆ. ಜನಸಾಮಾನ್ಯರಿಗೆ ಮಾತ್ರವಲ್ಲ, ವಿದ್ಯಾವಂತರಿಗೂ ಅರ್ಥವಾಗದ ರೀತಿಯಲ್ಲಿ, ಕವಿತೆ ಬರೆಯುವ ಚಟವೊಂದು 'ನವ್ಯಕಾವ್ಯ'ದ ಹೆಸರಿನಲ್ಲಿ ಹುಟ್ಟಿಕೊಂಡಿದೆ. ಈ ಹೊಸ ವಾದದಿಂದ ತಮ್ಮ ಸ್ಥಾನಕ್ಕೆ ಸಂಚಕಾರ ಒದಗುತ್ತದೆಂದು, ಕೆಲವು 'ಹಿರಿಯ' ಕವಿಗಳು ನವ್ಯ ಕಾವ್ಯವನ್ನು ಖಂಡಿಸಿದ್ದಾರೆ; ಆದರೆ ಪ್ರಗತಿಶೀಲರು, 'ಈ ನವ್ಯ ಕಾವ್ಯದ ಹಿನ್ನೆಲೆಯಲ್ಲಿ ಪಲಾಯನವಾದವಿದೆ; ಪ್ರತಿಗಾಮಿಯಾದ ತತ್ವಜ್ಞಾನವಿದೆ ಎನ್ನುವ ಕಾರಣದಿಂದ ನವ್ಯ ಕಾವ್ಯವನ್ನು ಟೀಕಿಸಿದ್ದಾರೆ ಎಂದು ಅವರು ನವ್ಯ ಕಾವ್ಯಕ್ಕೆ ತಮ್ಮ ವಿರೋಧದ ಕಾರಣವನ್ನು ಹೇಳುವರು.[೮೯]

ನವ್ಯ ಕಾವ್ಯದ ಪ್ರೇರಣೆ ಈ ನೆಲದಲ್ಲಿ ಇಲ್ಲ. ಅದು ಇಂಗ್ಲಿಷ್ ಪ್ರೊಫೆಸರುಗಳು ಇಂಗ್ಲಿಷ್ ಕಾವ್ಯ ಓದಿ ಕನ್ನಡಲ್ಲೂ ಅದನ್ನು ತರಲು ಪ್ರಯತ್ನಿಸುತ್ತಿದ್ದಾರೆ ಎಂಬ ಟೀಕೆಗೆ ಉತ್ತರವೆಂಬಂತೆ ಶರ್ಮ 'ಜನಪ್ರಗತಿ'ಯಲ್ಲಿಯೇ ಬರೆದಿರುವ ಈ ಮಾತುಗಳನ್ನು ಗಮನಿಸಬೇಕು. "ಯುದ್ಧ ನಿರ್ಮೂಲಕ್ಕೆಂದೇ ನಡೆದ ಮಹಾಯುದ್ಧ ಮುಗಿದಿತ್ತಾದರೂ, ಜನ ನೆಚ್ಚಿದ್ದ ಶಾಂತಿ ಬಿಸಿಲುಗುದುರೆಯಾಗಿ ದೂರವೇ ಇತ್ತು... ಸಮರದ ನೆರಳಾಗಿ ಬರುವ ಆರ್ಥಿಕ ಮುಗ್ಗಟ್ಟು ತನ್ನ ಕರಾಳ ರೂಪವನ್ನು ತೋರತೊಡಗಿತ್ತು... ಅಭಿವ್ಯಕ್ತಿ ಸಾಧನೆಯಾಗುವುದಾದರೆ ಇಂಗ್ಲಿಷ್ ಕಾವ್ಯದ ಹೆಜ್ಜೆಯ ಹಿಂದೆ ಹೆಜ್ಜೆ ಇಡುವುದರಲ್ಲಿ ಏನೂ ಅವಮಾನವಿಲ್ಲ ಎಂಬುದೇ ನನ್ನ ನಂಬಿಕೆ"[೯೦] ಎಂಬಲ್ಲಿ ನವ್ಯ ಕಾವ್ಯದ ಸಮರ್ಥನೆಯನ್ನು ಕಾಣಬಹುದು.

ಅಡಿಗರ ಭೂಮಿಗೀತದಲ್ಲಿ ಅವರೇ ಹೇಳುವ ಈ ಸಂಕೀರ್ಣತೆಯನ್ನು ನಾವು ಎದುರಾಗುತ್ತೇವೆ. 'ತುಟಿಗಗಸ್ತ್ಯಾಧರದ ತುರುಸು ತೋಟಿ' ಎಂಬಲ್ಲಿ, 'ಹಕ್ಕಿ ಕೊರಳನು

೮೮.ನಿರಂಜನ- ಬುದ್ಧಿ ಭಾವ ಬದುಕು- ೧೨೪-೧೨೫

೮೯.ಬುದ್ಧಿ ಭಾವ ಬದುಕು- ಪುಟ ೪೫

೯೦.ಬಿ.ಸಿ. ರಾಮಚಂದ್ರಶರ್ಮ: 'ನವ್ಯ ಕಾವ್ಯ' ಜನಪ್ರಗತಿ- ೧೯-೧೦-೧೯೫೩

ಹಿಚುಕಿ ಲಾಲಿ ಹಾಡಿದಳು / ಸಸಿ ಕೊರಳ ಕೊಯ್ದು ತಿಂಡಿಯನು ತಿನಿಸಿದಳು' – 'ಇವಳೆದೆಗೆ ಬೇರಿಳಿದ ಕಾಲು ನನ್ನದು' ಎಂಬಲ್ಲೆಲ್ಲ ಈ ಸಂಕೀರ್ಣತೆ ಎದುರಾಗಿ, ಅಡಿಗರೇ ಹೇಳುವ ನಿರ್ದಿಷ್ಟ ಅರ್ಥ ಕೈಗೆಟುಕದೆ ಹೋಗುವ ಅಪಾಯವಿದೆ. ಹೀಗೆ ನವ್ಯದ ಪ್ರವರ್ತಕರು ಯಾವುದನ್ನು ಗುಣವೆಂದು ಪರಿಗಣಿಸಿದರೋ ಅದನ್ನೇ ಮುಂದಿನವರು ನವ್ಯದ ಅವಗುಣಗಳೆಂದು ಅದನ್ನು ದೂರೀಕರಿಸುವುದಕ್ಕೂ ಕಾರಣವಾಗುತ್ತದೆ. ಈ ಸಂಕೀರ್ಣತೆ ಎಂಬುದು ಆಂತರಿಕತೆಯೂ ಅನ್ನಿಸಿ ಅದು ವೈಯಕ್ತಿಕ ತಹತಹ ಎನ್ನುವ ಮಟ್ಟಕ್ಕೆ ಬಂದು ಬಿಡುತ್ತದೆ. ಹೀಗಾಗಿ ನವ್ಯ ಸಾಹಿತಿ ಸಾಮಾಜಿಕ ಜವಾಬ್ದಾರಿಯಿಂದ ಹೊರಗಿರುವ ಅಪಾಯವಿದೆ.

'ಈಡಿಪಸ್ಸಿನ ಗೂಢ ಪಾಪ ಲೇಪಿತ ನಾನು
ಟ್ರ್ಯಾಕ್ಟರನ್ನೇರಿದೆನು ಉತ್ತೆ ಸಿಗಿದೆ.
ಬಿತ್ತಿದೆನು, ಬೆಳೆದೆ ಆಟಂಬಾಂಬು ಕಾಳುಗಳ
ಮಾರಕ ಕ್ರಿಮಿ ಪೈರ ಗೋರಿ ನಲಿದೆ'

ಎಂಬಲ್ಲಿ ಅಡಿಗರು ಪಾಪ ಪ್ರಜ್ಞೆಯನ್ನು ಎತ್ತಿ ಹೇಳುವರು. ಈ ಪಾಪ ಪ್ರಜ್ಞೆ ಇಡಿ ನವ್ಯ ಸಾಹಿತ್ಯದ ತಳದಲ್ಲಿದೆ. 'ಇವಳೆದೆಗೆ ಬೇರಿಳಿದ ಕಾಲು ನನ್ನದು' ಎಂದು ನೆಲದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡಿದ್ದರೂ ಅಲ್ಲಿ ಬೆಳೆದದ್ದು ವಿನಾಶವನ್ನೇ ಎಂಬುದನ್ನು ಅವರು ಸೂಚಿಸುತ್ತಾರೆ. ಟ್ರ್ಯಾಕ್ಟರು ಪಾರಂಪರಿಕ ನೇಗಿಲಿನಿಂದ ಭಿನ್ನವಾದ, ಆಧುನಿಕತೆಯನ್ನು ಸೂಚಿಸುವ ಪ್ರತಿಮೆಯಾಗಿದೆ. ಇಂಥ ಸಂದಿಗ್ಧತೆಯಲ್ಲಿರುವ ನವ್ಯ ಸಾಹಿತಿಗೆ ತನ್ನ ಅಸ್ತಿತ್ವ ಮರೆಯಾಗುವ ಆತಂಕ. ಅದೇ– 'ಢಿಕ್ಕಿ ಹೊಡೆದೆನು ಪಂಜರದ ಕಂಭ, ಮಾಡಕ್ಕೆ; ಚೀರಿ ಬಡಿದೆನು ರೆಕ್ಕೆ ಪುಕ್ಕವ ಕಿತ್ತು ರಾಶಿ ಹಾಕಿದ ತಿಂಡಿ ತಟ್ಟೆಯೊಳಗೆ' ಎಂಬ ಮಾತುಗಳಲ್ಲಿ ವ್ಯಕ್ತವಾಗಿದೆ. ನವ್ಯ ಕವಿತೆಯ ನಾಯಕ ಈ ರೀತಿ ಪಂಜರದಲ್ಲೇ ಬಂಧಿಯಾದ ಹಕ್ಕಿಯ ಹಾಗೆ ವಿಲಕ್ಷಣ ನೋವನ್ನು ಅನುಭವಿಸುತ್ತಾನೆ. ಇಂಥಲ್ಲೆಲ್ಲ ನವ್ಯ ಕಾವ್ಯ ಅಲ್ಲಮನ ಬೆಡಗಿನ ವಚನಗಳ ಹಾಗೆ ವ್ಯಾಖ್ಯಾನವನ್ನು ಅಪೇಕ್ಷಿಸುತ್ತವೆ. ಇದಕ್ಕಾಗಿಯೇ ನವ್ಯ ಕಾವ್ಯ ಕ್ಲಿಷ್ಟ ಎಂಬ ಮಾತು ಕೇಳಿಬಂತು. ಈ ಕ್ಲಿಷ್ಟತೆ ಯಾವ ರೀತಿಯದು ಎಂಬ ಚರ್ಚೆ ನವ್ಯ ಕಾವ್ಯದ ಆರಂಭದ ದೆಸೆಯಲ್ಲಿಯೇ ಅಂದಿನ ಪತ್ರಿಕೆಗಳಲ್ಲಿ ನಡೆಯಿತು ಎಂಬುದನ್ನು ಗಮನಿಸಿದಾಗ, ಹೊಸ ಕಾವ್ಯ ಮಾರ್ಗ ಗಟ್ಟಿಗೊಳ್ಳುವಲ್ಲಿ ಅಂದಿನ ಪತ್ರಿಕೆಗಳು ವಹಿಸಿದ ಪಾತ್ರ ಮಹತ್ವದ್ದೆನಿಸುತ್ತದೆ.

ಸಾಹಿತ್ಯವು ಸಮಾಜದ ಸಹಜ ಪ್ರೇರಣೆಯಿಂದ ಹುಟ್ಟು ಪಡೆಯದೆ ಇದ್ದಾಗ ಮತ್ತು ಬುದ್ಧಿಪೂರ್ವಕವಾಗಿ ತಾವು ಒಂದು ಹೊಸ ಮಾರ್ಗವನ್ನು ತೆರೆಯುತ್ತೇವೆ ಎಂಬ ಅರಿವಿಂದ ಸಾಹಿತ್ಯ ಸೃಷ್ಟಿ ಮಾಡತೊಡಗಿದಾಗ ತಮಗಿಂತ ಹಿಂದಿನ ಸಾಹಿತ್ಯದಲ್ಲಿ ಏನಿಲ್ಲ ಎಂಬುದನ್ನು ಪಟ್ಟಿ ಮಾಡುವುದು ಅನಿವಾರ್ಯವಾಗುತ್ತದೆ. ಹಿಂದಿನ ಸಾಹಿತ್ಯದಿಂದ ತಾವು ಹೇಗೆ ಭಿನ್ನ

ಎಂಬುದನ್ನು ತೋರಿಸಬೇಕಾಗುತ್ತದೆ. ಹೊಸ ಮಾರ್ಗದ ಶ್ರೇಷ್ಠತೆ ಯಾವುದರಲ್ಲಿದೆ ಎಂಬುದನ್ನು ಹೇಳಿಕೊಳ್ಳಬೇಕಾಗುತ್ತದೆ. ನವ್ಯರು ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಾರೆ.

ಒಟ್ಟಾರೆ ನವ್ಯ ಕಾವ್ಯ ಕನ್ನಡದಲ್ಲಿ ತಲೆದೋರಿದ ಕೂಡಲೆ ರಸಾತ್ಮಕ ಹಾಗೂ ಭಾವ ಗೀತಾತ್ಮಕವಾದದ್ದು ಕಾವ್ಯವೆನ್ನುವ ವ್ಯಾಖ್ಯೆಯೇ ತಿರುವುಮುರುವಾಯಿತು. ಅನಗತ್ಯವಾಗಿ ಹೊಗಳುವುದು, ಅತಿಶಯೋಕ್ತಿ, ಉತ್ಪ್ರೇಕ್ಷೆ ಮೊದಲಾದ ಅಲಂಕಾರಗಳ ಹಂಗಿಲ್ಲದೆ ವಾಸ್ತವಿಕ ದೃಷ್ಟಿಕೋನದಿಂದ, ಸ್ವಂತ ಅನುಭವದಿಂದ, ವೈಜ್ಞಾನಿಕ ಅರಿವಿನಿಂದ ಕಾವ್ಯ ರಚಿಸಬೇಕು ಎಂಬ ಜವಾಬ್ದಾರಿ ಕವಿಗಳಲ್ಲಿ ಬೆಳೆಯಿತು. ಸ್ಫೂರ್ತಿ, ಪ್ರೇರಣೆ ಕಾವ್ಯ ರಚನೆಗೆ ಬೇಕು ಎಂಬ ತಿಳಿವಳಿಕೆ ದೂರವಾಯಿತು. ಕಾವ್ಯಕ್ಕೆ ಅನುಭವವೇ ಒರೆಗಲ್ಲಾಯಿತು. ಭಾವ ಅನುಭಾವಗಳ ಬದಲಿಗೆ ಅನುಭವ ಪ್ರಾಮುಖ್ಯತೆ ಪಡೆಯಿತು. ಹೊಸ ಕವಿಗಳು ಪರಂಪರಾಗತ ಆಕರ್ಷಕ ಸಂದರ್ಭಗಳಿಂದ ಹೊರಬಂದು ಬರೆದರು. ಹೊಸ ಮೌಲ್ಯಗಳನ್ನು ಶೋಧಿಸಿದರು. ಪ್ರಾಮಾಣಿಕತೆ ಅಭಿವ್ಯಕ್ತಿಯಲ್ಲಿ ಆದ್ಯತೆ ಪಡೆಯಿತು. ಈ ಕಾರಣಕ್ಕಾಗಿಯೇ ಅದುವರೆಗಿನ ಕಾಮದ ಬಗೆಗಿನ ಮಡಿವಂತಿಕೆ ದೂರವಾಗಿ ಇಲ್ಲಿ ಅದು ವಿವಿಧ ರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಭಾಷೆಯೊಂದಿಗೆ ಅವರು ಹೋರಾಟ ನಡೆಸಿದರು. ವೈಯಕ್ತಿಕ ಅನುಭವ ಸಂವೇದನೆಗಳು ಬರೆವಣಿಗೆಗೆ ಇಳಿದವು. ಸಮಕಾಲೀನ ಸಂದರ್ಭದ ಅರಿವು ಹಾಗೂ ಕಾಳಜಿಗಳಿಂದ ಅವರು ಕಾವ್ಯವನ್ನು ಹೆಣೆದರು. ಶಬ್ದಗಳಿಗಿರುವ ವಿಶಿಷ್ಟ ಧ್ವನಿ ಸಾಮರ್ಥ್ಯದಿಂದ ಅದುವರೆಗೆ ಪದ್ಯದಲ್ಲಿದ್ದ ಏಕತಾನತೆಯನ್ನು ಅವರು ಮುರಿದರು. ಗದ್ಯಲಯ ಅಥವಾ ಆಡುಮಾತಿನ ಲಯವನ್ನು ಅವರು ರೂಢಿಗೆ ತಂದರು. ಪ್ರಾರಂಭದಲ್ಲಿ ಹೊಸ ಕಾವ್ಯ ಕೃತಿಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಅಭ್ಯಾಸ ಲೇಖನಗಳು, ಪತ್ರಿಕೆಗಳಲ್ಲಿ ಪ್ರಕಟವಾದ ಹೊಸ ಕಾವ್ಯ ಪರಿಚಯಿಸುವ ಉದ್ದೇಶದ ಬರೆಹಗಳಲ್ಲಿ ಹೊಸ ಕಾವ್ಯದ ಅನುಸಂಧಾನ ಮಾರ್ಗವನ್ನು ಸೂಚಿಸಲಾಯಿತು. ಹೀಗೆ ನವ್ಯ ಮಾರ್ಗ ಕನ್ನಡ ಸಾಹಿತ್ಯದಲ್ಲಿ ಹೊಸ ಮಾರ್ಗವೊಂದನ್ನು ತೆರೆಯಿತು. ಹೊಸ ಕವಿಗಳ ಹೊಸ ಜೀವನದೃಷ್ಟಿಯೇ ಹೊಸ ಕಾವ್ಯದ ಪ್ರೇರಕ ಅಂಶ. ಈ ಪ್ರೇರಣೆಯನ್ನು ಬಲಗೊಳಿಸುವಲ್ಲಿ, ಪ್ರಸರಿಸುವಲ್ಲಿ ಪತ್ರಿಕೆಗಳು ಅತ್ಯಂತ ವಿಶಿಷ್ಟ ಪಾತ್ರವನ್ನು ವಹಿಸಿದವು.

ನವ್ಯದ ಆರಂಭದಲ್ಲಿ ಅದನ್ನು ಪ್ರತಿಷ್ಠಾಪಿಸುವುದಕ್ಕೆ ಪ್ರತ್ಯೇಕವಾದ ಸಾಹಿತ್ಯಪತ್ರಿಕೆ ಇರಲಿಲ್ಲ. ಜಯಕರ್ನಾಟಕ, ಜನಪ್ರಗತಿ ಮೊದಲಾದವುಗಳಲ್ಲಿ ಅಡಿಗ ಮೊದಲಾದವರು ಲೇಖನಗಳನ್ನು ಬರೆದರು. ಬಂದ ಟೀಕೆಗಳಿಗೆ ಉತ್ತರಿಸಿದರು. ದಿನಪತ್ರಿಕೆಗಳಲ್ಲಿ ಪ್ರಜಾವಾಣಿ ನವ್ಯರಿಗೆ ವಿಶೇಷ ಆದ್ಯತೆ ನೀಡಿತು. ನವ್ಯರ ಕವನಗಳು, ಕಥೆಗಳು ಅದರಲ್ಲಿ ಪ್ರಕಟವಾದವು. ಪ್ರಜಾವಾಣಿಯಲ್ಲಿ ನವ್ಯದ ಬಗೆಗೆ ನಡೆದ ವಕಾಲತ್ತನ್ನು ಈಗಾಗಲೇ ಗಮನಿಸಲಾಗಿದೆ. ದಿನಪತ್ರಿಕೆಗೂ ಅದರದೇ ಮಿತಿ ಇರುತ್ತದೆ. ನವ್ಯದ ಕುರಿತು ಟೀಕೆಗಳು

ಅತಿಯಾದಾಗ ಅಡಿಗರು ನವ್ಯದ ಸಮರ್ಥನೆಗಾಗಿ, ನವ್ಯ ಸಾಹಿತ್ಯದ ವಿವರಣೆಗಾಗಿ ಒಂದು ವೇದಿಕೆಯನ್ನು ಒದಗಿಸುವ ಉದ್ದೇಶದಿಂದ 'ಸಾಕ್ಷಿ' ಪತ್ರಿಕೆಯನ್ನು ಆರಂಭಿಸಿದರು. ಆಗಲೇ 'ಲಹರಿ' ಆರಂಭವಾಗಿ ನಿಂತಿತ್ತು. 'ಸಂಕ್ರಮಣ' ಬರುತ್ತಿತ್ತು. ನವ್ಯ ಹಾಗೂ ನವ್ಯೋತ್ತರ ಕುರಿತ ಮುಂದಿನ ವಾಗ್ವಾದವನ್ನು ಏಕೀಕರಣದ ನಂತರದ ಬೆಳವಣಿಗೆಯ ಹಿನ್ನೆಲೆಯಲ್ಲಿ ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಅಧ್ಯಾಯ : ಐದು

ಏಕೀಕರಣದ ನಂತರದ ಪತ್ರಿಕೆ ಮತ್ತು ಸಾಹಿತ್ಯ

ಕರ್ನಾಟಕ ಏಕೀಕರಣದ ಬಳಿಕ ಪತ್ರಿಕೆಗಳ ಸ್ವರೂಪ ಬದಲಾಯಿತು. ದೇಶಕ್ಕೆ ಸ್ವಾತಂತ್ರ್ಯವೂ ದೊರೆತಿತ್ತು. ನಾಡಿನ ಏಕೀಕರಣವೂ ಆಯಿತು. ಇದರಿಂದಾಗಿ ಪತ್ರಿಕೆಗಳ ಮೇಲಿದ್ದ ಒಂದು ದೊಡ್ಡ ಜವಾಬ್ದಾರಿ ಇಳಿದಂತಾಯಿತು. ಇದೇ ಸಮಯದಲ್ಲಿ ಪತ್ರಿಕೆ ನಡೆಸುವುದನ್ನು ಲಾಭದ ಉದ್ಯಮವನ್ನಾಗಿ ಪರಿಗಣಿಸಲಾಯಿತು. ಇದರಿಂದಾಗಿ ಸಾಹಿತ್ಯ ಚಳವಳಿಗಳನ್ನು ಪ್ರತಿಪಾದಿಸುವ ಪೋಷಿಸುವ ಉದ್ದೇಶಕ್ಕಾಗಿಯೇ ಪತ್ರಿಕೆಗಳನ್ನು ನಡೆಸುವುದು ಅಗತ್ಯವಾಯಿತು. ಏಕೀಕರಣದ ನಂತರದ ಅವಧಿಯಲ್ಲಿ ಇಂಥ ಸಾಹಿತ್ಯ ಪತ್ರಿಕೆಗಳು ಹೊರಟಿದ್ದನ್ನು ಕಾಣುತ್ತೇವೆ. ಇವು ಕೆಲವೊಮ್ಮೆ ಏಕವ್ಯಕ್ತಿಯ ಸಾಹಸವಾಗಿ, ಮತ್ತೆ ಕೆಲವೊಮ್ಮೆ ಸಂಘ ಸಂಸ್ಥೆಗಳ ಮೂಲಕವಾಗಿ, ವಿಶ್ವವಿದ್ಯಾನಿಲಯಗಳು, ಮಠಗಳ ಮೂಲಕವಾಗಿಯೂ ಹೊರ ಬಂದಿವೆ. ಇಲ್ಲಿ ಲಾಭಮಾಡುವ ಉದ್ದೇಶ ಇಲ್ಲವೇ ಇಲ್ಲ. ಸಮಾನ ಹಿತಾಸಕ್ತಿಯ ಓದುಗರೊಂದಿಗೆ ಆಲೋಚನೆಗಳನ್ನು ಹಂಚಿಕೊಳ್ಳುವುದು ಇದರ ಉದ್ದೇಶ. ಕನ್ನಡ ನವೋದಯ ಮತ್ತು ಅದಕ್ಕೂ ಪೂರ್ವದ ಪತ್ರಿಕೆಗಳು ಸೀಮಿತ ವಲಯದಲ್ಲಿದ್ದ ಸಾಹಿತ್ಯ ಸೃಷ್ಟಿಯನ್ನು ಜನಸಾಮಾನ್ಯಗೊಳಿಸುವ ಕೆಲಸವನ್ನು ಮಾಡಿದವು. ಹಲವು ನಿಟ್ಟಿನಿಂದ ಸಾಹಿತ್ಯ ಸೃಷ್ಟಿಯಾಗಲಾರಂಭಿಸಿದಾಗ ಒಂದು ರೀತಿಯ ಏಕತಾನತೆ ಮೂಡಿತು. ಈ ಏಕತಾನತೆಯ ಆಚೆ ನಿಂತು ಚಿಂತಿಸುವ ಬರೆಹಗಾರರು ಮೂಡಿ ಬಂದರು.

ಈ ನವೋದಯದ ಸೌಂದರ್ಯ ಆರಾಧನೆಯ ವಿರುದ್ಧ ಪ್ರಗತಿಶೀಲರು ಬಂಡೆದ್ದರು. ಇದೇ ಸಂದರ್ಭದಲ್ಲಿಯೇ ಕಲೆ ಕಲೆಗಾಗಿಯೋ ಅಥವಾ ಕಲೆ ಬದುಕಿಗಾಗಿಯೋ ಎಂಬ ತಾತ್ವಿಕ ಪ್ರಶ್ನೆ ತಲೆ ಎತ್ತಿತು. ಪ್ರಗತಿಶೀಲ ಲೇಖಕರು ತಮ್ಮ ಆಲೋಚನೆಗಳನ್ನು ಅಂದಿನ ಹಲವು ಪತ್ರಿಕೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ನವ್ಯ ಸಾಹಿತ್ಯ ತಲೆದೋರುವ ಹೊತ್ತಿಗೆ ಹೊಸ ಕಾವ್ಯ ರೂಪಕ್ಕೆ ಚಾಲ್ತಿಯಲ್ಲಿದ್ದ ಪತ್ರಿಕೆಯಲ್ಲಿ ಅವಕಾಶ ದೊರೆಯುವುದು ದುರ್ಲಭವಾಗತೊಡಗಿತು. ಈ ನವ್ಯ ಸಾಹಿತ್ಯ ಚಳವಳಿಗೆ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಬೇಕು ಎಂಬ ಬದ್ಧತೆಯೊಂದಿಗೆ ಹುಟ್ಟಿಕೊಂಡ 'ಸಾಕ್ಷಿ' ಆನಂತರದ ಇಂಥ ಹಲವು ಸಾಹಿತ್ಯಪತ್ರಿಕೆಗಳಿಗೆ ಮಾದರಿಯಾಗುತ್ತದೆ. ಸಾಕ್ಷಿಗಿಂತ ಮೊದಲೇ ಧಾರವಾಡದಲ್ಲಿ 'ಸಂಕ್ರಮಣ' ಹುಟ್ಟುಪಡೆದಿತ್ತು. ತಮಗೆ ಮೈಸೂರಿನ 'ಲಹರಿ' ಪ್ರೇರಣೆ ನೀಡಿತು ಎಂದು ಸಂಕ್ರಮಣದಲ್ಲಿ ಅದರ ಆರಂಭದ ಸಂಪಾದಕ ತ್ರಯರು ಉಲ್ಲೇಖಿಸಿದ್ದಾರೆ.

೧೯ನೆ ಶತಮಾನದ ಕೊನೆಯಲ್ಲಿ ಹುಟ್ಟಿಕೊಂಡ ವಾಗ್ಭೂಷಣ, ೨೦ನೆ ಶತಮಾನದ ಮೊದಲ ಅರ್ಧದಲ್ಲಿ ಹುಟ್ಟಿಕೊಂಡ ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ, ಜಯಂತಿ, ಜೀವನ, ವಸಂತ ಹೀಗೆ ಸಮಾನ ಆಸಕ್ತಿಯ ಹಲವು ಪತ್ರಿಕೆಗಳು ಹಲವು ನಿಟ್ಟಿನಿಂದ ಸಾಹಿತ್ಯ ಪೋಷಣೆಗೆ ತೊಡಗಿದ್ದವು. ಆದರೆ ಇವೆಲ್ಲ ಕ್ರಮೇಣ ಸ್ತಬ್ದವಾದುವು. ನವ್ಯದ ಆಲೋಚನೆಗಳಿಗೆ ಬಲವಾದ ವೇದಿಕೆಯೊಂದನ್ನು ಒದಗಿಸುವ ಅಗತ್ಯ ತಲೆದೋರಿತು. ಸಾಹಿತ್ಯ ಚಳವಳಿಯನ್ನು ಮಾಡಬೇಕು ಎನ್ನುವ ಉದ್ದೇಶದಿಂದಲೇ ಲಹರಿ, ಸಂಕ್ರಮಣ, ಸಾಕ್ಷಿ, ಶೂದ್ರ, ಅನ್ವೇಷಣೆ, ರುಜುವಾತು, ಸಂವಾದ ಮೊದಲಾದವು ಹುಟ್ಟಿದವು. 'ಸಾಕ್ಷಿ' ನವ್ಯ ಸಾಹಿತ್ಯವನ್ನು ಬಲಪಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

೧೯೬೮ರಲ್ಲಿ ಹುಟ್ಟಿಕೊಂಡ 'ಸಾಕ್ಷಿ'ಯ ಮೊದಲ ಸಂಚಿಕೆಯಲ್ಲಿ ಅದರ ಸಂಪಾದಕ ಗೋಪಾಲಕೃಷ್ಣ ಅಡಿಗರು ಪತ್ರಿಕೆ ಹೊರತಂದ ಉದ್ದೇಶಗಳನ್ನು ಈ ರೀತಿ ಹೇಳಿದ್ದಾರೆ. "ಕೃತಿನಿಷ್ಠ ವಿಮರ್ಶೆಗೂ ವಸ್ತುನಿಷ್ಠ ವಿಚಾರಕ್ಕೂ ಒಂದು ವೇದಿಕೆಯಾಗುವ ಹಾಗೆ ಸಾಕ್ಷಿ ಎಂಬ ಪತ್ರಿಕೆಯೊಂದನ್ನು ಪ್ರಕಟಿಸಬೇಕೆಂಬ ಹಂಬಲ ನಮ್ಮಲ್ಲಿ ಅನೇಕರನ್ನು ಹಲವಾರು ವರ್ಷಗಳಿಂದ ಕಾಡುತ್ತ ಬಂದಿದೆ..." ಹಲವು ವರ್ಷಗಳಿಂದ ಕಾಡುತ್ತಿದ್ದರೂ ಪತ್ರಿಕೆ ಆರಂಭಿಸಲು ಅವರಿಗಿದ್ದ ಎರಡು ಮುಖ್ಯ ಆತಂಕ ಎಂದರೆ ಹಣದ್ದು ಮತ್ತು ಪತ್ರಿಕೆ ಜನಪ್ರಿಯವಾಗಲಾರದ್ದು ಎಂಬ ನಂಬಿಕೆ. ಇನ್ನೂ ಹೆಚ್ಚಿನದೆಂದರೆ ಚೆನ್ನಾಗಿ ಯೋಚಿಸಿ ಹೊಣೆಗಾರಿಕೆಯೊಡನೆ ತಕ್ಕ ಕಾಲಕ್ಕೆ ಉತ್ತಮ ಲೇಖನಗಳನ್ನು ಬರೆದುಕೊಡಬಲ್ಲ ಲೇಖಕರ ಸಹಕಾರದ ಅಗತ್ಯ.

'ಸಾಕ್ಷಿ'ಯನ್ನು ಅಡಿಗರು ಹೊರತಂದಾಗ ... "ಇದು ಯಾವುದೇ ಒಂದು ವ್ಯಕ್ತಿಯ ಗುಂಪಿನ ಅಥವಾ ಪಂಥದ ಮುಖವಾಣಿಯಾಗಲು ಬಯಸುವುದಿಲ್ಲ. ಎಲ್ಲ ಬಗೆಯ

ವಿಚಾರಗಳಿಗೂ, ಸಿದ್ಧಾಂತಗಳ ಮಂಡನೆಗೂ ಇಲ್ಲಿ ಯಾವಾಗಲೂ ಅವಕಾಶ ಉಂಟು” ಎಂದು ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸುವರು.

ಆದರೆ ‘ಸಾಕ್ಷಿ’ ಕೇವಲ ನವ್ಯದ ಮುಖವಾಣಿ ಆದದ್ದು ಈಗ ಇತಿಹಾಸ. ಸಾಹಿತ್ಯ ಅಂತರ್ಮುಖಿಯಾದಾಗ, ಓದುಗನಿಗೆ ಕಬ್ಬಿಣದ ಕಡಲೆಯಾದಾಗ ಸಹಜವಾಗಿಯೇ ಅದು ಜನರಿಂದ ದೂರವಾಯಿತು. ಜನರಿಂದ ದೂರವಾದ ಸಾಹಿತ್ಯದ ವಕಾಲತ್ತುವಹಿಸಿದ ‘ಸಾಕ್ಷಿ’ ಕೂಡ ಜನರಿಂದ ಮರೆಯಾಯಿತು. ‘ಸಾಕ್ಷಿ’ಯ ೩೬ ಸಂಚಿಕೆಗಳು ಹೊರಬಂದವು. ಕೊನೆಯ ಸಂಚಿಕೆಯಲ್ಲಿ ಅಡಿಗರು, ... ‘ಕೂತು ಕಷ್ಟಪಟ್ಟು ಬರೆಯುವವರ, ಲೇಖನವನ್ನೇ ವೃತ್ತಿ ಮಾಡಿಕೊಳ್ಳಲು ಸಾಧ್ಯವಾಗದಿರುವ ಧೀಮಂತರ ಸಂಖ್ಯೆ ಕಡಿಮೆಯಾಗಿರುವುದರಿಂದ ನಮ್ಮ ಉದ್ದೇಶಕ್ಕೆ ತಕ್ಕಂತೆ ಸಂಚಿಕೆಯನ್ನು ತರಲಾಗಿಲ್ಲ... .. ಸಂಭಾವನೆಯನ್ನು ಕೊಡುವುದು ಸಾಧ್ಯವಿಲ್ಲವಾಗಿ ಬಂದ ಲೇಖನಗಳನ್ನೇ ಪ್ರಕಟಿಸದೇ ಬೇರೆ ದಾರಿಯಿಲ್ಲ. ಕಥೆ, ಕವನ ಬಿಟ್ಟರೆ ಬೇರೆ ಪ್ರಕಾರದ ಬರಹಗಳು ಕಡಿಮೆಯೇ.. .. ಪತ್ರಿಕೆಯನ್ನು ನಿಲ್ಲಿಸದೇ ಬೇರೆ ದಾರಿಯಿಲ್ಲ’ ಎಂದಿರುವರು.

ಇದು ನಿರ್ದಿಷ್ಟ ಉದ್ದೇಶವೊಂದನ್ನು ಇಟ್ಟುಕೊಂಡು ಹೊರಡುವ ಎಲ್ಲ ಪತ್ರಿಕೆಗಳಿಗೂ ಒದಗುವ ಸ್ಥಿತಿ. ಕಾರಂತರೂ ಹಿಂದೆ ‘ವಸಂತ’ದಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಕಾಣಬಹುದು. ‘ಸಾಕ್ಷಿ’ ನವ್ಯ ಸಾಹಿತ್ಯವನ್ನು ಪರಿಚಯಿಸಲು, ಅರ್ಥೈಸಲು ಯತ್ನಿಸಿತು. ಅದಕ್ಕೊಂದು ತಾತ್ವಿಕತೆಯನ್ನು ಒದಗಿಸಲು ಶ್ರಮಿಸಿತು. ವಿಮರ್ಶೆಗೆ ಪರಿಭಾಷೆಗಳನ್ನು ಕಲ್ಪಿಸಲು ಕಷ್ಟಪಟ್ಟಿತು. ಸಾಹಿತ್ಯಪತ್ರಿಕೆಗಳ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ‘ಸಾಕ್ಷಿ’ ಸ್ಥಾನವನ್ನು ಗಳಿಸಿಕೊಂಡಿದೆ.

‘ಮನೋಹರ ಗ್ರಂಥಮಾಲೆ’ಯವರು ಹೊರತಂದ ‘ಮನ್ವಂತರ’ ಸಂಚಿಕೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ೧೯೬೨ರಿಂದ ಮುಂದಿನ ೧೦ ವರ್ಷಗಳ ವರೆಗೆ ೧೦ ಸಂಚಿಕೆಗಳು ಹೊರ ಬಂದಿವೆ. ಕನ್ನಡದಲ್ಲಿ ಹೊಸ ವಿಮರ್ಶೆಯನ್ನು ರೂಢಿಸುವ ಉದ್ದೇಶದೊಂದಿಗೆ ಹೊರ ಬಂದ ಇದು ಹಲವು ಉತ್ತಮ ವಿಮರ್ಶೆಗಳನ್ನು ನೀಡಿದೆ. ಬೇಂದ್ರೆಯವರ ‘ಕಾವ್ಯೋದ್ಯೋಗ’ ಕೀರ್ತಿನಾಥ ಕುರ್ತಕೋಟಿಯವರ ‘ಭೃಂಗದ ಬೆನ್ನೇರಿ ಬಂತು’ ಹೀಗೆ ಹಲವು ಲೇಖನಗಳು, ಕೃತಿ ಸಮೀಕ್ಷೆಗಳು ಇದರಲ್ಲಿವೆ.

೧೯೬೨ರ ಜನವರಿ ೨೬ರಂದು ಹೊನ್ನಾವರದಿಂದ ‘ಶೃಂಗಾರ’ ತ್ರೈಮಾಸಿಕ ಹೊರಟಿತು. ಎಲ್.ಎಸ್.ಶಾಸ್ತ್ರಿಯವರು ಇದರ ಸಂಪಾದಕರು. ಹೆಚ್ಚಾಗಿ ನವೋದಯ ಸಾಹಿತ್ಯಕ್ಕೆ ಮತ್ತು ಜಾನಪದಕ್ಕೆ, ಯಕ್ಷಗಾನಕ್ಕೆ ಸಂಬಂಧಿಸಿದ ಅನೇಕ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಇದು ಮೂರು ವರ್ಷಗಳ ಕಾಲ ನಡೆಯಿತು. ಆ ಕಾಲದ ಹಿರಿಯ ಲೇಖಕರಾದ ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಬೀಚಿ, ಸು.ರಂ. ಯಕ್ಕುಂಡಿ, ಗೌರೀಶ ಕಾಯ್ಕಿಣಿ, ದಿನಕರ ದೇಸಾಯಿ ಮೊದಲಾದವರೆಲ್ಲ ಇದರಲ್ಲಿ ಬರೆದಿರುವರು.

ಇದೇ ಸುಮಾರಿಗೆ ಮೈಸೂರಿನಿಂದ ಪೂರ್ಣಚಂದ್ರ ತೇಜಸ್ವಿ ಹಾಗೂ ಬಿ.ಎನ್.ಶ್ರೀರಾಮು ಅವರ ಸಂಪಾದಕತ್ವದಲ್ಲಿ 'ಲಹರಿ' ಪತ್ರಿಕೆ ಪ್ರಕಟಗೊಂಡಿತು. 'ಲಹರಿ'ಯ ಆರು ಸಂಚಿಕೆಗಳು ಮಾತ್ರ ಪ್ರಕಟಗೊಂಡವು. ಕಾವ್ಯ ಪ್ರಕಟಣೆಗೆ ಆದ್ಯತೆ ನೀಡಿದ 'ಲಹರಿ' ಅನೇಕ ಪಾಶ್ಚಾತ್ಯ ವಿದ್ವಾಂಸರ ಲೇಖನಗಳ ಕನ್ನಡ ಅನುವಾದವನ್ನು ಪ್ರಕಟಿಸಿತು. ಇದು ಹಲವು ಹೊಸ ವಿಚಾರಗಳನ್ನು ಸಾಹಿತ್ಯಾಸಕ್ತರಿಗೆ ತಲುಪಿಸಿತು.

'ಲಹರಿ'ಯಿಂದ ಸ್ಫೂರ್ತಿಗೊಂಡು ಧಾರವಾಡದ ಮೂವರು ಗೆಳೆಯರು ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ ೧೯೬೪ರಲ್ಲಿ 'ಸಂಕ್ರಮಣ'ವನ್ನು ಆರಂಭಿಸಿದರು. ಈ ಮೂವರು ಮಿತ್ರರು ಮೈಸೂರಿಗೆ ತೆರಳಿ 'ಲಹರಿ'ಯ ಕೆಲಸವನ್ನು ನೋಡಿ ಬಂದರು. ೧೯೬೪ರ ಆಗಸ್ಟ್ ೧೫ರಂದು ಹೊರಬಂದ 'ಸಂಕ್ರಮಣ'ದ ಮೊದಲ ಸಂಚಿಕೆ ಕಿರೀಟಾಕಾರದ ಅರವತ್ತನಾಲ್ಕು ಪುಟಗಳನ್ನು ಒಳಗೊಂಡಿತ್ತು.

"ಇಂದು ಕನ್ನಡ ಸಾಹಿತ್ಯವು ವಿವಿಧ ಅನುಭವಗಳ ಜೀವಂತವಾಣಿಯಾಗಿ ಹೊರಹೊಮ್ಮುತ್ತಿದೆ. ನವೀನ ಜೀವನ ಪ್ರಜ್ಞೆಯೊಂದು ಈಗ ಅರಳುತ್ತಿದೆ. ಇಂಥ ಪ್ರಜ್ಞೆಯುಳ್ಳ ಚೇತನಗಳ ಅಭಿವ್ಯಕ್ತಿಗೆ ಸರಿಯಾದ ವೇದಿಕೆಯನ್ನು ಒದಗಿಸಿಕೊಡುವ ಒಂದು ಪ್ರಯತ್ನ ಈ ಸಂಕ್ರಮಣ.. .. .. ವಿಮರ್ಶೆಯಲ್ಲಿ ಯಾರೊಬ್ಬರ ಮಾತೂ ಕೊನೆಯದೆಂದು ಹೇಳಲಿಕ್ಕಾಗುವುದಿಲ್ಲ. ಆದ್ದರಿಂದ ಇಲ್ಲಿ ವ್ಯಕ್ತವಾಗುವ ವಿಚಾರಗಳ ಬಗ್ಗೆ ಸಹೃದಯರ ಪ್ರತಿಕ್ರಿಯೆಗೆ ಯಾವಾಗಲೂ ಸ್ವಾಗತವಿದೆ" ಎಂಬ ಸಂಕಲ್ಪದೊಂದಿಗೆ ಹೊರಬಂದ ಸಂಕ್ರಮಣ ಇವತ್ತಿಗೂ ಪ್ರಕಟಗೊಳ್ಳುತ್ತಿದೆ. ೧೯೮೮ರಿಂದೀಚೆ ಸಂಕ್ರಮಣವು ವಾರ್ಷಿಕ ಸಾಹಿತ್ಯ ಸ್ಪರ್ಧೆಗಳನ್ನು ನಡೆಸುತ್ತಿದೆ. ಹೊಸಹೊಸ ಪ್ರತಿಭೆಗಳು ಹೊರಬರುವುದಕ್ಕೆ ಇದು ಸೂಕ್ತ ವೇದಿಕೆಯಾಗಿದೆ.

'ಸಂಕ್ರಮಣ'ಕ್ಕೆ ನಾಲ್ಕು ವರ್ಷ ತುಂಬಿದಾಗ 'ಕನ್ನಡಪ್ರಭ'ದ ತಮ್ಮ ಅಂಕಣ 'ಸಾಹಿತ್ಯ ಸಲ್ಲಾಪ'ದಲ್ಲಿ ಹಾಮಾನಾ,[1] "ನಮ್ಮ ಸಾಹಿತ್ಯದಲ್ಲಿ ಜರೂರಾಗಿ ಆಗಬೇಕಾದ ಕೆಲಸ ಆರೋಗ್ಯಕರ, ಶಕ್ತಿಪೂರ್ಣ ವಿಮರ್ಶೆ, ವ್ಯಕ್ತಿಪೂಜೆ, ಪಂಥ ನಿರ್ಮಾಣ, ಜಾತೀಯ ಗುಂಪುಗಾರಿಕೆ, ತತ್ಕಾಲದಲ್ಲಿ ಸಂಬಂಧಿಸಿದವರಿಗೆ ಕೆಲವರಿಗಾದರೂ ನಾಯಕತ್ವವನ್ನೋ ಪ್ರಸಿದ್ಧಿಯನ್ನೋ ತರಬಹುದು. ಇದರಿಂದ ಸಹಜವಾದ ಮೌಲ್ಯ ನಿರ್ಮಾಣ, ಪರಿಷ್ಕರಣೆಗಳಿಗೆ ಯಾವ ಉಪಯೋಗವೂ ಆಗುವುದಿಲ್ಲ. ನಾಲ್ಕು ಹಾದಿಗಳು ಕೂಡುವ ಚೌಕದಲ್ಲಿ ಮುಖ್ಯವಾಗಿ ಆಗಬೇಕಾದುದು ಯೋಗ್ಯ ಮಾರ್ಗದರ್ಶನ. ಸಂಕ್ರಮಣ ಹೊಸ ಸಾಹಿತ್ಯ ನಿರ್ಮಾಣದ ನಾನಾ ವಿಚಾರಧಾರೆಗಳ ಸಂಘರ್ಷಣದ ಈ ಕಾಲದಲ್ಲಿ ತೋರು ಬೆಳಕಾಗಬೇಕೆಂಬುದೇ ಸಾಹಿತ್ಯ ಪ್ರೇಮಿಗಳೆಲ್ಲರ ಅಪೇಕ್ಷೆ" ಎಂದು ಹೇಳಿದ್ದರು.

೧.ಕನ್ನಡಪ್ರಭ, ಆ.೨೬, ೧೯೬೮

'ಸಂಕ್ರಮಣ'ವನ್ನು ಕ್ರಮವಾಗಿ ನೋಡುತ್ತ ಬಂದವರಿಗೆ ಈ ಅಪೇಕ್ಷೆ ಹುಸಿಯಾಗಿಲ್ಲ ಎಂಬುದು ಅರಿವಿಗೆ ಬರುತ್ತದೆ.

'ಸಂಕ್ರಮಣ' ಆರಂಭದಲ್ಲಿ ನವ್ಯ, ನಂತರ ಬಂದ ಬಂಡಾಯ, ದಲಿತ ಚಳವಳಿಗಳಿಗೆ ಧ್ವನಿಯಾಯಿತು. ಈ ಸಾಹಿತ್ಯ ಪ್ರಕಾರಗಳ ಮೀಮಾಂಸೆಯನ್ನು ರೂಪಿಸಿತು. ವಿಮರ್ಶೆಯನ್ನು ಬೆಳೆಸಿತು. ಹೊಸ ಬರೆಹಗಾರರ ಬೆನ್ನು ತಟ್ಟಿತು. 'ಸಂಕ್ರಮಣ'ದ ಸಂಪುಟಗಳನ್ನು ಒಮ್ಮೆ ತಿರುವಿ ಹಾಕಿ ನಂತರ 'ಸಂಕ್ರಮಣ' ಇಲ್ಲದಿದ್ದರೆ ಎಂಬ ನಿರ್ವಾತವನ್ನು ಊಹಿಸಿಕೊಂಡರೆ ಅದರ ಮಹತ್ವ ಅರಿವಾಗುತ್ತದೆ. 'ಸಂಕ್ರಮಣ'ದ ಮೊದಲ ವರ್ಷದ ಕೊನೆಯ ಸಂಚಿಕೆಯನ್ನು 'ಸಂಕ್ರಮಣ ಕಾವ್ಯ' ಸಂಚಿಕೆಯನ್ನಾಗಿ ಪ್ರಕಟಿಸಲಾಗಿದೆ. ಈ ಸಂಚಿಕೆಯ ವ್ಯಾಪ್ತಿಯನ್ನು ವಿವರಿಸುತ್ತ ಅದರ ಸಂಪಾದಕರು, "ಹೊಸ ಒಲವುಗಳನ್ನು ಪ್ರತಿಬಿಂಬಿಸುವ ಕನ್ನಡ ಕಾವ್ಯದ ಸೃಷ್ಟಿಯಲ್ಲಿ ತೊಡಗಿದ ಕವಿಗಳ ಪ್ರಕಟಿತ ಅಥವಾ ಅಪ್ರಕಟಿತ ಕವನಗಳಿಂದ ಪ್ರಾತಿನಿಧಿಕವೆನ್ನಿಸಬಹುದಾದವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಈ ನಿಟ್ಟಿನಲ್ಲಿ ನಮ್ಮ ಕಾವ್ಯದ ಮೊದಮೊದಲಿನ ಸಾಧನೆಯಲ್ಲಿ ತೊಡಗಿದವರನ್ನು ನಂತರ ಅದರ ಬೆಳವಣಿಗೆಗಾಗಿ ಈಗಾಗಲೆ ಸಾಕಷ್ಟು ಪ್ರಯತ್ನಪಟ್ಟವರನ್ನು ಮತ್ತು ಇನ್ನು ಮುಂದೆ ಈ ಹಾದಿಯಲ್ಲಿ ನಡೆಯಲಾರಂಭಿಸುತ್ತಿರುವವರನ್ನು ಇಲ್ಲಿ ಪ್ರತಿನಿಧಿಸಲಾಗಿದೆ." ಎಂದು ಹೇಳುತ್ತಾರೆ. ಹೊಸ ಒಲವಿನ ಕಾವ್ಯ ಮತ್ತು ಹಳಬರು ಮತ್ತು ಹೊಸಬರ ಸಮ್ಮಿಳನವನ್ನು ಇಲ್ಲಿ ಅವರು ಸಾಧಿಸಿದ್ದಾರೆ. ಪ್ರಾತಿನಿಧಿಕವಾದ ಈ ಸಂಕಲನ ಉತ್ಕೃಷ್ಟವೆಂಬ ಭ್ರಮೆ ಅವರಿಗಿರಲಿಲ್ಲ. ಈ ನಾಡಿನ ವಿಮರ್ಶಕರೇ ಈ ಕಾವ್ಯದ ಬಗ್ಗೆ ನಿರ್ಣಯ ಕೈಗೊಳ್ಳಲಿ ಎಂಬ ಅಪೇಕ್ಷೆ ಅವರದ್ದು. ಈ ಎಚ್ಚರಿಕೆಯ ಗುಣವು ಪತ್ರಿಕೆ ವೇದಿಕೆಯಾಗುತ್ತದೆ ಘೋಷಕವಾಗುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ನವ್ಯ ಚಳವಳಿ ಕಾವನ್ನು ಕಳೆದುಕೊಂಡಕೂಡಲೆ ಅದಕ್ಕೆ ಆಸರೆಯಾಗಿ ನಿಂತಿದ್ದ 'ಸಾಕ್ಷಿ' ನಿಂತಿತು. ಆದರೆ ಬಂಡಾಯ ಚಳವಳಿ ಇಂದು ತೀವ್ರತೆಯನ್ನು ಕಳೆದುಕೊಂಡಾಗಲೂ 'ಸಂಕ್ರಮಣ' ಮುಂದುವರಿದಿದೆ. ಹೊಸ ಸಾಧ್ಯತೆಗಳ ಶೋಧಕ್ಕಾಗಿ ಅದು ಪ್ರಯತ್ನಿಸುತ್ತಲೇ ಇದೆ.

೧೯೮೧ರಲ್ಲಿ ಯು.ಆರ್.ಅನಂತಮೂರ್ತಿಯವರ ಸಂಪಾದಕತ್ವದಲ್ಲಿ 'ರುಜುವಾತು' ಪ್ರಕಟವಾಯಿತು. "ಸೃಜನಶೀಲ ಹೊಸ ಪ್ರಯೋಗಗಳಿಗಾಗಿ, ಹೊಸ ದಿಕ್ಕಿನ ಹುಡುಕಾಟಕ್ಕಾಗಿ, ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದ ಶೋಧಕ್ಕಾಗಿ" ಎಂಬ ಹೇಳಿಕೆಯೊಂದಿಗೆ ಪ್ರಕಟಣೆ ಆರಂಭಿಸಿದ 'ರುಜುವಾತು' 'ಸಾಕ್ಷಿ'ಯ ಹಾಗೆ ನವ್ಯ ಚಳವಳಿಗೆ ಪೂರಕವಾಗಿ ಕೆಲಸ ಮಾಡಿತು. ಆ ಕಾರಣಕ್ಕಾಗಿಯೇ ಅದರ ಓದುಗರ ಸಂಖ್ಯೆಯೂ ಸೀಮಿತಗೊಂಡಿತು. ಹಲವು ಪಾಶ್ಚಾತ್ಯ ವಿದ್ವಾಂಸರ ಲೇಖನಗಳನ್ನು ಇದರಲ್ಲಿ ಅನುವಾದಿಸಿ ಪ್ರಕಟಿಸಲಾಗಿದೆ. 'ರುಜುವಾತು'ವಿನ ಬರೆಹಗಾರರ ಪಡೆ ದೊಡ್ಡದಿತ್ತು. ಡಿ.ಆರ್.ನಾಗರಾಜ, ಯಶವಂತ ಚಿತ್ತಾಲ, ಗೌರೀಶ ಕಾಯ್ಕಿಣಿ, ಜಿ.ಎಸ್.ಶಿವರುದ್ರಪ್ಪ ಶ್ರೀಕೃಷ್ಣ ಆಲನಹಳ್ಳಿ, ಸರ್ವಮಂಗಳ, ಟಿ.ಜಿ.ರಾಘವ, ಪೋಲಂಕಿ ರಾಮಮೂರ್ತಿ, ಶಂಕರ

ಮೊಕಾಶಿ ಪುಣೇಕರ, ಪ್ರಸನ್ನ, ಡಿ.ಸಿದ್ಧಲಿಂಗಯ್ಯ, ನಾ.ಡಿಸೋಜ, ಹಾ.ಮ.ಕನಕ ಇವರೆಲ್ಲ ರುಜುವಾತಿಗೆ ಬರೆದಿದ್ದಾರೆ. ಡಿ.ಸಿದ್ಧಲಿಂಗಯ್ಯನವರ ಆತ್ಮಕಥನ 'ಬಾಲ್ಯಕಾಂಡ' ಇದರಲ್ಲಿ ಪ್ರಕಟವಾಗಿದೆ. ಜೀನ್ ಪಾಲ್ ಸಾರ್ತ್ರ್ ಅವರ 'ಗೋಡೆ' ಕಥೆಯನ್ನು ಕೆ.ವಿ.ಗೋಪಾಲ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಬುದ್ಧಿ-ಭಾವನೆ: ಕೆಲವು ಟಿಪ್ಪಣಿಗಳು'ನ್ನು ಶ್ರೀರಂಗರು ಬರೆದಿರುವರು. ವಾಗ್ವಾದದಲ್ಲಿ ಗೌರೀಶ ಕಾಯ್ಕಿಣಿ 'ಭಗವದ್ಗೀತೆ, ಅಪರಾಧ ಇತ್ಯಾದಿ'ಗಳ ಬಗ್ಗೆ ಅಭಿಪ್ರಾಯ ಮಂಡಿಸಿದ್ದಾರೆ. ಪುಸ್ತಕ ವಿಮರ್ಶೆಯಲ್ಲಿ ಪಿ.ಬಿ.ಬಡಿಗೇರ ಅವರ 'ಉತ್ತರಾಧ್ಯಯನ ಸೂತ್ರ, ಸಂಗ್ರಹ'ದ ಬಗ್ಗೆ ಎಂ.ಡಿ.ವಸಂತರಾಜ್ ಬರೆದ ವಿಮರ್ಶೆ ಒಳ್ಳೆಯ ಅಧ್ಯಯನದಿಂದ ಕೂಡಿದೆ. 'ಇಂಥ ಪುಸ್ತಕಗಳು ಕನ್ನಡಕ್ಕೆ ಕೊಡುಗೆಯಾಗಬಲ್ಲವೆ?' ಎಂಬ ಪ್ರಶ್ನೆ ಪಾಂಡಿತ್ಯಪೂರ್ಣವಾಗಿ ಸಮರ್ಥನೆಯಾಗಿದೆ. ಪುಸ್ತಕದಲ್ಲಿ ಎಲ್ಲೆಲ್ಲಿ ತಪ್ಪುಗಳು ಇವೆ ಎಂಬುದನ್ನು ಅವರು ಪಟ್ಟಿಮಾಡುತ್ತಾರೆ. ವಿಶ್ವವಿದ್ಯಾಲಯದ ಪ್ರಾಕೃತ ಪ್ರಾಧ್ಯಾಪಕರೊಬ್ಬರು ಬರೆದ ಇಂಥ ಪುಸ್ತಕದಲ್ಲಿ ಈ ರೀತಿಯ ತಪ್ಪುಗಳು ಇರುವುದು ಅಕ್ಷಮ್ಯ ಎಂಬ ವಸಂತರಾಜ್ ಅವರ ಅಭಿಪ್ರಾಯವನ್ನು ಅನುಮೋದಿಸಬೇಕಾಗುತ್ತದೆ. 'ರುಜುವಾತು'ವಿನಲ್ಲಿ ಗಾಂಧೀಜಿಯ ಬಗ್ಗೆ ಸಂಪಾದಕರ ಟಿಪ್ಪಣಿಯಲ್ಲದೆ ಪ್ರೀತೀಶ ನಂದಿ ಬರೆದ ಲೇಖನದ ಅನುವಾದವೂ ಪ್ರಕಟವಾಗಿದೆ. ಗಾಂಧೀಜಿಯನ್ನು ಹೊಸ ದೃಷ್ಟಿಯಿಂದ ಪರಿಭಾವಿಸುವುದಕ್ಕೆ ಇದು ನೆರವಾಗಬಲ್ಲದು. ಹೀಗೆ ಹೊಸ ಹೊಸ ವಿಚಾರಗಳನ್ನು ನೀಡಿದ 'ರುಜುವಾತು' ಉತ್ತಮ ಸಾಹಿತ್ಯಪತ್ರಿಕೆಯಾಗಿತ್ತು.

೧೯೮೬ರಿಂದ ಕತೆಗಾರ ರಾಘವೇಂದ್ರ ಪಾಟೀಲರು ಮಲ್ಲಾಡಿಹಳ್ಳಿಯಿಂದ 'ಸಂವಾದ' ಪತ್ರಿಕೆಯನ್ನು ಆರಂಭಿಸಿದರು. ಇದೇ ಮುಂದೆ ೩೮ನೆ ಸಂಚಿಕೆಯಿಂದ 'ಸಾಹಿತ್ಯ ಸಂವಾದ'ವಾಗಿ ಪ್ರಕಟವಾಗುತ್ತಿದೆ. ಪತ್ರಿಕೆಯ ಹೆಸರು ನೊಂದಣಿಯಾಗುವಾಗ ಅದು 'ಸಾಹಿತ್ಯ ಸಂವಾದ'ವಾಗುವುದು. "... ಸಂವಾದವು ರುಜುವಾತು, ಶೂದ್ರ, ಸಂಕ್ರಮಣ, ಅಂಕಣ ಮುಂತಾದ ಪತ್ರಿಕೆಗಳೊಂದಿಗೆ ಪೂರಕವಾಗಿ ಕೆಲಸ ಮಾಡುವ ಆಸೆ ಹೊಂದಿದೆ. ಹಳ್ಳಿಯ ಪ್ರಜ್ಞೆ ಮತ್ತು ಸಾಂಸ್ಕೃತಿಕ ಆವರಣಕ್ಕೆ ಅಭಿವ್ಯಕ್ತಿಕೊಡುವ ವಿಶೇಷ ಉದ್ದೇಶ ಹೊಂದಿದೆ" ಎಂದು ರಾಘವೇಂದ್ರ ಪಾಟೀಲರು ಮೊದಲ ಸಂಚಿಕೆಯಲ್ಲಿ ಬರೆದಿದ್ದಾರೆ. ನಮ್ಮ ಸಾಹಿತ್ಯಿಕ- ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ, ವಸ್ತುನಿಷ್ಠ ಸತ್ಯದ ಆವಿಷ್ಕಾರಕ್ಕೆ ಎಂಬ ಘೋಷ ವಾಕ್ಯದೊಂದಿಗೆ ಹೊರಟ ಸಂವಾದ ಅದಕ್ಕೆ ಅನುಗುಣವಾಗಿ ಕೆಲಸ ಮಾಡಿದೆ.

'ಸಂವಾದ'ವು 'ಸಾಹಿತ್ಯ ಸಂವಾದ'ವಾದ ಸಂದರ್ಭದಲ್ಲಿ ರಾಘವೇಂದ್ರ ಪಾಟೀಲರು, "ಒಂಬತ್ತು ವರ್ಷಗಳ ಹಿಂದೆ (೧೯೮೬ರಲ್ಲಿ) ನಾವು ಆರು ಜನ ಗೆಳೆಯರು ಇಂಥ ಹತ್ತು ಹಲವು ಯೋಚನೆಗಳನ್ನು ಇಟ್ಟುಕೊಂಡು ಸಂವಾದ (ಇಂದು ಸಾಹಿತ್ಯ ಸಂವಾದ) ಪತ್ರಿಕೆಯನ್ನು ಆರಂಭಿಸಿದೆವು. ನಮ್ಮಲ್ಲಿ ಯಾರೇ ಸಂಪಾದಕರಾಗಿದ್ದರೂ, ಈ ಸಂವಾದವನ್ನು ನಡೆಸುವ ಮನಸ್ಸು ನಮ್ಮೆಲ್ಲರದ್ದೂ ಆಗಿರುತ್ತದೆ. ಅದರ ಕನಸುಗಳು ನಮ್ಮೆಲ್ಲರ ಕನಸುಗಳೂ ಆಗಿರುತ್ತವೆ. ಈ ನಮ್ಮ ಕನಸುಗಳು ಸಾಂಸ್ಕೃತಿಕ ಆರೋಗ್ಯವನ್ನು

ಕುರಿತಾದವುಗಳು- ರುಚಿ ಪ್ರಜ್ಞೆಯನ್ನು ಕುರಿತಾದವುಗಳು. 'ಎಲ್ಲ ತತ್ವದೆಲ್ಲೆ ಮೀರಿ' ಇರುವ ಜೀವಂತಿಕೆಯ ಧಾರೆಯನ್ನು ಕಾಣುವಂಥದು. ಕಾಣಿಸುವಂಥದು. ಇಂಥ ಕನಸು ಕಾಣುವ ಮುಗ್ಧತೆ ನಮ್ಮಲ್ಲಿ ತೀರಿದಾಗ ಅದು ಮತ್ತೊಂದು ಮನದ ಮುಂದೆ ರೂಹುಗೊಳ್ಳುತ್ತದೆನ್ನುವದು ನಮ್ಮ ನಂಬಿಕೆ. ಆಗ ಮನಸ್ಸು ಇಂಥ ಸಂವಾದದ ಬೆನ್ನು ಹತ್ತುತ್ತದೆ. ಅಂತೂ ಈ ಸಂವಾದ ನಿತ್ಯ... ನಿರಂತರ..'' ಎನ್ನುವ ಮಾತನ್ನು ಹೇಳುತ್ತಾರೆ. ಅವರು ಕನಸಿದ ಹಾಗೆ ಸಾಂಸ್ಕೃತಿಕ ಆರೋಗ್ಯವನ್ನು ಕಾಪಾಡುವಂಥ ಅನೇಕ ಲೇಖನಗಳು ಇದರಲ್ಲಿ ಬಂದಿವೆ.

ಸಾಹಿತ್ಯ ಸಂವಾದದಲ್ಲಿ ಪುಸ್ತಕಗಳ ವಿಮರ್ಶೆ ಎರಡು ಶೀರ್ಷಿಕೆಗಳಲ್ಲಿ ಪ್ರಕಟವಾಗುತ್ತಿವೆ. 'ಹೊಸ ಓದು' ವಿಭಾಗದಲ್ಲಿ ಕೃತಿಯೊಂದರ ಗಂಭೀರವಾದ ವಿವರವಾದ ವಿಮರ್ಶೆ ಇರುತ್ತದೆ. 'ಮೊದಲ ನೋಟ' ವಿಭಾಗದಲ್ಲಿ ಹೊಸ ಪುಸ್ತಕಗಳ ಸಂಕ್ಷಿಪ್ತ ಪರಿಚಯ ಇರುತ್ತದೆ. ಸಂವಾದದ ಲೇಖಕರ ಬಳಗದಲ್ಲಿ ಕೆ.ವಿ.ಸುಬ್ಬಣ್ಣ, ಆರ್.ಕೆ. ಮಣಿಪಾಲ, ಕಾ.ತ.ಚಿಕ್ಕಣ್ಣ ಪುರುಷೋತ್ತಮ ಬಿಳಿಮಲೆ, ರಾಜಾರಾಮ ಹೆಗಡೆ, ಎಸ್.ಪಟ್ಟಾಭಿರಾಮ ಸೋಮಯಾಜಿ, ಡಾ.ರಹಮತ್ ತರೀಕೆರೆ, ಪ್ರಹ್ಲಾದ ಅಗಸನಕಟ್ಟೆ, ಎಚ್.ಎಸ್. ವೆಂಕಟೇಶ ಮೂರ್ತಿ, ಸಂತೋಷ ಚೊಕ್ಕಾಡಿ, ತೀ.ನಂ.ಶಂಕರನಾರಾಯಣ, ಕೆ.ವಿ.ತಿರುಮಲೇಶ, ಜಿ.ಎಸ್.ಶಿವರುದ್ರಪ್ಪ, ಚೆನ್ನವೀರ ಕಣವಿ, ಲಿಂಗದೇವರು ಹಳೆಮನೆ, ಬಸವರಾಜ ಮಲಶೆಟ್ಟಿ, ಬಸವರಾಜ ಸಬರದ, ಎಚ್.ಎಸ್.ರಾಘವೇಂದ್ರರಾವ್, ಬಾಲಸುಬ್ರಹ್ಮಣ್ಯ ಕಂಜರ್ಪಣೆ ಮೊದಲಾದವರು ಸೇರಿದ್ದಾರೆ. ಸಂವಾದವು ಕಾಡಿನ ಹುಡುಗ ಕೃಷ್ಣ, ಮಾಸ್ತಿ, ಸತ್ಯಜಿತ್ ರೇ, ಸ್ತ್ರೀವಾದ, ಲಂಕೇಶರ ಕುರಿತು ವಿಶೇಷ ಸಂಚಿಕೆಗಳನ್ನು ತಂದಿದೆ. 'ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿ (ಕೊಲೊನಿಯಲ್) ಅನುಭವದ ಸ್ವರೂಪ', 'ಮಾಸ್ತಿ ಕತೆಗಳ ಹಿಂದಿರುವ ತಿಳುವಳಿಕೆ', 'ಸಂಸ್ಕೃತಿ ಮತ್ತು ಸಂಸ್ಥೆಗಳು- ಒಂದು ಚರ್ಚೆ', 'ಆನಂದಕಂದರ ಐತಿಹಾಸಿಕ ಕಾದಂಬರಿಗಳು', 'ವಚನ ಸಂಸ್ಕೃತಿಯಲ್ಲಿ ಮಹಿಳೆ: ಒಂದು ಗತಿಶೀಲ ಅಧ್ಯಯನ', 'ಸಾಹಿತ್ಯ ಪರಂಪರೆಯ ಸಾತತ್ಯ ಮತ್ತು ಸ್ಥಿತ್ಯಂತರ: ಕೆಲವು ಟಿಪ್ಪಣಿಗಳು' ಹೀಗೆ ಹಲವು ಹೊಸ ಚಿಂತನೆಯ ಲೇಖನಗಳು ಪ್ರಕಟವಾಗಿವೆ. ಸಂವಾದದ ಇದುವರೆಗಿನ ಸಂಚಿಕೆಗಳನ್ನು ಗಮನಿಸಿದಾಗ ಅದು ತನ್ನ ಉದ್ದೇಶ ಸಾಧನೆಯಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬೇಕು.

ಡಿ.ವಿ.ಪ್ರಹ್ಲಾದ, ರವಿಕುಮಾರ ಕಾಶಿ, ಎನ್.ಎಸ್.ಶ್ರೀಧರಮೂರ್ತಿ ಸೇರಿಕೊಂಡು ೧೯೮೮ರಲ್ಲಿ 'ಸಂಚಯ' ದ್ವೈಮಾಸಿಕವನ್ನು ಆರಂಭಿಸಿದರು. ಸಾಂಸ್ಕೃತಿಕ ಸಂಕಲನವಾಗಿ ಹೊರ ಬಂದ 'ಸಂಚಯ' ಕೇವಲ ಸಾಹಿತ್ಯಕ್ಕೆ ಸೀಮಿತಗೊಳ್ಳದೆ ಸಂಸ್ಕೃತಿಯ ಎಲ್ಲ ನೆಲೆಗಳಲ್ಲೂ ತನ್ನ ಬಾಹುವನ್ನು ಚಾಚಿತು. ಇದಕ್ಕೆ ಅದು ಹೊರತಂದಿರುವ ಚಲನಚಿತ್ರ ವಿಶೇಷಾಂಕ, ಕರ್ನಾಟಕದ ಸಮಕಾಲೀನ ದೃಶ್ಯಕಲೆ ಕುರಿತ ವಿಶೇಷ ಸಂಚಿಕೆ 'ಚೌಕಟ್ಟು' ಮೊದಲಾದವುಗಳೇ ಸಾಕ್ಷಿ. ಸಾಹಿತ್ಯದ ಸಂದರ್ಭದಲ್ಲೂ 'ಸಂಚಯ'ವು ಸು.ರಂ. ಎಕ್ಕುಂಡಿ ಸ್ಮರಣೆ, ರಾಮಣ್ಣನ ನೆನಪು, ಕನ್ನಡದ ಸಣ್ಣ ಕತೆಗಳು: ವಿಶೇಷಸಂಚಿಕೆ, ಹೀಗೆ ಹಲವು

ವಿಶೇಷ ಸಂಚಿಕೆಗಳನ್ನು ಹೊರ ತಂದಿದೆ. 'ಸಂಚಯ'ದ ಲೇಖನಗಳಲ್ಲೂ ವೈವಿಧ್ಯವಿದೆ. ಸ್ವಾತಂತ್ರ್ಯಕ್ಕೆ ಐವತ್ತು ವರ್ಷ; ವ್ಯಾಪಾರಿ ಸಿನಿಮಾಗಳು- ಕಥನ ಸವಾಲುಗಳು; ನವ್ಯೋತ್ತರ ಕಲೆ ಮತ್ತು ಭಾರತೀಯ ಸಂದರ್ಭ; ಕಾರಂತ: ವ್ಯಕ್ತಿಚಿತ್ರ; ಪ್ರಭುತ್ವ ಮತ್ತು ಕನ್ನಡ ಸಾಹಿತಿಗಳು; ಕನ್ನಡದ ಸಣ್ಣ ಕಥೆಗಳ ವಿಭಿನ್ನ ನೆಲೆಗಳು; ಸಮಕಾಲೀನ ಕಲೆಯ ಕೆಲವು ಸವಾಲುಗಳು- ಹೀಗೆ ವಿಭಿನ್ನ ನೆಲೆಯಲ್ಲಿ ಲೇಖನಗಳು ಬಂದಿವೆ. ಸಂಕ್ರಮಣದ ಹಾಗೆ ಸಂಚಯವೂ ಸಾಹಿತ್ಯ ಸ್ಪರ್ಧೆಗಳನ್ನು ನಡೆಸಿ ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದಿದೆ.

೧೯೭೨ರಲ್ಲಿ ಹುಟ್ಟಿಕೊಂಡ 'ಶೂದ್ರ', ಅನೇಕ ಪ್ರಗತಿಪರ, ನವ್ಯ, ಬಂಡಾಯ ಲೇಖಕರಿಗೆಲ್ಲ ವೇದಿಕೆಯಾಗಿದೆ. 'ಮುಕ್ತ ಚರ್ಚೆಗಾಗಿ ಶೂದ್ರ, ತಿಂಗಳ ಪತ್ರಿಕೆ' ಎಂಬ ಘೋಷಣೆಯೊಂದಿಗೆ ಶೂದ್ರ ಶ್ರೀನಿವಾಸ ಇದನ್ನು ಬೆಂಗಳೂರಿನಿಂದ ಹೊರಡಿಸುತ್ತಿರುವರು. 'ಶೂದ್ರ'ಕ್ಕೆ ಡಿ.ಆರ್.ನಾಗರಾಜ, ಮಲ್ಲೇಪುರಂ ಜಿ.ವೆಂಕಟೇಶ, ಮುರಾರಿ ಬಲ್ಲಾಳ, ರಾಜಾರಾಮ ಹೆಗಡೆ, ಕುಂ.ವೀರಭದ್ರಪ್ಪ, ಮೊಗಳ್ಳಿ ಗಣೇಶ, ಬಸವರಾಜ ಸಬರದ, ಶಂಕರ ಪಾಟೀಲ, ಮ.ನ.ಜವರಯ್ಯ, ಕೆ.ವಿ.ಸುಬ್ಬಣ್ಣ, ಪ್ರತಿಭಾ ನಂದಕುಮಾರ ಹೀಗೆ ಸಮಕಾಲೀನ ಪ್ರಮುಖರೆಲ್ಲ ಬರೆದಿದ್ದಾರೆ. ಸಾಹಿತ್ಯ ಮತ್ತು ರಾಜಕೀಯ; ಬೇಂದ್ರೆ, ಪ್ರಣಯ ಕಾವ್ಯದ ಸೈದ್ಧಾಂತಿಕ ನೆಲೆಗಳು; ಅನಂತಮೂರ್ತಿಯವರ ಕಾದಂಬರಿಗಳ ತೌಲನಿಕ ವಿವೇಚನೆ; ಪ್ರವಾಸಿ ಬರೆದ ಇತಿಹಾಸ; ಅಸ್ತಿತ್ವವಾದಿ ಚಿಂತನೆ; ಭಾರತೀಯ ನಾಸ್ತಿಕ ದರ್ಶನಗಳು; ರೂಪಕಗಳ ಮಹಾಜಗತ್ತು; ದಲಿತ ಚಳುವಳಿ ಕುರಿತು; ಶೂದ್ರ ತಪಸ್ವಿ- ಒಂದು ಹೊಸ ಓದು; ಸಾಹಿತ್ಯ ಮತ್ತು ಚರಿತ್ರೆ;- ಹೀಗೆ ಹಲವು ಆಸಕ್ತಿಯ ವಿಷಯಗಳು ಪ್ರಕಟವಾಗಿವೆ. ಸಂಕ್ರಮಣದ ಹಾಗೆ ದೀರ್ಘಕಾಲ ನಡೆದು ಬಂದ ಸಾಹಿತ್ಯ ಪತ್ರಿಕೆ ಶೂದ್ರ ಕೂಡ. ತಿಂಗಳ ಕಾವ್ಯ, ಕನಸಿಗೊಂದು ಕಣ್ಣು (ಸಂಪಾದಕೀಯ), ಪುಸ್ತಕ ವಿಮರ್ಶೆ, ಒಳನೋಟ, ಈಗ ಕಂಡ ಪುಸ್ತಕ ಹೀಗೆ ಇದರಲ್ಲಿ ಶೀರ್ಷಿಕೆಗಳು ಇವೆ. ಅನೇಕ ಸಂದರ್ಭಗಳಲ್ಲಿ 'ಶೂದ್ರ' ವಿಶೇಷ ಸಂಚಿಕೆಗಳನ್ನು ಹೊರ ತಂದಿದೆ.

'ಶೂದ್ರ'ಕ್ಕೆ ಹತ್ತು ವರ್ಷ ತುಂಬಿದಾಗ ಯು.ಆರ್.ಅನಂತಮೂರ್ತಿಯವರು, "ಇರುವುದನ್ನು ಹೊರಹಾಕುವ ಅನಿವಾರ್ಯ ಕೆಲಸದ ನಡುವೆ ನಮ್ಮ ಸಂಸ್ಕೃತಿಯಲ್ಲಿ ಇನ್ನೂ ಇರದ್ದನ್ನು ಹೇಗೆ ಮೊಳೆಯಿಸಬೇಕೆಂದು ಕಿರು ಪತ್ರಿಕೆಯ ಸಂಪಾದಕ ಹೊಂಚುತ್ತಿರುತ್ತಾನೆ"[೨] ಎಂಬ ಮಾತಿಗೆ ಅನುಗುಣವಾಗಿ ಇರದುದನ್ನು ಮೊಳೆಯಿಸುವ ಸೃಜನ ಕಾರ್ಯದಲ್ಲಿ ಶೂದ್ರದ ಕೊಡುಗೆ ಮಹತ್ವದ್ದು.

'ಪುಸ್ತಕ ಲೋಕದ ಪರಿಚಾರಕ'ನಾಗಿ ೧೯೮೭ರಿಂದ ಬೆಂಗಳೂರಿನಿಂದ 'ಗಾಂಧಿ ಬಜಾರ್' ಸಾಹಿತ್ಯ ಮಾಸಿಕ ಪ್ರಕಟವಾಗತೊಡಗಿತು. ಕೆ.ಎಸ್.ಬಾಲಕೃಷ್ಣ (ಬಾಕಿನ)

೨.ಯು.ಆರ್.ಅನಂತಮೂರ್ತಿ, ಪೂರ್ವಾಪರ- ಪುಟ ೧೩೭

ಇದರ ಸಂಪಾದಕರು. ಪುಸ್ತಕಗಳನ್ನು ಪರಿಚಯಿಸುವುದರ ಜೊತೆಯಲ್ಲಿ ಉತ್ತಮ ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ. ಬಾಕಿನ ತಮ್ಮ 'ಲಿಪಿ ಪ್ರಕಾಶನ'ದ ಮೂಲಕ ಗ್ರಂಥ ಪ್ರಕಾಶನ ಉದ್ಯಮದಲ್ಲಿ ಹೆಸರು ಮಾಡಿದವರು. ಇವರೇ ಕವಿತೆಗಳಿಗೆ, ಕಾವ್ಯ ವಿಚಾರಕ್ಕೆ ಮೀಸಲಾಗಿದ್ದ 'ಕವಿತಾ' ಎಂಬ ತ್ರೈಮಾಸಿಕವನ್ನು ೧೯೬೬ರಿಂದ ೭೯ರ ವರೆಗೆ ನಡೆಸಿದ್ದರು. 'ಗಾಂಧಿ ಬಜಾರ' ಸಾಹಿತ್ಯಕ ವಾಗ್ವಾದಗಳಿಗೆ ಅತ್ಯುತ್ತಮ ವೇದಿಕೆಯಾಯಿತು. 'ಗಾಂಧಿ ಬಜಾರ'ದಲ್ಲಿ ಕೆ.ಮರುಳ ಸಿದ್ದಪ್ಪ, ಚಂದ್ರಶೇಖರ ಕಂಬಾರ, ವಸಂತಕುಮಾರ ಪೆರ್ಲ, ವೇಣುಗೋಪಾಲ ಸೊರಬ, ಎಲ್.ಎಸ್.ಶೇಷಗಿರಿರಾವ್, ಡಾ.ಡಿ.ಬಿ. ರಾಮಚಂದ್ರಾಚಾರ, ಕೆ.ನರಸಿಂಹಮೂರ್ತಿ, ಟಿ.ಜಿ. ರಾಘವ, ಹರಿಹರ ಪ್ರಿಯ, ಬಿ.ವಿ.ವೈಕುಂಠರಾಜು, ಎಚ್.ಎಸ್. ವೆಂಕಟೇಶಮೂರ್ತಿ, ಎಸ್.ವಿ.ಪ್ರಭಾವತಿ, ಜಿ.ಎಸ್.ಆಮೂರ, ರಾಮಚಂದ್ರದೇವ, ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಕೆ.ಪಿ.ಸುರೇಶ, ಪುರುಷೋತ್ತಮ ಬಿಳಿಮಲೆ, ಗೋಪಾಲಕೃಷ್ಣ ಅಡಿಗ ಮೊದಲಾದವರೆಲ್ಲ ಬರೆದಿದ್ದಾರೆ. ಅಡಿಗರ, ನಾವು ಮನುಷ್ಯರಾಗಬಲ್ಲೆವೆ?; ಪುರಷೋತ್ತಮ ಬಿಳಿಮಲೆಯವರ ನಾಗಮಂಡಲ- ಒಂದು ಅಭ್ಯಾಸ; ಆಮೂರರ ಕೆ.ಸದಾಶಿವರ ಕತೆಗಳ ಕುರಿತು; ಟಿ.ಜಿ.ರಾಘವ ಅವರ ಸುಮತೀಂದ್ರ ನಾಡಿಗರ ಕತೆಗಳು; ಶೇಷಗಿರಿ ರಾಯರ ಗೋಕುಲ ನಿರ್ಗಮನ; ಮೊದಲಾದ ಲೇಖನಗಳು ಹೊಸ ವಿಚಾರಗಳ ಕಡೆಗೆ ಗಮನ ಸೆಳೆಯುತ್ತವೆ.

ಇವಲ್ಲದೆ ಈ ಆಧುನಿಕ ಕಾಲದಲ್ಲಿ ಸಾಹಿತ್ಯ ಸಂವೇದನೆಗೆ ವೇದಿಕೆಯಾಗಲು ಅನ್ವೇಷಣೆ, ಹೊಸದಿಕ್ಕು, ಪ್ರಜ್ಞೆ, ಸಾಹಿತ್ಯ ಸಂಘರ್ಷ, ಮಾತುಕತೆ, ಕವಿಮಾರ್ಗ, ಅಪರಂಜಿ, ಒಡನಾಡಿ, ಒಡಲಾಳ, ಅಂಕಣ, ಕಾವ್ಯ, ಅರಿವು -ಬರಹ, ಅಜಂತ, ಕಾಲಗತಿ, ಕಾವ್ಯಶ್ರೀ, ಕಾದಂಬರಿ ಹೀಗೆ ಇನ್ನೂ ಅನೇಕ ಪತ್ರಿಕೆಗಳು ಬಂದಿವೆ. ಇವೆಲ್ಲ ತಾವು ನಂಬಿದ ಸಾಹಿತ್ಯ ಮಾರ್ಗದ ಪ್ರತಿಪಾದನೆಗೆ ಕೆಲಸ ಮಾಡಿವೆ. ಹಲವು ಪತ್ರಿಕೆಗಳು ಯಾವುದೇ ಗುಂಪುಗಳಲ್ಲಿ ಗುರುತಿಸಿಕೊಳ್ಳದೆ ಸಾಹಿತ್ಯ ವಿಮರ್ಶೆಯನ್ನು, ಹೊಸ ಸಾಹಿತ್ಯವನ್ನು ಪೋಷಿಸಿವೆ. ನವ್ಯ ಕಾವ್ಯದ ಸಂದರ್ಭದಲ್ಲಿ ಓದುಗ ಮತ್ತು ಲೇಖಕನ ನಡುವೆ ಸಂವಹನ ಅಸಾಧ್ಯವಾದಾಗ ಸಾಕ್ಷಿ ಆ ಕಂದರವನ್ನು ತುಂಬಲು ಪ್ರಾಮಾಣಿಕವಾಗಿ ಪ್ರಯತ್ನಿಸಿ ಸಫಲವೂ ಆಯಿತು. ಅದೇ ಕೆಲಸವನ್ನು ಬಂಡಾಯದ ಸಂದರ್ಭದಲ್ಲಿ ಸಂಕ್ರಮಣ ಮಾಡಿತು. ಈ ಎಲ್ಲ ಪತ್ರಕಾರರಿಗೆ ಪ್ರೇರಣೆ ಸಾಹಿತ್ಯದ ಮೇಲಿನ ಪ್ರೀತಿಯೇ ಹೊರತು ಹಣ ಮಾಡುವುದಾಗಿರಲಿಲ್ಲ. ಸಾಹಿತ್ಯವನ್ನು ಒಂದು ಚಳವಳಿಯನ್ನಾಗಿ ಮಾಡಬೇಕೆಂಬ ಹಂಬಲ ನವ್ಯ ಮತ್ತು ಬಂಡಾಯ ಕಾಲದಲ್ಲಿ ಹೊರಟ ಪತ್ರಿಕೆಗಳಲ್ಲಿ ಕಾಣಬಹುದು.

ನವ್ಯಮೀಮಾಂಸೆ:

ನವ್ಯ ಸಾಹಿತ್ಯ ಆರಂಭಗೊಂಡಾಗ ಅದರ ವಿರುದ್ಧ ಕೇಳಿಬಂದ ಟೀಕೆಗಳು ಹಲವು. ಈ ಸಾಹಿತ್ಯ ಬ್ರಾಹ್ಮಣರ ಸಾಹಿತ್ಯ, ವಿಶ್ವವಿದ್ಯಾಲಯಗಳಲ್ಲಿಯ ಇಂಗ್ಲಿಷ್ ಪ್ರೊಫೆಸರುಗಳ ಸಾಹಿತ್ಯ, ಇದು ಸಾಮಾನ್ಯರಿಗೆ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ, ಇದರ ಪ್ರೇರಣೆ ಭಾರತೀಯ ಮೂಲದ್ದಲ್ಲ ಇತ್ಯಾದಿ. ನವ್ಯದ ಬಗೆಗಿನ ತಿರಸ್ಕಾರಕ್ಕೆ ಕಾರಣ ನವ್ಯ ಕೃತಿಗಳ ಬಗೆಗೆ ಸಾಕಷ್ಟು ಪ್ರಮಾಣದಲ್ಲಿ ವಿಮರ್ಶೆ, ವಿಶ್ಲೇಷಣೆ ಹಾಗೂ ಚರ್ಚೆ ನಡೆಯದೆ ಇದ್ದುದು. ನವ್ಯ ಕಾವ್ಯ ಧೋರಣೆಯನ್ನು ಅರ್ಥಮಾಡಿಕೊಂಡು, ಅದರ ಮೂಲ ತತ್ವಗಳನ್ನು ಪರಿಚಯಿಸಿ ಕಾವ್ಯವನ್ನು ಹೇಗೆ ಪ್ರವೇಶಿಸಬೇಕು, ಬೆಲೆ ಕಟ್ಟಬೇಕು ಎಂಬ ಬಗೆಗೆ ತೀವ್ರ ಸ್ವರೂಪದ ವಿಮರ್ಶೆ ಇರಲಿಲ್ಲ. ನವ್ಯ ಕಾವ್ಯದ ಕ್ಲಿಷ್ಟತೆಯ ಬಗೆಗೆ ಏಕೀಕರಣ ಪೂರ್ವದಲ್ಲಿಯೇ ಸಮಾಧಾನವನ್ನು ಹೇಳಲಾಯಿತು. ಆದರೂ ನವ್ಯವನ್ನು ಅರ್ಥೈಸಲು, ಸಾಹಿತ್ಯಾಸಕ್ತರಲ್ಲಿ ಅದರ ಬಗೆಗೆ ಆಸಕ್ತಿ ಮೂಡಿಸಲು ಸಾಹಿತ್ಯಪತ್ರಿಕೆಗಳ ಅಗತ್ಯವಿದೆ ಎಂದು ಕೆಲವರಿಗೆ ತೋರುತ್ತದೆ. ಅದರ ಫಲವಾಗಿ ೧೯೬೦ರಲ್ಲಿ ಲಹರಿ, ೧೯೬೪ರಲ್ಲಿ ಸಂಕ್ರಮಣ, ೧೯೬೮ರಲ್ಲಿ ಸಾಕ್ಷಿ, ೧೯೭೦ರಲ್ಲಿ ಶೂದ್ರ ಮೊದಲಾದವು ಹುಟ್ಟಿದವು. ಸಂಕ್ರಮಣವು ತನ್ನ ಮೊದಲ ವರ್ಷದ ಕೊನೆಯ ಸಂಚಿಕೆಯನ್ನು ಸಂಕ್ರಮಣ ಕಾವ್ಯವೆಂದು ಪ್ರಕಟಿಸಿತು. ಅದರಲ್ಲಿ ಹೊಸ ಕವಿತೆಗಳು ಸಾಕಷ್ಟು ಇದ್ದವು. ಈ ಪತ್ರಿಕೆಗಳಲ್ಲದೆ ಕವಿತಾ, ಸಮೀಕ್ಷಕ, ಸಮನ್ವಯ, ಪ್ರತೀಕ, ಪ್ರಜ್ಞೆ ಮೊದಲಾದವುಗಳ ಕೆಲವು ಸಂಚಿಕೆಗಳು ಬಂದವು. ಇವೆಲ್ಲ ನವ್ಯ ಸಾಹಿತ್ಯದ ಬಗೆಗೆ ಹಲವು ವಿವರಗಳನ್ನು ನೀಡುತ್ತವೆ. ಅರವತ್ತು, ಎಪ್ಪತ್ತರ ದಶಕದಲ್ಲಿ ನವ್ಯದ ಸಮರ್ಥನೆ, ನವ್ಯ ಸಾಹಿತ್ಯದ ವಿಮರ್ಶೆ ವಿವಿಧ ಸಾಹಿತ್ಯ ಪತ್ರಿಕೆಗಳಲ್ಲಿ ನಡೆದದ್ದನ್ನು ಗಮನಿಸಹುದು. ಇಂಥ ಚರ್ಚೆಯಲ್ಲಿ ನವ್ಯ ಮಾರ್ಗದ ಬಲವರ್ಧನೆಗೆ ಕೆಲವಾದರೂ ಉಪಯುಕ್ತ ಸಲಹೆಗಳು ಇದ್ದುದನ್ನು ನೋಡಬಹುದು.

ತನ್ನ ಆರಂಭದ ದಿನಗಳಲ್ಲಿ ನವ್ಯ ಕಾವ್ಯವನ್ನು ಸಮರ್ಥಿಸಿದ ಸಂಕ್ರಮಣದಲ್ಲಿ 'ಕನ್ನಡ ಕಾವ್ಯದಲ್ಲಿ ನವ್ಯತೆ' ಕುರಿತು ಶಂಕರ ಮೊಕಾಶಿ ಪುಣೇಕರ ಬರೆದ ಲೇಖನ ಪ್ರಕಟವಾಗಿದೆ.[೩] ನವ್ಯದ ಹೊಸ್ತಿಲಲ್ಲಿ ನಿಂತು ಕನ್ನಡ ಕಾವ್ಯವನ್ನು ಸಿಂಹಾವಲೋಕನ ಮಾಡುವ ಶಂಕರ ಮೊಕಾಶಿ ಪುಣೇಕರ, ನವೋದಯ ಮತ್ತು ನವ್ಯ ಎರಡೂ ಕಾವ್ಯ ಲಕ್ಷಣಗಳನ್ನು ಗುರುತಿಸುವರು. ೧೯೨೦ರಿಂದ ೧೯೫೦ರ ವರೆಗೆ ಕನ್ನಡ ಕವಿಗಳು ಬರೆದ ಕವನಗಳನ್ನು ಮಾನವ ಕೇಂದ್ರಿತ ಭಾವಗೀತಗಳೆಂದು ಅವರು ಕರೆಯುವರು. ಈ ಕಾವ್ಯದ ಮುಖ್ಯ ಹಾಗೂ ನೂತನ ಅಂಶವೆಂದರೆ ಅನಿರ್ಬಂಧವಾದ ವ್ಯಕ್ತಿತ್ವದ ಅಭಿವ್ಯಕ್ತಿ. ಸ್ವಾಭಾವಿಕವಾಗಿ ಕನ್ನಡ ಓದುಗರಿಗೆ ಈ ವ್ಯಕ್ತಿಕೇಂದ್ರಿತ ಸಂವೇದನೆಯೇ ನೂತನವೆನಿಸಿತು. ಕನ್ನಡ ಭಾವಗೀತೆಯಲ್ಲಿ ವ್ಯಕ್ತಿ ಪ್ರಾಧಾನ್ಯತೆಗೆ ಅವಾಸ್ತವ ಮಹತ್ವ ಬಂದೊದಗಿದ್ದು ಸ್ವಾಭಾವಿಕ ಎಂದು ಮೊಕಾಶಿ

೩.ಶಂಕರ ಮೊಕಾಶಿ ಪುಣೇಕರ: ಕನ್ನಡ ಕಾವ್ಯದಲ್ಲಿ ನವ್ಯತೆ, ಸಂಕ್ರಮಣ ೫೫, ಸಂಪುಟ ೧೦, ಸಂಚಿಕೆ ೧, ಆಗಸ್ಟ್ ೧೯೭೩)

ಹೇಳುವರು. ಈ ವ್ಯಕ್ತಿ ಕೇಂದ್ರಿತ ಭಾವಗೀತಕ್ಕೆ 'ರೋಮ್ಯಾಂಟಿಕ್' ಎಂಬ ಹೆಸರನ್ನು ಇಟ್ಟಿದ್ದು ನಿಂದಾ ವ್ಯಂಜಕವಾಗಿಯೇ. ಭಾವಗೀತ ಸಂಪ್ರದಾಯ ವ್ಯಕ್ತಿನಿಷ್ಠವಾಗಿ ಬಂಗಾಲ ಬರಗಾಲವಾದರೂ ತನ್ನ ಹೂದೋಟದ ಬಗ್ಗೆಯೇ ಹರಟುತ್ತಿದೆಯಲ್ಲ! ಎಂಬ ಸಿಟ್ಟಿನಲ್ಲಿ ಪ್ರಗತಿಶೀಲರು ಇದಕ್ಕೆ ರೋಮ್ಯಾಂಟಿಕ್ ಎಂದು ಕರೆದಿರಬಹುದು ಎಂದು ಮೊಕಾಶಿ ಹೇಳುತ್ತಾರೆ. ನವೋದಯ ಕಾವ್ಯ ಹುಟ್ಟು ಪಡೆದುಕೊಂಡಾಗ ಹೊಸ ಕಾವ್ಯ ಮಾರ್ಗಕ್ಕೆ ಯಾರೂ ನಾಮಕರಣ ಮಾಡಿರಲಿಲ್ಲ. ಅಥವಾ ಹೆಸರನ್ನು ಇಟ್ಟುಕೊಂಡೇ ನವೋದಯ ಕಾವ್ಯ ಆರಂಭವಾಗಿರಲಿಲ್ಲ. ಆದರೆ ಪ್ರಗತಿಶೀಲರು, ನವ್ಯದವರು, ಬಂಡಾಯ-ದಲಿತ ಕಾವ್ಯಗಳು ಹುಟ್ಟಿಕೊಳ್ಳುವಾಗಲೇ ನಾಮಕರಣ ಆಗಿದ್ದು ಇಲ್ಲಿ ಗಮನಿಸಬೇಕಾದ ಅಂಶ.

ಗೋಕಾಕರು ನವ್ಯ ಕಾವ್ಯವನ್ನು ಬರೆಯಲು ಉದ್ಯೋಗಿಸುವ ಪೂರ್ವದಲ್ಲಿ, ಭಾವಗೀತ ವ್ಯಾಪಕವಾಗಬೇಕು, ಭಾಷೆಯ, ಲಯಗಳ ಹೊಸ ಬಳಕೆಯಾಗಬೇಕು, ಇನ್ನೂ ವ್ಯಾಪಕವಾದ ವೈವಿಧ್ಯಪೂರ್ಣವಾದ ಭಾವನೆಗಳ ಅಭಿವ್ಯಕ್ತಿಗೆ ಭಾಷೆಯನ್ನು ಹೇಗೆ ದುಡಿಸಿಕೊಳ್ಳಬೇಕೆಂಬುದರ ಪರಿಚಯವಾಗಬೇಕು, ಕತೆ ಬೆಳೆಯಬೇಕು, ತನ್ನ ಅಭಿವ್ಯಕ್ತಿಯ ವಿವಿಧ ಹೊಣೆಯನ್ನು ಹೊರುವಂತಾಗಬೇಕು; ರೋಮ್ಯಾಂಟಿಕ್ ಬ್ಯಾಲಡ್‌ದ ರೀತಿಯೊಂದೇ ಈ ವಿವಿಧ ಹೊಣೆ ಹೊರಲಾರದು, ಹೊಸ ಕವಿಗೆ ಭಾಷಿಕ ಹಾಗೂ ಶೈಲಿಕ ಹೊಣೆಗಾರಿಕೆ ಇರಬೇಕು ಎಂದು ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಇಲ್ಲಿ ಗೋಕಾಕರು ರೋಮ್ಯಾಂಟಿಕ್ ಕಾವ್ಯದಲ್ಲಿ ಏನು ಇಲ್ಲ, ಹೊಸ ಕಾವ್ಯದಲ್ಲಿ ಏನೇನು ಇರಬೇಕು ಎಂಬುದನ್ನು ಹೇಳುತ್ತಾರೆ.

ಗೋಪಾಲಕೃಷ್ಣ ಅಡಿಗರು ನವ್ಯ ಕಾವ್ಯಕ್ಕೆ ತೊಡಗುವಾಗ ನವೋದಯ ಕಾವ್ಯವನ್ನು ನಿರಾಕರಿಸುವುದಕ್ಕೆ ಕೆಲವು ಕಾರಣಗಳನ್ನು ನೀಡುತ್ತಾರೆ. ನವೋದಯ ಕಾವ್ಯವನ್ನು ಅವರು ರೋಮ್ಯಾಂಟಿಕ್ ಎಂದು ಕರೆಯುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ ಸಂವೇದನೆ ಬದಲಾಗಿದೆ; ರೋಮ್ಯಾಂಟಿಕ್ ಕವಿ ಆಧ್ಯಾತ್ಮವನ್ನು ಸರಳೀಕರಿಸುತ್ತಾನೆ. ನಾವು ಸಂಕೀರ್ಣಗೊಳಿಸಬೇಕು; ಜೀವನದಲ್ಲಿ ತಿಕ್ಕಾಟ ಸಹಿತ ಆಧ್ಯಾತ್ಮವಿರಬೇಕೇ ಹೊರತು ಪರಿಹಾರ ಸಹಿತ ಇರಕೂಡದು; ಭಾವಗೀತೆ ಬರೀ ಭಾವ ಪ್ರಪಂಚದ ಅಭಿವ್ಯಕ್ತಿ ಕಾವ್ಯ ಸತ್ಯವನ್ನು ಬಣ್ಣಿಸಬೇಕು ಇತ್ಯಾದಿ ಹೇಳುವರು. ರೋಮ್ಯಾಂಟಿಕ್ ಕಾವ್ಯದಲ್ಲಿ ಯಾವುದು ಇಲ್ಲ ಎಂದು ಹೇಳುವುದರ ಮೂಲಕ ಕಾವ್ಯದಲ್ಲಿ ಏನೇನು ಇರಬೇಕು ಎಂಬುದನ್ನು ಅವರು ಸೂತ್ರೀಕರಿಸಲು ಯತ್ನಿಸಿದ್ದಾರೆ.

ನವ್ಯ ಸಾಹಿತ್ಯದ ಆರಂಭದ ಬಗೆಗೆ ಆಲೋಚಿಸಿದಾಗ ಗೋಕಾಕರ ಮತ್ತು ಅಡಿಗರ ಹೆಸರು ಒಟ್ಟೊಟ್ಟಿಗೆ ಬರುತ್ತದೆ. ಆದರೆ ನವ್ಯತೆಯನ್ನು ವಿನಾಯಕರು ಸ್ವೀಕರಿಸಿದ್ದಕ್ಕೂ ಅಡಿಗರು ಸ್ವೀಕರಿಸಿದ್ದಕ್ಕೂ ವ್ಯತ್ಯಾಸವಿದೆ. "ವಿನಾಯಕರು ನವ್ಯತೆಯನ್ನು ಬಳಸಿದ್ದು ಒಂದು ಬಂಡಾಯವೆಂದಲ್ಲ. ಭಾಷೆಯ, ಮಾಧ್ಯಮದ ನವೀಕರಣಕ್ಕಾಗಿ. ಹೊಸ ವಸ್ತು, ಹೊಸ

ಭಾವಗಳ ಅಭಿವ್ಯಕ್ತಿಗೆ ಈ ನವೀಕರಣ. ವಾಚಕರಿಗೂ ಭಾಷೆಗೂ ಸಂಸ್ಕಾರವಾಗಬೇಕಾಗಿತ್ತು. ಆದರೆ ಹೊಸ ವಿಮರ್ಶಕರಾದ ನರಸಿಂಹಮೂರ್ತಿ, ಅನಂತಮೂರ್ತಿ ಮೊದಲಾದವರು ನವ್ಯತೆಯ ತತ್ವಜ್ಞಾನವನ್ನು ಬಹುದೂರ ಒಯ್ದರು ... ಈ ವಿಮರ್ಶಕರಿಗೆ ನವ್ಯತೆ ಸಂವೇದನೆಯಲ್ಲಾದ ಕ್ರಾಂತಿಯ ಪರಿಣತಿ. ಒಂದೊಂದು ಬಾರಿ ಅನಂತಮೂರ್ತಿ Inwardness (ಆಂತರಿಕತೆ) ಎಂಬ ಶಬ್ದವನ್ನು ಬಳಸುತ್ತಾರೆ. ಹಾಗೆಂದು ಆಂತರಿಕತೆ ನವೋದಯ ಕವಿಗಳಲ್ಲಿ ಕಮ್ಮಿ ಇರಲಿಲ್ಲ .... ಇದಲ್ಲದೆ ನವ್ಯತೆಯ ಈ ಶಾಸ್ತ್ರಿಗಳು ಒಂದು ಭಾಷಿಕ ವೇದಾಂತ(Linguistic mystique)ವನ್ನೂ ಹುಟ್ಟಿಸಿ, ಕೇವಲ ವಿಚಾರದ ಸಂವೇದನೆಯ ಆಂತರಿಕತೆಯ ಜೊತೆಗೆ ಭಾಷಿಕ ಆಂತರಿಕತೆಯನ್ನೂ ಜೋಡಿಸಿದರು." [೪]

ಭಾವಗೀತ ಸಂಪ್ರದಾಯಕ್ಕೆ ಮುಖ್ಯ ಲಕ್ಷಣ ಚೆಲುವು. ಆದರೆ ನವ್ಯ ಸಂಪ್ರದಾಯಕ್ಕೆ ಕಸುವು ಮುಖ್ಯ. ಕಸುವಿನಲ್ಲಿ ಕಸುಕೂ ಸೇರುತ್ತದೆ. ಭಾಷೆಯಲ್ಲಿ ವಿಷಮ ಪ್ರತಿಮೆ, ವಿಷಮ ಗತಿ, ವಿಷಮ ರೀತಿ ಹಾಗೂ ಒಟ್ಟಂದದ ಆವೇಶ, ಮೂದಲಿಕೆ, ತಿರಸ್ಕಾರ ಇಂಥ ಗುಣಗಳು ನವ್ಯ ಕಾವ್ಯದಲ್ಲಿ ಹೆಚ್ಚು. ಆದರೆ ಕಸುವಿಗಾಗಿ ಮುಖ್ಯಬೆನ್ನೆಲುವಾಗಬೇಕಾಗಿದ್ದ ಮೇಧಾಶಕ್ತಿ, ವೈಚಾರಿಕ ಚಮತ್ಕಾರ ಶಕ್ತಿ ನವ್ಯರಲ್ಲಿ ಅಷ್ಟೇ ಪ್ರಮಾಣದಲ್ಲಿಲ್ಲ ಎಂದು ಹೇಳುವ ಮೊಕಾಶಿ ನವೋದಯ ಮತ್ತು ನವ್ಯ ಕಾವ್ಯ ಪ್ರಕಾರಗಳೆರಡರ ಲಕ್ಷಣಗಳನ್ನು ಹಿಡಿದಿಡಲು ಪ್ರಯತ್ನಪಟ್ಟಿದ್ದಾರೆ.

ಕಲ್ಲನ್ನು ಕೆತ್ತಿ ಮೂರ್ತಿಯನ್ನು ಶಿಲ್ಪಿ ತಯಾರಿಸುತ್ತಾನೆ. ಅದನ್ನು ಗುಡಿಯಲ್ಲಿ ಇಟ್ಟು ಪ್ರಾಣ ಪ್ರತಿಷ್ಠಾಪನೆ ಮಾಡಬೇಕಲ್ಲವೆ? ನವ್ಯದ ಸಂದರ್ಭದಲ್ಲಿ ಇಂಥ ಕಾರ್ಯವನ್ನು ಹಲವರು ಮಾಡಿದ್ದಾರೆ. 'ಸಂಕ್ರಮಣ'ದಲ್ಲಿ ಬಿ.ಟಿ ದೇಸಾಯಿಯವರು, ತೊಡಕಾದ ನಮ್ಮ ಸಂಸ್ಕೃತಿಯಲ್ಲಿ 'ನವ್ಯತೆ' ಒಂದು ಅವಸ್ಥೆ ಎಂಬ ಮಾತನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ ಎಂದು ಹೇಳಿದ್ದಾರೆ.[೫] ಅದು ಒಂದು ಅವಸ್ಥೆ ಎಂಬ ಕಲ್ಪನೆ ಬರುತ್ತಿರುವುದು ನವ್ಯ ಪ್ರಜ್ಞೆ ಅಸಂಪೂರ್ಣವಾದುದು ಎಂಬ ತಿಳಿವಳಿಕೆ ನಮಗೆ ಈಗ ಬಂದಿರುವುದರಿಂದ. ಅದರಂತೆ 'ಚಂಡೆ ಮದ್ದಳೆ'ಯ ಅಡಿಗರನ್ನು 'ನವ್ಯ ಕವಿ' ಎಂದು ಧೈರ್ಯದಿಂದ ಕರೆಯುವಂತೆ 'ಕೂಪ ಮಂಡೂಕ' 'ಶ್ರೀರಾಮ ನವಮಿಯ ದಿವಸ'ದ ಅಡಿಗರನ್ನು 'ನವ್ಯ ಕವಿ'ಗಳೆಂದು ಕರೆಯುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇಲ್ಲೆಲ್ಲ ಅದಾಗಲೇ ಪ್ರಚಾರದಲ್ಲಿದ್ದ ನವ್ಯವನ್ನು ಸಮರ್ಥಿಸಿದ್ದನ್ನು ನೋಡಬಹುದು.

ಕನ್ನಡದ ನವ್ಯರು, ಅದರಲ್ಲೂ ನವ್ಯ ಕವಿಗಳು ಇಂಗ್ಲಿಷ್ ಕಾವ್ಯದಿಂದ ಪ್ರೇರಿತರಾದವರು. ಕ್ರಮೇಣ ಇಂಗ್ಲಿಷ್ ಮನೋಭೂಮಿ ಸಂಕುಚಿತವೆನಿಸಿದ್ದರಿಂದ ಅಥವಾ

೪.ಉದ್ಧೃತ ಮೊಕಾಶಿ- ಸಂಕ್ರಮಣ-೫೫

೫.ಬಿ.ಟಿ. ದೇಸಾಯಿ: ನವ್ಯರು ಮತ್ತು ಸಂಸ್ಕೃತಿಯ ಗತಿರೋಧಕ ಪ್ರಕ್ರಿಯೆಗಳು, ಸಂಕ್ರಮಣ-೫೨, ಸಂಪುಟ೯, ಸಂಚಿಕೆ೪, ಫೆ. ೭೪

ಫ್ಯಾಶನ್ನಿಗಾಗಿ, ಇಲ್ಲವೆ ಹೊಸತಿರಲಿ ಎಂಬ ಭ್ರಮೆಯಿಂದ ಕವಿಗಿಂತ ಹೆಚ್ಚಾಗಿ ಇಂದಿನ ಕಾದಂಬರಿಕಾರ, ನಾಟಕಕಾರರು ಯುರೋಪ ಮತ್ತು ಅಮೆರಿಕಗಳ ವಿಸ್ತೃತ ಪ್ರಕ್ಷೇಪಗಳತ್ತ ತಿರುಗಿದರು. ಇದರರ್ಥ ನಮ್ಮ ಲೇಖಕರೆಲ್ಲ ತೀವ್ರವಾದ ನವ್ಯ ಸಂಕರದಿಂದ ಬಳಲುತ್ತಿರುವುದು ಸ್ಪಷ್ಟ ಎನ್ನುವ ಬಿ.ಟಿ. ದೇಸಾಯಿ, ನವ್ಯ ಕಾವ್ಯದ ಮೇಲಿನ ಪಾಶ್ಚಾತ್ಯ ಪ್ರಭಾವದ ಹಿಂದಿನ ಕಾರಣಗಳನ್ನು ಗುರುತಿಸಲು ಯತ್ನಿಸಿದ್ದಾರೆ. ಗೋಕಾಕ- ಅಡಿಗರು ೧೯೫೦-೫೨ರಲ್ಲಿ ಕಂಡ ನವ್ಯತೆಗೂ ಪೂಚಂತೇ, ಲಂಕೇಶ, ಅನಂತಮೂರ್ತಿಯವರ ನವ್ಯತೆಗೂ ಅಂತರ ಗುರುತಿಸುವ ಅವರು, ೧೯೫೦ರಲ್ಲಿ ಸುರುವಾದ ನವ್ಯ ಸಾಹಿತ್ಯ ಅಥವಾ ಕಾವ್ಯ ಒಂದು ಅಪರಿಪೂರ್ಣ ಪ್ರಜ್ಞೆಯ ಚಿತ್ರಣವಾಗಿದೆ ಎನ್ನುವರು.

ಕನ್ನಡ ಕಾವ್ಯದಲ್ಲಿ ನವ್ಯತೆ ಮುಖ್ಯವಾಗಿ ಎರಡು ರೀತಿಯಲ್ಲಿ ಪ್ರಕಟವಾಗಿರುವುದನ್ನು ದೇಸಾಯಿ ಗುರುತಿಸುವರು. ೧) ಕವಿಯ ನವ್ಯ ಮನೋಭಾವವೇ ತಂತ್ರವಾಗಿ ಮಾರ್ಪಟ್ಟ ಅನುಭವ ಮತ್ತು ಅನುಭವವನ್ನು ಸಂಯೋಜಿಸಿದ ರೀತಿಯಲ್ಲಿ ಅನ್ಯೋನ್ಯತೆ. ೨) ಕವಿಯ ಮನೋಭಾವ ನವ್ಯ ಪೂರ್ವ ಸ್ಥಿತಿಯಲ್ಲಿದ್ದು ಅನುಭವವನ್ನು ತಾಂತ್ರಿಕ ಶಿಷ್ಟತೆಯಿಂದ ಮಸೆಯುವುದು. ಅಂದರೆ ಇಂತಹ ಕವಿಗೆ ತಂತ್ರವು ಅನುಭವವನ್ನು ಹದನ ಮಾಡುವ, ಸೂಕ್ಷ್ಮಗೊಳಿಸುವ ಸಾಧನವಾಗುತ್ತದೆ. ಮೊದಲನೆ ಕಾವ್ಯ ಪ್ರಕಾರಕ್ಕೆ ಅಡಿಗ, ರಾಮಚಂದ್ರ ಶರ್ಮ ಉದಾಹರಣೆಗಳಾದರೆ ಎರಡನೆಯದಕ್ಕೆ ಕೆಎಸ್‌ಎನ್ ಮತ್ತು ವಿನಾಯಕರು ಎಂದು ಹೇಳುವ ದೇಸಾಯಿ ಸುದೀರ್ಘ ವಿವರಣೆಯನ್ನು ನೀಡಿದ್ದಾರೆ.

ಇದೇ ರೀತಿಯ ವಿಂಗಡಣೆಯನ್ನು ಸಂಕ್ರಮಣದಲ್ಲಿ ಡಿ.ಆರ್.ನಾಗರಾಜ ಕೂಡ ಮಾಡಿದ್ದಾರೆ.[೬] ಡಿ.ಆರ್.ನಾಗರಾಜ ಅವರು ನವ್ಯ ಚಳವಳಿಯಲ್ಲಿ ಎರಡು ಘಟ್ಟಗಳಿವೆ ಎಂದು ಭಾವಿಸುತ್ತಾರೆ. ಮೊದಲನೆಯದು ಮೂಲ ನವ್ಯ. ಎರಡನೆಯದು ಪರಿವರ್ತನಶೀಲ ನವ್ಯ. ಕೃತಿ ಕೇಂದ್ರಿತವಾಗಿ ಅವರು 'ಬಿರುಕು' ಮೂಲ ನವ್ಯದ್ದು, 'ಮುಸ್ಸಂಜೆ' ಪರಿವರ್ತನಶೀಲ ನವ್ಯದ್ದು, 'ಸಂಸ್ಕಾರ' ಮತ್ತು 'ಸೂರ್ಯನ ಕುದುರೆ'ಗಳೂ ಹಾಗೆಯೇ, 'ಸ್ವರೂಪ' – 'ಚಿದಂಬರ ರಹಸ್ಯ', 'ಮೂರು ದಾರಿಗಳು'– 'ಶಿಕಾರಿ' –ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಾರೆ. ಮೂಲ ನವ್ಯದಿಂದ ಪರಿವರ್ತನಶೀಲ ನವ್ಯದ ಕಡೆಗೆ ನವ್ಯ ಚಳುವಳಿಯನ್ನು ಒಯ್ದವರು ಲಂಕೇಶ, ತೇಜಸ್ವಿ, ಅನಂತಮೂರ್ತಿ, ಚಿತ್ತಾಲ ಈ ನಾಲ್ವರೇ ಎಂದೂ ನಾಗರಾಜ ಹೇಳುತ್ತಾರೆ. ನವ್ಯೋತ್ತರವನ್ನೂ ತನ್ನೊಳಗೆ ಸೇರಿಸಿಕೊಳ್ಳುವ ಮಹತ್ವದ ಪ್ರಯತ್ನದ ಫಲವೇ ಪರಿವರ್ತನಶೀಲ ನವ್ಯ. ಇದರಲ್ಲಿ ರಾಜಕೀಯ, ಸಾಮಾಜಿಕ ಆಶಯಗಳು ಪ್ರಧಾನ. ಅದು ನವ್ಯೋತ್ತರದ ಪ್ರಾಣವೂ ಹೌದು ಎನ್ನುವ ಡಿ.ಆರ್.ಎನ್. ಇದನ್ನು 'ದ್ವಿಜತ್ವ' ಎಂದು ಗುರುತಿಸುತ್ತಾರೆ. ಈ ದ್ವಿಜತ್ವ ಅಡಿಗ, ಶರ್ಮ, ಕಂಬಾರ,

---

೬.ಡಿ.ಆರ್.ನಾಗರಾಜ- ನವ್ಯ ಚಳುವಳಿ: ಕೆಲವು ಚೆಲ್ಲಾಪಿಲ್ಲಿ ಚಿಂತನೆಗಳು, ಸಂಕ್ರಮಣ-೧೯೭, ಸಂಪುಟ ೨೪, ಸಂಚಿಕೆ ೧, ಜನವರಿ ೧೯೮೯

ದೇಸಾಯಿ, ರಾಮಾನುಜನ್‌ರಲ್ಲಿ ಕಾಣಲಾಗುವುದಿಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳುತ್ತಾರೆ. ಇಲ್ಲೇ ಅವರು ಇನ್ನೊಂದು ಮಾತನ್ನು ಹೇಳುತ್ತಾರೆ, 'ಮೂಲ ನವ್ಯ'ದ ಘಟ್ಟದ ಬಗೆಗೆ ವಿಮರ್ಶಾತ್ಮಕ ಸಮಗ್ರತೆಯನ್ನು ಸಾಧಿಸುವುದು ಸಾಧ್ಯವಿದೆ. ಆದರೆ, ಪರಿವರ್ತನಶೀಲ ನವ್ಯದ ಬಗೆಗೆ ಆ ಕೆಲಸ ಕಷ್ಟದ್ದು. ನವ್ಯವನ್ನು ಮೂಲ ನವ್ಯ ಮತ್ತು ಪರಿವರ್ತನಶೀಲ ನವ್ಯ ಎಂದು ವಿಭಾಗಿಸುವುದಕ್ಕೆ ಅವರ ಈ ಕಷ್ಟದ ಅರಿವೇ ಕಾರಣ.

'ಮೂಲ ನವ್ಯ ಮತ್ತು ಪರಿವರ್ತನ ಶೀಲ ನವ್ಯ'ಗಳ ನಡುವೆ ಆಕೃತಿಯಲ್ಲಿ ಮೂಲಭೂತವಾದ ವ್ಯತ್ಯಾಸವಿದೆಯೆ? ಎಂಬ ಪ್ರಶ್ನೆಗೆ ಡಿ.ಆರ್‌ಎನ್ ಉತ್ತರ ಹುಡುಕುತ್ತಾರೆ. ನವ್ಯ ಬರವಣಿಗೆಯ ಕ್ರಮ, ಗ್ರಹಿಕೆಯ ಕ್ರಮ, ಆಕೃತಿ ಕಲ್ಪನೆ ಎಂದರೆ ಸಂಪೂರ್ಣವಾಗಿ ಅನುಭವ ಜನ್ಯದ್ದು. ದೈನಂದಿನ ಅನುಭವದ ನಿಕಷಕ್ಕೆ ಅತಿ ಪ್ರಾಮುಖ್ಯತೆ ಕೊಟ್ಟಂಥದ್ದು. ಸದ್ಯದ ತೀವ್ರತೆಗೇ ಅತ್ಯುನ್ನತ ಸ್ಥಾನ ಕೊಡುವ ಬರವಣಿಗೆಯು ಇದು ಎನ್ನುವ ಡಿಆರ್‌ಎನ್ ಅದರ ಪರಿಣಾಮವನ್ನು ಗುರುತಿಸುತ್ತಾರೆ. ನವ್ಯ ಸಾಹಿತ್ಯ ಕೃತಿಗಳು ಸಾಮಾಜಿಕ ವಿಮರ್ಶೆಯ ಪರಿಧಿಯಲ್ಲೇ ಸುತ್ತುವುದು. ನವ್ಯದ ಆಕೃತಿಯ ಸಮಸ್ಯೆ ಎಂದರೆ ಸಾಮಾಜಿಕ ವಾಸ್ತವ ಕಡಿಮೆ ಇರುವುದಲ್ಲ, ಈ ವಾಸ್ತವಕ್ಕೇ ಅತಿಯಾಗಿ ಅಂಟಿಕೊಂಡು ಅದು ಬಿದ್ದಿದೆ. ಕಾವ್ಯ, ಕಥನ, ಸಾಹಿತ್ಯ, ನಾಟಕ ಹೀಗೆ ಎಲ್ಲ ಪ್ರಕಾರಗಳಿಗೂ ಅನ್ವಯಿಸುವಂಥ ಮಾತು ಅದು ಎಂದು ವಿವರಿಸುತ್ತಾರೆ.

ಅಡಿಗರು ಮತ್ತು ಎಲಿಯಟ್ ನಡುವೆ ಬಿ.ಟಿ.ದೇಸಾಯಿ ಹೋಲಿಕೆ ಮಾಡಿ ನೋಡುವರು.[೭] ಎಲಿಯಟ್ ಕಂಡ ಯುರೋಪಿನ ಸಂಸ್ಕೃತಿಗಿಂತ ಹೆಚ್ಚು ಆಕೃತಿಹೀನವಾದ ಸಂಸ್ಕೃತಿಯನ್ನು, ಆತ ಕಂಡ ಸಾಮಾಜಿಕ, ಕೌಟುಂಬಿಕ ವಿಷಮತೆಗಿಂತ ಇನ್ನೂ ಮೂಲಭೂತವಾದ, ವೈಯಕ್ತಿಕ ವಿಷಮತೆಯನ್ನು ಅಭಿವ್ಯಕ್ತಿಸಲು ಯತ್ನಿಸಿದಾಗ ಬಹುಮಟ್ಟಿಗೆ 'ಎಲಿಯಟ್'ನ ನಿಲುವು ಅಡಿಗರದೂ ಆಯಿತು ಎಂದು ದೇಸಾಯಿ ಹೇಳುವರು. `ಎಲಿಯಟ್'ನಿಗೆ ಕ್ರಿಶ್ಚಿಯಾನಿಟಿಯ ಅನುಭಾವದ ತಳಪಾಯವಿದ್ದಂತೆ ಅಡಿಗರಿಗೆ ಹಿಂದೂ ಧರ್ಮದ, ಅದರ ವಿಚಿತ್ರ, hectro geneityಯೇ ತಳಪಾಯವಾಗಿದೆ. ಇದೇ ಕಾರಣವಿರಬಹುದು – 'ಹಿಮಗಿರಿಯ ಕಂದರ' ಮೊದಲು ಪ್ರಕಟವಾಗಿ ಪ್ರಚಾರಕ್ಕೆ ಬಂದಾಗ ಅದನ್ನು 'ದಿ ವೇಸ್ಟ್‌ಲ್ಯಾಂಡ್'ನ ಕಾರ್ಬನ್ ಕಾಪಿಯೆಂದು ತಿಳಿದುಕೊಂಡಿದ್ದಕ್ಕೆ ಎಂದು ದೇಸಾಯಿ ಊಹಿಸುವರು. ನವ್ಯವು ಪಾಶ್ಚಾತ್ಯ ಕಾವ್ಯದ ಕಾರ್ಬನ್ ಕಾಪಿ ಎಂಬ ಆರೋಪಗಳಿಗೆ ದೇಸಾಯಿ ಇಲ್ಲಿ ಉತ್ತರ ನೀಡಿದ್ದಾರೆ.

ಗೋಕಾಕ ಮತ್ತು ಅಡಿಗರು ಮಾತ್ರ, ನಮ್ಮ ಸಂಸ್ಕೃತಿಯ, ಪುರಾಣಗಳ ಅರಿವು ಮತ್ತು ಅದಕ್ಕೆ ತಕ್ಕ ಪಾಂಡಿತ್ಯವುಳ್ಳ ಪುರಾಣ ಪ್ರತಿಮೆಗಳನ್ನು ಉಪಯೋಗಿಸಿಕೊಳ್ಳುವಾಗ ಆ ಪೌರಾಣಿಕ ಮೂಲ ವಸ್ತುವನ್ನು ಕೆಡಿಸದೆ, ಪಲ್ಲಟಿಸದೆ ತಮ್ಮ ಅನುಭವದ ವಿಶ್ವರೂಪವನ್ನು

---

೭. ಸಂಕ್ರಮಣ- ೫೨

ಅಭಿವ್ಯಕ್ತಿಸಬಲ್ಲರು. ಅಡಿಗರಿಗೆ ಪುರಾಣಗಳೆಂದರೆ ನಮ್ಮ ಸಂಸ್ಕೃತಿಯ ಮೂಲಭೂತ ಮೌಲ್ಯಗಳ ಸಾಂದ್ರೀಕೃತ ಸೆಲೆಗಳು. ಆದೇ ಗೋಕಾಕರಿಗೆ ಅವು ಅವರ ಬೌದ್ಧಿಕತೆಯ counters ಆಗುತ್ತವೆ ಎಂದು ದೇಸಾಯಿಯವರು ಗೋಕಾಕ ಮತ್ತು ಅಡಿಗರ ನಡುವಿನ ಅಂತರವನ್ನು ಗುರುತಿಸಿದ್ದಾರೆ.

ಕನ್ನಡ ನವ್ಯ ಕವಿತೆಯ ಮನೋಧರ್ಮದ ಬಗೆಗೆ ಶಾಂತಿನಾಥ ದೇಸಾಯಿಯವರು ಬರೆದ ಲೇಖನವೊಂದು ಸಂಕ್ರಮಣದಲ್ಲಿ ಇದಕ್ಕೂ ಮೊದಲೇ ಅಚ್ಚಾಗಿತ್ತು. ನವ್ಯ ಕವಿತೆಯಲ್ಲಿ ಭ್ರಮನಿರಸನೆಯ ರೊಚ್ಚು, ಹಳೆಯ ಆದರ್ಶವಾದಿತ್ವದ ವಿರುದ್ಧ ಬಂಡಾಯ, ಸತ್ಯವನ್ನು, ಅಲ್ಲ, ಸತ್ಯದ ನಗ್ನತೆಯನ್ನು ನೇರವಾಗಿ ನೆಟ್ಟ ದೃಷ್ಟಿಯಿಂದ ನೋಡುವ ಹಟವಿದೆ; ಮೇಲು ಮೇಲಿನ ರಮ್ಯ ಈಸಾಟ ಬೇಡ, ನೇರವಾಗಿ ತಳಕ್ಕೇ ಜಿಗಿದು ಅಲ್ಲೇನಿದೆ ಎಂದು ನೋಡಬೇಕೆಂಬ ಸಾಹಸವಿದೆ ಎಂದು ಅವರು ಅದರಲ್ಲಿ ಹೇಳಿದ್ದಾರೆ.[೮]

ಕನ್ನಡ ನವ್ಯತೆ ಇಂಗ್ಲಿಷ್ ಸಾಹಿತ್ಯದಿಂದಲೇ ಬಂತು. ಕೆಲವು ಇಂಗ್ಲಿಷ್ ಪ್ರಾಧ್ಯಾಪಕರು ಈ ನವ್ಯತೆಯನ್ನು ಬುದ್ಧಿಪೂರ್ವಕವಾಗಿ ಎಳೆದು ತಂದು ಕನ್ನಡದಲ್ಲಿ ಹಾಕಿದರು ಎಂಬ ಆಕ್ಷೇಪವನ್ನೂ ಅವರು ಒಪ್ಪುವುದಿಲ್ಲ. ಇಂಗ್ಲಿಷ್ ಸಾಹಿತ್ಯದಲ್ಲಿ ನವ್ಯತೆ ೧೯೧೭ರ ಸುಮಾರಿಗೆ ಆರಂಭವಾಗಿತ್ತು. ಹೀಗಿರುವಾಗ ನಮ್ಮಲ್ಲಿ ಅದು ೧೯೨೦ರಿಂದ ೧೯೩೦ರ ಅವಧಿಯಲ್ಲಿ ಅಥವಾ ಗೋಕಾಕರು ಇಂಗ್ಲಂಡಿನಿಂದ ಬಂದ ನಂತರ ೧೯೪೦ರಲ್ಲಿ ಕಾಣಿಸಿಕೊಳ್ಳಬಹುದಾಗಿತ್ತು. ೩೦ ವರ್ಷ ಏಕೆ ವಿಳಂಬವಾಯಿತು ಎಂದು ಪ್ರಶ್ನಿಸುವ ದೇಸಾಯಿ ಇಂಗ್ಲಿಷ್ ನವ್ಯ ಕಾವ್ಯದ ಆರಂಭದಲ್ಲಿ ತಲೆದೋರಿದ್ದ ಮನೋಧರ್ಮ ನಮ್ಮಲ್ಲಿ ಸ್ವಾತಂತ್ರ್ಯಾನಂತರ ತಲೆದೋರಿತು. ಆ ಕಾಲದ ಹೊಸ ಪ್ರಜ್ಞೆ, ಸಂವೇದನೆಗಳು ಹೊಸ ಅಭಿವ್ಯಕ್ತಿ ಪಡೆಯಲು ಯತ್ನಿಸಿದ ಫಲ ಕನ್ನಡದ ನವ್ಯಕಾವ್ಯ ಎಂದು ಸಮರ್ಥಿಸಿಕೊಳ್ಳುವರು.

ಕನ್ನಡ ನೆಲದ್ದೇ ಆದ ನವ್ಯ ಸಾಹಿತ್ಯವನ್ನು ಶಾಂತಿನಾಥ ದೇಸಾಯಿಯವರು ವಿ.ಜಿ. ಭಟ್ಟರ ಕವಿತೆಗಳಲ್ಲಿ ಕಾಣುವರು. ವಿ.ಜಿ.ಭಟ್ಟರ 'ಶೋಧನೆ' ಎಂಬ ಕವಿತೆಯನ್ನು ಅವರು ಇದಕ್ಕೆ ಉದಾಹರಿಸುವರು. ಕನ್ನಡದಲ್ಲಿ ತೀರ ಸ್ವತಂತ್ರವಾದ, ಯಾವುದೇ ಪರದೇಶದ ಪ್ರಭಾವಕ್ಕೆ ಸಂಬಂಧವಿಲ್ಲದ, ಹೊಸದೊಂದು ಮನೋಧರ್ಮ ಇಲ್ಲಿದೆ ಎಂದು ದೇಸಾಯಿ ಹೇಳುವರು.

ಅಡಿಗರ ನವ್ಯ ಕಾವ್ಯವೂ ಭಟ್ಟರ ಕಾವ್ಯದಂತೆ ಜೀವನ ವೈಫಲ್ಯದಿಂದಲೇ ಹೊರಹೊಮ್ಮಿದೆ ಎನ್ನುವ ಶಾಂತಿನಾಥ ದೇಸಾಯಿ, ಆದರೆ, ಅಡಿಗರಿಗೆ ಅನಿಸುವ ವೈಫಲ್ಯ ಭಟ್ಟರ ನಿರಾಶೆಗಿಂತ ಗಹನವಾಗಿದೆ ಎನ್ನುವರು. ಅಡಿಗರ ಕಾವ್ಯದಲ್ಲಿಯೂ ವ್ಯಂಗ್ಯವಿದೆ, ವಿಡಂಬನೆಯಿದೆ, ರೊಚ್ಚಿದೆ, ಸಿಟ್ಟಿದೆ; ಆದರೆ ಇವುಗಳ ಜೊತೆಗೆ ಭಟ್ಟರಲ್ಲಿಲ್ಲದ ಅನುಭವ

೮.ಶಾಂತಿನಾಥ ದೇಸಾಯಿ: ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ, ಸಂಕ್ರಮಣ ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೭೫

ಸಂಕೀರ್ಣತೆಯಿದೆ, ವ್ಯಾಪಕತೆಯಿದೆ. ಭಟ್ಟರಲ್ಲಿ ಅನುಭವದ ಎಲುಬುಗಳನ್ನು ಮಾತ್ರ ಕಂಡರೆ ಅಡಿಗರಲ್ಲಿ ಅನುಭವ ಮಾಂಸ-ರಕ್ತಗಳಿಂದ ತುಂಬಿಕೊಂಡು ಹೆಚ್ಚು ಪ್ರಭಾವಿಯಾಗಿದೆ ಎಂದು ವಿವರಿಸುವರು. ನವ್ಯ ಕಾವ್ಯದಲ್ಲಿ ಅನುಭವದ ಸಂಕೀರ್ಣತೆ ಇರಬೇಕು ಎಂಬ ಮಾತನ್ನು ಶಾಂತಿನಾಥ ದೇಸಾಯಿಯವರು ಇಲ್ಲಿ ಹೇಳಿದ್ದಾರೆ. ಸಾಹಿತ್ಯ ಪತ್ರಿಕೆಯೊಂದರಲ್ಲಿ ಬಂದ ಇಂಥ ಖಚಿತವಾದ ಮಾತುಗಳು ನಿಶ್ಚಯವಾಗಿಯೂ ಹೊಸಬರಿಗೆ ಮಾರ್ಗದರ್ಶನವನ್ನು ನೀಡುವಂಥದ್ದಾಗಿದೆ.

ಕನ್ನಡ ಕಾವ್ಯದಲ್ಲಿ ಕಂಡುಬರುವ ಹೊಸ ಪ್ರಜ್ಞೆಯ, ಹೊಸ ಸಂವೇದನೆಯ ಸಾಮಾನ್ಯ ಅಂಶಗಳನ್ನು ದೇಸಾಯಿ ಹೀಗೆ ಪಟ್ಟಿ ಮಾಡುವರು:

೧)ವಾಸ್ತವಿಕತೆಯನ್ನು ನೇರ ದೃಷ್ಟಿಯಿಂದ ನೋಡುವ ಧಾರ್ಷ್ಟ್ಯ;

೨)ಅನುಭವವನ್ನು ಕೆದಕಿ ಕೆದಕಿ ನೋಡುವ ವಿಪರೀತ ಕುತೂಹಲ;

೩)ವೈಯಕ್ತಿಕ ಮೌಲ್ಯಗಳ ಅವಿರತ ಶೋಧನೆ;

೪)ಭಾವನೆಗಳ ಜೊತೆಗೆ ಬುದ್ಧಿಗಿತ್ತ ಪ್ರಾಧಾನ್ಯತೆ ಅಂದರೆ ಕಾವ್ಯದಲ್ಲಿ ಇಡಿಯ ವ್ಯಕ್ತಿತ್ವವನ್ನು ಕೆಲಸಕ್ಕೆ ತರುವ ಹವಣಿಕೆ;

೫)ಅನುಭವ ನಿರೂಪಣೆಯಲ್ಲಿಯ ಪ್ರಾಮಾಣಿಕತೆ; ಹಾಗೂ

೬)ಭಾಷೆಯ ಬಗ್ಗೆ ವೈಶಿಷ್ಟ್ಯಪೂರ್ಣವಾದ ಪ್ರಜ್ಞೆ ಹಾಗೂ ಶೈಲಿಯ ಪ್ರಾಯೋಗಿಕತೆ.

ಈ ಹೊಸ ಮನೋಧರ್ಮದಿಂದಾದ ಪರಿಣಾಮವೆಂದರೆ;

೧)ಕಾವ್ಯದಲ್ಲಿ ವ್ಯಾಪಕತೆ ಬಂದಿದೆ. ವೈವಿಧ್ಯ ಬಂದಿದೆ. ಸಂಕೀರ್ಣತೆ ಬಂದಿದೆ; ನಾವು ದಿನಾಲು ನೋಡುವ ಅನುಭವಿಸುವ ಜಗತ್ತು ನವ್ಯ ಕಾವ್ಯದಲ್ಲಿ ಬಹು ಮುಖ್ಯವಾಗಿ ಒಡಮೂಡುತ್ತಿದೆ.

೨)ಹೊಸ ಸಂಪ್ರದಾಯದಲ್ಲಿ ವೈಯಕ್ತಿಕ ದೃಷ್ಟಿಗೆ, ವೈಯಕ್ತಿಕ ಪ್ರಯೋಗಕ್ಕೆ ಉತ್ತೇಜನವಿದ್ದುದರಿಂದ ಪ್ರತಿಯೊಬ್ಬ ಒಳ್ಳೆಯ ನವ್ಯ ಕವಿಯ ಕಾವ್ಯವು ಒಂದೊಂದು ದೃಷ್ಟಿಯಿಂದ ತುಂಬ ಉತ್ತೇಜಕವಾಗಿದೆ. ಸ್ವಾರಸ್ಯವಾಗಿದೆ.

೩)ಹೊಸ ಮನೋಧರ್ಮ ಹುಟ್ಟಿಸಿದ ಕಾವ್ಯ ಹಳೆಯ ರಸ ಸಂಪ್ರದಾಯದ ಕಾವ್ಯಕ್ಕಿಂತ ವೈವಿಧ್ಯಪೂರ್ಣವಾಗಿದೆ. ಜೀವಂತವಾಗಿದೆ, ಶ್ರೇಷ್ಠವಾಗಿದೆ- ಇದು ಶಾಂತಿನಾಥ ದೇಸಾಯಿಯವರ ಅಭಿಪ್ರಾಯಗಳು. ಶಾಂತಿನಾಥ ದೇಸಾಯಿಯವರ ಲೇಖನ ಅಂದಿನ ಸಾಹಿತ್ಯಕ ವಲಯದಲ್ಲಿ ಒಂದು ವಾಗ್ವಾದವನ್ನು ಹುಟ್ಟುಹಾಕಿತು.

ಇವರ ಈ ಲೇಖನವನ್ನು ಓದಿದ ಗಿರೀಶ ಕಾರ್ನಾಡರಿಗೆ ಕೆಲವು ಸಂದೇಹಗಳು ಒಡಮೂಡುತ್ತವೆ. ಅವರ ಮುಖ್ಯ ಪ್ರಶ್ನೆ ಒಂದೇ: ನವ್ಯತೆ ಎಂದರೇನು? ಹೊಸ ಸಾಹಿತ್ಯದ ಆರಂಭದ ಘಟ್ಟದಲ್ಲಿ ಇಂಥ ಪ್ರಶ್ನೆಗಳು ಏಳುವುದು ಸಹಜ. ಅಲ್ಲದೆ ಹೊಸ ಸಾಹಿತ್ಯದ ಮಾರ್ಗ ಪ್ರವರ್ತಕರೆನ್ನಿಸಿಕೊಂಡವರು ಅದಕ್ಕೆ ಉತ್ತರ ನೀಡುವುದೂ ಅನಿವಾರ್ಯವಾಗುತ್ತದೆ. ಸಂಕ್ರಮಣದ ಮುಂದಿನ ಸಂಚಿಕೆಯಲ್ಲಿಯೇ ಗಿರೀಶ ಕಾರ್ನಾಡರು ನವ್ಯದ ಬಗೆಗೆ ವ್ಯಕ್ತಪಡಿಸಿದ ಆಕ್ಷೇಪಗಳನ್ನು ಹಾಗೂ ದೇಸಾಯಿಯವರು ನೀಡಿದ ಉತ್ತರವನ್ನೂ ಪ್ರಕಟಿಸಲಾಗಿದೆ. ಹೊಸ ಕಾವ್ಯದ ವಿದ್ಯಾರ್ಥಿಗಳಿಗೆ ಸಂಕ್ರಮಣ ಅನುಸರಿಸಿದ ವಿಧಾನ ಅತ್ಯಂತ ಉಪಯುಕ್ತವಾದುದಾಗಿತ್ತು.

ಶಾಂತಿನಾಥರು ಟಿಪ್ಪಣಿಯ ಕೊನೆಯ ಆರು ಅಂಶಗಳನ್ನು ನವ್ಯತೆಯ ವೈಶಿಷ್ಟ್ಯಗಳೆಂದು ಉಲ್ಲೇಖಿಸಿದ್ದಾರೆ. ಇದರಲ್ಲಿ ಮೊದಲನೆಯದರ ಅರ್ಥ ನನಗಂತೂ ತಿಳಿಯಲಿಲ್ಲ ಎನ್ನುವ ಕಾರ್ನಾಡರು, ವಾಸ್ತವಿಕತೆಯನ್ನು ನೇರವಾಗಿ ನೋಡುವುದೆಂದರೆ ಹೇಗೆ ನೋಡುವುದು? ಈ ಮಾತು ತಂತ್ರಕ್ಕೆ ಸಂಬಂಧಿಸಿದ್ದೇ, ವಿಷಯಕ್ಕೆ ಸಂಬಂಧಿಸಿದ್ದೇ? ಜೀವನದೃಷ್ಟಿಗೆ ಸಂಬಂಧಿಸಿದ್ದೇ? ಮೂರಕ್ಕೂ ಕೂಡಿಯೇ ಆಗಿದ್ದರೆ, 'ರಸ ಸಂಪ್ರದಾಯ'ದ ರೀತಿಯನ್ನು ಉಪಯೋಗಿಸುವುದರಿಂದ ವಾಸ್ತವಿಕತೆಯನ್ನು ನೋಡುವ ದೃಷ್ಟಿ 'ವಕ್ರ'ವಾಗುತ್ತದೆ ಎಂಬುದಕ್ಕೆ ಯಾವ ಪುರಾವೆಯಿದೆ? ಎಂದು ಪ್ರಶ್ನಿಸಿದ್ದಾರೆ.

ಈ ಕೊನೆಯ ಪ್ರಶ್ನೆ ಐದೂ ಅಂಶಗಳಿಗೆ ಅನ್ವಯಿಸುತ್ತದೆ ಎನ್ನುವ ಕಾರ್ನಾಡರು, ಈ ಅಂಶಗಳು 'ಹೊಸ ಸಂವೇದನೆಯ ವೈಶಿಷ್ಟ್ಯ ಎನ್ನುವ ಮೊದಲು ಅವು 'ಹಳೆಯ' ಸಂವೇದನೆಯಲ್ಲಿ ಕಂಡುಬರುವುದಿಲ್ಲ ಎನ್ನುವುದು ಸಿದ್ಧವಾಗಬೇಕು ಎಂಬ ಸವಾಲನ್ನು ಎಸೆದಿದ್ದಾರೆ. ನವ್ಯತೆಯನ್ನು ಕುರಿತು ಕನ್ನಡದಲ್ಲಿ ಬಂದ ವಿಮರ್ಶೆಗಳಲ್ಲೆಲ್ಲ ಈ ದೋಷ ಕಂಡು ಬರುತ್ತದೆ. 'ನವ್ಯ' ಎನಿಸಿಕೊಳ್ಳುವ ಗುಣಗಳು 'ರಸ ಸಂಪ್ರದಾಯ'ದ ಕವಿತೆಗಳಲ್ಲಿ ಇಲ್ಲ ಎಂಬುದನ್ನು ತೋರಿಸಿಕೊಡುವ ಗೋಜಿಗೆ ಯಾವ ವಿಮರ್ಶಕನೂ ಹೋಗುವುದಿಲ್ಲ! ಎನ್ನುವ ಅಂಶವನ್ನು ಕಾರ್ನಾಡರು ಎತ್ತಿ ತೋರಿಸಿದ್ದಾರೆ.

ಕಾರ್ನಾಡರ ಈ ಪ್ರಶ್ನೆಗಳಿಗೆ ಉತ್ತರಿಸುವ ಶಾಂತಿನಾಥ ದೇಸಾಯಿ, ಕಾರ್ನಾಡರ ಬುದ್ಧಿಗೆ ತೊಂದರೆ ಕೊಡವ ಮುಖ್ಯ ಪ್ರಶ್ನೆ ಒಂದೇ; ನವ್ಯತೆ ಎಂದರೇನು? ತಾವು ಅದನ್ನು ಉತ್ತರಿಸಿಲ್ಲ, ಉತ್ತರಿಸಿದರೂ 'ಕನ್ನಡದ ತೀರ ಸ್ವತಂತ್ರವಾದ ಯಾವುದೇ ಪರದೇಶದ ಪ್ರಭಾವಕ್ಕೆ ಸಂಬಂಧವಿಲ್ಲದ' ಉತ್ತರ ಕೊಟ್ಟಿಲ್ಲ ಎಂಬ ಕಾರ್ನಾಡರ ಆಕ್ಷೇಪಗಳನ್ನು ಸಂಗ್ರಹಿಸುವರು. ಕಾರ್ನಾಡರ ವಾದದ ಅರ್ಥ ತಮಗೂ ಸರಿಯಾಗಿ ತಿಳಿದಿಲ್ಲ, ತಮ್ಮ ಟಿಪ್ಪಣಿಯಲ್ಲಿ ನವ್ಯತೆಯ ಸಮಗ್ರ ಪರೀಕ್ಷೆ ಇಲ್ಲದಿದ್ದರೂ ನವ್ಯ ಕವಿತೆಯಲ್ಲಿ ಕೆಲಸ ಮಾಡುತ್ತಿರುವ ಮನೋಧರ್ಮದ ಪ್ರಮುಖ ಅಂಶಗಳನ್ನು ಕನ್ನಡ ನವ್ಯ ಕವಿತೆಗಳ ವಿಶ್ಲೇಷಣೆಯಿಂದಲೇ ಎತ್ತಿ ತೋರಿಸಿದ್ದಾಗಿದೆ ಎನ್ನುವ ದೇಸಾಯಿ ತಾವು ಎತ್ತಿ ತೋರಿಸಿದ

ನವ್ಯ ಕಾವ್ಯದ ಕೆಲವು ಅಂಶಗಳ ಬಗೆಗೆ ಅವರಿಗೆ ನಿಜಕ್ಕೂ ಸಮ್ಮತಿ ಇಲ್ಲದಿದ್ದರೆ, ತಮ್ಮ ದೃಷ್ಟಿಗೆ ಕಂಡ ನವ್ಯ ಕಾವ್ಯದ ಒಂದಾದರೂ ಅಂಶವನ್ನು ಎತ್ತಿ ತೋರಿಸಬೇಕಾಗಿತ್ತು ಜೊತೆಗೆ 'ಕನ್ನಡದ ತೀರ ಸ್ವತಂತ್ರವಾದ' ಉತ್ತರವನ್ನು ಹೇಗೆ ಹುಡುಕಬೇಕು ಎಂದೂ ತೋರಿಸಬೇಕಾಗಿತ್ತು. ಆಗ ಅವರ ಟೀಕೆ ಹೆಚ್ಚು ರಚನಾತ್ಮಕವಾಗಬಹುದಿತ್ತು ಎಂದು ಹೇಳಿದ್ದಾರೆ.

ರಸ ಸಂಪ್ರದಾಯದ ಒಂದು ಮುಖ್ಯ ಲಕ್ಷಣ ಕಲ್ಪನಾ ವಿಲಾಸವೆಂದೊಡನೆ ಉಳಿದ ಸಂಪ್ರದಾಯಗಳ ಕಾವ್ಯದಲ್ಲಿ ಕಲ್ಪನಾ ವಿಲಾಸವಿರುವುದಿಲ್ಲವೆಂದಲ್ಲ; ರಸ ಸಂಪ್ರದಾಯದಲ್ಲಿ ಕಲ್ಪನಾ ವಿಲಾಸಕ್ಕೆ ಹೆಚ್ಚು ಪ್ರಾಧಾನ್ಯ ಎಂದು ಅದರ ಅರ್ಥ. ಅದೇ ರೀತಿ ನವ್ಯಕಾವ್ಯದಲ್ಲಿ ವಿಚಾರಶೀಲತೆಯಿದೆ ಎಂದೊಡನೆ ಹಳೆಯ ಕಾವ್ಯದಲ್ಲಿ ವಿಚಾರಶೂನ್ಯತೆಯಿದೆ ಎಂದರ್ಥವಲ್ಲ; ನವ್ಯ ಕಾವ್ಯದಲ್ಲಿ ವಿಚಾರಶೀಲತೆಗೆ ಹೆಚ್ಚು ಪ್ರಾಧಾನ್ಯ ಎಂದರ್ಥ ಎಂದು ದೇಸಾಯಿ ವಿವರಿಸುವರು. ನವ್ಯ ಕಾವ್ಯದಲ್ಲಿ ಕಂಡು ಬರುವ ವಾಸ್ತವಿಕತೆಯನ್ನು ನೇರ ದೃಷ್ಟಿಯಿಂದ ನೋಡುವ ಧಾರ್ಷ್ಟ್ಯ, ಅನುಭವವನ್ನು ಕೆದಕಿ ಕೆದಕಿ ನೋಡುವ ವಿಪರೀತ ಕುತೂಹಲ- (ಇವುಗಳ ಹಿಂದೆ ಆದರ್ಶವಾದಿತ್ವದ ವಿರುದ್ಧ ಬಂಡಾಯ, ಜೀವನದ ಬಗ್ಗೆ ವಿಶಿಷ್ಟವಾದ ಅಸಮಾಧಾನ ಇವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು.)- ಇವು ಹಳೆಯ ಸಂವೇದನೆಯಲ್ಲಿ ಇಲ್ಲವೇಇಲ್ಲವೆನ್ನುವಷ್ಟು ವಿರಳ. ಆದರೆ ಅನುಭವ ನಿರೂಪಣೆಯಲ್ಲಿಯ ಪ್ರಾಮಾಣಿಕತೆ ಅಥವಾ ಶೈಲಿಯ ಪ್ರಾಯೋಗಿಕತೆಯ ಸಂಬಂಧದಲ್ಲಿ ಪ್ರಾಧಾನ್ಯತೆಯ ಪ್ರಶ್ನೆ ಮುಖ್ಯ. ಹೀಗೆ ಹಳೆ- ಹೊಸ ಸಂಪ್ರದಾಯಗಳಲ್ಲಿಯ ಇಲ್ಲ- ಇವೆಗಳ ಬಗ್ಗೆಯೂ ಕಡಿಮೆ ಹೆಚ್ಚಿನ ಬಗೆಗೂ ಹೆಚ್ಚಿನ ಕೂಲಂಕಷ ಹಾಗೂ ವಿವರವಾದ ಪರಾಮರ್ಶೆಯಾಗಬೇಕು ಎಂದು ದೇಸಾಯಿ ವಿವರಿಸುವರು.

ನವ್ಯ ಹಾಗೂ ಅದರ ಹಿಂದಿನ ಸಾಹಿತ್ಯದ ಅಂತರದ ಬಗೆಗೆ ಈಗಾಗಲೇ ಬಿ.ಟಿ.ದೇಸಾಯಿಯವರ ಅಭಿಪ್ರಾಯಗಳನ್ನು ಗಮನಿಸಿದ್ದಾಗಿದೆ. ಇಲ್ಲಿ ಶಾಂತಿನಾಥ ದೇಸಾಯಿಯವರು ಇನ್ನಷ್ಟು ಅಂತರಗಳನ್ನು ವಿವರಿಸಿದ್ದಾರೆ. ಹೀಗೆ ಹಲವು ಹತ್ತು ನಿಟ್ಟಿನಿಂದ ಹೊಸ ಕಾವ್ಯ ಪ್ರಕಾರ ಒಂದೇಸಮನೆ ನಿಕಷಕ್ಕೆ ಒಡ್ಡಿದ್ದರಿಂದ ಅದರ ಬಗೆಗೆ ಆಸಕ್ತಿಯಿದ್ದವರಿಗೆ ಒಂದು ಅಭಿಪ್ರಾಯಕ್ಕೆ ತಲುಪುವುದಕ್ಕೆ ಸಾಧ್ಯವಾಯಿತು. ಆ ಕೆಲಸವನ್ನು ಅಂದಿನ ಸಾಹಿತ್ಯಪತ್ರಿಕೆಗಳು ಯಶಸ್ವಿಯಾಗಿಯೇ ಮಾಡಿದವು.

ಶಾಂತಿನಾಥ ದೇಸಾಯಿಯವರು ನವ್ಯದ ಲಕ್ಷಣವುಳ್ಳ ಕವಿತೆಯೆಂದು ಉದಾಹರಿಸಿದ ವಿ.ಜಿ.ಭಟ್ಟರ ಕವಿತೆ ಕಾರ್ನಾಡರಿಂದ ವಿಮರ್ಶೆಗೆ ಒಳಗಾಗಿದೆ. ಇಲ್ಲಿ ದೇಸಾಯಿಯವರೇ ಹೇಳಿದ ಆರೂ ಲಕ್ಷಣಗಳು ಇಲ್ಲ ಎಂದು ವಿವರಿಸುವರು. 'ಆತ್ಮ ಶೋಧನೆ'ಯ ಬಗ್ಗೆ ಕಾರ್ನಾಡರ ಅಭಿಪ್ರಾಯ ಹೀಗಿದೆ: 'ಇಲ್ಲಿ ಕವಿ 'ಆತ್ಮ' ಪದದ ಪ್ರಯೋಗದಿಂದುಂಟಾದ ಭ್ರಮೆಯ ವಿರುದ್ಧ 'ಬಂಡಾಯ'ವೆಬ್ಬಿಸಿದ್ದಾನೆ. 'ಆತ್ಮ' ಎಲ್ಲೂ ಕಾಣದಲ್ಲ ಎಂದು ಚೀರಿಕೊಳ್ಳುತ್ತಾನೆ. ಆದರೆ ಹೀಗೆ ಬಂಡಾಯವೆಬ್ಬಿಸುವ ಮೊದಲು 'ಆತ್ಮ' ಶಬ್ದದ

ಅರ್ಥವನ್ನಾದರೂ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾನೆಯೇ? ಈ 'ಆತ್ಮ'ಕ್ಕಾಗಿ ಅವನು ಗುಡಿ, ಪೀಠ, ಮಗುವಿನ ಕಣ್ಣು ಮಸಣದ ಮಣ್ಣು ಚೆಲುವಿನ ಕೆನ್ನೆ ಇವನ್ನೆಲ್ಲ ಅರಸುವುದನ್ನು ನೋಡಿದರೆ ಆತ್ಮವೊಂದು ಇಂದ್ರಿಯಗಳ ಮುಖಾಂತರ ತಿಳಿದುಕೊಳ್ಳಬಹುದಾದ ವಸ್ತು ಎಂದೇ ತಿಳಿದುಕೊಂಡಂತಿದೆ. ಇದರಿಂದ 'ಆತ್ಮ'ದ ಬಗ್ಗೆ ಬರೆದ ತತ್ವಜ್ಞಾನಿಗಳ ಮೇಲೆ ಅನ್ಯಾಯವಾಗಿದೆ. ಇಷ್ಟೇ ಅಲ್ಲ 'ಆತ್ಮ' ಶೋಧನೆ ಮಾಡುವವನಿಗೆ 'ಆತ್ಮ' ಶಬ್ದದ ಅರ್ಥವೇ ತಿಳಿದಿರಲಿಲ್ಲ ಎಂದು ಒಪ್ಪಿಕೊಳ್ಳುವ ಪ್ರಸಂಗ ಬರುತ್ತದೆ. ಕವಿತೆಯ ಕೊನೆಯಲ್ಲಿ ಜಡ ಸೃಷ್ಟಿಯಲ್ಲಿ 'ಆತ್ಮ' ಸಿಗಲಿಲ್ಲ ಎಂದೊಡನೆ ಅದೊಂದು ನಿಘಂಟುವಿನಲ್ಲಿ ಮೂಡಿರುವ ಶಬ್ದ ಮಾತ್ರ, ಎಂದು ಕವಿ ಧಿಕ್ಕರಿಸುತ್ತಾನೆ. ಇದರಲ್ಲಿ ಕವಿಯ ಬುದ್ಧಿವಾದ ವಿರೋಧ (anti intellectualism) ಮಾತ್ರ ಕಾಣುತ್ತದೆ ಹೊರತು ಶಾಂತಿನಾಥರು ನವ್ಯ ಸಂವೇದನೆಯ ಗುಣ ಎಂದು ಎತ್ತಿ ತೋರಿಸಿದ ನಾಲ್ಕನೆಯ ಅಂಶದ (ಭಾವನೆಗಳ ಜೊತೆಗೆ ಬುದ್ಧಿಗೆ ಪ್ರಾಧಾನ್ಯ) ಸುಳಿವೂ ಇಲ್ಲ.

ಶಾಂತಿನಾಥರು ಗುರುತಿಸುವ ಎಲ್ಲ ಅಂಶಗಳು ಹಲವು 'ರಸ ಸಂಪ್ರದಾಯ'ದ ವಿಶೇಷತಃ ಬೇಂದ್ರೆಯವರ ಕವಿತೆಗಳಲ್ಲಿ ಕಂಡುಬರುವವೆಂದೂ, ಹಲವು 'ನವ್ಯ ಸಂಪ್ರದಾಯ'ದ ಕವಿತೆಗಳಲ್ಲಿ ಕಂಡುಬರುವುದಿಲ್ಲ ಎಂದೂ ತೋರಿಸುವುದು ಕಠಿಣವಲ್ಲ ಎಂದು ಕಾರ್ನಾಡರು ಹೇಳಿದ್ದಾರೆ. ಇವೆಲ್ಲ ಬಲವಾದ ಆಕ್ಷೇಪಗಳೇ.

ಇದಕ್ಕೆ ದೇಸಾಯಿಯವರ ಸಮಾಧಾನ ಹೀಗೆ: ಕಾರ್ನಾಡರು ವಾದದ ವ್ಯಾಮೋಹಕ್ಕೆ ಬಲಿ ಬಿದ್ದು 'ಆತ್ಮ ಶೋಧನೆ' ಕವಿತೆಯಲ್ಲಿ ತಪ್ಪು ಅರ್ಥ ಹುಡುಕಿದ್ದಾರೆ. ಈ ಕವಿತೆಯನ್ನು ಸಮಂಜಸವಾಗಿ ಓದುವ ಯಾರಿಗೂ ಅದರಲ್ಲಿ ಬುದ್ಧಿವಾದದ ದೃಷ್ಟಿಯೇ ಪ್ರಾಮುಖ್ಯವಾಗಿ ಅಭಿವ್ಯಕ್ತಗೊಂಡಿದೆಯೆಂದು ಬೆಳಕಿನಷ್ಟು ಸ್ಪಷ್ಟವಾಗಿದೆ. ಬುದ್ಧಿಯನ್ನು ಪ್ರಮಾಣವೆಂದು ಒಪ್ಪಿ ಆತ್ಮವನ್ನು ಶೋಧಿಸಿದಾಗ ಅದು ಬರೇ ಶಬ್ದ. ಅದಕ್ಕೆ ಬೇರೆ ಅಸ್ತಿತ್ವವಿಲ್ಲ ಎಂದು ಕಂಡು ಬಂದ ಸತ್ಯವನ್ನು ಭಟ್ಟರು ಈ ಕವಿತೆಯಲ್ಲಿ ತೋರಿಸಿದ್ದಾರೆ. ಈ ಕವಿತೆಯಲ್ಲಿ ಬುದ್ಧಿವಾದ ವಿರೋಧವನ್ನು ಕಂಡ ಕಾರ್ನಾಡರ ಪಾಂಡಿತ್ಯಪೂರ್ಣ ರಸಿಕತೆ ಬೆರಳುಕಚ್ಚುವಷ್ಟು ವಿಸ್ಮಯಕಾರಿಯಾಗಿದೆಯೆಂದೇ ಹೇಳಬೇಕು ಎನ್ನುವರು. ನವ್ಯ ಮನೋಧರ್ಮದ ಎಲ್ಲ ಅಂಶಗಳನ್ನೂ ಒಂದೇ ಕವಿತೆಯಲ್ಲಿ ಕಾರ್ನಾಡರು ಹುಡುಕಹೊರಟಿದ್ದನ್ನೂ ಅವರು ಟೀಕಿಸಿದ್ದಾರೆ. 'ಯುಗಧರ್ಮ', 'ಮನೋಧರ್ಮ' ಮುಂತಾದ conceptಗಳೆಂದರೆ ಸರಳ ರೇಖೆಗಳಲ್ಲ. ಬೇರೆ ಬೇರೆ ವೈಯಕ್ತಿಕ ಸಂವೇದನೆ-ಪ್ರತಿಕ್ರಿಯೆ ಮುಂತಾದವುಗಳಲ್ಲಿ ಕಂಡು ಬರುವ ಸುಸಂಬದ್ಧವಾದ pattern ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಈ ದೃಷ್ಟಿಯಿಂದ ನವ್ಯ ಕಾವ್ಯದಲ್ಲಿ ಒಂದು ಸುಸಂಬದ್ಧ 'ಆಕೃತಿ' (pattern) ಇದೆಯೇ, ಇದ್ದರೆ ಅದರ ಅಂಶಗಳಾವವು ಎಂದು ಪರೀಕ್ಷಿಸುವ ಯತ್ನ ತಮ್ಮ ಟಿಪ್ಪಣಿಯಲ್ಲಿದೆ ಎಂದು ದೇಸಾಯಿ ಹೇಳುವರು.

‘ರಸ ಸಂಪ್ರದಾಯ’ದ ರೂಪ ವಿನ್ಯಾಸಗಳ ಚರ್ಚೆಯಾಗಬೇಕು ಎನ್ನುವುದು ಕಾರ್ನಾಡರ ಅಭಿಪ್ರಾಯ. ‘ರಸ ಸಂಪ್ರದಾಯವೆಂದರೇನು?’ ಎಂಬ ಪ್ರಶ್ನೆಗೆ ಒಂದಾದರೂ ಉತ್ತರ ಸಿಕ್ಕಾಗ ಮಾತ್ರ ‘ನವ್ಯತೆ ಎಂದರೇನು?’ ಎಂಬ ಪ್ರಶ್ನೆಗೆ ಉತ್ತರ ದೊರೆಯುವಂತಿದೆ. ಆಗ ಮಾತ್ರ ಈ ಎರಡು ಸಂಪ್ರದಾಯಗಳ ಮನೋಭಾವಗಳಲ್ಲಿ ನಿಜವಾಗಿಯೂ ಭೇದವಿದೆಯೇ ಎಂಬುದು ತಿಳಿಯುವಂತಿದೆ. ಆಮೇಲೆ ಬೇಕಾದರೆ ‘ನವ್ಯ ಕಾವ್ಯದ ಜನ್ಮ ಐತಿಹಾಸಿಕ ಅವಶ್ಯಕತೆಯಾಗಿತ್ತೇ?’ ಮುಂತಾದ ಪ್ರಶ್ನೆಗಳನ್ನು ಬೇಕಾದಷ್ಟು ಚರ್ಚಿಸಲಿಕ್ಕೆ ಅಡ್ಡಿಯಿಲ್ಲ ಎಂದು ಅವರು ಬಯಸುವರು. ದೇಸಾಯಿಯವರು ತಮ್ಮ ಲೇಖನದಲ್ಲಿ ಬಳಸಿದ ಮಾತನ್ನು ಕಾರ್ನಾಡ ಇಲ್ಲಿ ಪ್ರಸ್ತಾಪಿಸುವರು. ‘ನವ್ಯತೆ .... .. ಹಿಂದಿನ ರಸ ಸಂಪ್ರದಾಯವನ್ನು ಬದಿಗೊತ್ತಿ ತನ್ನ ಜಯಭೇರಿ ಹೊಡೆದು ನಿಂತಿದೆ’ - ಬದಿಗೊತ್ತಿ? ಜಯಭೇರಿ ಈ ಯುದ್ಧ ವಿದ್ಯೆಯ ಪದಗಳೇಕೆ ಸಾಹಿತ್ಯ ವಿಮರ್ಶೆಯಲ್ಲಿ? ಕುಮಾರ ವ್ಯಾಸ ಪಂಪನನ್ನು ಬದಿಗೊತ್ತಲಿಲ್ಲ, ಶಾ ಶೇಕ್ಸ್‌ಪಿಯರ್‌ನನ್ನು ಬದಿಗೊತ್ತಲಿಲ್ಲ. ಬದಿಗೊತ್ತುವದು ಸಾಹಿತ್ಯ ಸೃಷ್ಟಿಯ ಉದ್ದೇಶವೂ ಅಲ್ಲ ಎಂದು ಕಾರ್ನಾಡ ಹೇಳುವರು.

ಇದಕ್ಕೆ ದೇಸಾಯಿಯವರು ಹೇಳುವ ಸಮಾಧಾನ ಮಹತ್ವದ್ದಾಗಿದೆ. ಈಗ ಅರ್ಥಪೂರ್ಣವಾದ ಜೀವಂತ ಕಾವ್ಯ ಬರೆಯಬೇಕೆನ್ನುವ ಯಾವ ಲೇಖಕನೂ ಈ ಹೊಸ ಸಂಪ್ರದಾಯದ ಸಂದರ್ಭದಲ್ಲಿಯೇ ಬರೆಯಬೇಕೇ ಹೊರತು ಹಳೆಯ ಸಂಪ್ರದಾಯದ ಸಂದರ್ಭದಲ್ಲಿ ಬರೆಯಲಾರ; ಸದ್ಯ ಆಳತೊಡಗಿದ ಸಂಪ್ರದಾಯ ನವ್ಯತೆಯ ಸಂಪ್ರದಾಯ ಎಂಬ ಮಾತು ಖಚಿತ. ಗೋಕಾಕ, ಕಣವಿ, ಶಿವರುದ್ರಪ್ಪ, ಕೆಎಸ್‌ಎನ್, ಚಿತ್ತಾಲ ಮೊದಲಾದವರು ರಸ ಸಂಪ್ರದಾಯದಲ್ಲಿ ಸಿದ್ಧಿ ಪಡೆದ ಕವಿಗಳೂ ಹೊಸ ಸಂಪ್ರದಾಯದ ಪ್ರಭಾವಕ್ಕೊಳಗಾಗಿ ಕಾವ್ಯ ನಿರ್ಮಿಸುತ್ತಿರುವುದು ಹೊಸ ಸಂಪ್ರದಾಯದ ವಿಜಯವಲ್ಲದೆ ಮತ್ತೇನು? ಹಳೆಯ ಸಂಪ್ರದಾಯ ಹಳೆಯದಾಯಿತು, ಬದಿಗೆ ಸರಿಸಲ್ಪಟ್ಟಿತು ಎಂದೊಡನೆ ಆ ಸಂಪ್ರದಾಯ ಹಿಂದೆ ನಿರ್ಮಿಸಿದ ಶಕ್ತಿಯುತ ಕಾವ್ಯ ತನ್ನ ಶ್ರೇಷ್ಠತೆಯನ್ನು ಕಳೆದುಕೊಂಡು ಬಿಟ್ಟಿದೆಯೆಂದಲ್ಲ. ಆ ಸಂಪ್ರದಾಯದಲ್ಲಿ ಹೊಸ ಮನೋಧರ್ಮ ಅಭಿವ್ಯಕ್ತಗೊಳ್ಳಲಾರದು ಎಂದರ್ಥ ಎಂಬ ವಿವರಣೆ ನವ್ಯದ ಬಗೆಗಿನ ಹಲವು ಆಕ್ಷೇಪಗಳಿಗೆ ಉತ್ತರ ನೀಡಿದೆ.

ನವ್ಯ ಕಾವ್ಯದ ಆರಂಭ ಕಾಲದಲ್ಲಿಯ ಒಂದು ಅರ್ಥಪೂರ್ಣ ವಾಗ್ವಾದ ಇದು. ಸಂಕ್ರಮಣ ಇದಕ್ಕೆ ವೇದಿಕೆಯಾಯಿತು.[೯] ಇಂಥ ಒಂದು ವಾಗ್ವಾದ ನವ್ಯ ಮಾರ್ಗವನ್ನು ಬಲಪಡಿಸುವುದಕ್ಕೆ ಕಾರಣವಾಗಿದೆ. ಆ ಕೆಲಸವನ್ನು ಸಂಕ್ರಮಣದಂಥ ಪತ್ರಿಕೆ ತನ್ನ ಎರಡನೆಯ ವರ್ಷದಲ್ಲಿಯೇ ಮಾಡಿತು.

೯.ಶಾಂತಿನಾಥ ದೇಸಾಯಿ: ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ, ಸಂಕ್ರಮಣ ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೬೫, ಒಂದು ಪತ್ರ: ಗಿರೀಶ ಕಾರ್ನಾಡ, ಸಂಕ್ರಮಣ ೮, ಸಂಪುಟ ೨, ಸಂಚಿಕೆ ೨, ಅಕ್ಟೋ- ೧೯೬೫.

ಶ್ರೇಷ್ಠತೆಯ ತಿರಸ್ಕಾರ: ನವ್ಯಪಂಥದವರು ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಪ್ರತಿಪಾದಿಸಿದರು. ನವ್ಯದ ಶ್ರೇಷ್ಠತೆಯ ಬಯಕೆಯ ವಿರುದ್ಧ ತೀಕ್ಷ್ಣವಾದ ವಿರೋಧ ವ್ಯಕ್ತವಾಗಿದೆ. ಶ್ರೇಷ್ಠತೆಯ ಪ್ರತಿಪಾದನೆ ಮತ್ತು ಅವುಗಳ ತಿರಸ್ಕಾರ ಇವಲ್ಲಕ್ಕೂ ಸಾಹಿತ್ಯಪತ್ರಿಕೆಗಳೇ ವೇದಿಕೆಯಾದವು. ಶ್ರೇಷ್ಠತೆಯ ತಿರಸ್ಕಾರ ನವ್ಯೋತ್ತರ ಸಾಹಿತ್ಯದ ಸಂದರ್ಭದಲ್ಲಿ ಅತ್ಯಂತ ಬಲವಾದ ಸಿದ್ಧಾಂತವಾಯಿತು. ಈ ವಾಗ್ವಾದ ಹೇಗೆ ಒಂದು ಸಾಹಿತ್ಯ ತತ್ವವನ್ನು ಬೆಳೆಸಿತು ಎಂಬ ವಿಶ್ಲೇಷಣೆ ಇಲ್ಲಿದೆ.

ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಕಾಯ್ದುಕೊಳ್ಳಬೇಕು ಎನ್ನುವುದು ನವ್ಯ ಸಾಹಿತಿಗಳ ವಾದ. ಇದು ಮುಂದೆ ನವ್ಯವನ್ನು ನಿರಾಕರಿಸುವುದಕ್ಕೆ ಕಾರಣವೂ ಆಗುತ್ತದೆ. ಶ್ರೇಷ್ಠವಾದುದಕ್ಕೆ ಮಾತ್ರ ಮನ್ನಣೆ ಇರಬೇಕು ಎಂಬುದು ನವ್ಯದ ಹರಿಕಾರ ಗೋಪಾಲಕೃಷ್ಣ ಅಡಿಗರ ಸ್ಪಷ್ಟ ನುಡಿ. ಅವರು 'ಸಾಕ್ಷಿ'ಯ ಎರಡನೆ ವರ್ಷದ ಮೊದಲ ಸಂಚಿಕೆಯಲ್ಲಿಯೇ ಶ್ರೇಷ್ಠತೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸುವರು.[೧೦] ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ನಷ್ಟವಾಗಿರುವ ತಾರತಮ್ಯ ಜ್ಞಾನ ಸಾಹಿತ್ಯದಲ್ಲೂ ಅಸ್ತಂಗತವಾಗುತ್ತಿರುವ ಈ ಕಾಲದಲ್ಲಿ ಕಣ್ಣು ಬಿಟ್ಟು ನಡೆಯುವುದೂ ಕಷ್ಟವಾಗುತ್ತಿದೆ. ಸಾಮಾನ್ಯರ ಈ ಯುಗದಲ್ಲಿ ಅತಿ ಸಾಮಾನ್ಯಕ್ಕೇ ಪಟ್ಟ ಸಾಹಿತ್ಯದಲ್ಲೂ ದೊರೆಯುತ್ತಿದೆ ಎಂದು ಅಡಿಗರು ಹೇಳುವರು. ಬಹಳ ಕಾಲದಿಂದ ಸಾಹಿತ್ಯದಲ್ಲಿ ಕೆಲಸ ಮಾಡಿ ಕೃತಾರ್ಥರಾದ ಹಿರಿಯರನ್ನೂ ಸಾಹಿತ್ಯಕ್ಕೆ ಸಂಬಂಧಪಡದ ಕಾರಣಗಳಿಗಾಗಿಯೇ ನಾವು ಗೌರವಿಸುತ್ತೇವೆ ಎಂಬ ವಿಷಾದ ಅವರಲ್ಲಿದೆ. ಇಲ್ಲಿ ಜಾತಿ ಪ್ರದೇಶಗಳ ದುರಹಂಕಾರವೇ ಶಿವಸೇನೆಯ ಮಾದರಿಯಲ್ಲಿ ಅಭಿವ್ಯಕ್ತಿಪಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ವಿಕಟಾಟ್ಟಹಾಸದ ವಿರಾಡ್ರೂಪವನ್ನು ಪ್ರತಿಭಟಿಸುವುದು ಅತ್ಯಂತ ಕಷ್ಟದ ಕೆಲಸ ಎಂಬ ಅರಿವು ಅವರಿಗಿದೆ. ಈ ವಾತಾವರಣದಲ್ಲಿ ವಿವೇಕವನ್ನೂ, ತಾರತಮ್ಯ ಜ್ಞಾನವನ್ನೂ, ಅಂತರಂಗ ಶುದ್ಧಿಯನ್ನೂ ಕಾಪಾಡಿಕೊಳ್ಳಲು ಯತ್ನಿಸುವುದೇ ಮೂರ್ಖತನವಾಗಿ ಕಾಣಬಹುದು ಎಂಬ ಪ್ರಜ್ಞೆ ಅವರಲ್ಲಿದೆ. ಶುದ್ಧವಾಗಿ, ಸರಳವಾಗಿ, ನಿಷ್ಕಪಟವಾಗಿ ಬದುಕುವುದೂ ಇಹವನ್ನು ಸಂಪೂರ್ಣ ಮರೆತು ಪರವೊಂದನ್ನೇ ಗಮ್ಯವಾಗಿಟ್ಟುಕೊಳ್ಳುವಷ್ಟೇ ಕಷ್ಟವಾಗಿದೆ. ಆದರೂ ಈ ಪ್ರತಿಭಟನೆಯ ಕೆಲಸ, ಪ್ರವಾಹದ ವಿರುದ್ಧವೇ ಈಜುವ ಕೆಲಸ, ನಡೆಯಲೇ ಬೇಕು; ಏಕೆಂದರೆ ಅದು ನಡೆಯುತ್ತಲೇ ಇದೆ. ಜೀವನದಲ್ಲಿ ಹೇಗೋ ಹಾಗೆ ಸಾಹಿತ್ಯದಲ್ಲೂ ಅತಿ ಶ್ರೇಷ್ಠವಾದದ್ದನ್ನು ಮಾತ್ರ ಅಂಗೀಕರಿಸುವ ಈ ಕೆಲಸ ಮರೆಯಾಗಬಾರದು ಎನ್ನುವ ಅಡಿಗರು 'ಸಾಕ್ಷಿ'ಯ ಮೂಲೋದ್ದೇಶವೇ ಇಷ್ಟು ಎಂದು ಹೇಳುವ ಮೂಲಕ ಸಾಹಿತ್ಯಪತ್ರಿಕೆಯ ಇನ್ನೊಂದು ಮುಖವನ್ನು ಪರಿಚಯಿಸುವರು.

ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಕಾಯ್ದುಕೊಳ್ಳುವುದೇ ಸಾಹಿತಿಯ ಆದ್ಯ ಕರ್ತವ್ಯ

೧೦.ಸಾಕ್ಷಿ ೫; ಸಂಪುಟ ೨, ಸಂಚಿಕೆ ೧, ೧೯೬೯

ಎನ್ನುವಂತೆ ಅಡಿಗರು ಮಾತನಾಡುತ್ತಾರೆ. ಇದು ಕೊನೆಗೆ ಸಾಹಿತ್ಯವು ವ್ಯಕ್ತಿ ವಿಶಿಷ್ಟವಾಗಿ ಸಾಮಾಜ ವಿಮುಖವಾಗುವಹಾಗೆ ಮಾಡುತ್ತದೆ. ಅತಿಯಾದ ಮಡಿವಂತಿಕೆಯಿಂದ ಮಣ್ಣಿನ ವಾಸನೆಯಿಂದ ಕೂಡಿರಬೇಕಾದ ಸಾಹಿತ್ಯ ಬೇರಿನ ಸಂಬಂಧವನ್ನು ಕಡಿದುಕೊಳ್ಳುವ ಹಾಗೆ ಮಾಡುತ್ತದೆ. ಶುದ್ಧ ಭಾಷೆಯನ್ನು ಬಳಸಬೇಕೆಂಬ ಬಯಕೆಯಿಂದಾಗಿ ಸಾಮಾನ್ಯ ಜನರ ಆಡು ಮಾತುಗಳು ನವ್ಯ ಸಾಹಿತ್ಯದಲ್ಲಿ ಅವಜ್ಞೆಗೆ ಈಡಾಗುತ್ತದೆ. ಬೌದ್ಧಿಕ ಎಚ್ಚರದಿಂದ ಸೃಷ್ಟಿಯಾದ ಸಾಹಿತ್ಯ ಹೃದಯಹೀನ ಸಾಹಿತ್ಯವಾಗುವ ಅಪಾಯವನ್ನು ಎದುರಿಸುತ್ತದೆ.

ನವ್ಯ ಸಾಹಿತ್ಯ ಚಳವಳಿ ಬಲವಾಗಿದ್ದ ಸಂದರ್ಭದಲ್ಲಿ, ನಮ್ಮ ಸಾಹಿತ್ಯ ಪರಿಷತ್ತು, ಅಕಾಡೆಮಿ ಮುಂತಾದವು ನಿಜವಾಗಿ ಫ್ರೆಂಚ್ ಅಕಾಡೆಮಿ ಮಾದರಿಯಲ್ಲಿ ಪುನರ್‌ರಚಿತವಾಗಬೇಕು, ಶ್ರೇಷ್ಠತೆಯೊಂದೇ ಅವುಗಳ ಮಾನದಂಡವಾಗಬೇಕು. ಕನ್ನಡದಲ್ಲಿ ಶ್ರೇಷ್ಠ ವಿಮರ್ಶಕರ ತಂಡ ಕಾಲಕಾಲಕ್ಕೆ ಪ್ರಕಟವಾಗುವ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಗುರುತಿಸಬೇಕು ಮತ್ತು ಅತ್ಯುತ್ಕೃಷ್ಟ ಕೃತಿಗಳಿಗೆ ನೊಬೆಲ್ ಪ್ರಶಸ್ತಿಯ ಹೋಲಿಕೆಯ ಲಕ್ಷ ರುಪಾಯಿಗಳ ಶ್ರೇಷ್ಠ ಪುರಸ್ಕಾರ ನೀಡಬೇಕು ಎಂಬ ಚರ್ಚೆ ನಡೆದಿತ್ತು.

ಸಾಹಿತ್ಯದ ಪರಿಸರದಲ್ಲಿ ಶ್ರೇಷ್ಠತೆಯೇ ಮುಖ್ಯವಾದರೆ ಸಾಹಿತ್ಯೇತ್ತರ ಪರಿಸರದಲ್ಲಿ? ಅಲ್ಲಿ ಶ್ರೇಷ್ಠತೆ ಮುಖ್ಯವಾಗುವುದಿಲ್ಲವೆ? ಸಾಹಿತ್ಯದಲ್ಲಿ ಶ್ರೇಷ್ಠತೆ ಮುಖ್ಯ ಎಂದು ಘೋಷಿಸಿದಾಗ ಸಾಹಿತ್ಯೇತರ ಪರಿಸರದಲ್ಲಿ ಶ್ರೇಷ್ಠತೆ ಮುಖ್ಯವಲ್ಲ ಎಂದು ಹೇಳಿದಂತೆ ಅಲ್ಲವೆ?. ನವ್ಯ ಸಾಹಿತ್ಯದುದ್ದಕ್ಕೂ ಅಂಥದ್ದೇ ಗ್ರಹಿಕೆ ಇದ್ದುದನ್ನು ನೋಡಬಹುದು. ಶ್ರೇಷ್ಠತೆಯನ್ನು ಬಯಸಿ ಸಾಧಿಸ ಹೊರಟರೆ ಅದರಿಂದಾಗುವ ಅಪಾಯದ ಬಗ್ಗೆ ಸಾಹಿತ್ಯಪತ್ರಿಕೆಗಳಲ್ಲಿ ಚರ್ಚೆ ನಡೆದಿದೆ.

ಶ್ರೇಷ್ಠತೆ ಕನಿಷ್ಠತೆಗಳ ತರತಮ ಆಲೋಚನೆ ಬರುವುದು ಹುಟ್ಟಿನಿಂದ ಶ್ರೇಷ್ಠತೆ ಕನಿಷ್ಠತೆಗಳನ್ನು ಪರಿಗಣಿಸುವವರಿಂದ ಮಾತ್ರ ಎಂಬ ಟೀಕೆ ಬಂಡಾಯದ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ. ಇದು ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಪ್ರತಿಪಾದಿಸಿದ ನವ್ಯರ ಮೇಲಿನ ನೇರ ಟೀಕೆ ಎಂದೇ ತಿಳಿಯಬೇಕು. ಈ ಕಾರಣಕ್ಕಾಗಿಯೇ ನವ್ಯ ಸಾಹಿತ್ಯ ಬ್ರಾಹ್ಮಣರ ಸಾಹಿತ್ಯ ಎಂಬ ಟೀಕೆ ಹುಟ್ಟಿಕೊಂಡಿದ್ದು. ಈ ಬ್ರಾಹ್ಮಣ ಬ್ರಾಹ್ಮಣೇತರ ಭೇದ ನವ್ಯೋತ್ತರ ಸಾಹಿತ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಂಕ್ರಮಣ, ಲಂಕೇಶ್ ಪತ್ರಿಕೆ ಮೊದಲಾದ ಪತ್ರಿಕೆಗಳು ಬ್ರಾಹ್ಮಣ ವಿರೋಧಿ ನಿಲುವನ್ನು ನಿರಂತರವಾಗಿ ಪ್ರತಿಪಾದಿಸುತ್ತಲೇ ಬಂದವು. ಶ್ರೇಷ್ಠ-ಕನಿಷ್ಠವೆಂಬ ತರತಮ ಮನೋಭಾವ ಇರುವಲ್ಲಿ ಉತ್ತಮ ಸಾಹಿತ್ಯ ಸೃಷ್ಟಿಯಾಗಲಾರದು ಎಂಬ ನಂಬಿಕೆ ಬಂಡಾಯದವರದ್ದು. ಇಂಥ ಶ್ರೇಷ್ಠತೆಯ ವಾದವನ್ನು ಅವರು ಸಾರಾಸಗಟಾಗಿ ತಳ್ಳಿಹಾಕಿಬಿಡುತ್ತಾರೆ. ಇದು ಬ್ರಾಹ್ಮಣರ ಕುತಂತ್ರ ಎಂದು ಅವರು ಖಂಡಿಸುತ್ತಾರೆ. ನವ್ಯದವರು ರಿಪೇರಿಯಾಗದ ಗೊಡ್ಡು ಗಾಡಿಗಳು. ನೇರವಾಗಿ ಗ್ಯಾರೇಜಿಗೇ ಅವನ್ನು ತಳ್ಳಬೇಕು ಎಂಬ ಮಾತನ್ನು ಚಂದ್ರಶೇಖರ ಪಾಟೀಲರು

ಸಂಕ್ರಮಣದಲ್ಲಿ ಆಡಿದ್ದಾರೆ. ಹುಟ್ಟಿನಿಂದಲೇ ಶ್ರೇಷ್ಠತೆ ಎಂಬ ನಂಬಿಕೆಯನ್ನು ಗುಡಿಸಿ ಹಾಕುವ ಪ್ರಯತ್ನವನ್ನು ಬಂಡಾಯದವರು ನಡೆಸಿದರು. ಅದಕ್ಕೆ ಸಮರ್ಥನೆ ನೀಡುವ ಲೇಖನಗಳು ಸಂಕ್ರಮಣದಂಥ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. "ಶೂದ್ರ ಬೌದ್ಧಿಕತೆಯ ಮೇಲೆ ಪುರೋಹಿತಶಾಹಿಯ ಸವಾರಿ" ಲೇಖನ ಬರೆಯುವ ಮಲ್ಲಿಕಾ ಘಂಟಿ, 'ಎಲ್ಲ ಕಾಲದಲ್ಲಿಯೂ ಬ್ರಾಹ್ಮಣ್ಯವಾದ ತನ್ನ ಅಸ್ತಿತ್ವಕ್ಕಾಗಿ ಹಲವಾರು ಕುಟಿಲೋಪಾಯಗಳನ್ನು ಬಹಳ ನಯ-ನಾಜೂಕಿನಿಂದ ಚಲಾವಣೆಯಲ್ಲಿ ತರುತ್ತದೆ..' ಎಂದು ಹೇಳಿದ್ದಾರೆ.[೧೧] .. ಹುಟ್ಟಿನಿಂದಲೇ ಶ್ರೇಷ್ಠತ್ವವನ್ನು ಹೇಳಿಕೊಟ್ಟಿರುವ ಅಥವಾ ಒಪ್ಪಿರುವ, ಒಪ್ಪಿಸಿರುವ, ಬೌದ್ಧಿಕ ಲೋಕದ ವಾರಸುದಾರಿಕೆಯನ್ನು ಗುತ್ತಿಗೆ ಹಿಡಿದಿರುವ ಪುರೋಹಿತ ವರ್ಗ ಕೆಲವು ಶೂದ್ರ ಚೇತನಗಳನ್ನು ಕಂಡು ಬೆರಗಾಗಿದೆ. ಆಧ್ಯಾತ್ಮಿಕ, ಸಾಹಿತ್ಯಕ ಕ್ಷೇತ್ರದಲ್ಲಿ ಬೌದ್ಧಿಕವಾಗಿ ಸ್ವಪ್ರತಿಭೆ- ಪರಿಶ್ರಮದಿಂದ ಪುರೋಹಿತರ ಬೌದ್ಧಿಕ ಕೋಟೆಯ ಮೇಲೆ ಧ್ವಜ ಹಾರಿಸಿದ ಶೂದ್ರರನ್ನು ಕಾಲಾಂತರದಲ್ಲಿ ಹಾಗೆಯೇ ಬಿಟ್ಟರೆ ತಾವು ಉಳಿಯಲು ಸಾಧ್ಯವೆ? ತಮ್ಮ ಹುಟ್ಟಿನ ಶ್ರೇಷ್ಠತೆ ರಟ್ಟಾದರೆ ಎನ್ನುವ ಭಯ. ಹೀಗಾಗಿ ಹಲವಾರು ಅದಮ್ಯ ಮಾನವ ಚೇತನ, ಶಕ್ತಿಗಳ ಹುಟ್ಟಿನ ಬಗ್ಗೆ ಕಥೆ ಕಟ್ಟಿ ಶೂದ್ರ ಜನಾಂಗದಿಂದ ಅವರನ್ನು ತಮ್ಮೆಡೆಗೆ ಸೇರಿಸಿಕೊಂಡಿರುವ / ಕೊಳ್ಳುವ ಸಲುವಾಗಿ ನಡೆಸಿದ ಕುತಂತ್ರವನ್ನು ಅರಿಯುವುದಾಗಬೇಕು - ಎಂದು ಘಂಟಿ ಆ ಲೇಖನದಲ್ಲಿ ಹೇಳಿದ್ದಾರೆ. ವಾಲ್ಮೀಕಿ ಹಾಗೂ ವ್ಯಾಸನ ಬಗ್ಗೆ ಹುಟ್ಟಿದ ಕಥೆಗಳನ್ನು ಅವರು ಇದಕ್ಕೆ ಉದಾಹರಣೆಯಾಗಿ ನೀಡುವರು. ಒಟ್ಟಾರೆಯಾಗಿ ಇದು ಬ್ರಾಹ್ಮಣ್ಯದ ವಿರುದ್ಧ ಬ್ರಾಹ್ಮಣೇತರರಿಗೆ ಎಚ್ಚೆತ್ತುಕೊಳ್ಳಲು ನೀಡಿದ ಕರೆಯೇ ಆಗಿದೆ.

ನವ್ಯದ ಈ ಶ್ರೇಷ್ಠತೆಯ ಕನವರಿಕೆ ಮುಂದೆ ಆರ್.ಸಿ.ಹಿರೇಮಠ ಅವರು ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದಾಗ ಅದನ್ನು ವಿರೋಧಿಸುವಲ್ಲಿ ದೊಡ್ಡ ಪ್ರತಿಭಟನೆಯ ರೂಪವನ್ನು ತಾಳಿತ್ತು. ಡಾ.ಆರ್.ಸಿ.ಹಿರೇಮಠರು ಶುದ್ಧ ಸಾಹಿತಿಗಳಲ್ಲ, ಅವರು ಸಂಶೋಧಕರು. ಉತ್ತರ ಕರ್ನಾಟಕದವರನ್ನು ತೃಪ್ತಿಪಡಿಸಲು ಅವರನ್ನು ಆಯ್ಕೆ ಮಾಡಲಾಗಿದೆ. ಅವರಿಗಿಂತ ಕೆ.ಎಸ್.ನರಸಿಂಹಸ್ವಾಮಿ ಶ್ರೇಷ್ಠರು. ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದು ಸೂಕ್ತ ಎಂದು ಬೆಂಗಳೂರಿನ ಸುಮಾರು ಅರುವತ್ಮೂರು ಸಾಹಿತಿಗಳು ಸಾಹಿತ್ಯ ಪರಿಷತ್ತಿಗೆ ಪತ್ರ ಬರೆದಿದ್ದರು. ಆ ಪತ್ರಕ್ಕೆ ಮನ್ನಣೆ ಸಿಗುವುದಿಲ್ಲ. ಹೀಗಾಗಿ ಹುಬ್ಬಳ್ಳಿಯ ಸಮ್ಮೇಲನದ ದಿನವೇ ಬೆಂಗಳೂರಿನಲ್ಲಿ ಪರ್ಯಾಯ ಸಮ್ಮೇಳನ ನಡೆಸುವುದಾಗಿ ಅರುವತ್ಮೂರು ಸಾಹಿತಿಗಳು ಪ್ರಕಟಿಸುವರು. ಇದರಲ್ಲಿ ನವ್ಯದ ಪ್ರಮುಖರಾದ ಅಡಿಗ, ಬಿ.ಸಿ.ರಾಮಚಂದ್ರ ಶರ್ಮ, ಸುಮತೀಂದ್ರ ನಾಡಿಗ, ಲಂಕೇಶ, ಶೂದ್ರ ಶ್ರೀನಿವಾಸ, ಡಿ.ಆರ್.ನಾಗರಾಜ ಮೊದಲಾದವರೆಲ್ಲ ಸೇರಿದ್ದರು. ಈ ಸಂದರ್ಭದಲ್ಲಿ ಅವರು ಹೊರಡಿಸಿದ ಸುತ್ತೋಲೆಯ ಕೆಲವು ಸಾಲುಗಳನ್ನು ಗಮನಿಸುವುದು ಸೂಕ್ತ.

೧೧.ಸಂಕ್ರಮಣ- ೨೯೧-೨೯೨- ಸಂಪುಟ ೩೧, ಸಂಚಿಕೆ ೧೧-೧೨.

"ಸಾಹಿತ್ಯ ಸಂಸ್ಕೃತಿಯೊಂದರಲ್ಲಿ ಎಷ್ಟೇ ಸೈದ್ಧಾಂತಿಕ ಚಳುವಳಿಗಳಿದ್ದರೂ, ವಾದ-ವಿವಾದಗಳಿದ್ದರೂ ಅಂತಿಮವಾಗಿ ಅವೆಲ್ಲಕ್ಕೂ ಸಾಹಿತ್ಯದಲ್ಲಿನ ಉತ್ಕೃಷ್ಟತೆಯ ಬಗೆಗೆ ಗೌರವ, ಒಪ್ಪಿಗೆಗಳಿರಬೇಕು. ಏಕೆಂದರೆ ಸಾಹಿತ್ಯ ಪರಿಸರ ಮೂಲಭೂತವಾಗಿ ಪ್ರತಿಭೆಯ ಬಗೆಗೆ ಸಮಾನ ಹುಡುಕಾಟಗಳಿಂದ ನಿರ್ಮಾಣ ಆಗುವಂಥದ್ದು. ಆದರೆ ಈಗ ಸಾಹಿತ್ಯದಲ್ಲಿ ಈ ಸಮಾನ ಹುಡುಕಾಟಗಳು ಮತ್ತು ಸಾರ್ವತ್ರಿಕ ಉತ್ಕೃಷ್ಟತೆಯ ಬಗೆಗೆ ಮನ್ನಣೆ ಮಾಯವಾಗಿದೆ. ಕನ್ನಡ ಸಂಸ್ಕೃತಿಯ ಮುಖ್ಯ ಶತ್ರು ಈ ಸಾಹಿತ್ಯಕ ಪುಢಾರಿತನ ಎಂಬಂತಾಗಿದೆ. ಇಂಥ ಒಂದು ರೋಗಗ್ರಸ್ತ ಪರಿಸ್ಥಿತಿಯನ್ನು ತಪ್ಪಿಸಲು ಎಷ್ಟೇ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಸಾಹಿತ್ಯದ ಬಗೆಗೆ ಗಂಭೀರ ಕಾಳಜಿ ಇರುವ ಎಲ್ಲ ಲೇಖಕ, ಲೇಖಕಿಯರೂ ಒಂದಾಗಬೇಕಿದೆ. ಅನೇಕ ಬಗೆಯ ಪುಢಾರಿತನಗಳಿಂದಾಗಿ ಕೆಟ್ಟು ಹಾಳಾಗಿರುವ ನಮ್ಮ ಪ್ರತಿಷ್ಠಿತ ಸಾಹಿತ್ಯ ಸಂಸ್ಥೆಗಳನ್ನು ಸರಿದಾರಿಯತ್ತ ತಿರುಗಿಸಬೇಕಾಗಿದೆ. ಪ್ರತಿಷ್ಠಿತ ಸಾಹಿತ್ಯ ಸಂಸ್ಥೆಗಳ ಪ್ರಶಸ್ತಿ ಮುಂತಾದವು ತಮ್ಮ ಬೆಲೆಯನ್ನು ಕಳೆದುಕೊಂಡಿದ್ದು ಸಾಹಿತ್ಯಕ ಮಾನದಂಡಗಳು ಕಂಗೆಟ್ಟಿರುವ ದುಸ್ಥಿತಿ ಈಗ ಬಂದಿದೆ.

ಸಾಹಿತ್ಯಕ ಘನತೆಗಾಗಿ ಸಾಹಿತಿಗಳು ಒಗ್ಗೂಡಬೇಕಾಗಿ ಬಂದಿರುವ ತಕ್ಷಣದ ಒಂದು ಕಾರಣವೆಂದರೆ- ಈ ಬಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ನಡೆದಿದೆ. ಪ್ರತಿಭೆ ಮತ್ತು ಸಾಹಿತ್ಯಕ ಸಾಧನೆಗಳು ಮಾತ್ರ ಈ ಸ್ಥಾನದ ಆಯ್ಕೆಗೆ ಮಾನದಂಡವಾಗಿರಬೇಕು." ಇದನ್ನು ಚಂದ್ರಶೇಖರ ಪಾಟೀಲರು ರಾಜಧಾನಿ ಸಾಹಿತಿಗಳ ಸಾಂಸ್ಕೃತಿಕ ಪಾಳೇಗಾರಿಕೆ ಎಂದು ಪತ್ರಿಕಾ ಹೇಳಿಕೆಯೊಂದರಲ್ಲಿ ಖಂಡಿಸಿದ್ದರು. ಆರ್.ಸಿ.ಹಿರೇಮಠ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಶೂದ್ರ ಶ್ರೀನಿವಾಸ 'ಇನ್ನು ಮೇಲೆ ಅಬಕಾರಿ ಕಂಟ್ರಾಕ್ಟರರು, ಗುತ್ತೇದಾರರು ಕೂಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಬಹುದು!' ಎಂದು ಹೇಳಿದ್ದನ್ನು ಚಂದ್ರಶೇಖರ ಪಾಟೀಲರು, 'ಇದು ಸಂಸ್ಕೃತಿಯ ಬಗ್ಗೆ ಮಾತನಾಡುವ ಎಲ್ಲರೂ ತಲೆ ತಗ್ಗಿಸುವಂತೆ ಮಾಡುವ ಕ್ಷುಲ್ಲಕತನ' ಎಂದು ಖಂಡಿಸಿರುವರು.[೧೨]

ಸಾಹಿತ್ಯದ ಪರಿಸರದಲ್ಲಿ ಶ್ರೇಷ್ಠತೆಯೇ ಮುಖ್ಯ ಎಂಬ ಧ್ಯೇಯ ವಾಕ್ಯದ ಈ ಹೇಳಿಕೆಯ ಬಗ್ಗೆ ಚಂದ್ರಶೇಖರ ಪಾಟೀಲರು ಕಟುವಾದ ಟೀಕೆಯನ್ನು ಮಾಡಿ ಬೆಂಗಳೂರಿನ ಸಮ್ಮೇಳನಕಾರರಿಗೆ ಪತ್ರವೊಂದನ್ನು ಬರೆದಿದ್ದರು. ಬೆಂಗಳೂರಿನ ಸಾಹಿತಿಗಳ ಹೇಳಿಕೆಗೆ ಅಡಿಗರೂ ಸಹಿ ಮಾಡಿದ್ದರು ಎನ್ನುವುದು ಮುಖ್ಯ. ಬೆಂಗಳೂರಿನ ಸಮ್ಮೇಳನದ ಹಿಂದಿನ ಮೆದುಳು ಅಡಿಗ ಮತ್ತು ಕಂಪನಿ ಎಂದೇ ಅವರ ಆರೋಪ. ೧೯೭೯ರ ಧರ್ಮಸ್ಥಳ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದವರು ಅಡಿಗರು. ಆನಂತರದ ಸಾಮಾಜಿಕ-ಸಾಂಸ್ಕೃತಿಕ ಬೆಳವಣಿಗೆಗಳಲ್ಲಿ ಚಲಾವಣೆ ಕಳೆದುಕೊಂಡಿದ್ದ ಅಡಿಗ ಮತ್ತು ಅವರ ವಟು ವೃಂದಕ್ಕೆ

೧೨.ಸಂಕ್ರಮಣ- ೨೧೦-೨೧೧-೨೧೨- ಸಂಪುಟ ೨೫, ಸಂಚಿಕೆ ೨-೩-೪.

ಬೆಂಗಳೂರು ಸಮಾವೇಶ ಒಂದು ಅನಿರೀಕ್ಷಿತ ಭೂರಿಭೋಜನದ ಆಹ್ವಾನವಾಗಿತ್ತು ಎಂದು ಚಂದ್ರಶೇಖರ ಪಾಟೀಲರ ಸಂಕ್ರಮಣದಲ್ಲಿ ಬರೆದಿದ್ದಾರೆ. ಇಲ್ಲಿಯೂ ಈ ಬ್ರಾಹ್ಮಣರಿಂದಾಗಿಯೇ ಶ್ರೇಷ್ಠತೆಯ ವಿವಾದ ಹುಟ್ಟಿಕೊಂಡಿದ್ದು ಎಂಬುದು ಪಾಟೀಲರ ಅಭಿಪ್ರಾಯ.

ಹುಬ್ಬಳ್ಳಿ ಸಮ್ಮೇಳದ ಆರಂಭದಲ್ಲಿ ಡಾ.ಸಿದ್ದಯ್ಯ ಪುರಾಣಿಕರು ಎರಡೂ ಸಮ್ಮೇಳಗಳಿಗೆ ಶುಭ ಹಾರೈಸಿ, ಕೆಎಸ್‌ನ ಅವರ ಹೆಸರು ಮುಂದೆ ಮಾಡಿ, ನಂತರ ಅವರನ್ನು ಹಿಂದೆಯೇ ಸರಿಸಿದವರನ್ನು ಛೇಡಿಸುತ್ತ ಬಸವಣ್ಣನವರ ವಚನವೊಂದನ್ನು (ಏನಯ್ಯ ವಿಪ್ರರು ನುಡಿದಂತೆ ನಡೆಯರು, ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ) ಹೇಳಿದ್ದು ಅಡಿಗ ಮತ್ತು ಅವರ ಗುಂಪನ್ನು ಕುರಿತೇ ಎನ್ನುವುದರಲ್ಲಿ ಯಾರಿಗೂ ಅನುಮಾನ ಉಳಿದಿರಲಿಲ್ಲ.

ಈ ಸಂದರ್ಭದಲ್ಲಿ ಕೆ.ವಿ.ಸುಬ್ಬಣ್ಣನವರ ಲೇಖನವೊಂದನ್ನು ಸಂಕ್ರಮಣ ಪ್ರಕಟಿಸಿದೆ. ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ನಿರ್ಣಯ ಸ್ವೀಕರಿಸಲು ಸಾಧ್ಯವಾಗದೆ ಹೋದದ್ದು, ಸಾಹಿತ್ಯ ಸಮ್ಮೇಳನಗಳಿಗೆ ರಾಜಕಾರಣಿಗಳನ್ನು ಕರೆಯಬಾರದೆಂಬ ಮಡಿವಂತಿಕೆ, ಸರಕಾರದ ಹಣವನ್ನು ಮುಟ್ಟಬಾರದು ಎಂಬ ಮನೋಭಾವ, ಸಾಹಿತ್ಯದಲ್ಲಿ ಶುದ್ಧ, ಸ್ವಚ್ಛ ಪದಗಳೇ ಬಳಕೆಯಾಗಬೇಕು ಎಂಬ ಭಾವನೆ, ಶ್ರೇಷ್ಠತೆಯ ಹಿನ್ನೆಲೆಯಲ್ಲಿ ಸಾಹಿತ್ಯ ವಿಮರ್ಶಕರ ಮನೋಭಾವ ಎಲ್ಲವನ್ನೂ ಸುಬ್ಬಣ್ಣ ತೀಕ್ಷ್ಣ ವಿಮರ್ಶೆಗೊಳಪಡಿಸಿದ್ದಾರೆ.[೧೩] ಇದು ಮುಂದೆ ಈ ಮಾರ್ಗದಲ್ಲಿ ಚಿಂತಿಸಿ ಹಲವರು ಲೇಖನ ಬರೆಯುವುದಕ್ಕೆ ಕಾರಣವಾಗುತ್ತದೆ. ಶ್ರೇಷ್ಠತೆಯನ್ನು ಸಾಹಿತ್ಯದಲ್ಲಿ ಗುರುತಿಸಿ ಗೌರವಿಸಬೇಕೆಂಬ ಅಡಿಗರ ಅಭಿಪ್ರಾಯಕ್ಕೆ ಸರಿ ವಿರುದ್ಧ ಅಭಿಪ್ರಾಯ ಸುಬ್ಬಣ್ಣನವರದು. ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಬಯಸುವ ಮನಸ್ಸು ಸಮಾಜದ ಇತರೆಡೆಯೂ ಶ್ರೇಷ್ಠತೆಯನ್ನು ಬಯಸಬೇಕು ಎಂದು ಅವರು ಹೇಳಿದ್ದಾರೆ. ಶ್ರೇಷ್ಠತೆ ಆದರ್ಶವಾಗಿ ಇದ್ದರೆ ಸರಿ. ಅದೇ ವ್ಯಸನವಾದರೆ ಕಷ್ಟ. ಶ್ರೇಷ್ಠತೆಯನ್ನು ಸಾಧಿಸಿಕೊಂಡ ವ್ಯಕ್ತಿ ಸಮಾಜವನ್ನು ಕೂಡ ತನ್ನ ಕಡೆ ಮೇಲೆತ್ತಿಕೊಳ್ಳಬೇಕು ಎಂದು ಹೇಳಿದ್ದಾರೆ. ಸಾಹಿತ್ಯ ಸಮ್ಮೇಳನಗಳಿಗೆ ರಾಜಕಾರಣಿಗಳನ್ನು ಏಕೆ ಕರೆಯಿಸಬೇಕು ಎಂಬ ಬಗೆಗಿನ ಅವರ ವಿಚಾರ ಮುಂದೆ 'ಸಾಹಿತ್ಯ ಮತ್ತು ರಾಜಕಾರಣ' ವಿಷಯವಾಗಿ ಚರ್ಚೆಯನ್ನು ಬೆಳೆಸುತ್ತದೆ. 'ಗಾಂಧಿ ಬಜಾರ್' ಪತ್ರಿಕೆಯಲ್ಲಿ ಪುರುಷೋತ್ತಮ ಬಿಳಿಮಲೆಯವರು 'ಸಾಹಿತ್ಯ ಮತ್ತು ರಾಜಕಾರಣ: ಒಂದು ಟಿಪ್ಪಣಿ' ಎಂಬ ಲೇಖನ ಬರೆಯುವುದಕ್ಕೆ ಕಾರಣವಾಗುತ್ತದೆ.[೧೪] 'ಶೂದ್ರ'ದಲ್ಲಿ ಪಿ.ವಿ.ಸುಬ್ಬರಾಯ 'ಸಾಹಿತ್ಯ ಮತ್ತು

---

೧೩. ವಿವರಗಳಿಗೆ ನೋಡಿ-ಕೆ.ವಿ.ಸುಬ್ಬಣ್ಣ- ಶ್ರೇಷ್ಠತೆಯ ವ್ಯಸನ, ಸಂಕ್ರಮಣ ೨೧೦, ೨೧೧, ೨೧೨ ಸಂಪುಟ ೨೫, ಸಂಚಿಕೆ ೨,೩,೪.

೧೪.ಗಾಂಧಿ ಬಜಾರ್, ಸಂಪುಟ ೧೦, ಸಂಚಿಕೆ ೩, ಮಾರ್ಚ್ ೧೯೯೭.

ರಾಜಕೀಯ' ಎಂಬ ಲೇಖನವನ್ನು ಬರೆದರು.[೧೫] 'ಸಂಕ್ರಮಣ'ದಲ್ಲಿ ಕೇಶವಶರ್ಮ ಕೆ. 'ಸಾಹಿತ್ಯ ವಿಮರ್ಶೆ ಮತ್ತು ರಾಜಕಾರಣ' ಎಂಬ ಲೇಖನವನ್ನು ಬರೆದರು.[೧೬] ಹಿ.ಶಿ.ರಾಮಚಂದ್ರೇಗೌಡ ಸಂಕ್ರಮಣದಲ್ಲಿ 'ಶ್ರೇಷ್ಠತೆ ಮತ್ತು ಸಮಾನ ಭಾಗವಹಿಸುವಿಕೆ' ಎಂಬ ಲೇಖನ ಬರೆದರು. [೧೭]

ಶ್ರೇಷ್ಠತೆಯ ವಿಷಯದಲ್ಲಿ ಹಿ.ಶಿ. ರಾಮಚಂದ್ರೇಗೌಡರು ಆಡುವ ಮಾತುಗಳು ಸಾಹಿತ್ಯ ಕೃತಿಯನ್ನು ಸಮಾಜ ಶಾಸ್ತ್ರೀಯ ನೆಲೆಯಲ್ಲಿ, ಮಾರ್ಕ್ಸ್‌ವಾದಿ ಚಿಂತನೆಯ ಹಿನ್ನೆಲೆಯಲ್ಲಿ ವಿಮರ್ಶಿಸುವುದಕ್ಕೆ ಸಾಮಗ್ರಿಯನ್ನು ಒದಗಿಸುತ್ತದೆ. ಭೋಗ ಸಂಸ್ಕೃತಿಯ ಅವರ ವಿವರಣೆಯ ಹಿನ್ನೆಲೆಯಲ್ಲಿ ಅನಂತಮೂರ್ತಿ, ಭೈರಪ್ಪ ಮೊದಲಾದವರ ಕೃತಿಗಳನ್ನು ವಿಮರ್ಶಿಸಲಾಗಿದೆ. ಪ್ರತಿಭೆಯ ವಿಷಯದಲ್ಲಿ ರಾಮಚಂದ್ರೇಗೌಡರು ಆಡುವ ಮಾತುಗಳು ಸುಬ್ಬಣ್ಣನವರ ಮಾತುಗಳ ಮುಂದುವರಿಕೆ ಎನ್ನಿಸುತ್ತದೆ. 'ದೈಹಿಕ ಮತ್ತು ಮಾನಸಿಕ ದುಡಿಮೆ ಮತ್ತು ಆದರ ಉನ್ನತ ಸೃಷ್ಟಿಯೆಲ್ಲ ಪ್ರತಿಭೆಯೇ' ಎಂಬ ಗೌಡರ ಮಾತು ಹೊಸ ಚಿಂತನೆಯ ಫಲವಾಗಿದೆ. ನವ್ಯದ ಆರಂಭದ ಕಾಲದಲ್ಲಿ ಅಡಿಗರು ಬರೆದ ಮಾತುಗಳು ಸಾಹಿತ್ಯಕ ವಲಯದಲ್ಲಿ ಈ ರೀತಿಯ ಪ್ರತಿಕ್ರಿಯೆಯನ್ನು ಎಬ್ಬಿಸಿ ನವ್ಯೋತ್ತರ ವಿಮರ್ಶೆಯನ್ನು ಬೆಳೆಸಿತು.

ಶ್ರೇಷ್ಠತೆಯ ಇನ್ನೊಂದು ರೂಪ ವ್ಯಕ್ತಿಕೇಂದ್ರಿತ ವಿಮರ್ಶೆಯ ಅಪಾಯದ ಕಡೆಗೆ ಕೆ.ವಿ.ತಿರುಮಲೇಶ ನಮ್ಮ ಗಮನ ಸೆಳೆದಿದ್ದಾರೆ.[೧೮] ಈಚೆಗೆ ಕನ್ನಡದಲ್ಲಿ ವ್ಯಕ್ತಿಕೇಂದ್ರಿತವಾದ ವಿಮರ್ಶಾ ಪದ್ಧತಿಯೊಂದು ಅದು ಹೊರಟು ಹೋಯಿತು ಎಂಬ ಹೊತ್ತಿಗೆ ಮತ್ತೆ ತಲೆ ಎತ್ತಿಕೊಂಡಿರುವುದು ಕಾಣಿಸುತ್ತದೆ ಎನ್ನುವ ತಿರುಮಲೇಶ, ಇದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಲ್ಕೇ ಮಂದಿ ಲೇಖಕರು, ಕಾವ್ಯದಲ್ಲಿ ಮೂರೇ ಮಂದಿ ಕವಿಗಳು, ವಿಮರ್ಶೆಯಲ್ಲಿ ಇಬ್ಬರು ಎಂಬಿತ್ಯಾದಿಯಾಗಿ ಗಣ್ಯರನ್ನು ಹೆಕ್ಕಿ ತೆಗೆದು ಅವರಿಗೆ ಮಣೆ ಹಾಕುವ ಯಜಮಾನ ಸಂಸ್ಕೃತಿಯ ಅವಶೇಷವೆನ್ನುವುದರಲ್ಲಿ ಸಂದೇಹವಿಲ್ಲ. ಇದರಿಂದ ಈ 'ಗಣ್ಯರ' ಸಾಲಿಗೆ ಸೇರಿಸಲ್ಪಡದವರು ಬರೆದ ಹಲವು ಒಳ್ಳೆ ಕೃತಿಗಳನ್ನು ಜನ ಗಮನಿಸದಿರುವ ಸಾಧ್ಯತೆಯಿದೆಯೆನ್ನುವುದು ಆತಂಕದ ವಿಷಯವಾಗುತ್ತದೆ ಎಂದು ಹೇಳಿದ್ದಾರೆ.

ನವ್ಯೋತ್ತರದ ಸಂದರ್ಭದಲ್ಲಿ ಹುಟ್ಟಿನಿಂದ ಶ್ರೇಷ್ಠತೆ ಎಂಬ ವಾದದ ತಿರಸ್ಕಾರ ಹಲವು ನೆಲೆಗಳಲ್ಲಿ ನಡೆದಿದೆ. ಶ್ರೇಷ್ಠತೆಯನ್ನು ಗುರುತಿಸುವುದು ಹೇಗೆ? ಶ್ರೇಷ್ಠತೆಯ

೧೫.ಶೂದ್ರ, ಸಂಪುಟ ೨೩, ಸಂಚಿಕೆ ೧೦-೧೧, ಎಪ್ರಿಲ್- ಮೇ ೯೬.

೧೬. ಸಂಕ್ರಮಣ ೩೨೩, ಸಂಪುಟ ೩೪, ಸಂಚಿಕೆ ೨೭, ಜುಲೈ ೧೯೯೯

೧೭. ಹಿ.ಶಿ.ರಾಮಚಂದ್ರೇಗೌಡ: ಶ್ರೇಷ್ಠತೆ ಮತ್ತು ಸಮಾನ ಭಾಗವಹಿಸುವಿಕೆ, ಸಂಕ್ರಮಣ ೨೮೧; ಸಂಪುಟ ೩೧ ಸಂಚಿಕೆ ೧, ಜನವರಿ ೧೯೯೬.

೧೮.ಕೆ.ವಿ.ತಿರುಮಲೇಶ- ಕೆ.ನ.ಶಿವತೀರ್ಥನ್ ಅವರ 'ಗೆಂಡಗಯ್ಯ'- ಇತಿಹಾಸ ಮತ್ತು ಐತಿಹ್ಯಗಳ ನಡುವೆ- ಸಂಕ್ರಮಣ- ೩೧೮-೩೧೯, ಸಂಪುಟ ೩೪, ಸಂಚಿಕೆ ೨, ೩, ಫೆ-ಮಾ. ೧೯೯೯

ಮಾನದಂಡಗಳಾವವು? ಶ್ರೇಷ್ಠತೆಯನ್ನು ಪಡೆದುಕೊಳ್ಳುವುದು ಹೇಗೆ? ಶ್ರೇಷ್ಠತೆಯ ಕನಸು ಒಂದು ವ್ಯಸನವಾಗಲಾರದೆ? ಇತ್ಯಾದಿ ಪ್ರಶ್ನೆಗಳು ಶ್ರೇಷ್ಠತೆಯ ಚರ್ಚೆಯ ಸಂದರ್ಭದಲ್ಲಿ ಮೂಡುತ್ತದೆ. ಶ್ರೇಷ್ಠತೆಯ ತಿರಸ್ಕಾರ ಎಂದರೆ ಅದು ಬೇಡವೇಬೇಡ ಎಂದರ್ಥವಲ್ಲ. ನವ್ಯರು ಹೇಳುವ ಶ್ರೇಷ್ಠತೆಯ ಬಗೆಗೆ ಮಾತ್ರ ಅಲ್ಲಿ ತಿರಸ್ಕಾರ ವ್ಯಕ್ತವಾಗಿದೆ. ಶ್ರೇಷ್ಠತೆಯು ಬೇಕೆ? ಎಂಬ ಪ್ರಶ್ನೆ ಮುಂದಿಟ್ಟಾಗ; ೧)ಶ್ರೇಷ್ಠತೆ ಸಹಜ ಗುಣವಾಗಿ ವಿಕಾಸಗೊಂಡಾಗ ಅದು ಬೇಕು ಎನ್ನಿಸುತ್ತದೆ. ೨)ಶ್ರೇಷ್ಠತೆ ಅಪೇಕ್ಷಣೀಯ, ಗೌರವಾರ್ಹವಾದದ್ದು ಎಂದು ಒಪ್ಪಿಕೊಂಡು ಅದನ್ನು ಸಾಧಿಸಲು ಹೊರಟಾಗ ಶ್ರೇಷ್ಠತೆ ಒಂದು ವ್ಯಸನವಾಗಿಬಿಡುತ್ತದೆ. ಈ ಬಯಸಿ ಸಾಧಿಸುವ ನವ್ಯರ ಶ್ರೇಷ್ಠತೆಯನ್ನೇ ನವ್ಯೋತ್ತರರು ತಿರಸ್ಕರಿಸುವುದು. ಶ್ರೇಷ್ಠತೆ ಅಪೇಕ್ಷಣೀಯವಾದಾಗ ಅದನ್ನು ಸಾಧಿಸಲು ಹಲವು ಬಗೆಯ ವೇಷಗಳನ್ನು ಧರಿಸುವ ಚಪಲಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಸಾಧಿಸುವ ಛಲ, ಹಠಗಳು 'ಘೋಷಣೆ' ಗಳಾಗುತ್ತವೆ. ಈ ಶ್ರೇಷ್ಠತೆಯ ಪರಿಕಲ್ಪನೆ ಸಾಹಿತ್ಯದಲ್ಲೂ ಮುಖ್ಯವಾದಾಗ ಕಳಪೆ ಸಾಹಿತ್ಯವನ್ನೇ ಪ್ರಕಟಿಸಿ, ಸಂಭ್ರಮಿಸಿ 'ಘೋಷಣೆ'ಯ ಸೆರಗಿನಲ್ಲಿ ರಕ್ಷಣೆ ಪಡೆಯುವ ಸಾಹಿತಿಗಳು ಹುಟ್ಟಿಕೊಳ್ಳುತ್ತಾರೆ.

ಒಬ್ಬರಿಂದ ಇನ್ನೊಬ್ಬರು ಶ್ರೇಷ್ಠ ಎಂದು ಭಾವಿಸುತ್ತ ಹೋಗುವುದು ವ್ಯಕ್ತಿ ವೈಶಿಷ್ಟ್ಯತೆಯನ್ನೇ ತಿರಸ್ಕರಿಸಿದಂತೆ ಎಂಬುದು ನವ್ಯೋತ್ತರದವರ ಚಿಂತನೆ. ವ್ಯಕ್ತಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಆತ ಸಮಾಜದ ಒಂದು ಅಂಗ. ವ್ಯಕ್ತಿವ್ಯಕ್ತಿಗಳಲ್ಲಿಯ ವೈಶಿಷ್ಟ್ಯವು ಸಮಾಜದಲ್ಲಿ ಸಮಷ್ಟಿರೂಪವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಸಮಾಜ ಎನ್ನುವುದು ವ್ಯಕ್ತಿ ವೈಶಿಷ್ಟ್ಯಗಳ ಒಂದು ಮೊತ್ತವಾಗಿದೆ; ಸಮಷ್ಟಿ ರೂಪವಾಗಿರುತ್ತದೆ. ವ್ಯಕ್ತಿ - ಸಮಷ್ಟಿ ಒಂದು ದ್ವಂದ್ವ ಸತ್ಯವಾಗಿರುವ ಹಾಗೆ ಶ್ರೇಷ್ಠತೆ - ಸಮಾನತೆಗಳೂ ಒಂದು ಯುಗಳ ಸತ್ಯವಾಗಿರುತ್ತದೆ. ಇಂಥ ಸತ್ಯಗಳ ಗ್ರಹಣ- ಧಾರಣ ಒಟ್ಟೊಟ್ಟಿಗೆ ನಡೆಯಬೇಕು. ಇವುಗಳಲ್ಲಿ ಯಾವುದಾದರೂ ಒಂದರ ಸ್ವೀಕಾರ ಎನ್ನುವುದು ಸಮಾಜದ ಸಮತೋಲನವನ್ನು ಕೆಡಿಸಿಬಿಡುತ್ತದೆ.

ನವ್ಯದವರು ವ್ಯಕ್ತಿ- ಸಮಷ್ಟಿಗಳಲ್ಲಿ ವ್ಯಕ್ತಿಯನ್ನು ಮಾತ್ರ ಗಣಿಸುವುದರಿಂದ ಶ್ರೇಷ್ಠತೆಯನ್ನು ಮಾತ್ರ ಹಾರೈಸುವುದು ಅವರಿಗೆ ಸಾಧ್ಯವಾಯಿತು. ಸಮಾನತೆ ದೂರವುಳಿಯಿತು. ನವ್ಯೋತ್ತರದವರು ಸಾಮಾಜಿಕ ನೆಲೆಯಲ್ಲಿ ಸಾಹಿತ್ಯವನ್ನು ಪರಿಭಾವಿಸುವವರು. ಇದರಿಂದಾಗಿ ಸಮಾನತೆಯನ್ನು ಸಾಧಿಸುವುದು ಅವರ ಗುರಿಯಾಗುತ್ತದೆ. ಸಮಾನತೆ ಇಲ್ಲದಿದ್ದಲ್ಲಿ ಅವರು ಅದಕ್ಕಾಗಿ ಬಂಡಾಯವೇಳುತ್ತಾರೆ.

ಒಬ್ಬೊಬ್ಬ ವ್ಯಕ್ತಿಯಲ್ಲಿ ಆತನಿಗೇ ವಿಶಿಷ್ಟವಾದ ವೈಶಿಷ್ಟ್ಯವಿರುತ್ತದೆ. ಅದು ಸಹಜವಾಗಿ ಬಂದದ್ದು. ಕೆಲವೊಮ್ಮೆ ಸಾಧಿಸಿಕೊಂಡದ್ದು. ಸಾಧಿಸಿಕೊಳ್ಳಲು ಕಾರಣ ಪ್ರತಿಯೊಬ್ಬನಲ್ಲೂ ಇರುವ ಆಂತರಿಕ ತುಡಿತ. ಹೀಗೆ ತನ್ನಲ್ಲಿರುವ ವಿಶಿಷ್ಟತೆಯನ್ನು ಸಮಾಜಕ್ಕೆ ವ್ಯಕ್ತಿ ಹಂಚಬೇಕು.

ಇಲ್ಲದಿದ್ದರೆ ಆತನ ವಿಶಿಷ್ಟತೆ ಆತನೊಂದಿಗೇ ಅಂತ್ಯವಾಗಿಬಿಡುತ್ತದೆ. ಹೀಗೆ ಹಂಚುವಿಕೆಯಲ್ಲಿಯೇ ಸಮಾಜದ, ಸಂಸ್ಕೃತಿಯ ಚಲನೆ ಇರುತ್ತದೆ. ಈ ಹಂಚುವಿಕೆ ಸಾಧ್ಯವಾಗದಿದ್ದರೆ ವ್ಯಕ್ತಿ ಸಮಾಜದಿಂದ ಅನ್ಯವಾಗಿ ಹೋಗುತ್ತಾನೆ.

ಸಾಹಿತ್ಯದ ಪರಿಸರದಲ್ಲಿ ಶ್ರೇಷ್ಠತೆ ಮುಖ್ಯವೆನ್ನುವವರಿಗೆ ಸಾಹಿತ್ಯೇತರ ಪರಿಸರದಲ್ಲಿ ಶ್ರೇಷ್ಠತೆ ಮುಖ್ಯವಾಗುವುದಿಲ್ಲವೆ? ನಮ್ಮ ಪರಿಸರ ಶುದ್ಧವಾಗಿಲ್ಲದೆ ಕೇವಲ ಸಾಹಿತ್ಯ ಮಾತ್ರ ಶುದ್ಧವಾಗಿರಬೇಕು ಎಂದು ಬಯಸುವುದು ಕೇವಲ ಬೂಟಾಟಿಕೆಯೆನ್ನಿಸಿಬಿಡುತ್ತದೆ.

ಬಂಡಾಯದ ಸಂದರ್ಭದಲ್ಲಿ ಜೇಷ್ಠತೆ- ಕನಿಷ್ಠತೆಗಳು ಜಾತಿಯಾಧಾರಿತ ಚಿಂತನೆಗಳು ಎಂಬ ಅಭಿಪ್ರಾಯ ಮೂಡುತ್ತದೆ. ಯಾವ ಸಮಾಜದಲ್ಲಿ ಶ್ರೇಷ್ಠತೆಯ ಬಗ್ಗೆ ಬಹಳ ಚರ್ಚೆ ನಡೆಯುವುದೋ ಆ ಸಮಾಜದಲ್ಲಿ ಸಮಾನ ಭಾಗವಹಿಸುವಿಕೆ ಸಾಧ್ಯವಾಗಲಾರದು . ಶ್ರೇಷ್ಠತೆ ಜೇಷ್ಠತೆಗಳು ಸಮಾಜವನ್ನು ಕಾಡುವ ಹಿಂಸೆಗಳು. ಒಂದು ಸಮಾಜದಲ್ಲಿ ಅಥವಾ ಸಮಾಜದ ಘಟಕವಾದ ವ್ಯಕ್ತಿಯಲ್ಲಿ ಚಲನೆ ಇದೆ ಎಂದಾದರೆ ಅದು ಸಂಸ್ಕೃತಿಗೆ ಸಂಬಂಧಿಸಿದ ವಿಷಯವಾಗಿರುತ್ತದೆ.

ಇಲ್ಲಿ ಸಂಸ್ಕೃತಿಯನ್ನು ಎರಡು ನೆಲೆಯಲ್ಲಿ ಪರಿಭಾವಿಸಲಾಗುವುದು. ಒಂದು: ಜೀವನ ಸಂಸ್ಕೃತಿ, ಇನ್ನೊಂದು: ಭೋಗ ಸಂಸ್ಕೃತಿ. ಜೀವನ ಸಂಸ್ಕೃತಿಯಲ್ಲಿ ಶ್ರೇಷ್ಠತೆ ಎನ್ನುವುದು ಆ ಜನದ ಕಾಲದ ಶೋಧನೆಯಾಗಿರುತ್ತದೆ. ಜೀವನ ಸಂಸ್ಕೃತಿಯ ಮೌಲ್ಯ ಹಾಗೂ ಶ್ರೇಷ್ಠತೆ ಕಾಲ - ಜನ ಸಂಬಂಧಿಯಾಗಿ ಬದಲಾಗುತ್ತಿರುತ್ತದೆ. ಅಜ್ಜ ನೆಟ್ಟ ಆಲದ ಮರವೆಂದು ಅದ್ಕಕೇ ನೇತು ಬೀಳುವ ಪ್ರಮೇಯ ಇಲ್ಲಿ ಇಲ್ಲ. ನಿರಂತರ ಪರಿಷ್ಕಾರ, ನಿರಂತರ ಬದಲಾವಣೆಗಳು ಇಲ್ಲಿ ನಡೆಯುತ್ತಿರುತ್ತವೆ. ಆದರೆ ಭೋಗ ಸಂಸ್ಕೃತಿಯಲ್ಲಿ ಹಾಗಲ್ಲ- ಯಾವುದೋ ಒಂದು ಕಾಲದಲ್ಲಿ ಇದು ಹೀಗೇ ಸರಿ ಎದು ನಿಗದಿ ಮಾಡಿದ್ದನ್ನು ಪ್ರಶ್ನಿಸದೆ ಅನುಸರಿಸಬೇಕಾಗುತ್ತದೆ. ಜಾತಿ, ವರ್ಣ ಪದ್ಧತಿಗಳನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಈ ಭೋಗ ಸಂಸ್ಕೃತಿಯು ಸಂಗ್ರಹ ಮತ್ತು ಸಂರಕ್ಷಣ ತತ್ವವನ್ನು ಆಧಾರ ಮಾಡಿಕೊಂಡಿದೆ. ಭೋಗ ಸಂಸ್ಕೃತಿಯ ಜನ ಹುಟ್ಟುತ್ತಾರೆ, ಸಾಯುತ್ತಾರೆ; ಆದರೆ ಚಲಿಸುವುದಿಲ್ಲ. ಆದರೆ ಜೀವನ ಸಂಸ್ಕೃತಿಯಲ್ಲಿ ಜನ ಹುಟ್ಟುವುದು ಮತ್ತು ಸಾಯುವುದು ಚಲಿಸುವುದಕ್ಕಾಗಿ. ಆದ್ದರಿಂದ ಈ ಸಂಸ್ಕೃತಿಯ ಮೌಲ್ಯ ಮತ್ತು ಶ್ರೇಷ್ಠತೆಯು ಅದರ ಚಲನೆಯಲ್ಲಿದೆ. ಕಾರಣ ಜೀವನ ಸಂಸ್ಕೃತಿಯ ಜನ ಜಾತಿ, ವರ್ಣ, ಸಮಾಜಗಳ ಶ್ರೇಷ್ಠತೆಯನ್ನು ತಮ್ಮ ಶ್ರೇಷ್ಠತೆಗಳೆಂದು ಭಾವಿಸಬೇಕಾಗಿಲ್ಲ. ಇದು ಜಾತಿಯಾಧಾರಿತ ಶ್ರೇಷ್ಠತೆಯನ್ನು ಸಮರ್ಥಿಸುವವರಿಗೆ ಸವಾಲಾಗಿದೆ. ಜೀವನ ಸಂಸ್ಕೃತಿಯ ಮಹತ್ವ ಇರುವುದು ಪ್ರತಿಯೊಬ್ಬರ ಶ್ರಮ, ನೈಪುಣ್ಯವೂ (skill) ಪ್ರತಿಯೊಬ್ಬನ ಶ್ರಮ (labour) ಮತ್ತು ನೈಪುಣ್ಯಕ್ಕೆ ಸಮ ಮತ್ತು ಶ್ರೇಷ್ಠವಾಗಿರುತ್ತದೆ. ಇಂಥ ಪ್ರತಿಯೊಬ್ಬ ವ್ಯಕ್ತಿ ಸ್ವತಂತ್ರವಾಗಿ ತನಗೆ ತಾನೇ ಸಾಧಿಸಿದ ಅನುಭವ, ಸಾಧನೆ ಮತ್ತು ನೈಪುಣ್ಯವೇ ಶ್ರೇಷ್ಠತೆ. ಈ ನೈಪುಣ್ಯವೇ

ಪ್ರತಿಭೆ. ಈ ಪ್ರತಿಭೆಯೆನ್ನುವುದು ಕವಿ, ಕಲಾವಿದ, ವಿಜ್ಞಾನಿ, ವಿಚಾರವಾದಿ ಇವರಲ್ಲಿ ಬೇರೆಬೇರೆಯಾಗಿರುತ್ತದೆ. ಇಂಥ ಒಂದು ವಿಚಾರವೇ ಪೂರ್ಣಚಂದ್ರತೇಜಸ್ವಿಯವರ 'ಕಾರ್ವಾಲೋ' ಕಾದಂಬರಿಯ 'ಮಂದಣ್ಣ'ನ ಪಾತ್ರ ಸೃಷ್ಟಿಗೆ ಕಾರಣವಾಗಿದೆ. ಕರ್ವಾಲೋ ದೃಷ್ಟಿಯಲ್ಲಿ ನಿಸರ್ಗದ ಅನೇಕ ರಹಸ್ಯಗಳನ್ನು ಕರಗತ ಮಾಡಿಕೊಂಡ ಮಂದಣ್ಣ ಒಬ್ಬ ಸಹಜ ವಿಜ್ಞಾನಿ. ಸಮಾಜದ ಕನಿಷ್ಠತಮ ಘಟಕದಲ್ಲಿಯೂ ಇಂಥ ಶ್ರೇಷ್ಠತೆ ಇರಬಹುದಾಗಿದೆ. ಶ್ರೇಷ್ಠತೆಯನ್ನು ಕಲ್ಪಿಸಿಕೊಳ್ಳುವುದೂ ಅಲ್ಲ; ಒಂದು ಸಂಯೋಜಿತ ತಂತ್ರ ಅಥವಾ ಸಂಚು ಅಲ್ಲ; ಯಾರ ದೇಣಿಗೆಯೂ ಅಲ್ಲ. ಜನಗಳ ಮಧ್ಯದಲ್ಲಿ ಉಳಿದು ಸಂಪಾದಿಸುವ ಅನುಭವದ ಒಟ್ಟೂ ಮೊತ್ತವಾಗಿರುತ್ತದೆ.

ಬಂಡವಾಳ ಅಥವಾ ಯಜಮಾನ ಸಂಸ್ಕೃತಿಯ ಒಂದು ಅಂಗ ಭೋಗ ಸಂಸ್ಕೃತಿ. ಇಲ್ಲಿ ಶ್ರೇಷ್ಠತೆಯೇ ಪ್ರತಿಭೆಯಾಗಿರುತ್ತದೆ. ಇದನ್ನು ಸಾಧಿಸುವುದು ಹೇಗೆಂದರೆ, ಅಧಿಕ ತೃಪ್ತಿ ನೀಡುವ ವಿಷಯಗಳನ್ನು ಕೆಲವರಷ್ಟೇ ಭೋಗಿಸುವ ಹಾಗೆ ಮಾಡಿ ಸಂರಕ್ಷಿಸಿ ಇಟ್ಟುಕೊಳ್ಳುವುದು. ಕೆಲವರಿಗೆ ಬೇಕಾದುದನ್ನು ಹಲವರಿಗೆ ದುರ್ಲಭ್ಯ ಮಾಡಿ ಅದೇನೋ ಮಹಾ ಅನ್ನುವಂತೆ ಮಾಡುವುದು. ವೇದಗಳನ್ನು ಶೂದ್ರರು ಓದಬಾರದು ಎಂಬ ಕಟ್ಟಳೆ ಇಂಥದ್ದು. ದೇವರು, ಧರ್ಮದ ಬಗೆಗಿನ ನಂಬಿಕೆ ಕಟ್ಟಳೆಗಳೂ ಇವುಗಳಲ್ಲಿ ಸೇರಬಹುದು. ಹಲವರನ್ನು ಕೆಲವರಿಂದ ಪ್ರತ್ಯೇಕಿಸುವ ಮೂಲಕ ಸಾಧಿಸುವ ಶ್ರೇಷ್ಠತೆಯು ಶುದ್ಧಾಂಗವಾಗಿ ಬುದ್ಧಿವಂತರ ಆರ್ಥಿಕ ಚಟುವಟಿಕೆಯಾಗಿರುತ್ತದೆ. ಈ ಭೋಗ ಸಂಸ್ಕೃತಿಯಲ್ಲಿ ಶೂದ್ರ ಹೆಂಗಸನ್ನು ಬ್ರಾಹ್ಮಣ ಯಾವ ನಿಯಮವೂ ಇಲ್ಲದೆ ಭೋಗಿಸಬಹುದು. ಆದರೆ ಬ್ರಾಹ್ಮಣ ಹೆಣ್ಣನ್ನು ಶೂದ್ರ, ಆಕೆ ತಾಯಿಗೆ ಸಮಾನ ಎಂಬ ನಂಬಿಕೆಯಿಂದ ದೂರ ಉಳಿಯಬೇಕು. ಇವೆಲ್ಲ ಸ್ವರಕ್ಷಣೆಗಾಗಿ ರೂಪಿಸಿಕೊಂಡ ಮೇಲ್ವರ್ಗದವರ ಕುತಂತ್ರವಲ್ಲದೆ ಮತ್ತೇನೂ ಅಲ್ಲ. ಈ ಭೋಗ ಸಂಸ್ಕೃತಿಯ ಲಕ್ಷಣಗಳನ್ನು ಅನಂತಮೂರ್ತಿ, ಭೈರಪ್ಪ ಮೊದಲಾದವರ ಕೃತಿಗಳಲ್ಲಿ ಈಗಾಗಲೇ ಗುರುತಿಸಲಾಗಿದೆ. ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಕೆಳ ಜಾತಿಯವರೆಂದು ಹೇಳಲಾಗುತ್ತಿರುವ ಸ್ತ್ರೀಯರು ಮೇಲ್ವರ್ಗದ ಗಂಡಸರ ಕಾಮದ ಬೊಂಬೆಗಳಾಗಿವೆ.

ಹೀಗೆ ವಿಚಾರಿಸಿದಾಗ ಭೋಗ ಸಂಸ್ಕೃತಿಯಲ್ಲಿ ಶ್ರೇಷ್ಠತೆ ಎನ್ನುವುದು ತಮಗಾಗಿ ಇಟ್ಟುಕೊಂಡ ಹೆಚ್ಚಿನ ಅನುಭೋಗ ಸಾಧ್ಯತೆ ಹಾಗೂ ಅನ್ಯರನ್ನು ಅದರಲ್ಲಿ ಭಾಗಿಯಾಗದಂತೆ ದೂರವಿಡುವಿಕೆ ಎಂದಂತಾಗುವುದು. ಈ ಸಂಸ್ಕೃತಿಯ ರಕ್ಷಣೆಗೆ ಒಳಗಾದವನಿಗೆ ಎಲ್ಲ ರೀತಿಯ ಉಪಭೋಗಗಳೂ ಲಭ್ಯ. ಅದರಿಂದ ಹೊರಗಿದ್ದವನಿಗೆ ಶೋಷಣೆ ಮಾತ್ರ. ಸ್ಪರ್ಶ- ಅಸ್ಪೃಶ್ಯತೆಯ ವರ್ಣಾಶ್ರಮ ಧರ್ಮದ ಬೀಜ ಇಲ್ಲಿಯೇ ಇದೆ. ಈ ಚಿಂತನೆಯಲ್ಲಿ ಮಾರ್ಕ್ಸ್‌ನ ಪ್ರಭಾವವನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿಯೇ ನವ್ಯೋತ್ತರ ಸಿದ್ಧಾಂತ ಪ್ರಗತಿಶೀಲದ ಮುಂದುವರಿಕೆ ಎಂಬ ಮಾತನ್ನು ಈ ಹಿಂದೆ ಹೇಳಿದ್ದು.

ಸಾಹಿತ್ಯದ ಸಂದರ್ಭದಲ್ಲಿ ಬಳಕೆಯಾಗುವ ಪ್ರತಿಭೆ ದೈವದತ್ತವಾದದ್ದು, ಒಂದು ಜಾತಿಗೆ ಸೀಮಿತವಾದದ್ದು, ಪ್ರತಿಭೆ ಪರಂಪರಾಗತವಾಗಿ ಬಳುವಳಿಯ ರೂಪದಲ್ಲಿ ಬರುವ ಇಡುಗಂಟು ಎಂಬ ಧೋರಣೆ ಯಜಮಾನ ಸಂಸ್ಕೃತಿಯಲ್ಲಿಯೇ ಮೈದಳೆಯುವಂಥದ್ದು. 'ಪ್ರತಿಭೆ' ಎನ್ನುವುದು ಶ್ರೇಷ್ಠತೆ ಎಂದು ಒಪ್ಪಿಕೊಳ್ಳೋಣ. ಆದರೆ ಪ್ರತಿಭೆಗೂ ಜಾತಿಗೂ, ಪ್ರತಿಭೆಗೂ ದೈವಕ್ಕೂ ಏನೇನೂ ಸಂಬಂಧವಿಲ್ಲ. ಪ್ರತಿಭೆ ಎನ್ನುವುದು ನೈಪುಣ್ಯ (skill). ಈ ನೈಪುಣ್ಯವನ್ನು ಎಲ್ಲ ಉದ್ಯೋಗದವರಲ್ಲೂ ಕಾಣಬಹುದು. ಬಡಿಗಿಯಲ್ಲಿ ಬಡಿಗತನದ ನೈಪುಣ್ಯವಿದ್ದರೆ ಕೃಷಿಕನಲ್ಲಿ ಕೃಷಿಗೆ ಸಂಬಂಧಿಸಿದ ನೈಪುಣ್ಯವಿರುತ್ತದೆ. ಅಂಬಿಗನಲ್ಲಿ ಹವಾಮಾನದ ಬಗೆಗೆ ಮುನ್ಸೂಚನೆ ನೀಡುವ ನೈಪುಣ್ಯವಿರುತ್ತದೆ. ಆಯಾ ವೃತ್ತಿ ಪ್ರವೃತ್ತಿ ಸಂಬಂಧವಾಗಿ ಇದನ್ನು ಪ್ರತಿಭೆ ಎಂದು ಕರೆಯಬೇಕು. ಸಾಹಿತ್ಯದ ಪ್ರತಿಭೆಯೊಂದೇ ಶ್ರೇಷ್ಠ, ಉಳಿದವು ಶ್ರೇಷ್ಠವಲ್ಲ ಎನ್ನುವ ಧೋರಣೆ ಖಂಡಿತ ಸರಿಯಲ್ಲ. ಪ್ರತಿಭೆಯನ್ನು ಓದು-ಬರೆಹಕ್ಕೆ ಸಂಬಂಧಿಸಿದ್ದು ಎಂದು ತಿಳಿಯುವಲ್ಲಿಯೂ ವರ್ಗ ಸೀಮಿತ ಚಿಂತನೆಯೇ ಕಾಣುವುದು. ಜಾತಿ-ಶ್ರೇಷ್ಠತೆ ಮತ್ತು ಓದುಗಳು ಒಗ್ಗೂಡಿದಾಗ ಇಂಥ ಚಿಂತನೆ ಸಾಧ್ಯ. ಆದರೆ ಪ್ರತಿಭೆ ಜಾತಿಯ, ಪಂಡಿತರ ಅಭಿವ್ಯಕ್ತಿಯಲ್ಲ. ದೈಹಿಕ ಮತ್ತು ಮಾನಸಿಕ ದುಡಿಮೆ ಮತ್ತು ಅದರ ಉನ್ನತ ಸೃಷ್ಟಿಯೆಲ್ಲವೂ ಪ್ರತಿಭೆಯೇ.

ಇಂಥ ಗಟ್ಟಿಯಾದ ತಾತ್ವಿಕ ಚಿಂತನೆಯು ನವ್ಯೋತ್ತರ ವಿಮರ್ಶೆಯನ್ನು ಬೆಳೆಸಿದ್ದನ್ನೂ ಗಮನಿಸಬಹುದು. ಇದಕ್ಕೆ ಒಂದು ಉದಾಹಣೆಯನ್ನು ಇಲ್ಲಿ ನೀಡಿ ಸಮರ್ಥಿಸಬಹುದು. ಭೋಗ ಸಂಸ್ಕೃತಿಯ ಚಿಂತನೆಯ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಕೃತಿಯೊಂದರ ಬಗ್ಗೆ ವಿಮರ್ಶೆಯನ್ನು ಇಲ್ಲಿ ಗಮನಿಸಬೇಕು- 'ಭವ' ಕಾದಂಬರಿಯ ಬಗ್ಗೆ ಸಂಕ್ರಮಣದಲ್ಲಿ ಎಸ್. ಪ್ರಭುಸ್ವಾಮಿಯವರ 'ಅನ್ನಿಸಿಕೆ'ಯು ಹೀಗಿದೆ.[೧೯] 'ಭವ' ಪುಟ್ಟ ಕಾದಂಬರಿ. ಜ್ಞಾನಪೀಠ ಪ್ರಶಸ್ತಿ ಪಡೆದಿರುವ ನಮ್ಮ ಮೂರ್ತಿಯವರಿಗೆ ಇಡೀ ದೇಶದಲ್ಲಿ ಕಾಡುತ್ತಿರುವ ಯಾವುದೇ ಸಮಸ್ಯೆ ಇದರಲ್ಲಿ ವಸ್ತುವಾಗಿಲ್ಲ. ಅನ್ನ, ನೀರು, ಉದ್ಯೋಗ, ಜಾತಿ, ದೇವರು ಎಲ್ಲಕ್ಕಿಂತ ಮಿಗಿಲಾದ ಹಣ ಇವೆಲ್ಲವೂ ಹಿಂದೆ ಬಿದ್ದು ಮೂರು ವ್ಯಕ್ತಿಗಳ ಕಾಮ; ಅದೂ ಕಚ್ಚೆ ಹರುಕತನವೇ ಈ ಕಾದಂಬರಿಯ (ಎಪಿಕ್?) ವಸ್ತುವಾಗಿಬಿಟ್ಟಿರುವುದು ಕುತೂಹಲಕರವಾಗಿದೆ..... ಮತ್ತೊಂದು ಆಶ್ಚರ್ಯದ ಸಂಗತಿ ಎಂದರೆ ಈ ಲೇಖಕರು ಕೆಳವರ್ಗದ ಹೆಣ್ಣುಗಳ ಬಗ್ಗೆ ತಳೆದಿರುವ ಅಬಿಪ್ರಾಯ. 'ಸಂಸ್ಕಾರ'ದಲ್ಲಾಗಲಿ 'ಭವ'ದಲ್ಲಾಗಲಿ ಶೂದ್ರ ಹೆಣ್ಣುಗಳು ಕರೆದೊಡನೆ (ಕರೆಯುವುದೇಕೆ? ನೋಡಿದೊಡನೆ!) ಬಂದು ಮಲಗಿ ಬಿಡುತ್ತವೆ. ಸಾಧ್ಯವಾದರೆ ಬಸಿರೂ ಆಗಿಬಿಡುತ್ತವೆ. ಇದಕ್ಕೆ ಉ.ದಾ. ಆಗಿ ಗಂಗೆ, ರಾಧೆ, ಚಂದ್ರಿ ಪಾತ್ರಗಳನ್ನು ನೋಡಬಹುದು.... ಪ್ರಾಣೇಶಾಚಾರ್ಯರ ಮುಂದುವರಿದ ಪಾತ್ರದಂತೆ

೧೯.ಸಂಕ್ರಮಣ ೨೮೨, ಸಂಪುಟ ೩೧, ಸಂಚಿಕೆ ೨, ಫೆ.೧೯೯೬

ಕಂಡುಬಂದ ವಿಶ್ವನಾಥ ಶಾಸ್ತ್ರಿಗಳ ಪಾತ್ರವೂ ಗಮನಾರ್ಹವಾಗಿ ಮೂಡಿ ಬಂದಿಲ್ಲ. ಅವರ ಹಿಂಸಾ ಕಾಮ ಸರೋಜಳ ಮೂಕ ಪ್ರತಿಭಟನೆ, ರಾಧೆಯ ಒಡನಾಟ, ಮಗಳ ಕ್ರಾಂತಿ ಇವು ಯಾವುವೂ ಕಾದಂಬರಿಯ ಒಟ್ಟು ಪರಿಣಾಮಕ್ಕಾಗಲೀ ನೋಟಕ್ಕಾಗಲೀ ಪೂರಕವಾಗಿ ಬಂದಿಲ್ಲ. ಹಣವುಳ್ಳ ಮನೆತನದ ಖಯಾಲಿಯಾಗಿ, ಬಿ ದರ್ಜೆ ಸಿನಿಮಾ ಆಗಿ ಓದುಗನಿಗೆ ಬೇಸರ ಮೂಡಿಸುವಲ್ಲಿ ಸಫಲವಾಗಿವೆ ಈ ಚಿತ್ರಗಳು.

ಇದೇ ರೀತಿಯ ವಿಮರ್ಶೆ ಭೈರಪ್ಪನವರ 'ದಾಟು'ವಿನ ಬಗ್ಗೆಯೂ ಬಂದುದನ್ನು ಗಮನಿಸಬಹುದು. 'ದಾಟು'ವಿನಲ್ಲಿ ಪ್ರಗತಿಪರ ಪಾತ್ರಗಳು ಪ್ರತಿಗಾಮಿ ಪಾತ್ರಗಳು ಒಡ್ಡುವ ಅಡ್ಡಿಗಳನ್ನು ದಾಟುವುದೇ ಇಲ್ಲ. ಇಂಥ ವಿಮರ್ಶೆಯಲ್ಲೆಲ್ಲ ಹಿ.ಶಿ.ರಾಮಚಂದ್ರೇಗೌಡರ ವಿಶ್ಲೇಷಣೆಯ ಪ್ರಭಾವವನ್ನು ಕಾಣಬಹುದು.

ನವ್ಯ ಸಾಹಿತ್ಯದ ಆರಂಭದ ಕಾಲದಲ್ಲಿ ಅದರ ಪ್ರತಿಷ್ಠಾಪನೆಗಾಗಿ ಅಂದಿನ ಪತ್ರಿಕೆಗಳು ವಹಿಸಿದ ಪಾತ್ರವನ್ನು ಲಕ್ಷಿಸುತ್ತಲೇ ನವ್ಯದವರು ಸಾಹಿತ್ಯದ ಬಗೆಗೆ ತಳೆದ ಧೋರಣೆಯ ಜಾಡನ್ನು ಹಿಡಿದು ಚೌಕಟ್ಟನ್ನು ದಾಟಿ ನವ್ಯೋತ್ತರ ವಿಮರ್ಶೆಯ ಬಗೆಗೆಯೂ ಕೆಲವು ಮಾತುಗಳು ಬಂದವು. ನವ್ಯವನ್ನು ತಿರಸ್ಕರಿಸುವ ಈ ಚಿಂತನೆಗಳು ನವ್ಯೋತ್ತರ ಸಾಹಿತ್ಯಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನೂ ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು. ಈ ಚಿಂತನೆಗಳು ಕೇವಲ ಪತ್ರಿಕೆಯೊಂದರಲ್ಲಿ ಪ್ರಕಟವಾಗಿ ಅಲ್ಲಿಯೇ ಉಳಿದುಬಿಟ್ಟರೆ ಸಾಹಿತ್ಯ ಪ್ರಸ್ಥಾನಕ್ಕೆ ಯಾವುದೇ ಪ್ರಯೋಜನವಾಗಲಾರದು. ಅದು ನವ್ಯೋತ್ತರ ಲೇಖಕರ ಚಿಂತನೆಯನ್ನೂ ಬೆಳೆಸಿದಾಗ ಅದು ಸಾರ್ಥಕವಾಗುತ್ತದೆ. ನವ್ಯೋತ್ತರ ಸಾಹಿತ್ಯದಲ್ಲಿ ಇದು ಹೇಗೆ ಪ್ರತಿಫಲನಗೊಂಡಿತು ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು.

ಕನ್ನಡಪ್ರಭ ಮತ್ತು ಇಂಡಿಯನ್ ಎಕ್ಸ ಪ್ರೆಸ್ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಲಕ್ಷಿಸಿ ಶಿವರುದ್ರ ಕಲ್ಲೋಳಿಕರ ಅವರು 'ಹೊಲಗೇರಿಯ ರಾಜಕುಮಾರ' ಎಂಬ ಕೃತಿಯನ್ನು ಬರೆದುದನ್ನು ಈ ಹಿಂದೆ ಉಲ್ಲೇಖಿಸಲಾಗಿದೆ. ಆ ಕಾದಂಬರಿಯ ತಾತ್ವಿಕತೆಯನ್ನು ಕುರಿತು ಇಲ್ಲಿ ವಿವರಿಸುವುದು ಸೂಕ್ತ ಎನ್ನಿಸುತ್ತದೆ. ಈ ಕಾದಂಬರಿ ದಶಕದ ಶ್ರೇಷ್ಠ ಕಾದಂಬರಿ ಎಂಬ ಹೊಗಳಿಕೆಯನ್ನು ವಿಮರ್ಶಕರಿಂದ ಪಡೆದಿತ್ತು. ಈ ಕಾದಂಬರಿಯ ನಾಯಕ ಒಬ್ಬ ಸಂಸ್ಥಾನಿಕನ ಮಗನಾಗಿರುತ್ತಾನೆ. ಸಂಸ್ಥಾನದಲ್ಲಿ ನಡೆದ ಫಿತೂರಿಯಲ್ಲಿ ಸಂಸ್ಥಾನಿಕ ಮತ್ತು ಮತ್ತು ಆತನ ಹೆಂಡತಿಯ ಕೊಲೆಯಾಗುತ್ತದೆ. ಸಂಸ್ಥಾನಿಕನ ವಿಶ್ವಾಸಿಕನಾದ ಒಬ್ಬ ಹೊಲೆಯ ಸಂಸ್ಥಾನಿಕನ ಆರು ತಿಂಗಳ ಮಗುವನ್ನು ದೂರದ ಊರಿಗೆ ಕರೆದುಕೊಂಡು ಹೋಗಿ ತನ್ನ ಮಗನೆಂದೇ ಸಾಕುತ್ತಾನೆ. ರಾಜಕುಮಾರ ಹೊಲಗೇರಿಯಲ್ಲಿಯೇ ಅಲ್ಲಿಯ ಮಕ್ಕಳೊಂದಿಗೆ ಬೆಳೆಯುತ್ತಾನೆ. ದೊಡ್ಡವನಾಗಿ ಮೀಸಲಾತಿ ಕೋಟಾದಲ್ಲಿ ನೌಕರಿಯನ್ನೂ ಪಡೆದುಕೊಳ್ಳುತ್ತಾನೆ. ದೊಡ್ಡ ಊರಿನಲ್ಲಿ ಮನೆ ಮಾಡಿಕೊಂಡು ಹೆಂಡತಿ ಮಕ್ಕಳೊಂದಿಗೆ

ತನ್ನ ಮಿತಿಯಲ್ಲಿ ಸಂಸಾರ ನಡೆಸುತ್ತಿರುತ್ತಾನೆ. ಈ ಸಂಸ್ಥಾನಿಕನ ಮಗನನ್ನು ತಂದು ತನ್ನ ಮಗನಂತೆ ಸಾಕಿದ ಹೊಲೆಯನಿಗೆ ತಾನು ಸಾಯುವಾಗ ಸತ್ಯವನ್ನು ಹೇಳಬೇಕು ಅನ್ನಿಸುತ್ತದೆ. ಅವನು ಈ ಮಗನನ್ನು ಕರೆದು 'ನೀನು ನನ್ನ ಮಗನಲ್ಲ, ಬೆಳಗಾವಿಯ ಸಂಸ್ಥಾನಿಕನ ಮಗ. ನೀನು ಸಾಧ್ಯವಾದರೆ ಉಚ್ಚ ಕುಲದ ನಿನ್ನವರನ್ನು ಸೇರಿಕೊಳ್ಳು' ಎಂದು ಹೇಳಿ ಜೀವ ಬಿಡುತ್ತಾನೆ.

ಹೊಲಗೇರಿಯ ಈ ರಾಜಕುಮಾರನ ಬದುಕಿನಲ್ಲಿ ಇದೊಂದು ಮಹತ್ವದ ತಿರುವು. ಅಂದಿನಿಂದಲೇ ಆತ ತನ್ನ ಉಚ್ಚಕುಲದ ಮೂಲನ್ನು ಹುಡುಕಲಾರಂಭಿಸುತ್ತಾನೆ. ಅದುವರೆಗೆ ತಾನು ಅನುಸರಿಸುತ್ತ ಬಂದ ಹೊಲೆಯರ ರೀತಿ ರಿವಾಜುಗಳನ್ನು ಆತ ಬಿಡುತ್ತಾನೆ. ಉಚ್ಚಕುಲದವರಂತೆ ಮನೆಯಲ್ಲಿ ಆಚರಣೆಗಳನ್ನು ಆರಂಭಿಸುತ್ತಾನೆ. ತಾನು ಸಂಸ್ಥಾನಿಕನ ಮಗ ಎನ್ನುವುದನ್ನು ಸಿದ್ಧಪಡಿಸುವುದಕ್ಕೆ ದಾಖಲೆಗಳನ್ನು ಸಂಗ್ರಹಿಸುತ್ತಾನೆ. ಈ ದಾಖಲೆಗಳು ಎರಡು ಮೂರು ಗೋಣಿ ಚೀಲ ತುಂಬುವಷ್ಟು ಆಗಿರುತ್ತದೆ. ಇದಕ್ಕೆಲ್ಲ ಅವನಿಗೆ ಸುಮಾರು ಹತ್ತು ವರ್ಷ ಹಿಡಿಯುತ್ತದೆ. ಕೊನೆಗೊಮ್ಮೆ ಅವನು ನ್ಯಾಯಾಲಯದಲ್ಲಿ ದಾವೆಯನ್ನು ಹೂಡುತ್ತಾನೆ. ಬೆಳಗಾವಿ ಮತ್ತು ಸುತ್ತಮುತ್ತಲಿನ ಐದು ಸಾವಿರಕ್ಕೂ ಅಧಿಕ ಎಕರೆ ಪ್ರದೇಶಕ್ಕೆ ತಾನು ವಾರಸುದಾರ ಎನ್ನುವುದು ಆತನ ವಾದ. ಪ್ರಕರಣ ತೀವ್ರ ಕುತೂಹಲದಿಂದ ಕೂಡಿರುತ್ತದೆ. ಈ ನಡುವೆ ಆತನಿಗೆ ಕೊಲೆ ಬೆದರಿಕೆ ಪತ್ರಗಳು ಬರುತ್ತವೆ. ಮನೆಯವರು ಅಂಜುತ್ತಾರೆ. ಮನೆಯಲ್ಲಿಯ ಕುಟುಂಬದ ಶಾಂತಿ ಹಾಳಾಗುತ್ತದೆ. ವಾಹನ ಹಾಯಿಸಿ ಅವನನ್ನು ಕೊಲ್ಲುವ ಯತ್ನ ನಡೆಯುತ್ತದೆ. ಇದರಿಂದೆಲ್ಲ ತಾನು ರಾಜಕುಮಾರನೇ ಎನ್ನುವ ಅವನ ನಂಬಿಕೆ ಬಲಗೊಳ್ಳುತ್ತ ಹೋಗುತ್ತದೆ. ಮಾನಸಿಕ ಕಿರಿಕಿರಿಯ ಕಾರಣ ಆತ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದುಕೊಳ್ಳುತ್ತಾನೆ. ಅದರಿಂದ ಬಂದ ಗ್ರ್ಯಾಚುಟಿ, ಫಂಡ್ ಇತ್ಯಾದಿಗಳನ್ನೂ ನ್ಯಾಯಾಲಯದ ಖರ್ಚಿಗೆ ಉಪಯೋಗಿಸುತ್ತಾನೆ. ಒಂದು ದಶಕದ ಕಾಲ ಹೋರಾಡಿದರೂ ನ್ಯಾಯಾಲಯ ಅವನ ವಾದವನ್ನು ಪುರಸ್ಕರಿಸುವುದಿಲ್ಲ. ಕೊನೆಗೆ ಅವನು, ತನಗೆ ಭೂಮಿ ಬೇಡ, ತಾನು ಸಂಸ್ಥಾನಿಕನ ವಂಶದವನು ಎನ್ನುವುದನ್ನು ಹೇಳಿದರೆ ಸಾಕು ಎಂದು ಅರ್ಜಿ ಸಲ್ಲಿಸುತ್ತಾನೆ. ಅದನ್ನೂ ಪುರಸ್ಕರಿಸದ ನ್ಯಾಯಾಲಯ ಅವನ ಅರ್ಜಿಯನ್ನು ವಜಾ ಮಾಡುತ್ತದೆ. ಹೀಗೆ ಶ್ರೇಷ್ಠತೆಯನ್ನು ಬಯಸಿ ಹೊರಟ ಹೊಲಗೇರಿಯ ರಾಜಕುಮಾರ ಇದ್ದ ಬದುಕಿನ ಶಾಂತಿಯನ್ನೂ ಕಳೆದುಕೊಂಡು ಸಾವಿಗೀಡಾಗುತ್ತಾನೆ. ಹುಟ್ಟಿನ ಶ್ರೇಷ್ಠತೆಯ ನಿರರ್ಥಕತೆಯನ್ನು ಸಾರುವ ಈ ಕಾದಂಬರಿಗೆ ಇಂಥದ್ದೊಂದು ಸಂವಿಧಾನವನ್ನು, ಕಥೆಯ ಹಂದರವನ್ನು ಸೃಷ್ಟಿಸಿಕೊಳ್ಳಲು ನವ್ಯೋತ್ತರ ಸಂದರ್ಭದ ಶ್ರೇಷ್ಠತೆಯ ಕುರಿತು ಹರಿದ ಚಿಂತನೆಗಳೇ ಕಾರಣ ಎಂದು ಹೇಳಬೇಕು. ತಾನು ಹೊಲಗೇರಿಯ ಹುಡುಗನಲ್ಲ, ರಾಜಕುಮಾರ ಎಂಬ ಅರಿವು ಕಥಾನಾಯಕನಲ್ಲಿ ಮೂಡುತ್ತಿದ್ದಂತೆಯೇ ಅದುವರೆಗೆ ತಾನು ಬದುಕಿದ ಪರಿಸರವನ್ನು ಆತ ದ್ವೇಷಿಸುವುದು, ಉಚ್ಚಕುಲದಲ್ಲಿ ಸೇರಬೇಕೆಂದು ಬಯಸಿ ಪಡುವ ಕಷ್ಟ ಇವೆಲ್ಲವನ್ನು ಕಾದಂಬರಿಕಾರರು

ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಶ್ರೇಷ್ಠತೆಯ ಬಗೆಗೆ ಅಂದಿನ ಪತ್ರಿಕೆಗಳಲ್ಲಿ ನಡೆದ ವಾಗ್ವಾದದ ಪರಿಣಾಮದ ಒಂದು ಉದಾಹರಣೆ ಇದು. ದಲಿತ ಸಾಹಿತ್ಯದ ಸಂದರ್ಭದಲ್ಲಿ ಶ್ರೇಷ್ಠತೆಯನ್ನು ಹೇಗೆ ನಿರಾಕರಿಸುತ್ತಾರೆ ಎನ್ನುವುದಕ್ಕೆ ಮುಂದೆ ಉದಾಹರಣೆಗಳನ್ನು ನೀಡಲಾಗಿದೆ.

ಜನವಿಮುಖತೆ:

ನವ್ಯ ವಿಮರ್ಶೆ ರಸ ವಿಮರ್ಶೆಯ ಎಲ್ಲ ಅನುಸಂಧಾನ ವಿಧಾನಗಳನ್ನು ಬಿಟ್ಟುಕೊಟ್ಟಿತು. ಇದರಿಂದಾಗಿ ಕೃತಿ ನಿಷ್ಠ ವಿಮರ್ಶೆಯಲ್ಲಿ ಹೊಸ ಚಟುವಟಿಕೆ ಮೂಡಿ ಬಂತು. ನವ್ಯ ವಿಮರ್ಶೆ ಕೃತಿಯೊಂದನ್ನು ಸಮಾಜದೊಳಗೆ, ಜನತೆಯ ನಡುವೆ ಇಟ್ಟು ವಿಮರ್ಶೆ ಮಾಡಲಿಲ್ಲ. ಪ್ರಯೋಗಾಲಯದಲ್ಲಿ ಒಂದು ಜೀವಂತ ಪ್ರಾಣಿಯನ್ನು ಕೊಯ್ದು ಅದರ ಅಂಗಾಂಗಗಳನ್ನು ಬಿಡಿಸಿಟ್ಟು ಒಂದೊಂದನ್ನೂ ವಿವರಿಸುವಂತೆ, ಆ ವಿವರಣೆಯಲ್ಲಿಯೇ ಖುಷಿಗೊಳ್ಳುವಂತೆ ಕೃತಿನಿಷ್ಠ ವಿಮರ್ಶೆ ಮಾಡಲಾಯಿತು. ಈ ವಿಮರ್ಶೆಯ ನಿರ್ಭಾವುಕ ಗುಣವೇ ವಸ್ತುನಿಷ್ಠ ವಿಮರ್ಶೆಯ ಗುಣ ಎಂದು ಪ್ರಚಾರಮಾಡಲಾಯಿತು. ನವ್ಯ ಸಾಹಿತ್ಯಕ್ಕೆ ಅಡಿಪಾಯವಾಗಿದ್ದ ವ್ಯಕ್ತಿ ನಿಷ್ಠತೆ, ಅಂತರ್ಮುಖತೆ, ಅನಾಥ ಪ್ರಜ್ಞೆ ಹಾಗೂ ಪ್ರತಿಮಾನಿಷ್ಠವಾದ ಸಂಕೀರ್ಣಾಭಿವ್ಯಕ್ತಿ- ಈ ಧೋರಣೆ ಮತ್ತು ನಿಲುವುಗಳನ್ನೇ ವಿಮರ್ಶೆಯೂ ತನ್ನ ನಿಲುವುಗಳನ್ನಾಗಿ ಸ್ವೀಕರಿಸಿತು. ಇದರಿಂದಾಗಿ ಚಲನಶೀಲ ಸಮಾಜದ ವಾಸ್ತವತೆಯ ಎದುರು ವಿಮರ್ಶಾತ್ಮಕವಾಗಿ ಪರೀಕ್ಷೆಗೊಳಪಡಿಸಲು ಸಾಧ್ಯವಾಗಲಿಲ್ಲ. ಇದೆಲ್ಲದರ ಪರಿಣಾಮ ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆ ಇವು ಮಧ್ಯಮ ವರ್ಗದೊಳಗಿನ ಒಂದು ಸಣ್ಣ ಗುಂಪಾದ 'ಪ್ರತಿಷ್ಠಿತ' ವರ್ಗಕ್ಕೆ ಸೀಮಿತವಾದವು. ನವ್ಯ ಸಾಹಿತ್ಯ ಜನತೆಯೊಂದಿಗೆ ಸಂಪರ್ಕ ಕಡಿದುಕೊಂಡಿದ್ದಕ್ಕೆ ಈ ಸಾಹಿತ್ಯ ತಳೆದ ಧೋರಣೆಗಳೇ ಮೂಲ ಕಾರಣವಾದರೂ ಸಾಂಸ್ಕೃತಿಕವಾಗಿ ನವ್ಯ ವಿಮರ್ಶೆಯ ಬೇಜವಾಬ್ದಾರಿತನ ಮತ್ತು ವಿಫಲತೆಯ ಪಾಲನ್ನು ಅಲ್ಲಗಳೆಯುವಹಾಗಿಲ್ಲ. ಇದರಿಂದಾಗಿ ಸಾಮಾನ್ಯ ಜನತೆಯ ವಿಷಯ ಒತ್ತಟ್ಟಿಗಿರಲಿ, ಆಸಕ್ತ ಓದುಗರೂ ತಮ್ಮ ಆಸಕ್ತಿಯನ್ನು ಕಳೆದುಕೊಂಡು ದೂರಸರಿಯಲು ಈ ವಿಮರ್ಶೆ ಸಾಕಷ್ಟು ನೆರವಾಯಿತು. ಈ ಮಾತುಗಳು ಕೃತಿ- ಲೇಖಕ- ವಿಮರ್ಶಕ- ವಿಮರ್ಶೆ- ಓದುಗ ಸಂಬಂಧದ ಬಗೆಗೆ ಬೆಳಕನ್ನು ಚೆಲ್ಲಬಲ್ಲವು.

ನವ್ಯ ವಿಮರ್ಶೆಯಲ್ಲಿ ಹೆಚ್ಚು ಪ್ರಚಾರಕ್ಕೆ ಬಂದ ಪ್ರಾಯೋಗಿಕ ವಿಮರ್ಶೆಗೆ ಎಂಜೆಕೆಯವರ ಐದು ವಚನಗಳ ವಿಶ್ಲೇಷಣೆ, 'ಹೊಕ್ಕಳಲ್ಲಿ ಹೂವಿಲ್ಲ' ಕಾವ್ಯದ ಬಗೆಗೆ ಸಾಕ್ಷಿ ಪತ್ರಿಕೆಯಲ್ಲಿ ಪಾ.ಲಂ.ಸುಬ್ರಮಣ್ಯಂ ಮತ್ತು ಮಾಧವ ಕುಲಕರ್ಣಿಯವರು ಮಾಡಿದ

ವಿಮರ್ಶೆ, ಅಡಿಗರ, 'ನೀ ಬಳಿಯೊಳಗಿರುವಾಗ್ಯೆ' ಕವನಕ್ಕೆ ಗೋವಿಂದ ಜಾಲಿಹಾಳರು ಸಾಕ್ಷಿಯಲ್ಲಿ ಬರೆದ ವಿಮರ್ಶೆ, 'ಭೂಮಿಗೀತ' ಕುರಿತು ಎಂಜಿಕೆ ಹಾಗೂ ರಾಮದಾಸ್ ಬರೆದ ವಿಮರ್ಶೆಗಳನ್ನು ಪ್ರಾತಿನಿಧಿಕವಾಗಿ ನೋಡಬಹುದು. ಸಾಹಿತ್ಯಪತ್ರಿಕೆಗಳಲ್ಲಿ ಬಂದ ಈ ವಿಮರ್ಶೆ ಒಂದು ಸಂಪ್ರದಾಯವನ್ನು ನಿರ್ಮಿಸುವ ಉದ್ದೇಶದಿಂದ ಬಂದವು.

ನವ್ಯದ ಜನವಿಮುಖತೆಯ ಬಗೆಗೆ 'ಸಂಕ್ರಮಣ'ದಲ್ಲಿಯೇ ಬಂದ ಈ ಆಕ್ಷೇಪವನ್ನು ದಾಖಲಿಸುವುದು ಇಲ್ಲಿ ಸೂಕ್ತವೆನ್ನಿಸುತ್ತದೆ. ಅಡಿಗರು ಮತ್ತಿತರ ಅನೇಕ ಹಿಂಬಾಲಕರು ಬರೆದ ಸಾಹಿತ್ಯವು ಸುಶಿಕ್ಷಿತರಿಗೇ ತಿಳಿಯದಿದ್ದರೂ ಲಕ್ಷ್ಮೀನಾರಾಯಣ ಭಟ್ಟ, ಅನಂತಮೂರ್ತಿಯಂಥವರಿಗೆ ತಿಳಿಯುತ್ತದೆ. ಅದರ ಮೇಲೆ ಅವರು ವಿಮರ್ಶೆ ಬರೆಯುತ್ತಾರೆ. ನಿಜ ಸಂಗತಿ ಎಂದರೆ ಇಂಥ ಜನ ಸಾಹಿತ್ಯವನ್ನು ಜನರಿಂದ ಸಾಧ್ಯವಿದ್ದಷ್ಟು ದೂರ ಎಳೆದೊಯ್ಯುತ್ತಾರೆ. ಮತ್ತು ಪ್ರತಿಗಾಮಿಗಳಾಗಿ ಸಮಾಜದಲ್ಲಿ ಕಾರ್ಯ ಮಾಡುತ್ತಾರೆ ಎಂಬ ಟೀಕೆ ಕೇಳಿ ಬಂತು. ಹೊಸ ಬದುಕನ್ನು ಕುರಿತು ಕನಸು ಕಾಣುವ ವಿಶಾಲ ಜನಸಮುದಾಯ ಮತ್ತು ಅರ್ಥವಿಲ್ಲದ ಮಾತನಾಡುವ ಇಂಥ ಸಾಹಿತಿ, ವಿಮರ್ಶಕರು ಬೇರೆಬೇರೆಯಾಗುವುದು ಸಹಜ. ಈ ರೀತಿ ಹೊರಗೆ ಮಾಡಲು ಕೆಲಸವೇ ಇಲ್ಲದ ಸಾಹಿತ್ಯವು 'ಅಂತರ್ಮುಖಿ'ಯಾಗದೆ ಏನು ಮಾಡಬಲ್ಲದು? ಎಂಬ ಪ್ರಶ್ನೆಯಲ್ಲಿ ನವ್ಯದ ಬಗೆಗಿನ ದೊಡ್ಡ ಆಕ್ಷೇಪಗಳೆಲ್ಲ ಹರಳುಗಟ್ಟಿದೆ.

ಈ ಪ್ರಾಯೋಗಿಕ ವಿಮರ್ಶೆಯೇ ಕ್ರಮೇಣ ರೂಪವಾದಿ ವಿಮರ್ಶೆ (Formalistic criticism)ಯಾಗಿ ಬೆಳೆಯುತ್ತದೆ. ಮೂಲಭೂತ ವ್ಯತ್ಯಾಸ ಇದರಲ್ಲಿ ಇಲ್ಲದಿದ್ದರೂ ಕೃತಿಯ ತಾಂತ್ರಿಕ ಅಂಶಗಳ ಮೇಲೆ ಇಲ್ಲಿ ಒತ್ತು ಬೀಳುತ್ತದೆ. ಇದರಿಂದಾಗಿ ಒಂದು ಶಿಸ್ತಿಗೊಳಪಟ್ಟ ಅಭ್ಯಾಸ ಪ್ರಾಮುಖ್ಯತೆ ಪಡೆಯುತ್ತದೆ. ಈ ವಿಮರ್ಶೆಗೆಲ್ಲ ಕೃತಿಯೇ ಏಕಮಾತ್ರ ಮೂಲ ಆಗಿರುವುದರಿಂದ ಅದು ಜೀವ ವಿರೋಧಿ ಗುಣ ಎಂದು ಟೀಕಿಸಲಾಗಿದೆ. ಕೃತಿ ನಿಷ್ಠ ವಿಮರ್ಶಕರು ಕವನವನ್ನಾಗಲಿ, ಕಾದಂಬರಿಯನ್ನಾಗಲಿ ವಿಶ್ಲೇಷಿಸಿ ಅದು ತಾಂತ್ರಿಕವಾಗಿ ಎಷ್ಟು ಯಶಸ್ವಿಯಾಗಿದೆ ಅಥವಾ ಆಗಿಲ್ಲ ಎಂದು ಹೇಳುವರು. ಆದರೆ ಸಾಹಿತ್ಯದ ವಸ್ತು ಹೇಗಿದೆ, ಓದುಗನ ಕೈ ಸೇರಿದಾಗ ಅದು ಯಾವ ಪರಿಣಾಮ ಉಂಟುಮಾಡುತ್ತದೆ? ಆ ಪರಿಣಾಮ ಅಪೇಕ್ಷಣೀಯವೇ? ಇತ್ಯಾದಿ ವಿಚಾರಿಸದಿರುವ ಸಾಧ್ಯತೆ ಅಧಿಕ. ಹೀಗಾದಾಗ ಸಾಹಿತ್ಯ ಮೌಲ್ಯ, ಜೀವನ ಮೌಲ್ಯ ಬೇರೆಬೇರೆ ಎಂದಂತಾಗುವುದಿಲ್ಲವೆ? ಈ ಕಾರಣಕ್ಕಾಗಿಯೇ ಇದು ಜೀವ ವಿರೋಧಿ ಎಂಬ ಟೀಕೆಗೆ ಗುರಿಯಾಗಬೇಕಾಯಿತು.

ನವ್ಯದ ಪರಿಣಾಮ: ಒಟ್ಟಾರೆ ನವ್ಯ ಕಾವ್ಯ ಕನ್ನಡದಲ್ಲಿ ತಲೆದೋರಿದ ಕೂಡಲೆ ರಸಾತ್ಮಕ ಹಾಗೂ ಭಾವ ಗೀತಾತ್ಮಕವಾದದ್ದು ಕಾವ್ಯವೆನ್ನುವ ವ್ಯಾಖ್ಯೆಯೇ ತಿರುವುಮುರುವಾಯಿತು. ಅನಗತ್ಯವಾಗಿ ಹೊಗಳುವುದು, ಅತಿಶಯೋಕ್ತಿ, ಉತ್ಪ್ರೇಕ್ಷೆ ಮೊದಲಾದ ಅಲಂಕಾರಗಳ ಹಂಗಿಲ್ಲದೆ ವಾಸ್ತವಿಕ ದೃಷ್ಟಿಕೋನದಿಂದ, ಸ್ವಂತ

ಅನುಭವದಿಂದ, ವೈಜ್ಞಾನಿಕ ಅರಿವಿನಿಂದ ಕಾವ್ಯ ರಚಿಸಬೇಕು ಎಂಬ ಜವಾಬ್ದಾರಿ ಕವಿಗಳಲ್ಲಿ ಬೆಳೆಯಿತು. ಸ್ಫೂರ್ತಿ, ಪ್ರೇರಣೆ ಕಾವ್ಯ ರಚನೆಗೆ ಬೇಕು ಎಂಬ ತಿಳಿವಳಿಕೆ ದೂರವಾಯಿತು. ಕಾವ್ಯಕ್ಕೆ ಅನುಭವವೇ ಒರೆಗಲ್ಲಾಯಿತು. ಭಾವ ಅನುಭಾವಗಳ ಬದಲಿಗೆ ಅನುಭವ ಪ್ರಾಮುಖ್ಯತೆ ಪಡೆಯಿತು. ಹೊಸ ಕವಿಗಳು ಪರಂಪರಾಗತ ಆಕರ್ಷಕ ಸಂದರ್ಭಗಳಿಂದ ಹೊರಬಂದು ಬರೆದರು. ಹೊಸ ಮೌಲ್ಯಗಳನ್ನು ಶೋಧಿಸಿದರು. ಪ್ರಾಮಾಣಿಕತೆ ಅಭಿವ್ಯಕ್ತಿಯಲ್ಲಿ ಆದ್ಯತೆ ಪಡೆಯಿತು. ಈ ಕಾರಣಕ್ಕಾಗಿಯೇ ಅದುವರೆಗಿನ ಕಾಮದ ಬಗೆಗಿನ ಮಡಿವಂತಿಕೆ ದೂರವಾಗಿ ಇಲ್ಲಿ ಅದು ವಿವಿಧ ರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಭಾಷೆಯೊಂದಿಗೆ ಅವರು ಹೋರಾಟ ನಡೆಸಿದರು. ವೈಯಕ್ತಿಕ ಅನುಭವ ಸಂವೇದನೆಗಳು ಬರೆವಣಿಗೆಗೆ ಇಳಿದವು. ಸಮಕಾಲೀನ ಸಂದರ್ಭದ ಅರಿವು ಹಾಗೂ ಕಾಳಜಿಗಳಿಂದ ಅವರು ಕಾವ್ಯವನ್ನು ಹೆಣೆದರು. ಶಬ್ದಗಳಿಗಿರುವ ವಿಶಿಷ್ಟ ಧ್ವನಿ ಸಾಮರ್ಥ್ಯದಿಂದ ಅದುವರೆಗೆ ಪದ್ಯದಲ್ಲಿದ್ದ ಏಕತಾನತೆಯನ್ನು ಅವರು ಮುರಿದರು. ಗದ್ಯಲಯ ಅಥವಾ ಆಡುಮಾತಿನ ಲಯವನ್ನು ಅವರು ರೂಢಿಗೆ ತಂದರು. ಪ್ರಾರಂಭದಲ್ಲಿ ಹೊಸ ಕಾವ್ಯ ಕೃತಿಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಅಭ್ಯಾಸ ಲೇಖನಗಳು, ಪತ್ರಿಕೆಗಳಲ್ಲಿ ಪ್ರಕಟವಾದ ಹೊಸ ಕಾವ್ಯ ಪರಿಚಯಿಸುವ ಉದ್ದೇಶದ ಬರೆಹಗಳಲ್ಲಿ ಹೊಸ ಕಾವ್ಯದ ಅನುಸಂಧಾನ ಮಾರ್ಗವನ್ನು ಸೂಚಿಸಲಾಯಿತು. ಹೀಗೆ ನವ್ಯ ಮಾರ್ಗ ಕನ್ನಡ ಸಾಹಿತ್ಯದಲ್ಲಿ ಹೊಸ ಮಾರ್ಗವೊಂದನ್ನು ತೆರೆಯಿತು. ಹೊಸ ಕವಿಗಳ ಹೊಸ ಜೀವನದೃಷ್ಟಿಯೇ ಹೊಸ ಕಾವ್ಯದ ಪ್ರೇರಕ ಅಂಶ. ಈ ಪ್ರೇರಣೆಯನ್ನು ಬಲಗೊಳಿಸುವಲ್ಲಿ, ಪ್ರಸರಿಸುವಲ್ಲಿ ಪತ್ರಿಕೆಗಳು ಅತ್ಯಂತ ವಿಶಿಷ್ಟ ಪಾತ್ರವನ್ನು ವಹಿಸಿದವು.

ಜನಪರ ಸಾಹಿತ್ಯ:

ಎಪ್ಪತ್ತರ ದಶಕದ ಆರಂಭದಲ್ಲಿ ನವ್ಯ ಸಾಹಿತ್ಯದ ವಿರುದ್ಧ ಅಲ್ಲಲ್ಲಿ ದನಿಗಳು ಏಳತೊಡಗಿದವು. ನವ್ಯವು ಮಧ್ಯಮ ವರ್ಗದವರ ಬೌದ್ಧಿಕ ಕಸರತ್ತು ಎಂದೂ, ನವ್ಯ ಸಾಹಿತ್ಯ ತನ್ನ ಅತೀವ ಅಂತರ್ಮುಖತೆಯಲ್ಲಿ ಸುತ್ತಲಿನ ಬದುಕಿನ ಸ್ಪರ್ಶವನ್ನೇ ಕಳೆದುಕೊಂಡಿದೆ ಎಂದೂ ಅಪವಾದಗಳು ಬಂದವು. ಈ ದಶಕದಲ್ಲಿ ಕರ್ನಾಟಕದ ಬುದ್ಧಿಜೀವಿ ವರ್ಗ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ರಾಜಕೀಕರಣ (politicize) ಹೊಂದಿತು. ಎಡಪಂಥೀಯ ವಿಚಾರಧಾರೆ ಪ್ರಗತಿಶೀಲ ಚಳವಳಿಯ ಬಳಿಕ ಮತ್ತೊಮ್ಮೆ ನಮ್ಮ ಯುವ ಲೇಖಕರನ್ನು ಆಕರ್ಷಿಸಿತು. ಬ್ರಾಹ್ಮಣೇತರ ವರ್ಗಗಳು ತಮ್ಮ ನೋವು, ಅನುಭವಗಳಿಗೆ ಮಾತು ಕೊಡಲು ಹಾತೊರೆದವು. ಸಾವಿರಾರು ವರ್ಷಗಳ ಕಾಲ ತಮ್ಮ ನೋವು ಅಪಮಾನಗಳನ್ನು ಒಳಗೊಳಗೇ ನುಂಗಿಕೊಂಡಿದ್ದ ದಲಿತರು ತಮ್ಮ ಅನುಭವಗಳಿಗೆ

ಮಾತಿನ ರೂಪ ಕೊಟ್ಟರು. ಮೂಕನಿಗೆ ಬಾಯಿ ಬಂತು. ಚೋಮನ ಮಕ್ಕಳ ನೋವು ಹಾಡಾಗಿ ಹರಿಯಿತು. ಸಾಹಿತ್ಯದಲ್ಲಿ ದಲಿತರ ಅನುಭವ ಲೋಕದ ಪ್ರವೇಶ ಹೆಚ್ಚು ಪರಿಣಾಮಕಾರಿಯಾಯಿತು. ನವ್ಯ ಸಾಹಿತ್ಯಕ್ಕೂ ಈ ಸಾಹಿತ್ಯಕ್ಕೂ ಪ್ರಮುಖವಾಗಿ ಅಭಿವ್ಯಕ್ತಿಯ ರೀತಿಯಲ್ಲಿಯೇ ಅಂತರವಿತ್ತು. ನವ್ಯದ ಒತ್ತು (emphasis) ಹೆಚ್ಚೆಂದರೆ ವ್ಯಕ್ತಿ ಕುಟುಂಬದೆದುರು ಬಂಡೇಳುವ ಪ್ರವೃತ್ತಿಯಲ್ಲಿ ಕೊನೆಗಾಣುತ್ತಿತ್ತು. ಆದರೆ ನವ್ಯೋತ್ತರದಲ್ಲಿ ಲೇಖಕರು ಒಟ್ಟೂ ಸಾಮಾಜಿಕ ಸ್ವರೂಪ ಹಾಗೂ ರಾಜಕೀಯ ವಿನ್ಯಾಸದ ಮೇಲೆ ಬಂಡೇಳುವಂತಹ ಕೃತಿ ರಚಿಸಿದರು. ಇದೇ ರೀತಿಯ ಪ್ರಯತ್ನವನ್ನು ಪ್ರಗತಿಶೀಲರು ಮಾಡಿದ್ದರು. ಅದರ ಬಗೆಗೆ ವ್ಯಾಪಕ ಚರ್ಚೆ ನಡೆದು ಅವರ ಸೋಲು, ಸಾಧನೆಗಳ ಮೌಲ್ಯಮಾಪನ ನಡೆದಿತ್ತು. ಅದರ ವಿವರಗಳು ಈ ಲೇಖಕರ ಎದುರು ಇತ್ತು.

ಇವೆಲ್ಲವುಗಳಿಗೆ ಪ್ರೇರಣೆ ಎನ್ನುವಂತೆ ಪೂರ್ಣಚಂದ್ರ ತೇಜಸ್ವಿ ತಮ್ಮ 'ಅಬಚೂರಿನ ಪೋಸ್ಟಾಫೀಸು' (೧೯೭೩) ಕಥಾ ಸಂಕಲನಕ್ಕೆ ಬರೆದ 'ಹೊಸ ದಿಗಂತದೆಡೆಗೆ' ಎಂಬ ಮುನ್ನುಡಿಯಲ್ಲಿ ನವ್ಯ ಸಾಹಿತ್ಯದ ಬಗೆಗೆ ಆಕ್ಷೇಪಗಳನ್ನು ವ್ಯಕ್ತಪಡಿಸಿ ಹೊಸ ರೀತಿಯ ಬರೆವಣಿಗೆ ಆರಂಭಿಸುವ ಅಗತ್ಯವನ್ನು ಒತ್ತಿ ಹೇಳಿದರು.

ನವ್ಯೋತ್ತರ ಲೇಖಕರಲ್ಲಿ ಹೆಚ್ಚು ರಾಜಕೀಯ ಮತ್ತು ಸಾಮಾಜಿಕ ಬದ್ಧತೆಯುಳ್ಳ ಬರೆಹಗಳು ಆರಂಭವಾಯಿತು. ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಬದ್ಧತೆ ಎಂಬ ಪದ ಬಳಕೆಯಲ್ಲಿ ಬಂತು. ಈ ಲೇಖಕರಲ್ಲಿ ಗ್ರಾಮೀಣ ಪರಿಸರವನ್ನು ಹೆಚ್ಚು ವೈಭವೀಕರಿಸುವುದಾಗಲೀ ಅಥವಾ ಹೀಗಳೆಯುವುದಾಗಲಿ ನಡೆಯದೆ ವಾಸ್ತವವಾಗಿ ನೋಡುವ ಅಭ್ಯಾಸ ಬೆಳೆಯಿತು. ಬರಗೂರ ರಾಮಚಂದ್ರಪ್ಪನವರ 'ಒಂದು ಊರಿನ ಕಥೆ'ಯನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು.

ಈ ನವ್ಯೋತ್ತರ ಸಾಹಿತ್ಯದ ಪ್ರೇರಣೆ ಇರುವುದು ಎಲ್ಲಿ? ಇದರ ಪ್ರೇರಣೆ ಇಡೀ ಸಮಕಾಲೀನ ನಾಗರಿಕತೆಯ ವಿರುದ್ಧ ಬಂಡಾಯದಲ್ಲಿದೆ.[೨೦] ಈ ಬಂಡಾಯ ಸಾಧ್ಯವಾಗಬೇಕಾದರೆ ಸಾಹಿತ್ಯವು ಬಂಡವಾಳಶಾಹಿ ನಾಗರಿಕತೆ ಸೃಷ್ಟಿಸಿರುವ, ರೂಪಿಸಿರುವ ಗ್ರಹಿಕೆಯ ಕ್ರಮಗಳಿಂದ ಭಿನ್ನವಾಗಬೇಕು, ತರ್ಕರೂಪಿ ಕಾವ್ಯ ತರ್ಕವೇ ಆತ್ಮವಾಗಿರುವ ನಾಗರಿಕತೆಯ ವಿರುದ್ಧ ನಿಲ್ಲಲಾರದು. ಕನಸುಗಳ, ಪುರಾಣಗಳ, ಸಹಯೋಗಗಳ, ಪಾರದರ್ಶಕವಲ್ಲದ ಗ್ರಹಿಕೆಯ ಕ್ರಮಗಳು ಮಾತ್ರ, ಈ ನಾಗರಿಕತೆಗೆ ಸವಾಲು ಎನ್ನುವ ಮಾತು ಕೇಳಿಬಂತು.

ಬಂಡಾಯ ಸಾಹಿತ್ಯವನ್ನು ಸೈದ್ಧಾಂತಿಕವಾಗಿ ಪ್ರತಿಷ್ಠಾಪಿಸಲು ಹಲವರು ಪ್ರಯತ್ನಿಸಿದ್ದಾರೆ. ಈ ಸಿದ್ಧಾಂತದ ಮಂಡನೆಗೆ ಸಾಹಿತ್ಯಪತ್ರಿಕೆಗಳು ವೇದಿಕೆಯಾಗಿವೆ.

೨೦.ವಿವರಗಳಿಗೆ ನೋಡಿ- ಡಿ.ಆರ್.ನಾಗರಾಜ್-ಸಂಕ್ರಮಣ- ೧೯೭.

ಅವುಗಳಲ್ಲಿ ಕೆಲವು ಅಭಿಪ್ರಾಯಗಳನ್ನು ಸಾಹಿತ್ಯ ಮತ್ತು ಪತ್ರಿಕೆಯ ಸಂಬಂಧದ ಹಿನ್ನೆಲೆಯಲ್ಲಿ ಇಲ್ಲಿ ಪರಿಶೀಲಿಸಬೇಕು. ಬಂಡಾಯ ಸಾಹಿತ್ಯದ ನೆಲೆಯ ಬಗೆಗೆ 'ಸಂಕ್ರಮಣ'ದಲ್ಲಿ ಚರ್ಚಿಸುವ ಬರಗೂರು ರಾಮಚಂದ್ರಪ್ಪ, ಬಂಡಾಯ ಸಾಹಿತ್ಯ ಚರಿತ್ರೆಯ ಅನಿವಾರ್ಯತೆಯಿಂದ ಹುಟ್ಟಿದ ಸೃಜನಶೀಲ ಕ್ರಿಯೆ ಎಂದು ಹೇಳಿದ್ದಾರೆ.[೨೧] ಬಂಡಾಯ ಸಾಹಿತ್ಯ ಯಾರೊಬ್ಬರ ವೈಯಕ್ತಿಕ ಪ್ರಯೋಗಾಸಕ್ತಿಯ, ಸ್ವಘೋಷಿತ ನಿಲುವುಗಳ ಅಸಾಹಿತ್ಯಕ ಕಲ್ಪನೆಯಲ್ಲ. ಆಳವಾದ ರಾಜಕೀಯ ಪ್ರಜ್ಞೆಯಿಂದ, ಅಸಮಾನತೆಯ ಅಸಹ್ಯ ಅನುಭವದಿಂದ, ಸಾಮಾಜಿಕ ಜವಾಬ್ದಾರಿಯ ಹಿನ್ನೆಲೆಯಲ್ಲಿ ಸ್ಫೋಟಗೊಂಡ ಚರಿತ್ರೆಯ ಅನಿವಾರ್ಯ ವಾಸ್ತವ ಬಂಡಾಯ ಸಾಹಿತ್ಯ. ಇಂಥ ಹೇಳಿಕೆ ನವ್ಯ ಸಾಹಿತ್ಯವನ್ನು ಕುರಿತು ಇದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನವ್ಯದ ಕೊನೆಯ ದಿನಗಳಲ್ಲಿ ಬೆಳೆಯುತ್ತ ಬಂದ ಪ್ರತಿಭಟನೆಯ ಸಾಹಿತ್ಯಕ್ಕೆ, ಸಮಕಾಲೀನ ಸಂದರ್ಭದ ಪ್ರಮುಖ ಆಶಯವನ್ನು ಬಿಂಬಿಸುವ 'ಬಂಡಾಯ' ಎಂಬ ಹೆಸರಿನಿಂದ ಕರೆಯುವುದು ಸೂಕ್ತವೆಂದು ಚಳವಳಿಯ ಮುಂಚೂಣಿಯಲ್ಲಿದ್ದವರಿಗೆ ಅನ್ನಿಸಿತು.

ಸಾಹಿತಿಗೆ ರಾಜಕೀಯ ಕಾಳಜಿ ಅಗತ್ಯ ಮತ್ತು ಇಂದಿನ ಇಂಡಿಯಾದಲ್ಲಿ ಅನಿವಾರ್ಯ ಎಂದು ಬಂಡಾಯ ಸಾಹಿತಿಗಳು ನಂಬಿದ್ದಾರೆ. ಇಷ್ಟು ಬಲವಾಗಿ ರಾಜಕೀಯ ಮತ್ತು ಸಾಹಿತ್ಯದ ಸಂಬಂಧ ಕನ್ನಡ ಸಾಹಿತ್ಯದಲ್ಲಿ ಹಿಂದೆಂದೂ ಪ್ರತಿಪಾದಿತವಾಗಿರಲಿಲ್ಲ ಎಂಬುದು ಗಮನಾರ್ಹ.

ಚಂದ್ರಶೇಖರ ಪಾಟೀಲರು, ನವೋದಯ-ನವ್ಯಗಳ ಅರ್ಧ ಶತಮಾನದ (೧೯೨೦-೧೯೭೦) ಅವಧಿಯಲ್ಲಿ ಘಟಿಸದ ಒಂದು ವಿದ್ಯಮಾನ ಸಂಭವಿಸಿದ್ದು ಬಂಡಾಯದ ಅವಧಿಯಲ್ಲಿ ಎಂದು ಹೇಳಿದ್ದಾರೆ.[೨೨] ಈ ದೇಶದ ಹಾಗೆಯೇ ಕರ್ನಾಟಕದ ದಲಿತರು, ಮಹಿಳೆಯರು, ಧಾರ್ಮಿಕ ಅಲ್ಪಸಂಖ್ಯಾತರು ಮೊಟ್ಟಮೊದಲ ಬಾರಿ ಮೌನವನ್ನು ಮುರಿದು ಮಾತನಾಡಿದರು. ಆ ಮಾತು ಸ್ಫೋಟದಂತೆ ಪರಿಣಾಮ ಬೀರಿತು. ಇದೊಂದು ಮಹಾ ಸಾಂಸ್ಕೃತಿಕ ಸ್ಫೋಟವಾಗಿತ್ತು; ಇಡೀ ಕನ್ನಡ ಸಾಹಿತ್ಯಕ್ಕೇ ಹೊಸ ಆಯಾಮವನ್ನು ಮೂಡಿಸಿದ ಸ್ಫೋಟ ಇದು. ಮೊದಲ ಬಾರಿ ದನಿ ಇಲ್ಲದ ಜನ ದನಿ ಎತ್ತಿದಾಗ ಅಲ್ಲಿಯ ವರೆಗೂ ಹೊಟ್ಟೆಯಲ್ಲಿ ಅದುಮಿಟ್ಟುಕೊಂಡಿದ್ದ ನೋವು, ಹತಾಶೆ, ಅಪಮಾನ, ಆಕ್ರೋಶಗಳು ತಮ್ಮ ಅಭಿವ್ಯಕ್ತಿಯಲ್ಲಿ ಕಲಾತ್ಮಕತೆಯನ್ನು ಕಾಣದಿದ್ದುದು ಸಹಜವಾಗಿತ್ತು. ಸಾಹಿತ್ಯಕವಾಗಿ ಅದನ್ನೊಂದು ಲೋಪ ಎನ್ನುವಂತಿರಲಿಲ್ಲ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅದು ಅನಿವಾರ್ಯವೂ ಆಗಿತ್ತು. ಆರಂಭದ ಆವೇಶ ತಗ್ಗಿದ ಮೇಲೆ

೨೧.ಬಂಡಾಯ ಸಾಹಿತ್ಯದ ನೆಲೆ: ಬರಗೂರು ರಾಮಚಂದ್ರಪ್ಪ ಸಂಕ್ರಮಣ ೯೩, ಸಂಪುಟ ೧೫, ಸಂಚಿಕೆ ೫, ಅಕ್ಟೋಬರ ೧೯೭೯

೨೨.ಚಂಪಾ ಕಾಲಂ- ತುಮಕೂರು- ಬಂಡಾಯಕ್ಕೆ ಹೊಸ ತಿರುವು- ಸಂಕ್ರಮಣ ೨೭೬-೨೭೭- ಸಂಪುಟ ೩೦, ಸಂಚಿಕೆ ೮-೯, ಆಗಸ್ಟ್- ಸೆಪ್ಟೆಂಬರ್ ೧೯೯೫

ಅನಂತರದ ಅವಧಿಯಲ್ಲಿ ಬಂಡಾಯ ಸಾಹಿತಿಗಳು ತಮ್ಮ ಕವನ, ಕತೆ, ಕಾದಂಬರಿಗಳಲ್ಲಿ ಅಪರೂಪದ ಕಲಾವಂತಿಕೆಯನ್ನು ಪ್ರದರ್ಶಿಸಿದರು. ಬಂಡಾಯ ವಿಮರ್ಶಕರ ವಿಶ್ಲೇಷಣೆಗಳಲ್ಲಿ ಪ್ರಬುದ್ಧತೆಯೂ ಮೂಡಿ ಬಂತು. ಇದು ಕನ್ನಡ ಸಾಹಿತ್ಯ ಪರಂಪರೆಯ ಮುಂದುವರಿಕೆಯೇ.

"ಎಪ್ಪತ್ತರ ದಶಕದ ಎಲ್ಲ ಜನಪರ ಚಳವಳಿಗಳು ಹುರಿಗೊಳ್ಳುತ್ತ ೧೯೭೯ರಲ್ಲಿ ಬಂಡಾಯ ಸಾಹಿತ್ಯ ರೂಪುಗೊಂಡಬಳಿಕ ಬಂಡಾಯ ಪರಿಕಲ್ಪನೆಯ ಝುಳ ಎಷ್ಟು ಜೋರಾಗಿತ್ತೆಂದರೆ ಕೆಲವರು ಹಳಬರು, 'ಬಂಡಾಯ' ಕೃತಿಗಳನ್ನು ರಚಿಸಿದರು; ಅಡಿಗರಂಥವರು ತಮ್ಮದೊಂದು ಪದ್ಯಕ್ಕೆ 'ಬಂಡಾಯ' ಎಂಬ ಚಾಲ್ತಿ ಶೀರ್ಷಿಕೆ ಕೊಟ್ಟರು. ರಾಮಚಂದ್ರ ಶರ್ಮರಂಥವರು 'ಎಲ್ಲ ಕವಿಗಳೂ ಬಂಡಾಯಗಾರರೇ' ಎಂಬ ಸಾರ್ವಕಾಲಿಕ ಉಕ್ತಿಯೊಂದನ್ನು ಉಗ್ಘಡಿಸಿ ಅದನ್ನು ತಮಗೂ ಅನ್ವಯಿಸಿಕೊಂಡರು. ನವ್ಯದ ನಂತರದ- ಅಂದರೆ ೧೯೭೦ರ ನಂತರ- ಕನ್ನಡ ಸಾಹಿತ್ಯವನ್ನು ನಿರ್ದೇಶಿಸಿದ್ದು ಈ 'ಬಂಡಾಯ' ಮನೋಧರ್ಮದ ಪರಿಕಲ್ಪನೆಯೇ. ಈ ಮನೋಧರ್ಮದ ವಿಶಾಲ ಚೌಕಟ್ಟಿನಲ್ಲಿಯೇ ದಲಿತರ, ಮಹಿಳೆಯರ, ಮುಸ್ಲಿಮರ ಸಾಹಿತ್ಯ ಕೃತಿಗಳ ವೈಶಿಷ್ಟ್ಯವನ್ನು ಕುರಿತು ನಾವೆಲ್ಲ ಮಾತನಾಡುವಂತಾಯಿತು" ಎಂಬ ಚಂದ್ರಶೇಖರ ಪಾಟೀಲರ ಮಾತು ಗಮನಾರ್ಹ.

ಬಂಡಾಯ ಕಾವ್ಯವನ್ನು ಪರಿಚಯಿಸುವ ಗೌರೀಶ ಕಾಯ್ಕಿಣಿ ಹಲವು ಸ್ವಾರಸ್ಯಕರ ವಿಷಯಗಳನ್ನು 'ಸಂಕ್ರಮಣ'ದಲ್ಲಿ ಗಮನಕ್ಕೆ ತಂದಿದ್ದಾರೆ.[೨೩] ಕ್ರಾಂತಿಗೋ ಸ್ವಾತಂತ್ರ್ಯ ಯುದ್ಧಕ್ಕೋ ಒಯ್ಯುವ ಒಂದು ಯುಗ ತಮ್ಮ ಜನ ಜಾಗೃತಿಯ ಚಳುವಳಿಯ ಅಂಗವಾಗಿ ಎದೆ ಬಡಿದುಕೊಳ್ಳುವ ಕೂಗೂ ಸೊಲ್ಲು (slogans)ಗಳನ್ನು ಹೊರಗೆಡಹುವಾಗ ಬಹಳಷ್ಟು ಕಾದು ಕುದಿಯುವ ರಾಷ್ಟ್ರೀಯ ಕವಿತೆಯನ್ನು ಹುಟ್ಟಿಸುವುದುಂಟು. ನಮ್ಮಲ್ಲಿ ೧೯೨೦, ೩೦, ೪೨ರ ಆಂದೋಲನಗಳಲ್ಲಿ ಪ್ರಭಾತಪೇರಿಯ ಹಾಡುಗಳಾಗಿ, 'ಕರೆವುದಿದೋ ನಮ್ಮನ್ನು ರಣಭೇರಿ' ಮಾದರಿಯ ಬೀದಿ ಗೀತಗಳ ನಡುವೆಯೂ ಬೇಂದ್ರೆಯವರ 'ನರಬಲಿ', ಹರೀಂದ್ರನಾಥ ಚಟ್ಟೋಪಾಧ್ಯಾಯರ 'ಶುರೂ ಹುವಾ ಹೈ ಜಂಗ್', ದಿನಕರ ದೇಸಾಯಿಯವರ, 'ರಕ್ತ ಬಾವುಟವು ರೈತರದು!' ಎಂಬ ಕವನಗಳೂ ಮೊಳಗಿದ್ದವು. ಅಂತೂ ಕವಿಗಳನ್ನು ಸೆರೆಮನೆಗೂ, ಸ್ಥಾನ ಬದ್ಧತೆಗೂ, ಹದ್ದುಪಾರಿಗೂ ಅಟ್ಟಿದ್ದವು ಎಂದು ವಿವರಿಸುವರು.

ವಿಯಟ್ನಾಮದ ಮೇಲೆ ಅಮೆರಿಕವು ದಾಳಿ ಮಾಡಿದಾಗ ಆರಾಧ್ಯದ ಹೃದಯ ಚೂರಾಯಿತು. ಆಗ ಪ್ರತಿಭಟನೆಯ ಕಾವ್ಯ ಹೊಮ್ಮಿತು. ಇಂಥ ಸಂದರ್ಭದಲ್ಲೇ

---

೨೩. ಗೌರೀಶ ಕಾಯ್ಕಿಣಿ- ಬಂಡಾಯ ಕಾವ್ಯ: ಒಂದು ಪರಿಚಯ. ಸಂಕ್ರಮಣ ೧೫೯ರಿಂದ೧೬೪, ಸಂಪುಟ ೧೮, ಸಂಚಿಕೆ ೫ರಿಂದ ೧೦, ಅಕ್ಟೋ- ಮಾರ್ಚ್ ೧೯೮೩.

‘ಕೊಳಲು’ – ‘ಪಾಂಚಜನ್ಯ’ವಾಗುತ್ತದೆ. ಆಗ ಕವಿಗಳು ಇತರ ಪ್ರತಿಯೊಬ್ಬರಂತೆಯೇ ಆ ದಳ್ಳುರಿಯಲ್ಲಿ ಸಿಲುಕಿಕೊಳ್ಳುತ್ತಾರೆ. ಶಾಸ್ತ್ರ ಕೆಳಗಿಟ್ಟು ಶಸ್ತ್ರ ಎಳೆದುಕೊಳ್ಳುತ್ತಾರೆ ತಮ್ಮ ಅಂತರಂಗದ ತುಮುಲ ತೋಡಿಕೊಳ್ಳಲಿಕ್ಕೆ ಎಂದು ಕಾಯ್ಕಿಣಿ ಹೇಳಿದ್ದಾರೆ.

ಅಂದರೆ ಬಂಡಾಯ ಕಾವ್ಯ ಐತಿಹಾಸಿಕವಾಗಿ ಹುಟ್ಟಿದ್ದು ಇಂಥ ವಿಪ್ಲವದ ವಾತಾವರಣದಲ್ಲಿ, ಭೂಗತರಾಗಿ, ಜೇಲಿನಲ್ಲಿ ಕೂತು ಮುಳ್ಳು ಬೇಲಿಯ ಶಿಬಿರಗಳಲ್ಲಿ ದುಡಿಯುತ್ತ ಸಿಡಿಮದ್ದಿನ ವಾಸನೆ ದಟ್ಟೈಸಿದಲ್ಲಿ. ಮೊದಲನೆಯದಾಗಿ ಅದು ಸ್ಥಾಪಿತ ವ್ಯವಸ್ಥೆಯ ವಿರುದ್ಧ, ಪ್ರಚಲಿತ ಕಾನೂನಿನ ವಿರುದ್ಧ, ಅನಿಯಂತ್ರಿತ ಸ್ವಚ್ಛಂದ ಆಡಳಿತಗಾರಿಕೆಯ ವಿರುದ್ಧ ಅಥವಾ ಕೆಲವೊಮ್ಮೆ ಆಡಳಿತಗಾರರ ಪ್ರತ್ಯಕ್ಷ ಅಸ್ತಿತ್ವದ್ದೇ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಬೇಕು. ಯಾವದೇ ವ್ಯವಸ್ಥೆಯನ್ನು ಸಮರ್ಥಿಸುವ, ಯಥಾ ಸ್ಥಿತಿಯನ್ನೇ ಕಾಯ್ದುಕೊಳ್ಳುವ ಕಾಯಿದೆ ಅದರ ಆಡಳಿತಗಾರಿಕೆ ಎಲ್ಲ ತತ್ವತಃ ಪ್ರಗತಿ ವಿಕಾಸಕ್ಕೆ ಬಾಧಕವೇ ಇರುತ್ತದೆ ಎನ್ನುವ ಗೌರೀಶ ಕಾಯ್ಕಿಣಿ, ‘ಸಚ್ಚಾ ಜನರಿಗೆ ಸಜಾ ಆಗತೈತೆ! ನಿಜಾ ಹೇಳೋ ಕಾಯ್ದೆನsಃ ಇಲ್ಲಾ! ಬೇಡ್ರಿ ವಾಯ್ದೆ ಅಂತಾ’ ಎಂದು ಹಾಡಿದ ಬೇಂದ್ರೆ ಕವಿತೆಯಲ್ಲಿಯೇ ಬಂಡಾಯವನ್ನು ಕಾಣುವರು. ಕಾಯ್ಕಿಣಿಯವರ ಅಭಿಪ್ರಾಯದಂತೆ ಕೇವಲ ಬೇಂದ್ರೆ ಮಾತ್ರವಲ್ಲ ನವೋದಯದ ಹಲವು ಕವಿಗಳ ಕವಿತೆಗಳಲ್ಲಿ ನಾವು ಬಂಡಾಯವನ್ನು ಗುರುತಿಸಬಹುದಾಗಿದೆ.

ಎರಡನೆಯದಾಗಿ ಅದು ಕಾವ್ಯವೇ ಆಗಿರಬೇಕು. ಅದರಲ್ಲಿ ಪ್ರತಿಭಟನೆ, ಬಂಡಾಯದ ಅಂಶವೇನೇ ಇದ್ದರೂ ಅದು ಬರೆ ಪ್ರಾಸಬದ್ಧ ಛಂದೋಬದ್ಧ ಘೋಷಣೆಗಳಿಂದ ಕಾವ್ಯವೆನಿಸದು ಎನ್ನುವ ಕಾಯ್ಕಿಣಿ ಕವಿಯ ಉದ್ದೇಶ, ಭಾವಾವೇಶಗಳಿಗೆ ಸರಿಸಾಟಿಯಾಗಿ ಅವನ ಕಾವ್ಯ ಸಾಗುತ್ತಿರಬೇಕು ಎನ್ನುತ್ತಾರೆ.

ಮೂರನೆಯದಾಗಿ ಇಂಥ ಕಾವ್ಯ ಸ್ಪಷ್ಟವಾಗಿಯೇ ದಬ್ಬಾಳಿಕೆ, ಕೇಡುಗಳ ಒತ್ತಡಗಳ ವಿರುದ್ಧ ಗುರಿ ಹೊಂದಿರಬೇಕು. ಚೀಪು ಮಾತಿನಲ್ಲಿ ಖಂಡನೆ, ಕಾಲ್ಪನಿಕ ದೌಷ್ಟ್ಯ ದಂಡನೆ ವಾಚಾಳವಲ್ಲದೆ ಹೊರತು ಬಂಡಾಯ ಕಾವ್ಯವಾಗಲಾರದು ಎಂದು ಅವರು ಹೇಳುವರು.

ನಾಲ್ಕನೆಯದಾಗಿ ಇಂಥ ಕಾವ್ಯ ಅನ್ಯಾಯದ ಸಂದರ್ಭದ ನೇರ ಸನ್ನಿವೇಶದಲ್ಲಿಯೇ ಅನುಭವಿಸುತ್ತಿರುವ ಕವಿಯಿಂದ ಹೊಮ್ಮಿದರೆ ಅದು ಇನ್ನೂ ಲೇಸು...

ಕೊನೆಯದಾಗಿ ಇಂಥ ಕಾವ್ಯ ಬಯ್ಗುಳಿಂದ, ಬಿರುನುಡಿಗಳಿಂದ ಇಲ್ಲವೆ ಆಕ್ರೋಶ ಕೋಲಾಹಲದಿಂದಲೇ ತುಂಬಿ ತುಳುಕಬೇಕಾಗಿಲ್ಲ ಎಂದು ಹೇಳುವರು.

ಬಂಡಾಯ ಕಾವ್ಯಕ್ಕೆ ಮಾದರಿಯ ವಾತಾವರಣ ಅಥವಾ ಸನ್ನಿವೇಶ ಯಾವುದು? ಎಂಬ ಮಹತ್ವದ ಅಂಶವನ್ನು ಗೌರೀಶ ಕಾಯ್ಕಿಣಿ ಚರ್ಚಿಸುವರು. ಪರಕೀಯ ಆಳಿಕೆ ಆಡಳಿತದಡಿಗೆ ಕ್ಷಾಮ ಡಾಮರಕ್ಕೆ ಬಲಿಯಾಗಿ ಬಿದ್ದಾಗ, ಪರಚಕ್ರದ ಆಕ್ರಮಣ ಅಥವಾ

ಸರ್ವಾಧಿಕಾರ ಸತ್ತೆಯ ಬಲಾತ್ಕಾರದ, ಅತ್ಯಾಚಾರದ ಹೇರಿಕೆ, ಹತ್ಯಾಕಾಂಡದ ಹೆದರಿಕೆಯಡಿಗೆ ಆ ಕವಿಯು ಉಸಿರಾಡಿಸುತ್ತಿರಬೇಕು. ಅಥವಾ ಅಂಥ ಅನುಭವ ನಿಕಟವಾಗಿ, ಉತ್ಕಟವಾಗಿ ಹೊಂದಿರಬೇಕು. ಆಗ ಆ ಕಾವ್ಯ ಬಂಡುಗಾರನ ನಾಡಿ ಮಿಡಿತವೇ ಆಗುತ್ತದೆ. ಅವನ ಅಸ್ಥಿಮಜ್ಜೆಯೊಳಗೆ ಕೊನರಿ ಹೊರ ಬರುತ್ತದೆ. ಅದೊಂದು ಧಮನಿ- ಸಮಕಾಲೀನ ಸಮಾಜದ ತೀವ್ರ, ಅಸಹ್ಯ ಭಾವನೆಗಳೆಲ್ಲ ಹೊಮ್ಮಿ ಹರಿಯುವ ನೀಲರಕ್ತ ವಾಹಿನಿಯಂತೆ ಆಗಿ ಬಿಡುತ್ತದೆ ಎಂದು ಕಾಯ್ಕಿಣಿ ವಿವರಿಸುವರು.

ವಿಯೆಟ್ನಾಮ್ ಹಿನ್ನೆಲೆಯಲ್ಲಿ 'ಸಂಕ್ರಮಣ'ದಲ್ಲಿ ಪ್ರಕಟವಾದ 'ಮೃತ್ಯುಕಂದರ' ಕವನವನ್ನು ಇಲ್ಲಿ ಉಲ್ಲೇಖಿಸಬೇಕು. ಇದನ್ನು ಬರೆದವರು ಉರ್ದೂ ಕವಿ ಮಖ್ದೂಮ್ ಮುಹಿಯುದ್ದೀನ್. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಅಬ್ದುಲ್ ಮಜೀದ ಖಾನ್. ತುಳಿತ ಎಲ್ಲಿಯೇ ಇರಲಿ ಅದಕ್ಕೆ ಬಂಡಾಯ ಕವಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ. ಅದು ಕರ್ನಾಟಕವೇ ಇರಬಹುದು, ಆಫ್ರಿಕವೇ ಇರಬಹುದು, ದಕ್ಷಿಣ ಅಮೆರಿಕವೇ ಇರಬಹುದು ಅಲ್ಲಿಯ ಜನರ ನೋವಿಗೆ ಬಂಡಾಯ ಸಾಹಿತಿಯ ಸ್ಪಂದನ ಇದ್ದೇ ಇದೆ.

'ಈ ಸರ್ವನಾಶದ ದಾರಿಯಲಿ ಸಾಗು,
ಇದೊಂದು ರಸ್ತೆಯೆ? ಈ ರಸ್ತೆಯಲಿ
ಒಂದು ಹೂವಿಲ್ಲ, ಎಲೆ ಇಲ್ಲ
ಮರವೂ ಇಲ್ಲ, ಫಲವಿಲ್ಲ
ದೃಷ್ಟಿಯೋಡುವವರೆಗೂ ಹಬ್ಬಿದೆ
ಕಪ್ಪು ಸಾಗರವೊಂದು,
ಎತ್ತ ನೋಡಿದರೂ ಭಗ್ನಾವಶೇಷಗಳು,
ಸಾವಿನ ಕಣಿವೆ ಇದು; ದಾಟು ಬೇಗ ಇದನ್ನು
......'

ಹೀಗೆ ಸಾಗುವ ಕವನ ವಿಯಟ್ನಾಮದ ವಿನಾಶಕಾರಿ ಸ್ಥಿತಿಯನ್ನು ಚಿತ್ರಿಸುವಲ್ಲಿ ಯಶಸ್ವಿಯಾಗುತ್ತದೆ.[೨೪] ಕೇವಲ ವಿಯಟ್ನಾಮ್ ಅಲ್ಲ ದಕ್ಷಿಣ ಆಫ್ರಿಕದ ಕಪ್ಪು ಜನರ ಹೋರಾಟದ ಪರವಾಗಿಯೂ ಕವನಗಳು ಪ್ರಕಟವಾಗಿವೆ. ೨೫-೩-೮೮ರಂದು ಗಲ್ಲಿಗೇರಿದ ಏಳು ಜನ ಕಪ್ಪು ಹೋರಾಟಗಾರರಿಗೆ, ೧೮-೪-೮೮ರಂದು ಗಲ್ಲು ಶಿಕ್ಷೆಗೆ ಕಾದಿದ್ದ ೬ ಜನ ಕಪ್ಪು ಹೋರಾಟಗಾರರಿಗೆ, ದ.ಆಫ್ರಿಕದ ವರ್ಣಭೇದ ವಿರೋಧಿ ಜನತೆಗೆ ಅರ್ಪಿಸಲಾದ ಬಂಜಗೆರೆ ಜಯಪ್ರಕಾಶ ಅವರ 'ಸತ್ತು ಬದುಕುವ ಹುಡುಗರಿಗೆ ಚರಮ ಗೀತೆ'ಯನ್ನು ಸಂಕ್ರಮಣದಲ್ಲಿ ಪ್ರಕಟಿಸಲಾಗಿದೆ.[೨೫]

೨೪.ಸಂಕ್ರಮಣ- ೧೯೨.

೨೫.ಸಂಕ್ರಮಣ ೧೯೦.

‘.......

ರಣ ಕಣದ ಸಾವಿನಲ್ಲಿ ಜೊತೆಗಾರರಾಗುತ್ತೇವೆ

ಎಂಬುದಿರಬಹುದು ಇವನ ದೀಕ್ಷೆ

ಸಾವ ಸರಣಿಯ ನಡುವೆ

ಎಂತಾ ಬದುಕಿನ ಆಕಾಂಕ್ಷೆ!

ಇಷ್ಟೆಲ್ಲ ಬೇಕಿಲ್ಲ ಕತೆ;

ಅವನಿಗೆ ಸಾವು ಬೇಕು

ಸಾವು ಬೇಕು ಅವಮಾನಕ್ಕೆ

ಸಾವು ಬೇಕು ಸಾಯಲೊಲ್ಲದ ನೀತಿಗೆ

ಬೋಥಾನಿಗೆ, ಸರ್ಕಾರಗಳಿಗೆ.

......’

ನೋವು ಉಂಡ ದಕ್ಷಿಣ ಆಫ್ರಿಕದ ಜನರ ಚಿತ್ರಣ ನೀಡುವ ಕವಿ ಅವರಿಗೆ ಸಾವು ಏಕಾಗಿ ಬೇಕಾಗಿದೆ ಎಂಬುದನ್ನು ವರ್ಣಿಸುತ್ತಾರೆ. ಕೊನೆಯಲ್ಲಿ ಕವಿತೆಯು, ಬೀಜ ಸತ್ತು ಬೆಳೆ ಮೊಳೆವ ಚಮತ್ಕಾರದಲ್ಲಿ ಭವಿಷ್ಯವನ್ನು ಸೂಚಿಸುತ್ತದೆ.

ಬಂಡಾಯ ಎಂದರೇನು? ನಿಘಂಟುವಿನಲ್ಲಿ ಬಂಡಾಯದ ಅರ್ಥವನ್ನು ಹೀಗೆ ಹೇಳಿದೆ. ‘Quarrelling, revolt’– ಇದು ಸಂಸ್ಕೃತದ ‘ಭಣ್ಣ’ ಮೂಲದಿಂದ ಬಂದಿದೆ. ಮೂಲಾರ್ಥ ಯುದ್ಧ ಎಂದು. ಬಂಡಾಯವೆಂದರೆ ಕನ್ನಡದಲ್ಲಿ ಪ್ರಧಾನಾರ್ಥ ‘revolt’ ಎಂದು. ಇಬ್ಬರು ಸ್ವತಂತ್ರ ರಾಜರ ನಡುವಿನ ಯುದ್ಧ ಬಂಡಾಯವಾಗಲಾರದು. ಒಂದು ರಾಜ್ಯದಲ್ಲಿ ಒಬ್ಬ ರಾಜನ ಕೆಳಗಿನವರಲ್ಲಿ ಯಾರಾದರೂ ರಾಜನ ವಿರುದ್ಧ ಹೋರಾಡಲು ಹವಣಿಸಿದರೆ ಅದನ್ನು ಬಂಡಾಯ. ಒಂದು ವ್ಯವಸ್ಥೆಗೆ ಸೇರಿದ ವ್ಯಕ್ತಿ ಅಥವಾ ಗುಂಪು ಆ ವ್ಯವಸ್ಥೆಗೆ ವಿರುದ್ಧ ಯಾವುದೇ ಕಾರಣಕ್ಕೆ (ಯಾವುದೇ ರೀತಿಯಲ್ಲಿ) ಪ್ರತಿಭಟನೆ ಸಾರುವುದನ್ನು ‘ಬಂಡಾಯ’ ಎನ್ನಬಹುದು. ಬಂಡಾಯ ಸಾಹಿತ್ಯದಲ್ಲಿಯ ಬಂಡಾಯದ ಅರ್ಥವೂ ಅದೇ. ದಡ್ಡುಗಟ್ಟಿದ, ಮಾಲಿನ್ಯ ತುಂಬಿದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ವ್ಯಕ್ತಿಗಳ ಮನಸ್ಸನ್ನು ತಿರುಗಿಸುವ, ಅಂತಹ ಹೋರಾಟಕ್ಕೆ ಸನ್ನಿವೇಶವನ್ನು ನಿರ್ಮಿಸುವ ಉದ್ದೇಶಪೂರ್ಣ ಸಾಹಿತ್ಯವೇ ‘ಬಂಡಾಯ ಸಾಹಿತ್ಯ’.

ಬಂಡಾಯ ಸಾಹಿತ್ಯಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಲು ಅನೇಕ ಪ್ರಯತ್ನಗಳು ಆ ಕಾಲದಲ್ಲಿ ನಡೆದವು. ಸಾಹಿತ್ಯಪತ್ರಿಕೆಗಳಲ್ಲಿ ಈ ಸಂಬಂಧ ಲೇಖನಗಳು ಪ್ರಕಟವಾದವು. ಹೊಸ ಬರೆಹಗಾರರಿಗೆ ಮಾರ್ಗವನ್ನು ತೋರಿಸುವುದು ಇವುಗಳ ಉದ್ದೇಶವಾಗಿತ್ತು. ನವ್ಯೋತ್ತರ ಸಾಹಿತ್ಯವನ್ನು ಯಾವ ಹೆಸರಿನಿಂದ ಕರೆಯಬೇಕು ಎಂಬ ಬಗೆಗೂ ಚರ್ಚೆ ನಡೆಯಿತು. ಸಂಕ್ರಮಣದಲ್ಲಿ ಚೆ.ರಾಮಸ್ವಾಮಿ ಬರೆದ ಲೇಖನ- ದಲಿತ,

ಬಂಡಾಯ, ನವ್ಯೋತ್ತರ ಇತ್ಯಾದಿ...- ಅಭ್ಯಾಸಪೂರ್ಣವಾಗಿದೆ.[೨೬] ಸಂಕ್ರಮಣದಲ್ಲಿಯೇ ಬಂಡಾಯ ಚಳವಳಿಯನ್ನು ಬರಗೂರು ರಾಮಚಂದ್ರಪ್ಪನವರು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.[೨೭] ಸಮಾಜ ಅಥವಾ ಸಂಸ್ಕೃತಿಯ ಯಾವುದೇ ಅಂಗದಲ್ಲಿ ಆಗುವ ಬದಲಾವಣೆಯ ಪರಿಣಾಮ ಉಳಿದ ಅಂಗಗಳ ಮೇಲೂ ಆಗುತ್ತದೆಯೆಂಬ ವೈಜ್ಞಾನಿಕ ಶೋಧನೆಯಿಂದ ೧೯೨೦ರ ನಂತರದಲ್ಲಿ ನಮ್ಮ ಸಮಾಜ ವಿಜ್ಞಾನಿಗಳಲ್ಲಿ ಹೊಸ ರೀತಿಯ ಆಲೋಚನ ಕ್ರಮವೊಂದು ಬೆಳೆಯಿತು. ಈ ಆಲೋಚನೆಯ ಫಲವಾಗಿ, ಯಾವುದೇ ಒಂದು ಸಾಂಸ್ಕೃತಿಕ ಅಥವಾ ಸಾಮಾಜಿಕ ಅಂಗವೂ ತಂತಾನೆ ಪ್ರತ್ಯೇಕವಲ್ಲವೆಂಬ ಭಾವನೆ ಬಲವಾಯಿತು. ಈ ಸಂಶೋಧನೆಯಿಂದ ಸಮಾಜದ ವಿವಿಧ ಘಟಕಗಳ ನಡುವೆ ಇರುವ ಸಂಬಂಧ ಕುರಿತು ಅರಿವು ಹೆಚ್ಚಿತು. ಸಮಾಜದಲ್ಲಿ ನಡೆಯುವ ಸಾಂಸ್ಕೃತಿಕ ಕೊಡುಕೊಳ್ಳುವಿಕೆಗೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳು ಹುಟ್ಟಿದವು. ಈ ಪರಿಣಾಮದ ಹಿನ್ನೆಲೆಯಲ್ಲಿ ಸಾಹಿತ್ಯ, ಸಮಾಜ ಮತ್ತು ರಾಜಕೀಯ ಇವು ಆಳದಲ್ಲಿ ಪ್ರತ್ಯೇಕ ಲೋಕಗಳಲ್ಲ ಎಂಬ ಅರಿವು ಮೂಡಿತು.

ತಾತ್ಪರ್ಯ ಇಷ್ಟೇ; ಸಾಹಿತಿಯಾದವನು ಸಮಾಜದಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುವುದು ಸರಿಯಲ್ಲ. ಪ್ರತ್ಯೇಕೀಕರಣ ಶ್ರೇಷ್ಠತೆಯ ಪ್ರತಿಪಾದನೆಗೆ ದಾರಿಯಾಗುತ್ತದೆ ಎನ್ನುವುದು. ಈ ಹಿನ್ನೆಲೆಯಲ್ಲಿಯೇ ಸಾಹಿತಿಯೊಬ್ಬ ತನಗೆ ತಾನೆ ಗೋಣಗಿಕೊಂಡು ಕೂತಿರುವ ಔಚಿತ್ಯವನ್ನು ಬಂಡಾಯ ಮನೋಧರ್ಮ ಪ್ರಶ್ನಿಸುತ್ತದೆ. ಸಂವೇದನಶೀಲತೆಗೆ, ಪ್ರಜ್ಞೆಯ ಸೂಕ್ಷ್ಮತೆಗೆ ಸಾಕ್ಷಿಯೆನಿಸಿಕೊಂಡ ಸಾಹಿತಿ ಪ್ರತಿಕೂಲ ಪರಿಸ್ಥಿತಿಗೆ ಕಣ್ಣು ಮುಚ್ಚಿಕೊಳ್ಳುವುದು, ತನ್ನದೇ ಬೇರೆ ಲೋಕ, ಸಾಹಿತ್ಯದ್ದೇ ಬೇರೆ ಕೆಲಸ ಎಂದು ಹೇಳುವುದು ನ್ಯಾಯವಲ್ಲ ಎಂದು ಬಂಡಾಯ ಸಾಹಿತಿ ಭಾವಿಸುತ್ತಾನೆ. ಅಸಮಾನತೆಯನ್ನು ಹತ್ತಿಕ್ಕಿ, ಶೋಷಣೆ ರಹಿತ ಸಮಾಜಕ್ಕೆ ಹಾರೈಸುವ ಯಾರೇ ಆಗಲಿ, ಶೋಷಿತರ ದನಿಯಾಗಲೇಬೇಕು. ತಂತಮ್ಮ ಕ್ಷೇತ್ರಗಳಲ್ಲಿ ಈ ಸಮಕಾಲೀನ ವಸ್ತುಸ್ಥಿತಿಯೊಂದಿಗೆ ಸಂಬಂಧ ಸ್ಥಾಪಿಸದಿರುವುದು, ಹೋರಾಡದಿರುವುದು ಹೊಣೆಗಾರಿಕೆಯ ಲಕ್ಷಣವಲ್ಲ. ಅದು ಸೃಜನಶೀಲತೆಯೂ ಅಲ್ಲ. ಸಾಹಿತಿಯಾದವನಿಗೆ ಸಾಮಾಜಿಕ ಬದ್ಧತೆ ಇರಲೇಬೇಕು. ಸಾಹಿತ್ಯ ಮತ್ತು ಬದ್ಧತೆ ಕುರಿತ ಚಂಪಾ ಅವರ ಅಭಿಪ್ರಾಯವನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. (ಪುಟ ೨೦)

ಶೋಷಿತರ ಪರವಾದ ಹೋರಾಟಗಳೊಂದಿಗೆ ಬಂಡಾಯ ಸಾಹಿತಿ ಒಂದಲ್ಲ ಒಂದು ರೀತಿಯ ಸಂಪರ್ಕ ಇಟ್ಟುಕೊಳ್ಳಬೇಕು. ಇದು ಆತನ ಸಾಮಾಜಿಕ ಜವಾಬ್ದಾರಿ. ಹಾಗಾದಾಗ ಮಾತ್ರ ಸಾಹಿತ್ಯ ವಿಮರ್ಶೆಯಲ್ಲಿ ಬಳಕೆಯಾಗುತ್ತಿರುವ ಪ್ರತಿಗಾಮಿ-

೨೬.ಚಿ.ರಾಮಸ್ವಾಮಿ: ದಲಿತ, ಬಂಡಾಯ, ನವ್ಯೋತ್ತರ ಇತ್ಯಾದಿ... ಸಂಕ್ರಮಣ ೧೩೫- ೧೩೬, ಸಂಪುಟ ೧೮, ಸಂಚಿಕೆ ೧೧-೧೨, ಎಪ್ರಿಲ್- ಮೇ ೧೯೮೩

೨೭.ವಿವರಗಳಿಗೆ ನೋಡಿ-ಸಂಕ್ರಮಣ- ೯೩

ಪ್ರಗತಿಗಾಮಿ ಎಂಬ ಪರಿಕಲ್ಪನೆಗೆ ಸಮರ್ಥನೆ ಸಿಗುತ್ತದೆ. ಕಲಾಕೃತಿಯೊಂದು ಯಾವಾಗಲೂ ಸ್ಪಷ್ಟವಾಗಿ ಈ ಧೋರಣೆಗಳನ್ನು ಪ್ರಕಟಿಸಲೇ ಬೇಕು ಎಂಬುದು ನಿಯಮವಲ್ಲ. ಈ ಎರಡು ವಿಭಾಗಗಳಲ್ಲಿ ಕೃತಿ ವಿಂಗಡಣೆ ಮಾಡಿ ಕೈತೊಳೆದುಕೊಳ್ಳುವುದೂ ಸಾಹಿತ್ಯ ವಿಮರ್ಶೆ ಆಗಬಾರದು. ಸಾಹಿತ್ಯ ಸಾಮಾಜಿಕ ಬದುಕನ್ನು ಆಧರಿಸಿ ಹುಟ್ಟುವ ಸೃಜನಶೀಲ ಕ್ರಿಯೆ ಎಂಬ ಮಾತು ಪ್ರಗತಿಶೀಲರ ಕಾಲದಲ್ಲಿಯೇ ಪ್ರತಿಪಾದನೆಯಾಗಿತ್ತು. ಸಾಹಿತ್ಯವು ಸಾಮಾಜಿಕ ಬದುಕನ್ನು ಅನುಸಂಧಾನ ಮಾಡುವುದರಿಂದ ಅದೊಂದು ಸಾಮಾಜಿಕ ಪ್ರಕ್ರಿಯೆ ಎನ್ನಿಸಿಕೊಳ್ಳುವುದು. ಸಾಹಿತ್ಯದಲ್ಲಿ ಅಡಗಿರುವ ಅನುಭವದ್ರವ್ಯದ ಆಕರ ಸಮಾಜವೇ ಆಗಿದ್ದಾಗ ಕೃತಿಯ ಹಿನ್ನೆಲೆಯಲ್ಲಿ ಕೆಲಸ ಮಾಡಿರುವ ಮನಸ್ಸು ಮತ್ತು ಬೌದ್ಧಿಕತೆಯೂ ಆ ಸಮಾಜದಿಂದ ಪ್ರಭಾವಿತವಾಗಿರುತ್ತದೆ. ಇಂಥ ಪ್ರಭಾವಕ್ಕೆ ಒಳಗಾಗಿ ರಚನೆಗೊಳ್ಳುವ ಕೃತಿಗಳು ನಿರ್ದಿಷ್ಟ ವರ್ಗ ಹಿತಾಸಕ್ತಿಗೆ ಅನುಗುಣವಾಗಿರುವ ಸಾಧ್ಯತೆ ಇರುತ್ತದೆ. ಆ ಸಂದರ್ಭಗಳಲ್ಲಿ ಪ್ರತಿಗಾಮಿ- ಪ್ರಗತಿಗಾಮಿ ಪರಿಕಲ್ಪನೆಯನ್ನು ಬಳಸಿ ವಿಮರ್ಶೆ ಮಾಡುವುದು ತಪ್ಪೇನೂ ಅಲ್ಲ.

ಬಂಡಾಯದ ಸಂದರ್ಭದಲ್ಲಿ ಸಾಹಿತ್ಯಪತ್ರಿಕೆಗಳಲ್ಲಿ ಬಂದ ಲೇಖನಗಳು, ಕಥೆ, ಕವನಗಳನ್ನು ಇಲ್ಲಿ ಪರಿಶೀಲಿಸಬೇಕು. 'ಸಾಹಿತ್ಯದಲ್ಲಿ ನಿರೂಪಿತ ಕನ್ನಡಿಗರ ಶೋಷಣೆಯ ಸ್ವರೂಪ' - ಸರೋಜಿನಿ ಪಾ. ಚವಲಾರ, (ಕರ್ನಾಟಕ ಭಾರತಿ ಸಂಪುಟ ೧೭, ಸಂಚಿಕೆ ೧, ಆಗಸ್ಟ್ ೧೯೮೪) ಇದರಲ್ಲಿಯೇ ಬಂದ ಒಂದು ಕವನದ ಶೀರ್ಷಿಕೆ- 'ಕಪ್ಪು ಅಧ್ಯಾಯದ ಕೆಂಪು ಅಕ್ಷರಗಳಿಗೆ' - ಎಚ್.ಎಂ. ಪಟೇಲ ರಂಗೇನಹಳ್ಳಿ; ಸಂಕ್ರಮಣ ೧೮೦ರಲ್ಲಿ ಬಂದ ಅರವಿಂದ ಮಾಲಗತ್ತಿಯವರ ಲೇಖನದ ಹೆಸರು - 'ಭೂತಾರಾಧನೆ: ಒಂದು ಹೇಯ ಸಂಸ್ಕೃತಿ', ವೀರಭದ್ರ ಕೌದಿಯವರ ಸಣ್ಣ ಕತೆ- 'ಮಗ್ಗಾ'; ಸಂಕ್ರಮಣ ೧೯೮ರಲ್ಲಿಯ ಸದಾಶಿವ ಮರ್ಜಿಯವರ ಲೇಖನದ ಹೆಸರು- 'ದಲಿತರ ಮೇಲೆ ದೌರ್ಜನ್ಯ: ಒಂದು ಸಮೀಕ್ಷೆ', ಇದರಲ್ಲಿಯ ಸತ್ಯಾನಂದ ಪಾತ್ರೋಟರ ಕವನದ ಶೀರ್ಷಿಕೆ- 'ನಮ್ಮ ಹೊಲಾ ನಮಗ ಕೊಡಿ'; ಸಂಕ್ರಮಣ ೧೯೩.ರಲ್ಲಿ ಡಾ. ವಿವೇಕಾನಂದ ಸಾಲಿಮಠ ಅವರ ಲೇಖನ- 'ಸರ್ವಜ್ಞನ ಪ್ರತಿಭಟನೆಯ ಧ್ವನಿ'; ಸಂಕ್ರಮಣ ೧೮೩.-೧೮೪ರಲ್ಲಿ ಪ್ರಕಟವಾದ ಚಂದ್ರಶೇಖರ ಧೂಲೇಕರ್ ಅವರ ಕಥೆ- 'ಕೆಂಡದುಂಡೆಗಳು ಮತ್ತು ತೊಟ್ಟಿಕ್ಕುವ ರಕ್ತ'; ಇದರಲ್ಲಿಯೇ ರಂಗಾರೆಡ್ಡಿ ಕೋಡಿರಾಂಪುರ ಅವರು 'ಜನಪದ- ಜನಪರ ಸಂಸ್ಕೃತಿ' ಎಂಬ ಲೇಖನ ಬರೆದಿರುವರು. ಈ ಶೀರ್ಷಿಕೆಗಳ ಮೇಲಿಂದಲೇ ಅವುಗಳ ಸ್ವರೂಪವನ್ನು ಗುರುತಿಸಬಹುದು. ಹೊಸ ಸಾಹಿತ್ಯ ಸಂವೇದನೆಯೊಂದಿಗೆ ಹಳೆಯ ಸಾಹಿತ್ಯವನ್ನು ನಿಕಷಕ್ಕೆ ಒಡ್ಡುವ ಪರಿಯನ್ನು ಸರ್ವಜ್ಞನ ಕುರಿತ ಲೇಖನದಲ್ಲಿ ನೋಡಬಹುದು. ಬಂಡಾಯ ಸಾಹಿತ್ಯದ ಹಿಂದಿರುವ ತಾತ್ವಿಕ ಚಿಂತನೆಯೇ ಇಂಥ ಕತೆ, ಕವಿತೆ, ಲೇಖನ ಬರೆಯುವುದಕ್ಕೆ ಪ್ರೇರಣೆ ನೀಡಿದ್ದು. ಇಂಥ ಲೇಖನಗಳು, ಸಾಹಿತ್ಯ ಬಂಡಾಯದ ಅಭಿವ್ಯಕ್ತಿಯೊಂದಿಗೆ ಸಾಹಿತ್ಯಪತ್ರಿಕೆಗಳಲ್ಲಿ ಪ್ರಕಟಗೊಂಡವು.

ಬಂಡಾಯ ಸಾಹಿತಿಗಳು ಪರಂಪರೆಯ ವಿರೋಧಿಗಳಲ್ಲ. ವಾಸ್ತವವಾಗಿ ಪರಂಪರೆಯನ್ನು ಯಾರೂ ಇಡಿಯಾಗಿ ವಿರೋಧಿಸಬೇಕಿಲ್ಲ; ಪರಂಪರೆ ಚಲನಶೀಲವಾದ್ದು ಎಂಬ ಅರಿವು ಇದ್ದರೆ ಸಾಕು. ಚಾರಿತ್ರಿಕತೆಯ ದೃಷ್ಟಿಯಿಂದ ಪರಂಪರೆಯ ಚಲನೆಯನ್ನು ಎಲ್ಲ ಮಿತಿಗಳೊಂದಿಗೆ ಬಂಡಾಯ ಸಾಹಿತಿಗಳು ಗಂಭೀರವಾಗಿ ಪರಿಗಣಿಸುತ್ತಾರೆ. ಆದರೆ ಯಾವುದೇ ಮೌಲ್ಯವು, ನಂಬಿಕೆ, ವಿಚಾರಗಳು ಸಾರ್ವಕಾಲಿಕ ಸತ್ಯಗಳೇನಲ್ಲ. ಕಾಲ ಬದಲಾದಂತೆ ಅವೂ ಅರ್ಥಕಳೆದುಕೊಂಡು ಸ್ಥಗಿತವಾಗಬಹುದು. ಹೀಗೆ ಸ್ಥಗಿತಗೊಳ್ಳುವ ಅಂಶಗಳು ಸಂಪ್ರದಾಯವೆನ್ನಿಸಿಕೊಳ್ಳುತ್ತವೆ. ಬಂಡಾಯ ಸಾಹಿತಿಗಳು ಇಂಥ ಸ್ಥಗಿತ ಸಂಪ್ರದಾಯ ವಿರೋಧಿಗಳೇ ಹೊರತು ಇಡಿಯಾಗಿ ಪರಂಪರೆಯ ವಿರೋಧಿಗಳಲ್ಲ.

ಪ್ರತಿಭಟನೆಯ ಸಾಧನವಾಗಿ ಸಾಹಿತ್ಯದ ಬಳಕೆ ಎಂಬ ಮಾತು ವಿಚಿತ್ರ ಅನ್ನಿಸಿದರೂ ಸಾಮಾಜಿಕ ಬದ್ಧತೆಯುಳ್ಳ ಲೇಖಕನಿಗೆ ಸಾಹಿತ್ಯ ಪ್ರತಿಭಟನೆಯ ಸಾಧನವೇ ಆಗಿದೆ. 'ಕನ್ನಡ ಕಾವ್ಯ ಮತ್ತು ಪ್ರತಿಭಟನೆ' ಲೇಖನದಲ್ಲಿ ರಹಮತ ತರೀಕೆರೆ ಅವರು ಪ್ರತಿಭಟನೆಯ ವಿವಿಧ ರೂಪಗಳನ್ನು ಪರಿಚಯಿಸಿದ್ದಾರೆ.[೨೮] ದಲಿತ ಬಂಡಾಯ ಸಾಹಿತ್ಯವು ಖಚಿತವಾದ ಸಿದ್ಧಾಂತದ ಅರಿವು ಹೊಂದಿದ್ದವು ಎಂದು ಹೇಳುವ ಅವರ ಲೇಖನವನ್ನು ಸಂಕ್ರಮಣವು ಪ್ರಕಟಿಸಿತ್ತು.

ಬಂಡಾಯದವರ ಸೈದ್ಧಾಂತಿಕ ನಿಲುವುಗಳನ್ನು ಹೀಗೆ ಸಂಗ್ರಹಿಸಬಹುದು-

೧.ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು.

೨.ಸಾಹಿತಿಗೆ ಸಾಮಾಜಿಕ-ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ.

೩.ಅಸ್ಪೃಶ್ಯತೆ, ಜಾತಿ ಪದ್ಧತಿ ಮತ್ತು ಲಿಂಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು.- ಬಂಡಾಯದವರ ಸೈದ್ಧಾಂತಿಕ ನಿಲುವಿನಲ್ಲಿಯೇ ಸಾಹಿತ್ಯ ಪ್ರತಿಭಟನೆಗೆ ಸಾಧನವಾಗುವ ಲಕ್ಷಣಗಳನ್ನು ಹೊಂದಿದೆ.

ಸಾಹಿತ್ಯದಲ್ಲಿ ಪ್ರತಿಭಟನೆ ಏಕೆ ಅಗತ್ಯವಾಗಿದೆ? ಭಾರತೀಯ ಸಾಮಾಜಿಕ ವ್ಯವಸ್ಥೆಯು ಬೇರಾವುದೇ ದೇಶದ ವ್ಯವಸ್ಥೆಗಿಂತಲೂ ಸಂಕೀರ್ಣ ಸ್ವರೂಪದ್ದು. ಇಲ್ಲಿಯ ಸಮಾಜದ ಅಡಿಪಾಯವೇ ಶೋಷಣೆಯಿಂದ ಕೂಡಿದೆ. ಇಲ್ಲಿ ಮಾನವತೆಯ ಘೋರ ಅಪಮಾನವಾಗಿದೆ; ಈ ಅಪಮಾನ ನಿರಂತರ ಮುಂದುವರಿದಿದೆ. ಹೀಗಿರುವಾಗ ಸೂಕ್ಷ್ಮ ಸಂವೇದನೆಯುಳ್ಳ ಲೇಖಕ ತನ್ನಲ್ಲಿರುವ ಮಾನವತೆಯ ಕಾರಣದಿಂದಾಗಿ ಬಂಡಾಯಗಾರನಾಗಬೇಕಾಗುತ್ತದೆ. 'ನಿನ್ನ ಮನೆಯ ಕತ್ತೆ ಇದ್ದರೂ ಹಿಡಿದು ತಾ, ಗೀಚಿ ಒಗೆವೆನು ಬೆಳಗುತ್ತಲೆ ಹತ್ತು ನವ್ಯ ಕವಿತೆ. ಅದೋ ನೋಡು ಕಸಬರಿಗೆ ಮುಗಿಲಲ್ಲಿ ಹೊಲಸನ್ನೆ

೨೮.ಸಂಕ್ರಮಣ: ೧೫೭-೧೫೮ ಸಂಪುಟ ೨೦, ಸಂಚಿಕೆ ೯-೧೦, ಫೆ.-ಮಾರ್ಚ್ ೧೯೮೫

ನೆಕ್ಕುತ್ತಾ ಬಿದ್ದಿಹುದು' ಎನ್ನುವಂತೆ [೨೯] ಕವಿಗೆ ತನ್ನನ್ನು ಆಕರ್ಷಿಸುವ ಎಲ್ಲ ವಿಷಯಗಳ ಬಗ್ಗೆ ಕಾವ್ಯ ಬರೆಯುವ ಸ್ವಾತಂತ್ರ್ಯ ಇದೆ ನಿಜ. ಆದರೆ ತನ್ನ ಸುತ್ತ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ಅವನು ಚಕಾರವೆತ್ತದಿದ್ದರೆ, ಅವನ ಸಾಮಾಜಿಕ ಹೊಣೆಗಾರಿಕೆ ಪ್ರಶ್ನಿತವಾಗುತ್ತದೆ. ಜಡ್ಡುಗಟ್ಟಿಹೋದ ಸಮಾಜ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯ ಪ್ರಯತ್ನ ಸಾಹಿತಿಯಿಂದಾಗಬೇಕು. ಏಕೆಂದರೆ ನೂರಾರು ಜನರೊಂದಿಗೆ ಸಂವಾದ ಮಾಡಬಲ್ಲ ಪ್ರಭಾವಿ ಮಾಧ್ಯಮವಾಗಿರುವ ಸಾಹಿತ್ಯದ ಸೃಷ್ಟಿಕರ್ತ ಅವನು.

ಬಂಡಾಯ ಸಾಹಿತಿಗಳು ಮೊಟ್ಟಮೊದಲು ಮಾಡಬೇಕಾದದ್ದು ಏನು ಎಂಬ ಬಗೆಗೆ ಪೋಲಂಕಿ ರಾಮಮೂರ್ತಿ 'ಶೂದ್ರ'ದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ.[೩೦] ಇದು ಚಳವಳಿಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮಹತ್ವವಾದ್ದು. ಬಂಡಾಯ ಸಾಹಿತಿಗಳು ಮಾಡಬೇಕಾದ್ದು ಅವರು ಬರೆಯುತ್ತಿರುವ ಬಾಸೆ (ಭಾಷೆ)ಯಲ್ಲಿ ಮಾತನಾಡಬೇಕು, ಕೂಡಬೇಕು. ಪರಿಸೆ ನಡೆಸಬೇಕು. ಆಂಡಯ್ಯನಂತೆ ಸಂಸ್ಕೃತವನ್ನು ಹಠದಿಂದ ಹೊರಗೆ ಹಾಕಬೇಕು. ಬಂಡಾಯಕ್ಕೆ 'ಕರೆಯೋಲೆ' ಕೊಡಬೇಕು, 'ಆಮಂತ್ರಣ'ವನ್ನಲ್ಲ. 'ಒಕ್ಕೂಟ' ಮಾಡಬೇಕು, 'ಸಂಕಿರಣ'ವಲ್ಲ; 'ಗೋಷ್ಠಿ'ಯಲ್ಲ. 'ಆರಂಬ' (ಆರು-ನೇಗಿಲು, ಆರಂಬ- ಉಳು) ಮಾಡಬೇಕು, 'ಉದ್ಘಾಟನೆ'ಯಲ್ಲ. 'ಮುಕ್ತಾಯ' ಮಾಡಬೇಕು, 'ಸಮಾರೋಪ'ವಲ್ಲ. ಇಂದು ಭಾಷಿಕ ನೆಲೆಯಲ್ಲಿ ತೋರಬೇಕಾದ ಪ್ರತಿಭಟನೆ. ಈ ಮೂಲಕ ತಮ್ಮದನ್ನು ಉಳಿಸಿಕೊಳ್ಳುವ ಪ್ರಯತ್ನ.

ಸಾಹಿತ್ಯ ಪ್ರತಿಭಟನೆಯ ದಾರಿ ಹಿಡಿದಾಗ ಅದು ಕಲಾತ್ಮಕ ಅಂಶದಿಂದ ಹಿಂದಾಗಬಾರದು. ಕಲಾತ್ಮಕತೆ ಕಳೆದು ಹೋದರೆ ಅದು ಸಾಹಿತ್ಯವಾಗದೆ ಭಾಷಣವೋ ಘೋಷಣೆಯೋ ಇನ್ನೇನೋ ಆಗಬಹುದು. ಸಾಹಿತ್ಯದ ಅಭಿವ್ಯಕ್ತಿ ಕ್ರಮವು ವಿಶಿಷ್ಟವಾದದ್ದು. ಇದು ಕಾಂತಾ ಸಮ್ಮಿತ ಗುಣ ಹೊಂದಿರುವಂಥದ್ದು. ಆ ಗುಣದ ಸಾಮರ್ಥ್ಯದಿಂದ ಅದು ಸಮಾಜದಲ್ಲಿ ಬದಲಾವಣೆ ತರಬಲ್ಲುದು. ದೇವನೂರು ಮಹಾದೇವ ಗದ್ಯವನ್ನು ಪದ್ಯದಂತೆ ಬಳಸುತ್ತಾ ಅತ್ಯುತ್ತಮ ಕಲಾಕಾರನಾಗುವ ಸಂದರ್ಭದಲ್ಲಿಯೇ ಒಂದು ವರ್ಗದ ಜನರು ಅನುಭವಿಸುತ್ತಿರುವ ಶೋಷಣೆಯ ನೋವನ್ನು ಮುಟ್ಟಿಸುವಲ್ಲಿಯೂ ಯಶಸ್ವಿಯಾಗುತ್ತಾರೆ. ಡಿ.ಸಿದ್ದಲಿಂಗಯ್ಯ ಬಿಚ್ಚಿಡುವ ಸಮಾಜದ ಒಂದು ವರ್ಗದ ನೋವು ಹಲವು ವೇದಿಕೆಗಳಲ್ಲಿ ಬಿಗಿಯುವ ಭಾಷಣಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿದೆ.

ಸಾಹಿತ್ಯ ಮಾಧ್ಯಮವನ್ನು ಬಂಡಾಯಕ್ಕೆ ಆರಿಸಿಕೊಂಡಿರುವ ಕವಿಗಳು ಹೇಳುವ ಅನುಭವ- ವಿಚಾರ ತನ್ನೆಲ್ಲ ಗಾಢತೆಯಲ್ಲಿ ವ್ಯಕ್ತವಾಗಲು, ಅದೇ ತೀವ್ರತೆಯಲ್ಲಿ ಓದುಗನನ್ನು

೨೯.ಕರ್ನಾಟಕ ಭಾರತಿ- ಸಂಪುಟ ೧೮, ಸಂಚಿಕೆ ೨-೩

೩೦. ಬಂಡಾಯ ಸಾಹಿತ್ಯ- ಪೋಲಂಕಿ ರಾಮಮೂರ್ತಿ, ಶೂದ್ರ; ಮಾರ್ಚ್ 1992, ಪುಟ 8.

ಮುಟ್ಟಿ ನಿಶ್ಚಿತ ಪರಿಣಾಮ ನೀಡಲು, ಕಾಲಿಕವಾಗದೆ, ಪ್ರಚಾರ ಸಾಹಿತ್ಯವಾಗದೆ, ಪ್ರತಿಭಟನೆ ಸೂಸುತ್ತಲೇ ಬಹುಪಾಲು 'ಸಾಹಿತ್ಯ'ವಾಗುಳಿಯಲು ಪ್ರಜ್ಞಾವಂತರಾಗುವ ಅಗತ್ಯವಿದೆ. ಬಂಡಾಯ ರಮ್ಯ-ನವ್ಯಗಳ ಒಳ್ಳೆಯ ಗುಣಗಳನ್ನು ಒಳಗೊಳ್ಳಬೇಕಾಗಿದೆ. ಸಿದ್ದಲಿಂಗಯ್ಯನವರ ಅನೇಕ ಕವಿತೆಗಳು ಜಾನಪದ ಸತ್ವದಿಂದ ಗೇಯತೆಯನ್ನು ಪಡೆದು ಹಾಡಾಗಿ ಸಮುದಾಯವನ್ನು ತಟ್ಟುತ್ತದೆ. ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿಬಂದಾಗ'ದಲ್ಲಿ ಅನೇಕ ತ್ರಿಪದಿಗಳು ಇವೆ.

ಸಾಹಿತ್ಯದ ಧೋರಣೆಗಳು ಬದಲಾಗುವಂತೆ ಸಾಹಿತ್ಯದಿಂದಾಗುವ ಪ್ರಯೋಜನದ ಬಗೆಗೂ ಕಾಲಕಾಲಕ್ಕೆ ಧೋರಣೆಗಳು ಬದಲಾಗುತ್ತ ಬಂದಿವೆ. ಪ್ರಗತಿಶೀಲರ ಕಾಲದಲ್ಲಿ ಕಾವ್ಯ ಸಮಾಜ ಪರಿವರ್ತನೆಗೆ, ನೊಂದವರ ಕಣ್ಣೀರು ಒರೆಸಲಿಕ್ಕೆ ಎನ್ನುವ ಪ್ರಚಾರ ಪಡೆಯಿತು. ಆದರೆ ನವ್ಯದ ಸಂದರ್ಭದಲ್ಲಿ ಸಮಾಜ ಸುಧಾರಣೆಯ ವಿಷಯ ಹಿಂದೆ ಬಿತ್ತು. ಕಾವ್ಯ ಎಲ್ಲ ರೀತಿಯಿಂದ ಪರಿಪೂರ್ಣವಾಗಬೇಕೆಂದು ಅವರು ಪ್ರಯತ್ನಿಸಿದರು. ಆಗಲೇ 'ಕಲೆಗಾಗಿ ಕಲೆ' ಎಂಬ ಮಾತು ಕೇಳಿ ಬಂತು.

ಕಲೆ ಕಲೆಗಾಗಿಯೋ ಇಲ್ಲ ಕಲೆ ಬದುಕಿಗಾಗಿಯೋ ಎಂಬ ಚರ್ಚೆ ಸಾಹಿತ್ಯದಲ್ಲಿ ಹಲವಾರು ಸಲ ನಡೆದಿದೆ. ಈ ಚರ್ಚೆಯ ಸಂದರ್ಭದಲ್ಲಿಯೇ ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಎಂಬ ಮಾತು ಕೇಳಿಬಂತು. ಇದರ ಹಿಂದೆಯೇ ಸಾಹಿತ್ಯ ಜನಪರವಾಗಬೇಕೆಂಬ ಕೂಗು. ಸಾಹಿತಿ ಜನಪರ ಆಗುವುದು ಹೇಗೆ ಎಂಬ ಚರ್ಚೆಯೂ ಬಂತು. 'ಜನಪರ' ಪರಿಕಲ್ಪನೆ ಬಂಡಾಯ ಮತ್ತು ದಲಿತ ಸಾಹಿತ್ಯದ ಸಂದರ್ಭದಲ್ಲಿ ಪ್ರಮುಖವಾಗಿ ಚಲಾವಣೆಗೆ ಬಂತು. ಇದರ ಬೇರುಗಳು 'ಕಲೆಗಾಗಿ ಕಲೆಯೋ ಕಲೆ ಬದುಕಿಗಾಗಿಯೋ' ಎಂಬ ಚರ್ಚೆಯಲ್ಲಿಯೇ ಇವೆ. ಆದರೆ 'ಜನಪರ' ಎಂಬ ಮುದ್ರೆ ಬಿದ್ದದ್ದು ದಲಿತ ಬಂಡಾಯದ ಕಾಲದಲ್ಲಿಯೇ. 'ಜನಪರ'ದ ಬಗೆಗಿನ ಚರ್ಚೆಯ ಪೂರ್ವದಲ್ಲಿಯೇ 'ಸಮಕಾಲೀನತೆ'ಯ ಚರ್ಚೆಯೂ ನಡೆದಿದೆ. ಸಾಹಿತ್ಯ ಮತ್ತು ಸಮಕಾಲೀನತೆಯ ಬಗೆಗಿನ ಚರ್ಚೆಯ ಒಡಲಲ್ಲೂ ಜನಪರ ಅಂಶಗಳು ಇವೆ.

ಸಾಹಿತಿ ಜನಪರ ಆಗಿರುವುದು ಸಾಹಿತ್ಯ ಜನಪರ ಆಗುವುದು ಎಂದರೆ ಏನು? ಹೇಗೆ? ಜನಪರ ಎಂದರೆ ಯಾವ ಜನಪರ? ಎನ್ನುವ ಪ್ರಶ್ನೆಯೂ ಉದ್ಭವಿಸುತ್ತದೆ. ಈ ಸಂಬಂಧದಲ್ಲಿ ಬಸವರಾಜ ಸಬರದ ಬರೆದ ಲೇಖನವೊಂದನ್ನು 'ಸಂಕ್ರಮಣ'ವು ಪ್ರಕಟಿಸಿತ್ತು. ಸಮಾಜದ ಎಲ್ಲ ವರ್ಗದ ಜನರೂ ಸುಖದಿಂದ ಇರಲಿ ಎಂಬುದು ಒಳ್ಳೆಯ ಆದರ್ಶವಾದರೂ ಅದು ಸಾಧ್ಯವಿಲ್ಲದ ಮಾತು. ಎಲ್ಲಾ ಜನರು ಸುಖದಿಂದಿರಲಿ ಎಂಬ ಹಾರೈಕೆಯೇ ಮೋಸದ್ದು. ದಲಿತರಿಗೆ ಪರವಾದರೆ ಸವರ್ಣೀಯರಿಗೆ ದುಃಖ, ಬಡವರ ಪರವಾದರೆ ಶ್ರೀಮಂತರಿಗೆ ದುಃಖ, ಜಾತ್ಯತೀತರ ಪರವಾದರೆ ಜಾತಿವಾದಿಗಳಿಗೆ ತಳಮಳ, ಪ್ರಗತಿಪರರ ಪರವಾದರೆ ಸಂಪ್ರದಾಯವಾದಿಗಳಿಗೆ ಕೋಪ. ಈ ಕಾರಣಕ್ಕಾಗಿ ಎಲ್ಲರೂ

ಎಲ್ಲ ಕಾಲಕ್ಕೂ ಸುಖದಿಂದ ಇರುವುದು ಸಾಧ್ಯವಿಲ್ಲದ ಮಾತು. ಅಂಥ ಹಾರೈಕೆ ಆದರ್ಶವಾದರೂ ಅದು ಪಲಾಯನವಾದ. ಬಂಡಾಯ ಸಾಹಿತಿ ಈ ಅಸಾಧ್ಯತೆಯನ್ನು ಅರಿತುಕೊಂಡು ತಾನು ಜನಪರ ಆಗಬೇಕು ಎಂದು ಹಂಬಲಿಸುತ್ತಾನೆ. ಇಲ್ಲಿ ಜನ ಎಂದರೆ ಬಡವರು, ದಲಿತರು, ಶೋಷಿತರು. ಇವರ ಪರವಾಗಿ ಅವನು ಧ್ವನಿ ಎತ್ತಿದರೆ ಅವನು ಜನಪರ ಆಗಬಲ್ಲನು.

ದಲಿತ ಬಂಡಾಯ ಚಳವಳಿಗೂ ಜನಪರ ಆಶಯಗಳಿಗೂ ಆಂತರ್ಯದಲ್ಲಿ ಸಂಬಂಧವಿದೆ. ಕನ್ನಡ ಕಾವ್ಯದ ಇತಿಹಾಸವನ್ನು ಅವಲೋಕಿಸಿದಾಗ ಮೊದಲ ಅವಧಿಯಲ್ಲಿ ರಾಜ ಪ್ರಭುತ್ವಕ್ಕೆ ಪರವಾದ ಸಾಹಿತ್ಯ ಬಂತು. ಪರಂಪರಾಗತ ಕಥಾ ನಾಯಕರನ್ನು ತಮ್ಮ ಪೋಷಕರೊಂದಿಗೆ 'ತಗುಬ್ಚಿ' ಹೇಳುವ ಪರಂಪರೆ ಮೊದಲಾಯಿತು. ವಚನಕಾರರ ಕಾಲದಲ್ಲಿ ಜನಪರ ಸಾಹಿತ್ಯ ಮೂಡಿಬಂತು. ಬಡವರು, ದಲಿತರು, ಮಹಿಳೆಯರನ್ನು ಮೇಲೆತ್ತುವ ಉದ್ದೇಶದ ಸಾಹಿತ್ಯ ಅದು. ನಡುಗನ್ನಡ ಕಾವ್ಯದಲ್ಲಿ ಧರ್ಮಪರ ಮೌಲ್ಯಗಳು ಹೆಚ್ಚಾಗಿ ಕಾಣಿಸಿಕೊಂಡವು. ಮತ್ತೆ ಹೊಸಗನ್ನಡ ಕಾವ್ಯದಲ್ಲಿ ಜನಪರ ಮೌಲ್ಯಗಳು ಪ್ರಧಾನ ಸ್ಥಾನ ಪಡೆದುಕೊಂಡವು. ವಚನ ಸಾಹಿತ್ಯದಲ್ಲಿಯಂತೆ ದಲಿತ ಬಂಡಾಯ ಕಾವ್ಯದಲ್ಲಿ ಜನಪರ ಆಶಯವೇ ಪ್ರಧಾನ ಮೌಲ್ಯವಾಗಿ ಬೆಳೆದು ಬಂತು.

ಜನಪರ ಆಶಯದ ಕಾರಣದಿಂದ ದಲಿತ ಬಂಡಾಯ ಸಾಹಿತ್ಯ ಉಳಿದ ಸಾಹಿತ್ಯ ಮಾರ್ಗದಿಂದ ಹೇಗೆ ಭಿನ್ನ? ನವೋದಯ ಕಾವ್ಯದಲ್ಲಿ ವಸಾಹತುಶಾಹಿ ವ್ಯವಸ್ಥೆಯ ಶೋಷಣೆ ತೀವ್ರವಾಗಿ ಅಭಿವ್ಯಕ್ತಿ ಪಡೆಯಲಿಲ್ಲ. ಎಲ್ಲರದೂ ಉದ್ಧಾರವಾಗಬೇಕು ಎಂಬ ತಾತ್ವಿಕತೆ ನವೋದಯ ಕಾವ್ಯದ್ದು. ನವ್ಯ ಕಾವ್ಯ ವ್ಯಕ್ತಿಕೇಂದ್ರಿತವಾಗಿ ಜನಸಾಮಾನ್ಯರಿಂದ ದೂರವುಳಿಯಿತು. ಆದರೆ ಹೊಸಗನ್ನಡ ಕಾವ್ಯದ ಸಂದರ್ಭದಲ್ಲಿ ದಲಿತ ಬಂಡಾಯ ಕಾವ್ಯ ಮಾತ್ರ, ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಿರೋಧಿಸುತ್ತಿದೆ. ನವೋದಯ ಕಾವ್ಯ ಈ ದೇಶದ ಸಂಸ್ಕೃತಿ ಸೌಂದರ್ಯವನ್ನು ಆರಾಧಿಸುತ್ತದೆ. ಆದರೆ ದಲಿತ ಬಂಡಾಯ ಕಾವ್ಯ ಅದೇ ಸಂಸ್ಕೃತಿಯನ್ನು ಪ್ರಶ್ನಿಸುತ್ತದೆ, ಪ್ರತಿಭಟಿಸುತ್ತದೆ. ಆ ಮೂಲಕ ಜನಸಾಮಾನ್ಯರ ದನಿಯಾಗಿ ಕಲಾತ್ಮಕ ರೂಪ ಪಡೆಯುತ್ತದೆ. ದಲಿತ ಬಂಡಾಯದವರಲ್ಲಿ ಜಾತಿ ಪದ್ಧತಿಯ ಬಗೆಗೆ, ವರ್ಗ ಪದ್ಧತಿಯ ಬಗೆಗೆ, ಯಜಮಾನ ಸಂಸ್ಕೃತಿಯ ವಿರುದ್ಧ ಉಗ್ರ, ಹೋರಾಟವಿದೆ. ಈ ಪ್ರತಿಭಟನೆಯಲ್ಲೂ ದಲಿತ ಬಂಡಾಯ ಕವಿಗಳು ಕಲಾತ್ಮಕತೆಯನ್ನುಳಿಸಿಕೊಂಡಿದ್ದು ಮಹತ್ವದ್ದು. ಸಂಘಟನೆ, ಹೋರಾಟಗಳೇ ನವ್ಯೋತ್ತರ ಸಾಹಿತ್ಯದ ನೆಲೆಗಟ್ಟು ಆಗಿರುವುದರಿಂದ ಅದರಲ್ಲಿ ಸಾಮೂಹಿಕ ಶಿಸ್ತು ಇದೆ. ಶೋಷಣೆಯೇ ವಸ್ತುವಾಗಿ ಅನೇಕರಲ್ಲಿ ಅಬಿವ್ಯಕ್ತಿ ಪಡೆದರೂ ವೈವಿಧ್ಯತೆಯನ್ನು ಸಾಧಿಸಿದ್ದು ನವ್ಯೋತ್ತರದ ಹೆಗ್ಗಳಿಕೆ.

ದಲಿತ -ಬಂಡಾಯ ಸಾಹಿತ್ಯದ ಜನಪರ ನಿಲುವಿನ ಇನ್ನೊಂದು ಮಜಲು ಅನೇಕ

ಮಹಿಳೆಯರು ಅಭಿವ್ಯಕ್ತಿಗೆ ಮುಂದಾದದ್ದು. ನವೋದಯ ನವ್ಯದ ಸಂದರ್ಭದಲ್ಲಿ ನಗಣ್ಯವಾಗಿದ್ದ ಮಹಿಳೆಯರ ಸಂಖ್ಯೆ ದಲಿತ ಬಂಡಾಯದ ಸಂದರ್ಭದಲ್ಲಿ ಗಣನೀಯವಾಗಿ ಹಿಗ್ಗಿತು. ಬಂಡಾಯ ಚಳವಳಿ ಪುರುಷ ಹೆಚ್ಚು- ಸ್ತ್ರೀ ಕಡಿಮೆ ಎಂಬ ವ್ಯರ್ಥ ವಾದವನ್ನು ತಳ್ಳಿ ಹಾಕಿತು.ಇದರಿಂದ ಅನೇಕ ಮಹಿಳೆಯರು ಪುರುಷರಿಗೆ ಸಮಾನವಾಗಿ ಬರೆಯುತ್ತಿದ್ದಾರೆ. ಬಂಡಾಯದ ಸಂದರ್ಭದಲ್ಲಿ ಸಂಕ್ರಮಣ, ಶೂದ್ರ, ರುಜುವಾತು, ಸಂಚಯ, ಸಾಹಿತ್ಯ ಸಂವಾದ ಮೊದಲಾದ ಸಾಹಿತ್ಯಪತ್ರಿಕೆಗಳು ಹೊಸ ಹೊಸ ಲೇಖಕಿಯರನ್ನು ಪರಿಚಯಿಸಿವೆ. ಸ್ತ್ರೀಯರು ಮುಕ್ತವಾಗಿ ತಮ್ಮ ಸಮಸ್ಯೆಯನ್ನು ಸಾಹಿತ್ಯದ ಮೂಲಕ ತೋಡಿಕೊಂಡಿದ್ದಾರೆ. ಬಿ.ಟಿ.ಲಲಿತಾ ನಾಯಕ ಅವರ 'ನಂ ರೂಪ್ಲಿ' ಸಂಕಲನದಲ್ಲಿಯ ಈ ಸಾಲುಗಳನ್ನು ನೋಡಬೇಕು:

"ನಮ್ಮ ರೂಪ್ಲಿ ರಮಣಿಯರನು
ಕಚ್ಚೆ ಹರುಕ ಧನಿಕ ನಾಯಿ
ಕಣ್ಣು ಹಾಕಿ ಕಾಡುತ್ತಿರಲು
ಮೌನವಾಗಿ ಅತ್ತೆವು
ಒಳಗೊಳಗೇ ಸತ್ತೆವು
....
ನಮ್ಮ ರಸಿಕ ಹಾಡು ಈಗ
ಗುಡುಗಿನಂತೆ ಮೊಳಗಿದೆ
ಕುಣಿತ ರುದ್ರ ನಾಟ್ಯವಾಗಿ
ವಂಚಕರೆದೆ ನಡುಗಿದೆ...."

ಅತ್ಯಂತ ಮುಕ್ತವಾಗಿ ಮಹಿಳೆಯರು ಅಭಿವ್ಯಕ್ತಿಗೆ ಮುಂದಾಗಿದ್ದು ನವ್ಯೋತ್ತರ ಸಾಹಿತ್ಯದ ವಿಶೇಷತೆ. ಸಾಹಿತ್ಯಪತ್ರಿಕೆಗಳ ಜೊತೆಯಲ್ಲಿ 'ಲಂಕೇಶ್ ಪತ್ರಿಕೆ' ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನು ಸಾಹಿತ್ಯ ಕ್ಷೇತ್ರಕ್ಕೆ ಪರಿಚಯಿಸಿತು. ಲಲಿತಾ ನಾಯಕ, ವೈದೇಹಿ, ಸಾರಾ ಅಬೂಬಕರ ಮೊದಲಾದವರೆಲ್ಲ 'ಲಂಕೇಶ್ ಪತ್ರಿಕೆ' ಮೂಲಕ ಪ್ರಸಿದ್ಧಿಗೆ ಬಂದವರು. ಅದುವರೆಗೆ ಅನಾವರಣಗೊಳ್ಳದೆ ಇದ್ದ ಮಹಿಳಾ ಲೋಕ ಸಾಹಿತ್ಯದಲ್ಲಿ ಬಹು ಬಗೆಯಲ್ಲಿ ಅನುಭವವನ್ನು ವ್ಯಕ್ತಪಡಿಸಿತು. ಅದಕ್ಕೆ ಕೆಲವು ಉದಾಹಣೆಗಳನ್ನು ಇಲ್ಲಿ ನೋಡಬಹುದು-

ರುಜುವಾತು ಪತ್ರಿಕೆಯಲ್ಲಿ ಬಂದ ಈ ಕವನ ನೋಡಿ-

ಕಾಡಿನ ದಾರ್‍ಯಾಗ ಬರೂ
ಮುಂದೊಬ್ಬ ಹುಡುಗೀಗಿ, ದಾರಿತಪ್ಪಿ
ಕಂಟ್ಯಾಗ ಸಿಕ್ಕು, ಪಾರಾಗೂ ಮುಂದ,
ಮೈ ತುಂಬ ಮುಳ್ಳ ತಾಕಿ,

ಗಿರಿ ಮೂಡಿದುವು.

ಅತ್ಲು, ಅತ್ಲು ಕಾಡಿನ ಕಲ್ಲೂ

ಕಣ್ಣೀರ ಹಾಕಿದುವು

ಆದ್ರ, ಏನ ಮಾಡೂದು?

ಹುಡುಗಗ ಹುಡುಗೀ ಎದೀ

ಒಳಗ ಬಿದ್ದ ಬರೀ ಕಾಣ್ಲಲ್ಲಾ, ಮಲೀ ಮ್ಯಾಲ ಕೊರದ ಗೆರಿನಽ ಕಾಣ್ತು,

ಎಡಗಾಲಿಂದ ಸರಿಸಿ ಹೋಗಿ ಬಿಟ್ಟಾ.

ಹೇಳ, ಮಲ್ಲಿಕಾರ್ಜುನಾ

ಮನಸ ಕೊಚ್ಚಿ ಆಗಿದ್ರೂ,

ತೊಗಲ ಸೊಚ್ಛಿದ್ರ, ಸಾಕಂತ

ಅದೇ ಪ್ರೀತೆಂತ

ಈ ಪ್ರೀತಿ ಪರಿ ಗೊತ್ತಿದ್ದೇ

ಅಕ್ಕ ಕಾಡ ದಾರಿ ಗೋಜಿಗೇ ಹೋಗ್ಲಿಲ್ಲಾ

ಸೀದಾ ಮ್ಯಾಲೆ ಏರಿ ಏರಿ

ನಿನ್ನಲ್ಲಿ ಬಂದ್ಲು.

ಈ ಲೋಕದ ಗಂಡಗಳನ್ನ

ಒಲಿಯೊಳಗಿಟ್ಲು....[೩೧]

ಇಲ್ಲಿಯ ಭಾಷೆ ಹಾಗೂ ಅನುಭವ ಎರಡೂ ವಿಶೇಷವಾದ್ದು. ಮಹಿಳೆ ಮಾತ್ರ ತರ್ಕಿಸಬಲ್ಲ ವಿಚಾರ ಇಲ್ಲಿದೆ.

ಉತ್ತಿ ಬಿತ್ತಿ ಬೆಳೆದು ಕಟಾವಾಗಿ

ಎಲ್ಲ ಮುಗಿದ್ದಿದ್ದರೂ ಇನ್ನೂ ಫಲವತ್ತಾಗಿದ್ದೆ

ನಾನೇನು ಮಾಡಲಿ?

ಮುಂಗಾರಿನ ಹೊಳೆಯಂತೆ ಉಕ್ಕುವ

ನನ್ನನ್ನು ಅವರು ಲೀಟರುಗಳಲ್ಲಿ ಅಳೆಯುತ್ತಿದ್ದರು

ಕೆಲವರು ಬೇಲಿ ಕಟ್ಟಲು ಇನ್ನು ಕೆಲವರು

ಬಾಟಲಿಯಲ್ಲಿ ತುಂಬಿ ಬಿರಡೆ ಹಾಕಲೆತ್ನಿಸುತ್ತಿದ್ದರು......

ನನ್ನ ರಾತ್ರಿಗಳಲ್ಲಿ ಪಿಸುಗುಡು

ಧ್ವನಿಗಳನ್ನು ಹಿಡಿದಿಡುವ ಹಠದಲ್ಲಿ

ಅವರು ನನ್ನ ಕಿವಿ ಕತ್ತರಿಸಿದರು

೩೧.ಪ್ರೇಮಿ- ಶಶಿಕಲಾ ವಸ್ತ್ರದ- ರುಜುವಾತು ಸಂಚಿಕೆ ೪- ಅಕ್ಟೋ-ಡಿಸೆಂ. ೮೧.

ಕಾಲಿಗೆ ಗೂಟ ಬಡಿದು ತುಟಿ ಹೊಲಿದು
ನಡೆ ನುಡಿ ತಿದ್ದಲು ಬಯಸಿದರು...[೩೨]

ಇಂಥ ಅನುಭವವನ್ನು ಹೆಣ್ಣು ಹೇಳಿಕೊಳ್ಳುವುದು ಒಂದು ಕಾಲದಲ್ಲಿ ಅತ್ಯಂತ ದುಸ್ತರವಾಗಿತ್ತು. ಆದರೆ ಇಂದು ಅದನ್ನು ಬಹಿರಂಗವಾಗಿ ಹೇಳಿಕೊಳ್ಳುವ ಎದೆಗಾರಿಕೆಯನ್ನು ಆಕೆ ತೋರಿಸುತ್ತಾಳೆ. ಇದು ಅತ್ಯಂತ ಮಹತ್ವದ ಬದಲಾವಣೆ.

......ನಿಜ ಪ್ರೀತಿಯೆಂದರೆ
ಮಧುರನಾದದ ಅಲೆಯೊಂದು
ಒಳಗೊಳಗೆ ಕದಲಿದಂತೆ
ಭ್ರಮೆಗೆ ಕಡೆದಿಟ್ಟ ಮತ್ತೊಂದು ಕನಸಿನಂತೆ
ಮಾರವಾಡಿಯಂಗಡಿಯ ನಯವಾದ
ಬಿಳಿ ಹುಡುಗನಂತೆ
ಸಂಜೆ ಬೆಳಕು
ಕಣ್ಣ ಒಳಗೆಲ್ಲೋ ಬಿಂಬಿಸಿ
ದೀಪ ಹಚ್ಚಿದಂತೆ.[೩೩]

ಪ್ರೀತಿಯನ್ನು ಅನಾವರಣಗೊಳಿಸುವಲ್ಲಿಯ ಹೊಸತನ ತಾನೇ ತಾನಾಗಿ ಕಣ್ಣಿಗೆ ಕಟ್ಟುತ್ತದೆ. 'ಮಾರವಾಡಿಯಂಗಡಿಯ ನಯವಾದ ಬಿಳಿ ಹುಡುಗನಂತೆ' ಎಂಬ ಉಪಮೆ ಕನ್ನಡ ಸಾಹಿತ್ಯದಲ್ಲೇ ಅತ್ಯಂತ ನವೀನವಾದದ್ದು ಮತ್ತು ಅದು ಮಹಿಳೆಯೊಬ್ಬಳಿಂದ ಸ್ಫುರಿಸಲು ಸಾಧ್ಯವಾಗುವಂಥದ್ದು. ಬಂಡಾಯ ಮನೋಧರ್ಮ ಸಾಹಿತ್ಯ ಚಳವಳಿಯಲ್ಲಿ ಕಾಣಿಸಿಕೊಂಡಾಗ ಇಂಥದ್ದೆಲ್ಲ ಸಾಧ್ಯವಾಗುತ್ತದೆ. ಸಾಹಿತ್ಯಪತ್ರಿಕೆಗಳು ಇಂಥವನ್ನು ಪ್ರಕಟಿಸತೊಡಗಿದಾಗ ಹಲವರು ಅದರಿಂದ ಪ್ರೇರಣೆ ಪಡೆದದ್ದು ಸಾಹಿತ್ಯ ಚರಿತ್ರೆಯ ಒಂದು ತಿರುವು.

ಮೌಲ್ಯ ಮಾಪನ: ಜನಪರ, ಪ್ರತಿಗಾಮಿ, ಸಮಕಾಲೀನ, ಬದ್ಧತೆ, ಸಾಮಾಜಿಕ ಮೌಲ್ಯ ಮೊದಲಾದ ಪಾರಿಭಾಷಕಗಳೇ ನವ್ಯ ವಿಮರ್ಶೆಯಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಒಂದು ಕೃತಿಯನ್ನು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಆಶಯಗಳಿಂದ ನೋಡುವುದು, ಅಂದರೆ ಕೃತಿಯ ಮೌಲ್ಯಮಾಪನಕ್ಕೆ ಸಾಹಿತ್ಯೇತರ ಮಾನದಂಡವನ್ನು ಬಳಸುವುದು ನವ್ಯೋತ್ತರ ವಿಮರ್ಶೆಯ ಮುಖ್ಯ ಲಕ್ಷಣ. ಜನಪ್ರಿಯ ಸಾಹಿತ್ಯದಲ್ಲಿಯ ಜನವಿರೋಧಿ ಧೋರಣೆಯನ್ನು ಪರೀಕ್ಷಿಸುವುದು ನವ್ಯೋತ್ತರ ವಿಮರ್ಶೆಯ ಪ್ರಮುಖ ಕಾಳಜಿಗಳಲ್ಲಿ ಒಂದಾಯಿತು.ನವ್ಯೋತ್ತರ ವಿಮರ್ಶೆ ಕೃತಿ ವಿಮರ್ಶೆಯಿಂದ ಸಂಸ್ಕೃತಿಯ ವಿಮರ್ಶೆಯ ಕಡೆಗೆ ಮುಖ ಮಾಡಿತು. ಇದನ್ನು ಮಹತ್ವದ

೩೨.ಎಲ್ಲ ಮುಗಿದಿದ್ದರೂ, ಇನ್ನೂ...- ಪ್ರತಿಭಾ ನಂದಕುಮಾರ. ರುಜುವಾತು-೪೩
೩೩.ಆ ದಡವ ಮುಟ್ಟಿಲ್ಲ- ಪಿ.ಚಂದ್ರಿಕಾ- ಸಂಚಯ-ಸಂಪುಟ ೯, ಸಂಚಿಕೆ ೨, ಮಾರ್ಚ್- ಏಪ್ರಿಲ್ ೯೮

ಬದಲಾವಣೆ ಎಂದು ಗುರುತಿಸಬೇಕು. ಸಾಹಿತ್ಯ ಬದುಕಿನ ಪ್ರತಿಬಿಂಬ ಆದಾಗ ಬದುಕು ಸಮಾಜದ ಒಂದು ಘಟಕವಾಗುತ್ತದೆ. ಆಗ ಸಾಹಿತ್ಯದ ಅಧ್ಯಯನ ಸಮಾಜದ ಅಧ್ಯಯನವೂ ಆಗುತ್ತದೆ. ಸಮಾಜದ ಅಧ್ಯಯನವೆಂದರೆ ಅದು ಸಂಸ್ಕೃತಿಯ ಅಧ್ಯಯನ. ವಿಮರ್ಶೆಯ ಸಂದರ್ಭದಲ್ಲಿ ಸಂಸ್ಕೃತಿಯ ಪ್ರಶ್ನೆಗಳು ಬಂದಾಗ ಅವು ಕಂಡುಕೊಳ್ಳುವ ನೆಲೆಗಳು ಒಂದೇ ರೀತಿ ಇರುವುದಿಲ್ಲ. 'ಕೃತಿ-ಸಂಸ್ಕೃತಿ'ಯ ವಾಗ್ವಾದಗಳು ಸಂಸ್ಕೃತಿಯನ್ನು ಪಠ್ಯದಲ್ಲಿ ಹುಡುಕುವುದರಲ್ಲಿ ಕೊನೆ ಕಾಣುತ್ತವೆ. ಅದರ ಆಚೆಗೆ ವಿಚಾರ ಮಾಡುವಾಗ ಇಷ್ಟು ಸಾಕೆ? ಈಚಿನ ವರ್ಷಗಳಲ್ಲಿ ಸಾಹಿತ್ಯ ವಿಮರ್ಶೆಯಲ್ಲಿ ಚಾಲ್ತಿಗೆ ಬಂದ 'ಪರ್ಯಾಯ ಸಂಸ್ಕೃತಿ' 'ಪ್ರತಿ ಸಂಸ್ಕೃತಿ' 'ಉಪ ಸಂಸ್ಕೃತಿ'ಯ ವಾಗ್ವಾದಗಳು ಬೇರೆ ರೀತಿಯ ಮಾನದಂಡವನ್ನು ಬಳಸತೊಡಗಿವೆ.

ವಿಮರ್ಶಕರು ಹೇಗೆ ಸಾಹಿತ್ಯವನ್ನು ಸಾಂಸ್ಕೃತಿಕ ನೆಲೆಯಲ್ಲಿ ಪರೀಕ್ಷಿಸಲು ಮುಂದಾಗುತ್ತಾರೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ. 'ಕುಂವೀಯವರ ಕಥಾ ಸಾಹಿತ್ಯ'ವನ್ನು ಸಮೀಕ್ಷಿಸುವ ಕುಂಸಿ ಉಮೇಶ[೩೪] - "ಕುಂವೀ ಬಂಡಾಯ ಪರಂಪರೆಯ ಮುಖ್ಯ ವಾಹಿನಿಯಲ್ಲಿ ಗುರ್ತಿಸಿ ಕೊಂಡವರು. ಇವರನ್ನು ಓದುವುದೇ ಈ ಕಾರಣಕ್ಕೆ. ಕತೆಗಳ ಹಂದರದಲ್ಲಿ ಭಾರತೀಯ ನೆಲೆಯ ಮುಖ್ಯ ಸ್ತರದ ಅಡಿಯಲ್ಲಿ ಅಡಗಿರುವ ಪ್ರಭು ಸಂಸ್ಕೃತಿಗೆ ಅಭಿಮುಖವಾಗಿ ಸೆಣೆಸುವ ಒಂದು ಪರಿಶಿಷ್ಟ ಸಂಸ್ಕೃತಿಯ ಸ್ಪಷ್ಟ ನೆಲೆಗಳನ್ನು ಆ ಮೂಲಕ ಜನಾಂಗೀಯ ಹಾಗೂ ಪ್ರಾದೇಶಿಕ ಸ್ಪಷ್ಟತೆಯನ್ನು ಉರಿವ ನಿಜಗಳ ಮೂಲಕ ಗುರುತಿಸುವ ಕುಂವೀಯವರ ಇತ್ತೀಚಿನ 'ಸುಶೀಲ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ' ಹಾಗೂ 'ಅಪೂರ್ವ ಚಿಂತಾಮಣಿ ಕಥೆ' ಎಂಬ ಎರಡು ಕಥಾ ಸಂಕಲನಗಳನ್ನು ಅಭ್ಯಾಸ ಮಾಡುವ ನೆಪದಲ್ಲಿ ಈ ಟಿಪ್ಪಣಿ... ಭಾರತೀಯ ಮನಸ್ಸು ಮೂಲಭೂತವಾಗಿಯೇ ಹಿಂಸಾತ್ಮಕ ಧೋರಣೆಯನ್ನು ಅಂತರಂಗೀಕರಿಸಿಕೊಂಡು ಬೆಳೆಯುವ ಸಾಧ್ಯತೆಯನ್ನು ಹೊಂದಿದೆ. ಭಾರತೀಯನ ಮನೋಭಾವ ರೂಪಿಸಲ್ಪಡುವುದು ಶ್ರೇಣೀಕೃತ ಜಾತಿ ಪದ್ಧತಿ ಮತ್ತು ಜಮೀನ್ದಾರಿ ಬಂಡವಾಳಶಾಹಿ ಶೋಷಣೆಯ ವ್ಯಸ್ಥಿತ ರೂಪದ ಸಾಮೂಹಿಕ ಸಂಬಂಧಗಳ ಹಿನ್ನೆಲೆಯಲ್ಲಿಯೇ, ಮುಖ್ಯವಾಗಿ ರೂಪಿಸಲ್ಪಡುವ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಹಿಂಸೆಯನ್ನು ಹುಟ್ಟುಹಾಕುವುದು ಮತ್ತು ಹಾಗೆ ಉದ್ಭವಿಸುವ ಹಿಂಸೆಯನ್ನು ನಿಯಂತ್ರಣದ ಮೂಲಕ ಜನರು ಸಹಿಸಿಕೊಂಡು ಜೀವಿಸುವಂತೆ ಮಾಡುವುದು ಈ ಸಂಸ್ಕೃತಿಯ ಮುಖ್ಯ ಅಂಶಗಳು.." ಎಂದು ಪೀಠಿಕೆಯನ್ನು ಹಾಕಿಕೊಂಡು ಸಮೀಕ್ಷೆಯನ್ನು ಮುಂದುವರಿಸುತ್ತಾರೆ. ನವ್ಯೋತ್ತರ ಕಾಲದ ವಿಮರ್ಶಕರು ಕೃತಿಯನ್ನು ಯಾವ ದೃಷ್ಟಿಕೋನದಿಂದ ನೋಡುತ್ತಿದ್ದಾರೆ ಎನ್ನುವುದನ್ನು ಇದು ವಿವರಿಸಬಲ್ಲುದು.

'ಸಂಕ್ರಮಣ'ದಲ್ಲಿ[೩೫] ಪುಸ್ತಕ ವಿಮರ್ಶೆಯ ಸಂದರ್ಭದಲ್ಲಿ ಬಂದ ಈ

---

೩೪. ಸಂಕ್ರಮಣ-೨೮೬-೨೮೭
೩೫. ಸಂಕ್ರಮಣ-೨೯೩

ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತ ಎನ್ನಿಸುತ್ತದೆ. "ಲಕ್ಷ್ಮಣ್‌ರ 'ಬದುಕು' ಮುಖೇನ ದಲಿತ ಕಾದಂಬರಿ"ಯ ವಿಶ್ಲೇಷಣೆಯಲ್ಲಿ ತೊಡಗುವ ಬಿದರಹಳ್ಳಿ ನರಸಿಂಹಮೂರ್ತಿ "ಯಾವುದೇ ಉಪಸಂಸ್ಕೃತಿಯ ಒಳ ನೋಟ ಯಥಾರ್ಥವಾಗಿ ದಕ್ಕುವುದು ಅದರ ಒಳಗೆ ಬದುಕಿರುವವರಿಗೆ ಮಾತ್ರ ಎಂಬುದೂ ಸತ್ಯ. ಈ ದೃಷ್ಟಿಯಿಂದ ದಲಿತ ಕಾದಂಬರಿಗಳ ಅಧ್ಯಯನಕ್ಕೆ ಒಂದು ವಿಶೇಷ ಅರ್ಥ ಬರುತ್ತದೆ.... ದಟ್ಟ ಜೀವನಾನುಭವದ ಅಪ್ಪಟ ಕಥನವೇ ದಲಿತ ಕಾದಂಬರಿಯ ಆತ್ಮ. ಕತೆಗಾಗಿ ಪರದಾಡುವ ಬರ ಅಥವಾ ಕತೆಗಾಗಿ ಕತೆ ಹೇಳುವ ತೆವಲು ದಲಿತ ಕಾದಂಬರಿಗಿಲ್ಲ. ಸ್ಥಾಪಿತ ಪ್ರಧಾನ ಸಂಸ್ಕೃತಿಗೆ ಬುಡಮೇಲಾಗಿ ಕಾಣುವಂಥ ಅಧೀನ ಸಂಸ್ಕೃತಿಯ ವಾಸ್ತವದ ಅನಾವರಣ, ಸ್ಥಾಪಿತ ಮೌಲ್ಯಗಳನ್ನು ಇರಿದು ಕೊಂದು ತನ್ನರಿವಿನ ಹೊಸ ಮೌಲ್ಯಗಳ ಸಸಿ ನೆಡುವ ಇಂಗಿತ ಹೊತ್ತಿರುತ್ತದೆ. ಕಂಡದ್ದನ್ನು ಕಂಡ ಹಾಗೆ ಉಂಡದ್ದನ್ನು ಉಂಡಹಾಗೆ ಹೇಳುತ್ತ ಹೋದರೆ ಸಾಕು ಕತೆ ಹೇಳುವಿಕೆಯೂ ಕೈಗೂಡುತ್ತದೆ, ವಿಚಾರಗಳ ತಲೆಕೆಳಗು ಮಾಡುವಿಕೆಯೂ ಸಾಧ್ಯವಾಗುತ್ತದೆ. ಸಾವಿರಾರು ವರ್ಷಗಳಿಂದ ಬಚ್ಚಿಟ್ಟ ಹೃದಯಗಳ ಗುಣವೇ ಅಂಥದ್ದು...." ಸಾಂಸ್ಕೃತಿಕ ನೆಲೆಯಲ್ಲಿ ಕೃತಿ ಮೌಲ್ಯಮಾಪನಕ್ಕೆ ತೊಡಗುವ ಪರಿ ಇಲ್ಲಿಯದು.

ಸಂಕ್ರಮಣದ ಪುಸ್ತಕ ವಿಮರ್ಶೆ ವಿಭಾಗದಲ್ಲಿ ಪ್ರಕಟವಾದ ಸಿದ್ದನಗೌಡ ಪಾಟೀಲರ 'ಸಾಕ್ಷಿಗಳು ಮಾರಾಟಕ್ಕಿವೆ' ಕವನ ಸಂಕಲನದ ವಿಮರ್ಶೆಯನ್ನು ಇಲ್ಲಿ ಪರಿಶೀಲಿಸಬೇಕು[೩೬] - "... ಮೊದಲು ಪ್ರಕಟವಾದ 'ನಾ ಬಸ್ಯಾ ಅಂತ' ಕವನ ಸಂಕಲನದಲ್ಲಿ ಮೂಡಿ ಬಂದ ಸಮಾಜವಾದ, ಪ್ರಜಾಪ್ರಭುತ್ವದ ರಾಜಕೀಯ ಧೋರಣೆಗಳು ಈ ಸಂಕಲನದಲ್ಲೂ ಮೂಡಿ ಬಂದಿವೆ. ಇಲ್ಲಿ ಹಾಡಿನ ಧಾಟಿಯಲ್ಲಿ ಹೊಸೆದ ಕವನಗಳಿವೆ. ಅವರ ಪ್ರಾರಂಭದ ಕವನಗಳಲ್ಲಿ ಆಳವಾದ ಸಂಕೀರ್ಣತೆ, ಪ್ರಖರತೆ ಮಂದವಾಗಿ ಮೂಡಿದ್ದು ಕಂಡು ಬರುತ್ತದೆ. ಇಂಥ ಕವನಗಳಲ್ಲಿ ಕೇವಲ ಉದ್ದೇಶವನ್ನು ಹೆಚ್ಚು ಸೂಕ್ತವಾಗಿ ಹಿಡಿದಿಡಲು ಯತ್ನಿಸಿದಂತಿದೆ. ಆದರೆ, ಕೇವಲ 'ಉದ್ದೇಶ' ಒಂದಿದ್ದರೆ ಅದು ಕಾವ್ಯವಾಗಲಾರದು. ಅದರ ಜೊತೆ ಕಾವ್ಯದ ಪ್ರಮುಖ ಲಕ್ಷಣಗಳು ಬರುವುದು ಅಷ್ಟೇ ಮುಖ್ಯ. ಧ್ವನಿ, ಬಂಧ ಇವು ಇದ್ದರೆ ಅದು ಒಂದು ಒಳ್ಳೆ ಕಾವ್ಯ...." ಹೀಗೆ ಸಾಗುವ ವಿಮರ್ಶೆ ಕಾವ್ಯ ಹೇಗಿದೆ, ಹೇಗಿದ್ದರೆ ಚೆನ್ನ ಎಂದು ಅತ್ಯಂತ ಸೂಕ್ಷ್ಮವಾಗಿ ಹೇಳಿದೆ. ಹೊಸದಾಗಿ ಕಾವ್ಯ ಪ್ರವೇಶ ಮಾಡುವವರಿಗೆ ಇದು ಒಂದು ಪಾಠ. ಸಂಕ್ರಮಣದಲ್ಲಿ ಕೆ.ವಿ. ತಿರುಮಲೇಶ ಅವರು ಕೆ.ಎನ್.ಶಿವತೀರ್ಥನ್ ಅವರ 'ಬೆಸ್ತ' ಸಂಕಲನ ಮತ್ತು ಅದರಲ್ಲಿಯ 'ಗೆಂಡಗಯ್ಯ' ಕವನದ ಬಗ್ಗೆ ಬರೆದ ವಿಮರ್ಶೆ ಅಧ್ಯಯನಯೋಗ್ಯವಾಗಿದೆ. ಇವೆಲ್ಲ ಕಾವ್ಯ ಮಾರ್ಗದಲ್ಲಿ ಪ್ರವೇಶ ಮಾಡುವವರಿಗೆ ಮಾರ್ಗದರ್ಶಕಗಳಾಗಿವೆ.

ಸಾಂಸ್ಕೃತಿಕ ಅಧ್ಯಯನದ ರೂಢಿ ಹಿಂದಿನಿಂದಲೂ ಇದೆ. ಚಿದಾನಂದ

---

೩೬. ಸಂಕ್ರಮಣ-ಸಂಪುಟ ೨೫, ಸಂಚಿಕೆ ೫

ಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನವನ್ನು ಮಾಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಅಲ್ಲಿಯ ಸಂಸ್ಕೃತಿಯ ಗ್ರಹಿಕೆಗೂ ನವ್ಯೋತ್ತರ ಕಾಲದ ಸಾಹಿತ್ಯ ವಿಮರ್ಶೆಯಲ್ಲಿ ಬಳಕೆಯಾದ ಸಂಸ್ಕೃತಿಗೂ ಅಂತರವಿದೆ. ಇದು ದೇಶೀ ಸಂಸ್ಕೃತಿಯ ಅಧ್ಯಯನ. ಅಖಂಡ ಭಾರತೀಯ ಸಂಸ್ಕೃತಿ, ಅಖಂಡ ಕರ್ನಾಟಕ ಸಂಸ್ಕೃತಿ ಎಂಬ ಕಲ್ಪನೆಯನ್ನು ಭಂಜನೆ ಮಾಡಿ ಬಹು ಸಂಸ್ಕೃತಿ ಕಲ್ಪನೆಯನ್ನು ಪ್ರತಿಪಾದಿಸುವ ಇವು ಏಕತೆಗಿಂತ ಬಹುತ್ವವನ್ನು ಮೆಚ್ಚುತ್ತವೆ.

"ಕೃತಿ ಯೊಂದರ 'ವಸ್ತು' (content) ಎಂತಹದು, ಈ 'ವಸ್ತು'ವಿನ ಸಾಮಾಜಿಕ, ಸಾಂಸ್ಕೃತಿಕ ನೆಲೆ ಎಂತಹದು ಮತ್ತು ಯಾವ ವರ್ಗದ ಮೌಲ್ಯಗಳನ್ನು ಧೋರಣೆಗಳನ್ನಾಗಿ ಸ್ವೀಕರಿಸಲಾಗಿದೆ ಹಾಗೂ ಈ ಧೋರಣೆಗಳು ಪ್ರಗತಿಪರವಾಗಿದ್ದಾವೆಯೋ ಇಲ್ಲವೇ ಎಂಬ ಪ್ರಶ್ನೆಗಳನ್ನು ಇಟ್ಟುಕೊಂಡು ಉತ್ತರ ಕಂಡುಕೊಳ್ಳುವ ವಿಮರ್ಶೆ ವಸ್ತುವಾದಿ ವಿಮರ್ಶೆ" ಎಂದು ಎಸ್.ಶಿವಾನಂದ ಗುರುತಿಸುವರು.[೩೭] ಇದು ರೂಪವಾದಿ ವಿಮರ್ಶೆಗೆ ಪ್ರಬಲ ಪ್ರತಿಕ್ರಿಯೆಯಾಗಿ ಬಂದದ್ದು ಎಂದು ಅವರು ಹೇಳುವರು. ಒಂದು ರೀತಿಯಲ್ಲಿ ಇದು 'ಧೋರಣ ನಿಷ್ಠ ವಿಮರ್ಶೆ'. ಇಲ್ಲಿಯ ವಿಮರ್ಶಕನಿಗೆ ಸಾಮಾಜಿಕ ಎಚ್ಚರ, ಸಾಂಸ್ಕೃತಿಕ ಜವಾಬ್ದಾರಿ ಇರಬೇಕು. ಜೊತೆಯಲ್ಲಿ ವಿಮರ್ಶೆಗೆ ಒಂದು ಶಿಸ್ತು ಇರಬೇಕಾದದ್ದು ದೊಡ್ಡ ಜವಾಬ್ದಾರಿ. 'ರೂಪನಿಷ್ಠ ವಿಮರ್ಶೆ ಒಂದು ರೀತಿಯಲ್ಲಿ ಭಾಷಾ ಶಾಸ್ತ್ರೀಯ ಅಧ್ಯಯನ ಎಂಬಂತೆ ಭಾಸವಾದರೆ ಈ ವಸ್ತುವಾದಿ ವಿಮರ್ಶೆ ಮತ್ತೊಂದು ರೀತಿಯಲ್ಲಿ ಸಮಾಜ ಶಾಸ್ತ್ರೀಯ ಅಧ್ಯಯನವಾಗಿಬಿಡುವ ಸಂಭವ ಇಲ್ಲವೆಂದಲ್ಲ. ಆದ್ದರಿಂದ ಇಂಥ ಅತಿರೇಕಗಳ ಬಗೆಗೆ ಈ ವಿಮರ್ಶಕ ಎಚ್ಚರ ವಹಿಸಬೇಕಾಗುತ್ತದೆ.

ಕೇಶವ ಶರ್ಮ ಕೂಡ 'ಕೃತಿ ವಿಮರ್ಶೆಯಿಂದ ಕನ್ನಡದಲ್ಲಿ ಸಂಸ್ಕೃತಿಯ ವಿಮರ್ಶೆಯ ಕಡೆಗೆ ಹೊರಳಿದ್ದು ಬಹಳ ಮುಖ್ಯವಾದ ಪರಿವರ್ತನೆಯಾಗಿದೆ'[೩೮] ಎಂದು ಹೇಳುವರು. ಅವರ ದೃಷ್ಟಿಯಲ್ಲಿ ಸಾಹಿತ್ಯದ ಪ್ರಶ್ನೆಯೆನ್ನುವುದು ಯಾವತ್ತೂ ಸಾಂಸ್ಕೃತಿಕ ಅಭ್ಯಾಸದ ಪ್ರಶ್ನೆಯೇ ಆಗಿರುತ್ತದೆ.

ಸಂಸ್ಕೃತಿಯ ನೆಲೆಯಲ್ಲಿ ಬೆಳೆದ ವಿಮರ್ಶೆ ಜನಪದ ಕಥೆಗಳನ್ನೂ ವ್ಯಾಪಿಸಿದೆ. ಎಸ್.ಶಿವಾನಂದ ಅವರು ಸಂಕ್ರಮಣದಲ್ಲಿ[೩೯] "ಜನಪದ ಕಥೆಗಳ ಸಂಸ್ಕೃತಿ ವಿಮರ್ಶೆ" ಯಾವ ರೀತಿ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಲ್ಲಿಯ ಅವರ ಮಾತುಗಳನ್ನು ಇಲ್ಲಿ ಲಕ್ಷಿಸಬೇಕು: "... .. ಜನಪದ ಕಥೆಗಳು ಸಮಕಾಲೀನತೆಯ ತುರ್ತಿನಿಂದ ಹೊರತಾದವು; ವೈಯಕ್ತಿಕತೆಯ ಛಾಪಿಲ್ಲದಂಥವು; ಇವು ಅವಾಸ್ತವ- ಕಾಲ್ಪನಿಕ- ರಮ್ಯ- ಕಟ್ಟು ಕಥೆಗಳು ಹಾಗೂ ಪಲಾಯನವಾದೀ ಕಥೆಗಳು ಎಂಬಂತಹ ಅಲಿಖಿತ

---

೩೭. ಸಂಕ್ರಮಣ ೮೭-೮೮
೩೮.ಸಂಕ್ರಮಣ- ೩೨೩.
೩೯.ಸಂಕ್ರಮಣ- ೩೨೪.

ಪೂರ್ವಾಗ್ರಹಗಳು ಸಾಹಿತ್ಯ ವಿಮರ್ಶಕರ ಸುಪ್ತ ಪ್ರಜ್ಞೆಯಲ್ಲಿ ಗುಪ್ತವಾಗಿರುವಂತಿವೆ. ಹಾಗೆಯೇ ಸಾಹಿತ್ಯ ವಿಮರ್ಶೆ ಬೇರೆ, ಜಾನಪದ ಅಧ್ಯಯನವೇ ಬೇರೆ ಎಂಬ ಧೋರಣೆ ಜಾನಪದ ವಿದ್ವಾಂಸರಲ್ಲಿ ಅಂತಸ್ಥವಿರುವಂತಿದೆ. ಜಾನಪದ ಅಧ್ಯಯನ ಕೇವಲ ಸಾಹಿತ್ಯಾಧ್ಯಯನವಲ್ಲ; ಮತ್ತು ಶಿಷ್ಟ ಸಾಹಿತ್ಯವನ್ನು ಅರ್ಥೈಸಲು ಹಾಗೂ ನಿಷ್ಕರ್ಷಿಸಲು ನೆರವಾಗುವುದಿಲ್ಲ ಎಂಬ ಆತಂಕ-ಭಯ ಇಲ್ಲಿದೆ.

ಜಾನಪದವನ್ನು ಕುರಿತ ಸಾಹಿತ್ಯ ವಿಮರ್ಶಕರ ಅವಜ್ಞೆ ಹಾಗೂ ಅಪಕಲ್ಪನೆಯಾಗಲಿ ಅಥವಾ ಸಾಹಿತ್ಯ ವಿಮರ್ಶೆ ಕುರಿತಂತೆ ಜಾನಪದ ವಿದ್ವಾಂಸರ ಅಪನಂಬಿಕೆಯಾಗಲಿ- ಈ ಎರಡೂ ಧೋರಣೆಗಳು ಆರೋಗ್ಯಕರವೇನಲ್ಲ. ನವೋದಯದ ರಸನಿಷ್ಠ ವಿಮರ್ಶೆಯಾಗಲಿ, ನವ್ಯದ ವ್ಯಕ್ತಿನಿಷ್ಠ- ಕೃತಿನಿಷ್ಠ ವಿಮರ್ಶೆಯಾಗಲಿ ಸಮೂಹನಿಷ್ಠ ಜಾನಪದಕ್ಕೆ ನ್ಯಾಯ ಒದಗಿಸಲಾರವು ಎಂಬ ವಾದದಲ್ಲಿ ಹುರುಳಿಲ್ಲದಿಲ್ಲ.

ಸಾಹಿತ್ಯ ವಿಮರ್ಶೆ ಮತ್ತು ಜಾನಪದ ಅಧ್ಯಯನ - ಇವೆರಡೂ ಪರಸ್ಪರ ಸಂಧಿಸುವ ಮತ್ತು ಒಂದು ಇನ್ನೊಂದನ್ನು ಬೆಳೆಸುವ / ಬೆಳಗಿಸುವ ಸ್ಥಿತಿ ಈಗ ನಿರ್ಮಾಣವಾಗಿದೆ. ಸಾಹಿತ್ಯ ವಿಮರ್ಶೆ ಇವತ್ತು ಸಂಸ್ಕೃತಿ ನಿಷ್ಠ ವಿಮರ್ಶೆಯಾಗಿ ಬೆಳೆಯುತ್ತಿರುವ ಪರಿಯೆ ಜಾನಪದ ಅಧ್ಯಯನ ಮತ್ತು ಸಂಸ್ಕೃತಿ ವಿಮರ್ಶೆ ಬೇರೆಬೇರೆ ಅಲ್ಲ; ಹಾಗೂ ಅವುಗಳ ನಡುವೆ ಕರುಳು ಬಳ್ಳಿಯ ಅಂತಃಸಂಬಂಧವಿದೆ ಎಂಬುದನ್ನು ತೋರಿಸುತ್ತದೆ."

ಜೀನಹಳ್ಳಿ ಸಿದ್ದಲಿಂಗಪ್ಪನವರ ಜನಪದ ಕಥಾ ಸಂಕಲನಗಳನ್ನು ವಿಮರ್ಶಿಸುವ ಶಿವಾನಂದ, ನವ್ಯೋತ್ತರ ವಿಮರ್ಶೆಯ ಇನ್ನೊಂದು ಮೈಲಿಗಲ್ಲಾದ ಸ್ತ್ರೀವಾದಿ ದೃಷ್ಟಿಕೋನವನ್ನು ಅಲ್ಲಿ ಬಳಸುತ್ತಾರೆ. ಮುಕ್ಕುಡಿಗ ಕಥೆಯಲ್ಲಿ ಮುಕ್ಕುಡಿಗ ನ್ಯಾಯ ಹೇಳುವ ಒಬ್ಬ ಪಂಚಾಯಿತಿದಾರ- ಅಂದರೆ ಒಬ್ಬ ನ್ಯಾಯವಾದಿ ಹಾಗೂ ಗಣ್ಯವ್ಯಕ್ತಿ. ಅವನ ಹೆಂಡತಿ ಮನೆಯೊಳಗೆ ಮತ್ತು ಹೊರಗೆ ಆತನನ್ನು ಏಕವಚನದಲ್ಲಿ ಸಂಬೋಧಿಸುತ್ತಾಳೆ. ಅವನು ತಿಳಿಹೇಳಿದರೂ ಪ್ರಯೋಜನವಾಗುವುದಿಲ್ಲ. ಆಕೆಯನ್ನು ಮುಕ್ಕುಡಿಗ ಬಡಿದು ಸಾಯಿಸುತ್ತಾನೆ. ಅವಳು ಸತ್ತುಹೋದರೂ ಅವನು ಮಾಮೂಲಿನಂತೆಯೇ ಇರುತ್ತಾನೆ. ಇದನ್ನು ಶಿವಾನಂದ ವಿಮರ್ಶಿಸುವುದ ಹೀಗೆ:- "ಮಾಮೂಲಿನಂತೆ ಇಲ್ಲ ಎಂಬುದು ಅವನ ಮನಸ್ಥಿತಿಯನ್ನು- ಅಂದರೆ ಅವಳ ಸಾವಿನಿಂದ ವಿಚಲಿತನಾಗದೆ, ಯಾವ ಅಳುಕೂ ಇಲ್ಲದೆ, ನಿರುಮ್ಮಳವಾಗಿ ನಿಶ್ಚಿಂತನಾಗಿದ್ದ- ಎಂಬುದನ್ನು ಪ್ರತಿಬಿಂಬಿಸುತ್ತದೆ. ಈ 'ಮಾಮೂಲಿ' ನಿಶ್ಚಿಂತ ಮನಸ್ಸಿನ ಹಿಂದೆ ಹೆಂಡತಿಯ ಸಾವಿಗೆ ತಾನು ಕಾರಣನಲ್ಲ; ಬದಲಿಗೆ ಅವಿಧೇಯತೆ ಹಾಗೂ ಉದ್ಧಟತನಗಳಿಂದಾಗಿ ತನ್ನ ಸಾವಿಗೆ ತಾನು ತಾನೇ ಹೊಣೆಗಾರಳು ಎಂಬ ದೃಢೀಕೃತ ನೈತಿಕತೆ ಇದೆ. ಈ ನೈತಿಕತೆಯೊಳಗೆ ಪಾರಂಪರಿಕ ನ್ಯಾಯ ಬದ್ಧತೆಯ ತರ್ಕವೂ ಅಂತರ್ಗತಗೊಂಡಿದೆ...

ಮುಕ್ಕುಡಿಗ ಮತ್ತು ಬಾಕಿನ ಹೆಂಡತಿಯಂತಹ ಕಥೆಗಳನ್ನು ಸಂಸ್ಕೃತಿನಿಷ್ಠ ವಿಮರ್ಶೆಯ

ಸ್ತ್ರೀವಾದಿ ನೆಲೆಯಿಂದ ನೋಡಿದರೆ ಮಾತ್ರವೇ ವಿಭಿನ್ನ ಸಾಂಸ್ಕೃತಿಕ ಒಳನೋಟಗಳು ತೆರೆಯುತ್ತವೆ; ಜೊತೆಗೆ ಪುರುಷ ಪ್ರಧಾನ ಸಂಸ್ಕೃತಿಯ ವಿರಾಟ್ ಸ್ವರೂಪ, ಅದರ ಪರಿಮಿತಿಗಳು ಹಾಗೂ ನೇತ್ಯಾತ್ಮಕ ನೆಲೆಗಳು ಅನಾವರಣಗೊಳ್ಳುತ್ತವೆ.

ಪುರುಷ ಪ್ರಭುತ್ವ, ಹೆಣ್ಣಿನ ಮೇಲೆ ಹೇರಲ್ಪಟ್ಟ ವಿಧೇಯತೆ- ವಿನಮ್ರತೆ- ಸಭ್ಯತೆಯಂತಹ ನಡೆವಳಿಕೆ / ಮೌಲ್ಯಗಳು ಅಂಥ ಹೆಣ್ಣಿನಲ್ಲಿ ಇಲ್ಲವೆಂದರೆ, ಆಕೆಗೆ ಈ ಸಮಾಜದಲ್ಲಿ ಬದುಕುವ ಹಕ್ಕೇ ಇಲ್ಲ ಎಂಬ ಪುರುಷ ನಿಷ್ಠ ಧೋರಣೆ ಕಥೆಯ ಮೊದಲ ಭಾಗದಲ್ಲಿ ಸ್ಪಷ್ಟವಾಗಿದೆ. ಗಂಡು-ಹೆಣ್ಣಿನ ಸಂಬಂಧಗಳು ಪುರುಷ ಪ್ರಧಾನ ಸಂಸ್ಕೃತಿ ರೂಪಿಸಿದ ಮೌಲ್ಯಗಳಿಂದ ನಿಯಂತ್ರಿತವಾಗಿರುತ್ತವೆ. ಹಾಗಾಗಿ ಗಂಡು 'ಅಧಿಕಾರಸ್ಥನಾಗುತ್ತಾನೆ; ಹೆಣ್ಣು 'ಆಜ್ಞಾನುವರ್ತಿ'ಯಾಗುತ್ತಾಳೆ; ಮತ್ತು ಗಂಡು- ಹೆಣ್ಣಿನ ಸಂಬಂಧಗಳಲ್ಲಿ ಮೇಲು -ಕೀಳಿನ ಭಾವನೆಗಳು ನಿಯುಕ್ತವಾಗಿರುತ್ತವೆ. ತತ್ಪರಿಣಾಮವಾಗಿ ಈ ಸಂಬಂಧಗಳ ನಡುವೆ ಪರಸ್ಪರ ಗೌರವ- ಸಮಾನತೆ- ಸ್ವಾತಂತ್ರ್ಯ- ಅನ್ಯೋನ್ಯತೆ- ಮಾಧುರ್ಯದ ಕಲ್ಪನೆಗಳು ಗೈರು ಹಾಜರಾಗುತ್ತವೆ

ಹೆಂಡತಿ ತನ್ನನ್ನು ಬಹು ವಚನದಲ್ಲಿ ಕರೆಯಬೇಕು ಎಂಬ ಮುಕ್ಕುಡಿಗನ ಒತ್ತಾಯ ಮತ್ತು ಬುದ್ಧಿವಾದದ ಒಳಗೆ ಪುರುಷ ಯಜಮಾನ್ಯದ ಅಧಿಕಾರ, ಬಲಾತ್ಕಾರ, ಮೇಲರಿಮೆ, ಮರ್ಯಾದೆ ಹಾಗೂ ಪ್ರತಿಷ್ಠೆಗಳು ಅಂತಸ್ಥವಾಗಿವೆ; ಮತ್ತು ಈ ಯಜಮಾನ್ಯದೊಳಗೆ 'ನ ಸ್ತ್ರೀ ಸ್ವಾತಂತ್ರ್ಯಮರ್ಹತೆ' ಎಂಬ ಮನು ಪ್ರಣೀತ ಕಟ್ಟಪ್ಪಣೆಯೂ ಗೃಹೀತವಿದೆ..." ಹೀಗೆಯೇ ಸಾಗುತ್ತದೆ ಈ ವಿಮರ್ಶೆ. ಸ್ತ್ರೀವಾದಿ ನೆಲೆಯಲ್ಲಿ ಕೃತಿಯೊಂದರ ಅನುಸಂಧಾನದ ಪರಿ ಇದು. ಶೂದ್ರದಲ್ಲಿ ಪ್ರಕಟವಾದ ಟಿ.ಆರ್.ಚಂದ್ರಶೇಖರ ಅವರ 'ಕಿರಗೂರಿನ ಗಯ್ಯಾಳಿಗಳು- ಮಾತೃತ್ವದ ಕಲ್ಪನೆಯ ಹಿನ್ನೆಲೆಯಲ್ಲಿ ಒಂದು ವಿವರಣೆ' ಎಂಬ ಲೇಖನವನ್ನೂ ಈ ಸಂಬಂಧದಲ್ಲಿ ಪರಿಶೀಲಿಸಬಹುದು. (ಸಂಪುಟ ೨೩, ಸಂಚಿಕೆ ೪-೫).

ಬದ್ಧತೆ: ೧೯೭೦ರ ದಶಕದ ತರುವಾಯ ಬದ್ಧತೆಯ ಪ್ರಶ್ನೆಯು ಸಾಹಿತ್ಯ ವಿಮರ್ಶೆಯಲ್ಲಿ ಕಾಣಿಸಿಕೊಳ್ಳುತ್ತದೆ. ನವ್ಯರ ಅತಿ ವೈಯಕ್ತಿಕತೆ ಈ ಕಾಲದ ಲೇಖಕರಿಗೆ ಅರ್ಥಹೀನವಾಗಿ ಕಂಡುದರ ಪರಿಣಾಮ ಇದು. ಈ ಸಂದರ್ಭದಲ್ಲಿಯೇ ಸಾಹಿತ್ಯ ವಿಮರ್ಶೆಯಲ್ಲಿ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಬದಲಾವಣೆಗಾಗಿ ಸಾಹಿತ್ಯವೆಂಬ ಪರಿಕಲ್ಪನೆ ಕಾಣಿಸಿಕೊಂಡಿತು. ಎಡಪಂಥೀಯ ಚಿಂತನ ಕ್ರಮವು ಸಾಹಿತ್ಯವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಪರಿಶೀಲಿಸುವುದೇ ಪ್ರಮುಖ ಮೌಲ್ಯವಾಗಿ ಪರಿಗಣಿಸುತ್ತದೆ. ಶಿವರಾಮ ಕಾರಂತರ 'ಚೋಮನ ದುಡಿ'ಯಲ್ಲಿ ಚೋಮನ ಆಸ್ತಿಯ ಪ್ರಶ್ನೆ, 'ಸಂಸ್ಕಾರ ಕಾದಂಬರಿಯಲ್ಲಿ ಅನಂತಮೂರ್ತಿಯವರು ಶೂದ್ರ ಹೆಂಗಸರನ್ನು ಕಾಮದ ಗೊಂಬೆಯ ತರಹ ನೋಡುತ್ತಾರೆ', 'ಬೇಂದ್ರೆಯವರ ಕವಿತೆಗಳಲ್ಲಿ ಅಂತಿಮವಾಗಿ ಪುರೋಹಿತಶಾಹಿ ಮೌಲ್ಯಗಳ ವಿಜೃಂಭಣೆಯೇ ಆಗಿರುತ್ತದೆ'- ಈ ರೀತಿಯ ಪ್ರಮುಖ ವಾಗ್ವಾದಗಳು

ಹುಟ್ಟಿಕೊಂಡು ಪ್ರಮುಖ ಬರೆಹಗಾರರ ಬರೆಹಗಳನ್ನು ಹಿಂಜಿ ನೋಡಲಾಗಿದೆ. ಇದರ ಮುಂದುವರಿಕೆಯೇ ಸಾಹಿತ್ಯದಲ್ಲಿ ಜನಪರ ಆಶಯವನ್ನು ಹುಡುಕುವ ಪ್ರಯತ್ನದ ವಿಮರ್ಶೆ. ಬದ್ಧತೆ ಇದರಿಂದ ಹೊರತಾದುದಲ್ಲ.

೧೯೭೮ರ ಅನಂತರದ ಕನ್ನಡ ವಿಮರ್ಶೆಯ ಸ್ವರೂಪವನ್ನು ೧. ಬದ್ಧತೆಯುಳ್ಳ ವಿಮರ್ಶಕರು ಪ್ರತಿಪಾದಿಸುವ ವಿಮರ್ಶೆಯ ತತ್ವಗಳು. ೨. ಅರಾಜಕತೆಯ ನಿಲುವನ್ನು ಪ್ರತಿಪಾದಿಸುವ ವಿಮರ್ಶೆಯ ತತ್ವಗಳು ಎಂದು ಗುರುತಿಸಲಾಗುತ್ತಿದೆ. ಮೊದಲನೆಯ ಮಾದರಿಯಲ್ಲಿ ಸಾಹಿತ್ಯದ ಬಗೆಗಿನ ನಿಲುವು ಸಮಾಜ-ಕೃತಿ-ಕೃತಿಕಾರ-ಓದುಗ ವರ್ಗದ ಚರ್ಚೆಯು ಒಂದು ಸಮತಲದಲ್ಲಿ ರೂಪುಗೊಳ್ಳುತ್ತದೆ. ಕಲೆಯ ಮಾದರಿಯನ್ನು ಜನಜೀವನದಲ್ಲಿ ಗುರುತಿಸಲು ಯತ್ನಿಸುವ ಜನಪರ ಕಾಳಜಿಯ ವಿಮರ್ಶಕರು ಸಾಹಿತ್ಯವನ್ನು ಒಂದು ನಿರ್ದಿಷ್ಟ ಮಾದರಿಯೆಂದು ಒಪ್ಪಿಕೊಳ್ಳುವುದಿಲ್ಲ. ಸಮಾಜವು ಒಂದು ಕೇಂದ್ರವೆಂದು ಭಾವಿಸಿರುವ ವಿಮರ್ಶಕರು ಸಮಾಜವನ್ನು, ಜನರನ್ನು ದೊಡ್ಡದೆಂದು ಭಾವಿಸಿದ್ದಾರೆ. 'ಜನತೆಗಾಗಿ ಕಾವ್ಯ' ಎನ್ನುವ ತತ್ವ ಪ್ರಣಾಲಿಯು ಈ ರೀತಿಯ ಬರೆಹಗಳಲ್ಲಿ ವ್ಯಕ್ತವಾಗಿದೆ. ಕಾವ್ಯವನ್ನು ಗತ ತಾರ್ಕಿಕ ನೆಲೆಯಲ್ಲಿ ಇಟ್ಟು ಚರ್ಚಿಸಬೇಕೆಂದು ಭಾವಿಸುವ ಬರಗೂರು ರಾಮಚಂದ್ರಪ್ಪ, ಆರ್ಕೆ ಮಣಿಪಾಲ, ಆರ್.ವಿ.ಭಂಡಾರಿ ಮೊದಲಾದವರು ಈ ರೀತಿಯ ಚಿಂತನೆಯ ದ್ರವ್ಯಗಳನ್ನು ತಮ್ಮ ಬರೆಹಗಳಲ್ಲಿ ಬಳಸಿಕೊಂಡಿದ್ದಾರೆ.

ಸಾಹಿತ್ಯದಲ್ಲಿ ಬದ್ಧತೆ, ಸಮಾಜಿಕ ಮೌಲ್ಯ ಇವೆಲ್ಲ ನವ್ಯೋತ್ತರ ಕಾಲದಲ್ಲಿ ಕೇಳಿಬಂದವು. ಇವು ಪ್ರಗತಿಶೀಲ ಕಾಲದ ಚಿಂತನಕ್ರಮದ ಮುಂದುವರಿಕೆಯೇ ಸೈ. ಪ್ರಗತಿಶೀಲ ಸಾಹಿತ್ಯ ಸಮೃದ್ಧ ಬೆಳೆಯಾಗದಿರುವುದಕ್ಕೆ ಕಾರಣ ಅದರ ತತ್ವಗಳನ್ನು ಪ್ರಚಾರ ಮಾಡುವ ಕೃತಿಗಳನ್ನು ಸಿದ್ಧಾಂತದ ಒರೆಗಲ್ಲಿಗೆ ಹಚ್ಚುವಂಥ ವಿಮರ್ಶೆ ಇಲ್ಲದೆ ಹೋದದ್ದು. ಹೇಗೆ ನವೋದಯ ಸಾಹಿತ್ಯವನ್ನು ವಿಮರ್ಶಿಸುವುದಕ್ಕೆ ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ, ಜಯಂತಿ ಮೊದಲಾದವು ಇದ್ದವೋ ಹೇಗೆ ನವ್ಯದ ಸಂದರ್ಭದಲ್ಲಿ ಸಾಕ್ಷಿ ಮೊದಲಾದವು ಇದ್ದವೋ ಹಾಗೆ ಪ್ರಗತಿಶೀಲ ಸಾಹಿತ್ಯಕ್ಕೆ ವಿಮರ್ಶೆಯನ್ನು ಸಾಹಿತ್ಯದ ಒಟ್ಟಿಗೇ ಬೆಳೆಸುವಂಥ ಮಾಧ್ಯಮ ಸಿಗಲಿಲ್ಲ. ಪ್ರಗತಿಶೀಲ ಚಳವಳಿ ತೀವ್ರವಾಗಿದ್ದಾಗ ಇದ್ದ ಅಭಾವ ನವ್ಯೋತ್ತರ ಕಾಲದಲ್ಲಿ ನೀಗುತ್ತದೆ. ಹೀಗಾಗಿ ನವ್ಯೋತ್ತರ ಸಾಹಿತ್ಯ, ಅಂದರೆ ದಲಿತ ಸಾಹಿತ್ಯ ಹೊರತುಪಡಿಸಿ, ಪ್ರಗತಿಶೀಲ ಸಾಹಿತ್ಯವೇ. ದಲಿತ ಸಾಹಿತ್ಯದಲ್ಲಿ ಪ್ರಗತಿಶೀಲ ಅಂಶಗಳು ಇದ್ದರೂ ಅದರ ಮೂಲ ಸಂವೇದನೆಯು ಬೇರೆಯೇ ಆಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ತತ್ವಗಳು ಹಲವು ನಿಟ್ಟಿನಿಂದ ಪ್ರಭಾವಕ್ಕೆ ಒಳಗಾಗಿವೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಪ್ರಭಾವ ಕನ್ನಡ ವಿಮರ್ಶೆಯ ಮೇಲೆ ನಿರಂತರ ಆಗುತ್ತಲೇ ಬಂದಿದೆ. ವಿಮರ್ಶೆಯಲ್ಲಿಯೂ ರಾಜಕೀಯ ಆಸಕ್ತಿಯ ವಿಮರ್ಶೆ, ಶೈಕ್ಷಣಿಕ ಆಸಕ್ತಿಯ ವಿಮರ್ಶೆ ಎಂಬ ಬಗೆಗಳಿವೆ. ಪಶ್ಚಿಮದ ಉದಾರವಾದಿ

ಪ್ರಜಾತಾಂತ್ರಿಕ ವ್ಯವಸ್ಥೆಯು ಉದಾರವಾದಿ ಧೋರಣೆಗೆ ಅನುಗುಣವಾಗಿಯೇ ವಿಮರ್ಶೆಯನ್ನು ಉತ್ತೇಜಿಸುವುದು. ಈ ಉದಾರವಾದದ ಫಲವಾಗಿ ಹುಟ್ಟುವ ವಿಮರ್ಶೆ ತನಗೆ ಬೇಕಾದ ನೀತಿ ಶಾಸ್ತ್ರವನ್ನು ತನ್ನ ವಿಮರ್ಶೆಗೆ ಬುನಾದಿಯಾಗಿ ಬಳಸುತ್ತದೆ. ತತ್ವಜ್ಞಾನ ಹಿನ್ನೆಲೆಯಲ್ಲಿ ರೂಪಗೊಳ್ಳುವ ವಿಮರ್ಶೆ ಶೈಕ್ಷಣಿಕ ಆಸಕ್ತಿಯ ಫಲವಾಗಿರುತ್ತದೆ. ಅಂದಂದಿನ ಕಾಲ ಘಟ್ಟದ ಸಾಹಿತ್ಯ ಚಳವಳಿಯ ಘೋಷಣೆಗಳೂ ವಿಮರ್ಶೆ ಮಾನದಂಡಗಳಾಗುತ್ತವೆ. ನವ್ಯೋತ್ತರದ ಸಂದರ್ಭ ಆ ಸಾಹಿತ್ಯದ ಘೋಷಣೆಯಲ್ಲಿಯೇ ವಿಮರ್ಶೆಯ ತತ್ವಗಳೂ ಇದ್ದವು. ಈ ಹಿನ್ನೆಲೆಯಲ್ಲಿಯೇ ವಿಮರ್ಶೆಯ ತತ್ವ ಒಂದು ಪ್ರತ್ಯೇಕ ಅವಸ್ಥೆಯಲ್ಲ. ಅದು ಕೂಡ ಚರಿತ್ರೆ, ರಾಜಕೀಯ, ಆರ್ಥಿಕ ವ್ಯವಹಾರಗಳ ನಿಕಟ ಸಂಬಂಧವನ್ನು ಹೊಂದಿರುತ್ತದೆ ಎಂದು ಹೇಳುವುದು.

ಸಾಹಿತ್ಯ ಕೃತಿಯನ್ನು ಬೆಲೆಗಟ್ಟಲು ಹಲವು ಮಾನದಂಡಗಳು ಚಾಲ್ತಿಯಲ್ಲಿವೆ. ಇವೆಲ್ಲವುಗಳಿಂದ ಶುದ್ಧ ಸಾಹಿತ್ಯದ ಮೌಲ್ಯ ಮಾಪನ ಸಾಧ್ಯವೆ? ಎಸ್.ಎಲ್.ಭೈರಪ್ಪನವರಂಥ ಲೇಖಕರನ್ನೇ ಈ ಪ್ರಶ್ನೆ ಕಾಡಿದೆ.[೪೦] ಈ ವಿಮರ್ಶೆ ಬರೆಯುತ್ತಿರುವ ಬಹುತೇಕ ಜನರಿಗೆ ಶುದ್ಧ ಸಾಹಿತ್ಯದಲ್ಲಿ ನಂಬಿಕೆ ಇಲ್ಲವೇನೋ ಎನಿಸುತ್ತದೆ. ಸಾಹಿತ್ಯ ಅವರ ಕಲ್ಪನೆಯಂಥ ಸಮಾಜ ಬದಲಾವಣೆಯ ಒಂದು ಸಾಧನವೆಂದು ಅವರು ಭಾವಿಸುತ್ತಾರೆ. ಮಾರ್ಕ್ಸಿಸ್ಟರು, ವಿಚಾರವಾದಿಗಳು, ಬಂಡಾಯದವರು, ದಲಿತರು, ಸ್ತ್ರೀವಾದಿಗಳು ಇವರೆಲ್ಲರೂ ಸಾಹಿತ್ಯವನ್ನು ಸಾಮಾಜಿಕ ಬದಲಾವಣೆಯ ಸಾಧನವೆಂದೇ ಪರಿಗಣಿಸುತ್ತಾರೆ. ಈ ಚಳವಳಿಗೆ ಪೂರಕವಲ್ಲದ ಕೃತಿಗಳನ್ನು ಅವರು ಖಂಡಿಸುತ್ತಾರೆ ಅಥವಾ ನಿರ್ಲಕ್ಷಿಸುತ್ತಾರೆ ಎಂಬ ಆತಂಕವನ್ನು ಭೈರಪ್ಪ ವ್ಯಕ್ತಪಡಿಸುವರು.

ಯಾವುದೇ ಕೃತಿಯನ್ನು ಯಾವುದೋ ಒಂದು ಸಿದ್ಧಾಂತದ ಆಧಾರದ ಮೇಲೆ ವಿಮರ್ಶಿಸಿದರೆ ಅದರ ಪರಿಪೂರ್ಣ ವಿಮರ್ಶೆ ಮಾಡಿದಂತೆ ಆಗುವುದಿಲ್ಲ ಎಂಬ ಅರಿವು ಎಲ್ಲ ವಿಮರ್ಶಕರಿಗೆ ಇರಬೇಕಾದದ್ದು ಅಗತ್ಯ. ವ್ಯಕ್ತಿಯೊಬ್ಬನನ್ನು ವರ್ಣಿಸಲು ಹೊರಟು ಅವನ ಕೈಯನ್ನೋ, ಕಾಲನ್ನೋ, ಮುಖವನ್ನೋ ವರ್ಣಿಸಿದ ಹಾಗೆ ಇಂಥ ವಿಮರ್ಶೆ. ಆದ್ದರಿಂದ ಎಲ್ಲ ವಿಮರ್ಶೆಯ ತತ್ವಗಳೂ ಕೃತಿಯೊಂದರ ಅಂತರಂಗವನ್ನು ಕಂಡುಕೊಳ್ಳುವ ದಾರಿಯಲ್ಲಿ ಸಾಗುವ ಅಲ್ಪ ಅಂತರದ ಪಯಣ ಅಷ್ಟೇ. ಸಾಹಿತ್ಯ ವಿಮರ್ಶೆಯ ಎಲ್ಲ ಸೂತ್ರಗಳನ್ನು ಅನ್ವಯಿಸಿ ಕೃತಿಯೊಂದನ್ನು ವಿಮರ್ಶಿಸಿದ ಮೇಲೆಯೂ ಕೃತಿಕಾರ ಉದ್ದೇಶಿಸಿದ ಅಂಶದ ಅನಾವರಣ ಆಗದೆ ಇರುವ ಸಾಧ್ಯತೆಯೂ ಇಲ್ಲದಿಲ್ಲ.

೪೦.ಗಾಂಧಿ ಬಜಾರ್: ಸಂಪುಟ ೧೨, ಸಂಚಿಕೆ ೧, ಜನವರಿ ೧೯೯೯

ದಲಿತ ಮೀಮಾಂಸೆ:

ನವ್ಯೋತ್ತರ ಸಾಹಿತ್ಯದ ಇತ್ತೀಚಿನ ಪ್ರಮುಖ ಚರ್ಚೆಯೆಂದರೆ ದಲಿತ ಸಾಹಿತ್ಯವು ಬಂಡಾಯ ಸಾಹಿತ್ಯದ ಒಂದು ಭಾಗವೋ ಅಥವಾ ದಲಿತ ಸಾಹಿತ್ಯವನ್ನು ಪ್ರತ್ಯೇಕವಾಗಿಯೇ ಗುರುತಿಸಬೇಕೋ ಎಂಬುದು.

ಈ ಬಗೆಯ ಪ್ರತ್ಯೇಕೀಕರಣದ ಗೆರೆಯನ್ನು ಮೊಟ್ಟಮೊದಲು ಎಳೆದವರು ಶಂಕರ ಮೊಕಾಶಿ ಪುಣೇಕರ. ಅವರು ತಮ್ಮ ಭಾಷಣವೊಂದರಲ್ಲಿ, 'ಬಂಡಾಯ ಸಾಹಿತ್ಯ' ಶೂದ್ರರದು, 'ದಲಿತ' ಸಾಹಿತ್ಯ ಪಂಚಮರದು, ಅಂದರೆ ಅಸ್ಪೃಶ್ಯರದು ಎಂದು ಹೇಳಿದ್ದರು.[೪೧] ಅತ್ಯಂತ ಸೂಕ್ಷ್ಮವಾದ, ಆದರೆ ಜಗತ್‌ಪ್ರಸಿದ್ಧವಾದ ಈ ಬ್ರಾಹ್ಮಣ ತಂತ್ರವನ್ನು ಯಶಸ್ವಿಯಾಗಿ ನವ್ಯ ಕವಿ ಬಿ.ಸಿ. ರಾಮಚಂದ್ರಶರ್ಮ ಅವರೂ ಮುಂದುವರಿಸುತ್ತಾರೆ. ನವ್ಯದ ಅವಶೇಷಗಳಾದ ಬ್ರಾಹ್ಮಣ ಶಕ್ತಿಗಳು ನವ್ಯೋತ್ತರ ಚಳವಳಿಯಲ್ಲಿ ಬಿರುಕು ಮೂಡಿಸುವುದಕ್ಕಾಗಿಯೇ ಈ ತಂತ್ರ ಹೂಡಿದ್ದು ಎಂಬುದು ಬಂಡಾಯದವರ ದೃಢವಾದ ನಿಲುವು.

ದಲಿತ ಸಾಹಿತ್ಯವು ಬಂಡಾಯದಿಂದ ಭಿನ್ನವಾದದ್ದು. ದಲಿತ ಸಾಹಿತ್ಯವೆಲ್ಲ ಬಂಡಾಯವೇ. ಆದರೆ ಬಂಡಾಯ ಸಾಹಿತ್ಯವೆಲ್ಲ ದಲಿತ ಸಾಹಿತ್ಯವಲ್ಲ ಎಂಬ ಅಭಿಪ್ರಾಯವೇ ಈಗ ಕೊನೆಯದು ಎಂಬಂತೆ ಆಗಿದೆ. ದಲಿತ ಸಾಹಿತ್ಯದ ಪ್ರಮುಖರು ದಲಿತ ಸಾಹಿತ್ಯಕ್ಕೆ ಪ್ರತ್ಯೇಕವಾದ ಪ್ರಣಾಲಿಕೆಯನ್ನೇ ಸಿದ್ಧಪಡಿಸಿದ್ದಾರೆ. ಬಂಡಾಯದಿಂದ ದಲಿತವನ್ನು ಬೇರ್ಪಡಿಸುವುದಕ್ಕೆ ಚಂದ್ರಶೇಖರ ಪಾಟೀಲರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಬಂಡಾಯ ಸಂಘಟನೆಯನ್ನು ಅಸ್ಥಿರಗೊಳಿಸಲಿಕ್ಕಾಗಿ ಇಂಥ ಚರ್ಚೆಗಳು ನಡೆಯುತ್ತಿವೆ ಎಂದು ಅವರು ಹೇಳುತ್ತಾರೆ. ಸಂಕ್ರಮಣದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ.[೪೨]

"ವಿಮರ್ಶಾ ವಲಯದಲ್ಲಿ ಕೇವಲ 'ಬಂಡಾಯ ಸಾಹಿತ್ಯ' ಎಂಬ ಪದ ಪುಂಜ ಬಳಸದೆಯೇ ನಾವೆಲ್ಲ 'ದಲಿತ -ಬಂಡಾಯ ಸಾಹಿತ್ಯ' ಎಂಬ ಗೊಂದಲಕಾರಿಯಾದ ಪದಪುಂಜ ಬಳಸತೊಡಗಿದಾಗ, ಹೋದಲ್ಲಿ ಬಂದಲ್ಲೆಲ್ಲ ನನ್ನಂಥವರು 'ಬಂಡಾಯ' ಎಂಬುದು ಮನೋವೈಜ್ಞಾನಿಕ ಮತ್ತು 'ದಲಿತ' ಎಂಬುದು ಸಾಮಾಜಿಕ ಪರಿಕಲ್ಪನೆಗಳೆಂದೂ, ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು; ಆದರೆ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಲ್ಲ; ಎಂಬ ಬೆಡಗಿನ ವಚನದ ಮಾದರಿಯ ವಿವರಣೆ ಕೊಡಬೇಕಾಯಿತು"

---

೪೧. ಉಲ್ಲೇಖ –ಚಂಪಾ– ಸಂಕ್ರಮಣ ೨೯೪

೪೨. ಸಂಕ್ರಮಣ ೨೯೪

ಎಂದು ಹೇಳುತ್ತಾರೆ. ಅರ್ಥಾತ್ 'ದಲಿತ- ಬಂಡಾಯ ಸಾಹಿತ್ಯ' ಎಂಬುದು 'ಯಕ್ಷಗಾನ-ಜಾನಪದ ಅಕಾಡೆಮಿ' ಇದ್ದಹಾಗೆ. ಯಕ್ಷಗಾನವೂ ಜಾನಪದವೇ. ಆದರೆ ಉಳಿದ ಆರ್ಡಿನರಿ ಜಾನಪದಗಳಿಗಿಂತ ಸ್ವಲ್ಪ ಹೆಚ್ಚಿನ (?) ಜಾನಪದ!... ಎಂಬ ಚಂಪಾರ ಮಾತಿನಲ್ಲಿಯ ವ್ಯಂಗ್ಯವನ್ನು ನಾವಿಲ್ಲಿ ಗಮನಿಸಬಹುದು.

ಇಂಥ ಪ್ರತ್ಯೇಕೀಕರಣದ ಅಪಾಯದ ಬಗ್ಗೆ ಚಂಪಾ ಎಚ್ಚರಿಸುವುದು ಈ ರೀತಿ,- "ಪ್ರತ್ಯೇಕತೆ, ಪ್ರತ್ಯೇಕತೆಯಿಂದಾಗಿ ಅನನ್ಯತೆ, ಅನನ್ಯತೆಯಿಂದಾಗಿ ಶ್ರೇಷ್ಠತೆ. ಇದೇ ಅಲ್ಲವೆ ನಾವು ಯಾವುದನ್ನು 'ಜಾತಿ ಶ್ರೇಣೀಕರಣ'ವೆಂದು ಗುರುತಿಸಿ, ಅದನ್ನು 'ನಿರ್ಮೂಲನ' ಮಾಡಲು ಪ್ರತಿಜ್ಞೆ ಮಾಡಿ, 'ಬರುತಲಿಹೆವು' ಎಂದು ಘೋಷಣೆ ಹಾಕುತ್ತ 'ದಾರಿ ಬಿಡಿ' ಎಂದು ಜಬರಿಸುತ್ತಿದ್ದುದು?"

ಈಗ ನಮ್ಮ ಪಯಣ ಯಾವ ಕಡೆಗೆ? ಎಂದು ಪ್ರಶ್ನಿಸುವ ಅವರು ಇತಿಹಾಸದ 'ಚಲನೆ' ಎಂಬುದು ಹಿಂದೆಯೋ ಮುಂದೆಯೋ? ಸಾಗರದ ಸಂಗಮಕ್ಕೆ ಧಾವಿಸುತ್ತಿದ್ದ ಸಾವಿರಾರು ನದಿಗಳು ಏಕದಂ ಟರ್ನ್ ಅಬೌಟ್ ಮಾಡಿ ತಮ್ಮ 'ಉಗಮ'ದ ಕಡೆಗೆ ತೆವಳಲು ಹಾತೊರೆಯುತ್ತಿವೆಯೇ? ಎಂದು ವಿಷಾದಿಸುತ್ತಾರೆ.

ಬಂಡಾಯದಿಂದ ದಲಿತವನ್ನು ಪ್ರತ್ಯೇಕಿಸುವುದನ್ನು ಒಂದು ಹಂತದಲ್ಲಿ ಒಪ್ಪಿಕೊಳ್ಳಬಹುದು. ದಲಿತರಲ್ಲೂ ಕೇವಲ ಅಸ್ಪೃಶ್ಯರು ಮಾತ್ರ ದಲಿತರು ಎನ್ನುವಂತೆ ಆಗಿದ್ದು ನವ್ಯೋತ್ತರ ಚಳವಳಿಯ ಮುಂಚೂಣಿಯಲ್ಲಿದ್ದವರನ್ನು ಚಿಂತೆಗೀಡು ಮಾಡಿದೆ. ಈ ಪ್ರತ್ಯೇಕೀಕರಣದ ಹಿಂದೆ ಒಡೆದು ಆಳುವ ಮೇಲ್ವರ್ಗದವರ ಷಡ್ಯಂತ್ರ ಮತ್ತು ಹಣದ ಆಮಿಷ ಇರುವ ಬಗೆಗೆ ಅವರು ಸಂದೇಹಿಸುತ್ತಾರೆ. ಬಂಡಾಯ ಬೇರೆ ದಲಿತ ಬೇರೆ; ಬಂಡಾಯದ ನಂತರ ದಲಿತ ಬಂದಿದೆ; ದಲಿತ ಸಾಹಿತ್ಯ ಉಳಿದ ಸಾಹಿತ್ಯಗಳಿಗಿಂತ ಪ್ರತ್ಯೇಕ ಎನ್ನುವ ವಾದದ ಪರಿಣಾಮವಾಗಿ 'ದಲಿತ' ಪದವು ಎಲ್ಲಾ ಜಾತಿ/ ವರ್ಗಗಳ ಬಡವರು; ಉಚ್ಚ- ಮಧ್ಯಮ ಜಾತಿಗಳನ್ನು ಬಿಟ್ಟು ಉಳಿದ ಎಲ್ಲ ಜಾತಿಯವರು: ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು (ಎಸ್.ಸಿ.- ಎಸ್.ಟಿ.) ಜನರು ಎಂಬ ಪಠ್ಯಾಂತರದೊಂದಿಗೆ ಈಗ ಕೇವಲ ಅಸ್ಪೃಶ್ಯರು (ಅಂದರೆ ಎಸ್.ಸಿ.) ಎಂಬ ಹಂತವನ್ನು ತಲುಪಿದೆ. ಈ ದಲಿತ- ಎಸ್.ಸಿ. ಎಂಬ ಸಮೀಕರಣಕ್ಕೆ ಸರಕಾರದವರು 'ವಿಶೇಷ ಘಟಕ ಯೋಜನೆ' ಹೆಸರಿನಲ್ಲಿ ಅಪಾರ ಹಣವನ್ನು ಅಕಾಡೆಮಿಗಳಿಗೆ ಕೊಡುತ್ತಿರುವುದೂ ಕಾರಣವಾಗಿರಬಹುದು.

ಈ ಒಡೆದಾಳುವ ನೀತಿಯ ಬಗ್ಗೆ ಗಂಭೀರವಾಗಿ ಚಿಂತಿಸುವವರು ಎತ್ತುವ ಕೆಲವು ಪ್ರಶ್ನೆಗಳು ಉತ್ತರವನ್ನು ಅಪೇಕ್ಷಿಸುತ್ತವೆ. ನಮಗೆ ಪರಂಪರೆ ಇದೆ. ನಾವು ಬೇಡವೆಂದರೂ ಅದು ನಮ್ಮ ವರ್ತಮಾನವನ್ನು, ಆ ಮೂಲಕ ಭವಿಷ್ಯವನ್ನು ರೂಪಿಸುತ್ತಲೇ ಇರುತ್ತದೆ. ಆದರೆ ಈ 'ಭೂತ'ದ ಬಗ್ಗೆ ನಮ್ಮ ದೃಷ್ಟಿಕೋನ ಏನು? ಈ 'ಭೂತ'ವನ್ನು ಅನ್ವೇಷಣೆ ಮಾಡುತ್ತ ನಾವೂ ಹಿಂದಕ್ಕೇ ಹೋಗಿ ಭೂತವಾಗಬೇಕೆ? ಅಥವಾ ಅದರ ಜೀವಪರವಾದ

ದ್ರವ್ಯವನ್ನು ಗುರುತಿಸಿ, ವಿಂಗಡಿಸಿ ನಮ್ಮದನ್ನಾಗಿ ಮಾಡಿಕೊಳ್ಳುತ್ತಲೇ ವರ್ತಮಾನದ ನೆಲೆಯಿಂದ ಭವಿಷ್ಯದ ಕಡೆಗೆ ಚಲಿಸುತ್ತಿರಬೇಕೆ? 'ಜಗತ್ತೊಂದು ಗ್ರಾಮ' ಎನ್ನುವ ನಿಟ್ಟಿನಲ್ಲಿ ಈ ಶತಮಾನದ ಕೊನೆಯ ಅಂಚಿನ ವಿದ್ಯಮಾನಗಳು ಜರುಗುತ್ತಿರುವಾಗ ನಮ್ಮ ಕಣ್ಣಿನ ಗುರಿ ಮುಂದಿನ ಶತಮಾನವೋ?

"ನಮ್ಮ ವೈದಿಕರೂ ಮಾತು ಮಾತಿಗೆ ತಮ್ಮ ಭವ್ಯ ದಿವ್ಯ 'ಸನಾತನ' ಪರಂಪರೆಯನ್ನು ವೈಭವೀಕರಿಸುತ್ತಾರೆ. ಎಲ್ಲವೂ ಸಾವಿರಾರು ವರ್ಷಗಳ ಹಿಂದೆಯೇ ತಮ್ಮ ದೇಶದಲ್ಲಿ ಇದ್ದವು ಅಂತ ವಾದಿಸುತ್ತಾರೆ. ಸಂಸ್ಕೃತವು ಎಲ್ಲ ಭಾಷೆಗಳ ಮೂಲ ಎನ್ನುತ್ತಾರೆ. ಇಂಡಿಯಾದ ಜಾತಿ ಶ್ರೇಣೀಕರಣದ ಇನ್ನೊಂದು ಧ್ರುವವಾಗಿರುವ ದಲಿತರೂ ಕೂಡ ಹೀಗೆಯೇ ತಮ್ಮ ಬೇರು ಹುಡುಕಿಕೊಂಡು ಹಿಂದಕ್ಕೆ ಪ್ರಯಾಣ ಮಾಡತೊಡಗಿದರೆ ಅಲ್ಲಿ ಕಾದಿರುತ್ತಾನೆ 'ಮನು' ಎಂಬ ಮಹರ್ಷಿ. 'ಬರ್‍ರಿ, ವತ್ಸರೇ' ಎಂದು ಸನ್ನೆ ಮಾಡುತ್ತಾನೆ. ಕೆಲವರು ಒಳಗೇ ಹೋಗುತ್ತಾರೆ. ಹಲವರು ಯಾವುದೋ ಗೆರೆಯ ಹೊರಗೆ ನಿಲ್ಲುತ್ತಾರೆ. ಮನು ಮಹರ್ಷಿ, 'ನಿಮಗೆ ಇಂದಿನಿಂದ ಶೇಕಡಾ ನೂರು ಮೀಸಲಾತಿ' ಎಂದು ಘೋಷಿಸುತ್ತಾನೆ. ಎಲ್ಲರೂ ಕೇಕೇ ಹಾಕುತ್ತಾರೆ" ಎನ್ನುವ ಚಂಪಾ ಇದನ್ನು ವಿಶ್ಲೇಷಿಸುವ ಪರಿ ಹೀಗೆ-

"ಹೌದು, ಬ್ರಾಹ್ಮಣರಿಗೆ ಹಂಡ್ರೆಡ್ ಪರ್‌ಸೆಂಟ್ ಮೀಸಲಾತಿ: ಅಕ್ಷರಜ್ಞಾನ, ಶಿಕ್ಷಣ, ವೇದಾಧ್ಯಯನ, ಸಾಹಿತ್ಯ ಸಂಸ್ಕೃತಿಗಳಲ್ಲಿ. ದಲಿತರಿಗೂ ಹಂಡ್ರೆಡ್ ಪರ್ಸೆಂಟ್ ಮೀಸಲಾತಿ: ಮೇಲ್ಗಡೆಯ ಜಾತಿಯವರು ಆರಾಮಾಗಿ ಉಂಡು ತಿಂದು ಅರಗಿಸಿಕೊಂಡು ಹೇತಿದ್ದನ್ನು ಬುಟ್ಟಿ ತುಂಬಿಕೊಂಡು ತಲೆ ಮೇಲೆ ಹೊರಲಿಕ್ಕೆ.

ಬ್ರಾಹ್ಮಣರಿಗೇನೋ ಇದು ಅಪೇಕ್ಷಣೀಯ. ದಲಿತರಿಗೆ?" ಎಂಬ ಮಾರ್ಮಿಕವಾದ ಪ್ರಶ್ನೆಯನ್ನು ಚಂಪಾ ಎಸೆಯುತ್ತಾರೆ.

ದಲಿತ-ಬಂಡಾಯದ ವಿಷಯದಲ್ಲಿ ಚಂಪಾರಿಗಂತೂ ಯಾವುದೇ ಸಂದೇಹ ಅಥವಾ ಗೊಂದಲಗಳಿಲ್ಲ. ಅವರು ಸ್ಪಷ್ಟ ಮಾತುಗಳಲ್ಲಿ 'ಬಂಡಾಯ ಎನ್ನುವುದು ಒಂದು ಮನೋಧರ್ಮ; ದಲಿತ ಎನ್ನುವುದು ಜಾತಿ ಹೆಸರಿನಲ್ಲಿ ತುಳಿತಕ್ಕೊಳಗಾದ ಒಂದು ಸಾಮಾಜಿಕ ವರ್ಗ. ಮಧ್ಯಮ ಮತ್ತು ಉಚ್ಚ ವರ್ಗದವರಿಗೆ- ಅಂದರೆ ಯಾರಿಗೆ ಜಾತಿ ಅಸಮಾನತೆಯ ಕಟು ಅನುಭವ ಇರುವುದಿಲ್ಲವೋ ಅವರಿಗೆ ಬಂಡಾಯ ಎಂಬುದು 'ಆಯ್ಕೆ'ಯ ಪ್ರಶ್ನೆಯಾದರೆ, ದಲಿತರಿಗೆ ಮಾತ್ರ ಬಂಡಾಯ ಅನಿವಾರ್ಯವಾಗಿದೆ. ದಲಿತ ಸಾಹಿತ್ಯವೆಲ್ಲ ಬಂಡಾಯ ಸಾಹಿತ್ಯವೇ. ಆದರೆ ಬಂಡಾಯ ಸಾಹಿತ್ಯವೆಲ್ಲ ದಲಿತ ಸಾಹಿತ್ಯವಾಗಬೇಕಿಲ್ಲ...' ಎಂದು ಹೇಳುತ್ತಾರೆ.[೪೩] ಬಂಡಾಯ ಸಾಹಿತ್ಯ ಸಂಘಟನೆಯನ್ನು ಒಡೆಯಲು ಯತ್ನಿಸುತ್ತಿದ್ದಾರೆ ಎಂಬ ಆತಂಕದಲ್ಲಿ ಚಂಪಾ ಅವರು ಬಂಡಾಯ- ದಲಿತ

೪೩. ಸಂಕ್ರಮಣ ೨೭೬–೨೭೭

ಎರಡೂ ಒಂದೇ ಎಂದು ಸಮರ್ಥಿಸಿಕೊಂಡಿದ್ದಾರೆ. ಬಂಡಾಯದಲ್ಲಿ ಒಡಕನ್ನು ತರಲು ಯತ್ನಿಸಿದವರು ನವ್ಯದವರು, ಅದರಲ್ಲೂ ಬ್ರಾಹ್ಮಣರು ಎಂಬುದು ಅವರ ಆರೋಪ. ಜಾತಿ ಶ್ರೇಣೀಕರಣದ ರೀತಿಯಲ್ಲಿ ದಲಿತರು ತಮ್ಮ ಪ್ರತ್ಯೇಕತೆಯನ್ನು ಕಂಡುಕೊಳ್ಳುವುದೆಂದರೆ ಪುನಾ ಮನು ಧರ್ಮಶಾಸ್ತ್ರಕ್ಕೆ ಶರಣು ಹೋದಂತೆ ಎಂಬ ಅವರ ವಿಶ್ಲೇಷಣೆ ಅನನ್ಯವಾದದ್ದು. ಬಂಡಾಯ ಚಳವಳಿಯ ಮುಂಚೂಣಿಯಲ್ಲಿದ್ದ ಚಂಪಾ ಅವರ ಈ ವಿಶ್ಲೇಷಣೆ ಬಂಡಾಯ ಸಾಹಿತ್ಯ ಸಂಘಟನೆಯನ್ನು, ಚಳವಳಿಯನ್ನು ಬಲಪಡಿಸುವಲ್ಲಿ ಬಹುದೊಡ್ಡ ಕೊಡುಗೆಯಾಗಿದೆ. ೧೯೯೯ರ ಜನವರಿಯಲ್ಲಿ ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನ ಹೊಸ ದುರ್ಗದಲ್ಲಿ ನಡೆಯಿತು. 'ದಲಿತ- ಬಂಡಾಯ ಸ್ಥಗಿತತೆ: ಒಂದು ಸಂವಾದ' ಎಂಬ ಗೋಷ್ಠಿ ಏರ್ಪಡಿಸಿದ್ದರು. ಈ ಗೋಷ್ಠಿಯನ್ನು ಯಥಾವತ್ತಾಗಿ ಮಲ್ಲಾಡಹಳ್ಳಿಯ 'ಸಾಹಿತ್ಯ ಸಂವಾದ' ಪತ್ರಿಕೆಯಯಲ್ಲಿ ಪ್ರಕಟಿಸಲಾಗಿದೆ. ಗೋಷ್ಠಿಯಯಲ್ಲಿ ಚಂದ್ರಶೇಖರ ಪಾಟೀಲ, ರಾಘವೇಂದ್ರ ಪಾಟೀಲ, ಲೋಕೇಶ ಅಗಸನಕಟ್ಟೆ ಯಳನಾಡು ಅಂಜನಪ್ಪ ಕೆ.ಶರೀಫಾ, ಎಲ್.ಹನುಮಂತಯ್ಯ, ಯಾದವರೆಡ್ಡಿ, ಜಿ.ಕೆ. ರವೀಂದ್ರಕುಮಾರ, ಡಾ.ಬಂಜಗೆರೆ ಜಯಪ್ರಕಾಶ, ಉಜ್ಜನಪ್ಪ, ಜಿ.ಎನ್.ಮಲ್ಲಿಕಾರ್ಜುನ, ನಿಸಾರ್ ಅಹಮದ್ ಉಷಾ ಲತಾ, ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಭಾಗವಹಿಸಿದ್ದರು. ಸಂವಾದದ ಈ ಪ್ರಕಟಣೆಗೆ ನಂತರ ಚಂಪಾ ತಮ್ಮ ಸಂಕ್ರಮಣದಲ್ಲಿ ಕೆಲವು ಸ್ಪಷ್ಟೀಕರಣಗಳನ್ನು ನೀಡುತ್ತಾರೆ. ಅದಕ್ಕೆ ಮತ್ತೆ ಸಂವಾದದಲ್ಲಿ ಪ್ರತಿಕ್ರಿಯೆ ಪ್ರಕಟವಾಗಿದೆ. ಇದು ಬಂಡಾಯ ಚಿಂತನೆಯನ್ನು ಬಹು ದೂರದವರೆಗೆ ಒಯ್ದು ಅನೇಕ ಜನರು ಇದರಲ್ಲಿ ಪಾಲ್ಗೊಳ್ಳುವ ಹಾಗೆ ಆಯಿತು. ಚಂದ್ರಶೇಖರ ಪಾಟೀಲರೂ ಈ ಗೋಷ್ಠಿಯಲ್ಲಿಯೂ ಬಂಡಾಯ-ದಲಿತ ಸಂಬಂಧವಾಗಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಮಂಡಿಸಿದ್ದಾರೆ. ಚಳವಳಿಯ ಮುಂಚೂಣಿಯಲ್ಲಿದ್ದ ಚಂಪಾರಂಥವರಲ್ಲಿ ಇರುವ ಈ ಸೈದ್ಧಾಂತಿಕ ಸ್ಪಷ್ಟತೆಯೇ ಬಂಡಾಯ ಸಾಹಿತ್ಯವನ್ನು ಜೀವಂತವಾಗಿಟ್ಟಿದ್ದು. ಬಂಡಾಯ ಚಳವಳಿಯಲ್ಲಿ ಒಡಕು ಬಂದರೆ ಚಳವಳಿ ದುರ್ಬಲವಾಗುವುದು ಎಂಬ ಕಾರಣಕ್ಕಾಗಿ ಚಂಪಾ ದಲಿತ ಸಾಹಿತ್ಯವನ್ನು ಪ್ರತ್ಯೇಕವಾಗಿ ಪರಿಗಣಿಸುವುದನ್ನು ವಿರೋಧಿಸುತ್ತಾರೆ ವಿನಾ ಮತ್ತೇನೂ ತಾತ್ವಿಕ ಭಿನ್ನಾಭಿಪ್ರಾಯ ಅಲ್ಲಿ ಗೋಚರವಾಗುವುದಿಲ್ಲ.

"... ಇಂದಿನ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ದಲಿತಪರ ಕಾಳಜಿಗಳೇ ಪ್ರಧಾನವಾಗಿರುವುದರಿಂದ ಅದನ್ನು 'ಬಂಡಾಯ' ಎಂಬ ಹೆಸರಿನಲ್ಲಿಯೇ ಕರೆಯುವುದು ಸೂಕ್ತ. ಆ ಬಂಡಾಯದಲ್ಲಿಯೇ 'ದಲಿತ' ಪದವೂ ಸೇರಿರುತ್ತದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ದಲಿತ- ಬಂಡಾಯ ಎಂದು ಕರೆಯುವುದು ದ್ವಿರುಕ್ತಿ ದೋಷವಾದಂತಾಗುತ್ತದೆ ಎಂಬುದು ಅವರ ವಾದ" ಎಂದು ಬಸವರಾಜ ಸಬರದ ಸಂಕ್ರಣದಲ್ಲಿ ತಮ್ಮ ವಾದ ಮಂಡಿಸಿದ್ದಾರೆ.[೪೪]

೪೪.ಬಸವರಾಜ ಸಬರದ: ದಲಿತ- ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವು, ಸಂಕ್ರಮಣ ೨೦೦-೨೦೧, ಸಂಪುಟ ೨೪, ಸಂಚಿಕೆ ೪-೫, ಏಪ್ರಿಲ್- ಮೇ ೧೯೮೭

ದಲಿತ ಜನಾಂಗದಲ್ಲಿ ಹುಟ್ಟಿ ಸಾಹಿತ್ಯ ರಚಿಸಿದಾಕ್ಷಣ ಆತ ದಲಿತ ಸಾಹಿತಿಯಾಗಲಾರ, ಆತ ದಲಿತ ಸಾಹಿತಿಯಾಗಬೇಕಾದರೆ ಮೊದಲು ಬಂಡಾಯ ಮನೋಧರ್ಮದವನಾಗಿರಬೇಕು. ಶತಮಾನಗಳಿಂದ ಶೋಷಣೆಗೊಳಗಾದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಬೆಳೆದು; ಆ ನೋವು- ಯಾತನೆಗೆ ಕಾರಣವಾದ ವ್ಯವಸ್ಥೆಯನ್ನು ವಿರೋಧಿಸುತ್ತ ಮೌಢ್ಯತೆ- ಅಂಧ ಸಂಪ್ರದಾಯಗಳನ್ನು ತಿರಸ್ಕರಿಸುತ್ತ, ಮತ- ಧರ್ಮಗಳ ಕೊಳಕುತನವನ್ನು ಬಯಲು ಮಾಡುತ್ತ ಸೈದ್ಧಾಂತಿಕವಾಗಿ ಆಲೋಚಿಸಿ, ಸಂಘಟನಾತ್ಮಕವಾಗಿ ಹೋರಾಡಿ ಸಮಾನತೆಗಾಗಿ ಹಾತೊರೆಯುವ ಸಾಹಿತಿ ದಲಿತ ಸಾಹಿತಿಯಾಗುತ್ತಾನೆ. ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿರದಿದ್ದರೂ ಬಡವರು- ದಲಿತರ ಶತಮಾನಗಳ ಶೋಷಣೆಯನ್ನು ಕಂಡು ಬಂಡೆದ್ದು ತುಳಿತಕ್ಕೊಳಗಾದವರೊಂದಿಗೆ ಸಂಘಟಿತನಾಗಿ, ತಾನು ಬೆಳೆದು ಬಂದ ಸಮಾಜ- ಸಂಸ್ಕೃತಿಗಳ ಮಿತಿಗಳನ್ನು ಗುರುತಿಸುತ್ತ ತನ್ನ ಸುತ್ತಲಿರುವ ಸಾಂಪ್ರದಾಯಿಕ ಗೆರೆಗಳನ್ನು ದಾಟುತ್ತ ಬದುಕು ಬರೆಹಗಳಲ್ಲಿ ಬಂಡೇಳುವ ಪ್ರವೃತ್ತಿಯುಳ್ಳ ಸಾಹಿತಿ ಬಂಡಾಯ ಸಾಹಿತಿಯೆನಿಸಿಕೊಳ್ಳುತ್ತಾನೆ. ಆದ್ದರಿಂದ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಎರಡು ವಿಭಿನ್ನ ಸಂಸ್ಕೃತಿಗಳಿಂದ ಬಂದ ಸಾಹಿತಿಗಳ ಏಕಮುಖ ಹೋರಾಟ ಒಂದೇ ಕಾಲಕ್ಕೆ ನಡೆದಿರುತ್ತದೆ. ಇದು ಬಂಡಾಯ ಸಾಹಿತ್ಯ ಸಂಘಟನೆಯ ವೈಶಿಷ್ಟ್ಯ ಕೂಡ ಆಗಿದೆ. ಬಂಡಾಯ ಸಂಘಟನೆಯಲ್ಲಿ ದಲಿತ ಸಾಹಿತಿಗಳ ಹೋರಾಟ ಮತ್ತು ದಲಿತೇತರ ಸಾಹಿತಿಗಳ ಹೋರಾಟ ಒಂದೇ ಉದ್ದೇಶದತ್ತ ನಡೆದಿರುತ್ತದೆ. ಹೀಗಾಗಿ 'ದಲಿತ' ಪದದಿಂದ 'ಬಂಡಾಯ' ಪದವನ್ನಾಗಲಿ ಬಂಡಾಯ ಪದದಿಂದ ದಲಿತ ಪದವನ್ನಾಗಲಿ ಬೇರ್ಪಡಿಸಲಿಕ್ಕಾಗುವುದಿಲ್ಲ ಎಂದು ಸಬರದ ವಿವರಿಸುವರು. ಸಾಹಿತ್ಯದ ಪಂಥವೊಂದು ಹುಟ್ಟಿಕೊಳ್ಳುವಾಗ ಇಂಥ ಚರ್ಚೆಗಳು ಸ್ವಾಭಾವಿಕ. ಅವುಗಳಿಗೆ ಪತ್ರಿಕೆಗಳು ವೇದಿಕೆಯಾಗಿದ್ದು ಮಹತ್ವದ್ದು. ಇಂಥ ವಾದಗಳು ಚಳವಳಿಯ ಮುಂಚೂಣಿಯಲ್ಲಿದ್ದವರಿಗೆ ಮಾರ್ಗದರ್ಶಕಗಳಾಗುತ್ತವೆ.

ದಲಿತ ಸಾಹಿತ್ಯ ಪ್ರತ್ಯೇಕ ಎಂದು ಪರಿಗಣಿಸುವವರು ಆ ಸಾಹಿತ್ಯದ ಬಗ್ಗೆ ನೀಡುವ ವಿವರಣೆ ಗಮನಿಸಬೇಕು. ಚೆ.ರಾಮಸ್ವಾಮಿ 'ಸಂಕ್ರಮಣ'ದಲ್ಲಿಯೇ ದಲಿತ ಸಾಹಿತ್ಯದ ಪ್ರತ್ಯೇಕತೆಯ ಬಗ್ಗೆ ಬರೆಯುತ್ತಾರೆ.[೪೫]

೧)ದಲಿತ ಸಮಸ್ಯೆಗಳ ಬಗೆಗೆ ದಲಿತರು ರಚಿಸಿದ ಸಾಹಿತ್ಯ.

೨)ದಲಿತರು ರಚಿಸಿದ ಎಲ್ಲ ಸಾಹಿತ್ಯ

೩)ದಲಿತ ಸಮಸ್ಯೆಯನ್ನು ಹೊಂದಿರುವ ಎಲ್ಲರ ಸಾಹಿತ್ಯ

ಎಂಬ ಮೂರು ಬಗೆಯನ್ನು ಗುರುತಿಸುತ್ತಾರೆ. ಇವುಗಳಲ್ಲಿ ಯಾವುದು ಸರಿ? ಕರ್ತೃ ದಲಿತನೇ ಆದರೂ ಸಾಹಿತ್ಯ ಸಾರ್ವತ್ರಿಕ ಸಮಸ್ಯೆಗಳ, ವಿಷಯಗಳ ಬಗ್ಗೆ ಇದ್ದರೆ ಅದಕ್ಕೆ

೪೫.ಸಂಕ್ರಮಣ ೧೩೫–೧೩೬

'ದಲಿತ' ಎಂಬ ಲೇಬಲ್ ಸಮಂಜಸವೆನಿಸುವುದಿಲ್ಲ. ದಲಿತ ಸಮಸ್ಯೆಗಳ ಬಗ್ಗೆ ಇತರರು ರಚಿಸಿದ ಸಾಹಿತ್ಯದಲ್ಲಿ ಪ್ರಾಮಾಣಿಕತೆ (Authenticity)ಯ ಪ್ರಶ್ನೆಗಳೇಳುತ್ತವೆ ಹಾಗೂ ಇದು ಇಡೀ ಸಾಹಿತ್ಯ ಪ್ರವಾಹದಲ್ಲಿ ಒಂದು ಅಂಶ ಮಾತ್ರವೆಂಬುದರಲ್ಲಿ ಸಂದೇಹ ಉಳಿದಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ.

ದಲಿತರ್ಯಾರು? ಎಂಬ ಪ್ರಶ್ನೆ ಹಾಕಿಕೊಳ್ಳುವ ತೇಜಸ್ವಿ ಕಟ್ಟಿಮನಿ 'ಕರ್ನಾಟಕ ಭಾರತಿ'ಯಲ್ಲಿ 'ತುಳಿತಕ್ಕೆ ಸಿಕ್ಕವರೆಲ್ಲರೂ ದಲಿತರು' ಎಂಬ ಹೊಸ ಅರಿವು ಮೂಡುತ್ತಿರುವುದು ಆಶಾದಾಯಕವಾಗಿದೆ ಎಂದು ಹೇಳಿದ್ದಾರೆ.[೪೬]

ಹಿಂದೂ ಧರ್ಮದ ವರ್ಣಾಶ್ರಮ ಪದ್ಧತಿಯ ಬಗೆಗೆ ದಲಿತರಲ್ಲಿ ರೋಷವಿದೆ. ಜಾತಿಯ ಚೌಕಟ್ಟಿನ ವಿರುದ್ಧ ದಲಿತರು ತಮ್ಮ ಧ್ವನಿ ಎತ್ತಿದ್ದಾರೆ. ಈ ಧ್ವನಿ ಹಿಂದೂ ಧರ್ಮದ ಕೆಲವು ಅಮಾನವೀಯ ಸಂಪ್ರದಾಯದ ವಿರುದ್ಧವೂ ಇತ್ತು.

ಪೂರ್ಣಚಂದ್ರತೇಜಸ್ವಿಯವರು ಹಿಂದೂ ಧರ್ಮದ ವಿರುದ್ಧ ಆಡಿರುವ ಮಾತುಗಳು ಗಮನಾರ್ಹ. 'ಅನ್ವೇಷಣೆ' ಪತ್ರಿಕೆಯಲ್ಲಿ (ಸಂಚಿಕೆ ೩೩) ಪ್ರಕಟವಾದ ಅವರ ಮುಖಾಮುಖಿಯಲ್ಲಿ ತಮ್ಮ ಕಾದಂಬರಿಗಳಲ್ಲಿ ಆಧ್ಯಾತ್ಮಕ್ಕಿಂತ ವೈಜ್ಞಾನಿಕತೆಗೆ ಹೆಚ್ಚಿನ ಮಹತ್ವ ಕೊಟ್ಟಿರುವ ಬಗ್ಗೆ ಕಾರಣಗಳನ್ನು ಹೇಳುತ್ತ, "ಹಿಂದೂ ಧರ್ಮದ ಭೀಕರ ಸ್ವರೂಪ ಕಾರಣ. ಇದನ್ನ ಗಿಪೇರಿ ಮಾಡುವ, ಸುಧಾರಣೆ ಮಾಡುವ ಎಲ್ಲ ಮನುಷ್ಯ ಪ್ರಯತ್ನಗಳೂ ಮಣ್ಣು ಪಾಲಾಗಿ ಇವತ್ತಿಗೂ ಮತಾಂಧರ, ಮೂಢರ ದುರಾಚಾರಿಗಳ ಹಿಡಿತದಲ್ಲಿಯೇ ಹಿಂದೂ ಧರ್ಮದ ಬಾವುಟ ಇದೆ. ಹಿಂದೂ ಧರ್ಮದ ಯಾವುದೇ ಆವೃತ್ತಿಯನ್ನು ನಾವು ಪ್ರತಿಪಾದಿಸಿದರೂ ಅದು ಕೊನೆಕೊನೆಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ, ಸ್ತ್ರೀಯರ ಪ್ರತ್ಯೇಕತೆಗಳನ್ನು ಪ್ರತಿಪಾದಿಸುತ್ತವೆ. ಇದಕ್ಕೆ ಒಂದೇ ದಾರಿ ಎಂದರೆ ಈ ಧರ್ಮವನ್ನೇ ದೂರ ಇಡುವುದು" ಎಂದು ವಿವರಿಸಿದ್ದಾರೆ. ಇದು ನವ್ಯೋತ್ತರ ಚಿಂತನೆಯ ಫಲ ಎಂದು ಹೇಳಬೇಕು.

ಯಾವುದೇ ಚಳುವಳಿ ರೂಪದ ಸಾಹಿತ್ಯಕ್ಕೆ ಗಟ್ಟಿಯಾದ ಸೈದ್ಧಾಂತಿಕ ನೆಲೆಗಟ್ಟು ಅವಶ್ಯ. ಹೀಗಿರುವಾಗ ದಲಿತ ಸಾಹಿತ್ಯದ ಹಿಂದಿನ ಸಿದ್ಧಾಂತ ಯಾವುದು? ದಲಿತ ಸಾಹಿತ್ಯ ಚಳುವಳಿಗೆ ಅಂಬೇಡ್ಕರ ವಿಚಾರವಾದವು ಮೂಲ ನೆಲೆಯಾಗಿದೆ ಎಂದು 'ಒಡಲಾಳ'ದಲ್ಲಿ ಹೇಳಿದೆ.[೪೭] ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ವಿಜ್ಞಾನ ದೃಷ್ಟಿ, ವರ್ಣರಹಿತ, ವರ್ಗರಹಿತ ಪ್ರಜಾಸತ್ತೆಯ ಸಮಾಜವಾದ ಇವು ಅಂಬೇಡ್ಕರ್ ವಾದದ ಸೂತ್ರಗಳು.

೪೬.ದಲಿತ ಸಾಹಿತ್ಯ: ನಿಂತ ಬದುಕಿಗೊಂದು ಹೊಸ ಸೆಲೆ- ತೇಜಸ್ವಿ ಕಟ್ಟೀಮನಿ- ಕ.ಭಾ.- ಸಂಪುಟ ೧೮, ಸಂಚಿಕೆ ೨-೩,

೪೭.ದಲಿತ ಚಳವಳಿ ಮತ್ತು ಸಾಹಿತ್ಯ- ಒಡಲಾಳ- ಸಂಪುಟ ೧, ಸಂಚಿಕೆ ೧೧, ನವೆಂಬರ ೧೬-೩೦- ೧೯೯೬

ಇವು ದಲಿತ ಸಾಹಿತ್ಯದ ಮಾರ್ಗದರ್ಶಕ ತತ್ವಗಳೂ ಕೂಡ. ಇದರ ಜೊತೆಗೆ ಮಾನವೀಯತೆಯನ್ನು ಗೌರವಿಸುವ ಯಾವುದೇ ತತ್ವಪ್ರಣಾಳಿಕೆ ಜ್ಯೋತಿಬಾ ಫುಲೆ, ಅಗರಕರ, ಅಂಬೇಡ್ಕರ್, ಮಾರ್ಕ್ಸ್ ಮುಂತಾದವರು ಮಂಡಿಸಿದ್ದಿರಬಹುದು. ದಲಿತ ಸಾಹಿತಿಗಳು ಅಸ್ಪೃಶ್ಯತೆಯ ಮುಕ್ತಿಗಾಗಿಯೇ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಕೂಡದೆಂಬುದು ಇದರ ಹಿಂದಿನ ಉದ್ದೇಶ ಎಂದು ಅದರಲ್ಲಿ ವಿವರಿಸಲಾಗಿದೆ.

ಮನುಷ್ಯನಂತೆ ಗೌರವದಿಂದ ಬದುಕುವ ಸಮಸ್ಯೆ ಹಾಗೇ ಉಳಿಯುತ್ತದೆ. ಆದ್ದರಿಂದ ದಲಿತ ಸಾಹಿತ್ಯವು ಮನುಷ್ಯ ಶ್ರೇಷ್ಠತೆ ಮನ್ನಿಸುವ ವಿಚಾರ ಪ್ರಣಾಳಿಕೆಗೆ ಬದ್ಧವಾಗಿರುತ್ತದೆ ಎಂಬ ವಾದ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ದಲಿತ ಸಾಹಿತ್ಯವು ಜೀವನ ಮೌಲ್ಯಗಳಿಗೆ ಬದ್ಧವಾಗಿರುವಂಥದ್ದು. ಮನುಷ್ಯತ್ವಕ್ಕೆ ಧಕ್ಕೆ ಬರುವುದನ್ನು, ಅನ್ಯಾಯವಾಗುವುದನ್ನು ಈ ಸಾಹಿತ್ಯ ಸಹಿಸುವುದಿಲ್ಲ. ದಲಿತ ಸಾಹಿತ್ಯವು ಚಳುವಳಿ ಮೂಲಕವೇ ಜನ್ಮ ತಳೆದಿರುವಂಥದ್ದು. ಆದ್ದರಿಂದ ಒಂದೇ ಕಾಲಕ್ಕೆ ಅದು ಹೊಸ ಸಾಂಸ್ಕೃತಿಕ ಘಟನೆಯಾಗಿ ಮತ್ತು ಹೊಸ ಸಾಹಿತ್ಯ ಘಟನೆಯಾಗಿ ಪರಿಣಮಿಸುತ್ತದೆ ಎಂದು 'ಒಡಲಾಳದ'ಲ್ಲಿ ವಿವರಿಸಲಾಗಿದೆ.

ದಲಿತ ಸಾಹಿತ್ಯದ ಪ್ರೇರಣೆ ಎಲ್ಲಿಂದ? ಅಂಬೇಡ್ಕರ್ ಸಿದ್ಧಾಂತ ಇದರ ಹಿಂದಿದೆ ಎಂದು ಹಿಂದೆಯೇ ಹೇಳಲಾಗಿದೆ. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಗಾಂಧೀಜಿಯವರು ಹರಿಜನೋದ್ಧಾರದ ಬಗ್ಗೆ ಮಾತನಾಡುತ್ತಾರೆ. ಸಮಾಜದ ಕೆಳವರ್ಗದ ಈ ಜನರಿಗಾಗಿ ಅವರು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಗಾಂಧೀಜಿ ೧೯೩೦ ಸುಮಾರಿಗೆ 'ಹಳ್ಳಿಗೆ ಹೋಗು' ಎಂದು ಕರೆ ನೀಡಿದ ಪರಿಣಾಮವಾಗಿ ಸಾಹಿತ್ಯದಲ್ಲಿ ಹಳ್ಳಿಯ ಬದುಕಿನ ಚಿತ್ರಣ ಆರಂಭವಾಗುತ್ತದೆ. ಹಳ್ಳಿಯ ಬದುಕಿನ ನೋವು ನಲಿವುಗಳು ಅಲ್ಲಿ ಚಿತ್ರಿತವಾಗುತ್ತವೆ. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಬಂದ ಅನೇಕ ಕಾದಂಬರಿಗಳು ಕಥೆಗಳನ್ನು ಇದಕ್ಕೆ ಉದಾಹರಣೆಯನ್ನಾಗಿ ನೀಡಬಹುದು. ಗಾಂಧೀಜಿಯವರ ಹರಿಜನರ ಬಗೆಗಿನ ಕಳಕಳಿಯಿಂದಾಗಿ ದಲಿತರ ಬದುಕೂ ಸಾಹಿತ್ಯದಲ್ಲಿ ಚಿತ್ರಣಗೊಳ್ಳಲು ಆರಂಭವಾಯಿತು. ಕಾರಂತರ 'ಚೋಮನ ದುಡಿ'ಯನ್ನು, ಕುವೆಂಪು ಅವರ 'ಶೂದ್ರ ತಪಸ್ವಿ' 'ಜಲಗಾರ'ಗಳನ್ನು ಇಲ್ಲಿ ನಾವು ಉದಾಹರಿಸ ಬಹುದು. ದಲಿತರ ಬದುಕಿನ ಬಗೆಗೆ ದಲಿತರಲ್ಲದವರೇ ಬರೆದರು. ಆದರೆ ದಲಿತರೇ ಪ್ರಜ್ಞಾವಂತರಾಗಿ ತಮ್ಮ ನೋವನ್ನು ತೋಡಿಕೊಂಡಿದ್ದು ಕನ್ನಡ ಸಾಹಿತ್ಯದ ಒಂದು ಚಾರಿತ್ರಿಕ ತಿರುವು. ದಲಿತ ಚಳವಳಿಯ ಮುಂಚೂಣಿಯಲ್ಲಿದ್ದವರಿಗೆ ಗಾಂಧೀಜಿಯ ದಲಿತಪರ ಕಾಳಜಿಗಳ ಬಗೆಗೆ ಅನುಮಾನವಿದೆ. ಇದನ್ನು ನಾವು ತೇಜಸ್ವಿ ಕಟ್ಟೀಮನಿಯವರ ಮಾತುಗಳಲ್ಲಿ ಗುರುತಿಸಬಹುದು.[೪೮]

"ದಲಿತರ ಬದುಕನ್ನು ಹಸನುಗೊಳಿಸಲು ಮಹಾತ್ಮಾ ಗಾಂಧಿ ಪ್ರಾಮಾಣಿಕ

೪೮.ದಲಿತ ಸಾಹಿತ್ಯ: ನಿಂತ ಬದುಕಿಗೊಂದು ಹೊಸ ಸೆಲೆ- ಕ.ಭಾ.- ಸಂಪುಟ ೧೮, ಸಂಚಿಕೆ ೨-೩

ಪ್ರಯತ್ನವನ್ನೇನೋ ಮಾಡಿದರು. ಆದರೆ ಅವರದು ಆಮೂಲಾಗ್ರ ಬದಲಾವಣೆಯ ಪ್ರಯತ್ನವಾಗಿರದೆ, ಸ್ವಲ್ಪ ರಿಯಾಯ್ತಿ ಕೊಟ್ಟ ಹಾಗೆ ಮಾಡಿ ಯಥಾಸ್ಥಿಯನ್ನು ಕಾಯ್ದುಕೊಂಡು ಹೋಗುವಲ್ಲಿ ಗಾಂಧಿ ನಂಬಿಕೆಯಿಟ್ಟಿದ್ದರು. ಆದ್ದರಿಂದ ದಲಿತರ ವಿಷಯದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿಯ ದೃಷ್ಟಿಕೋನಗಳು ಮೂಲಭೂತವಾಗಿ ತದ್ವಿರುದ್ಧವಿದ್ದವು. ಗಾಂಧೀಜಿ ದಲಿತರನ್ನು ಕಂಡು ಕರುಣೆಗೊಂಡು, ಅವರ ಏಳಿಗೆಗಾಗಿ ಸವರ್ಣೀಯರ ಮನವೊಲಿಸಬೇಕೆಂಬ ಒರಸೆಯವರಾಗಿದ್ದರೆ, ಅಂಬೇಡ್ಕರ ಹೋರಾಡದೇ ಹಕ್ಕು ಪಡೆಯಲು ಸಾಧ್ಯವಿಲ್ಲವೆಂದು ಅಚಲವಾಗಿ ನಂಬಿದ್ದರು. ಅಂಬೇಡ್ಕರ್ ಎದುರು ಇದ್ದವರು ಹೋರಾಡಬಲ್ಲ ಹರಿಜನರು, ಬರೀ ಮಾನವೀಯ ದಯೆ ಬೇಡುವ ಹರಿಜನರಲ್ಲ" ಎಂಬ ಮಾತುಗಳಲ್ಲಿ ದಲಿತ ಚಳವಳಿಗೆ ಒಂದು ರೂಪವನ್ನು ಕೊಡುವ ಉದ್ದೇಶದ ಚಿಂತನೆ ಕಾಣುವುದು. ಈ ಲೇಖನದಲ್ಲಿಯೇ ತೇಜಸ್ವಿ ಕಟ್ಟಿಮನಿ, 'ಚೋಮನ ದುಡಿ' ಬರೆದ ಶಿವರಾಮ ಕಾರಂತರೇ ಮೀಸಲಾತಿ ನೀತಿಯನ್ನು ಖಂಡಿಸಿದ ಇಬ್ಬಂದಿ ತನವನ್ನು ಟೀಕಿಸುತ್ತಾರೆ.

ಕರ್ನಾಟಕದಲ್ಲಿ ದೇವರಾಜ ಅರಸು ಅವರು ಮುಖ್ಯ ಮಂತ್ರಿಯಾಗಿದ್ದಾಗ ಸಮಾಜದ ಹಿಂದುಳಿದ ವರ್ಗದವರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ದಲಿತರೂ ಶಿಕ್ಷಣವನ್ನು ಪಡೆದರು. ಮೇಲ್ವರ್ಗದವರು ರಚಿಸಿದ ಸಾಹಿತ್ಯವನ್ನು ಕಂಡು ತಾವೂ ತಮ್ಮ ಬದುಕಿನ ಬಗ್ಗೆ ಸಾಹಿತ್ಯ ರಚಿಸಬೇಕೆಂಬ ಪ್ರೇರಣೆ ಅವರಲ್ಲಿ ಮೂಡಿತು. ಇಂಥ ಸಂದರ್ಭದಲ್ಲಿ ಅರಸು ಅವರ ಸಂಪುಟದಲ್ಲಿ ಸಚಿವರಾಗಿದ್ದ ಬಸವಲಿಂಗಪ್ಪನವರು ಮೈಸೂರಿನಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಕನ್ನಡ ಸಾಹಿತ್ಯವೆಲ್ಲ ಬೂಸಾ ಎಂದು ಹೇಳಿದರು. ಈ ಹೇಳಿಕೆಗೆ ವ್ಯಾಪಕವಾಗಿ ಪತ್ರಿಕೆಗಳಲ್ಲಿ ಪ್ರತಿಭಟನೆ ವ್ಯಕ್ತವಾಗಿ ವಿದ್ಯಾರ್ಥಿಗಳು ಚಳವಳಿ ನಡೆಸಿ ಬಸವಲಿಂಗಪ್ಪ ರಾಜೀನಾಮೆ ನೀಡುವ ಪರಿಸ್ಥಿತಿ ಬಂತು. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯದಲ್ಲಿ ಒಟ್ಟಾರೆಯಾಗಿ ದಲಿತ ಬದುಕು ಸಮರ್ಥವಾಗಿ ಚಿತ್ರಿತವಾಗಿಲ್ಲ ಎಂಬ ಹಿನ್ನೆಲೆಯಲ್ಲಿ ಇಡೀ ಕನ್ನಡ ಸಾಹಿತ್ಯವನ್ನೇ ಬೂಸಾ ಎಂದು ಹೇಳಿದ್ದು. ಆದರೆ ಅವರೇ ತಮ್ಮ ಹೇಳಿಕೆಗೆ ಕೊನೆಯವರೆಗೂ ಗಟ್ಟಿಯಾಗಿ ಅಂಟಿಕೊಳ್ಳಲಿಲ್ಲ. ಸಮರ್ಥಿಸಿಕೊಳ್ಳಲಿಲ್ಲ. ಅವರು ಸಾಹಿತ್ಯ ವಿಮರ್ಶಕರೂ, ಸಾಹಿತ್ಯವನ್ನು ಗಂಭೀರವಾಗಿ ಅಭ್ಯಾಸಮಾಡಿದವರೂ ಆಗಿರಲಿಲ್ಲ. ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವೂ ಇರಲಿಲ್ಲ. ಆದರೆ ಅವರ ವಿರುದ್ಧ ಎದ್ದ ಪ್ರತಿಭಟನೆಯ ತೀವ್ರತೆ ದಲಿತರ ಬಗ್ಗೆ ಮೇಲ್ವರ್ಗದವರಿಗೆ ಒಳಗಿಂದೊಳಗೇ ಇದ್ದ ಅಸಮಾಧಾನವನ್ನು ಬಹಿರಂಗಗೊಳಿಸಿತು ಅಷ್ಟೇ. ಜೊತೆಯಲ್ಲಿ ಇದು ದಲಿತರ ಸ್ವಾಭಿಮಾನವನ್ನು ಕೆರಳಿಸಿತು. ತಾವು ಯಾರಿಗೆ ಏನು ಕಡಿಮೆ? ಎಂಬ ಮನೋಭಾವ ಅವರಲ್ಲಿ ಬಲಿಯಿತು. ಇದು ದಲಿತ ಸಂಘಟನೆಗಳು ಜನ್ಮ ತಳೆಯಲು ಕಾರಣವಾಯಿತು. ಈ ಸಂಘಟನಾತ್ಮಕ ಹೋರಾಟದಲ್ಲಿಯೇ ದಲಿತ ಸಾಹಿತ್ಯ ಕನ್ನಡದಲ್ಲಿ ಒಂದು ಚಳವಳಿಯಾಗಿ, ಪ್ರತಿಭಟನೆಯ ಅಲೆಯಾಗಿ ಮೂಡಿ ಬಂತು. ದಲಿತ ಚಿಂತನೆಯ

ಸಾಹಿತಿಗಳ ಅಭಿವ್ಯಕ್ತಿ ಕ್ರಮವೇ ಬದಲಾಗಿ ಬಿಟ್ಟಿತು.

ದಲಿತ ಕವಿ ವಿದ್ಯೆಯ ದೇವತೆ ಶಾರದೆಯನ್ನು ಆಹ್ವಾನಿಸುವ ಪರಿಯೇ ವಿನೂತನವಾದುದು.

"…. ತಾಡದೊಲೆಗೆ ಮೈ ಗೊಟ್ಟು
ಎನ್ನಲಗದುದಿಯ ತಾಳ ಲಯಕೆ
ಕಿವಿಗೊಟ್ಟು ನನ್ನವರ
ಭಿಡೆ ಇಲ್ಲದೆ ಹಾಡಿಗೆ..

..ನರ್ತಿಸು ನರ್ತಿಸೆಲೆ ಶ್ಯಾರದೆ ನರ್ತಿಸು

…….
ಧಿಃಕ್ಕರಿಸಿ ನಡೆವ ಹೆಜ್ಜೆ
ದಾವಾಗ್ನಿ ತುಂಬಿದ ಕಣ್ಣು
ಝೇಂಕರಿಸಿ ಹೊಡೆಯುವ
ಕ್ರಾಂತಿಯ ಕಹಳೆಗೆ ಓ ಗೊಟ್ಟು…. ನರ್ತಿಸು…॥ ೪೯

ಇದರಲ್ಲಿಯೇ ಬರುವ, 'ಒಳ ಒಳಗ ನನ್ನವರು ಅತ್ತರ ಕಣ್ಣಾಗ/ ರಕ್ತದ ನೀರ ಇಳದಾವ| ನನ ಬಳಿಗ್ದ/ ಕೇಳಿಲ್ಲ ಆಳುವ ಕಂಡಿಲ್ಲ/ ಎನ್ನುವಲ್ಲಿ ಮತ್ತು, ನಮ ಹಿರಿಯಾರೆಂದರ ಕೌಲೆತ್ತ ಇದ್ದಾಂಗ/ ಕೇಳಿದ್ಕ ಗೋಣ ಹಾಕವ್ರ/ ನನ ಬಳಗ/ ಒದ್ದರು ಒದ್ಸಗೊಂಡು ಬಿದ್ದವ್ರ, ಎಂಬಲ್ಲಿ ಇರುವ ತಣ್ಣಗಿನ ಆಕ್ರೋಶವನ್ನು ನಾವು ಗುರುತಿಸಬಹುದು. ಮಾತು ಮಾತಿಗ ನೀವು ಹೊಲಿಮಾದಿಗರಂತೀರಿ/ ನಾಲೀಗೆಲ್ಲ ಅದು ಕಾಲ್ಮರಿ| ನನ ಬಳಗ/ ಮತ್ತಂದ್ರ, ಕೆರವಿಲೆ ಒಗದೇವ್ರೋ/ ಎಂಬಲ್ಲಿಯ ಸಿಟ್ಟನ್ನು ಗುರುತಿಸಬಹುದು. ಇಂಥ ಸಿಟ್ಟನ್ನು ಸಮರ್ಥಿಸುವ ಲೇಖನ ಅಂದಿನ ಸಾಹಿತ್ಯಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಸಂಕ್ರಮಣ'ದಲ್ಲಿ ಪೋಲಂಕಿ ರಾಮಮೂರ್ತಿ ಬರೆದ 'ದಲಿತ ಸಾಹಿತ್ಯ- ಸಿಟ್ಟಿಗೆ ಹಕ್ಕಿದೆ'- ಎಂಬ ಲೇಖನ ಮಹತ್ವದ್ದು. ಪೋಲಂಕಿ ಇಡಿ ರಾಮಾಯಣವನ್ನೇ ದಲಿತನ ದೃಷ್ಟಿಯಿಂದ ನೋಡಿದಾಗ ಅದು 'ಸೀತಾಯಣ'ವಾದದ್ದು ಉಲ್ಲೇಖನೀಯ. ಅದು ಕೂಡ ಮೊಟ್ಟ ಮೊದಲು ಸಂಕ್ರಮಣದಲ್ಲಿಯೇ ಪ್ರಕಟವಾಗಿತ್ತು.

ಇಂಥ ಕಾವ್ಯ ಲಕ್ಷಣಗಳಿಗಾಗಿಯೇ ದಲಿತರು ಬಂಡಾಯದಿಂದ ತಮ್ಮ ಸಾಹಿತ್ಯವನ್ನು ಪ್ರತ್ಯೇಕವಾಗಿ ಗುರುತಿಸಲು ಬಯಸುತ್ತಾರೆ. ೭೦ರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ 'ದಲಿತ' ಪದ ತೀವ್ರ ಚರ್ಚೆಗೊಳಗಾಯಿತು. ಮರಾಠಿ ದಲಿತ ಸಾಹಿತ್ಯ ನಮ್ಮ ಬರಹಗಾರರನ್ನು ಆಕರ್ಷಿಸಿದ್ದೇ ಇದಕ್ಕೆ ಕಾರಣ ಎನ್ನುವ ಅಭಿಪ್ರಾಯವೂ ಇದೆ. ಜೊತೆಗೆ ತೆಲುಗಿನ ದಿಗಂಬರ ಕಾವ್ಯ, ಹಿಂದಿಯ ಜನವಾದಿ ಸಾಹಿತ್ಯಗಳ ಜನಪ್ರಿಯತೆ ಮತ್ತು ವೈಯಕ್ತಿಕ ನೆಲೆಯಲ್ಲಿಯೇ

---

೪೯. ಅರವಿಂದ ಮಾಲಗತ್ತಿ: ಮೂಕನಿಗೆ ಬಾಯಿ ಬಂದಾಗ

ನಿಂತ ನವ್ಯ ಸಾಹಿತ್ಯದ ಬಗೆಗಿನ ಅಸಮಾಧಾನದಿಂದ ಬಂಡಾಯ ಸಾಹಿತ್ಯ ಸಂಘಟನೆ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಅದರೊಳಗಿದ್ದ ದಲಿತ ಬರಹಗಾರರು ತಮ್ಮ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳತೊಡಗಿದರು ಎಂಬ ಅಭಿಪ್ರಾಯ ಗಮನಿಸಬೇಕು.[೫೦]

ಸಾಹಿತ್ಯಪತ್ರಿಕೆಗಳಲ್ಲಿ ಹಲವಾರು ಲೇಖಕರ ವಾದ-ವಿವಾದಗಳು ಪ್ರಕಟಗೊಂಡವು. ಅರವಿಂದ ಮಾಲಗತ್ತಿಯವರು ಪತ್ರಿಕೆ, ವಿಚಾರ ಸಂಕಿರಣ ಹಾಗೂ ಬೇರೆಬೇರೆ ಕೃತಿಗಳಲ್ಲಿ ವ್ಯಕ್ತವಾದ ವಿಚಾರಗಳನ್ನು ಸಂಗ್ರಹಿಸಿ ತಮ್ಮ ಅಭಿಪ್ರಾ ಮಂಡಿಸಿದ್ದಾರೆ.

ಅ. 'ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.

ಆ. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.

ಇ. ಅಸ್ಪೃಶ್ಯರೂ ಸೇರಿದಂತೆ (ಆ ವ್ಯಾಖ್ಯಾನದ) ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರಂತೆ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗುತ್ತಾರೆ.

ದಲಿತ ಪದದ ಅರ್ಥ ವ್ಯಾಪ್ತಿ ವಿಸ್ತರಿಸುವ ಉದ್ದೇಶದಿಂದ ಅಸ್ಪೃಶ್ಯರ ಜೊತೆಗೆ ವಿವಿಧ ರಂಗಗಳಲ್ಲಿ ಶೋಷಣೆಗೆ ಒಳಗಾದವರನ್ನೆಲ್ಲ ದಲಿತರೆಂದು ಕರೆಯಬೇಕು ಎಂದು ವಾದಿಸಲಾಯಿತು. 'ದಲಿತರು ಕೇವಲ ಶೋಷಿತರಷ್ಟೇ ಅಲ್ಲ; ಶೋಷಣೆಯ ಜೊತೆಗೆ ಅಮಾನವೀಯ ಹಿಂಸೆ, ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿತ್ವವೇ ಇಲ್ಲದವರಂತೆ ನಡೆಯಿಸಿಕೊಳ್ಳಲ್ಪಟ್ಟವರು ಎಂಬ ಅರ್ಥ ವ್ಯಾಪ್ತಿ ಹಿಗ್ಗಿತು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ್ದ ನಿಘಂಟುವಿನಲ್ಲೂ ಇದೇ ಅರ್ಥವಿದೆ.

ಆದರೆ ೧೯೭೬ರ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸೇರಿದ ದಲಿತರ ಪ್ರಥಮ ಸಮಾವೇಶದಲ್ಲಿ ದಲಿತರೆಂದರೆ ಅಸ್ಪೃಶ್ಯರು ಅಥವಾ ಬಹಿಷ್ಕೃತರು ಎಂದು ಬಲವಾಗಿ ವಾದಿಸಲಾಯಿತು.

ದಲಿತರು ಪ್ರತ್ಯೇಕವಾಗಿಯೇ ಸಂಘಟಿತರಾಗಲು ಪ್ರಚೋದನೆ ನೀಡಿದ, ಅವರ ಸ್ವಾಭಿಮಾನವನ್ನು ಕೆರಳಿಸಿದ ಕೆಲವು ಘಟನೆಗಳು ಕರ್ನಾಟಕದ ಸಮಾಜ ವ್ಯವಸ್ಥೆಯಲ್ಲಿ ಜರುಗಿದವು. ಅದರಲ್ಲಿ ಒಂದು ಬೆಂಡಿಗೇರಿ ಪ್ರಕರಣ. ಆಗಸ್ಟ್ ೩ ೧೯೮೭ರಂದು ಅಲ್ಲಿ ಚುನಾವಣೆ ಜಗಳವೊಂದಕ್ಕೆ ಸಂಬಂಧಿಸಿ ಮೇಲ್ವರ್ಗದವರು ಐವರು ದಲಿತರಿಗೆ ಮಲ ತಿನ್ನಿಸಿದರು. ಜಗತ್ತಿನಲ್ಲಿ ಅದುವರೆಗೆ ದಲಿತರಿಗೆ ಅದೇನೇನೋ ಕಷ್ಟಕಿರುಕುಳ ನೀಡಲಾಗಿತ್ತು,

---

೫೦. ವಿವರಗಳಿಗೆ ನೋಡಿ- ಕನ್ನಡ ಮರಾಠಿ ದಲಿತ ಸಾಹಿತ್ಯ- ಸರಜೂ ಕಾಟ್ಕರ್.

ಆದರೆ ಮಲ ತಿನ್ನಿಸುವ ಅಮಾನವೀಯತೆ ದಲಿತರ ಇತಿಹಾಸದಲ್ಲಿ ಹೊಸ ಮೈಲಿಗಲ್ಲಾಯಿತು. ಈ ಪ್ರಕರಣ ಮೊದಲು ಬೆಳಕು ಕಂಡಿದ್ದು 'ಕನ್ನಡ ಪ್ರಭ' ಮತ್ತು 'ಇಂಡಿಯನ್ ಎಕ್ಸಪ್ರೆಸ್' ಪತ್ರಿಕೆಯಲ್ಲಿಯೇ ಎಂಬುದು ಗಮನಾರ್ಹ. ದಲಿತರ ಬಗ್ಗೆ ಅನುಕಂಪ, ಮೇಲ್ವರ್ಗದ ಆ ದುಷ್ಟರ ಬಗ್ಗೆ ತೀವ್ರ ಆಕ್ರೋಶ ಸಾರ್ವಜನಿಕವಾಗಿ ವ್ಯಕ್ತವಾಯಿತು. ಪತ್ರಿಕೆಗಳಲ್ಲಿ ಈ ಘಟನೆಯನ್ನು ಖಂಡಿಸಿ ಅನೇಕ ಪತ್ರಗಳು ಪ್ರಕಟಗೊಂಡವು. ದೇಶದ, ರಾಜ್ಯದ ಯಾವ ಮೂಲೆಯಲ್ಲೇ ಆಗಲಿ ದಲಿತರ ಮೇಲೆ ದೌರ್ಜನ್ಯ ನಡೆದಾಗಲೆಲ್ಲ ಅದು ಪ್ರಮುಖವಾಗಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳತೊಡಗಿದವು. ಬೆಂಡಿಗೇರಿ ಪ್ರಕರಣದಲ್ಲಿಯೇ 'ಕನ್ನಡಪ್ರಭ'ದ ಸಂಪಾದಕರಾಗಿದ್ದ ಖಾದ್ರಿ, ಶಾಮಣ್ಣನವರು ಮುಖಪುಟದಲ್ಲಿ ಸಂಪಾದಕೀಯ ಬರೆದು ತಪ್ಪಿತಸ್ಥರನ್ನು ಸಾರ್ವಜನಿಕವಾಗಿ ಗಲ್ಲಿಗೆ ಹಾಕಬೇಕು ಎಂದು ಬರೆದಿದ್ದರು. ಇವೆಲ್ಲ ದಲಿತರಲ್ಲಿ ಜನಜಾಗೃತಿ ಉಂಟಾಗಲು ಪ್ರೇರಣೆ ಆದವು. ಅವರು ತಮ್ಮನ್ನು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳಲು ಇದು ಪ್ರಮುಖ ಕಾರಣವಾಯಿತು.

ದಲಿತ ಸಾಹಿತ್ಯದಲ್ಲಿ ೧೯೭೫ರಲ್ಲಿ ಪ್ರಕಟವಾದ ಸಿದ್ದಲಿಂಗಯ್ಯನವರ 'ಹೊಲೆ ಮಾದಿಗರ ಹಾಡು'ಗೆ ವಿಶಿಷ್ಟ ಸ್ಥಾನವಿದೆ. ದಲಿತರ ರೋಷ ಹೊಳೆಯಾಗಿ ಹರಿಯುವುದಕ್ಕೆ ಇದು ಪಾತ್ರವನ್ನು ನಿರ್ಮಿಸಿಕೊಡುತ್ತದೆ. ಹೊಲೆ ಮಾದಿಗರ ಹಾಡು ದಲಿತರ ಹೋರಾಟದ ಹಾಡಾಗಿ ಜನಪ್ರಿಯವಾಗುತ್ತದೆ. ದಲಿತ ಸಾಹಿತ್ಯ ಹೇಗಿರಬೇಕು ಎಂಬುದಕ್ಕೆ ಒಂದು ತೋರುಗಂಬವಾಗುತ್ತದೆ ಅದು. ಇದರಲ್ಲಿಯ ಹಾಡುಗಳನ್ನು ತಮಟೆ ಬಡಿಯುತ್ತಲೋ, ಖಂಜರಿ ನುಡಿಸುತ್ತಲೋ ಹಾಡುವುದು ರೂಢಿಯಾಯಿತು. ಹಳ್ಳಿಹಳ್ಳಿಗಳಲ್ಲಿ ದಲಿತ ಸಂಘರ್ಷ ಸಮಿತಿಗಳು ಹುಟ್ಟಿಕೊಂಡು ಅದರ ಸಭೆಗಳಲ್ಲಿ ಈ ಹಾಡುಗಳನ್ನು ಹಾಡುವುದು ಒಂದು ಸಂಪ್ರದಾಯವಾಯಿತು. ಚೆನ್ನಣ್ಣ ವಾಲಿಕಾರರ 'ಪ್ಯಾಂಥರ್ ಪದ್ಯಗಳು', ಗಂಗಾರಾಮ ಚಂಡಾಳರ 'ಚಂಡಾಳರ ಕೂಗು', ಲಲಿತಾ ನಾಯಕ ಅವರ 'ನಂ ರೂಪ್ಲಿ', ಜವರಯ್ಯ ಅವರ 'ಕೇಳು ಜಗಮಾದಿಗ ಹೊಲೆಯ', ಮುಳ್ಳೂರು ನಾಗರಾಜ ಅವರ 'ಆಳಗಳು', ಶಿವತೀರ್ಥನ್ ಅವರ 'ಬೆಸ್ತ', ಮುನಿವೆಂಕಟಪ್ಪ ಅವರ 'ಕೆಂಡದ ನಡುವೆ', ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ' ಇವೆಲ್ಲ ದಲಿತ ಕಾವ್ಯಕ್ಕೆ ಹೊಸ ದಿಕ್ಕನ್ನು ತೋರಿಸಿದವು. ದೇವನೂರು ಮಹಾದೇವ, ಗೋವಿಂದಯ್ಯ ಮೊದಲಾದವರು ದುರಂತ ಯಾತನೆಯ ದಲಿತರ ಬದುಕನ್ನು ಚಿತ್ರಿಸಿದರು. ಸಿದ್ದಲಿಂಗಯ್ಯನವರ 'ಇಕ್ರಲಾ ವದೀರ್ಲಾ' ಕವನ ದಲಿತ ರೋಷವನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಟವ್ರೆ
ಎಲ್ಲಾರು ದೇವ್ರ ಮಕ್ಳು ಅಂತಾರೆ

ಹೊಲೇನ್ ಕಂಡ್ರ, ಹಾವ್ ಕಂಡಂಗಾಡ್ತಾರೆ.

ಹೋಟ್ಲು, ಬಾವಿ, ಮನೆ ಯಾದ್ಕೂ ಸೇರ್ಸಲ್ವಲ್ರೋ

ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್‌ಕತ್ತಾರೆ

ನಾವ್ ಬೆಳದಿತ್ ತಿಂತಾರೆ ನಾವ್ ದುಡಿದಿತ್ ತಗತ್ತಾರೆ

ನಾವ್ ಮಾತ್ರ ಬ್ಯಾಡಾ

ಹೊಲೇರು, ಮಾದುಗ್ರು, ಅನ್ನೋ ಬದ್ಲು ಹರಿಜನಾ

ಅಂತ ಕರ್ದು ನಗ್ತಾರಲ್ಲಪ್ಪೋ.....

ನಾವ್ ಮಾತ್ರ ಇಸ್ಕೋಲ್‌ಗೋಗಾಂಗಿಲ್ಲ ಜೀತಕ್ಕೋಗ್ಬೇಕು

ತಲೆ ಎತ್ತಾಂಗಿಲ್ಲ- ಬಗ್ಗುಸ್ಬೇಕು

ಈ ನನ್ ಮಕ್ಳು ಕಳ್ಳಾಟ ಆಡ್ತಾ ಅವ್ರೆ, ಅದಕ್ಕೇನೆ

ಇಕ್ರಲಾ ವದೀರ್ಲಾ ಈ ಸೂಳೇ ಮಕ್ಳ ಮೂಳೆ ಮುರೀರ್ಲಾ

ಇಲ್ಲಿಯ ರೋಷ ಮನಸ್ಸಿಗೆ ತಟ್ಟುವಂಥದ್ದು. ಕಾವ್ಯ ವಾಚ್ಯವಾದರೂ ಅದರಲ್ಲಿಯ ತರ್ಕ ತಳ್ಳಿಹಾಕಲು ಆಗಲಾರದಂಥದ್ದು. ಹರಿಜನ ಎಂದು ತಮ್ಮನ್ನು ಕರೆಯುವುದಕ್ಕೆ ಇಲ್ಲಿ ವಿರೋಧ ವ್ಯಕ್ತವಾಗಿರುವುದನ್ನು ಕಾಣಬಹುದು. ಇದು ಕೇವಲ ಸಿದ್ದಲಿಂಗಯ್ಯ ಮಾತ್ರವಲ್ಲ ಎಲ್ಲ ದಲಿತರೂ ಹರಿಜನ ಪದವನ್ನು ವಿರೋಧಿಸುತ್ತಾರೆ. ದಲಿತ ಚಳವಳಿಯಲ್ಲಿ ಇದೊಂದು ನಿರ್ಣಾಯಕ ಘಟ್ಟ ಎಂದು ಹೇಳಬೇಕು. ೧೯೭೭ರಲ್ಲಿ ಅಸ್ಪೃಶ್ಯ ಕವಿಗಳು ಬರೆದಿರುವ ಪದ್ಯಗಳನ್ನು ಸೇರಿಸಿ ಹೊರತಂದಿರುವ ಸಂಕಲನ (ಆ್ಯಂಥಾಲಜಿ)ದ ಹೆಸರು 'ಕಪ್ಪು ಜನರ ಕೆಂಪು ಕಾವ್ಯ'.

"ಸಿದ್ದಲಿಂಗಯ್ಯನವರ ಅತ್ಯಂತ ಪ್ರಭಾವಶಾಲಿಯಾದ ಪದ್ಯ 'ಒಂದು ಪದ' ಚಿನುವಾ ಅಚುಬೆ ಹೇಳುವ 'Transcendental hate'ಅನ್ನು ಸಾಧಿಸುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ಒಂದು ಅನನ್ಯ ಪದ್ಯವಾಗಿದೆ. ಇಲ್ಲಿಯ ಕೋಪ ಇಷ್ಟೊಂದು ಶುದ್ಧವಾಗಿದೆಯೆಂದರೆ, ಅದು ವ್ಯಕ್ತಿಗತ ಅಥವಾ ವೈಯಕ್ತಿಕತೆಯನ್ನು, ಕಾಲ ದೇಶಗಳನ್ನೂ ಮೀರಿ ನಿಲ್ಲುತ್ತದೆ. ಡಿ.ಎಚ್. ಲಾರೆನ್ಸ್‌ನ ರೂಪಕ ಸ್ಪಷ್ಟತೆಯಲ್ಲಿ ಹೇಳುವುದಾದರೆ ಇದು 'Passional Purity'ಯನ್ನು ಸಾಧಿಸಿದೆ. ಇಲ್ಲಿ ಬರುವ ಪ್ರಾಣಿಗಳ ಹಾಗೂ ಅಸಹ್ಯ ಪ್ರತಿಮೆಗಳ ಮೂಲಕ ಪದ್ಯದ Transcendent hate' ಮತ್ತು ಕೋಪ ಚಿರಂತನವಾಗಿ ಉಳಿಯುತ್ತದೆ. ವಿಶೇಷವಾಗಿ ಅಲ್ಲಿ ಬರುವ ನಾಯಿಯ ರೂಪಕ ('ನಾಯಿ ಬದುಕು' ಎಂಬುದು ಅತ್ಯಂತ ಅಸಹನೀಯವಾದ ಸ್ಥಿತಿ)ದ ಮೂಲಕ ಜಾತಿ ಹಿಂದೂಗಳು ಹೇಲು ತಿನ್ನುವ ನಾಯನ್ನಾದರೂ ಮುಟ್ಟಿಸಿಕೊಂಡಾರು ಆದರೆ ಹರಿಜನರು, ದೇವರ ಮಕ್ಕಳು ಎಂದು ತಾವು ಕರೆಯುವ ಅಸ್ಪೃಶ್ಯರನ್ನು ಮುಟ್ಟಿಸಿಕೊಳ್ಳುವುದಿಲ್ಲ, ಎಂಬುದು ಅತ್ಯಂತ ಸಮರ್ಥವಾಗಿ ಬಂದಿದೆ.." ಎಂದು ಪೋಲಂಕಿ ರಾಮಮೂರ್ತಿ ಸಂಕ್ರಮಣದಲ್ಲಿ ಬರೆದಿದ್ದಾರೆ.[೫೧] ಇಂಥ ಚಿಂತನೆಗಳು

೫೧.ಪೋಲಂಕಿ ರಾಮಮೂರ್ತಿ: ದಲಿತ ಸಾಹಿತ್ಯ: 'ಸಿಟ್ಟಿಗೆ ಹಕ್ಕಿದೆ'- ಸಂಕ್ರಮಣ- ೧೮೬ ಸಂಪುಟ ೨೩, ಸಂಚಿಕೆ ೨, ಫೆ.೧೯೮೮

ಉಂಟುಮಾಡಿದ ಪರಿಣಾಮದ ಫಲವಾಗಿ ದಲಿತರಲ್ಲಿ ಬಹುಬೇಗನೆ ಜಾಗೃತಿ ಉಂಟಾಯಿತು. ಜಾಗೃತಿಯ ಫಲವಾಗಿ ಹೊರ ಹೊಮ್ಮಿದ ಅಭಿವ್ಯಕ್ತಿಗೆ ಪತ್ರಿಕೆಗಳೂ ವೇದಿಕೆಯಾದವು. ದಲಿತರ ಎಚ್ಚೆತ್ತ ಪ್ರಜ್ಞೆಯ ಸಂಕೇತವಾಗಿರುವ ಒಂದು ಪದ್ಯವನ್ನು 'ಮುಂಗಾರು' ಪತ್ರಿಕೆ ಪಕಟಿಸಿತ್ತು. ಅದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ ಎನ್ನಿಸುತ್ತದೆ.

ಅನ್ನ ಕಾಣದ ಅವ್ವನೆದೆಯಲಿ ಹೈಲೇಸ,
ಬತ್ತಿದ ಮೊಲೆಯ ಚೀಪುತ ಭೋಮ ಹೈಲೇಸ
ಮಣ್ಣು ಕುಡಿಕೆಯ ಬೆಳ್ಳಿ ಬಟ್ಟಲು
ಚಿಂದಿ ಸೀರೆಯ ತೂಗು ತೊಟ್ಟಿಲು
ತುಂಡು ಮಡಿಕೆಯ ಆಟಿಗೆ ಆವಗೆ
ಬೆಳೆಯುತ ಬಂದನೋ ಬಾಲಕ ಭೋಮ ಹೈಲೇಸ
ಸಾವು ನೋವುಗಳ ಬೆನ್ನಲೊತ್ತು ಹೈಲೇಸ ||
ಭೂತಾಯಿ ಮಗನಿಗೆ ಭೂಮಿಯೇ ಇಲ್ಲವೋ ಹೈಲೇಸ
ದುಡಿಯುವ ಕೈತುಂಬ ಅನ್ನವೆ; ಇಲ್ಲವೋ ಹೈಲೇಸ
ಮೇಲುಕೀಳಿನ ಪಂಜರದಲ್ಲಿ
ಉತ್ತಮರೆಂಬೋರ ಕಾಲಡಿಯಲ್ಲಿ
ಬೇಯುತ್ತಿದ್ದನೋ ಹರಯದ ಭೋಮ
ಸುರಿಸಿದ ಬೆವರು ಸುರಿಸಿದ ರಕ್ತ ಹೈಲೇಸ
ದಿಕ್ಕು ತೋರುತ ದೀವಿಗೆಯಾದವು ಹೈಲೇಸ ||

ಈ ಕವಿತೆಯಲ್ಲಿ ಆದಿವಾಸಿ ಭೋಮನ ಬದುಕು ದುರಂತಕ್ಕೊಳಗಾದದ್ದು, ಬರಬರುತ್ತ ಭೋಮಾ ಒಬ್ಬಂಟಿಯಾಗುವುದನ್ನು ಕವಿತೆ ಹೇಳುತ್ತದೆ. ಇದು ಇಡೀ ಆದಿವಾಸಿಗಳ ಕಣ್ಣೀರ ಕತೆಯನ್ನು ನಮ್ಮ ಮುಂದಿಡುತ್ತದೆ. ಕಲಾತ್ಮಕತೆಯಲ್ಲೂ ಕವಿತೆ ಹಿಂದಿಲ್ಲ. ಇಂಥ ಕವಿತೆಗಳು ದಲಿತ ಸಭೆ ಸಮಾರಂಭಗಳಲ್ಲಿ ಹಾಡುಗಳಾಗಿ ಹರಿದು ದಲಿತ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾಗಿವೆ. ಇಂದಿನ ಯಾವ ಸಾಹಿತ್ಯಪತ್ರಿಕೆಯನ್ನು ತೆರೆದು ನೋಡಿದರೂ ಅದರಲ್ಲಿ ಒಂದೆರಡು ದಲಿತ ಪ್ರಜ್ಞೆಯ ಕವಿತೆಗಳನ್ನು ಕಾಣುತ್ತೇವೆ. ಹಿಂದಿನ ಯಾವ ಸಾಹಿತ್ಯ ಪಂಥದ ಸಂದರ್ಭದಲ್ಲೂ ಈ ಪ್ರಮಾಣದಲ್ಲಿ ಸಾಹಿತ್ಯದ ಅದರಲ್ಲೂ ಕವಿತೆಗಳ ಸೃಷ್ಟಿಯಾಗಿರಲಿಲ್ಲ. ಆದರೆ ಇಂದು ಸಾಹಿತ್ಯಕ ಪರಿಸರದಲ್ಲಿ ಭಾರೀ ಬದಲಾವಣೆಯಾಗಿದೆ. ಅದಕ್ಕೆ ಪತ್ರಿಕೆಗಳೇ ಕಾರಣ.

ಅಧ್ಯಾಯ ಆರು: ಸಮಾರೋಪ

'ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ' ಮಹತ್ವದ್ದಾಗಿದೆ. ಪತ್ರಿಕೆ ಮತ್ತು ಸಾಹಿತ್ಯವನ್ನು ಜೊತೆ ಜೊತೆಯಲ್ಲಿ ಇಟ್ಟು ಅಧ್ಯಯನ ಮಾಡಿದಾಗ ಹಲವು ಹೊಸ ಅಂಶಗಳನ್ನು ಕಾಣುವುದು ಸಾಧ್ಯವಾದವು. ಆಧುನಿಕ ಕನ್ನಡ ಸಾಹಿತ್ಯ ಮತ್ತು ಪತ್ರಿಕೆ ಏಕ ಕಾಲದಲ್ಲಿ ಹುಟ್ಟು ಪಡೆದು ಬೆಳೆಯುತ್ತ ಬಂದಿದ್ದನ್ನು ಇಲ್ಲಿ ಗುರುತಿಸಲಾಗಿದೆ. ಪತ್ರಿಕೆಗಳಲ್ಲಿ ಬಳಕೆಯಾದ ಗದ್ಯವು ಹೊಸಗನ್ನಡ ಸಾಹಿತ್ಯಕ್ಕೆ ಪುಷ್ಟಿಯನ್ನು ಒದಗಿಸಿದವು. ಸ್ವತಂತ್ರವಾಗಿ ಪುಸ್ತಕಗಳನ್ನು ಪ್ರಕಟಿಸಲು ಸಾಮರ್ಥ್ಯವಿಲ್ಲದ ಲೇಖಕರಿಗೆ ಅವರ ಕೃತಿಗಳು ಬೆಳಕು ಕಂಡು ಜನರನ್ನು ತಲುಪುದಕ್ಕೆ ಇವು ವಾಹಕವಾದವು.

ಕನ್ನಡದಲ್ಲಿ ಪತ್ರಿಕೆಗಳನ್ನು ಹೇಗೆ ಪಾಶ್ಚಾತ್ಯ ವಿದ್ವಾಂಸರು ಮೊದಲಿಗರಾಗಿ ಪ್ರಕಟಿಸಿದರೋ ಅದೇ ರೀತಿ ಸಾಹಿತ್ಯಪತ್ರಿಕೆಯನ್ನೂ ಪಾಶ್ಚಾತ್ಯ ವಿದ್ವಾಂಸರೇ ಆರಂಭಿಸಿದರು. ಮಂಗಳೂರಿನಿಂದ ಹೊರಟ 'ಸಚಿತ್ರ ಕನ್ನಡ ಸಾಹಿತ್ಯಪತ್ರಿಕೆ' ಕನ್ನಡದ ಮೊದಲ ಸಾಹಿತ್ಯಪತ್ರಿಕೆ ಎಂಬುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇದಕ್ಕೆ 'ವಿಚಿತ್ರ ವರ್ತಮಾನ ಸಂಗ್ರಹ' ಎಂಬ ಹೆಸರೂ ಇತ್ತು.

ಬಂಗಾಳ ವಿಭಜನೆಯ ವರೆಗಿನ ಕಾಲಘಟ್ಟದ ಪತ್ರಿಕೆಗಳಲ್ಲಿ ಕನ್ನಡ ಸಾಹಿತ್ಯವನ್ನು ಹೇಗಾದರೂ ಮಾಡಿ ಸಂಪುಷ್ಟಗೊಳಿಸಬೇಕೆಂಬ ಕಳಕಳಿ ಕಂಡುಬರುತ್ತದೆ. ಅನ್ಯಭಾಷೆಗಳಿಂದ ಅನುವಾದಗಳು, ರೂಪಾಂತರಗಳು ದೊಡ್ಡ ಪ್ರಮಾಣದಲ್ಲಿಯೇ ನಡೆದವು. ಸಾಹಿತ್ಯವನ್ನು

ಬೆಳೆಸಬೇಕೆಂಬ ಹಂಬಲದ ಕರೆಗಳು ಅಂದಿನ ಪತ್ರಿಕೆಗಳಲ್ಲಿವೆ. ಇಂಗ್ಲಿಷ್, ಮರಾಠಿ ಇತ್ಯಾದಿ ಅನ್ಯ ಭಾಷೆಗಳ ವಿರುದ್ಧ ಕನ್ನಡ ಹೇಗೆ ಸೆಣೆಸಬೇಕು ಎಂದು ನಿರ್ದೇಶನ ನೀಡಿದ್ದು ಕಂಡು ಬರುತ್ತದೆ. 'ಶೋಧಕ'ದ ಸಂಪಾದಕೀಯದಲ್ಲಿ ಕನ್ನಡವನ್ನು ಮರಾಠಿಯೊಂದಿಗೆ ಇರಿಸಿ ತೂಗಿ ನೋಡಿದ್ದು ಇದಕ್ಕೆ ಉದಾಹರಣೆ. ವಲ್ಲಭ ಮಹಾಲಿಂಗ ತಟ್ಟಿಯವರ ಕನ್ನಡದ ಬಗೆಗಿನ ಕಳಕಳಿಯೂ ಅನನ್ಯವಾದುದು. ಬಹುಮಾನ ಘೋಷಿಸಿ ಸಾಹಿತ್ಯದ ಸ್ಪರ್ಧೆಗಳನ್ನು ಆರಂಭ ಕಾಲದ ಪತ್ರಿಕೆಗಳು ಮಾಡಿವೆ.

ಆರಂಭ ಕಾಲದ ಪತ್ರಿಕೆಗಳು ಭಾಷೆಯನ್ನು ಶ್ರೀಮಂತಗೊಳಿಸುವುದರ ಜೊತೆಯಲ್ಲಿ ಸಮಾಜ ಸುಧಾರಣೆಯ ಕೆಲಸವನ್ನೂ ಮಾಡಿದವು. ಸಮಾಜ ಸುಧಾರಣೆ ವಿಷಯದಲ್ಲಿ ಅವರು ತೋರಿಸಿದ ಪ್ರತಿಕ್ರಿಯೆಯು ಮುಂದೆ ಅದೇ ವಿಷಯಗಳು ಇರುವ ಸಾಹಿತ್ಯ ಕೃತಿಗಳ ರಚನೆಗೆ ಕಾರಣವಾದವು.

ಕನ್ನಡವನ್ನು ಶ್ರೀಮಂತಗೊಳಿಸಬೇಕು ಎಂಬ ಅಭಿಲಾಷೆ, ಕನ್ನಡ ನಾಡು ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗಿದೆ ಎಂಬ ಚಿಂತೆ ಈ ಕಾಲದ ಪತ್ರಿಕೆಗಳಲ್ಲಿ ವ್ಯಕ್ತವಾಗಿವೆ. ಆದರೆ ದೇಶವನ್ನು ಇಡಿಯಾಗಿ ಕಲ್ಪಿಸಿಕೊಳ್ಳುವ ದೃಷ್ಟಿ ವೈಶಾಲ್ಯ ಇವುಗಳಿಗೆ ಬಂದಿರಲಿಲ್ಲ. ರಾಷ್ಟ್ರೀಯ ಕಾಂಗ್ರೆಸ್ಸು ಆಗಷ್ಟೇ ಹುಟ್ಟಿಕೊಂಡಿತ್ತು. ಸಮಾಜದ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ಬ್ರಿಟಿಷ್ ಸತ್ತೆ ನೆರವಾಗುತ್ತಿದ್ದ ಕಾರಣ ಪತ್ರಿಕೆ ನಡೆಸುವ ವಿದ್ಯಾವಂತ ಜನರಿಗೆ ಬ್ರಿಟಿಷ್ ಆಡಳಿತ ಕೆಟ್ಟದ್ದಾಗಿ ಕಂಡಿರಲಿಲ್ಲ.

ಆದರೆ ಬಂಗಾಳ ವಿಭಜನೆಯ ನಂತರದ ಪತ್ರಿಕೆಗಳಲ್ಲಿ ಕನ್ನಡ ನಾಡಿನ ಏಕೀಕರಣದ ಜೊತೆಯಲ್ಲಿಯೇ ದೇಶದ ಸ್ವಾತಂತ್ರ್ಯವೂ ಪ್ರತಿಪಾದನೆಯಾಗತೊಡಗಿತು. ಟಿಳಕರ ಕೇಸರಿ ಪತ್ರಿಕೆಯ ಪ್ರಭಾವ ಕನ್ನಡದ ಕೆಲವು ಪತ್ರಿಕೆಗಳ ಮೇಲಾಗಿದ್ದನ್ನು ಇಲ್ಲಿ ಗುರುತಿಸಲಾಗಿದೆ. ಬಂಗಾಳದ ವಿಭಜನೆಯನ್ನು ಖಂಡಿಸಿ ಕನ್ನಡ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ.

ಸ್ವಾತಂತ್ರ್ಯದ ಜೊತೆಯಲ್ಲಿಯೇ ಕರ್ನಾಟಕ ಏಕೀಕರಣದ ಬಗೆಗಿನ ಕಳಕಳಿ ಏಕೀಕರಣದ ವರೆಗಿನ ಘಟ್ಟದ ಪತ್ರಿಕೆಗಳಲ್ಲಿ ವ್ಯಕ್ತವಾಗಿದೆ. ಏಕೀಕರಣದ ಬಗೆಗಿನ ಈ ಕಾಲದ ಸಾಹಿತ್ಯ ಕೃತಿಗಳು ಮತ್ತು ಪತ್ರಿಕೆಗಳ ಲೇಖನಗಳನ್ನು ಜೊತೆ ಜೊತೆಯಾಗಿ ಅಧ್ಯಯನ ಮಾಡಿದಾಗ ಸಾಹಿತ್ಯದ ಆಶಯಕ್ಕೆ ಪತ್ರಿಕೆಗಳು ಪೂರಕವಾಗಿ ಕೆಲಸ ಮಾಡಿದ್ದು ಕಂಡು ಬರುತ್ತದೆ. ಈ ಕಾಲದ ಪತ್ರಿಕೆಗಳಲ್ಲಿಯೂ ಸಾಮಾಜಿಕ ಅಸಮಾನತೆಯ ಬಗೆಗೆ ಚರ್ಚೆಯಾಗಿದೆ. ವಿಚಿತ್ರದ ಸಂಗತಿ ಎಂದರೆ ಗಾಂಧೀಜಿಯವರು ಕೈಗೊಂಡ ಸಮಾಜ ಸುಧಾರಣೆ, ಹರಿಜನೋದ್ಧಾರ ಇತ್ಯಾದಿಗಳಿಗೆ ಸನಾತನ ಸಂಪ್ರದಾಯವಾದಿಗಳಿಂದ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಇಂದಿರಾಬಾಯಿ'ಯ ಸುಧಾರಣಪರ ಆಶಯಗಳಿಗೆ ಪ್ರತಿಕ್ರಿಯಾತ್ಮಕವಾಗಿ 'ಇಂದಿರಾ' ಕಾದಂಬರಿ ಬಂದುದನ್ನು ಇಲ್ಲಿ ಗಮನಿಸಲಾಗಿದೆ. ಕುವೆಂಪು ಅವರ 'ಶೂದ್ರ ತಪಸ್ವಿ' ಬಂದಾಗಲೂ ಸಂಪ್ರದಾಯವಾದಿ ಮನಸ್ಸು ಇದೇ

ರೀತಿ ಪ್ರತಿಕ್ರಿಯಿಸಿದ್ದನ್ನೂ ಇಲ್ಲಿ ದಾಖಲಿಸಲಾಗಿದೆ.

ಏಕೀಕರಣದ ವರೆಗಿನ ಕಾಲ ಘಟ್ಟದ ಪತ್ರಿಕೆಗಳಲ್ಲಿ ಸಾಹಿತ್ಯಕವಾಗಿ ಆಮೂಲಾಗ್ರ ಬದಲಾವಣೆ ತಂದ ಸಾಹಿತ್ಯದ ಚರ್ಚೆಗಳಿಗೆ ಪತ್ರಿಕೆಗಳು ವೇದಿಕೆಯಾದವು. ಅವುಗಳಲ್ಲಿ ಒಂದು ಪ್ರಾಸ ತ್ಯಾಗ. ಪ್ರಾಸ ತ್ಯಾಗ ಹೊಸಗನ್ನಡ ಸಾಹಿತ್ಯಕ್ಕೆ ಹೊಸ ದಿಸೆಯನ್ನು ನೀಡಿತು. ಈ ಬಗೆಗೆ ವಿವಿಧ ಪತ್ರಿಕೆಗಳಲ್ಲಿ ಬಂದ ವಾದಗಳನ್ನು ವಿವರವಾಗಿ ದಾಖಲಿಸಲಾಗಿದೆ. ಅದೇ ರೀತಿ ಸಾಹಿತ್ಯವನ್ನು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಸಹಾಯಕವಾದ ಅನುವಾದದ ಬಗೆಗಿನ ವಾಗ್ವಾದವನ್ನು ಇಲ್ಲಿ ಪರಿಶೀಲಿಸಲಾಗಿದೆ.

ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿಯೇ ರಷ್ಯಾದ ಕಮ್ಯುನಿಸಂನ ಪರಿಚಯವಾಗಿದೆ. ಕಮ್ಯುನಿಸಂ ತತ್ವಗಳು ನಮ್ಮ ಸಾಹಿತ್ಯಪತ್ರಿಕೆಗಳಲ್ಲಿ ಪ್ರತಿಪಾದಿತವಾಗಿವೆ. ವಿಶೇಷ ಸಂಗತಿ ಎಂದರೆ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಯ ಸಂಘಟನೆ ಹುಟ್ಟು ಪಡೆದುಕೊಳ್ಳುವ ಪೂರ್ವದಲ್ಲಿಯೇ ಪ್ರಗತಿಶೀಲ ತತ್ವಗಳು ಸಾಹಿತ್ಯದ ವಸ್ತುವಾಗಬೇಕೆಂದು ನಮ್ಮ ಸಾಹಿತ್ಯ ಪತ್ರಿಕೆಗಳು ಪ್ರತಿಪಾದಿಸಿದ್ದವು. ಈ ಸಂಬಂಧದಲ್ಲಿ 'ಜಯಕರ್ನಾಟಕ'ದಲ್ಲಿ ಬಂದಿರುವ ಲೇಖನವನ್ನು ಇಲ್ಲಿ ಪರಿಶೀಲಿಸಲಾಗಿದೆ. ಸ್ವಾತಂತ್ರ್ಯಪಡೆದ ಬಳಿಕ ಸಾಹಿತಿಗಳಲ್ಲಿ ಸ್ವಾತಂತ್ರ್ಯದ ಬಗೆಗೆ ಇದ್ದ ಭ್ರಮೆ ನಿರಸನವಾಗಿದೆ. ಹೊಸ ಅರಿವು ಪಡೆದವರಂತೆ ಹೊಸ ಸಾಹಿತ್ಯದ ಸೃಷ್ಟಿಗೆ ಕೆಲವರು ಮುಂದಾದರು. ಕನ್ನಡದ ಕೆಲವು ಸಾಹಿತಿಗಳು ಇಂಗ್ಲಿಷ್‌ನಿಂದ ಪ್ರೇರಣೆ ಪಡೆದು ಕಾವ್ಯದಲ್ಲಿ ಬದಲಾವಣೆಯಾಗಬೇಕು ಎಂದು ಪ್ರತಿಪಾದಿಸಿ ನವ್ಯ ಸಾಹಿತ್ಯವನ್ನು ಪ್ರಚುರಪಡಿಸಿದರು. ಸ್ವಾತಂತ್ರ್ಯಾನಂತರದ ನಿರಾಶೆ, ನೋವು, ಹತಾಶೆಗಳು ಇಲ್ಲಿ ಕಾವ್ಯ ವಿಡಂಬನೆಗೆ ವಸ್ತುವಾದವು. ಹೊಸ ಸಾಹಿತ್ಯದ ಪ್ರತಿಪಾದನೆ ಪತ್ರಿಕೆಗಳಲ್ಲಿಯೇ ನಡೆಯಿತು. ನವ್ಯ ಸಾಹಿತ್ಯ ಹುಟ್ಟಿಕೊಂಡಾಗ ಅದನ್ನು ಸಮರ್ಥಿಸಲು ಸಾಹಿತ್ಯಪತ್ರಿಕೆಗಳು ಇರಲಿಲ್ಲ. ಇರುವ ದಿನ ಪತ್ರಿಕೆ, ವಾರ ಪತ್ರಿಕೆಗಳಲ್ಲಿಯೇ ನವ್ಯದ ಪ್ರವರ್ತಕರು ಸಮರ್ಥನೆ ಮಾಡಿಕೊಂಡರು. ಪ್ರಜಾವಾಣಿ, ಜನಪ್ರಗತಿ ಮೊದಲಾದ ಪತ್ರಿಕೆಗಳು ಇವರಿಗೆ ವೇದಿಕೆ ಒದಗಿಸಿದ್ದನ್ನು ಇಲ್ಲಿ ಗುರುತಿಸಲಾಗಿದೆ.

ಏಕೀಕರಣದ ನಂತರದ ಸಾಹಿತ್ಯಪತ್ರಿಕೆಗಳಲ್ಲಿ ನವ್ಯದ ಸಮರ್ಥನೆ ಅದರ ಖಂಡನೆ ವ್ಯಾಪಕವಾಗಿ ಬಂದವು. ಶ್ರೇಷ್ಠತೆಯನ್ನು ಪ್ರತಿಪಾದಿಸಿದ ನವ್ಯಸಾಹಿತ್ಯ ಅಂತರ್ಮುಖಿಯಾಗಿ ಜನವಿರೋಧಿ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿತು. ನವ್ಯವನ್ನು ತಿರಸ್ಕರಿಸುವ ಮತ್ತು ಸಮಾಜಮುಖಿ ಸಾಹಿತ್ಯವನ್ನು ಪ್ರತಿಪಾದಿಸುವ ಕೆಲಸ ಸಾಹಿತ್ಯಪತ್ರಿಕೆಗಳಲ್ಲಿಯೇ ನಡೆಯಿತು. ಸಾಹಿತ್ಯ ಸರಳವಾಗಿರಬಾರದು, ಅದು ಕ್ಲಿಷ್ಟವಾಗಿರಬೇಕು, ಶ್ರೇಷ್ಠವಾಗಿರಬೇಕು ಎಂಬ ಚಿಂತನೆಗಳು ನವ್ಯ ಸಾಹಿತ್ಯದ ಕಾಲಕ್ಕೆ ಕಾಣಿಸಿಕೊಂಡವು. ಈ ನವ್ಯ ಸಾಹಿತ್ಯ ಕ್ಲಿಷ್ಟ ಅನ್ನಿಸಿದಾಗ ಅದನ್ನು ವಿವರಿಸುವುದಕ್ಕೆ ಪತ್ರಿಕೆಗಳು ಬೇಕಾದವು. ನವ್ಯ ಸಾಹಿತ್ಯವನ್ನು ವಿವರಿಸಲು, ನವ್ಯ ಮೀಮಾಂಸೆಯನ್ನು ಕಟ್ಟಲು, ವಿಮರ್ಶೆಯನ್ನು ಬೆಳೆಸಲು ಪತ್ರಿಕೆಗಳು ನೆರವಾದವು. ಲಹರಿ,

ಸಂಕ್ರಮಣ, ಸಾಕ್ಷಿ, ರುಜುವಾತು, ಶೂದ್ರ ಮೊದಲಾದ ಪತ್ರಿಕೆಗಳು ಹುಟ್ಟಿಕೊಂಡವು. ನವ್ಯ ಸಾಹಿತ್ಯ ಸಿದ್ಧಾಂತ ಮಂಡನೆ, ಆ ಕಾವ್ಯವನ್ನು ಯಾವ ರೀತಿಯಲ್ಲಿ ಅನುಸಂಧಾನ ಮಾಡಬೇಕು ಎಂಬುದನ್ನು ವಿವರಿಸಲು ಅವು ಯತ್ನಿಸಿದವು.

ನವ್ಯೋತ್ತರ ಕಾಲದಲ್ಲಿ ಬ್ರಾಹ್ಮಣ ವಿರೋಧಿ ಭಾವನೆಯನ್ನು ಸಾಹಿತ್ಯಪತ್ರಿಕೆಗಳು ಪ್ರತಿಪಾದಿಸಿದವು. ವ್ಯವಸ್ಥೆಯ ಎಲ್ಲ ಅನಿಷ್ಟಗಳಿಗೆ ಬ್ರಾಹ್ಮಣರೇ ಕಾರಣ ಎನ್ನುವ ರೀತಿಯಲ್ಲಿ ಅಲ್ಲಿ ವಿಷಯ ಮಂಡನೆಯಾಗಿದೆ. ಸಂಕ್ರಮಣ ಪತ್ರಿಕೆ ಅದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಬ್ರಾಹ್ಮಣ ವಿರೋಧಿ ನಿಲುವನ್ನು ಲಂಕೇಶ ಪತ್ರಿಕೆ ಕೂಡ ಮುಂದುವರಿಸಿತು. ಬ್ರಾಹ್ಮಣರಿಂದ ಬ್ರಾಹ್ಮಣೇತರರಿಗೆ ಯಾವ ರೀತಿಯಲ್ಲಿ ಅನ್ಯಾಯಗಳಾಗಿವೆ ಎಂಬುದನ್ನು ತೋರಿಸುವಂಥ ಸಾವಿರಾರು ಲೇಖನಗಳು ಸಾಹಿತ್ಯಪತ್ರಿಕೆಗಳಲ್ಲಿ ಪ್ರಕಟಗೊಂಡವು.

ಬಂಡಾಯ ಚಳವಳಿಯೊಂದಿಗೇ ಬೆಳಕಿಗೆ ಬಂದ ದಲಿತರು ತಮ್ಮದು ಪ್ರತ್ಯೇಕ ಸಾಹಿತ್ಯ ಎಂಬುದನ್ನು ಪ್ರತಿಪಾದಿಸಿದರು. ದಲಿತ ಚಿಂತನೆಗೆ ಬೆಂಬಲ ನೀಡುವ ದಲಿತ, ಪಂಚಮ, ಒಡಲಾಳ ಮೊದಲಾದ ಸಾಹಿತ್ಯಪತ್ರಿಕೆಗಳು ಬಂದವು.

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ಪತ್ರಿಕೆಗಳು ವಹಿಸಿದ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನ ಮಾಡುವ ಅವಕಾಶ ಇಲ್ಲಿ ಲಭ್ಯವಾಗಿದೆ. ಕನ್ನಡ ಸಾಹಿತ್ಯದ ಯಾವುದೇ ಕಾಲಘಟ್ಟದಲ್ಲಿ ಇಷ್ಟೊಂದು ವಿಭಿನ್ನ ಆಶಯಗಳ ನೆಲೆಯಿಂದ ಸಾಹಿತ್ಯ ರಚನೆಯಾಗಿರಲಿಲ್ಲ. ೨೦ನೆ ಶತಮಾನದ ಅವಧಿಯಲ್ಲಿ ವೈವಿಧ್ಯಮಯವಾದ ಸಾಹಿತ್ಯ ಪ್ರಕಾರಗಳ ರಚನೆ, ವಿಭಿನ್ನ ಆಶಯಗಳ ಪ್ರತಿಪಾದನೆ ಸಾಹಿತ್ಯದ ಮೂಲಕ ನಡೆದಿದೆ. ಸಾಮಾಜಿಕವಾಗಿ ಸಾಹಿತ್ಯವು ನೇರವಾದ ಸಂಬಂಧವನ್ನು ಉಳಿಸಿಕೊಂಡುದು ಈ ಶತಮಾನದ ವೈಶಿಷ್ಟ್ಯ. ಸಾಹಿತ್ಯ ಸಮಾಜ ವಿಮುಖವಾಗಿದ್ದಾಗ ಅದನ್ನು ಮತ್ತೆ ಎಚ್ಚರಿಸಿ ಸಮಾಜಮುಖಿಯಾಗಿಸುವ ಪ್ರಕ್ರಿಯೆ ಈ ಶತಮಾನದುದ್ದಕ್ಕೂ ನಡೆದಿದೆ. ಸಾಹಿತ್ಯ ರಚನೆಯನ್ನು ಸರಿದಾರಿಯಲ್ಲಿ ನಡೆಸುವ ಜವಾಬ್ದಾರಿಗಳನ್ನು ಪತ್ರಿಕೆಗಳು ವಹಿಸಿಕೊಂಡಂತೆ ಧ್ವನಿಯೆತ್ತಿವೆ. ಸಾರ್ವಜನಿಕವಾಗಿ ಸಾಹಿತ್ಯದ ಅಭಿಪ್ರಾಯಗಳ ಕ್ರೋಡೀಕರಣವನ್ನು ಪತ್ರಿಕೆಗಳು ಮಾಡಿವೆ. ಇವುಗಳ ಮೂಲಕ ಜನಾಭಿಪ್ರಾಯಗಳು ಪ್ರಕಟವಾಗಿ ಸಾಹಿತ್ಯದಲ್ಲಿ ನಿರ್ದಿಷ್ಟವಾದ ಧೋರಣೆಗಳ ಸಮರ್ಥನೆ ಅಥವಾ ಖಂಡನೆ ಸಾಧ್ಯವಾಗಿದೆ. ಸಾಹಿತ್ಯವು ಜನರ ಮನಸ್ಸಿನ ಪ್ರತಿಛಾಯೆಯಾಗಿಯೇ ರೂಪುಗೊಂಡು ಸಮಾಜವನ್ನು ಪ್ರಗತಿಪರವಾಗಿ ಚಿಂತಿಸುವಂತೆ ಮಾಡಿದೆ. ಪ್ರಗತಿಪರವಾದ ನಿಲುವುಗಳನ್ನು ಪ್ರೇರಿಸುವಲ್ಲಿ ಪತ್ರಿಕೆಗಳ ಕಾಳಜಿ ಇಪ್ಪತ್ತನೆ ಶತಮಾನದ ಒಂದು ಬಹುಮುಖ್ಯ ಪ್ರವೃತ್ತಿಯೆನಿಸಿದೆ. ಇದು ಒಂದು ರೀತಿಯಲ್ಲಿ ಆರೋಗ್ಯಕರವಾದ ಪ್ರವೃತ್ತಿಯೇ ಹೌದು.

ಪರಾಮರ್ಶನ ಗ್ರಂಥಗಳು:

೧)ಅ.ನ.ಕೃ.,೧೯೯೪ (ಮ.ಮು) ಕನ್ನಡ ಕುಲರಸಿಕರು, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು

೨)ಅನಂತರಂಗಾಚಾರ ಎನ್. (ಎಂ.ಎ., ಬಿ.ಟಿ.) ೧೯೭೦ ಸಾಹಿತ್ಯ ಭಾರತೀ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ

೩)ಅನಂತನಾರಾಯಣ ಎಸ್. ೧೯೬೨, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ,ಗಂಗಾತರಂಗ ಮೈಸೂರು.

೪)ಕನ್ನಡ ಗ್ರಂಥಸೂಚಿ, ಸಂ.೩, ೧೯೭೪ (ಸಂ) ಜವರೇಗೌಡ, ಪ್ರಸಾರಾಂಗ ಮೈಸೂರು ವಿ.ವಿ.

೫)ಕುಲಕರ್ಣಿ ಶೇ.ಗೋ. - ನಾನು ಕಂಡ ಗೆಳೆಯರ ಗುಂಪು

೬)ಕುರ್ತಕೋಟಿ ಕೀರ್ತಿನಾಥ, ೧೯೬೨ ಯುಗಧರ್ಮ ಮತ್ತು ಕನ್ನಡ ಸಾಹಿತ್ಯ, ಮನೋಹರ ಗ್ರಂಥಮಾಲೆ, ಧಾರವಾಡ.

೭)ಕುವೆಂಪು - ೧೯೭೬ ವಿಚಾರ ಕ್ರಾಂತಿಗೆ ಆಹ್ವಾನ, ಉದಯರವಿ ಪ್ರಕಾಶನ, ಮೈಸೂರು.

೮)ಕೆರೂರು ವಾಸುದೇವಾಚಾರ್ಯ, ೧೯೮೪ (ಮ.ಮು) ಇಂದಿರಾ, ಉಷಾ ಸಾಹಿತ್ಯ ಮಾಲೆ, ಮೈಸೂರು.

೯)ಕೋದಂಡರಾಮ ಎನ್.ಕೆ.(ಡಾ.) ೧೯೯೬ ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.

೧೦) ಗುಲ್ವಾಡಿ ವೆಂಕಟರಾವ್, (೧೯೬೨) ದ್ವಿ.ಮು. ಇಂದಿರಾಬಾಯಿ, ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ, ಮಂಗಳೂರು.

೧೧)ಗೋಕಾಕ ವಿ.ಕೃ. ೧೯೪೪ ಸಾಹಿತ್ಯದಲ್ಲಿ ಪ್ರಗತಿ.

೧೨)ಚಂದ್ರಶೇಖರ ಬಿ.ಎಸ್. ೧೯೭೬, ಸಮೂಹ ಮಾಧ್ಯಮಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ.

೧೩)ಜವರಯ್ಯ ಮ.ನ.(ಡಾ.) ೧೯೯೪ ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೧೪)ಡಿವಿಜಿ - ೧೯೬೮, ವೃತ್ತಪತ್ರಿಕೆ, ಕಾವ್ಯಾಲಯ, ಮೈಸೂರು

೧೫)ಧಾರವಾಡಕರ (ಡಾ.) ರಾ.ಯ. ೧೯೭೫, ಹೊಸಗನ್ನಡ ಸಾಹಿತ್ಯದ ಉದಯಕಾಲ, ಪ್ರಸಾರಂಗ, ಕವಿವಿ, ಧಾರವಾಡ.

೧೬)ದೇಜಗೌ, ಸಿಪಿಕೆ (ಸಂ) ೧೯೯೬ ಕಟ್ಟಿಮನಿ ಬದುಕು ಬರೆಹ - ಅಭಿನಂದನ ಗ್ರಂಥ, ಗೀತಾ ಬುಕ್ ಹೌಸ್ ಮೈಸೂರು.

೧೭)ತಟ್ಟಿ ವಲ್ಲಭ ಮಹಾಲಿಂಗ, ೧೯೯೪ (ದ್ವಿ.ಮು) ಕನ್ನಡಿಗರ ಜನ್ಮಸಾರ್ಥಕತೆ, ವಿದ್ಯಾವರ್ಧಕ ಸಂಘ, ಧಾರವಾಡ.

೧೮)ನಾಗರಾಜ ಡಿ.ಆರ್. ೧೯೮೩ ಅಮೃತ ಮತ್ತು ಗರುಡ, ಪುಸ್ತಕ ಚಂದನ, ಬೆಂಗಳೂರು.

೧೯)ನಾಗರಾಜ ಡಿ.ಆರ್. ೧೯೮೭ ಶಕ್ತಿಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೨೦)ನಾಡಿಗ ಕೃಷ್ಣಮೂರ್ತಿ, ೧೯೫೫, ಪತ್ರಿಕೋದ್ಯಮ ಶಾಸ್ತ್ರ ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು

೨೧)ನಾಯಕ ಹಾ.ಮಾ., ತಿಪ್ಪೇರುದ್ರಸ್ವಾಮಿ, (ಸಂ.) ೧೯೭೧, ಎ.ಆರ್.ಕೃ. ಜೀವನ, ಸಾಧನೆ , ಪ್ರಸಾರಾಂಗ, ಮೈಸೂರು ವಿ.ವಿ.

೨೨)ನಾಯಕ ಹಾ.ಮಾ., ೧೯೭೨, ಸಾಹಿತ್ಯ ಸಲ್ಲಾಪ, ಸುರುಚಿ ಪ್ರಕಾಶನ, ಮೈಸೂರು

೨೩)ನಿರಂಜನ ೧೯೮೩, ಬುದ್ಧಿಭಾವ ಬದುಕು, ರಶ್ಮಿ ಪಬ್ಲಿಶರ್ಸ್, ಜಯನಗರ, ಬೆಂಗಳೂರು.

೨೪)ಪುಟ್ಟಣ್ಣ ಎಂ.ಎಸ್. ೧೯೨೮, ಮುಸುಗು ತೆಗೆಯೇ ಮಾಯಾಂಗನೆ

೨೫)ಬುರ್ಲಿ ಬಿಂದು ಮಾಧವ ಮತ್ತು ತಡಸ ಅನಂತ, ೧೯೬೦. ಆನಂದಕಂದ, ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ.

೨೬) ಬೇಂದ್ರೆ, ದ.ರಾ. ೧೯೭೪, ಸಾಹಿತ್ಯದ ವಿರಾಟ್ ಸ್ವರೂಪ,

೨೭)ಮಣಿಪಾಲ ಆರ್ಕೈ, ೧೯೮೮, ಸಾಹಿತ್ಯ - ಆಶಯ ಮತ್ತು ವಿನ್ಯಾಸ, ಸಂಕ್ರಮಣ ಪ್ರಕಾಶನ, ಧಾರವಾಡ

೨೮)ಮಾಲಗತ್ತಿ ಅರವಿಂದ ೧೯೯೩, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ,

೨೯)ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೬೭, ಜೀವನ ಸಂಪಾದಕೀಯ -೨, ಜೀವನ ಕಾರ್ಯಾಲಯ, ಬೆಂಗಳೂರು

೩೦)ಮುಗಳಿ ರಂ.ಶ್ರೀ. ೧೯೭೧, ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ ಮೈಸೂರು

೩೧)ಮುತ್ತಣ್ಣ ಐ.ಮಾ., ೧೯೬೯, ೧೯ನೆ ಶ.ಮಾ.ದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ

೩೨)ಮುತ್ತಣ್ಣ ಐ.ಮಾ., ೧೯೮೭, ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ ಭಾಗ-೧

೩೩)ಮುದಗಲ್ ಪ್ರಹ್ಲಾದ (ಡಾ.) ೧೯೯೩ ಕೆರೂರು ವಾಸುದೇವಾಚಾರ್ಯರು, ಮುಂಬಯಿ ವಿಶ್ವವಿದ್ಯಾನಿಲಯ ಮುಂಬಯಿ,

೩೪)ರಹಮತ ತರಿಕೆರೆ (ಡಾ.) ೧೯೯೬ ಮರದೊಳಗಣ ಕಿಚ್ಚು, ಕನ್ನಡ ವಿ.ವಿ. ಹಂಪಿ.

೩೫) ರೊದ್ದ ವ್ಯಾಸರಾವ, ೧೯೯೮, ಚಂದ್ರಮುಖಿಯ ಘಾತವು, ಮನೋಹರ ಗ್ರಂಥಮಾಲಾ ಧಾರವಾಡ

೩೬)ರಂಗನಾಥನ್ ಮಾವಿನಕೆರೆ (ಸಂ)೧೯೮೭ ಮಾಸ್ತಿಅವರ ಸಮಗ್ರ ಕತೆಗಳು, ಸಂಪುಟ ೧, ಪುರೋಗಾಮಿ, ಬೆಂಗಳೂರು.

೩೭)ವಸಂತಲಕ್ಷ್ಮಿ ಕೋ., (ಡಾ.) ವಿಶ್ವಕರ್ನಾಟಕದ ತಿ.ತಾ.ಶರ್ಮರು,

೩೮)ವಿವೇಕ ರೈ (ಡಾ.) ಸಂ.೧೯೮೯ ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು- ಮಂಗಳೂರು ವಿ.ವಿ. ಪ್ರಕಟಣೆ,

೩೯) ವಿವಿಧ ಲೇಖಕರು, ೧೯೯೩, ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ, ವರ್ತಮಾನ ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು,

೪೦)ವಿವಿಧ ಲೇಖಕರು ೧೯೯೩ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಕ.ಸಾ.ಅ. ಬೆಂಗಳೂರು.

೪೧)ವಿವಿಧ ಲೇಖಕರು, ೨೦೦೦, ನವೋದಯ ಕಾವ್ಯ- ಮಂಗಳೂರು ಕೇಂದ್ರ, ಕ.ಸಾ.ಅ. ಬೆಂಗಳೂರು

೪೨)ವಿವಿಧ ಲೇಖಕರು, ೧೯೭೧ ಚಿನ್ನದ ಗರಿ- ಪ್ರಸಾರಾಂಗ, ಮೈಸೂರು ವಿ.ವಿ.

೪೩)ವಿವಿಧ ಲೇಖಕರು, ೧೯೮೮, ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೪)ಶಿವರುದ್ರಪ್ಪ ಜಿ.ಎಸ್. (ಸಂ) ೧೯೮೯, ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೫)ಸರಜೂ ಕಾಟ್ಕರ್ (ಡಾ.) ೧೯೯೬, ಕನ್ನಡ ಮರಾಠಿ ದಲಿತ ಸಾಹಿತ್ಯ, ವಿಮೋಚನಾ ಪ್ರಕಾಶನ, ಅಥಣಿ.

೪೬)ಹಾವನೂರ ಶ್ರೀನಿವಾಸ (ಡಾ.) ೧೯೬೮, ಹೊಸಗನ್ನಡದ ಅರುಣೋದಯ, ಮೈಸೂರು ವಿ.ವಿ.

೪೬)ಹಿಂಗಮಿರೆ ಬುದ್ಧಣ್ಣ ೧೯೭೬, ಹೊಸಕಾವ್ಯ ಹೊಸ ದಿಕ್ಕು, ಯುಗಧ್ವನಿ ಪ್ರಕಾಶನ ಧಾರವಾಡ

ಪತ್ರಿಕೆಗಳು:

೧) ಅನಿಕೇತನ, ೨) ಅನ್ವೇಷಣೆ, ೩)ಅಂಕಣ, ೪) ಆಂದೋಲನ, ೫) ಅಂತರ, ೬) ಆಲೋಕ, ೭) ಉದಯ ಭಾರತ, ೮)ಒಡಲಾಳ- ಕೈ ಬರೆಹದ ಪತ್ರಿಕೆ, ೯) ಕರ್ನಾಟಕ ಭಾರತಿ, ೧೦)ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ೧೧)ಕನ್ನಡ ನುಡಿ, ೧೨)ಕರ್ನಾಟಕ ನಂದಿನಿ, ೧೩)ಕನ್ನಡಪ್ರಭ, ೧೪)ಗಾಂಧಿಬಜಾರ್, ೧೫)ಜಯಕರ್ನಾಟಕ, ೧೬)ಜಯಂತಿ, ೧೭)ಜನಪ್ರಗತಿ, ೧೮)ಜೀವನ , ೧೯)ದಲಿತ, ೨೦)ಪ್ರಬುದ್ಧ ಕರ್ನಾಟಕ, ೨೧)ಪ್ರಭಾತ, ೨೨)ಪ್ರಜಾವಾಣಿ, ೨೩) ಪಂಚಮ, ೨೪) ಮಧುರವಾಣಿ, ೨೫) ಬದುಕು, ೨೬)ರುಜುವಾತು, ೨೭)ವಾಗ್ಭೂಷಣ, ೨೮)ಶೂದ್ರ, ೨೯)ಶ್ರೀಕೃಷ್ಣಸೂಕ್ತಿ ೩೦)ಸಾಹಿತ್ಯ ಸಂವಾದ, ೩೧)ಸಾಕ್ಷಿ, ೩೨) ಸುವಾಸಿನಿ, ೩೩)ಸಂಕ್ರಮಣ, ೩೪)ಸಂಚಯ, ೩೫)ಹಿತಬೋಧಿನಿ

ಈ ಎಲ್ಲ ಪತ್ರಿಕೆಗಳ ಯಾವ ಯಾವ ಸಂಚಿಕೆಗಳನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಆಯಾ ಪುಟಗಳ ಅಡಿ ಟಿಪ್ಪಣಿಗಳಲ್ಲಿ ನಮೂದಿಸಲಾಗಿದೆ.